Digitized by Arya Samaj Foundation Chennai and eGangotri

ಪು.ಲ.ದೇಶಪಾಂಡೆ

ವ್ಯಕ್ತಿ ಮತ್ತು ವಾಙ್ಮಯ



ಡಾ. ಅ. ರಾ. ತೋರೋ
ಮತ್ತು
ವಿರೂಪಾಕ್ಷ ಕುಲಕರ್ಣಿ
ಅವರಿಂದ ಸಂಪಾದಿತ

ಕನ್ನಡ ಅಧ್ಯಯನ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ
೧೯೮೯

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

गुरुकुल कांगड़ी विश्वविद्यालय, हरिद्वार
कृपया पुस्तक के ऊपर कोई निशान आदि
न लगायें।

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

पुस्तकालय
गुरुकुल काँगड़ी विश्वविद्यालय, हरिद्वार

वर्ग संख्या...—...—...आगत संख्या...............

पुस्तक-वितरण की तिथि नीचे अंकित है। इस तिथि सहित २० वें दिन तक यह पुस्तक पुस्तकालय में वापिस आ जानी चाहिए। अन्यथा १० पैसे के हिसाब से विलम्ब-दण्ड लगेगा।

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮುಂಬಯಿ ವಿಶ್ವವಿದ್ಯಾಲಯ - ಕನ್ನಡ ವಿಭಾಗದ ಪ್ರಕಟನೆ : ೯

DONATION

6869

ಪು. ಲ. ದೇಶಪಾಂಡೆ

ವ್ಯಕ್ತಿ ಮತ್ತು ವಾಙ್ಮಯ

गुरुकुल कांगड़ी विश्वविद्यालय पुस्तकालय

"Forwarded free of cost, and with the Compliments of the department of Education, Government of India, NEW DELHI."

ಸಂಪಾದಕರು:
ಅನಂತ ತೋರೊ
ವಿರೂಪಾಕ್ಷ ಕುಲಕರ್ಣಿ

೧೯೮೯

ಮುಂಬಯಿ ವಿಶ್ವವಿದ್ಯಾಲಯ, ಕನ್ನಡ ವಿಭಾಗ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Pu.La.DESHPANDE : Vyakti mattu Vangmaya. (A collection of writings on and by P. L. Deshpande, noted marathi writer, Ed. by Dr. Anant Toro and Virupaksha Kulkarni. Pub. by the Kannada Department, University of Bombay. Bombay - 98 p p 250+8

©

Pu. La. Deshpande Foundation
1, Rupali, 777 Shivaji Nagar,
PUNE - 411 004

Rs. 48/-

Cover : 'Okay' Bombay

Printers: Tangson Printers
436, Patil Galli,
Belgaum - 590 001
Phone : 24188

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೊದಲ ಮಾತು

ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗವು ಕನ್ನಡ-ಮರಾಠೀ ಸಾಹಚರ್ಯದ ಬಹುವ್ಯಾಪೀ ಯೋಜನೆಗಳನ್ನು ಹಮ್ಮಿಕೊಂಡಿದ್ದು, ಕನ್ನಡದ ಪ್ರಸಿದ್ಧ ಲೇಖಕರನ್ನು ಮರಾಠಿಯ ಜನಕ್ಕೂ, ಮರಾಠೀ ಲೇಖಕರನ್ನು ಕನ್ನಡಿಗರಿಗೂ ಪರಿಚಯಿಸುವುದು ಅವುಗಳಲ್ಲಿ ಒಂದಾಗಿದೆ. ಅದರ ರೂಪ-ಸ್ವರೂಪ ಹೇಗಿರಬೇಕೆಂದು ನಿರ್ಧರಿಸಿ, ಈ ಆದಾನ-ಪ್ರದಾನದ ಮೊದಲ ಪ್ರಕಟನೆಯನ್ನು ನೀಡುತ್ತಿದ್ದೇವೆ. ಮರಾಠಿಯ ಸುವಿಖ್ಯಾತ, ಪ್ರತಿಭಾಪ್ರಪೂರ್ಣ ಪು. ಲ. ದೇಶಪಾಂಡೆಯವರನ್ನು ಕನ್ನಡಿಗರಿಗೆ ಕಾಣಿಸಿಯಾದ ಮೇಲೆ, ಡಾ. ಶಿವರಾಮ ಕಾರಂತರನ್ನು ಇದೇ 'ವ್ಯಕ್ತಿ ಮತ್ತು ವಾಙ್ಮಯ' ದ ಮಾದರಿಯಲ್ಲಿ ಮರಾಠಿಗರಿಗೆ ಪರಿಚಯಿಸಬೇಕೆಂದಿದೆ.

ಇಲ್ಲಿಯ ಕನ್ನಡ ಬರಹಗಳ ನುಡಿಗಟ್ಟು ಅಲ್ಲಲ್ಲಿ ಮರಾಠೀ ಸೆಳಕುಗಳನ್ನು ಒಳಗೊಂಡಂತೆ ಅನಿಸಬಹುದು. ಬೇರೆಬೇರೆ ಅನುವಾದಕರು, ಬರೆದಿರುವುದರಿಂದ ಹೀಗಾಗುವುದು ಸಹಜ ಎನ್ನಬಹುದಾದರೂ ಮರಾಠೀ ನುಡಿಗಟ್ಟಿನ, ಆ ಶಬ್ದಗಳ ಪಡಿನೆಳಲು ನಾವಿಟ್ಟುಕೊಂಡಿರುವ ಉದ್ದೇಶಕ್ಕೆ ಅನುಗುಣವಾದದ್ದೆಂದೇ ಬಗೆದಿದ್ದೇವೆ.

ಈ ಗ್ರಂಥದ ಅನನ್ವಿತೆಯು ಬಗ್ಗೆ ನಮಗೆ ಯಾವ ಸಂಶಯವೂ ಇಲ್ಲ; ಅದನ್ನು ನಿಮ್ಮ ಗಮನಕ್ಕೆ ತರುವಲ್ಲಿ ಸಂಕೋಚವೂ ಅನಿಸುವುದಿಲ್ಲ. ಆದರೆ ಆದರ ಹಿನ್ನೆಲೆಯಲ್ಲಿ, ಸಂಪಾದಕದ್ವಯರು, ಅನುವಾದಕರು ಸ್ವತಃ ಪು. ಲ. ದಂಪತಿಗಳು, -ಇವರೆಲ್ಲರ ಆಪ್ತ ಸಹಾಯದ ಆಸರೆ ಇದೆ. ಓ. ಕೆ. ರೆಣ್ಯೆ ಅವರು ಬಿಡಿಸಿದ, ಸುಂದರವಾದ ಮುಖಚಿತ್ರವಿದೆ.

ಈ ಸಂದರ್ಭದಲ್ಲಿ ವೈಯಕ್ತಿಕವಾಗಿ ನಾನು ಇನ್ನೂ ಮೂವರನ್ನು ನೆನೆಯಬೇಕು. ಶ್ರೀ ಆನಂದ ವರ್ಟಿ ಅವರು ಪುಸ್ತಕದ ಅಂತರ್ಯಕ್ಕೆ ಸಂಬಂಧಿಸಿದಂತೆ, ಶ್ರೀ ಭೀಮಸೇನ ತೊರಗಲ್ಲ ಮುದ್ರಣ ವಿಚಾರದಲ್ಲಿ ನಮ್ಮ ಬೇಕು-ಬೇಡಗಳನ್ನು ತಾಳ್ಮೆಯಿಂದ ಪೂರೈಸಿಕೊಟ್ಟಿದ್ದಾರೆ. ಅಷ್ಟೇ ನಮ್ಮ ಮೇಲಿನ ವಿಶ್ವಾಸದಿಂದ ಶ್ರೀ ರಂ. ಶಾ. ಅವರು ಈ ಬೃಹತ್ ಹೊತ್ತಿಗೆಯ ಪ್ರೂಫುಗಳನ್ನು ತಿದ್ದುವಲ್ಲಿ ನೆರವಾಗಿದ್ದಾರೆ.

ಇವರೆಲ್ಲರ ಕಾರ್ಯತತ್ಪರತೆಗೆ ಪ್ರೇರಣೆ ಎಂದರೆ ಕನ್ನಡ-ಮರಾಠೀ ಸ್ನೇಹ ಪ್ರವತ್ತಿಯೇ. ಈ ಗ್ರಂಥದಿಂದ ದೊರೆತ ಪ್ರೋತ್ಸಾಹದ ಫಲವಾಗಿ ಪುಣೆಯಲ್ಲಿ 'ಮರಾಠೀ-ಕನ್ನಡ ಸ್ನೇಹ ವರ್ಧನ ಕೇಂದ್ರ ' ಎಂಬ ಸಂಸ್ಥೆಯೇ ಮೈದಾಳಿದೆ. ಆ ಸಂಸ್ಥೆಯವರು, ಈ ನಮ್ಮ ಗ್ರಂಥದ ಪ್ರಕಾಶನ ಸಮಾರಂಭವನ್ನು ಶ್ರೀ ಗಿರೀಶ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಾರ್ನಾಡರ ಅಧ್ಯಕ್ಷತೆಯಲ್ಲಿ ಜರುಗಿಸಿ, ಪು. ಲ. ಅವರ ಸನ್ಮಾನವನ್ನು ಕನ್ನಡ ವಿಭಾಗದ ಸಹಯೋಗದಿಂದ ಪುಣೆಯಲ್ಲಿ ನಡೆಯಿಸಿಕೊಟ್ಟಿದ್ದಾರೆ.

ಈ ಎಲ್ಲ ಕಾರ್ಯಗಳಿಗೆ ವಿಶ್ವವಿದ್ಯಾಲಯದ ಮೇಲಧಿಕಾರಿಗಳು (ವಿಶೇಷತಃ ಪ್ರೊ. ಜಿ. ಎಲ್. ಅಭ್ಯಂಕರರು) ಉದ್ದಕ್ಕೂ ಪ್ರೋತ್ಸಾಹವಿತ್ತಿದ್ದಾರೆ. ಅವರಿಗೆ ನಮ್ಮ ಹಾರ್ದಿಕ ನಮನಗಳು

ಮುಂಬಯಿ ವಿ.ವಿ. — ಶ್ರೀನಿವಾಸ ಹಾವನೂರ
ಕನ್ನಡ ವಿಭಾಗ — ಪ್ರಾಧ್ಯಾಪಕ
ಏಪ್ರಿಲ್ ೧೯೮೯

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಪಾದಕರಿಂದ

ಸ್ವಾತಂತ್ರ್ಯೋತ್ತರ ಮರಾಠಿ ಸಾಹಿತ್ಯದಲ್ಲಿ 'ಪು. ಲ. ದೇಶಪಾಂಡೆ, ಈ ಹೆಸರಿಗೆ ಒಂದು ಅನನ್ಯ ಸಾಧಾರಣ ಮಹತ್ವ ಇದೆ. ಅವರ ಸಾಹಿತ್ಯ ಕೃಷಿಯ ಹರಹು ಬಹು ವ್ಯಾಪಕವಾಗಿದೆ. ಕಥೆ, ನಾಟಕ, ಹಾಸ್ಯ, ಸಂಗೀತ, ಅಭಿನಯ, ಪ್ರವಾಸ ವರ್ಣನೆ, ಚರಿತ್ರ ಲೇಖನ, ವ್ಯಕ್ತಿ ಚಿತ್ರಣ, ವಕ್ತೃತ್ವ ಮುಂತಾದ ಕ್ಷೇತ್ರಗಳಲ್ಲಿ ಅವರ ಕೃಷಿ ನಡೆಸಿದ್ದಾರೆ. ಅವರ ಪ್ರತಿಭೆಯ ಪ್ರಾತಿನಿಧಿಕ ಪರಿಚಯವನ್ನು ಕನ್ನಡ ಓದುಗರಿಗಾಗಿ ಮಾಡಿಕೊಡುವ ಉದ್ದೇಶದಿಂದ ಈ ಗ್ರಂಥ ಸಿದ್ಧವಾಗಿದೆ.

ಶ್ರೇಷ್ಠ ಸಾಹಿತ್ಯವನ್ನು ಅನುವಾದಿಸುವದು ಸುಲಭದ ಕೆಲಸವಲ್ಲ. ಅದರಲ್ಲಿಯೂ ಪ್ರಾದೇಶಿಕ ಸೊಗಡಿನಿಂದ ಕೂಡಿದ ಹಾಸ್ಯ ಸಾಹಿತ್ಯವನ್ನು ಅನುವಾದಿಸುವದು ಕಠಿಣತರವಾದ ಕೆಲಸ. ಶ್ರೀ ಪು.ಲ. ದೇಶಪಾಂಡೆ ಅವರ ಶಬ್ದಗಳಲ್ಲಿಯೇ ಹೇಳಬೇಕಾದರೆ 'ಉತ್ತಮ ಸಾಹಿತ್ಯದ ಅನುವಾದ ಮಾಡುವುದೆಂದರೆ ಕೈಯಲ್ಲಿ ಹ್ಯಾಂಡ ಗ್ಲೌವ್ಸ ((Hand Gloves) ಹಾಕಿಕೊಂಡು ಪ್ರೇಯಸಿಯ ಮುಖದ ಮೇಲೆ ಕೈ ಆಡಿಸಿದಂತೆ!' ಹಾಗಿದ್ದರೂ ವ್ಯಕ್ತಿತ್ವವನ್ನು ಸಮಗ್ರವಾಗಿ ಅಲ್ಲದಿದ್ದರೂ ಸಮ್ಯಕ್ ದೃಷ್ಟಿಯಿಂದ ಅರಿತುಕೊಳ್ಳಲು ಕನ್ನಡ ಓದುಗರಿಗೆ ಸಹಾಯಕವಾಗಬಹುದೆಂಬ ವಿಶ್ವಾಸವನ್ನು ತಳೆದಿದ್ದೇವೆ.

ಸಾಹಿತ್ಯಕ್ಕೆ ರಾಜಕೀಯದ ಮೇರೆ ಇರಕೂಡದು. ಭಾಷೆ ಬೇರೆಯಾಗಿದ್ದರೂ ಸಾಹಿತ್ಯದ ಅಂತರಂಗವು ಒಂದೇ ಇದೆ ಎಂಬ ಅರಿವು ಜಾಗೃತವಾಗಬೇಕು. ನಮ್ಮ ಅಭಿರುಚಿ ಬೆಳೆಯಬೇಕು, ಈ ದೃಷ್ಟಿಯಿಂದ ಪ್ರಯತ್ನವನ್ನು ಮಾಡಿದ್ದೇವೆ. ಕನ್ನಡ ಓದುಗರಿಗೆ ಮಹಾರಾಷ್ಟ್ರದ ಅರ್ಧಶತಮಾನದ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಪ್ರವಾಹಗಳ ಪರಿಚಯವಾಗಿ ತೌಲನಿಕ ಚಿಂತನೆಗೆ ಈ ಗ್ರಂಥ ಅಣಿಗೊಂಡು ನಿಲ್ಲಬಹುದೆಂದು ನಮ್ಮ ಆಶಯವಾಗಿದೆ. ಭಾರತೀಯ ಭಾಷೆಗಳ ಆದಾನ-ಪ್ರದಾನಗಳ ಬಗ್ಗೆ ನಾವು ಮಾತನಾಡುತ್ತೇವಷ್ಟೆ. ಆ ದಿಕ್ಕಿನಲ್ಲಿ ನಮ್ಮದೊಂದು ಪುಟ್ಟ ಹೆಜ್ಜೆ. ಈ ಗ್ರಂಥದ ಅನಂತರ ಶ್ರೇಷ್ಠ ಕನ್ನಡ ಲೇಖಕರನ್ನು ಮರಾಠೀ ಅಭ್ಯಾಸಿಗಳಿಗೆ ಪರಿಚಯಿಸುವ ಯೋಜನೆಯನ್ನು ಹಮ್ಮಿಕೊಂಡಿದ್ದೇವೆ.

ಇಂಥದೊಂದು ಮಹತ್ವದ ಕಾರ್ಯವು ಯಶಸ್ವಿಯಾಗಬೇಕಾದರೆ ಅನೇಕರು ಅನೇಕ ರೀತಿಯಲ್ಲಿ ನೆರವಾಗಿದ್ದಾರೆ. ಅವರೆಲ್ಲರಿಗೂ ನಮ್ಮ ವಂದನೆಗಳು ಸಲ್ಲುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶ್ರೀ ಪು. ಲ. ದೇಶಪಾಂಡೆಯವರು ನಮ್ಮ ಯೋಜನೆಯ ವಿಚಾರದಲ್ಲಿ ತೋರಿದ ಸಹಾನುಭೂತಿ ಹಾಗೂ ನೀಡಿರುವ ಸಹಾಯವು ನಿಜವಾಗಿಯೂ ಶಬ್ದಾತೀತವಾದದ್ದು. ಅವರ ಧರ್ಮಪತ್ನಿ ಸೌ. ಸುನೀತಾ ದೇಶಪಾಂಡೆಯವರು ಅದೇ ಬಗೆಯ ತತ್ಪರತೆಯನ್ನು ತೋರಿದ್ದಾರೆ. ಒಂದು ಹೆಜ್ಜೆ ಮುಂದುವರಿದು, ಪು.ಲ. ಅವರ ಅಪೂರ್ವ ಹಾಗೂ ದುರ್ಲಭ ಛಾಯಾ ಚಿತ್ರಗಳನ್ನು ನಮಗಾಗಿ ಒದಗಿಸಿ ಕೊಟ್ಟಿದ್ದಾರೆ. ಅವರಿಬ್ಬರನ್ನೂ ನಾವು ಹಾರ್ದಿಕ ಕೃತಜ್ಞತೆಯಿಂದ ಸ್ಮರಿಸುತ್ತೇವೆ. ಮುಂಬಯಿ ವಿದ್ಯಾಪೀಠದ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಶ್ರೀನಿವಾಸ ಹಾವನೂರರು ನಮ್ಮ ಈ ಎಲ್ಲ ಪ್ರಯತ್ನಗಳ ಹಿಂದಿನ ಮುಖ್ಯ ಶಕ್ತಿಗಳಾಗಿದ್ದಾರೆ. ಕೇವಲ ಅವರ ಮೂಲಕವೇ ಈ ಗ್ರಂಥವು ಈ ರೂಪವನ್ನು ತಳೆದು ಬೆಳಕನ್ನು ಕಾಣಲು ಸಾಧ್ಯವಾಯಿತು. ಈ ಗ್ರಂಥದಲ್ಲಿ ಸೇರ್ಪಡೆಯಾದ ಮೂಲ ಮರಾಠೀ ಲೇಖನಗಳನ್ನು ನಮ್ಮ ಅವಸರಕ್ಕೆ ಅಣಿಯಾಗಿ ಅನುವಾದ ಮಾಡಿಕೊಟ್ಟ ಎಲ್ಲ ಗೆಳೆಯರನ್ನು ನೆನೆಯುತ್ತೇವೆ.

ಅ. ರಾ. ತೋರೊ, ವಿರೂಪಾಕ್ಷ ಕುಲಕರ್ಣಿ
ಸಂಪಾದಕರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮರಾಠೀ - ಕನ್ನಡ ಬಾಂಧವ್ಯಕ್ಕಾಗಿ
ಹೊರನಾಡಿನಲ್ಲಿ ಶ್ರಮಿಸಿದ
ಹಾಗೂ
ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದ
ಸ್ಥಾಪನೆಗೆ ಕಾರಣೀಭೂತರಲ್ಲೊಬ್ಬರಾದ

ದಿ. ವರದರಾಜ ಆದ್ಯ

ಅವರಿಗಿದು ಮುಡಿಪು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪರಿವಿಡಿ

ಭಾಗ ಒಂದು

ತುಸು ನನ್ನದು/ಜಯವಂತ ದಳವಿ/ವಿರೂಪಾಕ್ಷ ಕುಲಕರ್ಣಿ/ಪುಟ/೧

ಸಂವಾದ/ಪು. ಲ. ದೇಶಪಾಂಡೆ/ಅನಂತ ತೋರೋ/ಪುಟ/೨೫

I cannot love it enough !/ಪು. ಲ. ದೇಶಪಾಂಡೆ/ಪುಟ/೬೫

ಪು. ಲ. ದೇಶಪಾಂಡೆ - ಜೀವನ ವಿಶೇಷ/ವಿರೂಪಾಕ್ಷ ಕುಲಕರ್ಣಿ/ಪುಟ/೭೦

ಅಪೂರ್ವ ಚಿತ್ರಗಳು

ಭಾಗ - ಎರಡು

ನಾರಾಯಣ/(ವಿನೋದಿ ವ್ಯಕ್ತಿ ಚಿತ್ರ)/ಅನಂತ ಕಲ್ಲೋಳ/ಪುಟ / ೭೫

ಭ್ರಮಣ ಮಂಡಳ (ಹರಟೆ)/ಸೌ. ಸುಚೇತಾ ಅಷ್ಟೇಕರ/ಪುಟ/೯೦,

ಡಾ. ಲೋಹಿಯಾ : ಒಬ್ಬ ರಸಿಕ ರುದ್ರ, ತಪಸ್ವಿ/ಆನಂದ ವರ್ಟಿ/ಪುಟ/೯೭,

ಸಖಾರಾಮ ಗಟಣೆ (ವಿನೋದಿ ವ್ಯಕ್ತಿ ಚಿತ್ರ)/ಸೌ. ಮೀನಾ ವಾಂಗೀಕರ/ಪುಟ/೧೧೦

ಪೂರ್ವ ರಂಗ (ಪ್ರವಾಸ ಲೇಖನ)/ಸೌ. ವಿಜಯಲಕ್ಷ್ಮಿ ರೇವಣಕರ/ಪುಟ/೧೨೦

ವಿಲಾಸ ಶೋಧನೆಯ ಪ್ರಕರಣ (ಹಾಸ್ಯ ಲೇಖನ)/ಅನಂತ ಕಲ್ಲೋಳ/ಪುಟ/೧೪೫

ನೆನಹುಗಳು : ಕೆಲವು ಸಾಹಿತ್ತಿಕ, ಕೆಲವು ಪ್ರಾಮಾಣಿಕ/ಡಿ. ಎಸ್. ಕುಲಕರ್ಣಿ/ಪುಟ/೧೬೨

ಕಾರವಾರ (ಕೊಂಕಣಿಯಿಂದ)/ಆನಂದ ವರ್ಟಿ/ಪುಟ/೧೭೩

ಸಂಗೀತದಲ್ಲಿ ವಾಸಿಸುವ ವ್ಯಕ್ತಿ (ಪಂ. ಮಲ್ಲಿಕಾರ್ಜುನಮನ್ಸೂರ/ಕೃಷ್ಣ ಕೊಲ್ಹಾರಕುಲಕರ್ಣಿ/ಪುಟ/೧೭೯

ಫ್ಲೋರೆನ್ಸ್ ಮತ್ತು ಆದ್ಯ ಶಂಕರಾಚಾರ್ಯ/ಕೆ.ಎಸ್. ಹೆಗಡೆ/ಪುಟ/೧೯೩

'ಬಂದ ಬಂದ ವಿಠ್ಠಲ ಬಂದ' (ಏಕಾಂಕ)/ರಾಜಣ್ಣ ಆನಿಖಿಂಡಿ/೨೦೮
(ವಿಠ್ಠಲ ತೂ ಆಲಾ ಆಲಾ (ಏಕಾಂಕ)

ಸಾಹಿತ್ಯ ಸೂಚಿ/ಪುಟ /೨೪೭

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭಾಗ - ೧

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತುಸು ನನ್ನದು

ಈ ಮುನ್ನುಡಿ ಒಂದು ಸ್ವಗತವಿದ್ದಂತೆ. ಎಂದಿನ ಮುನ್ನುಡಿಯಲ್ಲ ಇದು. ಮರಾಠಿಯ ಹಾಸ್ಯ ಸಾಹಿತ್ಯದಲ್ಲಿ ಪು.ಲ. ದೇಶಪಾಂಡೆಯವರ ಸ್ಥಾನ ಯಾವುದು? - ಎಂದಾಗಲಿ, ಅವರ ನಗೆ ಬರಹವನ್ನೋದಿ ಹಿಂದಿನ ಕಾಲದ ಯಾವ ಯಾವ ವ್ಯಕ್ತಿಗಳು ನೆನಪಾಗುತ್ತಾರೆ? - ಎಂದಾಗಲಿ ಕಂಡುಕೊಂಡ ಒಬ್ಬ ಪ್ರಾಧ್ಯಾಪಕನಂತೆ ಬರೆಯಹೊರಟಿಲ್ಲ ನಾನು. ನನ್ನಿಂದ ಹಾಗೆ ಬರೆಯಲೂ ಆಗದು. ಈ ನನ್ನ ಸ್ವಗತದಿಂದಾಗಿ ಇನ್ನೊಮ್ಮೆ ಪು.ಲ. ದೇಶಪಾಂಡೆಯವರತ್ತ ಹೊರಳಿ ನೋಡುವ ಯತ್ನ ನನ್ನದು.

ಮೊದಲಿನಿಂದಲೂ ನನ್ನಲ್ಲಿ ಪು.ಲ. ದೇಶಪಾಂಡೆಯವರನ್ನು ಕುರಿತು ತುಂಬ ಆಕರ್ಷಣೆ ಇದೆ. ನಾನು ಅವರ ಭಕ್ತನಲ್ಲ. ಹಿರಿಯ ಸಾಹಿತಿ, ಸಮೀಕ್ಷಕರಾದ ಪ್ರಾ. ಮಂಗೇಶ ವಿಠ್ಠಲ ರಾಜಾಧ್ಯಕ್ಷ, ಮಿತ್ರರಾದ ನಂದಾ ನಾರಳಕರ ಇಲ್ಲವೆ ಹಿಂದುಸ್ತಾನೀ ಗಾಯಕ ಪಂಡಿತ ವಸಂತರಾವ ದೇಶಪಾಂಡೆಯವರಂತೆ ಪು.ಲ. ಅವರ ನಿಕಟವರ್ತಿಯೂ ನಾನಲ್ಲ. ಹಲವಾರು ಬಾರಿ ಬಾಳಿನ ವಿವಿಧ ಕ್ಷೇತ್ರಗಳ ಬೇರೆ ಬೇರೆ ಜನ ನಮ್ಮನ್ನು ಆಕರ್ಷಿಸುವದುಂಟು. ಅವರಲ್ಲಿ ಸಾಹಿತಿಗಳು, ರಾಜಕೀಯ ಧುರೀಣರು, ಸಮಾಜದ ನೇತಾರರೂ ಇರುತ್ತಾರೆ. ಕಾಲ ಸರಿದಂತೆ ಈ ಕ್ರಮದಲ್ಲಿ ವ್ಯತ್ಯಾಸವಾಗುವದೂ ಉಂಟು. ಇಂತಹ ವ್ಯಕ್ತಿಗಳ ಹತ್ತಿರಕ್ಕೆ ಹೋಗುವ ಅವಕಾಶ ದೊರೆತು ಅವರ ಪರಿಚಯ ದಟ್ಟವಾಗುತ್ತ ಬಂದಂತೆ ಅವರ ಬಗೆಗಿನ ನಮ್ಮಲ್ಲಿಯ ಆಕರ್ಷಣೆ ಕಡಿಮೆಯಾಗಲೂಬಹುದು. ಹಲವರ ಬಗೆಯಲ್ಲಿಯ ನನ್ನ ಅನುಭವ ಇದಾಗಿದೆ. ಪು.ಲ. ಅವರ ಸಂದರ್ಭದಲ್ಲಿ ಮಾತ್ರ ಇದಕ್ಕೆ ವಿಪರೀತವಾದ ಅನುಭವ ನನ್ನದು. ೧೯೪೨ರಿಂದಲೂ ಪು.ಲ.ಅವರನ್ನು ಕೇಳಿ ಬಲ್ಲೆ. ಅವರೊಂದಿಗಿನ ಪರಿಚಯ ಮಾತ್ರ ತೀರ ತರುವಾಯದ್ದು. ಎಂದಿನಿಂದಲೂ ಅವರ ಸಾಹಿತ್ಯವನ್ನು ಓದುತ್ತ ಬಂದಿದ್ದೇನೆ. ಅದರಲ್ಲಿ ಹಿಡಿಸಿದ್ದೂ ಇದೆ, ಹಿಡಿಸದೆ ಇದ್ದದ್ದೂ ಇದೆ. ಹಲವರೊಂದಿಗೆ ಅವರು ಹೂಡಿದ ವಾದ ವಿವಾದಗಳು, ಕಟೆದ ಶಬ್ದಗಳ ಚಕಮಕಿಗಳನ್ನು ಕಂಡು ಸೋಜಿಗ ಪಟ್ಟಿದ್ದೇನೆ. ಆದರೆ ಇಷ್ಟೆಲ್ಲ ಕಳೆದು ಕೂಡಿಸುವ ಲೆಕ್ಕಾಚಾರದ ತರುವಾಯವೂ ಒಬ್ಬ ಬರಹಗಾರನಾದ, ಅದಕ್ಕೂ ಹೆಚ್ಚಿಗೆ ಒಬ್ಬ ಮಾನವನಾದ, ಈ ವ್ಯಕ್ತಿಯನ್ನು ಕುರಿತಾದ ನನ್ನಲ್ಲಿಯ ಆಕರ್ಷಣೆ ಕಳೆದ ಮೂವತ್ತೆಂಟು ವರ್ಷಗಳಿಂದ ಉಳಿಯಿತಷ್ಟೇ ಅಲ್ಲ, ಇಂದಿಗೂ ಬೆಳೆಯುತ್ತಲೇ ಇದೆ!

ಕಳೆದ ವರ್ಷ ಮುಂಬಯಿಯ ದೂರದರ್ಶನದಲ್ಲಿ ಪು.ಲ.ಅವರ ಒಂದು ಸಂದರ್ಶನದ ಕಾರ್ಯಕ್ರಮವಿತ್ತು. ಅದನ್ನು ಎರಡು ಭಾಗಗಳಲ್ಲಿ ತೋರಿಸಲಾಯಿತು. ಸಂದರ್ಶನವನ್ನು ಪಡೆಯುವವರಲ್ಲಿ ನಾನು ಮತ್ತು ಪು.ಲ. ಅವರ ಮಿತ್ರರೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಚಲನಚಿತ್ರ ಕ್ಷೇತ್ರದ ಅವರ ಹಳೆಗಾಲದ ಸಂಗಡಿಗರೂ ಆದ ರಾಮ ಗಬಾಲೆ ಇದ್ದೆವು. ನಾನು ಅದೆಷ್ಟೋ ಪ್ರಶ್ನೆಗಳನ್ನು ಸಿದ್ಧಪಡಿಸಿದ್ದೆ. ಅದಕ್ಕಾಗಿ ವಾ.ಲ. ಕುಲಕರ್ಣಿ, ಶ್ರೀ ಪು. ಭಾಗವತ, ಮಂಗೇಶ ವಿಠ್ಠಲ ರಾಜಾಧ್ಯಕ್ಷ, ಅವರ ಮಡದಿ ಪ್ರಾ. ವಿಜಯಾ ರಾಜಾಧ್ಯಕ್ಷ, ಶಂಕರ ಸಾರಡಾರಂಭವದೊಂದಿಗೂ ಚರ್ಚಿಸಿದ್ದೆ. ತರುವಾಯ ಪು.ಲ. ಅವರ ಇಡಿಯ ಸಾಹಿತ್ಯವನ್ನೆಲ್ಲ ಇನ್ನೊಮ್ಮೆ ಓದಿ ತೆಗೆದೆ. ಕೆಲವನ್ನಂತೂ ಸುಮಾರು ಇಪ್ಪತ್ತು - ಇಪ್ಪತ್ತೈದು ವರ್ಷಗಳ ತರುವಾಯ ಕೈಗೆತ್ತಿಕೊಂಡಿದ್ದೆ. ಈಗಲೂ ಅವು ಓಂದಿನಷ್ಟೇ ತಾಜಾತನ, ಅಷ್ಟೇ ಲವಲವಿಕೆಯಿಂದ ಕೂಡಿದ್ದವು. ಗೆಳೆಯರೊಂದಿಗಿನ ಚರ್ಚೆಗಳಿಂದಾಗಿ ಹೆಚ್ಚಾಗಿ ನನ್ನ ಗಮನಕ್ಕೆ ಬಂದ ಒಂದು ಸಂಗತಿಯೆಂದರೆ ಅರವತ್ತರ ಹೊಸ್ತಿಲಲ್ಲಿರುವ ಈ ಬರಹಗಾರನ ಬಗೆಗೆ ಹೊಸ ಹಳೆಯ ಚೊಕ್ಕಟತನ ಬಯಸುವ ಜನರಲ್ಲಿಯೂ ಸಾಕಷ್ಟು ಕುತೂಹಲವಿರುವದು. ಅರವತ್ತರ ಹತ್ತಿರಕ್ಕಿರುವ ಉಳಿದ ಸಾಹಿತಿಗಳ ಓನ್ನೆಲೆಯಲ್ಲಿ ಕೂಡ ಈ ಸಂಗತಿಯು ಮಹತ್ವದ್ದಾಗಿ ಕಾಣಿಸುತ್ತದೆ.

ದೂರದರ್ಶನದ ಸಂದರ್ಶನದ ತರುವಾಯ ಎಷ್ಟೋ ಜನ ನನ್ನನ್ನು ಕಂಡಾಗಲಿ ಕಾಗದಗಳ ಮೂಲಕವಾಗಲಿ ಪು.ಲ. ಹಾಗೂ ಅವರ ಸಂದರ್ಶನ ಕುರಿತು ಪ್ರತಿಕ್ರಿಯಿಸಿದರು. ಇವೆಲ್ಲವುಗಳಿಂದಾಗಿ ಪು.ಲ. ಅವರ ಸಾಹಿತ್ಯದ ಬೇರೆ ಬೇರೆ ಬದಿಗಳು ಎದ್ದು ಕಾಣುವಂತೆಯೂ ಒಬ್ಬ ಬರಹಗಾರ ಹಾಗೂ ಒಬ್ಬ ವ್ಯಕ್ತಿಯಾಗಿ ಅವರನ್ನು ಇಡಿಯಾಗಿ ಎತ್ತಿ ತೋರಿಸಬಲ್ಲ ಒಂದು ಹೊತ್ತಿಗೆಯನ್ನು ಸಂಪಾದಿಸಬೇಕೆಂಬ ಕಲ್ಪನೆ ನನ್ನಲ್ಲಿ ಮೂಡಿತು. ಆದರೆ ಇಂತಹ ದೊಡ್ಡ ಕೆಲಸ ನನ್ನಿಂದಾದೀತೇ, ಎಂದು ಯೋಚನೆಗಿಟ್ಟುಕೊಂಡಿತು. ಇದೇ ಸುಮಾರಿಗೆ ಪು.ಲ. ಅವರ ತೀರ ಹತ್ತಿರದ ಗೆಳೆಯ, ಪುಣೆಯ ನಂದಾ ನಾರಳಕರರಿಂದ ನನಗೊಂದು ಕಾಗದ ಬಂದಿತು. ಅವರ ಕರೆಯ ಮೇರೆಗೆ ಅವರನ್ನು ಕಾಣಲು ಪುಣೆಗೆ ಹೋದೆ. ಅಲ್ಲಿ ಮ್ಯಾಜೆಸ್ಟಿಕ್ ಪ್ರಕಾಶನ ಸಂಸ್ಥೆಯ ಕಾರ್ಯಾಲಯದಲ್ಲಿ ಅದರ ಒಡೆಯರಾದ ಕೇಶವರಾವ ಕೋಠಾವಳೆ, ನಂದಾ ನಾರಳಕರ ಮತ್ತು ನಾನು ಚರ್ಚೆಗಾಗಿ ಸೇರಿದೆವು. ೧೯೭೯ರ ನವ್ವೆಂಬರ ಎಂಟರಂದು ಪು.ಲ. ಅವರಿಗೆ ಅರವತ್ತು ತುಂಬವದಿತ್ತು. ಈ ಸಂದರ್ಭದಲ್ಲಿ ಒಂದು ಹೊತ್ತಿಗೆಯನ್ನು ಪ್ರಕಟಿಸುವದಲ್ಲದೆ ಭವ್ಯವಾದ ಒಂದು ಸಂಗೀತ ಸಭೆಯನ್ನು ಏರ್ಪಡಿಸಬೇಕೆಂಬ ಯೋಜನೆ ನಾರಳಕರರದು ಆಗಿತ್ತು. ಅವರು ಎರಡು ಮೂರು ದಿನಗಳ ಸಂಗೀತ ಸಭೆಯಿಂದಾಗಿ ತಿಕೀಟುಗಳನ್ನು ಮಾರಿ ಬರಬಹುದಾದ ದೊಡ್ಡ ಮೊತ್ತವನ್ನು ಹುಟ್ಟುಹಬ್ಬದ ದಿನ 'ಪು.ಲ. ದೇಶಪಾಂಡೆ ಫೌಂಡೇಶನ್ನಿ'ಗೆ ಅರ್ಪಿಸಬೇಕೆಂದುಕೊಂಡಿದ್ದರು. ಯೋಜನೆ ಕೊಂಡಾಡಬೇಕಾದದ್ದೇ. ಹೊತ್ತಿಗೆಯ ನನ್ನ ಯೋಜನೆಯನ್ನು ಮಂಡಿಸಿದೆ. ನಾರಳಕರರಿಗೂ ಕೋಠಾವಳೆಯವರಿಗೂ ಅದು ಹಿಡಿಸಿತು. ಅವರು ಹೊತ್ತಿಗೆಯನ್ನು ವಿಜೃಂಭಣೆಯಿಂದ ಹೊರತರುವ ಹೊಣೆಯನ್ನು ಹೊತ್ತರು. ತರುವಾಯ ಮರಾಠಿಯ ಹೆಸರಾಂತ ಚಿತ್ರಕಾರನಾದ ವಸಂತ ಸರವಟೇ ಹೊತ್ತಿಗೆಯನ್ನಲಂಕರಿಸಲು ತಾವಾಗಿಯೇ ಮುಂದೆ ಬಂದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಂದಿನ ಸಭೆಯ ಗೊತ್ತುವಳಿಗಳಲ್ಲಿ ರೂಪು ತಳೆದದ್ದೆಂದರೆ ಈ ಹೊತ್ತಿಗೆ 'ಪು.ಲ. ಏಕ ಸಾಠವಣ' - ಒಂದೇ! ಮೂರು ದಿನಗಳ ಸಂಗೀತ ಸಭೆಗಳ ಮೂಲಕ ಹಣವನ್ನು ಕಲೆ ಹಾಕುವ ಯೋಜನೆಯನ್ನಂತೂ ಯಾರ ಕಿವಿಗೆ ತಲುಪುವ ಮೊದಲೇ ಪು.ಲ. ಸದೆ ಬಡಿದು ಬಿಟ್ಟರು. ತಮ್ಮ ಬಾಳಿನ ಅರವತ್ತು ವರ್ಷಗಳನ್ನು ದಾಟುವ ಅನೇಕರಲ್ಲಿ ತಾವೂ ಒಬ್ಬರು! ಅದಕ್ಕಾಗಿ ಹುಟ್ಟು ಹಬ್ಬವನ್ನು ಸಾರ್ವಜನಿಕವಾಗಿ ಆಚರಿಸುವ ಅವಶ್ಯಕತೆಯೇ ಇಲ್ಲವೆಂದು ಹೇಳಿ ಅವರು ನಾರಳಕರರನ್ನು ನಿರಾಶೆಗೊಳಿಸಿದರು. ಹಾಗೆ ನೋಡಿದರೆ ನಾರಳಕರರ ಯೋಜನೆಯಲ್ಲಿ ಕುಂದೆಂಬುದು ಇರಲಿಲ್ಲ. ಸಂಗೀತ ಸಭೆಗಳಿಂದ ಬರಬಹುದಾದ ಹಲವು ಲಕ್ಷಗಳಷ್ಟು ರೂಪಾಯಿಗಳ ಮೊತ್ತವನ್ನು 'ಪು.ಲ. ಫೌಂಡೇಶನ್ನಿ'ಗೆ ನೀಡಿದ್ದರೆ ಆ ಹಣ ಮತ್ತೆ ಸಾಮಾಜಿಕ ಕಾರ್ಯಗಳಿಗೇನೇ ದೊರಕಬಹುದಿತ್ತು - ಎಂದು ಅವರು ಯೋಜಿಸಿದ್ದರು. ಭಾಯಿ - ಪು.ಲ. ದೇಶಪಾಂಡೆ- ತಮ್ಮ ಯೋಜನೆಗೆ ಒಪ್ಪಿಗೆಯನ್ನು ಕೊಟ್ಟೇ ಕೊಡುವರೆಂದು ನಾರಳಕರರು ಅವರೊಂದಿಗಿನ ತಮ್ಮ ದೀರ್ಘಕಾಲದ ಗಟ್ಟಿಮುಟ್ಟಾದ ನೆಲೆಗಟ್ಟಿನ ಮೇಲೆ ನಿಂತಿರುವ ಗೆಳೆತನವನ್ನು ನಂಬಿ ನುಡಿದ್ದರು. ಆದರೆ ಮುಂದೆ ಏನಾಯಿತೆಂಬುದು ತಿಳಿಯಲಿಲ್ಲ. ಒಮ್ಮೆಲೆ ಮೌನ ವ್ರತವನ್ನು ಧರಿಸಿದ ನಂದಾ ನಾರಳಕರರು ತುಟಿ ಪಿಟ್ಟೆನ್ನಲಿಲ್ಲ. ಮುಂದೆ ತಿಳಿದು ಬಂದ ಸಂಗತಿಯೆಂದರೆ ತಮ್ಮ ಹುಟ್ಟು ಹಬ್ಬಕ್ಕಾಗಿ ಯಾರಾದರೂ ಪುಕ್ಕಟೆಯಾಗಿ ಹಾಡಬೇಕು, ಜನ ಮಾತ್ರ ತಿಕೀಟುಗಳನ್ನು ಕೊಂಡು ಕೇಳಬೇಕೆಂಬ ಸಂಗತಿಯನ್ನೇ ಪು.ಲ. ತಳ್ಳಿ ಹಾಕಿದರಂತೆ. ೞ ಹೊತ್ತಿಗೆಯ ಬಗೆಗೂ ಅವರ ನಿಲುವು ಅದೇ ರೀತಿಯಾಗಿತ್ತು. ನನಗೆ, ''ಈ ಕೆಲಸದಲ್ಲಿ ಸುಮ್ಮನೆ ನಿಮ್ಮ ವೇಳೆ ಹಾಳಾದೀತು. ನಿಮ್ಮ ಬರವಣಿಗೆಯನ್ನು ಬದಿಗೆ ಸರಿಸಿ ನೀವು ಈ ಹೊತ್ತಿಗೆಯನ್ನು ತಯಾರಿಸುವಲ್ಲಿ ನನಗಂತೂ ಯಾವ ಅರ್ಥವೂ ಕಾಣುತ್ತಿಲ್ಲ .....'' ಎಂದೆಲ್ಲ ಮತ್ತೆ ಮತ್ತೆ ಹೇಳಹತ್ತಿದರು. ಆದರೆ ಈ ಒಂದು ಸಂಗತಿಯ ಬಗೆಗೆ ಮಾತ್ರ ಪು.ಲ. ಅವರ ಮಾತನ್ನು ಕೇಳಲೇ ಕೂಡದೆಂದು ನಾನು, ನಾರಳಕರ ಹಾಗೂ ಕೋಠಾವಳೆಯವರು ನಿಶ್ಚಯಿಸಿದೆವು. ಪು.ಲ. ಅವರ ಒಂದೇ ಒಂದು ಷರತ್ತಿಗೆ ನಮ್ಮ ಒಪ್ಪಿಗೆಯನ್ನು ನೀಡಬೇಕಾಯಿತು. ಅದೆಂದರೆ ಅವರ ಹುಟ್ಟು ದಿನದಂದು ಹೊತ್ತಿಗೆಯ ಬಿಡುಗಡೆಯನ್ನು ಮಾಡಕೊಡದೆಂಬುದು!

ಇಷ್ಟೆಲ್ಲ ನಡೆದ ಬಳಿಕ ಕಳೆದ ವರ್ಷವಷ್ಟೇ ನಾನು ಹೊತ್ತಿಗೆಯ ಕೆಲಸಕ್ಕೆ ತೊಡಗಿದೆ. ಪು.ಲ. ಬೇರೆ ಬೇರೆ ಬಗೆಯ ಬರವಣಿಗೆಗಳನ್ನು ಕೈಗೊಂಡವರು. ಅವರೆಂದರೆ ನಮ್ಮ ಮರಾಠಿಯ ಎಲ್ಲಕ್ಕೂ ಮೇಲ್ದರ್ಜೆಯ ಹಾಸ್ಯಗಾರರು. ಅಂದ ಮಾತ್ರಕ್ಕೆ ಅವರೊಬ್ಬ ಬರೀ ಹಾಸ್ಯ ಬರಹಗಾರರೆಂದು ಎಲ್ಲೆಡೆಗಳಲ್ಲಿ ಕಂಡು ಬರುವ ಅವರ ಪ್ರತಿಮೆ ಅಪೂರ್ಣವಾದದ್ದೆಂದೇ ಹೇಳಬೇಕು. ಒಬ್ಬ ಮೇಲ್ದರ್ಜೆಯ ಹಾಸ್ಯಗಾರರಾಗಿರುವದರ ಜೊತೆಗೆ ಅವರೊಬ್ಬ ಚಿಂತಕ, ವಿಚಾರವಂತರಷ್ಟೇ ಅಲ್ಲದೆ ಸಮಾಜ ಸುಧಾರಣೆಯ ತೀವ್ರವಾದ ಕಾಳಜಿಯನ್ನು ಹೊಂದಿದ ದೊಡ್ಡ ಬರಹಗಾರರೂ ಹೌದು. ಅವರ ಈ ಎರಡೂ ಬದಿಗಳು ಒಂದೆಡೆಯಲ್ಲಿ ಎದ್ದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಾಣುವ ರೀತಿಯಲ್ಲಿ ಈ ಹೊತ್ತಿಗೆಯಾಗಬೇಕು, ಎಂದುಕೊಂಡೆ.

ಹೊತ್ತಿಗೆಯ ಕೆಲಸದಲ್ಲಿ ಸಹಾಯ, ಮಾರ್ಗದರ್ಶನವನ್ನು ಪಡೆಯಲೆಂದು ಸುಮಾರು ಅರವತ್ತು ಎಪ್ಪತ್ತು ಜನ ಸಾಹಿತಿ ಮಿತ್ರರಿಗೆ ಕಾಗದಗಳನ್ನು ಬರೆದೆ. ನೀವೇ ಸಂಪಾದಕರಾಗಿದ್ದರೆ ಪು.ಲ. ಅವರ ಯಾವ ಅತ್ಯುತ್ತಮವಾದ ಸಾಹಿತ್ಯವನ್ನು ಆಯ್ದುಕೊಳ್ಳುತ್ತಿದ್ದಿರಿ, ಎಂದು ಕೇಳಿ, ಅವರೆಲ್ಲರ ಶಿಫಾರಸುಗಳನ್ನು ಪಡೆದೆ. ಈ ಮಿತ್ರರಲ್ಲಿ ಟೀಕಾಕಾರರು, ಕಥೆ ಕಾದಂಬರಿಕಾರರು, ಹಾಸ್ಯಗಾರರು, ಕವಿಗಳು, ಸಂಪಾದಕರು, ಪತ್ರಕರ್ತರು, ಹಿರಿಯರು, ಕಿರಿಯರು, ಎಂದೆಲ್ಲ ಬೇರೆ ಬೇರೆ ತರಹದ ಜನರಿದ್ದರು.

ಸುಮಾರಾಗಿ ಎಲ್ಲರಿಂದಲೂ ಮಾರೋಲೆಗಳು ಬಂದವೆನ್ನಬಹುದು. ಅವರೆಲ್ಲ ತಮ್ಮ ತಮ್ಮ ಅನಿಸಿಕೆ ಅಭಿಪ್ರಾಯಗಳನ್ನು ಬರೆದಿದ್ದರು. ಅವನ್ನು ಓದಿದಾಗ ಪು.ಲ. ಅವರನ್ನು ಒಬ್ಬ ಲೇಖಕ, ಒಬ್ಬ ಕಲಾವಿದನಲ್ಲದೆ ಒಬ್ಬ ವಿಚಾರವಂತನೆಂದು ಸಮಕಾಲೀನ ಲೇಖಕರುಅದೆಷ್ಟು ಮನ್ನಿಸುತ್ತಾರೆ ಎಂಬ ಸಂಗತಿಯ ಹೊಸ ದರ್ಶನವೇ ನನಗಾಯಿತು.

ಗೆಳೆಯರಿಂದ ಬಂದ ಈ ಎಲ್ಲ ಕಾಗದಗಳ ಉಪಯೋಗ ಸಾಕಷ್ಟಾಯಿತು. ಒಂದು ಮಹತ್ವದ ಸಂಗತಿಯೆಂದರೆ ಅವರೆಲ್ಲರ ಬೇಕು ಬೇಡಗಳಲ್ಲಿರುವ ಸಾಮ್ಯ ಹಾಗೂ ವಿರೋಧಗಳು ನನ್ನ ಅರಿವನ್ನು ತುಸು ಹೆಚ್ಚಿಸಿದವು. ಪು.ಲ. ಅವರ 'ಬಟಾಟ್ಯಾ ಚೀ ಚಾಳ್' ('ಬಟಾಟೆಯ ಚಾಳು')ವು ಪ್ರಕಟಗೊಂಡ ತರುವಾಯ ಅದರ ಏಕ ಪಾತ್ರ ಪ್ರಯೋಗಗಳಿಗೂ ಆರಂಭವಾಯಿತು. ಅದರ ಕೊನೆಯ ಭಾಗದಲ್ಲಿರುವ 'ಚಿಂತನೆ' ಬಹಳಷ್ಟು ಜನಕ್ಕೆ ಹಿಡಿಸುತ್ತಿರಲಿಲ್ಲ. 'ಚಿಂತನೆ' ಒಂದು ಸುಳ್ಳಿನ ಕಂತೆಯಾಗಿದ್ದು ಬೇಕೆಂದೇ ಕೃತಕವಾದ ಅದನ್ನು ತುರುಕಿದ್ದಾಗಿದೆ, ಎಂದವರು ಹಲವರು. ಇದಾದ ಬಳಿಕ ಅನೇಕ ವರ್ಷಗಳು ಸಂದಿವೆ. ಇಂದು ಮಾತ್ರ ಮಿತ್ರರ ಶಿಫಾರಸುಗಳನ್ನು ಹೊತ್ತು ತಂದ ಒಂದೊಂದು ಕಾಗದವೂ 'ಚಿಂತನೆ'ಯ ಪರವಾಗಿತ್ತು. 'ಚಿಂತನೆ'ಯನ್ನು ನನ್ನ ಹೊತ್ತಿಗೆಗಾಗಿ ಆಯ್ದುಕೊಳ್ಳಲೇಬೇಕೆಂಬ ಒತ್ತಾಯವನ್ನು ಕಂಡಾಗ ನನಗೆ ಮೋಜೆನಿಸಿತು.

ಅಂದ ಮಾತ್ರಕ್ಕೆ ನನಗೆ ಬಂದ ಶಿಫಾರಸುಗಳನ್ನಷ್ಟೇ ಆಧರಿಸಿ ನಾನು ಸಾಹಿತ್ಯವನ್ನು ಆಯ್ದುಕೊಂಡೆ ಎನ್ನಲಾಗದು. ಈಗಿವೆಂದರೆ ನನ್ನ ಸ್ವಂತದ ಆಯ್ಕೆ ಹಾಗೂ ನನ್ನಲ್ಲಿ ಬಂದ ಬಹುಮತದ ಬೇಕುಬೇಡಗಳ ಬೆರಕೆಯಾಗಿದೆ. ವ್ಯಾಖ್ಯಾನಗಳು ಹಾಗೂ ಕಾಗದಗಳ ಆಯ್ಕೆ ಇಡಿಯಾಗಿ ನನ್ನದೇ! ಈ ಹೊತ್ತಿಗೆಯಲ್ಲಿ ಕೊಡಲಾದ ಪತ್ರಗಳೋ ಪು.ಲ. ಅವರ ಅಂತರಂಗದ ಸೊಬಗನ್ನು ಅಂದವಾಗಿ ತೋರಬಲ್ಲವು ಎಂದು ಆಶಿಸುತ್ತೇನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬರವಣಿಗೆಯೊಂದಿಗೆ ನೇರವಾದ ಸಂಪರ್ಕವಿಲ್ಲದಿದ್ದರೂ ಸಾಹಿತ್ಯದೊಂದಿಗೆ ನಿಕಟವಾಗಿದ್ದ ಒಬ್ಬರಿಗೆ ಕೂಡ ನಾನು ಕಾಗದ ಬರೆದಿದ್ದೆ. ಅವರೆಂದರೆ ಶ್ರೀಮತಿ ಲಕ್ಷ್ಮೀಬಾಯಿ ಲಕ್ಷ್ಮಣ ದೇಶಪಾಂಡೆ. ಅವರು ೫- ಅಜಮಲ್ ರೋಡ್, ವಿಲೇಪಾರ್ಲೆ ಮುಂಬಯಿ - ೫೭ ವಿಳಾಸದಲ್ಲಿದ್ದವರು. ಎಂಬತ್ತರ ಹೊಸ್ತಿಲಲ್ಲಿರುವ ಈಕೆ ಪುರುಷೋತ್ತಮ ಲಕ್ಷ್ಮಣ ದೇಶಪಾಂಡೆಯವರ ತಾಯಿ. ಈಕೆಯ ಓದು ಹರಹಿನಿಂದ ಕೂಡಿದ್ದುದು. ಸಂಗೀತ ನಾಟಕಗಳ ಹುಚ್ಚು ಈಕೆಗೆ. ನನ್ನ ಕಾಗದಲ್ಲಿ "ಈ ಹೊತ್ತಿಗೆಯ ಸಂಪಾದಕತ್ವವನ್ನು ನೀವು ವಹಿಸಿದ್ದಿರಾದರೆ ಪು.ಲ. ಅವರ ಯಾವ ಯಾವ ಸಾಹಿತ್ಯವನ್ನು ಸೇರ್ಪಡಿಸುತ್ತಿದ್ದಿರಿ?" ಎಂದು ಕೇಳಿದ್ದೆ. ಆ ತಾಯಿ ಮೂರು ಪುಟಗಳ ಒಂದು ಉದ್ದಾದ ಮಾರೋಲೆಯನ್ನು ಕಳಿಸಿದರು. ಈಕೆ ಮಾಡಿದ ಶಿಫಾರಸುಗಳನ್ನು ಕಾರ್ಯರೂಪಕ್ಕೆ ತರುವುದೆಂದರೆ ಪು.ಲ. ಅವರ ಇಡಿಯ ಸಾಹಿತ್ಯವನ್ನೇ ಒಂದು ಹೊತ್ತಿಗೆಯಾಗಿ ಪ್ರಕಟಿಸಬೇಕಿತ್ತು. ಕಾಗದದ ಕೊನೆಯ ನಾಲ್ಕು ಸಾಲುಗಳು ಮನ ಮುಟ್ಟುವಂತಿವೆ.

"ಭಾಯಿಯ ಬರವಣಿಗೆ ನನ್ನ ಬಾಳಿಗೆ ಒಂದು ನೆಮ್ಮದಿಯನ್ನು ತಂದಿದೆ. ಮನ ಕಲಕಿದಾಗ ಭಾಯಿಯ ಯಾವುದಾದರೂ ಒಂದು ಹೊತ್ತಿಗೆಯನ್ನು ಕೈಗೆತ್ತಿಕೊಳ್ಳುತ್ತೇನೆ. ಓದುತ್ತಸಾಗಿದಂತೆ ಬೇರೆಯದೇ ಆದ, ಯಾವದೇ ಬಂಧನಗಳಿಲ್ಲದ ಒಂದು ವಿಶ್ವವನ್ನು ಹೊಕ್ಕ ಅನುಭವ ನನ್ನದಾಗುತ್ತದೆ. ಮನಸ್ಸಿಗೆ ನೆಮ್ಮದಿಯನ್ನು ತರುತ್ತದೆ." ಎಂದು ಬರೆದಿದ್ದಾರೆ.

ಪು.ಲ. ಅವರ ಕೆಲವು ಪತ್ರಗಳನ್ನು ಈ ಹೊತ್ತಿಗೆಯಲ್ಲಿ ಕೊಡಲಾಗಿದೆಯಷ್ಟೆ. ಈ ಆಯ್ಕೆಗೆ ಅನುಕೂಲವಾಗಲೆಂದು ವೃತ್ತಪತ್ರಗಳಲ್ಲಿ ಒಂದು ಪ್ರಕಟನೆಯನ್ನು ಕೊಟ್ಟು ಜನ ತಮ್ಮಲ್ಲಿರುವ ಪು.ಲ. ಅವರ ಪತ್ರಗಳನ್ನು ನನಗೆ ನೀಡಿ ಸಹಕರಿಸಬೇಕೆಂದು ಕರೆಕೊಟ್ಟಿದ್ದೆ. ನನ್ನ ಈ ಕರೆಗೂ ಕೂಡ ಜನ ಚೆನ್ನಾಗಿಯೇ ಓಗೊಟ್ಟರು. ಹಲವಾರು ಜನ ತಮ್ಮಲ್ಲಿರುವ ಪು.ಲ. ಅವರ ಪತ್ರಗಳನ್ನು ಕಳಿಸಿಯೂ ಕೊಟ್ಟರು. ಅವುಗಳನ್ನು ಕಂಡು ಒಂದು ಸಂಗತಿ ಮಾತ್ರ ನನ್ನ ಗಮನಕ್ಕೆ ಬಾರದೇ ಇರಲಿಲ್ಲ. ಅದೆಂದರೆ ಪು.ಲ. ಎಣಿಕೆಯಿಲ್ಲದಷ್ಟು ಕಾಗದಗಳನ್ನು ಬರೆಯುವವರಾದರೂ ಯಾವ ಸಮಕಾಲೀನ ದೊಡ್ಡ ಬರಹಗಾರನೊಂದಿಗೂ ಅವರ ಪತ್ರ ವ್ಯವಹಾರವೆಂಬುದೇ ಇರಲಿಲ್ಲವೆಂಬುದು. ಪು.ಲ. ವರ್ಷವೊಂದಕ್ಕೆ ಸುಮಾರು ಒಂದು ಸಾವಿರ ಕಾಗದಗಳನ್ನಾದರೂ ಬರೆಯುತ್ತಿರುತ್ತಾರೆ. ಆದರೆ ಅವುಗಳಲ್ಲಿಯ ಒಂದೆರಡು ಕೂಡ ಹಿರಿಯ, ಪ್ರತಿಷ್ಠಿತ ಬರಹಗಾರರಿಗೆಂದು ಬರೆದುವುಗಳಲ್ಲ. ಇದಕ್ಕೇನು ಕಾರಣವಿದ್ದೀತು? - ಪು.ಲ. ಅವರೇ ಹೇಳುವಂತೆ ಅದಕ್ಕೆ ಅಂತಹ ಕಾರಣವೇನೂ ಇಲ್ಲ. ಪ್ರತಿಷ್ಠಿತರಾದ ಸಮಕಾಲೀನ ಬರಹಗಾರರಿಗೆ ಕಾಗದ ಬರೆಯಬೇಕೆಂಬ ಭಾವನೆ ಎಂದಿಗೂ ತಮ್ಮಲ್ಲಿ ಉಂಟಾಗಲೇ ಇಲ್ಲ; ಅದಕ್ಕೆ ಅಂತಹ ಅವಕಾಶವೂ ಬಾರದೇ ಹೋಯಿತಷ್ಟೇ. ಪು.ಲ. ಅವರ ಪ್ರತ್ಯವ್ಯವಹಾರವೆಲ್ಲ

ಪು.ಲ.ದೇಶಪಾಂಡೆ/೫

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೆಚ್ಚಾಗಿ ಹೊಸ ಬರಹಗಾರರು, ಅವರಿಗಿಂತಲೂ ಹೆಚ್ಚಾಗಿ ಸಾಮಾನ್ಯ ಓದುಗರೊಂದಿಗಿದೆ! ಇವುಗಳಲ್ಲಿಯ ಯಾವ ಕಾಗದವನ್ನೂ ಕೇವಲ ಒಂದು ಉಪಚಾರಕ್ಕಾಗಿ ಬರೆದಂತೆ ಕಾಣುವದಿಲ್ಲ. ಅವು ಎಲ್ಲಿಯೇ ಆಗಲಿ ಹೊಸದೇನಾದರೂ ನಡೆದಿದ್ದರೆ, ಹೊಸ ಸಾಮಾಜಿಕ ಕಾಳಜಿ ಕಂಡು ಬಂದರೆ ಅವುಗಳನ್ನ ಎತ್ತಿ ಹಿಡಿಯಲೆಂದಾಗಲಿ, ಅವುಗಳೊಂದಿಗೆ ಸಮರಸವಾಗಲೆಂದಾಗಲಿ ಇಲ್ಲವೆ ತಮಗನಿಸಿದುದನ್ನು ಹೇಳಲೆಂದಾಗಲಿ ಅವರು ಒಳ್ಳೆಯ ಹುರುಪು ಹುಮ್ಮಸ್ಸುಗಳಿಂದ ಬರೆದ ಕಾಗದಗಳಾಗಿವೆ.

ಪು.ಲ. ಅವರ ಕಾಗದಗಳು ಹೆಚ್ಚಾಗಿ ಹರಹಿನಿಂದ ಕೂಡಿದವುಗಳು. ಆದರೆ ಒಂದೊಂದು ಬಾರಿ ಪು.ಲ. ತಮ್ಮ ಮಾರುತ್ತರದಲ್ಲಿ ಹೆಚ್ಚಿಗೇನನ್ನೂ ಬರೆಯಲಾಗದಂತಹ ಕಾಗದಗಳೂ ಅವರಿಗೆ ಬರುವದುಂಟು. ಇಂತಹ ಒಂದು ಕಾಗದ ಠಾಣೆ ನಗರದ ಸುಭಾಷ ಗೋಪಾಳ ಜೋಶಿಯವರಿಂದ ಬಂದಿದ್ದು ಅದರಲ್ಲಿ ಅವರು ಪು.ಲ. ಅವರ ಸಾಹಿತ್ಯವು ತಮ್ಮ ಪರಿಚಯದ ಒಬ್ಬ ಮಹಿಳೆಗೆ ತನ್ನ ಬೇನೆಯಿಂದ ಬೇಗನೆ ಸುಧಾರಿಸಿಕೊಳ್ಳಲು ಸಹಾಯಮಾಡಿತೆಂದಿದ್ದಾರೆ. ಈ ಕಾಗದಕ್ಕೆ ಬರೆದ ತಮ್ಮ ಮಾರುತ್ತರದಲ್ಲಿ ಪು.ಲ. ಹೆಚ್ಚಿಗೇನೂ ಬರೆಯದೆ ಹೋದರು. ಅವರನ್ನು ಈ ಬಗೆಗೆ ಕೇಳಿದಾಗ 'ನಾನೇನು ಬರೆಯಲಿ?- ನಿಮಗೆ ಇಂತಹ ಕಾಗದ ಬಂದಿದ್ದರೆ ನೀವೇನು ಬರೆಯುತ್ತಿದ್ದಿರಿ? ಎಂಬ ಮರು ಪ್ರಶ್ನೆ ಅವರದು. ಚೀನ ಭಾರತ ಯುದ್ಧ ನಡೆದ ಕಾಲಕ್ಕೆ ಸೀಮೆಯ ಮೇಲಿನ ಒಬ್ಬ ಮರಾಠಿ ಸೈನಿಕ ಅಲ್ಲಿಯ ತೀವ್ರವಾದ ಚಳಿಯಿಂದ ಥರಗುಟ್ಟುತ್ತಿದ್ದನು. ಅವನ ಮೈಮೇಲೆ ಹೆಚ್ಚಿನ ಉಣ್ಣೆಯ ಬಟ್ಟೆಗಳೂ ಇರಲಿಲ್ಲ. ಹೀಗಾಗಿ ಅವನು ಕಾಯಿಸಿಕೊಳ್ಳಲೆಂದು ತನ್ನಲ್ಲಿದ್ದ ಮರಾಠಿಯ ದೀಪಾವಳಿಯ ಸಂಚಿಕೆಗಳನ್ನು ಒಂದೊಂದಾಗಿ ಸುಡಹತ್ತಿದನು. ಬೆಂಕಿಯಲ್ಲಿ ಎಸೆಯುವ ಮೊದಲ ತಿರುವಿಹಾಕುತ್ತಿರುವಾಗ ಒಂದು ಸಂಚಿಕೆಯಲ್ಲಿ ಅವನಿಗೆ 'ಪು.ಲ. ದೇಶಪಾಂಡೆ'ಯವರ ಹೆಸರು ಕಂಡಿತು. ಅವರ ಬರಹದ ಹೆಸರು 'ನನ್ನ ಖಾದ್ಯ ಜೀವನ!' - ಸೈನಿಕನು ಅದನ್ನು ಇಡಿಯಾಗಿ ಓದಿದನು. ಆಗಲೆ ಬಾಳಿಗೆ ಬೇಸತ್ತು ಹೋಗಿದ್ದ ಅವನು ಇಷ್ಟೆಲ್ಲ ತಿಂಡಿ ತಿನಿಸುಗಳನ್ನು ತಿನ್ನಲಿಕ್ಕಾಗಿಯಾದರೂ ತಾನು ಬದುಕಲೇ ಬೇಕೆಂದುಕೊಂಡನು. ತರುವಾಯ, 'ನಿಮ್ಮ ಬರಹವನ್ನೋದಿಯೇ ನಾನು ಬದುಕಿ ಉಳಿಯಲು ಬಯಸಿದ್ದು' ಎಂದು ಬರೆದ ಕಾಗದ ಆತನಿಂದ ಬಂದಾಗಲೂ ಪು.ಲ. ಅವರದು ಅದೇ ಅವಸ್ಥೆಯಾಯಿತು. 'ಇದೇ ನನ್ನ ಖಾದ್ಯ ಜೀವನ' ದಲ್ಲಿ ಪು.ಲ. ಅವರು ''ಚಿವಡಾ ಕುರಿತು ಈ ರೀತಿಯಾಗಿ ಬರೆದಿದ್ದಾರೆ.'' ''ಚಿವಡಾ ಎಂದ ಬಳಿಕ ಸೊಲ್ಲಾಪುರಕ್ಕಿಂತ ಕೊಲ್ಲಾಪುರದ್ದೇ ಸರಿ! ಅದು ಛತ್ರೆಯವರದಾಗಿದ್ದರೆ ಮಾತ್ರ ! ಇಂದಿನ ವರೆಗೆ ಒಟ್ಟು ಮೂವರು ಛತ್ರೆಯವರು ಮಹಾರಾಷ್ಟ್ರವನ್ನು ತುಂಬ ಉಪಕರಿಸಿದ್ದಾರೆ. ಒಬ್ಬರೆಂದರೆ ಚಿವಡಾವಾಲೆ ಛತ್ರೆ, ಎರಡನೆಯವರು ಸರ್ಕಸ್ಸಿನವರಾದರೆ ಮೂರನೆವರು ಗಣಿತಜ್ಞರಾದ ಕೇರೂನಾನಾ ಛತ್ರೆಯವರು! - ಉಪಕಾರವನ್ನು ಇಳುಗಡೆಯ ಕ್ರಮದಲ್ಲಿ ನಮೂದಿಸಬೇಕಿದೆ! ಏಕೆಂದರೆ ಕೊಲ್ಲಾಪುರದ 'ರಮ್'ಗೆ ಛತ್ರೆಯವರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಚಿವಡಾ ನೀಡಿದ ಜತೆಗಾರಿಕೆಯು ದಿಟ್ಟ ರುಮಾಲುಗಳ ಹಾರಾಡುವ ಅಂಚುಗಳನ್ನೂ 'ಕಳ್ಳ ಪಗಡಿಗಳ ಓಲಾಡುವ ಹೊಳಪಿನ ರೇಶಿಮೆಯ ಎಳೆಗಳನ್ನೂ ಗಗನಕ್ಕೇರಿಸಿ ಬಂದಿತು......'' ಇದನ್ನೋದಿದ 'ಕೊಲ್ಲಾಪುರ ಸಂಗೀತ ಚಿವಡಾ'ದ ಆದ್ಯ ನಿರ್ಮಾತೃಗಳಾದ ಛತ್ರೆಯವರ ಎದೆ ತುಂಬಿ ಬಂದಿತು. ಅವರು ತಮ್ಮ ಮುಪ್ಪು ಮರೆತು ಪು.ಲ. ಅವರಿಗಾಗಿ ತಾವೇ ನಿಂತು ಚಿವಡಾ ತಯಾರಿಸಿದರು. ಹದಿನೈದು ಹದಿನಾರು ವರ್ಷಗಳ ಕೆಳಗಿನ ಮಾತಿದು. ತಾವು ಕೈಯಾರೆ ತಯಾರಿಸಿದ ಚಿವಡಾವನ್ನು ಸ್ವೀಕರಿಸಿರೆಂದು ಪು.ಲ. ಅವರನ್ನು ಕೇಳಿಕೊಂಡರಂತೆ. ಈ ರೀತಿಯಾಗಿ ಒಂದು ಡಬ್ಬಿ ತುಂಬಿ ಕಳಿಸಿದ ಚಿವಡಾದೊಂದಿಗೆ ಅವರು ಒಂದು ಮಾತನ್ನೂ ಹೇಳಿ ಕಳಿಸಿದ್ದರಂತೆ. ಅದೆಂದರೆ ಅವರು ಈ ಮೊದಲು ಕೂಡ ಒಂದು ಬಾರಿ ಇದೇ ರೀತಿಯಾಗಿ ಒಬ್ಬರಿಗಾಗಿ ತಮ್ಮ ಚಿವಡಾ ಕಳಿಸಿಕೊಟ್ಟಿದ್ದರಂತೆ. ಯಾರಿಗೆ ಗೊತ್ತೇ? ಲೋಕಮಾನ್ಯ ಟಿಳಕರಿಗಾಗಿ! ಲೋಕಮಾನ್ಯರು ಅಂದು ವಿದೇಶ ಯಾತ್ರೆಗೆ ಹೊರಟು ನಿಂತಿದ್ದರಂತೆ!

ಇಂತಹ ಕೆಲವೊಂದು ಕಾಗದಗಳಿಗೆ ಮಾರೋಲೆಗಳನ್ನು ಬರೆಯುವಲ್ಲಿ ಪು.ಲ. ಸಂಕೋಚಗೊಂಡದ್ದನ್ನು ಕಾಣಬಹುದಾದರೂ ತಮ್ಮ ಬೇರೆ ಕಾಗದಗಳಲ್ಲಿ ಅವರೊಬ್ಬ ಹರಟೆಯ ಮಲ್ಲರಾಗಿರುವುದನ್ನು ಕಾಣಬಹುದು. ಎಂತಹ ಕಾಗದವೇ ಬಂದಿರಲಿ, ಪು.ಲ. ಅವರ ಮಾರೋಲೆ ಮಾತ್ರ ಹರಟೆಗಳಿಂದ ತುಂಬಿದ್ದು. ಕೆಲವೇ ಮಹತ್ವದ ಕಾಗದಗಳನ್ನು ಮಾತ್ರ ಈ ಹೊತ್ತಿಗೆಯಲ್ಲಿ ಸೇರಿಸಲು ಸಾಧ್ಯವಾಯಿತು. ಆದರೆ ಉಳಿದ ಚಿಕ್ಕ ಪುಟ್ಟ ಕಾಗದಗಳಿಂದಲೂ ಅವರ ಹೆಚ್ಚಿನ ಪರಿಚಯವಾಗುತ್ತದೆ. ನನಗಾದ ಅವುಗಳ ಉಪಯೋಗವಂತೂ ಹೇಳತೀರದ್ದು.

ಪು.ಲ. ಅವರ ಮನೆತನ ಬಡತನದ್ದೇನಲ್ಲ. ಅಂದ ಮಾತ್ರಕ್ಕೆ ಅವರು ಹಣವಂತರೆಂದೂ ಅಲ್ಲ. ಅವರ ತಂದೆ ಒಂದು ಸಾಧಾರಣವಾದ ನೌಕರಿಯಲ್ಲಿದ್ದವರು. ಆದರೆ ಬಲು ಹುಮ್ಮಸ್ಸಿನವರು. ಅವರಿಗೆ ಹಾಡು ನಾಟಕಗಳ ಎಲ್ಲಿಲ್ಲದ ಗೀಳು. ವಾರ ವಾರಕ್ಕೂ ಮನೆಯವರನ್ನೆಲ್ಲ ನಾಟಕ ನೋಡಲು ಕರೆದೊಯ್ಯುತ್ತಿದ್ದರು. ಜ್ಯೋತಿಷ್ಯ - ಶಾಸ್ತ್ರವನ್ನು ಚೆನ್ನಾಗಿ ಬಲ್ಲವರಾಗಿದ್ದರು. ಅವರ ಪು.ಲ. ಅವರ ಬಾಳಿನ ಮೂವತ್ತೆರಡು ವರ್ಷಗಳ ಭವಿಷ್ಯವನ್ನು ಬರೆದಿಟ್ಟಿದ್ದರು. ಅದೊಮ್ಮೆ ಪು.ಲ. ಅವರ ಕೈಗೆ ಬಿದ್ದು ತಮ್ಮ ಆಯುಷ್ಯ ಕೇವಲ ಮೂವತ್ತೆರಡೇ ವರ್ಷಗಳದೆಂದು ಭಾವಿಸಿದ ಪು.ಲ. ಹಾಗೂ ಅವರ ಮಡದಿ ಸುನೀತಾಬಾಯಿಯವರು ಕಂಗೆಟ್ಟಿದ್ದರು. ತಮ್ಮ ತಂದೆಗೆ ಮುಂದಿನ ಭವಿಷ್ಯವನ್ನು ಬರೆಯಲು ಆಗಿರಲಿಕ್ಕಿಲ್ಲವೆಂಬ ಸಂಗತಿಯು ಪು.ಲ. ಅವರ ಗಮನಕ್ಕೆ ಬಂದದ್ದು ತಮ್ಮ ಬಾಳಿನ ಮೂವತ್ತೆರಡು ವರ್ಷಗಳು ದಾಟಿದ ಬಳಿಕವೇ!

ಪು.ಲ. ಅವರ ತಾಯಿಯವರ ಹೇಳಿಕೆಯಂತೆ ಪು.ಲ. ಅವರ ತಂದೆಗೆ ತಮ್ಮ ಸಾವಿನ ವೇಳೆ, ದಿನಗಳೆಲ್ಲ ಗೊತ್ತಿದ್ದುವಂತೆ. ಅವರು ತಮ್ಮ ನಡು ಹರೆಯದಲ್ಲಿಯೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತೀರಿಕೊಂಡರು. ತಮ್ಮ ಅಂತ್ಯಕಾಲದಲ್ಲಿ ಅವರು ಪು.ಲ. ಅವರನ್ನು ಹತ್ತಿರ ಕೂಡಿಸಿಕೊಂಡು ಭಜನೆ, ಅಭಂಗಗಳನ್ನು ಹೇಳ ಹಚ್ಚಿದರಂತೆ. 'ಜೇಥೇ ಜಾತೋ ತೇಥೇ, ತೂ ಮಾಝಾ ಸಾಂಗಾತಿ, ('ನಾನು ಹೋದೆಡೆಗಳಲ್ಲೆಲ್ಲ ನೀನೇ ನನ್ನ ಸಂಗಡಿಗ') – ಹಾಗೂ 'ಅಮ್ಹೀ ಜಾತೋ ಆಮುಚ್ಯಾ ಗಾವಾ (ನಾವು ಹೋಗುವೆವು ನಮ್ಮೂರಿಗೆ) ಎನ್ನುವದನ್ನು ಪೂರ್ತಿಯಾಗಿ ಕೇಳಿದ ತರುವಾಯವೇ ಅಸು ನೀಗಿದರು. ಅವರು ಕೊನೆಯುಸಿರನ್ನು ಎಳೆಯುವ ಮೊದಲೇ ಪು.ಲ. ಅವರ ತಾಯಿಯವರನ್ನು ತಮ್ಮ ಹತ್ತಿರಕ್ಕೆ ಕರೆದು, ''ನೀನು ಈತನಿಗೆ ದೊರಕುವ ಹಲವಾರು ಗೌರವಗಳನ್ನು ಕಾಣುವಿ. ನಾನು ಏನನ್ನೂ ಕಾಣಲಾರೆ. ಇನ್ನು ಹೊರಟೆ ......'' ಎಂದರಂತೆ.

ತಂದೆಯ ಮರಣದ ತರುವಾಯ ಕೆಲವೇ ದಿನಗಳಲ್ಲಿ ಪು.ಲ. ಮುಂಬಯಿಯನ್ನು ತೊರೆದರು. ಅವರಿಗೆ ತಮ್ಮ ಹೊಟ್ಟೆ ಓದುಗಳಿಗಾಗಿ ಬಹಳ ಪರದಾಡಬೇಕಾಯಿತು. ಕಂಡ ಕಂಡಲ್ಲಿ ಚಿಕ್ಕ ಪುಟ್ಟ ನೌಕರಿಗಳನ್ನು ಹಿಡಿದು ನಾಟಕ ಚಿತ್ರಪಟಗಳಲ್ಲಿ ದುಡಿದು, ಚಿತ್ರಗಳಿಗಾಗಿ ಸಂಭಾಷಣೆಗಳನ್ನು ಬರೆದು, ನಾಲ್ಕು ದುಡ್ಡುಗಳಿಸುತ್ತ ಕೈಲಾದ ಮಟ್ಟಿಗೆ ಓದನ್ನು ಮುಂದುವರೆಸಿದರು. ೨೦ ಫೆಬ್ರುವರಿ ೧೯೫೦ರಂದು ನಾಟಕಕಾರ ಚಿಂತಾಮಣರಾವ ಕೋಲ್ಹಟಕರರಿಗೆ ಬರೆದ ಅವರ ಕಾಗದ ನೋಡುವಂಥದು. ಚಿಂತಾಮಣರಾಯರಿಂದ ನಾಟ್ಯಕಲೆಯ ಪಾಠಗಳನ್ನು ಹೇಳಿಸಿಕೊಳ್ಳುವ ಕಾಲಕ್ಕೆ ಅವರು ಕಾಲೇಜಿನಲ್ಲೂ ಓದುತ್ತಿದ್ದರು. ಮುಂದೆ ಸಾಂಗಲಿಗೆ ಕವಿ ಗಿರೀಶರಲ್ಲಿಗೆ ಹೋದರು. ಸಾಂಗಲಿಯಿಂದ ಬರೆದ ಕಾಗದವಿದು.–

''ನಿನ್ನೆ ತಾನೆ ಶ್ರೀ ರಾಜಾಧ್ಯಕ್ಷರಿಂದ ಕಾಗದ ಬಂದಿದೆ. ತಾವು 'ಜೀವ ಶಿವರ ಭೆಟ್ಟಿ' ಚಿತ್ರ ನಡೆದುದನ್ನು ಕಂಡುದಾಗಿ ಬರೆದಿದ್ದಾರೆ. ದಿಗ್ದರ್ಶನವನ್ನು ಕುರಿತು ಹೆಚ್ಚಿಗೆ ಬರೆದಿದ್ದಾರೆ. ಆದರೆ ಪ್ರೇಕ್ಷಕರ ಸಂದಣಿ ಬೇಕಿದ್ದಷ್ಟು ಕೂಡುತ್ತಿಲ್ಲವಂತೆ. ಅವರ ಈ ಕೊನೆಯ ಅಭಿಪ್ರಾಯದಿಂದ ನನಗೆ ಏನೂ ಅನಿಸಲಿಲ್ಲ. ಅದಕ್ಕೆ ಕಾರಣವಿಷ್ಟೆ. ಅದೆಂದರೆ ಜನರ emotional level ಇಷ್ಟೊಂದು ಕೆಳಮಟ್ಟದಲ್ಲಿರುವಾಗ ಅವರು ಒಳ್ಳೆಯ ಸಂಗತಿಗಳಿಗೆ ಆಶ್ರಯವನ್ನು ನೀಡಲಾರರೆಂಬುದನ್ನು ನಾಟಕ ಸಿನೇಮಾ ಕ್ಷೇತ್ರಗಳ ಕೆಲವು ವರ್ಷಗಳ ಅನುಭವದಿಂದಾಗಿ ಕಂಡು ಕೊಂಡಿದ್ದೇನೆ.

ಸದ್ಯಕ್ಕೆ ಎಮ್. ಎ. ಪರೀಕ್ಷೆಯ ಸಿದ್ಧತೆಗಾಗಿ ಇಲ್ಲಿಗೆ ಬಂದಿದ್ದೇನೆ. ಬಿ.ಎ.ಯನ್ನಂತೂ ನಿಮ್ಮಲ್ಲಿ ನಾಟ್ಯಕಲೆಯ ಪಾಠಗಳನ್ನು ಹೇಳಿಸಿಕೊಳ್ಳುತ್ತಲೇ ಸಾಗಿಸಿದ್ದೆ. ಸಿನೇಮಾದ ವಾತಾವರಣದಲ್ಲಿ ಓದಿಗೆ ಅವಕಾಶ ಇಲ್ಲದ್ದರಿಂದ ಅದರಿಂದ ದೂರ ಸರಿದೆ. ನಾನು ಸಾಂಗಲಿಗೆ ಬಂದ ಹಿನ್ನೆಲೆಯಲ್ಲಿ ಏನೇನೋ ತರ್ಕಕುತರ್ಕಗಳು ಸಾಗಿದುವಂತೆ. ಅವುಗಳ ಬಗೆಗೆ ಓದುತ್ತಿರುತ್ತೇನೆ; ಕೇಳುತ್ತಿರುತ್ತೇನೆ. ಮೋಜೆನ್ನಿಸುತ್ತದೆ. ಎಲ್ಲ ಸಂಗತಿಗಳನ್ನು ರೂಪಾಯಿ ಆಣೆ ಪೈಗಳಲ್ಲಿ ಅಳೆಯಲು ಆರಂಭವಾದ್ದರಿಂದ ನನ್ನ ಓದಿನ ಬಗೆಗೆ ಈ ತರಹದ ಕುಚೋದ್ಯ ನಡೆದುದರಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಚ್ಚರಿಯೇನಿಲ್ಲ. ಚಿತ್ರಪಟದ ವ್ಯವಸಾಯದಲ್ಲಿ ಕಳೆದ ಎರಡು, ಎರಡೂವರೆ ವರ್ಷಗಳಲ್ಲಿ ನನ್ನ ಒಟ್ಟು ಹನ್ನೆರಡು ಚಿತ್ರಗಳ ಕೆಲಸವಾಗಿದೆ. ಪುಣೆಯನ್ನು ಬಿಟ್ಟು ಇಲ್ಲಿಗೆ ಬಾರದಿದ್ದರೆ ಕಳೆದ ಎರಡು ತಿಂಗಳುಗಳಲ್ಲಿ ಅವುಗಳ ಸಂಖ್ಯೆ ಇನ್ನಷ್ಟು ಹೆಚ್ಚಬಹುದಿತ್ತು. ಹೆಸರು ಹಾಗೂ ಹಣಗಳಿಸಲು ಅಲ್ಲಿಯ ಗದ್ದಲದೊಡನೆ ನಾನೂ ದನಿಗೂಡಿಸಬೇಕಿತ್ತು. ಆದರೆ ಅದು ನನಗೆ ಸರಿ ಕಾಣಲಿಲ್ಲ. ಕಡ್ಡಾಯದ ವಿಶ್ರಾಂತಿ, ಅದಕ್ಕೂ ಹೆಚ್ಚಿಗೆ ಕಡ್ಡಾಯದ ಓದುಗಳಿಗಾಗಿ ಇಲ್ಲಿಗೆ ಬಂದಿದ್ದೇನೆ. ಪರೀಕ್ಷೆ ಮೇ ತಿಂಗಳಲ್ಲಿದೆ. ತರುವಾಯ ಪುಣೆಗೆ ಹಿಂದಿರುಗುವೆನು. ನನ್ನ ಕೆಲವು ಚಿತ್ರಪಟಗಳು ಪುಣೆ ಮುಂಬಯಿಗಳಲ್ಲಿ ಪ್ರದರ್ಶನಗೊಳ್ಳುತ್ತಿವೆ. ನೀವು ಅವುಗಳನ್ನು ನೋಡಕೂಡದು!''

ಪು.ಲ. ಅವರ ಕೊನೆಯ ಚಿತ್ರಪಟ 'ಗುಳಾಚಾ ಗಣಪತಿ!' ('ಬೆಲ್ಲದ ಬೆನಕ') ಅದು ಇಡಿಯಾಗಿ ಪು.ಲ.ಮಯವಾಗಿತ್ತು. ಕಥೆ, ಚಿತ್ರಕಥೆ, ಸಂಭಾಷಣೆ, ಗೀತೆ, ಸಂಗೀತ ದಿಗ್ದರ್ಶನವೂ ಅಲ್ಲದೆ ನಾಯಕನ ಪಾತ್ರವೂ ಅವರದೇ! ಈ ಚಿತ್ರಪಟವು ಎಲ್ಲೆಡೆಗಳಲ್ಲೂ ಚೆನ್ನಾಗಿಯೇ ವಿಜೃಂಭಿಸಿತು. ಆದರೆ ಅದರಿಂದ ಪು.ಲ. ಗಳಿಸಿದ್ದೇನು? 'ಗುಳಾಚಾ ಗಣಪತಿ' ಪುಣೆಯಲ್ಲಿ ಬಿಡುಗಡೆ ಹೊಂದಿದ ದಿನ ನೋಡಲು ಪು.ಲ. ಅವರಿಗೆ ಕರೆ ಹೋಗಲಿಲ್ಲ. ಪು.ಲ. ಸುನೀತಾಬಾಯಿ ಹಾಗೂ ಮಂಗೇಶ ವಿಠ್ಠಲ ರಾಜಾಧ್ಯಕ್ಷರು ಚಿತ್ರದ ಮೊದಲ ಆಟವನ್ನೇ ತಿಕೀಟು ಪಡೆದು ನೋಡಬೇಕಾಯಿತು!

ಇಷ್ಟಾಗಿಯೂ ಪು.ಲ. ಅವರು ತಮ್ಮ ಮನದಲ್ಲಿ ಯಾವ ತರಹದ ಕಹಿಯನ್ನುಳಿಸದೆ ಚಿತ್ರೋದ್ಯಮವನ್ನು ತೊರೆದು ಶಿಕ್ಷಣರಂಗವನ್ನು ತಮ್ಮದನ್ನಾಗಿ ಮಾಡಿಕೊಂಡರು. ೧೯೫೦ರ ಜುನಿನಲ್ಲಿ ಎಮ್. ಎ. ಪಾಸು ಮಾಡಿ ನವ್ಹೆಂಬರಿನಲ್ಲಿ ಬೆಳಗಾವಿಯ ರಾಣಿ ಪಾರ್ವತಿದೇವಿ ಕಾಲೇಜಿನಲ್ಲಿ ಮರಾಠಿಯ ಪ್ರಾಧ್ಯಾಪಕರಾಗಿ ಸೇರಿದರು. ಪು.ಲ. ಹಾಗೂ ಮಂಗೇಶ ವಿಠ್ಠಲ ರಾಜಾಧ್ಯಕ್ಷ ಇಬ್ಬರಿಗೂ ಮಿತ್ರರಾದ ಬಾಬುರಾವ (ಆರ್. ಎಸ್) ರೇಗೆ ಆಗ ಆ ಕಾಲೇಜಿನ ಉಪಪ್ರಾಚಾರ್ಯರಾಗಿದ್ದರು. ಅವರು ಬೇಕೆಂದೇ ಪು.ಲ. ಅವರನ್ನು ಬೆಳಗಾಂವಿಗೆ ಕರೆದೊಯ್ದರು. ಪು.ಲ. ಪ್ರಾಧ್ಯಾಪಕರಾದುದು ಅವರ ಅಜ್ಜ ಋಗ್ವೇದಿಯವರನ್ನು ಮಾತ್ರ ಬಲು ಮುದಗೊಳಿಸಿತು. ಅವರು ತಮ್ಮ ತುಂಟ, ಕಿಡಿಗೇಡಿ ಹಾಗೂ ದಾರಿಗೆಟ್ಟ ಮೊಮ್ಮಗ ಈಗಲಾದರೂ ದಾರಿಗೆ ಬಂದನೆಂದುಕೊಂಡರು. ಅವರು ಪು.ಲ. ಅವರಿಗೆ, ''ಏನೋ! ಈಗ ನೀನು ಪ್ರೊಫೆಸರನಾದಿ. ಇನ್ನು ಮೇಲಾದರೂ ತುಸು ಗಂಭೀರವಾಗಿ ನಡೆದುಕೊಳ್ಳಲು ಕಲಿತುಕೋ! - ಜನ ನಿನ್ನನ್ನು ಒಬ್ಬ ವಿದ್ವಾಂಸನೆಂದು ಕಾಣಹತ್ತುವರು!'' ಎಂದರು. ಆದರೆ ಅಂತಹದೇನೂ ಆಗಲಿಲ್ಲ. ಪು.ಲ. ತಮ್ಮ ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚಿನವರು. ಕಾಲೇಜಿನ ವ್ಯವಸ್ಥಾಪಕರಿಗೂ ಅವರಿಗೂ ಆಗದಂತಾಯಿತು. ಹೀಗಾಗಿ ಮುಂದಿನ ಎರಡೇಎರಡು ವರ್ಷಗಳಲ್ಲಿ ಬೆಳಗಾವಿಯ ಕಲಾಪ್ರೇಮಿಗಳ ಮಮತೆ ಹಾಗೂ 'ರಾವಸಾಹೇಬ' ಹರಿಹರರಂತಹ ಮಿತ್ರರನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೇಶಪಾಂಡೆ ಪು.ಲ. ಅವರ ಬಟ್ಟೆಗಳು ಶಿಂಪಿಗನು ಹೊಲಿದವುಗಳಲ್ಲ! ಎಂದು ಪರಿಹಾಸ್ಯ ಮಾಡುತ್ತಿದ್ದರು.

ಸ್ವಯಂ ಸ್ಫೂರ್ತಿಯಿಂದ ಪ್ರಭಾವಿತಗೊಳ್ಳುವುದು ಪು.ಲ. ಅವರ ಸ್ವಭಾವ. ಅವರ ಈ ಸ್ವಭಾವವು ಅಪಾರ್ಥಕ್ಕೆ ಎಡೆಮಾಡಿಕೊಡುತ್ತದೆ. ಅದೊಂದು ಸೋಗು ಎನ್ನಲಾಗುತ್ತಿದೆ. ದಿಲೀಪ ಪುರುಷೋತ್ತಮ ಚಿತ್ರೆ ಇಲ್ಲವೆ ಭಾಲಚಂದ್ರ ನೇಮಾಡೆ ಬಹಿರಂಗವಾಗಿಯೇ ಇಂತಹ ಟೀಕೆಯನ್ನು ಮಾಡಿದ್ದಾರೆ. ಹಳೆಯದೇನಿದ್ದರೂ ಅದನ್ನು ಕುರಿತು ಪು.ಲ. ಅವರಲ್ಲಿ ಒಂದು ಕೋಮಲ ಭಾವ ಮೂಡುತ್ತದೆ. ಕಳೆದು ಹೋದ ದಿನಗಳು ಮತ್ತೆ ಮತ್ತೆ ಬರಬೇಕೆನ್ನಿಸುತ್ತದೆ. ಹಳೆಯ ನೆನಪುಗಳಿಗೆ ಅವರ ಮನ ಕರಗುತ್ತದೆ. ಚಿತ್ರೆ, ನೇಮಾಡೆಯವರ ಕಣ್ಣಲ್ಲಿ ಮಾತ್ರ ಪು.ಲ. ಬೇಕೆಂದೇ ಹೀಗೆ ಮಾಡುತ್ತಾರೆ; ಜನರನ್ನು ಖುಷಿಪಡಿಸಲೆಂದೇ ಸುಳ್ಳಿನ ದಾರಿಯನ್ನು ತುಳಿಯುತ್ತಾರೆ!

ಇವು ಅನ್ಯಾಯಕರವಾದ ಅಪವಾದಗಳು. ಇವು ಅಸೂಯೆಯಿಂದ ಹುಟ್ಟಿ ಬಂದಿರಲೂ ಸಾಕು. ಈ ವರೆಗೂ ಪು.ಲ. ಅವರಿಗೆ ದೊರೆತಂತಹ ವಾಚಕ ವರ್ಗ, ಶ್ರೋತೃವರ್ಗ ಹಾಗೂ ಪ್ರೇಕ್ಷಕರ ವರ್ಗಗಳು ಇನ್ನಾವ ಮರಾಠಿಯ ಲೇಖಕನ ಪಾಲಿಗೆ ಬಂದಿಲ್ಲ. ಪು.ಲ. ಹಾಗೂ ಜನ ಇವರಲ್ಲಿ ಬೆಳೆದಂತಹ ತೀರ ಹತ್ತಿರದ ನಂಟು ಇನ್ನೆಲ್ಲಿಯೂ ಕಂಡುಬಾರದು. ಅದರಿಂದಾಗಿ ಕೇವಲ ಜನರನ್ನು ಖುಷಿಪಡಿಸಲೆಂದೇ ಹಳೆಯದರ ಬಗೆಗೆ ಪು.ಲ. ನಿಟ್ಟುಸಿರು ಹಾಕುತ್ತಾರೆ, ಎನ್ನಿಸುತ್ತಿರಬಹುದು. ಆದರೆ ಹಳೆಯದರಲ್ಲಿ ಚೆನ್ನಾಗಿರುವ ಅಂಶವೇನಾದರೂ ಕಂಡರೆ ಅದರ ಬಗೆಗಿನ ತಮ್ಮ ಆಕರ್ಷಣೆಯನ್ನು ವ್ಯಕ್ತಪಡಿಸುವದರಲ್ಲಿ ತಪ್ಪೇನಿದೆ? ಪು.ಲ. ಅವರೇ ಒಂದೆಡೆ ಹೇಳಿದಂತೆ, ''ಚೆಂದ ಚೆಂದದ ಬೀಸುವಕಲ್ಲಿನ ಹಾಡುಗಳನ್ನು ಕೇಳಿದ್ದೇನೆ. ಅವುಗಳ ಬಗೆಗೆ ನನಗೆ ಎಲ್ಲಿಲ್ಲದ ಆಕರ್ಷಣೆ. ಆದರೆ ಅದಕ್ಕಾಗಿ ಯಾರಾದರೂ ಬೀಸುವ ಕಲ್ಲನ್ನು ತಿರುವುತ್ತ ಕೂಡಬೇಕೆಂದು ಮಾತ್ರ ನನಗನ್ನಿಸುವದಿಲ್ಲ.''

ಮಂಗೇಶ ವಿಠ್ಠಲ ರಾಜಾಧ್ಯಕ್ಷರು ಹತ್ತಿರದಿಂದ ಪು.ಲ. ಅವರನ್ನು ಬಹಳ ಕಾಲದಿಂದಲೂ ಬಲ್ಲವರು, ಅಲ್ಲದೆ ಗುಣಗಳಿಗಿಂತಲೂ ಅವಗುಣಗಳನ್ನು ಹೆಚ್ಚು ಮಾರ್ಮಿಕವಾಗಿ ವಿಶ್ಲೇಷಿಸುವವರು! ಇತ್ತೀಚೆಗೆ ಅವರೊಂದಿಗೆ ಪು.ಲ. ಅವರನ್ನು ಕುರಿತು ಸಾಕಷ್ಟು ಚರ್ಚಿಸಿದೆ. ಅವರನ್ನುವಂತೆ ಪು.ಲ. ಅವರಲ್ಲಿ ಹಳೆಯದರ ಬಗೆಗಾಗಲಿ ಸಂಸ್ಕೃತಿಯ ಒಳ್ಳೆಯ ಅಂಶಗಳ ಬಗೆಗಾಗಲಿ ಇರುವ ಆಕರ್ಷಣೆಯನ್ನು ಅರ್ಥಮಾಡಿಕೊಳ್ಳಬೇಕಿದ್ದರೆ ಅವರ ವಿಶಿಷ್ಟವಾದ ಬಾಲ್ಯ ಅರಿತುಕೊಳ್ಳಬೇಕು. ಅವರ ಅಂದಿನ ಮನೆ ಹಾಗೂ ಆ ಕಾಲದ ವಿಲೇಪಾರ್ಲೆಗಳನ್ನು ಕುರಿತು ಯೋಚಿಸತಕ್ಕದ್ದು.

ಸಾಮಾನ್ಯವಾಗಿ ನಾವೆಲ್ಲ ಯಾವುದರಿಂದಲೂ ಪ್ರಭಾವಿತರಾಗುವದೇ ಕಡಿಮೆಯಾದ್ದರಿಂದ ಅದನ್ನು ಒಂದು ದೋಷವೆಂದೇ ಭಾವಿಸುತ್ತೇವೆ. ಆದರೆ ಪು.ಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬರಿ ಪ್ರಭಾವಿತರಾಗುವವರಷ್ಟೇ ಅಲ್ಲ; ತಾವಾಗಿಯೇ ಪ್ರಭಾವಕ್ಕೊಳಗಾಗುವವರು. ಬಾಲ ಗಂಧರ್ವರು ಎಲ್ಲಿಯೇ ಕಾಣಲಿ ಪು.ಲ.ಬಾಗಿ ನಮಸ್ಕರಿಸುತ್ತಿದ್ದರು. ಅವರು ಎಂದಿಗೂ ಯಾವ ದೇವರಿಗೂ ಕೈ ಮುಗಿದವರಲ್ಲ; ಅವರು ಪಂಢರಪುರದ ವಿಠ್ಠಲನ ಪಾದಗಳಿಗೆ ತಮ್ಮ ಹಣೆಯನ್ನೊತ್ತಿದ್ದು ಅವನ ದೇವತ್ವಕ್ಕೆ ಮಾರು ಹೋಗಿಯಲ್ಲ; ಆದರೆ ಒಂದೆಂದೋ ಅದೇ ಪಾದಗಳನ್ನು ಜ್ಞಾನೇಶ್ವರ ತುಕಾರಾಮರಂತಹ ಸಂತಶ್ರೇಷ್ಠರ ಹಣೆಗಳು ಸ್ಪರ್ಶ ಮಾಡಿದ್ದವು ಎಂಬುದಕ್ಕಾಗಿ! ಪು.ಲ. ರೇಡಿಯೊದಲ್ಲಿ ಕೆಲಸಕ್ಕಿರುವಾಗ ಒಂದು ಬಾರಿ ತಿರಖವಾ ಅವರು ತಬಲೆಗಳನ್ನು ಹೊತ್ತು ತಂದದ್ದನ್ನು ಕಂಡು ಎಂತಹ ದೊಡ್ಡ ಕಲಾವಿದನಿಗೆ ತಬಲೆಗಳನ್ನು ಎತ್ತಬೇಕಾಯಿತಲ್ಲ! ಎಂದು ಪು.ಲ. ಅವರಿಗೆ ಕೆಡಕೆನಿಸಿ ಉಳಿದವರ ಮೇಲೆ ಸಿಟ್ಟೂ ಬಂದಿತಂತೆ! - ವಿದೇಶದ ಒಂದು ಥಿಯೇಟರನಲ್ಲಿ ಒಮ್ಮೆ ಅವರಿಗೆ ದೂರದಲ್ಲಿ ಚಾರ್ಲಿ ಚಾಪ್ಲಿನ್ ಕಂಡಾಗ ತಕ್ಷಣ ಅವರ ಕಣ್ಣುಗಳು ಹನಿಗೂಡಿದುವಂತೆ. ನಿಂತಲ್ಲಿಂದಲೇ ಪು.ಲ. ಕೈಜೋಡಿಸಿದರಂತೆ. ಇದು ಅವರ ಸ್ವಭಾವ. ಮದುವೆಯಾಗುತ್ತಲೇ ಮದುಮಗಳು ಅತ್ತೆಯ ಮನೆಗೆ ಹೊರಟ ದೃಶ್ಯವನ್ನು ತಮ್ಮಿಂದ ನೋಡಲಾಗುವದಿಲ್ಲ ಎನ್ನುತ್ತಾರೆ. ಒಂದೊಂದು ಸ್ವಭಾವದ ಗುಣಧರ್ಮವೇ ಅಂಥದು. ಹಳೆಯದರ ಬಗೆಗಿನ ಆಕರ್ಷಣೆ ಎಂದ ಮಾತ್ರಕ್ಕೆ ಸನಾತನ ರೂಢಿ ಪರಂಪರೆಗಳ ಆಕರ್ಷಣೆ ಎಂದು ಮಾತ್ರವಲ್ಲ. ಅವುಗಳ ಬಗೆಗೆ ಅವರಲ್ಲಿ ಜಿಗುಪ್ಸೆಯಿದೆ. ತಂದೆ ತೀರಿಕೊಂಡಾಗ ಪು.ಲ. ಇಪ್ಪತ್ತು - ಇಪ್ಪತ್ತೆರಡು ವಯಸ್ಸಿನವರಿದ್ದರು. ಆ ಕಾಲಕ್ಕೂ ಅವರು ತಂದೆಯ ಮರಣೋತ್ತರ ಕರ್ಮಕಾಂಡವನ್ನು ಆಚರಿಸಲಿಲ್ಲ.

ರಾಜಾಧ್ಯಕ್ಷರ ಅಭಿಪ್ರಾಯದಂತೆ ಪು.ಲ. ತೀರ ಆಧುನಿಕರು. ಗಂ.ಬಾ. ಸರದಾರರಂತಹ ವಿಖ್ಯಾತರಾದ ವಿಚಾರವಂತರ ಪ್ರಭಾವದಲ್ಲಿ ಬೆಳೆದವರು. ಅವರು ಎಲ್ಲ ಹೊಸ ಹೊಸ ಪ್ರಗತಿಪರವಾದ ವಿಚಾರಗಳನ್ನು ಸ್ವಾಗತಿಸಿದ್ದಾರೆ. ಹಳೆಯ ಗೊಡ್ಡು ಸಂಪ್ರದಾಯಗಳಿಗೆ ತಪ್ಪಿಯೂ ಶರಣಾದವರಲ್ಲ. ಅವರ ಮನೋಧರ್ಮವೇನೋ ತುಸು ಹಿಡಿದು ಬಿಟ್ಟು ಮಾಡುವಂತಹದು. ಏನಾದರೂ ಹೊಸದು ಚೆನ್ನಾಗಿರುವದನ್ನು ಕಂಡರಾಯಿತು. ಅದಕ್ಕೆ ಧುಮುಕಿ ತಾವೂ ಅವರೊಂದಿಗೆ ಮುಂದಕ್ಕೆ ಸಾಗಿಯಾರು. ಆದರೆ ಬಹಳ ಕಾಲ ಅವರೊಂದಿಗೇನೇ ಉಳಿದಾರೆಂಬ ಭರವಸೆಯಿಲ್ಲ. ಧುಮುಕುವ ಮುನ್ನ ಏನನ್ನಾದರೂ ತಡೆಯುವ ಯೋಚನೆಯಿರದು. ಹೊರಳಿ ಬರುವಾಗಲೂ ಏನನ್ನಾದರೂ ಸಾಧಿಸುವ ಛಲವಿರದು.

ಪು.ಲ. ೧೯೪೨ರ ಸುಮಾರಿಗೆ ರಾಷ್ಟ್ರಸೇವಾದಲ, ಸಮಾಜವಾದಿ ಪಕ್ಷಗಳ ಬದಿಯವರಾಗಿದ್ದರು. ಮುಂದೆ ಆ ಪಕ್ಷದಲ್ಲಿ ಕಂಡು ಬಂದ ವಿಸಂಗತಿಗಳಿಂದಾಗಿ ಸಮಾಜವಾದಿಗಳೆಲ್ಲ ಅವರ ಚೇಷ್ಟೆಗೆ ಗುರಿಯಾದರು. ಬಾಲಗಂಧರ್ವರು ತರುಣ ನಾಯಿಕೆಯರ ಪಾರ್ಟುಗಳನ್ನು ಮಾಡುವ ಪಣ ತೊಟ್ಟದ್ದು ಇವರ ಚೇಷ್ಟೆಯ ವಿಷಯವಾಯಿತು. ೧೯೪೫ರ ಸುಮಾರಿಗೆ 'ಬಿಚ್ಚಾರೇ ಸೌಭದ್ರ' (ಪಾಪದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸೌಭದ್ರ) ಎಂಬ ಮೂರಂಕಿನ ಒಂದು ಫಾರ್ಸ್ ಬರೆದು ಬಾಲಗಂಧರ್ವರ ಪಣವನ್ನು ವ್ಯಂಗ್ಯಕ್ಕೀಡು ಮಾಡಿದ್ದರು. ವಿನೋಬಾರ ಭೂದಾನದ ಕೆಲಸವು ಶುರುವಾದ ಮೊದಲಲ್ಲಿ ಇವರು ಕೆಲಕಾಲ ವಿನೋಬಾ ಭಕ್ತರಾಗಿ ಪದಯಾತ್ರೆಗಳಲ್ಲೂ ಭಾಗವಹಿಸುತ್ತಿದ್ದರು. ಆದರೆ ತುರ್ತು ಪರಿಸ್ಥಿತಿಯಲ್ಲಿ ವಿನೋಬಾ ತಳೆದ ನಾಚಿಕೆಗೇಡಿ ನಿಲುವಿಗಾಗಿ ಕಠೋರವಾದ ಮಾತಿನ ಚಾಟಿಯೇಟುಗಳನ್ನು ಬೀಸಿದರು.

ಹೊಸದೇನಿದ್ದರೂ ಸಮಾಜ ಹಿತದ್ವೇಷೀ ಇದ್ದರೂ ಹುಮ್ಮಸ್ಸಿನಿಂದ, ಅಷ್ಟೇ ಅಲ್ಲ, ತುಸು ಅತಿಯೆನಿಸುವ ಹುಮ್ಮಸ್ಸಿನಿಂದಲೇ ಪು.ಲ. ಅದರಲ್ಲಿ ಧುಮುಕುವರು. ವಿನೋಬಾರ ಅಂದಿನ ಭೂದಾನ ಕಾರ್ಯವೇ ಇರಲಿ, ಬಾಬಾ ಆಮ್ಟೆಯವರ ಇತ್ತೀಚಿನ ಕುಷ್ಠಾಶ್ರಮದ ಕಾರ್ಯವಿರಲಿ, ಪು.ಲ. ಅವುಗಳಲ್ಲಿ ಪೂರ್ತಿ ಮುಳುಗಿ ಬಿಡುತ್ತಾರೆ. ಅವರು ಎಷ್ಟೇ ಹುರುಪಿನಿಂದ ಕುಣಿಯಲಿ, ತಮ್ಮ ಹುಮ್ಮಸ್ಸಿನ ರಭಸದಲ್ಲಿಯೂ ಮೌಲ್ಯಗಳನ್ನು ಮರೆತವರಲ್ಲ. ಉದಾಹರಣೆಯನ್ನೇ ಹೇಳಬೇಕೆಂದರೆ ಸತ್ಯ ಸಾಯೀ ಬಾಬಾ, ಆಚಾರ್ಯ ರಜನೀಶರಂಥವರ ಮಹಾಪೂರಗಳು ಬಂದಾಗಲೂ ಪು.ಲ. ಅವುಗಳಲ್ಲಿ ಹಾರಿ ಕೊಚ್ಚಿ ಹೋದವರಲ್ಲ. ಇದಕ್ಕೆ ವಿಪರೀತವಾಗಿ ಅಂಥವರನ್ನು ಗೇಲಿ ಮಾಡದೆ ಇರರು!

ಪು.ಲ. ಅವರ ಇನ್ನೊಂದು ವಿಶಿಷ್ಟತೆಯು ಹೆಗ್ಗಳಿಕೆಯಿಂದ ಕೂಡಿದ್ದು ನನಗೆ ಅನುಕರಣೀಯವೆನ್ನಿಸುತ್ತದೆ. ಅದೆಂದರೆ ಚಿತ್ರಪಟಸೃಷ್ಟಿಯಲ್ಲಾಗಲೀ ಬೆಳಗಾವಿಯ ಕಾಲೇಜಿನಲ್ಲಾಗಲೀ ಏನನ್ನಾದರೂ ಪಡೆಯಲೆಂದು ಎಂದಿಗೂ ಒಪ್ಪಂದವನ್ನು ಮಾಡಿಕೊಂಡವರಲ್ಲ. ದೀನರಾದವರೂ ಅಲ್ಲ. ಮಾಲೇಗಾವಿಯ ಪ್ರಕರಣವಂತೂ ಅವರದಷ್ಟೇ ಅಲ್ಲದೆ ಸುನೀತಾಬಾಯಿಯವರ ನೇರ ನಡೆನುಡಿಯ ಒಂದು ಉತ್ತಮ ಉದಾಹರಣೆ. ಭಾವುಸಾಹೇಬ ಹೀರೆಯವರು ಮಂತ್ರಿಗಳಿದ್ದಾಗ ಮಾಲೇಗಾವಿಯಲ್ಲಿ ಮಹಾತ್ಮಾಗಾಂಧಿ ವಿದ್ಯಾಮಂದಿರವನ್ನು ತೆರೆದರು. ಪು.ಲ. ಅವರನ್ನು ಮುಖ್ಯಸ್ಥರನ್ನಾಗಿ ನೇಮಿಸಿದರು. ಸುನೀತಾಬಾಯಿಯವರನ್ನು ಆ್ಯಡ್‌ಮಿನಿಸ್ಟ್ರೇಟಿವ್ಹ ಆಫೀಸರ ಹಾಗೂ ವಸತಿಗೃಹದ ಮುಖ್ಯಸ್ಥೆಯನ್ನಾಗಿಯೂ ನೇಮಿಸಿದರು. ವಿದ್ಯಾಮಂದಿರದ ಧ್ಯೇಯ ಇವರಿಬ್ಬರನ್ನೂ ತನ್ನತ್ತ ಸೆಳೆದಿತ್ತು. ಪು.ಲ. ಅವರಿಗೆ ಎಂದಿನಿಂದಲೂ ಶಾಂತಿನಿಕೇತನದ ಹುಚ್ಚು. ತಾವೂ ಗಾಂಧಿ ಮಂದಿರವನ್ನು ಅದೇ ಮಾದರಿಯಲ್ಲಿ ನಡೆಸುತ್ತ ವಿದ್ಯೆ, ನಿಸರ್ಗ ಹಾಗೂ ಬದುಕನ್ನು ಹಾಸು ಹೊಕ್ಕಾಗಿ ಹೆಣೆದು ರೈತರ ಮಕ್ಕಳು ಬಾಳಿನಲ್ಲಿ ಮುನ್ನಡೆಯುವಂತೆ ಮಾಡಬೇಕೆನ್ನುವ ಉನ್ನತವಾದ ಗುರಿಯನ್ನು ಹೊತ್ತು ದಂಪತಿಗಳಿಬ್ಬರೂ ಮಾಲೇಗಾಂವಿಯತ್ತ ತೆರಳಿದರು. ಸುನೀತಾಬಾಯಿ ಠಾಕೂರರು - ಮದುವೆಗೆ ಮೊದಲಿನ ಹೆಸರು- ರಾಷ್ಟ್ರೀಯ ಚಳುವಳಿ, ರಾಷ್ಟ್ರಸೇವಾದಲ ಹಾಗೂ ಸಮಾಜವಾದಿ ವಿಚಾರಗಳೊಂದಿಗೆ ಸಂಪರ್ಕದಲ್ಲಿದ್ದರು. ಹೀಗಾಗಿ ಮಾಲೇಗಾವಿಯಲ್ಲಿ ಇಬ್ಬರಿಗಾಗಿಯೂ ಒಂದು ಹೊಸ ದಿಗಂತವೇ ಕಾದಿತ್ತೆನ್ನಬಹುದು. ಅಂದು ರಾಜಕೀಯ ಸತ್ತೆಯಿಂದಾಗಿ ಭಾವು ಸಾಹೇಬ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಿರೇ ಒಂದು ಬಲಾಢ್ಯವಾದ ಹೆಸರಾಗಿತ್ತು. ಅವರೊಂದಿಗೆ ಹೊಂದಿಕೊಂಡಿದ್ದರೆ ಏನೆಲ್ಲ ಮಾಡಬಹುದಿತ್ತು. ಆದರೆ ಸಂಸ್ಥೆಯ ಚಟುವಟಿಕೆಗಳೆಲ್ಲ ಸಂದೇಹಾಸ್ಪದವಾಗಿ ಕಂಡದ್ದರಿಂದ ಪು.ಲ. ಹಾಗೂ ಸುನೀತಾಬಾಯಿ ಕೆಲವೇ ದಿನಗಳಲ್ಲಿ ರಾಜೀನಾಮೆಯನ್ನು ನೀಡಿ ಮಾಲೇಗಾವಿಯನ್ನು ಬಿಟ್ಟರು. ತಮ್ಮ ಗುರಿಯತ್ತ ಸಾಗುವದೊಂದನ್ನೇ ಎಣಿಸುವದಿದ್ದರೆ ಅವರು ಸಂಸ್ಥೆಯ ವ್ಯವಹಾರಗಳತ್ತ ಗಮನ ಹರಿಸದಿದ್ದರೆ ಸಾಕಿತ್ತು! ಆದರೆ ಪು.ಲ. ಇಂಥ ಸಂಗತಿಗಳಿಂದ ಯಾವಾಗಲೂ ನಾಲ್ಕು ಮಾರು ದೂರ ಇದ್ದವರು.

೧೯೭೭ರಲ್ಲಿ ಹೊಸ ಇತಿಹಾಸವನ್ನು ನಿರ್ಮಿಸಿದ ಲೋಕಸಭೆಯ ಚುನಾವಣೆಗಳು ನಡೆದವು. ಇಂದಿರಾಗಾಂಧಿ ಪರಿವಾರದ ಏಕಾಧಿಕಾರಶಾಹಿಯನ್ನು ಕಿತ್ತೆಸೆಯಬೇಕೆಂದು ಪು.ಲ. ಜನತಾ ಪಕ್ಷದ ಪತಿಯಿಂದ ಪ್ರಚಾರದ ಕಣಕ್ಕಿಳಿದರು. ಇನ್ನಾವ ವಾಗ್ಮಿಯಲ್ಲೂ ಕಾಣಸಿಗದ ವ್ಯಂಗ್ಯದ ಅಲಗು ಪು.ಲ. ಅವರಲ್ಲಿ ಇತ್ತು. ಅವರ ಮಾತುಗಾರಿಕೆಯನ್ನು ಕೇಳಲು ಲಕ್ಷಗಟ್ಟಲೆಯ ಜನಸಂದಣಿ ಕೂಡತೊಡಗಿತು. ಅದರಿಂದಾಗಿ ಅಂದಿನ ಕೇಂದ್ರ ಗೃಹ - ಮಂತ್ರಿಗಳಾದ ಯಶವಂತರಾವ ಚವ್ಹಾಣ, ಮಹಾರಾಷ್ಟ್ರದ ಮುಖ್ಯಮಂತ್ರಿ ಶಂಕರರಾವ ಚವ್ಹಾಣರು ಪು.ಲ. ಅವರ ಮೇಲೆ ಹರಿಹಾಯುವದು ಸ್ವಾಭಾವಿಕವೇ ಆಗಿತ್ತು. ಪು.ಲ.ಅವರ ಪ್ರಚಾರವು ಖಂಡಿತ ಪ್ರಭಾವನ್ನು ಬೀರಬಲ್ಲದೆಂಬುದನ್ನು ಅವರಿಬ್ಬರೂ ಮನಗಂಡಿದ್ದರು. ಹೀಗಾಗಿ ಪು.ಲ.ರನ್ನು 'ವಿದೂಷಕ'ನೆಂದು ಜರಿದು ತಡೆಯಿಲ್ಲದೆ ಟೀಕೆಯ ಬಾಣಗಳನ್ನೆಸೆಯಲು ಆರಂಭಿಸಿದರು. ಆ ದಿನಗಳಲ್ಲಿ ತನ್ನ ಒಬ್ಬ ಬರಹಗಾರ ಮಿತ್ರನು ನನ್ನೊಂದಿಗೆ ಮಾತಾಡುತ್ತ ನುಡಿದಿದ್ದ ಸಂಗತಿಯಿದು:- ''ಯಶವಂತರಾಯರು ಇದೇ ಪು.ಲ. ನ ಮೇಲೆ ಅದೆಷ್ಟು ಉಪಕಾರಗಳನ್ನು ಮಾಡಿದ್ದಾರೆ ಗೊತ್ತೆ? - ಈತ ಬರೆದ ಹಲವಾರು ಕಾಗದಗಳು ಯಶವಂತರಾಯರಲ್ಲಿವೆ. ಅವರು ಅವುಗಳನ್ನು ಪ್ರಕಟಿಸಿದರೆ ಈತನ ಗತಿ ಏನಾಗಲಿಕ್ಕಿಲ್ಲ?'' ಎಂದಿದ್ದ.

ಅವನ ಮಾತನ್ನು ನಾನಂತೂ ನಂಬಿರಲಿಲ್ಲ. ಪು.ಲ. ತಮಗಾಗಿ ಯಾರನ್ನೂ ಏನನ್ನೂ ಕೇಳಿದವರಲ್ಲ: ಸತ್ತೆಯ ಎದುರಿನಲ್ಲಂತೂ ಎಂದಿಗೂ ಕೈಚಾಚಿದವರಲ್ಲ ಎಂಬುದನ್ನು ನಾನು ಚೆನ್ನಾಗಿ ಬಲ್ಲೆ. ಈ ಹೊತ್ತಿಗೆಯ ಕೆಲಸವನ್ನು ಕೈಗೊಂಡ ಬಳಿಕ ಪು.ಲ. ಅವರ ಕಾಗದಗಳೇನಾದರೂ ಇದ್ದರೆ ಕಳಿಸಿರೆಂದು ಯಶವಂತರಾಯರಿಗೂ ಇತ್ತೀಚೆಗಷ್ಟೇ ಬರೆದಿದ್ದೆ. ತಮ್ಮ ಮಾರೋಲೆಯಲ್ಲಿ (೯ ಜುಲೈ೧೯೭೯) ಯಶವಂತರಾವ ಬರೆಯುತ್ತಾರೆ.

''ಪು.ಲ. ಅವರ ಕಾಗದಗಳಿಗಾಗಿ ಬರೆದಿರುವಿರಿ. ಅವರು, ನಾನು ಹಲವು ವರ್ಷಗಳಿಂದ ಗೆಳೆಯರು. ಆದರೆ ನಮ್ಮಿಬ್ಬರಲ್ಲಿ ಯಾವದೇ ವ್ಯವಹಾರ ಕುದುರಲಿಲ್ಲ. ಅಂತಹ ಸಂದರ್ಭವೇ ಒದಗಿಬರಲಿಲ್ಲ - ಎಂದರೂ ಆದೀತು. ಒಂದೆರಡು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಸಂಗಗಳ ನಿಮಿತ್ತವಾಗಿ ಬಿಟ್ಟರೆ ಅವರಿಂದ ನನಗೆ ಬೇರೆ ಕಾಗದಗಳೇ ಬಂದಂತಿಲ್ಲ. ನಾನು ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದ ಕಾಲಕ್ಕೆ ಅವರು ಬಾಲಗಂಧರ್ವರನ್ನು ಕುರಿತು ನನಗೆ ಬರೆದಿದ್ದರು. ಅವು ಬಾಲ ಗಂಧರ್ವರ ಕೊನೆಯ ದಿನಗಳಾಗಿದ್ದವು. ಪು.ಲ. ಅವರು ತಮ್ಮ ಕಾಗದದಲ್ಲಿ ಬಾಲಗಂಧರ್ವರ ಅಂದಿನ ವಿಕಲಾವಸ್ಥೆ ಹಾಗೂ ಮರಾಠಿಯ ನಾಟ್ಯಸೃಷ್ಟಿಯ ಮೇಲಿನ ಅವರ ಉಪಕಾರಗಳನ್ನು ಸ್ಮರಿಸಿ ರಾಜ್ಯ ಸರಕಾರವು ಕೃತಜ್ಞತೆಯಿಂದ ಅವರಿಗೆ ಗೌರವ ಧನವನ್ನು ಅರ್ಪಿಸಬೇಕೆಂದು ಬರೆದಿದ್ದರು. ಅವರ ಸೂಚನೆಯನ್ನು ಒಪ್ಪಿ. ಸರಿಯಾದ ಕ್ರಮ ತೆಗೆದುಕೊಳ್ಳಲು ಸಂಬಂಧ ಪಟ್ಟ ಇಲಾಖೆಗೆ ಅದನ್ನು ರವಾನಿಸಿದ್ದೆ. ಮಂತ್ರಾಲಯದ ಯಾವದಾದರೂ ಕಡದತದಲ್ಲಿ ದೊರಕಬಹುದು....''

ಈ ಕಾಗದವು ನಾಕಷ್ಟು ಅರ್ಥಪೂರ್ಣವಾಗಿದೆ.

ಪು.ಲ. ಅವರ ವ್ಯಕ್ತಿಮತ್ವವೇ ಬಲು ಮೋಜಿನದು, ಅಷ್ಟೇ ಸಂಕೀರ್ಣವಾದುದೂ ಅಹುದು. ಹಳೆಯದರಲ್ಲಿ ಒಳ್ಳೆಯದೇನಿದ್ದರೂ ಅವರಿಗೆ ಅದರ ಬಗೆಗೆ ಆಕರ್ಷಣೆಯಿದೆ. ಆಧುನಿಕತೆಯ ಬಗೆಗೂ ಆಕರ್ಷಣೆಯಿದೆ. ಹೊಸ ವಿಚಾರಗಳೊಂದಿಗೆ ತಾದಾತ್ಮ್ಯರಾಗುತ್ತಾರೆ. ಅವರಲ್ಲಿ ದುರ್ದಮ್ಯವಾದ ಜಿಜ್ಞಾಸೆಯಿದೆ. ಅವರ ಓದು ವಿಶಾಲವಾದದ್ದು. ಮನ ಸೆರೆಹಿಡಿಯುವಂಥದನ್ನು ಏನನ್ನಾದರೂ ಓದಿದಾಗ ತಮ್ಮ ಹತ್ತಿರದ ವ್ಯಕ್ತಿಗಳಿಗೆ ಫೋನಿನಲ್ಲೋ ಕಾಗದಗಳ ಮೂಲಕವೋ ಅದನ್ನು ಕುರಿತು ಹೇಳಿ ಹಂಚಿಕೊಳ್ಳುವ ಹುಮ್ಮಸ್ಸು ಅವರದು. ಮಾನವ ಪ್ರಾಣಿಯಲ್ಲಿ ಅವರಿಗೆ ಎಲ್ಲಿಲ್ಲದ ಆಸ್ಥೆ. ತುಳಿಯಲ್ಪಡುವವರ ಬಗೆಗೆ ಅಂತರಿಕ ಕಳವಳ. ಎಲ್ಲರಂತೆಯೇ ಅವರಲ್ಲೂ ತಮ್ಮವೇ ಆದ ರಾಗ ಲೋಭಗಳಿವೆ. ಆದರೂ ಅವರಲ್ಲಿಯ ಸಾಹಿತಿ ಎಂದಿಗೂ ಎಚ್ಚರದಪ್ಪಿದವನಲ್ಲ. ನೇಮಾಡೆ, ಪು.ಲ. ಅವರೊಂದಿಗೆ ಹೊಂದಿಕೊಳ್ಳಲಾಗಲಿಲ್ಲ. ಅಂದಮಾತ್ರಕ್ಕೆ ನೇಮಾಡೆಯವರ 'ಕೋಸಲಾ' ('ಗೂಡು') ಕಾದಂಬರಿಯ ರಸಗ್ರಹಣದಲ್ಲಿ ಅವರಲ್ಲಿಯ ಈ ಕಂದರವು ಒಂದು ಅಡ್ಡಿಯಾಗಿ ನಿಲ್ಲಲಿಲ್ಲ. ಪು.ಲ. ಒಂದು ಬಾರಿ 'ಕೋಸಲಾ'ವನ್ನು ಹೊಗಳತೊಡಗಿದರೆಂದರೆ ಅವರ ಬಾಯಿ ಬಂದು ಮಾಡಿಸುವದೇ ಒಂದು ಕಷ್ಟದ ಕೆಲಸ. ಪು.ಶಿ. ಹೀಗೆಯೇ ಪು.ಲ. ಅವರಿಗೆ ಹಿಡಿಸದವರು. ಆದರೆ ಅದೇ ಪು.ಶಿ. ರೇಗೆಯವರ ಕಾವ್ಯದ ಮೇಲೆ ಎಲ್ಲಿಲ್ಲದ ಮಮತೆ ಇವರಿಗೆ. ಒಂದು ಸಲ ಪು.ಲ. ಅವರು ಎಲ್‌ಫಿನ್‌ಸ್ಟನ್ ಕಾಲೇಜಿನಲ್ಲಿ ಪು.ಶಿ.ಯವರ ಕವನಗಳನ್ನು ಸಭಿಕರ ಮನ ಮುಟ್ಟುವಂತೆ ಓದಿದ್ದರು. ಪು.ಶಿ. ಯವರಲ್ಲದೆ ಮರ್ಢೇಕರ, ಖಾನೋಲಕರರಲ್ಲದೆ ಗೋವಿಂದಾಗ್ರಜರಂತಹ ಬೇರೆ ಬೇರೆ ಕವಿಗಳ ಕವನಗಳನ್ನು ತುಂಬ ಚೆನ್ನಾಗಿ ಓದಿ ತೋರಿಸುತ್ತಾರೆ. ಕಾವ್ಯದ ಮೇಲೆ ವಿಶೇಷ ಮಮತೆ ಅವರಿಗೆ. ತಮಗೆ ಹಿಡಿಸಿದ ಕಾವ್ಯವನ್ನು ಮನಸಾರೆ ಹೊಗಳುವದು ಅವರ ಸ್ವಭಾವ ಧರ್ಮ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೇಶವ ಮೇಶ್ರಾಮ ಒಬ್ಬ ಗಂಭೀರ ಸ್ವಭಾವದ ದಲಿತ ಕವಿ, ಕಾದಂಬರಿಕಾರರು. ನನಗೆ ಬರೆದ ಒಂದು ಕಾಗದದಲ್ಲಿ ಅವರು, "ಸಾಮೂಹಿಕ ಚಳುವಳಿಯೊಂದಿಗೆ ಹೆಜ್ಜೆಯಿಕ್ಕುವಾಗ ಪು.ಲ. ಖಾಂಡೇಕರರಂತಹ ಹಿರಿಯರ ಅಪ್ರತ್ಯಕ್ಷವಾದ ಶಬ್ದಸ್ನೇಹವು ಕಾಯ್ದುಕೊಳ್ಳುವ ಯೋಗ್ಯತೆಯದಾಗಿರುತ್ತದೆ," ಎಂದಿದ್ದಾರೆ. ಅವರೇ ಇನ್ನೊಂದೆಡೆಯಲ್ಲಿ, "ಹೊಸ ಹೊಸ ಸಾಹಿತ್ಯಗಳ ಬಗೆಗೆ ಜಾಗರೂಕರಾಗಿರುವ ಕಲಾವಂತರ ಪೀಳಿಗೆಯು ಬಲು ಶೀಘ್ರವಾಗಿ ನಶಿಸುತ್ತದೆ. ಹೊಗಳದವ ಗೆಳೆಯನೇ ಅಲ್ಲ, ಎನ್ನುವ ಮಾತೂ ಕೇಳಿ ಬರುತ್ತದೆ....." ಎನ್ನುತ್ತಾರೆ. ಹೊಸ ವಾಙ್ಮಯ, ಹೊಸ ಲೇಖಕ, ಹಾಗೂ ಗೊತ್ತಿಲ್ಲದ ಅವರ ಜೀವನ ಸೃಷ್ಟಿಯನ್ನು ಅರಿತುಕೊಂಡು ಅದರೊಂದಿಗೆ ತುಂಬು ಮನಸ್ಸಿನಿಂದ ಸ್ಪಂದಿಸುವದು ಪು.ಲ. ಅವರ ಪ್ರಕೃತ್ತಿಯಾಗಿದೆ.

ಕೆಲವು ದಿನಗಳ ಹಿಂದೆ ವಾ.ಲ. ಕುಲಕರ್ಣಿಯವರೊಂದಿಗೆ ಹರಟುತ್ತ ಕುಳಿತಿದ್ದೆ. ವಿಷಯ ಪು.ಲ. ಅವರನ್ನು ಕುರಿತಾಗಿತ್ತು. ವಾ.ಲ. ಈಗ ಎಪ್ಪತ್ತರ ಹೊಸ್ತಿಲಲ್ಲಿದ್ದವರು. ಇತ್ತೀಚಿಗೆ ಅವರ ಆರೋಗ್ಯ ಅಷ್ಟು ಸರಿಯಾಗಿರುವದಿಲ್ಲ. ಅಂಥದರಲ್ಲಿಯೂ ಪು.ಲ. ಅವರನ್ನು ಕುರಿತು ಅವರ ಕಳಕಳಿಯ ಮಾತನ್ನು ಕೇಳಿ ಧನ್ಯತೆಯ ಭಾವ ಮೂಡಿತು. ಅವನ ಬರವಣಿಗೆ ಮುಗಿಯಿತು: ಇವನದು ನಿಂತು ಹೋಯಿತು ಎಂದೆಲ್ಲ ಮಾತಾಡುತ್ತಿರುತ್ತೇವೆ. ಅರವತ್ತರ ಹತ್ತಿರಕ್ಕಿರುವ ಒಬ್ಬ ಬರಹಗಾರ, ಅದರಲ್ಲಿಯೂ ಒಬ್ಬ ಹಾಸ್ಯ ಬರಹಗಾರನನ್ನು ಕುರಿತು ಕಳಕಳಿಯಿಂದ ಮಾತನಾಡುವಂತಹದೇನೂ ಉಳಿದಿರಲಾರದು. ಹೀಗಿದ್ದೂ ವಾ.ಲ. ಅವರು ಇಂದಿಗೂ ಪು.ಲ. ಅವರಿಂದ ಬಹಳಷ್ಟನ್ನು ಅಪೇಕ್ಷಿಸುತ್ತಾರೆಂಬ ಸಂಗತಿಯು ನನಗೆ ತುಂಬ ಅರ್ಥಪೂರ್ಣವಾಗಿ ಕಂಡಿತು. ಅವರು ನುಡಿಯುತ್ತಿದ್ದರು, "ಇಂದು ದೇಶದ ರಾಜಕೀಯ ಪರಿಸ್ಥಿತಿ ತೀರ ಹದಗೆಟ್ಟಿದೆ. ಪು.ಲ. ಅದನ್ನು ಕುರಿತು ವಿಡಂಬನೆಯ ನಾಟಕಗಳನ್ನು ಬರೆಯಬೇಕು. ನಟನೆಯ ಅಸಾಮಾನ್ಯವಾದ ಅರಿವು ಉಳ್ಳವರಾಗಲಿ ಅಣುಕು, ವಿಡಂಬನೆಗಳನ್ನು ಅಳವಡಿಸಿ ನಾಟಕಗಳನ್ನು ಬರೆಯಬಲ್ಲ ಸಾಮರ್ಥ್ಯವುಳ್ಳವರೆಂದರೆ ಇಂದು ಪು.ಲ. ಅವರನ್ನು ಬಿಟ್ಟರೆ ಬೇರಾರೂ ಕಾಣುವದಿಲ್ಲ. ಎಲ್ಲ ತರಹದ ರಾಜಕೀಯ ತತ್ವ ವಿಚಾರಗಳನ್ನು ಅರಿತವರೆಂದಾಗಲಿ, ಯಾವುದು ಅಳಿದು ಯಾವುದು ಬೆಳೆಯಬೇಕೆಂಬುದನ್ನು ಚೆನ್ನಾಗಿ ಬಲ್ಲವರೆಂದರೆ ಪು.ಲ. ಒಬ್ಬರೇ!"

ಇಲ್ಲಿ ಒಂದು ನೆನಪನ್ನು ಕುರಿತು ಹೇಳಬೇಕು. ದೇಶದ ತುರ್ತು ಪರಿಸ್ಥಿತಿಯ ಕಾಲಕ್ಕೆ ದುರ್ಗಾಬಾಯಿ ಭಾಗವತರನ್ನುಳಿದು ಇನ್ನಾವ ಮರಾಠಿ ಸಾಹಿತಿ ಹೊರಗಡೆಯಲ್ಲಾಗಲಿ, ಕದ್ದಾಗಲಿ ಹೆಚ್ಚೇನೂ ಮಾಡಿರಲಿಲ್ಲ. ಕದ್ದು ದುಡಿದವರಲ್ಲಿ ಪು.ಲ. ಅವರದು ಸಿಂಹದ ಪಾಲಿದೆ. 'ಭೂಮಿಗತರಾದವರಿಗೆ ಹಣಸಹಾಯ, ಗುಪ್ತ ಸಾಹಿತ್ಯವನ್ನು ಹಂಚುವದು, ಜಯಪ್ರಕಾಶರ ದಿನಚರಿಯನ್ನು ಚೆನ್ನಾಗಿ ಅನುವಾದಿಸಿ, ಅಚ್ಚು ಹಾಕಿಸಿ ಎಲ್ಲೆಡೆಯಲ್ಲಿ ಹಂಚುವಂತಹ ಎಷ್ಟೋ ಕೆಲಸಗಳನ್ನು ಪು.ಲ. ಹಾಗೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸುನೀತಾಬಾಯಿ ಮಾಡಿದರು. ಆ ಕಾಲಕ್ಕೆ ಪ್ರತಿಕಾರದ ಆದೆಷ್ಟೋ ಕರ ಪತ್ರಗಳನ್ನು ಹೊರಡಿಸಲಾಗುತ್ತಿತ್ತು. ಈ ಕಾರ್ಯದಲ್ಲಿ ಪು.ಲ. ನಮ್ಮೆಲ್ಲರ ಮುಂದಾಳುಗಳಾಗಿದ್ದರು. ಅವರ ಸಲಹೆಗಳನ್ನು ಪಡೆಯಲಾಗುತ್ತಿತ್ತು. ಯಾವುದಕ್ಕೂ ಮೊದಲ ಸಹಿ ಅವರದಾಗಿರುತ್ತಿತ್ತು. ತುರ್ತುಪರಿಸ್ಥಿತಿಯಿಂದಾಗಿ ಕರಾಡ ಸಾಹಿತ್ಯ ಸಮ್ಮೇಲನದ ವಾತಾವರಣವು ತುಂಬ ಕಾಯ್ದಿತ್ತು. ಪು.ಲ.ಹಾಜರ ಇದ್ದರು. ಖಾಂಡೇಕರರೂ ಬಂದಿದ್ದರು. ಅಲ್ಲಿ ನೆರೆದ ಹತ್ತು ಹದಿನೈದು ಸಾವಿರ ಜನವೆಲ್ಲ ಪು.ಲ. ತಮ್ಮ ಪದ್ಮಶ್ರೀಯನ್ನು, ಖಾಂಡೇಕರರು ತಮ್ಮ ಪದ್ಮಭೂಷಣವನ್ನು ಧಿಕ್ಕರಿಸಿ ನಿರಾಕರಿಸಬೇಕೆಂದು ತೀವ್ರವಾಗಿ ಬಯಸಿತ್ತು. ಜನ ಕ್ಷಣಕ್ಷಣಕ್ಕೂ ಅದಕ್ಕಾಗಿ ಕಾದಿದ್ದರು. ಆದರೆ ಹಾಗೇನೂ ನಡೆಯಲಿಲ್ಲ. ಜನ ನೊಂದುಕೊಂಡರು. ಅದೇ ಸಮ್ಮೇಲನದಲ್ಲಿ ಪದ್ಮಶ್ರೀ, ಪದ್ಮಭೂಷಣಗಳಿಂದ ಭೂಷಿತರಾದ ಆದೆಷ್ಟೋ ಬರಹಗಾರರಿದ್ದರು. ಆದರೆ ಜನ ಬಯಸಿದ್ದು ಈ ಇಬ್ಬರಿಂದ ಮಾತ್ರ, ಅವರ ಮೇಲೆ ಅದೊಂದು ಕಲಂಕವು ಕಾಯಮ್ ಆಗಿ ಅಂಟಿಕೊಂಡು ಬಿಟ್ಟಿತು. ಇದಾದ ಕೆಲವೇ ದಿನಗಳ ತರುವಾಯ ಖಾಂಡೇಕರರನ್ನು ಕಾಣುವ ಪ್ರಸಂಗ ಬಂದಿತ್ತು. ಪ್ರಕಾಶಕ ರಾ.ಜ. ದೇಶಮುಖರ ವಾಡೆಯಲ್ಲಿ ಖಾಂಡೇಕರರು ಉಳಿದುಕೊಂಡಿದ್ದರು. ನಾನು, ಶ್ರೀ ಜ. ಜೋಶಿ ಹಾಗೂ ವಿದ್ಯಾಧರ ಪುಂಡಲೀಕ ಈ ಮೂವರು ಬರಹಗಾರರು ಕೂಡಿ 'ಲಲಿತ' ಸಾಹಿತ್ಯಿಕ ಮಾಸಪತ್ರಿಕೆಗಾಗಿ ಖಾಂಡೇಕರರ ಸಂದರ್ಶನವನ್ನು ಪಡೆಯಲು ಅಲ್ಲಿಗೆ ಹೋದೆವು. ಶಿರೋಡೆಯಲ್ಲಿ ಇದ್ದಾಗಿನಿಂದಲೇ ಅವರನ್ನು ಹತ್ತಿರದಿಂದ ಬಲ್ಲವನಾಗಿದ್ದೆ. ಸಂದರ್ಶನ ಮುಗಿದ ಬಳಿಕ ಉಳಿದವರಿಬ್ಬರು ಹೊರಟು ಹೋದರು. ಖಾಂಡೇಕರರು ಹರಟೆಗಾಗಿ ನನ್ನನ್ನು ನಿಲ್ಲಿಸಿಕೊಂಡರು. ಅಂದು ಹರಟೆಯ ನಡುವೆ ಈ ಮಾತನ್ನೆತ್ತಿದೆ. ತಾವು ದೇಹದಿಂದಲೂ ಮನದಿಂದಲೂ ತುಂಬ ದುರ್ಬಲರಾಗಿದ್ದು ಆ ದಿನ ಪು.ಲ. ತಮ್ಮ ಬಿರುದನ್ನು ಬಿಟ್ಟುಕೊಟ್ಟಿದ್ದರೆ ತಾವೂ ಹಾಗೆಯೇ ಮಾಡುತ್ತಿದ್ದೆವು ಎಂದರು!

ಅವರ ಮಾತಿಗೆ ನಾನು, ''ನೀವು ಹಿರಿಯರು! ಪು.ಲ. ನಿಮಗಿಂತ ಕಿರಿಯರು!'' ಎಂದೆ. ಅದಕ್ಕೆ ಅವರು,'' ಬರಿ ವಯಸ್ಸಿನಿಂದೇನು? ನಮ್ಮೆಲ್ಲರ ಮುಂದಾಳ್ತನ ಇಂದು ಪು.ಲ. ಅವರತ್ತ ಹೋಗಿದೆ ಎಂಬುದನ್ನು ಅಲ್ಲಗಳೆಯಬಲ್ಲೆಯಾ? - ಯಾವದೇ ಸಮಸ್ಯೆಯನ್ನು ಕುರಿತು ಇಂದು ಪು.ಲ. ಏನನ್ನುತ್ತಾರೆ ಎನ್ನುವದರತ್ತ ಎಲ್ಲರ ಗಮನ ಹರಿಯುವದೋ ಇಲ್ಲವೋ? ಅದೇ, ನನ್ನತ್ತ ಯಾರಾದರೂ ಹೊರಳಿ ನೋಡುವರೇ? ಅಂದು ಸಮ್ಮೇಲನದಲ್ಲಿ ಪು.ಲ. ತಾವಾಗಿಯೇ ಮುಂದಕ್ಕೆ ಬರಬೇಕಿತ್ತು. ಹಾಗಾಗಿದ್ದರೆ ಅವರಿಗೆ ಬೆಂಬಲಾಗಿ ನಿಲ್ಲುತ್ತಿದ್ದೆ!'' ಎಂದರು.

ಬರಹಗಾರರ ಮುಂದಾಳ್ತನ ಪು.ಲ. ಅವರತ್ತ ಹೋದದ್ದೇನೋ ನಿಜವೇ. ಜನ ಅವರ ಬರವಣಿಗೆಯನ್ನು ಇಷ್ಟಪಡುತ್ತಾರೆ. ಬರಹಗಳಲ್ಲಾಗಲಿ, ಮಾತುಗಳಲ್ಲಾಗಲಿ, ವ್ಯಕ್ತಗೊಳ್ಳುವ ಅವರ ವಿಚಾರಗಳು ಜನರಿಗೆ ಮಹತ್ವದವೆನ್ನಿಸುತ್ತವೆ. ಅವರಲ್ಲಿಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri
ಸಾಮಾಜಿಕ ಕಾಳಜಿಯು ಜನರನ್ನು ಸೆಳೆದುಕೊಳ್ಳುತ್ತದೆ. ವ್ಯಕ್ತಿಗತವಾದ ಬಾಳಿನಲ್ಲಿಯೂ ಅವರ ನಡೆ ತುಂಬ ಹಸನಾದದ್ದು. ವಯಸ್ಸು, ವಿತ್ತ, ವ್ಯವಸಾಯ, ಜಾತಿಗಳ ಭೇದಗಳನ್ನು ಮರೆತು ಎಲ್ಲವರ್ಗದವರೊಂದಿಗೆ ಸಂಪರ್ಕವನ್ನು ಹೊಂದಿದ್ದಾರೆ. ಸಾಹಿತ್ಯ, ನಾಟ್ಯ ಸಂಗೀತಗಳ ಕ್ಷೇತ್ರಗಳಲ್ಲಿ ಇಂದು ಇಡಿಯ ರಾಷ್ಟ್ರದ ತುಂಬೆಲ್ಲ ಕೊಡಕೊಳ್ಳುವಿಕೆಯನ್ನು ಹೊಂದಿದವರೆಂದರೆ ಇವರೊಬ್ಬರೇ. ಇವರದು ನಕ್ಕು ನಗಿಸುವ ಸ್ವಭಾವ. ಯಾವಾಗಲೂ ಪ್ರಫುಲ್ಲಿತರಾಗಿರುವವರು. ಇವೆಲ್ಲವುಗಳ ಪರಿಣಾಮ ಎಂದರೆ ನಾವು ಬರಹಗಾರರೆಲ್ಲ ನಮ್ಮ ಮುಂದಾಳ್ತನವನ್ನು ಪು.ಲ. ಅವರಿಗೆ ಒಪ್ಪಿಸಿದ್ದು; ಅಷ್ಟೇ ಅಲ್ಲ, ಅದು ತಾನಾಗಿಯೇ ಅವರತ್ತ ನಡೆದುಕೊಂಡು ಹೋಗಿದೆ.

ಈ ಹಿನ್ನೆಲೆಯಲ್ಲಿ ಇನ್ನೊಬ್ಬರೊಂದಿಗೆ ವಾದಕ್ಕಿಳಿಯುವ, ಅಷ್ಟೇ ಅಲ್ಲದೆ ಸಾರ್ವಜನಿಕವಾಗಿ ವಾಗ್ಯುದ್ಧದ ಕಣಕ್ಕಿಳಿಯುವ ಪು.ಲ. ಅವರ ಹುಮ್ಮಸ್ಸನ್ನು ಕಂಡಾಗ ಮಾತ್ರ ಮನಸ್ಸಿಗೆ ದೊಡ್ಡ ಪೆಟ್ಟು ಬೀಳುತ್ತದೆ. ಇವರು ಅವರೇ ತಾನೇ? - ಎಂಬ ಪ್ರಶ್ನೆಯೂ ಧುತ್ತೆಂದು ನಿಲ್ಲುತ್ತದೆ. ಇದೊಂದನ್ನು ಅವರು ಮಾಡದೆ ಹೋಗಿದ್ದರೆ ಚೆನ್ನಾಗಿತ್ತು. ಮುಂಬಯಿಯ ಮರಾಠಿ ಸಂಘಕ್ಕೆ ಕೊಡಲಾದ ಪರದೆ, ತಮಾಶಾ ಪರಿಷತ್ತು ಮತ್ತು ದುರ್ಗಾಬಾಯಿ ಭಾಗವತ, ಕೊಂಕಣಿ - ಮರಾಠಿ ವಾದಗಳಲ್ಲದೆ ತೀರ ಇತ್ತೀಚೆಗೆ ವಿಖ್ಯಾತ ಸಮೀಕ್ಷಕ ಮಾಧವ ಮನೋಹರರ ಮೇಲೆ 'ಲಲಿತ' ದಲ್ಲಿ ಪ್ರಕಟಗೊಂಡ ಹಲ್ಲೆಗಳನ್ನು ಕಂಡಾಗ ಅನೇಕರಿಗೆ ಅಚ್ಚರಿಯಾಗಿದೆ. 'ಅಭಿರುಚಿ' ಮಾಸ ಪತ್ರಿಕೆಯ ಬಗೆಗೆ ಅವರು ತೋರಿದ ಸಂಯಮ ಮಾತ್ರ ವಿಶಿಷ್ಟವಾದುದ್ದು. 'ಅಭಿರುಚಿ'ಯ ಆರಂಭ ಕಾಲದಲ್ಲಿ ಅದರೊಂದಿಗೆ ನಿಕಟವಾದ ಸಂಪರ್ಕವನ್ನು ಹೊಂದಿದ್ದರು. ಅದಕ್ಕಾಗಿ ಬಹಳಷ್ಟು ಬರವಣಿಗೆಯನ್ನೂ ಮಾಡಿದವರು. 'ಅಭಿರುಚಿ'ಗೆ ದೊರೆತ ಪ್ರತಿಷ್ಠೆಯಲ್ಲಿ ಪು.ಲ. ಅವರದು ದೊಡ್ಡ ಪಾಲು. ಆದರೆ ಇತ್ತೀಚೆಗಷ್ಟೇ ತನ್ನ ಹೊಸ ಅವತಾರದಲ್ಲಿ ಹೊರಡುತ್ತಿರುವ 'ಅಭಿರುಚಿ'ಯಲ್ಲಿ ಮಾತ್ರ ಪು.ಲ. ಅವರ ಬಗೆಗೆ ಕದ್ದು ಮುಚ್ಚಿಯೋ ಮುಚ್ಚುಮರೆಯಿಲ್ಲದೆಯೂ ಹಲವಾರು ಕೆಟ್ಟ ಮಾತುಗಳನ್ನು ಬರೆಯಲಾಯಿತು. ಅದನ್ನು ಕಂಡು ಪು.ಲ. ಸೆಡ್ಡು ಹೊಡೆದು ನಿಂತಾರೆಂದೆನ್ನಿಸಿತ್ತು. ಆದರೆ ತಮ್ಮಲ್ಲಿಯ ಹಳೆ ನಿಷ್ಠೆಯೋ ಮಮತೆಯೋ ಅಂತೂ ಪು.ಲ. ಸಂಯಮವನ್ನು ಕಾಯ್ದುಕೊಂಡರು. ಬೇರೆಲ್ಲಿಯೂ ಇಂಥ ಸಂಯಮವನ್ನು ತೋರಿಸಿದವರಲ್ಲ. ಅವರು ಹೂಡಿದ ವಾದ ವಿವಾದಗಳನ್ನು ಕುರಿತು ಕೆಣಕಿದರೆ ಕುಳಿತಲ್ಲಿಯೇ ತಮ್ಮ ಅಂಗಿಯ ಎರಡೂ ತೋಳುಗಳನ್ನು ಮೇಲಕ್ಕೇರಿಸುತ್ತ ತಾನು ಹೇಗೆ ಏಟು ಕೊಟ್ಟೆ, ಗುದ್ದು ಹಾಕಿದೆ ಎಂದೆಲ್ಲ ಅವರು ಹೇಳುವದನ್ನು ಕಂಡಾಗ ಮೋಜೆನ್ನಿಸುತ್ತದೆ.

• ನನಗೊಂದು ಕಾಗದ ಬಂದಿದೆ. ಏಕನಾಥ ಬಾಗೂಲ್ ಬರೆದಿದ್ದಾರೆ. ಈಗ ಅವರು ಪುಣೆಯ 'ಕೇಸರಿ' ವೃತ್ತ ಪತ್ರಿಕೆಯಲ್ಲಿದ್ದಾರೆ. ಅವರು ತಮ್ಮ ಕಾಗದದಲ್ಲಿ 'ಮರಾಠಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಮಾಶಾ ಕಲೆಯನ್ನು ಕೆಡಿಸಿದವರ್‍ಯಾರು?' ಎಂದು ೧೯೬೧ರಲ್ಲಿ ದುರ್ಗಾಬಾಯಿ ಭಾಗವತ, ವಸಂತ ಬಾಪಟ ಹಾಗೂ ಪು.ಲ. ಅವರಲ್ಲಿ ಸಾಗಿದ ವಾಗ್ಯುದ್ಧದ ಬಗೆಗೆ ಉಲ್ಲೇಖಿಸಿದ್ದಾರೆ. ಅಂದು ಪು.ಲ. ಅವರು ದುರ್ಗಾಬಾಯಿ ಭಾಗವತರ ಮೇಲೆ ಭೀಕರವಾದ ದಾಳಿಯನ್ನು ಮಾಡಿದ್ದರಂತೆ. ಏಕನಾಥ ಬಾಗೂಲರು ಅದರ ಬಗೆಗೆ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿ ಪು.ಲ. ಅವರಿಗೆ ಬರೆದರಂತೆ. ಪು.ಲ. ಅವರ ಮಾರುತ್ತರ (೧೪ ಅಕ್ಟೋಬರ ೧೯೬೧) ನೋಡುವಂತಿದೆ.

"..... ದುರ್ಗಾಬಾಯಿಯವರಿಗೆ ಬರೆದ ನನ್ನ ಮಾರುತ್ತರ ನಿಮಗೆ ಸಿಟ್ಟು ತರಿಸಿದೆ. ಅದಕ್ಕೂ ಮೊದಲು ದುರ್ಗಾಬಾಯಿಯವರು ಠಾಣೆಯಲ್ಲಿ ಮಾಡಿದ ತಮ್ಮ ಭಾಷಣದಲ್ಲಿ ನಾನು, ವಸಂತ ಬಾಪಟ ತಮಾಶಾವನ್ನು ಕೆಡಿಸಿದೆವೆಂದು ದೂರಿ ಹೊಣೆಗೇಡಿತನದ ಮಾತುಗಳನ್ನಾಡಿದ್ದರು. ಒಂದು ಗಮ್ಮತ್ತೆಂದು ತಿಳಿದು ಮನಸ್ಸಿಗೆ ಹಚ್ಚಿಕೊಳ್ಳದೆ ಬಿಟ್ಟು ಬಿಟ್ಟಿದೆ. ತರುವಾಯ ಅವರು ತಮ್ಮ ರಾಜೀನಾಮೆಯನ್ನು ಜಾಹೀರಪಡಿಸದೇ ಹೋಗಿದ್ದರೆ ಅತ್ತ ಗಮನವನ್ನು ಹರಿಸುವ ಕಾರಣವಿರಲಿಲ್ಲ. ಆದರೆ ನನಗೆ ಸಂಬಂಧಿಸದ ಸಂಗತಿಗಳನ್ನು ನನ್ನ ಮೇಲೆ ಹೇರಿದಾಗಲೂ ಅದನ್ನು ಹಾಸ್ಯವೆಂದು ತಳ್ಳಿ ನಾನು ಸುಮ್ಮನಿರಬೇಕಿತ್ತೆಂದು ಅನ್ನಿಸುತ್ತದೆಯೇ ನಿಮಗೆ?

ನನ್ನ ಬುದ್ಧಿಮತ್ತೆಯನ್ನು ಕುರಿತು ನಿಮ್ಮಲ್ಲಿ ಸಂದೇಹವಿದೆ. ಇರಲಿ. ಹಾಗೆಯೇ ಇರಿ! ನಾನೊಬ್ಬ ವಿದ್ವಾಂಸನೆಂಬ ಹೆಮ್ಮೆ ನನ್ನಲಿಲ್ಲ....ನನ್ನಲ್ಲಿಯ ಮರಾಠಿಯ ಗುಣ ಹೋಗಿಲ್ಲೆನ್ನುವಿರಿ. ಯಾವ ಗುಣವದು? ನನ್ನ ಬಗೆಗೆ ನೀವು'ತಥಾಕಥಿತ'ವಿದ್ವಾಂಸ, ಹೆಂಗಸರಂತೆ ಆವೇಶಕ್ಕೊಳಗಾಗಿ ಮಾತಾಡುವವ ಎಂದೆಲ್ಲ ವಿಶೇಷಗಳನ್ನು ಉಪಯೋಗಿಸಿ ಬರೆಯುವದು ಯಾವ ಮನುಷ್ಯನ ಗುಣ?

ನಾನೊಬ್ಬ ಮರಾಠಿಗ. ಒಬ್ಬ ಮರಾಠಿಗನಲ್ಲಿರಬಹುದಾದ ಗುಣದೋಷಗಳೆಲ್ಲವೂ ನನ್ನಲ್ಲಿವೆ. ಅವುಗಳಿಂದಾಗಿಯೇ ನಾನೊಬ್ಬ ಅಪ್ಪಟ ಮರಾಠಿಗ ಎಂಬ ಹೆಮ್ಮೆ ನನ್ನಲ್ಲಿದೆ. ದಯವಿಟ್ಟು ನನ್ನ ಸುತ್ತಲು ಸ್ಥಿತಪ್ರಜ್ಞನ ಪ್ರಭಾವಲಯವನ್ನು ಅಂಟಿಸಬೇಡಿ! ಸಾಮಾನ್ಯ ಮನುಷ್ಯನ ಎಲ್ಲ ಗುಣದೋಷಗಳನ್ನು ಹೊಂದಿದ ಒಬ್ಬ ಸಾಮಾನ್ಯನಾಗಿಯೇ ನನ್ನನ್ನು ಇರಲು ಬಿಡಿ!

ತಾಜಾ ಕಲಮು:- ಕಾಗದ ಕೊನೆಯಲ್ಲಿಯ "ಆದರೂ ತಮ್ಮವನೇ" ಎಂದುದನ್ನು ತುಂಬಾ ಮೆಚ್ಚಿಕೊಳ್ಳಲೇಬೇಕು! ಸಿಟ್ಟು ಬಂದಾಗ ಅದನ್ನು ಹೊರಗೆ ಹಾಕಿ ಮನಸ್ಸನ್ನು ಹಗುರುಮಾಡಿಕೊಂಡು ಬಿಡುವದೆಂದರೇನೇ ಮನಮೋಹಕವಾದ ಆ ಮರಾಠಿಯ ಗುಣ! ಇದರಲ್ಲಿ ತಪ್ಪೇನಿದೆ.?"

ಜಗಳಗಳನ್ನು ಕುರಿತಾದ ತಮ್ಮ ಮಾನಸಶಾಸ್ತ್ರವನ್ನು ವಿವರಿಸುವ ಕಾಗದವೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇದಾಗಿದೆ.

ಪು.ಲ. ಅವರು ತಕ್ಷಣ ಮಿಂಚಿಸುವ ಹಾಸ್ಯವಂತೂ ವಿಲಕ್ಷಣವಾದುದು. ಮರಾಠಿಯ ನಾಟ್ಯರಂಗ, ಚಲನಚಿತ್ರಗಳಲ್ಲಿ ಹೆಸರು ಮಾಡಿದ ನಟ ದಾಮು ಅಣ್ಣಾ ಮಾಲವಣಕರರ ಮೆರಳುಗಣ್ಣುಗಳನ್ನು ಹಿಂದಿನ ಪೀಳಿಗೆಯವರೆಲ್ಲ ಬಲ್ಲರು. ಒಂದು ಬಾರಿ ಚೆಲುವೆಯಾದ ಅವರ ಮಗಳು ಭಾರತಿಯನ್ನು ಕಂಡು ಪು.ಲ. ''ಈ ಹುಡುಗಿ ಅಪ್ಪನ ಕಣ್ಣು ತಪ್ಪಿಸಿ ಹುಟ್ಟಿ ಬಂದಿದ್ದಾಳೆ'' ಎಂದಿದ್ದರು. ಗೋವೆಯ ಮರಾಠಿಯ ಕವಿವರ್ಯರಾದ ಬಾ.ಭ. ಬೋರಕರ ಒಂದು ಸಲ ತೀವ್ರ ಕಾಹಿಲೆಯಿಂದ ಮಲಗಿದ್ದರು. ಅವರನ್ನು ಕಾಣಲು ಪು.ಲ. ಹೋಗಿದ್ದಾಗ ಡಾಕ್ಟರರ ಸಲಹೆಯ ಮೇರೆಗೆ ಬೋರಕರರಿಗೆ ಗೋವೆಯ ತಮ್ಮ ಪ್ರಿಯವಾದ 'ಪೇಯ'ವನ್ನು ಬಿಡಬೇಕಾಗಿ ಬಂದದ್ದು ತಿಳಿಯಿತು. ತರುವಾಯ ಪು.ಲ. ಕಾರ್ಯಾಧ್ಯಕ್ಷರಿಗೆ ಬರೆದ ತಮ್ಮ ಕಾದದಲ್ಲಿ, ''ಡಾಕ್ಟರರು ಬೋರಕರರಿಗೆ ಪೇಯಮುಕ್ತ ಪ್ರಾಯಶ್ಚಿತ್ತದ ಶಿಕ್ಷೆಯನ್ನು ವಿಧಿಸಿದ್ದಾರೆ!'' ಎಂದಿದ್ದಾರೆ.

पुस्तकालय 6869 कांगड़ी

ಪಟಾಕಿಗಳಂತೆ ಫಟ್ ಫಟ್ ಎಂದು ಹಾಸ್ಯ ವಿನೋದಗಳನ್ನು ಹಾರಿಸಿ ನಗೆಗಳಿಸುವದರಲ್ಲಂತೂ ಪು.ಲ. ಸಿದ್ಧ ಹಸ್ತರು. ಈ ಕಸುಬಿನಲ್ಲಿ ಇವರಿಗೆ ಯಾರೂ ಸರಿ- ಸಾಟಿಯಿಲ್ಲ. ಅವರ ಇಂತಹ ಹಾಸ್ಯ ಪಟಾಕಿಗಳ ಒಂದುಸಂಗ್ರಹ ನಡೆಯಬೇಕು; ಪ್ರಕಟಗೊಳ್ಳಬೇಕು. ಮರಾಠಿ ನಾಟ್ಯ ಸಂಗೀತದಲ್ಲಿ ಹೆಸರುಮಾಡಿದ ನಟಿ, ಗಾಯಕಿ ಜ್ಯೋತ್ಸ್ನಾ ಭೋಳೆಯವರು ಹೇಳಿದ ಒಂದು ತಮಾಷೆಯ ಪ್ರಸಂಗ ನನಗೆ ತುಂಬ ಹಿಡಿಸಿತು. ಮೋ.ಗ. ರಾಂಗಣೇಕರರ ನಾಟಕ ಮಂಡಳಿಯಲ್ಲಿ ಪು.ಲ. ಕೆಲಸಕ್ಕಿದ್ದ ದಿನಗಳು. ನಾಟಕ ಮಂಡಳಿ ನಾಗಪುರದಲ್ಲಿ ತಳವೂರಿತ್ತು. ವಿಪರೀತ ಚಳಿಯಿರುತ್ತಿತ್ತು. ದಿನಾಲು ಬೆಳಗ್ಗೆ ಏಳುತ್ತಲೇ ಪ್ರತಿಯೊಬ್ಬರೂ, ''ಏನಪ್ಪಾ, ಈ ಚಳಿ!'' ಎನ್ನುವವರೇ. ಅಂದು ಬೆಳಗ್ಗೆ ತಬಲಜೀ ಮಾಮಾ ಹೇಳುತ್ತಿದ್ದರು; ''ನಿನ್ನೆ ರಾತ್ರಿಯಂಥ ಚಳಿ ಎಂದಿಗೂ ಬಿದ್ದಿರಲಿಕ್ಕಿಲ್ಲ! ಹಲ್ಲುಗಳು ಕೂಡ ಕಟಕಟ ಅಂತ ಬಾರಿಸುತ್ತಿದ್ದವು!'' ಅವರ ಮಾತಿಗೆ ತಕ್ಷಣ ಪು.ಲ. ''ಮಾಮಾ, ನಿನ್ನೆ ರಾತ್ರಿ ಬಟ್ಟಲಲ್ಲಿ ತೆಗೆದಿಟ್ಟ ನಿಮ್ಮ ಕೃತಕ ಹಲ್ಲುಗಳ ಜೋಡಿಗಳು ಕಟಕಟ ಅಂತ ಬಾರಿಸುವದರ ಸದ್ದು ಕೇಳಿಯೇ ನಾನು ಎಚ್ಚೆತ್ತೆ!'' ಎಂದು ನುಡಿದರು. ಈ ತಮಾಷೆಯ ಮಾತುಗಳು ಸಾಗಿದ್ದು ಬೆಳಗಿನ ಚಹದ ವೇಳೆಗೆ. ಹೀಗಾಗಿ ಪು.ಲ. ಅವರ ಮಾತುಗಳನ್ನು ಕೇಳುತ್ತಲೇ ಪುಸ್ ಎಂದು ಚಹ ಎಲ್ಲರ ಬಾಯಿಂದಲೂ ಹೊರಚೆಲ್ಲಿತು. ಅವರು ಇಂತಹ ಹಾಸ್ಯ ಚಟಾಕಿಗಳನ್ನು ಯಾವಾಗಲೂ ಹಾರಿಸುತ್ತಲೇ ಇರುತ್ತಾರೆ! ಇದಲ್ಲದೆ ಅವರು ಎಷ್ಟೋ ಸಲ ತಮ್ಮ ವಯಸ್ಸನ್ನು ಮರೆತು ಒಬ್ಬ ತುಂಟ ಹುಡುಗನಂತೆ ವರ್ತಿಸುತ್ತಾರೆ. ಆರೇಳು ವರ್ಷಗಳ ಕೆಳಗಿನ ಸಂಗತಿ. ಒಂದು ದಿನ ನಾನು, ಕೇಶವರಾವ ಕೋಠಾವಳೆ ಹಾಗೂ ಡಾ. ಸ.ಗಂ.ಮಾಲಶೆಯವರು ಕೂಡಿಕೊಂಡು ಪು.ಲ.ಅವರನ್ನು ಕಾಣಲು ಅವರ ವರಳಿಯಲ್ಲಿದ್ದ ಮನೆಗೆ ಹೋಗಿದ್ದೆವು. ಕೆಲಸಕ್ಕೆ ಸಂಬಂಧಪಟ್ಟ ಮಾತುಕತೆಗಳು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮುಗಿದ ತರುವಾಯ ಪು.ಲ. ''ಹೇಗೂ ಸಂಜೆಯಾಗಿದೆ, ಕುಡಿಯಲು ಏನಾದರೂ?'' ಎಂದು ಕೇಳಿದರು. ಅವರಾಗಿ ಅಷ್ಟೊಂದು ಕೇಳುತ್ತಿರುವಾಗ ಬೇಡೆನ್ನುವವರಾರು? ''ಆಗಲಿ'' ಎಂದೆವು. ಕೂಡಲೆ ಪು.ಲ. ದನಿಯೇರಿಸಿ, ''ಏ, ಸುನೀತಾ, ನಾವು ತಂದಿರುವ ಫ್ರೇಂಚ್ ವಾಯಿನ್ ಇದೆಯಲ್ಲ; ಅದನ್ನು ಎಲ್ಲರಿಗೂ ತುಸು ತುಸು ತಂದು ಕೊಡು'' ಎಂದರು. ತುಸು ಹೊತ್ತಿನಲ್ಲೇ ಸುನೀತಾಬಾಯಿಯವರು ಒಂದು ಟ್ರೇಯಲ್ಲಿ ಎತ್ತರದ ಗೋಣಿನ ಕಾಜಿನ ಪಾತ್ರೆಗಳನ್ನಿಟ್ಟುಕೊಂಡು ಬಂದು ಹಾಜರಾದರು. ಅವುಗಳಲ್ಲಿ ಕೆಂಪು ಬಣ್ಣದ ವಾಯಿನ್ ತುಂಬಿತ್ತು. ಒಬ್ಬೊಬ್ಬರೂ ಗ್ಲಾಸುಗಳನ್ನೆತ್ತಿಕೊಂಡೆವು. 'ಚೀಯರ್ಸ.... ಚೀಯರ್ಸ' ಗಳೆಲ್ಲ ಸರಿಯಾಗಿ ಸಾಗಿದವು ಆಗ ಪು.ಲ. ''ಒಮ್ಮೆಲೆ ಕುಡಿಯಬೇಡಿ! ಸಿಪ್ ಮಾಡಿ, ಸಿಪ್!'' ಎಂದರು. ನಾವೆಲ್ಲ ಪಾತ್ರೆಗಳನ್ನು ತುಟಿಗಳಿಗೆ ತಗುಲಿಸಿದೆವು. ಏನಾಗುತ್ತಿದೆಯೆಂದೇ ಆ ಕ್ಷಣ ನಮಗೆಲ್ಲ ಅರ್ಥವಾಗದೇ ಹೋಯಿತು. ಪಾತ್ರೆಯನ್ನು ಪೂರ್ತಿ ಬುಡಮೇಲು ಮಾಡಿದರೂ ಫ್ರೇಂಚ್ ವಾಯಿನ್ನಿನ ಒಂದೇ ಒಂದು ಹನಿಯಾದರೂ ನಮ್ಮ ನಾಲಗೆಯ ಮೇಲೆ ಬಿದ್ದಿದ್ದರೆ ಆಣೆ! - ಶರ್ಟಿನ ಮೇಲೆ ಬಿತ್ತೇನೋ ಎಂದು ತಡಕಾಡಿ ನೋಡಿದೆವು. ಕೋಠಾವಳೆ ಪಾತ್ರೆಯನ್ನು ತಮ್ಮ ತೆರೆದ ಬಾಯಲ್ಲೇ ಬುಡಮೇಲು ಮಾಡಿ ಸುರಿದುಕೊಂಡರು. ನಾನು ನನ್ನ ಗ್ಲಾಸಿನಲ್ಲಿ ನಾಲಿಗೆಯನ್ನಾಡಿಸಿದೆ. ......ಪು.ಲ.ಒಮ್ಮೆಲೆ ಎಂಟು ಹತ್ತು ಬಾಟಲಿಗಳನ್ನು ಒಡೆದಂತೆ ದೊಡ್ಡದಾಗಿ ನಗಹತ್ತಿದರು. ಆಗಲೆ ನರಿಯ ಮನೆಗೆ ಬಂದ ಬಕಪಕ್ಷಿಗಳಂತಾಗಿದೆ ನಮ್ಮ ಅವಸ್ಥೆ ಎಂಬುದು ಗಮನಕ್ಕೆ ಬಂದದ್ದು! ಆಗ ಪು.ಲ. ಅವರೇ ತಮ್ಮ 'ಅಪೂರ್ವಾಯಿ' (ಅಪೂರ್ವ)ಯ ವಿದೇಶಯಾತ್ರೆಯಲ್ಲಿ ಬಣ್ಣಿಸಿದಂತೆ ನಾವು ಮೂವರೂ ಒಮ್ಮೆಲೇ ದ್ರಾಕ್ಷ ಸಂಸ್ಕೃತಿಯಿಂದ ರುದ್ರಾಕ್ಷ ಸಂಸ್ಕೃತಿಗೆ ಇಳಿದು ಬಂದೆವು!

ಪ್ಯಾರಿಸ್ಸಿನಿಂದ ಮರಳಿ ಬರುವಾಗ ಆ ಗ್ಲಾಸುಗಳನ್ನು ನಾಟಕದ ಪ್ರಯೋಗಗಳಿಗೆಂದು ತಂದಿದ್ದರಂತೆ. ಅವುಗಳ ಅಂಚು ಪೊಳ್ಳಾಗಿದ್ದವು. ಪೊಳ್ಳುಭಾಗದಲ್ಲಿ ವಾಯಿನಿನಂತೆ ಕಾಣುವ ಕೆಂಪು ದ್ರವವನ್ನು ತುಂಬಲಾಗಿತ್ತು. ಗ್ಲಾಸು ಮಾತ್ರ ಬರಿದಾದದ್ದೇ! ಗ್ಲಾಸನ್ನು ಬಾಯಿಗೆ ಹಚ್ಚುತ್ತಲೇ 'ಕೆಂಪು ವಾಯಿನಿನ' ಪಾತಳಿ ಬದಲಾಗಿ ಅದು ಬಾಯಿಗೆ ಬಂದಂತೆ ಕಾಣುತ್ತಿತ್ತು. ಕಿಡಿಗೇಡಿ ಬಾಲಕನೇ ಇಂತಹ ಮಂಗ ಚೇಷ್ಟೆಗಳನ್ನು ಮಾಡಬೇಕು. ಆದರೆ ಆ ಕಿಡಿಗೇಡಿ ಬಾಲಕ ಪು.ಲ. ಅವರ ಸ್ವಭಾವದಲ್ಲೂ ಅಡಗಿ ಕುಳಿತಿದ್ದಾನೆ. ಅವರಾದರೂ ಏನು ಮಾಡುವರು?

ಈಗೀಗ ಅವರ ಆರೋಗ್ಯ ಸರಿಯಿರುವದಿಲ್ಲ. ಮೊಳಕಾಲುಗಳಲ್ಲಿ ಅಪಾರ ವೇದನೆ. ನಡೆಯುವದು, ಕಾಲು ಮಡಚಿ ಕುಳಿತುಕೊಳ್ಳುವದು ಕಷ್ಟದ್ದು. ಇನ್ನಾರಾಗಿದ್ದರೆ ಬೇಸತ್ತು ಹೋಗುತ್ತಿದ್ದರು. ಪು.ಲ. ಮಾತ್ರ ವೇದನೆಗಳನ್ನೆಲ್ಲ ಗೇಲಿ ಮಾಡುತ್ತ ಸಂತೋಷ ಚಿತ್ತರೂ ಪ್ರಫುಲ್ಲಿತರೂ ಆಗಿರುತ್ತಾರೆ. ಇತ್ತೀಚೆಗಷ್ಟೇ ಅವರಿಂದ ಬಂದ ಕಾಗದದಲ್ಲಿ ತಮ್ಮ ಬೇನೆಯನ್ನು ಕುರಿತು ಈ ರೀತಿ ಬರೆದಿದ್ದಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

"ಸುನೀತಾ, ಹಾಗೂ ನಾನು ಒಂದು ತಿಂಗಳ ಕಾಲ ಘಟಪ್ರಭೆಯಲ್ಲಿದ್ದೆವು. ಮೊನ್ನೆಯೇ ಮರಳಿದೆವು. ಮೊಳಕಾಲುಗಳು ಈಗ ಪರವಾಗಿಲ್ಲ. 'ಸಾಹಿತಿ'ಎಂಬ ಒಮ್ಮೆ ಅಂಟಿಕೊಂಡ ಬೇನೆ ಮತ್ತೆ ಬೆನ್ನು ಬಿಡದು. ಸಂಧಿವಾತವೂ ಅಂಥದೇ. ಹವೆಯಲ್ಲಿ ತುಸು ಏರುಪೇರಾದರೂ ಸಾಕು, ನನ್ನ ಮೊಳಕಾಲುಗಳು ಹವಾಮಾನ ಇಲಾಖೆಯವರಿಗಿಂತ ಮೊದಲೇ ಅದನ್ನು ಕಂಡು ಹಿಡಿದು ಬಿಡುತ್ತವೆ. ಮುಗಿಲಲ್ಲಿ ಮೋಡಗಳು ತೇಲುತ್ತಲೆ ಮೊಳಕಾಲುಗಳು ಬಿಗಿದುಕೊಳ್ಳುತ್ತವೆ. ಹೀಗಾಗಿ ಮೋಡಗಳೆಂದರೆ ನನಗೆ ಎಲ್ಲಿಲ್ಲದ ಭಯ! ರೇಡಿಓದಲ್ಲಿ ಶ್ರೀಪಾದರಾವ ನೇವರೇಕರರ ನಾಟ್ಯಗೀತ, ನಭ ಮೇಘಾನಿ ಆಕ್ರಮಿಲೆ...('ಮೋಡಗಳು ಮುಗಿಲನ್ನು ಆಕ್ರಮಿಸಿದಾಗ') ... ಎನ್ನುವ ಹಾಡು ಕೇಳ ಬರುತ್ತಲೆ ರೇಡಿಯೋದ ಕಿವಿಯನ್ನೇ ಹಿಂಡಿ ಬಿಡುತ್ತೇನೆ. ('ಕಿವಿಯನ್ನು ಕುರಿತೂ ಒಂದು ಗಮ್ಮತ್ತನ್ನು ಹೇಳುವವನಿದ್ದೆ; ಹೋಗಲಿ!) ಸದ್ಯಕ್ಕಂತೂ ಕಪಾಟಿನಲ್ಲಿರುವ 'ಮೇಘದೂತ'ವನ್ನೂ ಹಾಫ್ ರೇಟಿನಲ್ಲಿ ಮಾರಲು ತೆಗೆದಿದ್ದೇನೆ. ಮೂರು ಜನ್ಮಗಳ ಸಂಧಿವಾತಕ್ಕೆ ಸಾಕಾಗುವಷ್ಟು ಸಲ ಅದರಲ್ಲಿ ಮೋಡಗಳು ಬರುತ್ತವೆ. ಸಂಸ್ಕೃತದ 'ಮೇಘದೂತ'ವನ್ನು ಕೊಂಡುಕೊಳ್ಳುವವರಿಗೆ ಅದರ ಮರಾಠಿಯ ಭಾಷಾಂತರಗಳೆಲ್ಲ ಪುಕ್ಕಟೆ! ಚಳಿಹೆಚ್ಚಾದರೂ ತೊಂದರೆ!- ಮೇ ತಿಂಗಳ ಇಂದಿನ ಬೇಸಿಗೆಯಲ್ಲಿ ಮೋಡಗಳು ಬಂದರೆ ನನ್ನ ಗತಿ, ಆ ದೇವನೇ ಬಲ್ಲ! ಇರಲಿ!"

ಒಟ್ಟಿನಲ್ಲಿ, ಮೋಜಿನಂತೆಯೇ ವಿಲೋಭನೀಯವಾದ ರಂಗುರಂಗುಗಳಿಂದ ಕೂಡಿದೆ ಇವರ ವ್ಯಕ್ತಿಮತ್ವ. ಈ ಮುಂದಿನ ಪುಟಗಳನ್ನೋದುವವರಿಗೆ ಇವರ ವ್ಯಕ್ತಿಮತ್ವವು ಇನ್ನಷ್ಟು ಮೋಜಿನಿಂದ ಕೂಡಿ ಮತ್ತಷ್ಟು ವಿಲೋಭನೀಯವಾಗಿ ಎಲ್ಲಕ್ಕೂ ಹೆಚ್ಚಿನ ರಂಗುರಂಗಿನಿಂದ ಕೂಡಿದ್ದಾಗಿ ಕಂಡೀತು!

(ಪು.ಲ. -ಏಕಸಾತವಣ- ಈ ಗ್ರಂಥದ ಮುನ್ನುಡಿ)
ಮರಾಠಿ- ಜಯವಂತ ದಳವಿ.
ಅನುವಾದ - ವಿರೂಪಾಕ್ಷ ಕುಲಕರ್ಣಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪು. ಲ. ದೇಶಪಾಂಡೆ ಅವರೊಡನೆ ಸಂವಾದ

ಕನ್ನಡ ಭಾಷೆ ಮತ್ತು ಸಾಹಿತ್ಯದ ಬಗ್ಗೆ ನಿಮಗೆ ಎಷ್ಟರ ಮಟ್ಟಿಗೆ ಪರಿಚಯ ಇದೆ?

ನನ್ನ ತಾಯಿಯ ತವರೂರು ಕಾರವಾರ. ಆದ್ದರಿಂದ ಚಿಕ್ಕಂದಿನಿಂದಲೇ ಕಿವಿಯ ಮೇಲೆ ಕನ್ನಡ ಭಾಷೆ ಬೀಳುತ್ತ ಬಂದಿದೆ. ನನ್ನ ಅಜ್ಜ 'ಋಗ್ವೇದಿ' ಈ ಹೆಸರಿನಿಂದ ಪ್ರಸಿದ್ಧರಿದ್ದರು. ಅವರು ಕೂಡ ಕನ್ನಡ ಮತ್ತು ಮರಾಠಿ ಎರಡೂ ಭಾಷೆಗಳಲ್ಲಿ ಉತ್ತಮವಾಗಿ ಲೇಖನ - ವಾಚನ ಮಾಡಿದವರು. ಅವರ ಮೂಲ ಹೆಸರು ವಾಮನ ಮಂಗೇಶ ದುಭಾಷಿ. ಆದ್ದರಿಂದ ನನಗೆ ಕನ್ನಡದ ಋಣಾನುಬಂಧ ಹುಟ್ಟಿದಾಗಿನಿಂದಲೇ ಇದೆ ಅಂತ ಹೇಳಬಹುದು.

ಋಗ್ವೇದಿಯವರ ಬಗ್ಗೆ ನೀವು ''ಗಣಗೋತ'' ಪುಸ್ತಕದಲ್ಲಿ ಬರೆದಿದ್ದೀರಿ ಅಂತ ಕಾಣ್ತದೆ.

ಹೌದು. ಆದರೆ ದುರ್ದೈವದಿಂದ ಮುಂದೆ ನನಗೆ ಕನ್ನಡ ಭಾಷೆಯ ಸಂಪರ್ಕ ಉಳಿಯಲಿಲ್ಲ.

ಯಾಕೆ? - ನೀವು ನೌಕರಿಗಾಗಿ ಕೆಲವು ಕಾಲ ಬೆಳಗಾಂವಿಗೆ ಇದ್ದಿರಿ.

ಹೌದು ಬೆಳಗಾಂವಿಗೆ ಇದ್ದೆ. ಅಲ್ಲಿ ಕನ್ನಡ ಕಲಿಯಬೇಕು ಅಂತ ಪ್ರಾರಂಭವನ್ನೂ ಮಾಡಿದ್ದೆ. ಆದರೆ ಅಲ್ಲಿಯ ನನ್ನ ನೌಕರಿ ಬಹಳ ಬೇಗ ಮುಗಿಯಿತು. ಇನ್ನೂ ಕೆಲಕಾಲ ಅಲ್ಲಿ, ಅಥವಾ ಧಾರವಾಡದಲ್ಲಿ ಇರುತ್ತಿದ್ದರೆ ಖಂಡಿತ ಕನ್ನಡ ಕಲಿಯುತ್ತಲಿದ್ದೆ. ಆಗ ನಾನು ಕನ್ನಡ ಕಲಿಯಬೇಕಿತ್ತು. ಅಂತ ಈಗ ಮಾತ್ರ ನನಗೆ ತೀವ್ರವಾಗಿ ಅನಿಸುತ್ತದೆ. ನನಗೆ ಕನ್ನಡ ಓದಲು ಅಥವಾ ಬರೆಯಲು ಬಾರದಿದ್ದರೂ ಕನ್ನಡ ಭಾಷೆಯ ರುಚಿಯನ್ನು ಮಾತ್ರ ನಾನು ಬಲ್ಲೆ. 'ಏನರೀಽಽ ? ''ಹ್ಯಾಗಿದ್ದೀರಿ?'' ಇಂಥ ಸಾದಾ ಪ್ರಶ್ನೆಗಳನ್ನೂ ಕೇಳುವಾಗ ಕೂಡ, ಕನ್ನಡ ಭಾಷೆಯಲ್ಲಿ ವ್ಯಕ್ತವಾಗುವ ಆತ್ಮೀಯತೆ ಮರಾಠಿಗಿಂತಲೂ ಹೆಚ್ಚು ಉತ್ಕಟವಾಗಿದೆ. ಕನ್ನಡ ಭಾಷೆಯ 'ಲಯ' ಕನ್ನಡದ ಅದ್ವಿತೀಯ ಸಾಮರ್ಥ್ಯವಾಗಿದೆ. ಅಂತಾ ನನಗೆ ಅನಿಸುತ್ತದೆ.

ಕನ್ನಡ ಸಾಹಿತ್ಯದ ಪರಿಚಯ ಎಷ್ಟರ ಮಟ್ಟಿಗೆ?

ಖರೇ ಹೇಳಬೇಕಾದರೆ, ನನಗೆ ಸಾಹಿತ್ಯಕ್ಕಿಂತಲೂ ಸಂಗೀತ ಮತ್ತು ನಾಟ್ಯಕ್ಷೇತ್ರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೆಚ್ಚು ಸವಿಃಪವಾದವುಗಳು. ಆದ್ದರಿಂದ ಮಲ್ಲಿಕಾರ್ಜುನ ಮನ್ಸೂರ, ಗಂಗೂಬಾಯಿ ಹಾನಗಲ್, ಭೀಮಸೇನ ಜೋಶಿ, ಕುಮಾರಗಂಧರ್ವ ಇವರ ಮೂಲಕ ನಾನು ಕರ್ನಾಟಕಕ್ಕೆ ಹೆಚ್ಚು ಆಪ್ತನಾಗಿದ್ದೇನೆ. ಕನ್ನಡ ಸಾಹಿತಿಗಳು ಕೆಲವರು ಪರಿಚಿತರಿದ್ದಾರೆ. ಆದರೆ ಸಂಗೀತಕ್ಷೇತ್ರದಲ್ಲಿ ಮಾತ್ರ ಶಬ್ದದ ಮಾಧ್ಯಮ ಇಲ್ಲದ್ದರಿಂದ 'ಸ್ವರ'ಮಾಧ್ಯಮದ ಮೂಲಕ ಸ್ನೇಹ ಬೆಳಿಸಲು ಹೆಚ್ಚು ಶಕ್ಯವಾಯಿತು. ಅಕ್ಕ ಅಣ್ಣಂದಿರ ಹಾಗೆ ಗಂಗೂಬಾಯಿ ಹಾನಗಲ್ ಮತ್ತು ಮಲ್ಲಿಕಾರ್ಜುನರು ನನಗೆ ಇಂದಿಗೂ ಅದೇ ಅಷ್ಟೇ ಆಪ್ತರಾಗಿದ್ದಾರೆ. ಈ ಶ್ರೇಷ್ಠ ಕಲಾವಂತರೆಂದರೆ ಕರ್ನಾಟಕವು ಆಧುನಿಕ ಭಾರತಕ್ಕೆ ಕೊಟ್ಟ ಅಪೂರ್ವ ಕೊಡುಗೆ ಎಂದು ನಾನು ನಂಬಿದ್ದೇನೆ. ಈ ಕಲಾವಂತರ ಸಂಗೀತ ಕುರಿತು ನಾನು ಮರಾಠಿಯಲ್ಲಿ ತುಂಬಾ ಬರೆದಿದ್ದೇನೆ.

ನಿಮಗೆ ಮನ್ಸೂರರ ಪರಿಚಯವಾದದ್ದು ಯಾವಾಗ?

ನಾನು ಹತ್ತು ವರ್ಷದವನಿದ್ದಾಗ ಮುಂಬಯಿಯ ಪಾರ್ಲೆಭಾಗದಲ್ಲಿ ಮನ್ಸೂರರ ಗಾಯನ ಮೊಟ್ಟ ಮೊದಲು ಕೇಳಿದ ನೆನಪು ನನಗಿದೆ.

ಹತ್ತು ವರ್ಷದವರಿದ್ದಾಗ?

ಹೌದು ನಮ್ಮ ಮನೆಯಲ್ಲಿ ಸಂಗೀತದ ವಾತಾವರಣ ಮೊದಲಿನಿಂದಲೇ ಇತ್ತು. ನನ್ನ ತಂದೆ ಉತ್ತಮ ಹಾಡುತ್ತಿದ್ದರು. ನನಗೆ ಚಿಕ್ಕಂದಿನಿಂದಲೂ ಹಾರ್ಮೋನಿಯಂ ಬಗ್ಗೆ ಆಕರ್ಷಣೆ ಇತ್ತು. ೧೨ನೆಯ ವರ್ಷದಲ್ಲಿದ್ದಾಗ ಬಾಲಗಂಧರ್ವರ ಅಧ್ಯಕ್ಷತೆಯಲ್ಲಿ ನನ್ನ ಕಾರ್ಯಕ್ರಮ ಆಗಿತ್ತು. ಹೀಗೆ ಸಂಗೀತದ ವಾತಾವರಣದಲ್ಲಿಯೇ ಬೆಳೆಯುತ್ತಿದ್ದಾಗ ಮನ್ಸೂರ - ಸಂಗೀತ ಕಿವಿಯ ಮೇಲೆ ಬಿತ್ತು. ಅಂದಿನಿಂದ ನಾನು ಆ ಸಂಗೀತಕಾರನ ಭಕ್ತನಾಗಿದ್ದೇನೆ ಅಂತ ಹೇಳಬಹುದು. ಇಂದಿನ ವರೆಗೆ ಅವರ ಜೊತೆಗೆ ಎಷ್ಟು ರಾತ್ರಿ ಮೈಫಲಿನಲ್ಲಿ ಕಳೆದಿದ್ದೇನೆ ಇದೊಮ್ಮೆ ಎಣಿಸಿ ನೋಡಲೇಬೇಕು. ಈಗಲೂ ಅವರು ಚೇಷ್ಟೆಯಿಂದ ಇತರರಿಗೆ ನನ್ನ ಪರಿಚಯ ಮಾಡಿಕೊಡುವಾಗ, ''ಇಂವಾ ಈಗ ದೊಡ್ಡವ ಆಗ್ಯಾನ. ಸಣ್ಣಾವ ಇದ್ದಾಗ ಗಿಡ್ಡ ಚೊಣ್ಣಹಾಕಿಕೊಂಡು ಈ ಹುಡುಗ ನನ್ನ ಗಾಯನ ಕೇಳಲಿಕ್ಕೆ ಬರತಿತ್ತು.'' - ಅಂತ ಹೇಳತಾರೆ.

ಅವರ ಸಂಗೀತದ ವೈಶಿಷ್ಟ್ಯ ಏನು?

ಆ ಬಗ್ಗೆ ನಾನು ವಿಸ್ತಾರದಿಂದ ಬೇರೆ ಕಡೆಗೆ ಬರೆದಿದ್ದೇನೆ. ಆದರೆ ಒಂದೇ ವಾಕ್ಯದಲ್ಲಿ ಹೇಳಬೇಕಾದರೆ ಒಂದೇ ಒಂದು ಕ್ಷಣದಲ್ಲಿ ಯಾವ ಬೇಕಾದ ರಾಗವನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೂರ್ತಿಮಂತವಾಗಿ ಕಣ್ಣೆದುರಿಗೆ ನಿಲ್ಲಿಸಬಲ್ಲ ಸಾಮರ್ಥ್ಯ ಇಡೀ ಭಾರತದಲ್ಲಿ ಕೇವಲ ಮನ್ಸೂರರಲ್ಲಿಯೇ ಇದೆ ಎಂದು ನಿಃಸಂಶಯವಾಗಿ ಹೇಳಬಹುದು.

ಭೀಮಸೇನರ ಬಗ್ಗೆ ಬರೆದಿದ್ದೀರಾ?

ಇಲ್ಲ ಅವರ ಸಂಗೀತದ ಬಗ್ಗೆ ಇನ್ನೂ ಬರೆದಿಲ್ಲ. ಆದರೆ ಅವರ ಪರಿಚಯ ಮಾತ್ರ ಬಹಳ ಹಳೆಯದು.

ಯಾವಾಗಿನಿಂದ?

ನಾನು ಮುಂಬಯಿ ಕಾಲೇಜಿನಲ್ಲಿ ಕಲಿಯುತ್ತಿದ್ದಾಗ H.M.V ಕಂಪನಿಗಾಗಿ ರೆಕಾರ್ಡಿಂಗ ಮಾಡುವ ಕೆಲಸವನ್ನೂ ಮಾಡುತ್ತಿದ್ದೆ. ಆಗ ಒಂದು ದಿವಸ ಸ್ಟುಡಿಯೋದಲ್ಲಿ ಒಬ್ಬ ಯುವಕನ ಸಂಗೀತ ರೆಕಾರ್ಡಿಂಗ ನಡೆದಿತ್ತು. ಆ ಯುವಕನ ಸಂಗೀತ ಕೇಳಿ ನಾವೆಲ್ಲರೂ ಮಂತ್ರ ಮುಗ್ಧರಾಗಿದ್ದೆವು. ನಾನು..... ಗೆ ಕೇಳಿದೆ. ''ಯಾರಿವ ಇಂವಾ? ಆಗ ಅವರು ''ಧಾರವಾಡದಿಂದ ಬಂದಿದ್ದಾನೆ. ಯಾರೋ ಜೋಶಿ ಅಂತ ಹೆಸರು'' ಅಂತ ಹೇಳಿದರು. - ಆ ದಿನ ಆ ಯುವಕನ - ಭೀಮಸೇನ ಜೋಶಿಯ ಪರಿಚಯವಾಯಿತು. ಮುಂದೆ H.M.V. ಕಂಪನಿಗಾಗಿಯೇ ನಾನು ಅವರ ಮೊದಲನೇ ಕನ್ನಡ ಗೀತದ ರೆಕಾರ್ಡಿಂಗ ಮಾಡಿದ್ದೇನೆ. ಆ ದಿನ ಅವರು ಬೇಂದ್ರೆಯವರ, ''ಉತ್ತರ ಧ್ರುವದಿಂ ದಕ್ಷಿಣ ಧ್ರುವಕೂ'' ಈ ಗೀತವನ್ನು ಬಹಳ ಅಪ್ರತಿಮವಾಗಿ ಹಾಡಿದರು. ಮುಂದೆ ಎಷ್ಟೋ ಸಲ ಅವರ ಬಾಯಿಯಿಂದಲೇ ಆ ಗೀತವನ್ನು ಮತ್ತೆ ಮತ್ತೆ ಕೇಳಿದ್ದೇನೆ. ಆದರೆ ಇನ್ನೂ ಆ ತೃಪ್ತಿ ಕಡಿಮೆ ಆಗಿಲ್ಲ. ನಿಮಗೆ ಆ ಹಾಡಿನ ಸಾಲುಗಳು ಗೊತ್ತಿವೆಯೋ?

ಇಲ್ಲ

ನಾ ನಿಮಗೆ ಆ ಹಾಡನ್ನು ಕೇವಲ ಸ್ವರದಿಂದ ಅಂದು ತೋರಿಸಲಾ?

ಅವಶ್ಯ.

''ಉತ್ತರ ಧ್ರುವದಿಂ........'' (ಕಣ್ಣು ಮುಚ್ಚಿ ಏಕಾಗ್ರ ಭಾವನೆಯಿಂದ ಪು.ಲ. ಅವರು ಆ ಗೀತವನ್ನು ಕೇವಲ ಸ್ವರದಿಂದಲೆ ಭೀಮಸೇನ ಜೋಶಿಯವರ ರಾಗದಲ್ಲಿಯೇ ಅಂದು ತೋರಿಸಿದರು.)

ಭೀಮಸೇನರ ಮರಾಠಿ ಗೀತಗಳೂ ಕೂಡ ಲೋಕಪ್ರಿಯ ಇವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮರಾಠಿ ಜನರು ಅವರು ಕನ್ನಡಿಗರೆಂದು ಹೇಳಿದರೆ ನಂಬಲಿಕ್ಕಿಲ್ಲ; ಇಷ್ಟು ಅವರು ಮರಾಠಿಮಯ ಆಗಿದ್ದಾರೆ. ಅವರ ಮರಾಠಿಯಲ್ಲಿಯ 'ಸಂತ-ವಾಣಿ' ಈ ಕಾರ್ಯಕ್ರಮವಂತೂ ಮರಾಠಿ ಇತಿಹಾಸದಲ್ಲಿಯೇ ಅಪೂರ್ವ ಕೀರ್ತಿ ಪಡೆದಿದೆ. ಈಗಂತೂ ಅವರು ವಿಶ್ವಯಾತ್ರಿಕರಾಗಿದ್ದಾರೆ. ಸವಾಯಿ ಗಂಧರ್ವರ ಈ ಶಿಷ್ಯ ಈಗ ಸವಾಯಿ - ಗಂಧರ್ವನಾಗಿದ್ದಾನೆ. ಮೊನ್ನೆ ಟೀ.ವ್ಹಿ. ಮೇಲೆ ಅವರ ಸಂದರ್ಶನ ತೆಗೆದುಕೊಳ್ಳುವಾಗ ನಾನು ಅವರಿಗೆ ''ಆಕಾಶವಾಣಿಗಾಗಿ ನಿಮ್ಮ ಮೊದಲನೆಯ ರೆಕಾರ್ಡಿಂಗ ಎಲ್ಲಿ ಆಯಿತು?'' ಎಂದು ಕೇಳಿದೆ. ಆಗ ಅವರು '' ನಿಮ್ಮ ಮನೆಯಲ್ಲಿಯೇ ಆದದ್ದು ನೀವೇ ಮರೆತಿರಾ?'' ಎಂದು ಹೇಳಿ ನನ್ನನ್ನೇ ಬೆರಗಿಸಿದರು.

ನಿಮಗೆ ಬೇಂದ್ರೆಯವರ ಪರಿಚಯ ಆಗಿತ್ತೇ?

ಕೇವಲ ಪರಿಚಯ ಅಷ್ಟೇ ಅಲ್ಲ ಅವರ ಸ್ನೇಹ ಮತ್ತು ಆಶೀರ್ವಾದಗಳನ್ನು ಸಂಪಾದಿಸುವ ಭಾಗ್ಯ ನನಗೆ ಲಭಿಸಿದೆ. ಅವರು ವಯಸ್ಸಿನಿಂದಲೂ ಕರ್ತೃತ್ವದಿಂದಲೂ ನಮಗಿಂತ ಜ್ಯೇಷ್ಠರು. ಆದರೆ ಅವರ ಜೊತೆಗೆ ಮಾತಾಡುವಾಗ ನಮ್ಮನ್ನು ನಾವೇ ಮರೆಯುತ್ತಿದ್ದೆವು. ಬೇಂದ್ರೆ ಮಹಾರಾಷ್ಟ್ರದಲ್ಲಿ ಮೇಲಿಂದ ಮೇಲೆ ಬರುತ್ತಿದ್ದರು. ಬಹುಶಃ ಎಲ್ಲ ಮರಾಠಿ ಸಾಹಿತಿಗಳ ಜೊತೆಗೆ ಅವರ ಸ್ನೇಹ ಸಂಬಂಧವಿತ್ತು. ಮಹಾಮಹೋಪಾಧ್ಯಾಯ ಪೋತದಾರ, ಖಾಂಡೇಕರ, ಅತ್ರೆ, ಗಿರೀಶ, ಘಾಟೇ, ಕೇ.ನಾರಾಯಣ, ಇಂಟರ ನ್ಯಾಶನಲ್ ದೀಕ್ಷಿತ ಮೊದಲಾದ ಮರಾಠಿ ಸಾಹಿತಿಗಳಿಗೆ ಬೇಂದ್ರೆಯವರ ಬಗ್ಗೆ ಅತ್ಯಂತ ಆದರವಿತ್ತು. ಮಹಾರಾಷ್ಟ್ರದಲ್ಲಿ ಬೇಂದ್ರೆಯವರಷ್ಟು ಮತ್ತಾವ ಕನ್ನಡ ಸಾಹಿತಿಯು ಲೋಕಪ್ರಿಯ ಆಗಿರಲಿಲ್ಲ. ನಾನು ದಿಲ್ಲಿಯಲ್ಲಿ ಆಗ ಆಕಾಶವಾಣಿ ಕೇಂದ್ರದಲ್ಲಿ ನಾಟ್ಯ ವಿಭಾಗದ ಪ್ರಮುಖನೆಂದು ಕೆಲಸ ಮಾಡುತ್ತಿದ್ದೆ. ಆ ಕಾಲದಲ್ಲಿ ಬೇಂದ್ರೆಯವರು ಆಕಾಶವಾಣಿ ಕೆಲಸಕ್ಕಾಗಿಯೇ ಮೇಲಿಂದ ಮೇಲೆ ದಿಲ್ಲಿಗೆ ಬರುತ್ತಿದ್ದರು. ಹಾಗೆ ಬಂದಾಗ ನನಗೆ ಭೆಟ್ಟಿಯಾಗದೆ ಇರುತ್ತಿರಲಿಲ್ಲ. ಆಗ ಅವರ ಸಹವಾಸದಲ್ಲಿ ಕಾವ್ಯ ಶಾಸ್ತ್ರ ವಿನೋದಗಳಲ್ಲಿ ಕಳೆದ ಎಷ್ಟೋ ರಾತ್ರಿಗಳ ನೆನಪು ಈಗಲೂ ಆದರೆ ಮನವಿರೇಳುತ್ತಿದೆ.

ಅವರ ಕಾವ್ಯಗಾಯನ ಕೇಳಿದ್ದೀರಾ?

ಓಹೋ! ಕಾವ್ಯಗಾಯನ ಅಂದ ಕ್ಷಣಕ್ಕೆ ನನಗೆ ಮೊದಲು ಬೇಂದ್ರೆಯವರೇ ನೆನಪಾಗುತ್ತಾರೆ. ಅವರ ಬಾಯಿಯಿಂದ ಕವಿತೆ ಕೇಳುವಾಗ ಅವರೇ ಒಂದು ಕವಿತೆಯಾಗುತ್ತಾರೇನೋ? ಅಂತ ಭಾಸವಾಗುತ್ತದೆ. ಅವರ ಕೈ, ಕಣ್ಣು, ತುಟಿ, ತಲೆ, ಹೆಗಲು ಇವೆಲ್ಲವೂ ಕವಿತೆ ಹೇಳಬೇಕಾದುದೆಲ್ಲವನ್ನೂ ಹೇಳುತ್ತವೆ. ಇಂಥ ಕಾವ್ಯಗಾಯನ ನಿಜವಾಗಿಯೂ ಅಪೂರ್ವವೆಂದೇ ಹೇಳಬೇಕು. ಅವರ ಕವಿತೆಯ ಭಾಷೆ, ಅದರ ಅರ್ಥ ನನಗೆ ತಿಳಿಯುತ್ತಿರಲಿಲ್ಲ. ಆದರೆ ಶಬ್ದಗಳ ನಾದಮಯತೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮತ್ತು ಲಯಬದ್ಧತೆ ಈ ಗುಣಗಳಿಂದ ನಾನು ಆಕರ್ಷಿತನಾಗಿದ್ದೆ. 'ಕುಣಿಯೋಣು ಬಾರ' 'ಹಕ್ಕಿ ಹಾರುತಿದೆ ನೋಡಿದಿರಾ', 'ಮೂವತ್ತುಮೂರು ಕೋಟಿ', 'ನಾನೂ ಬಡವಿ', 'ಹುಬ್ಬಳ್ಳಿಯಾಂವಾ', ಈ ಕವಿತೆಗಳನ್ನು ಅವರ ಮುಖದಿಂದಲೇ ಕೇಳಿ ತೃಪ್ತನಾಗಿದ್ದೇನೆ. ನಾನು ಮರಾಠಿಯಲ್ಲಿ ಮತ್ತು ಇತರ ಭಾರತೀಯ ಭಾಷೆಗಳಲ್ಲಿಯೂ ಕೂಡ ಎಷ್ಟೋ ಶ್ರೇಷ್ಠ ಕವಿಗಳ ಕಾವ್ಯ ಕೇಳಿದ್ದೇನೆ. ಆದರೆ ಕವಿಯ ಮುಖದಿಂದ ಪ್ರತಿಯೊಂದು ಶಬ್ದ ಹೇಗೆ ಜೀವಂತವಾಗಿ ಹೊರಬರುತ್ತದೆಂದು ಬೇಂದ್ರೆಯವರಲ್ಲಿಯೇ ಮೊದಲ ಬಾರಿ ಅನುಭವಿಸಿದ್ದೇನೆಂದು ಹೇಳಬೇಕು.

ಬೇಂದ್ರೆಯವರ ಆಧ್ಯಾತ್ಮಿಕ ಕವಿತೆಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಖರೇ ಹೇಳಬೇಕಂದ್ರ, 'ಅಧ್ಯಾತ್ಮ' ಇದು ನನಗೆ ಅಗಮ್ಯ ವಿಷಯವೆಂದೇ ಹೇಳಬೇಕು ಆದ್ದರಿಂದ ಬೇಂದ್ರೆಯವರ ಈ ಪ್ರಕಾರದ ಕವಿತೆಗಳ ಬಗ್ಗೆ ನಾನೇನು ಹೇಳಲಿ? ಅವರ 'ನಾಕು ತಂತಿ' ಯ ಬಗ್ಗೆ ಕೇಳಿದ್ದೇನೆ. ಆದರೆ ಅವರ 'ಅಧ್ಯಾತ್ಮ' ಇನ್ನೂ ನನಗೆ ನಿಜವಾಗಿಯೂ ಅರ್ಥವಾಗಿಲ್ಲ. ಎಲ್ಲ ಅಧ್ಯಾತ್ಮ ಸಾಹಿತ್ಯದ ಹಾಗೆ ಬೇಂದ್ರೆಯವರ ಈ ಅಧ್ಯಾತ್ಮ ಸಾಹಿತ್ಯ ಕೂಡ ನನಗೆ ಗೂಢವಾಗಿ ತೋರುತ್ತದೆ. ಬೇಂದ್ರೆಯವರ ಕವಿತೆಗೆ ಲೌಕಿಕ ಮತ್ತು ಅಧ್ಯಾತ್ಮಿಕ, ಹೀಗೆ ಎರಡು ಸ್ತರಗಳಿವೆ. ನಾನು ಲೌಕಿಕ ಸ್ತರದ ಮೇಲೆ ಸಮರಸವಾಗುತ್ತೇನೆ. ಆದರೆ ಆಧ್ಯಾತ್ಮಿಕ ಸ್ತರದ ಮೇಲೆ ಬೇಂದ್ರೆ ನನ್ನ ಕೈಗೆ ತಲುಪುವದೇ ಇಲ್ಲ. ಪ್ರಾಹಿಕ ಮತ್ತು ಪಾರಮಾರ್ಥಿಕ ಇವೆರಡೂ ಇದೇ ಜೀವನದಲ್ಲಿ ಸಾಕಾರವಾಗಬೇಕು ಅಂತಾ ನನಗೆ ಅನಿಸುತ್ತದೆ.

ನೀವು ಅರವಿಂದ ಮತ್ತು ರವೀಂದ್ರರ ಕವಿತೆ ಪ್ರೀತಿಸುತ್ತೀರಿ. ಹಾಗಿರುಗಾಗ ನಿಮಗೆ ಬೇಂದ್ರೆವರ ಕವಿತೆ ತಿಳಿಯಲು ಯಾಕೆ ಕಷ್ಟ?

ನನಗೆ ಟಾಗೋರರ ಅಧ್ಯಾತ್ಮ ಸುಲಭವಾಗಿ ತಿಳಿಯುತ್ತದೆ. ಆದರೆ ಅರವಿಂದ ಮತ್ತು ಬೇಂದ್ರೆಯವರ ವಿಚಾರ ಅಷ್ಟು ಸಹಜವಾಗಿ ತಟ್ಟುವದಿಲ್ಲ. ಟಾಗೋರರು ಸ್ವಚ್ಛವಾಗಿ ಕಾಣುತ್ತಾರೆ. ಆದರೆ ಅರವಿಂದ ಬೇಂದ್ರೆಯವರಲ್ಲಿ ನನಗೆ ಹೆಚ್ಚು ಹೊಗೆ ಕಾಣುತ್ತದೆ. ಇದು ನನ್ನ ಜ್ಞಾನದ ಮಿತಿಯೂ ಇರಬಹುದು. ನಾನು ಒಪ್ಪುತ್ತೇನೆ. ಇದರರ್ಥ ನಾನು ಬೇಂದ್ರೆಯವರಿಗೆ ಶ್ರೇಷ್ಠ ಕವಿಯೆಂದು ಮನ್ನಿಸೋದಿಲ್ಲ ಅಂತಾ ತಿಳಿಯಬೇಡಿ. ಅವರ ಸಾಮಾಜಿಕ, ನಿಸರ್ಗ ಪ್ರಿಯ ಮತ್ತು ಕೌಟುಂಬಿಕ ಕವಿತೆಗಳಲ್ಲಿ ಅವರ ಪ್ರತಿಭೆ ಯಾವ ವಿಶ್ವಕವಿಯ ಪ್ರತಿಭೆಯಷ್ಟೇ ಉನ್ನತ ಮಟ್ಟದ್ದೆಂದು ನಾನು ನಿಃಸಂಶಯವಾಗಿ ನಂಬಿದ್ದೇನೆ. ಟಾಗೋರ ನನಗೆ ಎಷ್ಟು ಸುಲಭವಾಗಿ ತಿಳಿಯುತ್ತಾರೆಂಬುದಕ್ಕೆ ಒಂದು ಉದಾಹರಣೆ ಹೇಳತೇನಿ. - ಒಂದು ಕಡೆಗೆ ಅವರು ಹೇಳತಾರೆ - ``ನಾನು ಇಡೀ ಜಗತ್ತು ಸುತ್ತಾಡಿ ಬಂದೆ. ನಿಸರ್ಗದ ಎಲ್ಲ ರೂಪಗಳನ್ನು ಕಂಡೆ, ಆದರೆ ನನ್ನ ತೋಟದಲ್ಲಿಯೇ ಹೂವಿನ ಮೇಲಿನ ಇಬ್ಬನಿ ಹನಿಯಲ್ಲಿ ಆಕಾಶದ ಪ್ರತಿಬಿಂಬ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬಿದ್ದದ್ದು ಈ ವರೆಗೆ ನಾನು ಹೇಗೆ ನೋಡಲಿಲ್ಲ?'' ಪರಮೇಶ್ವರನ (ಸರ್ವವ್ಯಾಪಿ) ಅಸ್ತಿತ್ವದ ಬಗ್ಗೆ ಎಷ್ಟು ಸುಂದರವಾಗಿ ಹೇಳಿದ್ದಾರೆ ನೋಡಿ!

ಅರವಿಂದರ ಕವಿತೆಯೂ ನಿಮಗೆ ಗೂಢ ಅಂತ ಅನಿಸ್ತತದೆಯೋ?

ಅರವಿಂದರ ಉತ್ತರಾಯುಷ್ಯದಲ್ಲಿಯ ತತ್ವಜ್ಞಾನ ನನ್ನ ದೃಷ್ಟಿಯಿಂದ ಗೂಢವಾಗಿಯೇ ಉಳಿದಿದೆ. ಪೂರ್ವಾಯುಷ್ಯದಲ್ಲಿಯ ಕ್ರಾಂತಿಕಾರಕ ಅರವಿಂದರು ನನಗೆ ಹೆಚ್ಚು ಹಿಡಿಸುತ್ತಾರೆ. ವೈಯಕ್ತಿಕ ಮೋಕ್ಷ ಬಯಸುವವರಕಿಂತಲೂ ನನಗೆ ಸಾಮಾಜಿಕ ಮೋಕ್ಷಕ್ಕಾಗಿ ಸವೆಯುವವರು ಹೆಚ್ಚು ಶ್ರೇಷ್ಠರೆಂದು ಕಾಣುತ್ತಾರೆ. ಅರವಿಂದರು ಆಯುಷ್ಯದ ಕೊನೆ ಕೊನೆಗೆ ವೈಯಕ್ತಿಕ ಮೋಕ್ಷಕ್ಕಾಗಿ ಪ್ರಯತ್ನಿಸುತ್ತಿದ್ದರೆಂದು ನನ್ನ ಸ್ಪಷ್ಟ ಅಭಿಪ್ರಾಯ. ಟಾಗೋರರನ್ನ ನೋಡಿ. ಅವರು ನೆಲದ ಮೇಲೆ ಗಟ್ಟಿಯಾಗಿ ಕಾಲೂರಿ ಆಕಾಶದಲ್ಲಿ ದೃಷ್ಟಿ ನೆಟ್ಟಿದ್ದಾರೆಂದು ಅನಿಸುತ್ತದೆ. ಟಾಗೋರರು ಕೇವಲ ಶಾಂತಿ-ನಿಕೇತನ ಸ್ಥಾಪಿಸಲಿಲ್ಲ. ಶ್ರೀ-ನಿಕೇತನವನ್ನು ಸ್ಥಾಪಿಸಿದರು. ಶ್ರೀ ಹೊರತು ಶಾಂತಿಯಿಲ್ಲ. "THERE IS NO PEACE WITHOUT PROSPERITY' ಎಂದು ಅವರಿಗೆ ಖಾತ್ರಿಯಾಗಿತ್ತು. ಅವರು ಮತ್ತೊಂದು ಕಡೆಗೆ ಭಾರತ ಮಾತೆಯ ವರ್ಣನೆ ಮಾಡುವಾಗ ಹೇಳತಾರೆ, ''ನನ್ನ ಈ ಭಾರತ ಮಾತೆ ಅಂದರೆ ಯಾವದೇ ಒಂದು ಶಿಖರದ ಮೇಲೆ ಕೈಯಲ್ಲಿ ವೀಣೆ ಹಿಡಿದು ಮುಕ್ತಕೇಶಿಯಾಗಿ ಕೂತ ದೇವಿ ಅಲ್ಲ. ತನ್ನ ಕೃಶ ಮತ್ತು ಹಸಿದ ಮಕ್ಕಳನ್ನು ಹೊಟ್ಟೆಗೆ ಹಿಡಿದು ಕೂತ ಬಡ ತಾಯಿಯಾಗಿದ್ದಾಳೆ.'' ಭಾರತದ ಇಷ್ಟು Realistic ಚಿತ್ರ ಆ ಕಾಲದಲ್ಲಿ ಅಂತೂ ಬಿಡಿ ಇಂದಿನ ಕಾಲದಲ್ಲಿಯೂ ಸಿಗಬಹುದೇ? ಒಂದೇ ದಿನ ಉಳಿದಿದೆ, ಟಾಗೋರ ಅಥವಾ ಅರವಿಂದ ಇವರಿಬ್ಬರಲ್ಲಿ ಯಾರಾದರೂ ಒಬ್ಬರನ್ನು ನೀವು ಭೆಟ್ಟಿಯಾಗಬಹುದು ಅಂತಾ ನನಗೆ ಯಾರಾದರೂ ಹೇಳಿದರೆ ನಾನು ಟಾಗೋರರ ಭೆಟ್ಟಿಗೆ ಹೋಗಬಹುದು ಅಂತ ಅನಿಸುತ್ತದೆ.

ನೀವು ಕುವೆಂಪು ಅವರ ಹೆಸರು ಕೇಳಿರಬಹುದು.

ಹೆಸರು ಕೇಳೀನಿ. ಕೆ. ವ್ಹಿ. ಪುಟ್ಟಪ್ಪ ಅಲ್ಲ? ಅವರ ಬಗ್ಗೆ ಅಥವಾ ಅವರ 'ರಾಮಾಯಣ ದರ್ಶನಂ' ದ ಬಗ್ಗೆ ಕೇವಲ ಓದಿದ್ದೇನೆ. ಆದರೆ ಅವರನ್ನು ಕಾಣುವ ಅಥವಾ ಭೇಟಿಯಾಗುವ ಸುಯೋಗ ಇನ್ನೂ ಬರಲಿಲ್ಲ.

ಮಾಸ್ತಿಯವರನ್ನು ನೀವು ಕಂಡಿರಬೇಕು. ಹಿಂದೆ ಪುಣೆಯಲ್ಲಿ 'ಅಂತರ್‌ಭಾರತಿ ಸಂಸ್ಥೆಯ' ಉದ್ಘಾಟನೆ ಮಾಸ್ತಿಯವರ ಅಧ್ಯಕ್ಷತೆಯಲ್ಲಿ ಆಯಿತು.

ಮಾಸ್ತಿಯವರ ಪರಿಚಯ ಇತ್ತು, ಇಷ್ಟೇ ಅಲ್ಲ ನನ್ನ ಸಾಹಿತ್ಯ ಓದಿ ನನಗೆ ಬಲು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರೀತಿಯಿಂದ ಮಾರ್ಗದರ್ಶನ ಮಾಡಿದ ಕೆಲವೇ ಭಾರತೀಯ ಲೇಖಕರಲ್ಲಿ ಅವರೊಬ್ಬರು. ಆದ್ದರಿಂದ ಅವರ ಬಗ್ಗೆ ತುಂಬ ಆದರ ಇದೆ. ನಾನು ಅವರಿಗೆ ಎಷ್ಟೋ ಸಲ ಭೆಟ್ಟಿಯಾಗಿದ್ದೇನೆ. ಅವರಂಥ ಸಾತ್ವಿಕ ಸಾಹಿತಿ ಬಹಳ ಕಡಿಮೆ ಇದ್ದಾರೆ. ಅವರ ಪ್ರತಿಯೊಂದು ಭೆಟ್ಟಿಯಲ್ಲಿ ತಮ್ಮ ಸ್ವಂತ ಸಾಹಿತ್ಯ ಬಿಟ್ಟು ಉಳಿದ ಎಲ್ಲ ಸಾಹಿತ್ಯದ ಬಗ್ಗೆ ಅತ್ಯಂತ ಉತ್ಸಾಹದಿಂದ ಘಂಟೆಗಟ್ಟಲೆ ಮಾತಾಡುತ್ತಿದ್ದರು. ಅವರದೊಂದು ಸಣ್ಣ ನೆನಪು ಹೇಳುತ್ತೇನೆ. ಸುಮಾರು ೨೦ ವರ್ಷಗಳಾಗಿರಬಹುದು ಆ ಘಟನೆಗೆ ನನ್ನ 'ತುರ್ಝೀ ಆಹೆ ತುಝ್ಯಾ ಪಾಶೀ' ಈ ನಾಟಕ ಮಹಾರಾಷ್ಟ್ರದಲ್ಲಿ ತುಂಬಾ ಲೋಕಪ್ರಿಯವಾಗಿತ್ತು. ಆಗ ಆ ನಾಟಕದ ಕನ್ನಡ ಅನುವಾದ 'ತನು ನಿನ್ನದು ಮನ ನಿನ್ನದು' ಕನ್ನಡ ರಂಗಭೂಮಿಯ ಮೇಲೆಯೂ ಬಂತು. ಒಂದು ಹವ್ಯಾಸಿ ತಂಡದವರು ನನ್ನ ಈ ನಾಟಕದ ಪ್ರಯೋಗವನ್ನು ಬಲು ಉತ್ಸಾಹದಿಂದ ಕರ್ನಾಟಕದಲ್ಲಿ ಮಾಡುತ್ತಿದ್ದರು. ಆಗ ಆ ನಾಟಕದ ೨೫ ನೇ ಅಂದ್ರೆ 'ರೌಪ್ಯ ಮಹೋತ್ಸವ' ದ ಪ್ರಯೋಗ ಬೆಂಗಳೂರಿನಲ್ಲಿ ದಿವಂಗತ ಮಾಸ್ತಿಯವರ ಅಧ್ಯಕ್ಷತೆಯಲ್ಲಿ ಜರುಗಿಸಿದರು. ಆಗ ನಾನು ಮುದ್ದಾಮ ಬೆಂಗಳೂರಿಗೆ ಹೋಗಿದ್ದೆ. ಮಾಸ್ತಿಯವರು ಬಲು ಪ್ರೀತಿಯಿಂದ ನನ್ನನ್ನು ತಮ್ಮ ಬದಿಗೆ ಕೂಡಿಸಿಕೊಂಡರು. ನನ್ನ ನಾಟಕ ಅವರಿಗೆ ತುಂಬಾ ಸೇರಿತ್ತು. ನಾಟಕ ನಡೆದಾಗ ನಗುತ್ತಿದ್ದರು. ಉತ್ಸಾಹದಿಂದ ಚಪ್ಪಾಳೆ ತಟ್ಟುತ್ತಿದ್ದರು. ನಾಟಕದ ಮಧ್ಯದಲ್ಲಿ ವೇದಿಕೆಯ ಮೇಲೆ ಮಾಸ್ತಿಯವರ ಹಸ್ತದಿಂದ ನನ್ನ ಸತ್ಕಾರವಾಯಿತು. ಆಗ ತಮ್ಮ ಭಾಷಣ ಪ್ರಾರಂಭ ಮಾಡುವ ಮೊದಲು ಅವರು ನನ್ನ ಅನುಮತಿ ಕೇಳಿ ಎಲ್ಲ ಪ್ರೇಕ್ಷಕರ ಎದುರಿಗೆ ನನ್ನನ್ನು ಪ್ರೀತಿಯಿಂದ ಅಪ್ಪಿಕೊಂಡು ಮುತ್ತಿಸಿದರು. ಅಜ್ಜ ಮೊಮ್ಮಗನನ್ನು ಮುತ್ತಿಸುತ್ತಾನೆ ಹಾಗೆ! ನಾನು ನನ್ನ ಇಡೀ ಜೀವನದಲ್ಲಿ ಹಲವಾರು ಪಾರಿತೋಷಿಕಗಳನ್ನು ಗಳಿಸಿದ್ದೇನೆ. ಆದರೆ ಮಾಸ್ತಿಯವರ ಮುತ್ತು ಇದು ಎಲ್ಲಕ್ಕೂ ದೊಡ್ಡದಾದ ಪಾರಿತೋಷಿಕ ಎಂಬ ಶ್ರದ್ಧೆ ಇಂದಿಗೂ ನನ್ನ ಹೃದಯ ಸಂಪುಟದಲ್ಲಿ ಚಿರಂತನವಾಗಿ ಉಳಿದಿದೆ.

ಕಾರಂತರ ಸಾಹಿತ್ಯ ಓದಿರಬಹುದು!

ಕೆಲವು ಓದಿದ್ದೇನೆ. ಆದರೆ ಕಾರಂತರ ಸಾಹಿತ್ಯಕ್ಕಿಂತಲೂ ಕಾರಂತರೇ ಹೆಚ್ಚು ಎತ್ತರವಾಗಿದ್ದಾರೆಂದು ನನ್ನ ಭಾವನೆ. ಈಗ ಇಡೀ ಭಾರತದಲ್ಲಿ ಸಾಹಿತ್ಯ ಮತ್ತು ಕಲೆಯ ಕ್ಷೇತ್ರದಲ್ಲಿ ಮೂರು ಮಹನೀಯರ ಹೆಸರುಗಳನ್ನು ಹೇಳಿರಿ ಅಂತ ಯಾರಾದರೂ ಕೇಳಿದರೆ ನಾನು ಮೊದಲನೇ ಹೆಸರನ್ನು ನಿಃಸಂಶಯವಾಗಿ ಕಾರಂತರೆಂದೇ ಹೇಳುವೆನು. ಟಾಗೋರರ ನಂತರ ಜೀವನ ಇಷ್ಟು ಸಂಪೂರ್ಣವಾಗಿ ಜೀವಿಸುವ ಕಲಾವಂತ ನನಗೆ ಕೇವಲ ಕಾರಂತರೇ ಕಾಣ್ತಾರೆ. ಅವರ ಕಥೆ ಕಾದಂಬರಿಗಳ ಮರಾಠಿ ಅನುವಾದಗಳನ್ನು ನಾನು ಓದಿದ್ದೇನೆ. ಆದರೆ ಅವರು 'ಯಕ್ಷಗಾನ' ಬಗ್ಗೆ ಮಾಡಿದ ಕಾರ್ಯ ಎಲ್ಲಕ್ಕೂ ಹೆಚ್ಚು ಮಹತ್ವದ್ದು ಎಂದು ನನಗನಿಸಿದೆ. ಸಂಗೀತ ಮತ್ತು ನೃತ್ಯ ಈ ಕಲೆಗಳ ಮೂಲಕವೇ ನಾನು ಅವರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗೋತ್ರದವನಾಗಿದ್ದೇನೆ. ಶ್ರೇಷ್ಠ ಕಾದಂಬರಿಕಾರರೂ ಮತ್ತು ಅದಕ್ಕಿಂತ ಶ್ರೇಷ್ಠ ವಿಚಾರವಂತರೆಂದು ಅವರ ಬಗೆಗೆ ನನಗೆ ಆದರ ಇದೆ. ಸಾಹಿತ್ಯ ನಿರ್ಮಿತಿ ಅಂದರೆ ಯಾವುದೋ ಒಂದು ಗ್ರಂಥಾಲಯ ತುಂಬುವದಕ್ಕೋಸ್ಕರ ಮಾಡುವ ಕೆಲಸ ಅಲ್ಲ. ಅದು ಸಮಾಜದಲ್ಲಿ ಜೀವಂತವಾಗಿ ಕಾಣಿಸಬೇಕು. ಸಮಾಜದ ಕೊನೆಯ ಸಾಲಿನಲ್ಲಿ ನಿಂತವನಿಗೂ ಅದು ಮುಟ್ಟಬೇಕು, ತಟ್ಟಬೇಕು ಎಂಬ ಧ್ಯೇಯದಿಂದ ಸಾಹಿತ್ಯನಿರ್ಮಿತಿ ಮಾಡುವ ಕೆಲವೇ ಲೇಖಕರಲ್ಲಿ ಕಾರಂತರು ಒಬ್ಬರಾಗಿದ್ದಾರೆ. ಅದಕ್ಕಾಗಿ ಸಮಾಜದಲ್ಲಿರುವ ಕಲಾನಿರ್ಮಿತಿಯ ಮತ್ತು ಕಲಾಭಿವ್ಯಕ್ತಿ ಎಲ್ಲ ಮಾಧ್ಯಮಗಳನ್ನು ಅವರು ಬಲು ಯಶಸ್ವಿಯಾಗಿ ಉಪಯೋಗಿಸಿಕೊಂಡಿದ್ದಾರೆ. ಅವರು ಆಧ್ಯಾತ್ಮದಲ್ಲಿ ತೊಡಕಲಿಲ್ಲ. ವಿಜ್ಞಾನದ ಕೋಶಗಳನ್ನು ರಚಿಸಿದ್ದಾರೆ. ಮಕ್ಕಳಿಗಾಗಿ ಬರೆದರು. ಹಳ್ಳಿಗರಿಗಾಗಿ ಬರೆದರು, ವಿದ್ವಾಂಸರಿಗಾಗಿ ಬರೆದರು. ಈ ಲೇಖನದ ಸಿದ್ಧತೆಗಾಗಿ ಅವರು ಎಷ್ಟೋ ಘಂಟೆಗಳನ್ನು ರಾತ್ರಿಗಳನ್ನು ತಮ್ಮ ಅಭ್ಯಾಸಿಕೆಯಲ್ಲಿ ಕಳೆದಿರಬಹುದು. ಆದರೆ ಲಕ್ಷ್ಯದಲ್ಲಿ ಇಡಿ, ಅಭ್ಯಾಸಿಕೆಯು ಅವರ ಕೊನೆಯ ವಸತಿಸ್ಥಾನ ಆಗಲಿಲ್ಲ. ಜನರು, ಸಮಾಜ ಇದೇ ಅವರ ಕೊನೆಯ ವಸತಿಸ್ಥಾನವಾಗಿದೆ. ಹೆಚ್ಚಾನುಹೆಚ್ಚು ಜನರವರೆಗೆ ಮುಟ್ಟುವ ಸಾಧನ ಈ ದೃಷ್ಟಿಯಿಂದಲೇ ಅವರು ಯಕ್ಷಗಾನದ ಕಡೆಗೆ ಹೊರಳಿರಬಹುದು ಎಂದು ನನ್ನ ಭಾವನೆ. ಕಲೆಯ ಮಾಧ್ಯಮದಿಂದ ಸಮಾಜದ ಉನ್ನಯನ ಮಾಡುವ ಪ್ರಯತ್ನಗಳಲ್ಲಿ ಅವರು ತುಂಬಾ ಯಶಸ್ವಿಯಾಗಿದ್ದಾರೆಂದೇ ಹೇಳಬೇಕು.

ಅವರ ಕಾದಂಬರಿಗಳ ಬಗ್ಗೆ ಏನು ಅಂತೀರಿ ?

ಇಂದಿನ ಭಾರತೀಯ ಸಾಹಿತ್ಯದಲ್ಲಿ ಅವರು ಶ್ರೇಷ್ಠ ಲೇಖಕರೆಂದು ಆಗಲೇ ಹೇಳಿದ್ದೇನೆ. ಅವರ ಮರಾಠಿ ಅನುವಾದಿತ ಕಾದಂಬರಿಗಳನ್ನು ಮಾತ್ರ ನಾನು ಓದಿದ್ದೇನೆ. ಅದರಲ್ಲಿ ನನಗೆ ಮರಳಿಮಣ್ಣಿಗೆ (ಆಶೀ ಧರತೀಚಿ ಮಾಯಾ) ಇದು ಎಲ್ಲಕ್ಕೂ ಹೆಚ್ಚು ಪ್ರೀಯವಾಗಿದೆ. ಆಮೇಲೆ 'ಬೆಟ್ಟದ ಜೀವ' (ಡೊಂಗರಾ ಏವಢಾ) ನೆನೆಸುತ್ತೇನೆ. ಮರಳಿಮಣ್ಣಿಗೆ super ಅಂತ ಹೇಳಬಹುದು.

ಅವರ 'ಮೂಕಜ್ಜಿ' ಗೆ ಜ್ಞಾನಪೀಠ ಸಿಕ್ಕಿತು. ಅದರ ಬಗ್ಗೆ ಏನು?

ಮೂಕಜ್ಜಿ ಓದಿದ್ದೇನೆ. ಆದರೆ ನನ್ನ ಪ್ರಾಮಾಣಿಕ ಅಭಿಪ್ರಾಯ ಹೇಳಬೇಕೆಂದರೆ ನನಗೆ 'ಮೂಕಜ್ಜಿಗಿಂತಲೂ ಮರಳಿಮಣ್ಣಿಗೆ ಹೆಚ್ಚು classic ಅನಿಸಿದೆ. ಯಾಕೆಂದರೆ ಮೂಕಜ್ಜಿಯಲ್ಲಿ ಕಾರಂತರಲ್ಲಿಯ ತತ್ವಜ್ಞಾನಿಯು ಕಾರಂತರಲ್ಲಿಯ ಕಲಾವಂತನನ್ನು ಅಲ್ಲಿ ಸೋಲಿಸಿದ್ದಾನೆ ಅಂತ ನನಗನಿಸಿದೆ.

ಮರಳಿ ಮಣ್ಣಿಗೆಯಂಥ ಕಾದಂಬರಿಗಳು ಮರಾಠಿಯಲ್ಲಿ ಯಾವವು ಅಂತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೇಳತೀರಿ?

ಪೇಂಡಸೆ, ಖಾಂಡೇಕರ ಮುಂತಾದವರು ಅಂಥ ಕಾದಂಬರಿಗಳನ್ನು ಬರೆದಿದ್ದಾರೆ. ಇತ್ತೀಚೆಗೆ ಪೇಂಡಸೆಯವರ 'ತುಂಬಾಡಚೇ ಖೋತ' ಎಂಬ ಬೃಹತ್ ಕಾದಂಬರಿ ಪ್ರಕಾಶಿತವಾಗಿದೆ. ಮೂರು ಪೀಳಿಗೆಯ ಕಥೆ ಅದರಲ್ಲಿದೆ. ಆದರೆ ಕಾರಂತರಲ್ಲಿರುವ Broad span, ಮತ್ತು ಪ್ರಾದೇಶಿಕ flavour ಅದರಲ್ಲಿ ಇಲ್ಲ ಎಂಬುದನ್ನು ಒಪ್ಪಲೇಬೇಕು. ಬಂಗಾಲಿಯಲ್ಲಿ ಶರದ್‌ಚಂದ್ರರು ಮತ್ತು ಕನ್ನಡದಲ್ಲಿ ಕಾರಂತರು ಚಿತ್ರಿಸಿದ 'ಹಳ್ಳಿ' ಇದು ನಿಜವಾದ ಜೀವಂತ ಭಾರತೀಯ ಹಳ್ಳಿ ಎಂದು ನನಗನಿಸುತ್ತದೆ.

ನೀವು ಆಗಾಳೇ ಟಾಗೋರರ ಉಲ್ಲೇಖ ಮಾಡಿದಿರಿ. ಆದ್ದರಿಂದ ನೆನಪಾಯಿತು ಟಾಗೋರರೂ ಕೂಡ ಅಲಲ್ಲಿ ಗೆಜ್ಜೆ ಕಟ್ಟಿ ರಂಗಭೂಮಿಯ ಮೇಲೆ ಪ್ರಯೋಗಗಳಲ್ಲಿ ಭಾಗವಹಿಸುತ್ತಿದ್ದರು.

ನಟ ಮತ್ತು ನಾಟಕಕಾರ ಇವರಲ್ಲಿಯ ದ್ವೈತವನ್ನು ಮಾಯಗೊಳಿಸುವ ಪ್ರಯೋಗಗಳಲ್ಲಿ ಟಾಗೋರರ ನಂತರ ನನಗಂತೂ ಕಾರಂತರೇ ಯಶಸ್ವಿಯಾದ ಕಲಾವಿದರೆಂದು ಕಾಣುತ್ತಾರೆ. ಈ ಸಂದರ್ಭದಲ್ಲಿ ಕನ್ನಡದಲ್ಲಿಯ ಮತ್ತೊಬ್ಬ ಶ್ರೇಷ್ಠ ನಾಟಕಕಾರರ ಹೆಸರೂ ನೆನಪಾಗತದ. ಅವರೆಂದರೆ ಆದ್ಯ ರಂಗಚಾರ್ಯರು. ಮುಖಕ್ಕೆ ಬಣ್ಣ ಹಚ್ಚಿ ರಂಗಭೂಮಿಯ ಮೇಲೆ (ಅಭಿನಯಿಸುವ) ನಾಟಕಕಾರ ಮರಾಠಿಯಲ್ಲಿ ಕಾಣುವದಿಲ್ಲ. ಈ ದೃಷ್ಟಿಯಿಂದ ನನಗೆ ಕಾರಂತರ ಮಹತ್ವ ಹೆಚ್ಚು ಅಂತ ಅನಿಸುತ್ತದೆ. ಕಾರಂತರ ಬಗ್ಗೆ ಮತ್ತೊಂದು ಹೇಳಬೇಕು. ಅವರು ವಿಚಾರ ಸ್ವಾತಂತ್ರ್ಯದ ಪುರಸ್ಕರ್ತರು Emergency' ಕಾಲದಲ್ಲಿ ಅವರು ತೋರಿಸಿದ ಧೈರ್ಯ ಇಡೀ ಭಾರತಕ್ಕೇ ಅವರ ವೈಚಾರಿಕ ಎತ್ತರದ ಒಂದು ಪರಿಚಯ ಮಾಡಿ ಕೊಟ್ಟಿದೆ. ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿ ಅವರದೇ ಆದ ಒಂದು ತತ್ವ ಮುದ್ರೆಯನ್ನು ಅವರು ಮೂಡಿಸಿದ್ದಾರೆ. ಆದ್ದರಿಂದಲೇ ನಾನು ಅವರನ್ನು ಟಾಗೋರರ ಜೊತೆಗೆ ಹೋಲಿಸಿದ್ದೇನೆ.

ಆದ್ಯ ರಂಗಾಚಾರ್ಯ (ಅಂದರೆ ಶ್ರೀರಂಗರ) ಉಲ್ಲೇಖ ಬಂತು ಅಂತ ಕೇಳ್ತೇನಿ. ಮರಾಠಿ ನಾಟಕಕಾರರಕ್ಕಿಂತ ಯಾವ ಅರ್ಥದಿಂದ ಅವರು (ನಿಮಗೆ) ಭಿನ್ನ ಕಾಣ್ತಾರೆ!

ನಾನು ತೌಲನಿಕವಾಗಿ ಮಾತಾಡಲಾರೆ. ಯಾಕೆಂದರೆ ಮರಾಠಿಯಲ್ಲಿ ಕೂಡ ತಮ್ಮ ತಮ್ಮ ದೃಷ್ಟಿಯಿಂದ ಶ್ರೇಷ್ಠ ನಾಟಕಕಾರರು ಆಗಿ ಹೋಗಿದ್ದಾರೆ. ಆದರೆ ಕನ್ನಡದಲ್ಲಿ ಹೊಸ ನಾಟಕ ಎಂಬ ಶಬ್ದಪ್ರಯೋಗ ಮಾಡುವಾಗಲೂ ಆದ್ಯರಂಗಾಚಾರ್ಯರಿಗೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಮಸ್ಕಾರ ಮಾಡಿಯೇ ಮುಂದೆ ಹೋಗಬೇಕು. Form, content ಇವುಗಳ ಜೊತೆಗೆ ಕ್ರಾಂತಿಕಾರಕ ವಿಚಾರಗಳನ್ನು Bold ಆಗಿ ಪ್ರಕಟಿಸುವ (ಅವರ) ಪ್ರಯತ್ನ ಕೇವಲ ಕನ್ನಡದಲ್ಲಿಯೇ ಅಲ್ಲ ಇಡೀ ಭಾರತೀಯ ರಂಗಭೂಮಿಯ ಮೇಲೆ ನಿಜವಾದ ಅರ್ಥದಿಂದಲೂ 'ಆದ್ಯ'ವೆಂದೇ ಹೇಳಬೇಕು. 'ಕೀಳು ಜನಮೇಜಯ' ಈ ನಾಟಕ ನನಗೆ ಇಂದಿಗೂ ಕ್ರಾಂತಿಕಾರಕವೆನಿಸುತ್ತದೆ. ಅವರು ಹರಿಜನವಾರ ನಾಟಕ ಎಬ್ಬಿಸಿದ ಬಿರುಗಾಳಿಯೂ ನನಗೆ ಗೊತ್ತಿದೆ. ನಾವಿಬ್ಬರೂ ಭಾರತೀಯ ಪ್ರತಿನಿಧಿಗಳೆಂದು ಜರ್ಮನಿಗೆ ಅಂತರ್‌ರಾಷ್ಟ್ರೀಯ ನಾಟ್ಯಮಹೋತ್ಸವಕ್ಕೆ ಹೋಗಿದ್ದೆವು. ಆವ ಎರಡು ತಿಂಗಳ ಪ್ರವಾಸದಲ್ಲಿ ಅವರ ಮುಖದಿಂದ ಹಲವಾರು ಕ್ರಾಂತಿಕಾರಕ ನಾಟ್ಯಕೃತಿಗಳ ಕಥಾಬೀಜಗಳನ್ನು ಕೇಳಿ ಮಂತ್ರಮುಗ್ಧನಾಗಿದ್ದೇನೆ. ಕನ್ನಡ ನಾಟಕ ಎಂದಾಕ್ಷಣ ನನಗೆ ಮತ್ತೊಬ್ಬ ಶ್ರೇಷ್ಠ ನಾಟಕಕಾರರು ನೆನಪು ಆಗುತ್ತಾರೆ.

ಯಾರು?

ಟಿ. ಪಿ. ಕೈಲಾಸಂರರು. ಮರಾಠಿಯಲ್ಲಿ ಅನುವಾದಗೊಂಡ ಅವರ 'ಪ್ರಯೋಜನ'ನಾಟಕ ಮೊದಲು ಬಾರಿಗೆ ಓದಿದಾಗ – ನಿಜವಾಗಿ ಹೇಳುತ್ತೇನೆ- ಕೈಲಾಸಂರಿಗೆ ಭೆಟ್ಟಿಯಾಗಬೇಕು. ಕನ್ನಡ ಕಲಿಯಲೇಬೇಕು ಎಂದು ತೀವ್ರವಾಗಿ ಅನಿಸಿತು. ಮಹಾಭಾರತದ ಪಾತ್ರಗಳನ್ನು ವಿವರಿಸಿದ ಅವರ ರೀತಿ ಕೇವಲ ಕನ್ನಡದಲ್ಲಿಯೇ ಅಲ್ಲ ಇಡೀ ಭಾರತದಲ್ಲಿಯೇ ನನಗೆ ಅಭಿನವವಾಗಿ, ಆಧುನಿಕವಾಗಿ ಮೊದಲು ಬಾರಿ ಕಾಣಿಸಿದೆ. ಪ್ರಾಚೀನ ಸಾಹಿತ್ಯವನ್ನು ಕಲಾತ್ಮಕವಾಗಿ ಅರ್ಥೈಸುವ ಎಷ್ಟೋ ಪ್ರಯೋಗಗಳ ಈಗ ಆಧುನಿಕ ಭಾರತೀಯ ಸಾಹಿತ್ಯದಲ್ಲಿ ನಾವು (ಇಂದು) ನೋಡುತ್ತೇವೆ. ಆ ಕೈಲಾಸಂರ ಪ್ರಯೋಗ ಈ ಎಲ್ಲ ಪ್ರಯೋಗಗಳ ಗಂಗೋತ್ರಿ ಎಂದು ನಾನು ನಿಶ್ಚಿತವಾಗಿ ಹೇಳಬಹುದು. ಆದ್ದರಿಂದ ಆಧುನಿಕ ಭಾರತೀಯ ಸಾಹಿತ್ಯದ ಜನಕರಲ್ಲಿ ಕೈಲಾಸಂರನ್ನೂ ನಾವು ಸ್ಮರಿಸಬೇಕೆಂದು ನನಗೆ ಅನಿಸುತ್ತದೆ.

ಆದರೆ ಕೈಲಾಸಂ ನಾಟಕಗಳು ರಂಗಭೂಮಿಯ ಮೇಲೆ ಅಷ್ಟು ಯಶಸ್ವಿಗಳಾಗಿಲ್ಲ.

ಈಗ ಆಗಬಹುದು. ಹಳೇ ಪರಂಪರೆ ಒಗೆದು ಹೊಸದನ್ನು ಸ್ವೀಕರಿಸಬೇಕಾದ ರಸಿಕರ ಸಮಾಜ ೨೫-೩೦ ವರ್ಷಗಳ ಹಿಂದೆ ಇದ್ದಿರಲಿಲ್ಲ. ಈಗ ಹೊಸ ಪ್ರೇಕ್ಷಕವರ್ಗ ಬರತಾ ಇದೆ. ಹೊಸ ತಂತ್ರದಿಂದ ಕೈಲಾಸಂರ ನಾಟಕಗಳನ್ನು ಯಾರಾದರೂ ರಂಗಭೂಮಿಯ ಮೇಲೆ ತಂದರೆ ಅವು ನಿಃಸಂಶಯವಾಗಿ ಯಶಸ್ವಿಯಾಗಬಹುದು ಅಂತ ನನಗೆ ಅನಿಸ್ತದೆ.

ಇಂದಿನ ಹೊಸ ಕನ್ನಡ ಲೇಖಕರ ಪರಿಚಯ ಎಷ್ಟರಮಟ್ಟಿಗೆ ಇದೆ?

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಿರೀಶ ಕಾರ್ನಾಡ ನನ್ನ ನೆಚ್ಚಿನ ಗೆಳೆಯನಾಗಿದ್ದಾನೆ. ಅವನ 'ಹಯವದನ' ಮತ್ತು 'ತುಘಲಕ' ಈ ನಾಟಕಗಳು ಈಗ ಭಾರತೀಯ ರಂಗಭೂಮಿಯ ಸೊತ್ತುಗಳಾಗಿವೆ. ಹಯವದನದ ಮರಾಠಿ ಪ್ರಯೋಗ ಜರ್ಮನ್ ರಂಗಭೂಮಿಯ ಮೇಲೆ ಆಯಿತು. ಪ್ರಾಚೀನತೆಯನ್ನು ಅರ್ವಾಚೀನ ದೃಷ್ಟಿಯಿಂದ ಅರ್ಥೈಸುವ ಅವರ ಪ್ರಯತ್ನ ನಿಜವಾಗಿಯೂ ಅಭೂತಪೂರ್ವವೆಂದು ಹೇಳಬೇಕು. ಅವರ ನಾಟಕಗಳನ್ನು ನೋಡಿ ನಾಟ್ಯಮಂದಿರದಿಂದ ಹೊರಬಂದ ಪ್ರೇಕ್ಷಕ ಅಸ್ವಸ್ಥನಾಗುತ್ತಾನೆ ಅಂತರ್ಮುಖಿನಾಗುತ್ತಾನೆ. ಇದು ಅವನ ನಾಟಕದ ಸಾಮರ್ಥ್ಯ. ಚಿತ್ರಪಟ ಕ್ಷೇತ್ರದಲ್ಲಿಯೂ ಕೂಡ ಅವನು ಹೆಸರುಗಳಿಸಿದ್ದಾನೆ. 'ಕಾಡು' 'ಸಂಸ್ಕಾರ' ಈ ಚಿತ್ರಗಳಲ್ಲಿಯ ಅವನ ಅಭಿನಯ ನೋಡಿದರೆ ಅವನಲ್ಲಿಯ Born ಕಲಾವಂತ ಗೊತ್ತಾಗುತ್ತಾನೆ. ಇಂದಿನ ಭಾರತೀಯ ರಂಗಭೂಮಿಯ ಮೇಲಿನ ಅತ್ಯಂತ ಶ್ರೇಷ್ಠ ನಾಟಕಕಾರನೆಂದು ಅವನ ಬಗ್ಗೆ ಬಹಳ ಅಪೇಕ್ಷೆಗಳಿವೆ. ಕಾರ್ನಾಡನ ಜೊತೆಗೆ ಮತ್ತೊಬ್ಬ ಕಲಾವಿದನನ್ನು ಉಲ್ಲೇಖಿಸಲೇಬೇಕು. ಅವನೆಂದರೆ ಬಿ.ವ್ಹಿ.ಕಾರಂತ. ಅಂತಹ ಗುಣೀ ದಿಗ್ದರ್ಶಕ ಇಂದು ಅನ್ಯ ಯಾವ ಭಾರತೀಯ ಭಾಷೆಯಲ್ಲಿಯೂ ಇಲ್ಲ ಎಂದೂ ನಿಃಸಂಶಯವಾಗಿ ಹೇಳುತ್ತೇನೆ. ನಾಟ್ಯಕಲೆಯ ವಿವಿಧ ಅಂಗಗಳ ಸೂಕ್ಷ್ಮ ಅಭ್ಯಾಸ ಅವನಷ್ಟು ನಾನು ಅನ್ಯಯಾರಲ್ಲೂ ಕಾಣುವದಿಲ್ಲ.

ಭೈರಪ್ಪರ ಹೆಸರು ಕೇಳಿದ್ದೀರಾ?

ಅವರ 'ವಂಶವೃಕ್ಷ' ಓದಿದ್ದೇನೆ. ಓದಿ ತುಂಬಾ ಸಂತುಷ್ಟನಾದೆ. ಕನ್ನಡದಲ್ಲಿ ಎಷ್ಟು ಉತ್ತಮೋತ್ತಮ ಲೇಖಕರು ಬರೆಯುತ್ತಿದ್ದಾರೆಂದು ಅನಿಸಿತು. 'ವಂಶ ವೃಕ್ಷ' ದಲ್ಲಿಯ ಪಾತ್ರಗಳು, ಅದರಲ್ಲಿಯ ಭಾಷೆ, ಅಲ್ಲಿಯ ಸನ್ನಿವೇಶ ಇವುಗಳನ್ನು ಒಮ್ಮೆ ಓದಿದಮೇಲೆ ಮರೆಯಲು ಅಸಾಧ್ಯವಾಗುತ್ತದೆ. ಅವರ ಎಲ್ಲ ಸಾಹಿತ್ಯ ಓದಬೇಕು ಎಂಬ ತೀವ್ರ ಇಚ್ಛೆ ಆಯಿತು. ವಂಶವೃಕ್ಷದ ಕೊನೆ ಮಾತ್ರ ನನಗೆ (ಅಷ್ಟು) ಸರಿಯಾಗಿದೆ ಅಂತ ಅನಿಸಲಿಲ್ಲ.

ಈಗ ಪರ್ವ ಎಂಬ (ಪೌರಾಣಿಕ) ಕಾದಂಬರಿ ಪ್ರಸಿದ್ಧವಾಗಿದೆ. ಕುರುಕ್ಷೇತ್ರದ ಯುದ್ಧವನ್ನು ಕೇಂದ್ರವಾಗಿ ಇಟ್ಟುಕೊಂಡು ಈ ಕಾದಂಬರಿ ಬರೆದಿದ್ದಾರೆ. ಮತ್ತು ವಿಶೇಷ ಅಂದರೆ ಎಲ್ಲ ಅದ್ಭುತ ಪ್ರಸಂಗಗಳನ್ನು ತೊರೆದು ಕೇವಲದ ಐತಿಹಾಸಿಕ ಮತ್ತು ವಾಸ್ತವದ ಆಧಾರದನ್ನಷ್ಟೇ ಇಟ್ಟು ಕೊಂಡಿದ್ದಾರೆ.

ಓಹ್ಹೋ! ಇಂಥ ಕಾದಂಬರಿಗಳು ಮರಾಠಿಯಲ್ಲಿ ಬೇಗ ಅನುವಾದಗೊಳ್ಳಬೇಕು. ಮರಾಠಿಯಲ್ಲಿ ಈಗಾಗಲೇ ಮಹಾಭಾರತ ಮತ್ತು ರಾಮಾಯಣ ಕುರಿತು ಹೊಸ ಹೊಸ ಸಂಶೋಧನ ಕೃತಿಗಳು ಪ್ರಸಿದ್ಧವಾಗುತ್ತಿವೆ. ಉದಾಹರಣೆಗಳಿಗೆ ಇರಾವತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬಾಯಿ ಕರ್ವೆರ ಯುಗಾಂತ ಭಾರತೀಯ ಸಾಹಿತ್ಯದಲ್ಲಿಯೇ ಒಂದು ಹೊಸ ದೃಷ್ಟಿಕೋನ ಕೊಡುವ ಕೃತಿ. ಆದರೆ ಅದು ಹೆಚ್ಚಾಗಿ 'Anthropologist' ದೃಷ್ಟಿಯಿಂದ ಬರೆದ ಪುಸ್ತಕ. ನೀವು ಹೇಳುತ್ತಿರುವ ಭೈರಪ್ಪರ ಈ ಹೊಸ ಪುಸ್ತಕ ಲಲಿತ ಕೃತಿ ಎಂದು ಎಷ್ಟು ಮಹತ್ವದ್ದಾಗಿದೆಯೆಂದು ಒಮ್ಮೆ ನೋಡಬೇಕು.

ನೀವು ಅನಂತಮೂರ್ತಿ, ಚಿತ್ತಾಲ, ದೇಸಾಯಿ, ಲಂಕೇಶ, ತೇಜಸ್ವೀ, ಕಂಬಾರ ಈ ಹೆಸರುಗಳು ಕೇಳಿದಿರಾ?

ಇವರ ಹೆಸರುಗಳನ್ನಷ್ಟೇ ಕೇಳಿದ್ದೇನೆ. ಅವರ ಸಾಹಿತ್ಯದ ಪರಿಚಯು ಮಾತ್ರ ಇನ್ನು ಆಗಿಲ್ಲ.

ಇನ್ನು ನಿಮ್ಮ ಸಾಹಿತ್ಯದ ಕಡೆಗೆ ಹೊರಳೋಣ. ನೀವು ಮರಾಠಿಯಲ್ಲಿ, ಹಾಸ್ಯ, ನಾಟಕ, ಸಂಗೀತ, ಚಿತ್ರಪಟ, ಮತ್ತು ವಕ್ತೃತ್ವ ಈ ಕ್ಷೇತ್ರಗಳಲ್ಲಿ ಯಶಸ್ವಿಯಾಗಿ ಸಂಚರಿಸಿದ್ದೀರಿ. ನಿಮ್ಮ ಮೇಲೆ ಯಾವ ಸಾಹಿತಿಯ ಅಥವಾ ಕಲಾವಂತನ ಸಂಸ್ಕಾರಗಳಾಗಿವೆ ಅಂತ ಹೇಳಬಹುದು?

ನನ್ನ ಮೇಲೆ ಹಲವಾರು ಜನರ ಸಂಸ್ಕಾರಗಳಿವೆ. ಒಬ್ಬನೇ ಒಬ್ಬ ವ್ಯಕ್ತಿಯ ಸಂಸ್ಕಾರಗಳು ಅಂತ ಹೇಳಲಾರೆ. ಯೋಜನಾಪೂರ್ವಕವಾಗಿ ನನ್ನ ಮೇಲೆ ಯಾರಾದರೂ ಸಂಸ್ಕಾರ ಮಾಡಿರಬಹುದು ಅಂತ ಅನಿಸೋದಿಲ್ಲ. ಸಾಹಿತ್ಯದಲ್ಲಿ ಪ್ರತಿಯೊಬ್ಬನಿಗೆ ತಾನೇ ತನ್ನ ಗುರು ಆಗಬೇಕಾಗುತ್ತದೆ. ನನ್ನ ಸಂಸ್ಕಾರಗಳನ್ನು ಅಲ್ಲಗಳೆಯುವದಿಲ್ಲ. ಆದರೆ ಸಂಸ್ಕಾರಗಳು ಲೇಖಕನಕ್ಕಿಂತಲೂ ಪುಸ್ತಕಗಳ ಸಂಸ್ಕಾರಗಳೇ ಹೆಚ್ಚಾಗಿವೆ ಎಂದು ನನ್ನ ಭಾವನೆ.

ನಿಮ್ಮ ಮನೆಯಲ್ಲಿಯ ವಾತಾವರಣದ ಭಾಗವೂ ಅದಕ್ಕೆ ಕಾರಣವಾಗಿರಬಹುದೆ?

ಆಗಿರಬಹುದು. ಖಂಡಿತ ಆಗಿರಬಹುದು. ನನ್ನ ಅಜ್ಜ(ಉತ್ತಮ) ಲೇಖಕರಿದ್ದರು. ನನ್ನ ಅಜ್ಜಿಗೆ ಹಾಸ್ಯದ ಸೂಕ್ಷ್ಮತೆಯ ಅರಿವುಇತ್ತು. ನನ್ನ ಸೋದರಮಾವ ಉತ್ತಮ ಚಿತ್ರಕಾರರಾಗಿದ್ದರು. ನನ್ನ ತಂದೆಗೆ ಗಾಯನದ ಕಲೆಯಲ್ಲಿ ರುಚಿ ಇತ್ತು. ಆದ್ದರಿಂದ ನನ್ನ ಬಾಲ್ಯದಲ್ಲಿಯೇ ಸಂಗೀತ, ನಾಟಕ ಸಾಹಿತ್ಯ ಈ ಕಲೆಗಳಿಗೆ ನಮ್ಮ ಮನೆಯಲ್ಲಿ ಅನುಕೂಲ ವಾತಾವರಣವಿತ್ತು. ಆಗ ಪಾರ್ಲೆ ಅಂಥ ಸಣ್ಣ ಊರಲ್ಲಿ ಕೂಡ ಸಾಹಿತ್ಯ ಸಂಗೀತಕ್ಕೆ ಹೆಚ್ಚು ಅನುಕೂಲ ವಾತಾವರಣವಿತ್ತು.

ನೀವು ಅಭಿನಯ ಕ್ಷೇತ್ರದಕಡೆಗೆ ಹೇಗೆ ಹೋದಿರಿ?

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಿಜವಾಗಿ ಹೇಳಬೇಕಾದರೆ 'performer' ಇದೇ ನನ್ನ ಮೂಲ ಪ್ರವೃತ್ತಿ ಅಂತ ನನಗೆ ಕಾಣ್ತದೆ. ಚಿಕ್ಕಂದಿನಿಂದ ನಗಬೇಕು-ನಗಿಸಬೇಕು ಈ ಹವ್ಯಾಸದಿಂದಲೇ ಬೆಳೆದೆ. ೧೪-೧೫ ವರ್ಷದವನಿದ್ದಾಗ 'ಬೇಬಂದ ಶಾಹಿ' ಈ ಪ್ರಸಿದ್ಧ ಮರಾಠಿ ಐತಿಹಾಸಿಕ ನಾಟಕವನ್ನು ಅದರಲ್ಲಿಯ ಸ್ತ್ರೀಪಾತ್ರಗಳನ್ನು ತೆಗೆದು ಅದರ ಪ್ರಯೋಗ ನಾವು ಮಾಡಿದ್ದರ ನನಗೆ ನೆನಪಿದೆ. ಈಗ ಆ ನೆನಪಿನಿಂದ ನಗೆ ಬರುತ್ತದೆ.

ನೀವು ಚಿತ್ರಪಟದಲ್ಲಿಯೂ ಕೆಲಸ ಮಾಡಿದ್ದೀರಿ!

ಹೌದು. 'ಗುಳಾಚಾ ಗಣಪತಿ' (ಬೆಲ್ಲದ ಗಣಪತಿ), ದೂಧಭಾತ, ಪುಢಚ ಪಾವ್ಲೂಲ' 'ಗೋಕುಳಚಾ ರಾಜಾ' 'ವಂದೇ ಮಾತರಮ್' ಮುಂತಾದ ಚಿತ್ರಪಟಗಳಲ್ಲಿ ನಾನು ಅಭಿನಯಿಸಿದ್ದೇನೆ. ಈ ಚಿತ್ರಪಟಗಳೂ ಆಗ ಅತ್ಯಂತ ಲೋಕಪ್ರಿಯವಾಗಿದ್ದವು.

ನೀವು ಈ ಕ್ಷೇತ್ರ ಬಹಳ ಬೇಗ ಬಿಟ್ಟಿರಿ ಅಂತ ಕಾಣ್ತದೆ. ಯಾಕೆ?

ಸಿನೇಮಾ ಕ್ಷೇತ್ರಗಳಲ್ಲಿಯ ನನ್ನ ಅನುಭವಗಳು ಬಹಳ ಕಟುವಾಗಿವೆ. (ಆದ್ದರಿಂದ) ನನಗೆ ಅಲ್ಲಿ ಹೆಚ್ಚು ರುಚಿ ಉಳಿಯಲಿಲ್ಲ.

ನೀವು ಹೆಜ್ಜೆ ಇಟ್ಟ ಪ್ರತಿಯೊಂದು ಕ್ಷೇತ್ರಕ್ಕೆ ನಿಮ್ಮದೇ ಆದ ಒಂದು ಹೊಸ ಪು.ಲ.-ಟಚ್ ಇದೆ. ಹಾಸ್ಯ, ನಾಟ್ಯ, ಸಂಗೀತ, ಸಾಹಿತ್ಯ ಈ ಕ್ಷೇತ್ರಗಳಲ್ಲಿಯ ನಿಮ್ಮ ಪ್ರೇರಣೆಗಳು ವಿವಿಧವಾಗಿವೆಯೇ ಅಥವಾ ಒಂದೇ ಏನಾದರೂ ಪ್ರೇರಣೆ ಇದೆಯೋ?

ಏನು ಹೇಳಬೇಕು ನನಗೆ ತಿಳಿಯುವದಿಲ್ಲ.

ನನಗೆ ಏನು ಬೇಕಾಗಿದೆ ಅಂದರೆ ನಿಮ್ಮ ಸಾಹಿತ್ಯ ನಿರ್ಮಿತಿ ಒಂದು ಜಿಜ್ಞಾಸೆಯ ಭಾವನೆಯಿಂದ ಹುಟ್ಟಿದೆಯೋ? ಅಥವಾ ಆತ್ಮಶೋಧನೆಗಾಗಿ ಆಗಿದೆಯೋ? ಅಥವಾ ಸಮಾಜಪ್ರಬೋಧನೆಯ ಹವ್ಯಾಸದಿಂದ ಉಂಟಾಗಿದೆಯೇ? ಅಥವಾ (ಅದು ನಿಮ್ಮ ಕೇವಲ) ಚಳುವಳಿ ಸ್ವಭಾವದ ಪರಿಣಾಮವಿದೆಯೆಂದು ಹೇಳಬಹುದೋ?

ಬಹುಶಃ ಚಳವಳಿ ಸ್ವಭಾವವೆ ನಿಜವಾದದ್ದು ಅಂತ ಕಾಣ್ತದೆ.

ಮರಾಠಿಯಲ್ಲಿ ಹಾಸ್ಯ ಲೇಖನ ತುಂಬಾ ಪ್ರತಿಷ್ಠಿತವಾಗಿ ಬೆಳೆದು ಬಂದಿದೆ. ನೀವು ಇಂದಿನ ಶ್ರೇಷ್ಠ ಮರಾಠಿ ಹಾಸ್ಯ ಲೇಖಕರು. ಹಾಸ್ಯ ಲೇಖನ ಕುರಿತು ಏನನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೇಳಬಯಸುತ್ತೀರಿ?

ಹಾಸ್ಯ ಇದು ಮಾನವನ ಜೀವನಕ್ಕೆ ಅತ್ಯಂತ ಉಪಕಾರಕವಾದ ಒಂದು ಪ್ರವೃತ್ತಿ ಎಂದು ನನ್ನ ಭಾವನೆ. ಹಾಸ್ಯದಿಂದಲೇ ನಾವು ಜೀವನದಲ್ಲಿ ಯಾವದು ಮಹತ್ವದ್ದು ಮತ್ತು ಯಾವದು ಮೇಲ್ತೋರಿಕೆಗಷ್ಟೇ ನಿಜ ಎಂಬುದನ್ನು ಸಹಜವಾಗಿ ಗುರುತಿಸಲು ಸಾಧ್ಯ. ನನ್ನ ಮಟ್ಟಿಗೆ ಹಾಸ್ಯ ನನಗೆ ತಾರತಮ್ಯವನ್ನೂ ಕಲಿಸಿದೆ. ಆಯುಷ್ಯದಲ್ಲಿ ಯಾವುದಕ್ಕೆ ಮೊದಲು ಪ್ರಾಧಾನ್ಯ ಕೊಡಬೇಕಾದ್ದು ಎನ್ನುವದನ್ನು ನಾನು ಈ ಹಾಸ್ಯ-ಪ್ರವೃತ್ತಿಯಿಂದಲೇ ಕಲಿತಿದ್ದೇನೆ.

ಹಾಸ್ಯವಿದು ಶ್ರೇಷ್ಠ ಸಾಹಿತ್ಯವಾಗಲಾರದು ಎಂದು ಕೆಲ ಸಮೀಕ್ಷಕರ ಅಭಿಪ್ರಾಯವಿದೆ.

ಶ್ರೇಷ್ಠತೆಯ ಒರೆಗಲ್ಲು ಹಚ್ಚಬೇಕಾದರೆ 'ಮಹಾಕಾವ್ಯ'ದಲ್ಲಿಯೇ ಅದನ್ನು ಶೋಧಿಸಬೇಕು ಅಂತ ಅನಿಸುತ್ತದೆ. ಇಷ್ಟೇ ಅಲ್ಲ, ಶೋಕಾಂತಿಕೆಯೋ ಅಥವಾ ಸುಖಾಂತಿಕೆಯೋ ಯಾವದು ಹೆಚ್ಚು ಮಹತ್ವದ್ದು ಎಂಬ ವಿಧಾನಗಳು ನನಗಂತೂ ಹಾಸ್ಯಾಸ್ಪದವಾಗಿ ಕಾಣುತ್ತವೆ. ಸಮೀಕ್ಷರ ಈ ಅಭಿಪ್ರಾಯವು ಲೋಕೈಕ ಸಿದ್ಧಾಂತ (Universal Truth) ಎಂದು ಒಪ್ಪಿದರೆ ನೀವು ಡಿಕೆನ್ಸ ವುಡ್‌ಹೌಸರ ಹೆಸರುಗಳನ್ನು ಸಾಹಿತ್ಯದಿಂದ ಹೊರಗೇ ಹಾಕಬೇಕಾದೀತು. ಆದ್ದರಿಂದ ಹಾಸ್ಯ ಮತ್ತು ಮನುಷ್ಯತ್ವ ಇವುಗಳ ಸಂಬಂಧ ಇರುವ ವರೆಗೆ ಆ ಪ್ರಶ್ನೆಯೇ ಬರುವದಿಲ್ಲ. ಚಾರ್ಲಿಚಾಪ್ಲಿನ್‌ನ ಚಿತ್ರಪಟಗಳನ್ನು ನೀವು ನೋಡಿರಬಹುದು. ಅವುಗಳಲ್ಲಿ ಉದಾತ್ತತೆಯ ಭಾವನೆ ಇವೆಯೋ ಇಲ್ಲವೋ ಹೇಳ್ರಿ ನೋಡೋಣ. 'ಗೋಲ್ಡರಶ್' ಎಂಬ ಆವನದೊಂದು ಚಿತ್ರಪಟ ಇದೆ. ಅದರಲ್ಲಿ ಚಾರ್ಲಿ ಸ್ವತ: ಬೂಟುಗಳನ್ನು ತಿನ್ನುವ ಅಭಿನಯ ಮಾಡುತ್ತಾನೆ. ಆಗ ನಾವೆಲ್ಲರೂ ನಗುತ್ತೇವೆ. ಆದರೆ ಅದೇ ಕಾಲಕ್ಕೆ ಇಡೀ ಮಾನವನ ಹಸಿವೆಯ ಅರಿವು ನಮಗಾಗುತ್ತದೆ. ಜರ್ಮನ್ನರು ವುಡ್ ಹೌಸನನ್ನು ಕಾಡಿದ್ದರೂ ಕೂಡ ಆತನಿಗೆ " DO YOU HATE GERMANS" ಎಂದು ಕೇಳಿದಾಗ ಆತನು ' I DON'T HATE PLURALS' ಎಂದು ಉತ್ತರ ಕೊಡುತ್ತಾನೆ. ಈ ಜೀವನ ದೃಷ್ಟಿ ನನಗೆ ಮಹತ್ವದ್ದು ಎಂದೆನಿಸುತ್ತದೆ. ವ್ಯಕ್ತಿಗತ ನನ್ನ ವಿಷಯವಾಗಿಯೇ ಹೇಳಬೇಕಾದರೆ ನಾನು ಸಮೂಹವನ್ನು ರಂಜಿಸುವ ಕಲಾವಂತನಿದ್ದೇನೆ. ನನ್ನ ಲೇಖನ ಕೂಡ ನಾನು ಈ ಸಮೂಹಕ್ಕಾಗಿಯೇ ಬರೆಯುತ್ತಿದ್ದೇನೆ ಎಂದು ನನ್ನ ಭಾವನೆ. ಅಭಿನಯ ಸಂಗೀತ ಮುಂತಾದ ಪ್ರಯೋಗಕ್ಷಮ ಕಲೆಗಳಲ್ಲಿಯೇ ನನಗೆ ಹೆಚ್ಚು ರುಚಿ.

ಬಹುಶಃ ಎಲ್ಲ ಹಾಸ್ಯ ಲೇಖಕರು ತಮ್ಮದೇ ಆದ ಒಂದೊಂದು ಮಾನಸಪಾತ್ರಗಳನ್ನು ನಿರ್ಮಿಸಿದ್ದಾರೆ. ಉದಾಹರಣೆಗೆ ಕೋಲ್ಹಟಕರರ ಪಾಂಡೂ ತಾತ್ಯಾ, ಗಡಕರೀ ಅವರ ಬಾಳಕ ರಾಮು. ಚಿ. ವಿ. ಜೋಶಿಯವರ ಚಿಮಣರಾವ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವುಡ್‌ಹೌಸನ್ ಜೀವ್ಸ್; ಇಂಥ ಒಂದು ವ್ಯಕ್ತಿಯನ್ನು ನೀವ್ಯಾಕೆ ಚಿತ್ರಿಸಲಿಲ್ಲ?

ಇಂಥ ವ್ಯಕ್ತಿ ಚಿತ್ರಣದಿಂದ ಲೇಖಕನ ಮೇಲೆ ಒಂದು ತರದ ಒತ್ತಡ (PRESSURE) ಬರುತ್ತದೇನೋ ಎಂದು ನನ್ನ ಭಾವನೆ. ನನಗಂತೂ ಅಂಥ ಒತ್ತಡದ ಬರಹ ಸಾಧ್ಯವಿಲ್ಲ - ಹಾಗೆ ನೋಡಿದರೆ ನನ್ನ ಲೇಖನದಲ್ಲಿಯೂ ಕೂಡ ಓರ್ವ ಮಧ್ಯಮ ವರ್ಗದ ವ್ಯಕ್ತಿಯು ನಿಮಗೆ ಕಾಣಬಹುದು ಅವನೂ ಕೂಡ ಕೊಂಚ ಬಿಮಣರಾವನ ಹಾಗೆಯೇ ಇದ್ದಾನೆ. ನಾನು ಹೆಚ್ಚಾಗಿ ಪ್ರಥಮ ಪುರುಷ ಏಕವಚನದ ಭಾಷೆಯಲ್ಲಿ ಬರೆಯಲು ಈ ಸಾಮಾನ್ಯ ಮಧ್ಯಮವರ್ಗೀಯ ಮನುಷ್ಯನ ಭೂಮಿಕೆಯೇ ಕಾರಣವೆನ್ನಬೇಕು.

ನಿಮ್ಮ ಹಾಸ್ಯ ಲೇಖನದಲ್ಲಿ ಎಲ್ಲಿಯೂ ಅಸಭ್ಯತನದ ಲಕ್ಷಣ (Sign of vulgarity) ಅಥವಾ ಚಾರಿತ್ರ್ಯಹನನದ ದುಷ್ಟ ಪ್ರವೃತ್ತಿಯು ಕಾಣೋದಿಲ್ಲ. ಅದು ಹ್ಯಾಗೆ?

ಚಾರಿತ್ರ್ಯಹನನ ಇದು ಮೂಲತಃ ಕುರೂಪವಾಗಿದೆ: ಕುತ್ಸಿತವಾಗಿದೆ. ಅದು ಕೇವಲ ಅಂಜುಬುರುಕತನದ ಹಲ್ಲೆ ಅಂತ ಅನಿಸುತ್ತದೆ. ನಾನು ಪ್ರವೃತ್ತಿಯ ಮೇಲೆ ದಾಳಿ ಮಾಡಿದ್ದೇನೆ, ವ್ಯಕ್ತಿಯಮೇಲೆ ಅಲ್ಲ. ನಾನೆಂದಿಗೂ ಮನುಷ್ಯನನ್ನು ದ್ವೇಷಿಸಲಿಲ್ಲ, ದ್ವೇಷಿಸಲಾರೆ.

ತೌಲನಿಕವಾಗಿ ಪಾಶ್ಚಿಮಾತ್ಯ ಹಾಸ್ಯ ಸಾಹಿತ್ಯ ನಮ್ಮಕಿಂತಲೂ ಹೆಚ್ಚು ಪ್ರಗಲ್ಭವಿದೆ ಎಂದು ಹೇಳುತ್ತಾರೆ. ನಿಮ್ಮ ಅನುಭವವೇನು?

ಹೌದು ನಾವು ಒಪ್ಪಲೇಬೇಕು- ಇಂಗ್ಲಂಡಿನಂಥ ಚಿಕ್ಕ ನಡುಗಡ್ಡೆಯಲ್ಲಿ ಎಷ್ಟು ಶ್ರೇಷ್ಠವಾದ ಹಾಸ್ಯ-ಸಾಹಿತ್ಯ ನಿರ್ಮಾಣವಾಗಿದೆ ಎಂದು ನೋಡಿದರೆ ಆಶ್ಚರ್ಯವೆನಿಸುತ್ತದೆ. ನಾನು PUNCH' ಈ ಹಾಸ್ಯ ನಿಯತಕಾಲಿಕೆಯನ್ನು ಇಂದಿಗೂ ತಪ್ಪದೆ ಓದುತ್ತೇನೆ. ತಮ್ಮನ್ನೇ ತಾವು ಹಾಸ್ಯದಿಂದ ಟೀಕಿಸುವ ಸಾಹೇಬರ ಪ್ರವೃತ್ತಿಯು ನಿಜವಾಗಿಯೂ ವಿಸ್ಮಯಪೂರಿತವಾಗಿದೆ. ತಮ್ಮನ್ನು ತಾವೇ ಅಂಡರ್‌ಸ್ಟೇಟಮೆಂಟ್ ಮಾಡಿಕೊಳ್ಳುವ ಅವರ ಸಾಮರ್ಥ್ಯವು ಅಷ್ಟೇ ಅದ್ಭುತವಾಗಿದೆ. ಅಮೇರಿಕನ್ ಜೀವನ ಮಾತ್ರ ಸಾಕಷ್ಟು ಮುಕ್ತವಾಗಿದ್ದರೂ ಕೂಡ ಪ್ರತಿಯೊಂದು ವಸ್ತುವಿನ ಕಡೆಗೆ ಅವರು ವ್ಯಾಪಾರೀ (Commercial) ದೃಷ್ಟಿಯಿಂದ ನೋಡುತ್ತಾರೇನೋ ಎಂದೆನಿಸುತ್ತದೆ. ಪ್ರತಿಯೊಂದು ಮಾತು ಲೋಕಪ್ರಿಯ ಮಾಡುವ ಅವರ ಹವ್ಯಾಸವು ಎದ್ದು ಕಾಣುತ್ತದೆ. ಮರ್ಡರ ಪಾಪ್ಯುಲರ್ ಆಗುತ್ತಿದೆ ಅಂದರೆ ಮರ್ಡರ ಮಾಡೋಣ - ಈ ಪ್ರವೃತ್ತಿಯು ಅಲ್ಲಿ ಕಾಣುತ್ತದೆ. ಆದ್ದರಿಂದ ಅವರ ಹಾಸ್ಯ - ಸಾಹಿತ್ಯಕ್ಕೆ ಮರ್ಯಾದೆ ಉಂಟಾಗಿದೆ. ಆ ದೃಷ್ಟಿಯಿಂದ ವುಡ್‌ಹೌಸನನ್ನೇ ನೋಡಿ. ಇಡೀ ಆಯುಷ್ಯವನ್ನು ಅಮೇರಿಕೆಯಲ್ಲಿ ಕಳೆದರೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಂತರ್ಬಾಹ್ಯವಾಗಿ ಅವನು ಇಂಗ್ರಜನಾಗಿಯೇ ಉಳಿದನು.

ನಿಮ್ಮ ಹಾಸ್ಯ ಲೇಖನಗಳಲ್ಲಿ ಮುಖ್ಯವಾಗಿ ಮಧ್ಯಮ ವರ್ಗದ ಜೀವನವೇ ಚಿತ್ರಿತವಾಗುತ್ತದೆ ಹೌದೇ?

ಹೌದು . ನನ್ನ ಇಡೀ ಜೀವನವೇ ಮಧ್ಯಮ ವರ್ಗದ ಜನರ ಸಂಸ್ಕಾರಗಳಲ್ಲಿ ಬೆಳೆದು ಬಂದದ್ದರಿಂದ ಅದು ಅಪರಿಹಾರ್ಯವಾಗಿದೆ. ನಾನು ಎಷ್ಟೋ ಸಲ ನಗೆಚಾಟಿಕೆಯಿಂದ ಹೇಳುತ್ತೇನೆ. ಯಾರ ಯಾರ ಮೈಯಲ್ಲೋ ಯಾವ ಯಾವದೋ ತರಹದ ರಕ್ತ ಹರಿಯುತ್ತದಂತೆ. ಆದರೆ ನನ್ನ ಧಮನಿಗಳಲ್ಲಿ ಮಾತ್ರ ಸದೈವ ಕಾರಕೂನನ ಕರಿಮಸಿ ಹರಿಯುತ್ತದೆ. ಕಾರಕೂನೀ ಸಂಸ್ಕಾರಗಳಲ್ಲಿಯೇ ನಾನು ಬೆಳೆದೆ. ತಮ್ಮ ಮಾನಮರ್ಯಾದೆಗಳನ್ನು ಕಾಪಾಡುತ್ತ ಇಡೀ ಆಯುಷ್ಯವನ್ನು ಯಾರಿಗಾದರೂ ಅಂಜುತ್ತ ಬಾಳುವ ಈ ಸಮಾಜದಲ್ಲಿ ನಾ ಹುಟ್ಟಿ ಬೆಳೆದೆ. ಆದ್ದರಿಂದ ನನ್ನ ಸಾಹಿತ್ಯದಲ್ಲಿ ಬಂದ ಪಾತ್ರಗಳು ಕೆಲವರಿಗೆ ಪುಕ್ಕ ಪಾತ್ರಗಳೆಂದು ಅನಿಸಿದೆ, ಕೆಲವರಿಗೆ ಅಸಹ್ಯವೆನಿಸಿದೆ, ಕೆಲವರಿಗೆ ದುರ್ಬಲ ರೂಪವಾಗಿ ಕಾಣಿಸಿವೆ. ಅದಕ್ಕೇನೂ ಉಪಾಯವಿಲ್ಲ.

ಈ ಮೊದಲು ಸಾಹಿತ್ಯದ ಶ್ರೇಷ್ಠತೆಯ ಕುರಿತು ವಿಷಯ ಬಂತು. ಶ್ರೇಷ್ಠ ಸಾಹಿತ್ಯದಲ್ಲಿ ವೈಶ್ವಿಕ ಭಾವನೆ (Universality) ಯ ಕೆಲ ಅಂಶಗಳನ್ನು ಕಾಣುತ್ತೇವೆ, ನಿಮ್ಮ ಹಾಸ್ಯ ಸಾಹಿತ್ಯದಲ್ಲಿ ಈ ವೈಶ್ವಿಕ ಭಾವ ಇದೆ ಎಂದು ಅನಿಸುತ್ತದೆ. ಇಲ್ಲದಿದ್ದರೆ ನಿಮ್ಮ ಪಾತ್ರಗಳು ವಾಚಕರನ್ನು ನಗೆಸುತ್ತಿರುವಾಗಲೇ ಕಣ್ಣ - ಹನಿಗಳನ್ನೂ ತರಿಸುತ್ತವೆ. ಅವುಗಳನ್ನು ಹೇಗೆ ಅರ್ಥೈಸಬಹುದು?

ನನ್ನ ಲೇಖನದಲ್ಲಿ ಪಾತ್ರ, ಪ್ರಸಂಗ, ಭಾಷೆ ಇವೆಲ್ಲವುಗಳನ್ನು ನಾನು ಪ್ರಾಸಂಗಿಕ (Incidental) ವೆಂದು ಭಾವಿಸಿದ್ದೇನೆ. ನನಗೆ ಮನುಷ್ಯನು ಎಲ್ಲಕ್ಕೂ ಮಹತ್ವದವನಾಗಿದ್ದಾನೆ. ಆಕ್ಸಫರ್ಡ ಯುನಿವ್ಹರ್ಸಿಟಿಯಲ್ಲಿ ಒಬ್ಬ ಪ್ರಾಧ್ಯಾಪಕರು ಶೇಕ್ಸಪೀಯರನ ನಾಟಕ ಕಲಿಸುತ್ತಿದ್ದರು. ಎದುರಿಗೆ ಒಬ್ಬ ಜಪಾನೀ ವಿದ್ಯಾರ್ಥಿ ತಲ್ಲೀನನಾಗಿ ಕೇಳುತ್ತಲಿದ್ದ. ಪ್ರಾಧ್ಯಾಪಕರು ಆತನಿಗೆ ಕೇಳಿದರಂತೆ; ''ನಿನಗೆ ಶೇಕ್ಸಪೀಯರ ಅರ್ಥವಾಗುತ್ತಾನೆಯೋ? '' - ಆಗ ಆ ಜಪಾನೀ ವಿದ್ಯಾರ್ಥಿ ಹೇಳಿದನಂತೆ. " Because all his characters are Japanese" - ಇದುವೇ ''Universality' ಅಂತ ನಾನು ತಿಳಿಯುತ್ತೇನೆ. ಜಗತ್ತಿನಲ್ಲಿ ಎಲ್ಲಿ ಹೋದರೂ ಮನುಷ್ಯ ತನ್ನಲ್ಲಿಯ ಸ್ವಾರ್ಥ, ಬುದ್ಧಿವಂತಿಕೆ ನೀಚತನ ಈ ಗುಣಾವಗುಣಗಳನ್ನು ಜೊತೆಗೇ ಸಮಾನವಾಗಿಯೇ ಬೆಳೆದಿದ್ದಾನೆ ಎಂದು ತೋರುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬರಹಗಾರನ ಮೇಲೆ ಒಮ್ಮೆ "ಹಾಸ್ಯ - ಬರಹಗಾರ" ಅಂತಾ ಮುದ್ರೆ ಬಿದ್ದರೆ ಅವನ ಗಂಭೀರ ಲೇಖನಗಳನ್ನೂ ಕೂಡ ಜನ ಹಗುರಾಗಿ (lightly) ತಗೊಳ್ಳತಾರೆ. ನಿಮ್ಮ ಅನುಭವವೇನು?

ನೀವು ಹೇಳುವದೂ ನಿಜವೆ. ಆದರೆ ನನ್ನ ಅನುಭವ ಮಾತ್ರ ಬೇರೆ ಇದೆ. ನಾನು "ಗಡಕರೀ ದರ್ಶನ" ಎಂಬ ಕಾರ್ಯಕ್ರಮ ಮಾಡುತ್ತೇನೆ. ಅದು ಗಂಭೀರ ಕಾರ್ಯಕ್ರಮ ಇದೆ. ಆದರೂ ಜನರೂ ಮೂರು ಗಂಟೆ ಗಂಭೀರವಾಗಿ ಕೇಳುತ್ತಾರೆ. ನನ್ನ ಇತ್ತೀಚಿನ ನಾಟಕ (ಏಕ ಝುಂಜ ವಾರ್‍ಯಾಶಿ) ಕೂಡ ಗಂಭೀರವಾಗಿದೆ. - ಆದರೆ ನೀವು ಹೇಳಿದ ಹಾಗೆ ಆಚಾರ್ಯ ಅತ್ರೆ ಮತ್ತು ಚಿಂ. ವಿ. ಜೋಶಿಯವರ ಬಗ್ಗೆ ಆ ಅನುಭವ ಬಂತು. ಅತ್ರೆಯವರು ಶೋಕ ಸಭೆಯಲ್ಲಿ ಮಾತನಾಡಲು ನಿಂತರೂ ಕೂಡ ಜನರು ನಗಲು ಆರಂಭಿಸುತ್ತಿದ್ದರು. ಈ ಪ್ರಕಾರಕ್ಕೆ ತಾವು ಲೇಖಕರೂ ಕೂಡ ಹೊಣೆಗಾರರಾಗಿದ್ದೇವೆ. ಸುಲಭವಾಗಿ ಸಿಗುವ ಲೋಕಪ್ರಿಯತೆಗೆ (cheap popularity) ನಾವು ಬಲಿ ಬೀಳುತ್ತೇವೆ.

ನಿಮ್ಮ ಗದ್ಯದಲ್ಲಿಯ ವಿಡಂಬನೆಗಳನ್ನು ಓದಿದ ಮೇಲೆ ನೀವು ಕವಿತೆಗಳ ವಿಡಂಬನೆಗಳನ್ನು ಉತ್ತಮವಾಗಿ ಬರೆಯಬಹುದಿತ್ತು ಅಂತಾ ಅನಿಸುತ್ತಿದೆ. ಹಾಗೇನಾದರೂ ಪ್ರಯತ್ನ ಮಾಡಿದಿರಾ?

ನಿಜ ಹೇಳಬೇಕಾದರೆ ಎಲ್ಲ (FORM) ನಮೂನೆಗಳಲ್ಲಿ ನನಗೆ ಕವಿತೆಯ ಪ್ರಕಾರವು ಹೆಚ್ಚು ಹಿಡಿಸುತ್ತದೆ: ಹೆಚ್ಚು ಪ್ರಿಯ ಕೂಡ. ಕಾಲೇಜಿದಲ್ಲಿದ್ದಾಗ ಕೆಲವು ವಿಡಂಬನದ ಕವಿತೆಗಳನ್ನು ಬರೆದಿದ್ದೆ. ಆಚಾರ್ಯ ಅತ್ರೆ ಅವರು, ಆಗ ನಮ್ಮ ಆದರ್ಶರು. ಅವರ "ಝೋಂಡೂಚಿ ಫುಲೆ" ಎಂಬ ವಿಡಂಬನೆ ಕವಿತಾ - ಸಂಗ್ರಹವು ಇಂದಿಗೂ ಅಷ್ಟೇ ಲೋಕಪ್ರಿಯವಾಗಿದೆ. ನಾನು ಮರಾಠಿ ನವ್ಯ ಕವಿಗಳ ಕುರಿತು ವಿಡಂಬನ ಮಾಡಿದ್ದೇನೆ. "ಶಾಂಭವೀ ಏಕ ಫೇಣೀ" ಇದು ಆಗ ತುಂಬಾ ಲೋಕಪ್ರಿಯವಾಯಿತು.

ಅದು ಪು.ಶಿ. ರೇಗೆಯವರ ಲೇಖನದ ವಿಡಂಬನೆ ಅಲ್ಲವೇ?

ಹೌದು.

ಇಂದಿನ ಯಾವ ಹಾಸ್ಯ ಲೇಖಕರು ನಿಮಗೆ ಹೆಚ್ಚು ಹೊಳೆವ ಉದಯೋನ್ಮುಖ (PROMISING) ರೆಂದು ಅನಿಸುತ್ತಾರೆ?

ಇಂದು ಸಾಕಷ್ಟು ಹೊಸ ಲೇಖಕರು ಈ ಕ್ಷೇತ್ರದಲ್ಲಿ ಮುಂದೆ ಬಂದಿದ್ದಾರೆ. ಅದರಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನನಗೆ ಜಯವಂತ ದಳವಿಯವರು ಹೆಚ್ಚು ಎದ್ದು ಕಾಣುವವರಾಗಿದ್ದಾರೆ. (OUT STANDING) ಎಂದು ಹೇಳಬಹುದು. 'ಸಾರೇ ಪ್ರವಾಸೀ ಘಡೀಚೆ' (ನಾವೆಲ್ಲರೂ ಅಲ್ಪಕಾಲದ ಯಾತ್ರಿಕರು) ಇದು ಅವರ ಉತ್ಕೃಷ್ಟ ಕೃತಿ. ಅವರು ''ಠಣ್ ಠಣ್ ಪಾಳ'' ಈ ಕಾವ್ಯ ನಾಮ (PEN NAME) ದಲ್ಲಿ ಬರೆದ ಹಾಸ್ಯ ಲೇಖಗಳು ಸರ್ವೋತ್ಕೃಷ್ಟ ಹಾಸ್ಯ ಲೇಖನಗಳಲ್ಲಿ ಒಂದು ಎಂದು ಹೇಳಬಹುದು. ಸೂಕ್ಷ್ಮ ಮತ್ತು ಸುಪ್ರತಿಭೆಯ ದಳವಿಯವರು ಮರಾಠಿ ಹಾಸ್ಯ ಸಾಹಿತ್ಯವನ್ನು ನಿಃಸಂದೇಹವಾಗಿ ಸಮೃದ್ಧಗೊಳಿಸಿದ್ದಾರೆ.

ನೀವು ಹಾಸ್ಯಲೇಖನದಿಂದ ನಾಟ್ಯ ಲೇಖನದ ಕಡೆಗೆ ಯಾವಾಗ ಹೊರಳಿದಿರಿ?

''ತುಕಾ ಮ್ಹಣೆ ಆತಾ'' ಇದು ನನ್ನ ಮೊದಲನೆಯ ನಾಟಕ. ೧೯೪೮ರಲ್ಲಿ ರಂಗಭೂಮಿಯ ಮೇಲೆ ಬಂತು. ಅದು ಹಾಸ್ಯಪ್ರಧಾನವಿರದಿದ್ದರೂ ಅಷ್ಟು ಯಶಸ್ವಿ ಆಗಲಿಲ್ಲ.

ನಿಮಗೆ ಕೀರ್ತಿ ತಂದುಕೊಟ್ಟ ನಾಟಕ ಅಂದರೆ ''ತುಝೇ ಆಹೆ ತುಝ ಪಾಶೀ'' ಅಲ್ಲವೇ?

ಹೌದು ಆದರೆ ಅದಕ್ಕೂ ಮೊದಲು ಎರಡು ನಾಟಕಗಳು ರಂಗಭೂಮಿಯ ಮೇಲೆ ಬಂದವು. ಒಂದು 'ಅಮ್ಮಲದಾರ' ಮತ್ತೊಂದು 'ಭಾಗ್ಯವಾನ'.

'ಅಮ್ಮಲದಾರ' ನಾಟಕವು ತುಂಬಾ ಲೋಕಪ್ರಿಯ ಆಯಿತು ಅಂತ ಕಾಣುತದೆ. ಅದೂ ಪರಕೀಯ ನಾಟಕದ ರೂಪಾಂತರವಲ್ಲವೇ?

ಹೌದು ''ಅಮ್ಮಲದಾರ' ಇದು ನಿಕೋಲಾಯ ಗೊಗೊಲ ಈತನ ಪಾಶ್ಚಾತ್ಯನಾಟಕದ ಮರಾಠಿ ರೂಪಾಂತರ. ಅದು ಲೋಕಪ್ರಿಯ ಆಯಿತು. ಅದರ ಲೋಕಪ್ರಿಯತೆಯ ಕಾರಣ ಹೇಳುವದಾದರೆ ಅದರಲ್ಲಿಯ DIALOGUE (ಸಂವಾದ) ಮತ್ತು HUMOUR (ವಿನೋದ) ಅತ್ಯಂತ ಹೃದ್ಯವಾಗಿ ಪ್ರಕಟವಾಗಿವೆ. ಇವು ಆ ನಾಟಕದ ಲೋಕಪ್ರಿಯತೆಯ ಮುಖ್ಯ ಘಟಕಗಳೆಂದು ಅನ್ನಬಹುದು. ಅದಕ್ಕೂ ಹೆಚ್ಚು ಮಹತ್ವದ್ದು ಅಂತ ಹೇಳುವದಾದರೆ ಅದರಲ್ಲಿಯ ವಾಸ್ತವತೆ. ಲಂಚ ತೆಗೆದುಕೊಳ್ಳುವ ಪ್ರವೃತ್ತಿಯನ್ನು ಎಲ್ಲ ಸಮಾಜದಲ್ಲಿ ನಾವು ನೋಡುತ್ತೇವೆ. ಈ ಪ್ರವೃತ್ತಿಯ ಕುರಿತು ಎಲ್ಲ ಭಾಷೆಗಳಲ್ಲಿ ಸಾಹಿತ್ಯ ಕೃತಿಗಳು ಇವೆ, ಇಲ್ಲ ಅಂತ ಅಲ್ಲ. ಆದರೆ ಈ ನಾಟಕದಲ್ಲಿ ಜನರಿಗೆ - ಅದರಲ್ಲಿ ವಿಶೇಷವಾಗಿ ಮರಾಠಿ ಪ್ರೇಕ್ಷಕರಿಗೆ ತಮ್ಮ ಸಮಾಜ ಜೀವನದ ಒಂದು ಉತ್ಕಟ ಪ್ರತಿಬಿಂಬ ಅದರಲ್ಲಿ ಕಾಣಿಸಿತು. ಅದ್ದರಿಂದ ಅದು ಲೋಕಪ್ರಿಯವಾಯಿತು. ಇಂಥ ಪ್ರವೃತ್ತಿಯ ದಂಭ ಸ್ಫೋಟವಾದಾಗ ಸಾಮಾನ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮನುಷ್ಯನಿಗೆ ಸಮಾಧಾನವಾಗುತ್ತದೆ. ನಾನು 'ಅವರೊಳ'ಗಿನವಲ್ಲ. ಈ ಆತ್ಮಸಮಾಧಾನ ಅವರಿಗೆ ಅದರಲ್ಲಿ ಕಾಣಿಸುತ್ತಿರಬಹುದೇನೋ ಅಂತ ನನಗೆ ಅನಿಸುತ್ತದೆ. ಆದ್ದರಿಂದ ಈ ನಾಟಕ ಪ್ರಯೋಗ ತುಂಬಾ ಯಶಸ್ವಿಯಾಯಿತು.

ಆದರೆ ನಿಮ್ಮ ಎಲ್ಲ ನಾಟಕಗಳಲ್ಲಿ 'ತುಝೇ ಆಹೆ ತುಝು ಪಾಶೀ' ಈ ನಾಟಕ ಎಲ್ಲಕ್ಕೂ ಹೆಚ್ಚು ಲೋಕಪ್ರಿಯವಾಯಿತು. ಇದಿಷ್ಟೇ ಅಲ್ಲ, ಅದು ಐತಿಹಾಸಿಕ ಮತ್ತು ವಾಙ್ಮಯದ ದೃಷ್ಟಿಯಿಂದಲೂ ಕೂಡ ಮರಾಠಿ ರಂಗಭೂಮಿ ಮೇಲೆ ಒಂದು ಮಹತ್ವದ ಪ್ರಯೋಗವೆಂದು ಮರಾಠಿ ಸಮೀಕ್ಷಕರು ಹೇಳಿದ್ದಾರೆ. ನೀವು ಈ ನಾಟಕ ಬರೆದದ್ದು ಯಾವ ಪ್ರೇರಣೆಯಿಂದ?

ನನ್ನ ಎಲ್ಲ ನಾಟಕಗಳಲ್ಲಿ ಈ ನಾಟಕ ಹೆಚ್ಚು ಲೋಕಪ್ರಿಯತೆ ಗಳಿಸಿದೆ, ಇದು ನಿಜ. ಐತಿಹಾಸಿಕ ಮತ್ತು ವಾಙ್ಮಯದ ದೃಷ್ಟಿಯಿಂದಲೂ ಕೂಡ ಈ ನಾಟಕಕ್ಕೆ ಒಂದು ಸ್ಥಾನವಿದೆಂದು ಅಭ್ಯಾಸಕರು ಹೇಳಿದ್ದಾರೆ. ಭಾರತದ ಎಲ್ಲ ಪ್ರಮುಖ ಭಾಷೆಗಳಲ್ಲಿ ಈ ನಾಟಕ ರಂಗಭೂಮಿಯ ಮೇಲೆ ಬಂತು. ೨೦-೨೫ ವರ್ಷಗಳ ಹಿಂದೆಯೇ ಕರ್ನಾಟಕದಲ್ಲಿ ಒಂದು ಹವ್ಯಾಸೀ ತಂಡ ಈ ನನ್ನ ನಾಟಕದ ೨೫ ಪ್ರಯೋಗ ಮಾಡಿದೆ. ಈ ಬಗ್ಗೆ ನಾನು ಆಗಲೇ ಹೇಳಿದ್ದೇನೆ.

ಇದರಲ್ಲಿ ನೀವು ಗಾಂಧಿವಾದೀ ತತ್ವದ ವಿಡಂಬನೆ ಮಾಡಿದ್ದೀರಿ ಅಂತ ಟೀಕೆ ಆಯಿತು.

ಟೀಕೆ ಆಯಿತು ಸರಿ. ಆದರೆ ಅದರಲ್ಲಿ ಗಾಂಧೀ ತತ್ತ್ವದ ವಿಡಂಬನೆ ಇಲ್ಲ- ಅಂತ ಅಭ್ಯಾಸಕರಿಗೆ ಗೊತ್ತಾಗಬಹುದು. ಅದೊಂದು ಪ್ರವೃತ್ತಿಯ ವಿಡಂಬನೆ ಹೊರ್ತು ತತ್ತ್ವ ವಿಡಂಬನೆ ಅಲ್ಲ. ಮಹಾರಾಷ್ಟ್ರದಲ್ಲಿಯ ಕೆಲವು ಪ್ರಮುಖ ಗಾಂಧೀವಾದಿ ಆಚಾರ್ಯರು ಸೌಂದರ್ಯದ ಕಡೆಗೆ ನೋಡುವ ತಪ್ಪು ದೃಷ್ಟಿಯ ವಿಡಂಬನೆಯನ್ನು ಈ ನಾಟಕದಲ್ಲಿ ನಾನು ಮಾಡಿದ್ದೇನೆ. ಗಾಂಧೀವಾದಿ ಆಚಾರ್ಯರು ಆಧುನಿಕತೆಯ ಬಗ್ಗೆ ತಾಳಿರುವ ಕಲ್ಪನೆ ಹೇಗೆ ಹಾಸ್ಯಾಸ್ಪದವಾಗಿದೆ ಎಂಬುದನ್ನು ನಾನು ಅಲ್ಲಿ ತೋರಿಸುವ ಪ್ರಯತ್ನಮಾಡಿದ್ದೇನೆ. ಈ ನಾಟಕದಲ್ಲಿಯ ಪಾತ್ರಗಳು ಸಾಂಕೇತಿಕವಾಗಿ ಬಂದಿವೆ. ಜೀವನದಲ್ಲಿ ಸೌಂದರ್ಯ ಭಾವನೆಗೆ ಒಂದು ಮಹತ್ತರ ಮೌಲ್ಯ ಉಂಟು. ಇದರ ಅರಿಮೆಯೇ ಗಾಂಧಿವಾದಿ ಆಚಾರ್ಯರಿಗೆ ಇದ್ದಿದ್ದಿಲ್ಲ. ಸ್ವಾತಂತ್ರ್ಯದನಂತರ ವಿಶೇಷವಾಗಿ ಮಹಾರಾಷ್ಟ್ರದಲ್ಲಿಯ ಗಾಂಧೀವಾದಿ ಅಥವಾ ವಿಶೇಷವಾಗಿ ಮಹಾರಾಷ್ಟ್ರದಲ್ಲಿಯ ಗಾಂಧೀವಾದಿ ಅಥವಾ ಸರ್ವೋದಯವಾದಿ ಮುಖಂಡರು ತ್ಯಾಗ, ಸ್ವಾವಲಂಬನ, ಮೌನ, ಉಪವಾಸ, ಸೇವೆ ಈ ವಿಚಾರಣೆಗಳಿಗೆ ಬಹಳ ವಿಪರೀತವಾದ ಅರ್ಥ ಕೊಡುತ್ತಿದ್ದಾರೆ, ಎಂದು ನನಗೆ ತೀವ್ರವಾಗಿ ಅನಿಸುತ್ತಿತ್ತು. ರಸಿಕತೆ, ಸೌಂದರ್ಯದ ಆಸ್ವಾದ, ಮುಕ್ತ ಜೀವನ ಈ ಬಗ್ಗೆ ಈ ಜನರಲ್ಲಿ ಒಂದು ಬಗೆಯ ಉದಾಸೀನತೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇತ್ತು. ಸೌಂದರ್ಯವೆಂದರೆ ಅವರ ದೃಷ್ಟಿಯಲ್ಲಿ ಅದೊಂದು ಚೈನಿಯ ವಸ್ತು. ವೇಷಭೂಷಣ, ತಿಂಡಿ ತಿನಿಸು, ಸ್ತ್ರೀ ಪುರುಷ ಸಂಬಂಧ ಈ ಬಗ್ಗೆ ಅವರು ತಾಳಿದ ಆ ಸಂಕುಚಿತ ಭಾವನೆ ನನ್ನನ್ನು ಅಸ್ವಸ್ಥಗೊಳಿಸುತ್ತಿತ್ತು. ಸೌಂದರ್ಯವೆಂದರೆ ಕೇವಲ ಅದೊಂದು ಅಲಂಕರಣವಲ್ಲ. ಅದಕ್ಕೂ ಕೂಡ ಸತ್ಯ ಅಹಿಂಸೆ ಅಷ್ಟೇ ಗುರುತರ ಮೌಲ್ಯವಿದೆ. ಇದನ್ನೇ ಒತ್ತಿ ಹೇಳಬೇಕೆಂದು ನನಗೆನಿಸತೊಡಗಿತು. ಅಲ್ಲದೆ ಆಚಾರ್ಯರ ಈ ಭಾವನೆ ಅದಾವ ಮಟ್ಟಕ್ಕಿಳಿದಿದ್ದವು ಎನ್ನುವದಕ್ಕೆ ನನ್ನದೇ ಆದ ಒಂದು ಅನುಭವ ಹೇಳುತ್ತೇನೆ. - ನಾನು ಆಗ ಒಂದು ಗಾಂಧೀ ಆಶ್ರಮಕ್ಕೆ ಹೋಗಿದ್ದೆ. ಅಲ್ಲಿಯ ಆಚಾರ್ಯರಿಗೆ ಕೇಳಿದೆ, "ಈ ನಿಮ್ಮ ಆಶ್ರಯದಲ್ಲಿ ಸಾಕಷ್ಟು ಭೂಮಿ ಇದೆ, ಅಲ್ಲಿ ಹೂವಿನ ಗಿಡಗಳನ್ನೇಕೆ - ಹಚ್ಚುವದಿಲ್ಲ?" ಅದಕ್ಕವರು ಏನು ಹೇಳಿದರು ಗೊತ್ತೆ? "ಹೂಗಳ ಉಪಯೋಗವೇನು? ಅಲ್ಲದೆ ಹೂವುಗಳು ಕಾಮುಕ ವೃತ್ತಿಗೆ ಉತ್ತೇಜನ ಕೊಡುತ್ತವೆ. ಅದ್ದರಿಂದ ಆಶ್ರಯದಲ್ಲಿ ನಾವು ಹೂಬಳ್ಳಿಗಳನ್ನು ಹಚ್ಚುವದಿಲ್ಲ." ಎಂದರು. - ಹೂಗಳಲ್ಲಿಯ ಮುಗ್ಧತೆಯನ್ನು ಆಸ್ವಾದಿಸದಿದ್ದವರಿಗೆ ಜಗದೊಳಗಿನ ಮುಗ್ಧತೆ ಹೇಗೆ ಕಾಣಸಬೇಕು? ಈ ಕಲ್ಪನೆಯಿಂದಲೇ ನಾನು ಅತ್ಯಂತ ವ್ಯಥಿತನಾದೆ. ನಾನೇನೂ ಉತ್ತರ ಕೊಡಲಿಲ್ಲ. ಆದರೆ ನನಗನಿಸಿತು. ಈ ಜನ ಉಪಯುಕ್ತತೆಯ ಬೆನ್ನುಹತ್ತಿ ಸೌಂದರ್ಯದ ಅಭಿರುಚಿಯನ್ನೂ - ಮುಖ್ಯವಾಗಿ ರಸಿಕತೆಯನ್ನೂ ಕಳೆದುಕೊಳ್ಳುತ್ತಿದ್ದಾರಲ್ಲ ಎಂದೆನ್ನ ಮನ ಮರುಗಿತು. ಕಾಮ, ಕ್ರೋಧ ಗೆಲ್ಲುವ ಬಗ್ಗೆ ಮಾತನಾಡುವವರು ಕೂಡ ಹೇಗೆ ಬಕ-ಧ್ಯಾನಿಗಳಾಗಿರುತ್ತಾರೆ ಎಂಬುದನ್ನೂ ನೋಡುತ್ತಿದ್ದೆ. ಯಾವ ಕ್ಷೇತ್ರದಲ್ಲಿಯೂ ದಂಭವನ್ನು ಕಂಡರೆ ನನ್ನ ಮನ ಬಂಡೇಳುತ್ತದೆ. ನನ್ನ ಈ ನಾಟಕದ ಪ್ರೇರಣೆಯೂ ಇದೇ ಎಂದು ಕೇಳಬಹುದು.

ಈ ನಾಟಕದಲ್ಲಿ ಒಂದು ಕಡೆಗೆ ಗಂಭೀರ ಕರುಣ ಭಾವನೆ ಇದೆ. ಮತ್ತು ನಾಟಕದಲ್ಲಿ ಒಂದು ಕಡೆಗೆ ವಿನೋದ ವಿಡಂಬನ ಭಾವನೆಗಳು ಬರುತ್ತವೆ. ಆದರೆ ನಿಮ್ಮಲ್ಲಿಯ ನಾಟಕಕಾರ ಹಾಸ್ಯ ಲೇಖಕನೊಂದಿಗೆ ಹೊಂದಿಕೊಳ್ಳುವದಿಲ್ಲ ಅಂತಾ ಅನಿಸುತ್ತದೆ.

ನೀವು ಹೇಳೋದು ನಿಜ. ಈ ನಾಟಕದಲ್ಲಿ ಕೆಲವು ಸಹಾನುಭೂತಿಯ ಬೀಜಗಳನ್ನು ನಾನು ಇಟ್ಟಿದೇನೆ. ಈ ನಾಟಕದಲ್ಲಿಯ ಆಚಾರ್ಯರಿಗೆ ಜನರು ತಮಗೆ ಸಹಾನುಭೂತಿ ತೋರಿಸುತ್ತಾರೆ, ಇದೇ ಒಂದು ಆಘಾತ ಅವರ ಭಾವನೆಗೆ ಆಗುತ್ತದೇನೋ. ಹಾಗೇ ನಾನು ಚಿತ್ರಿಸಿದ್ದೇನೆ. ಆ ಅಹಂಕಾರಿ ಆಚಾರ್ಯರಿಗೆ ಜನರು ದಯೆ ತೋರಿಸುತ್ತಾರೆ, ಇದರದೇ ಸಿಟ್ಟು. ಆದ್ದರಿಂದ ಒಂದು ಕಡೆಗೆ ಆ ಪಾತ್ರ ಹಾಸ್ಯ ವಿಸ್ಮಯ ಮಿಶ್ರಿತವೂ ಆಗುತ್ತದೆ. ಇನ್ನೊಂದು ದೃಷ್ಟಿಯಿಂದ ಅದರ ಬಗ್ಗೆ ಮನಸ್ಸಿನಲ್ಲಿ ಕರುಣಾಭಾವನೆಯೂ ಹುಟ್ಟುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ಬಟಾಟ್ಯಾಚೀ ಚಾಳ' ದಲ್ಲಿಯೂ ಹೀಗೆ ಆಗಿದೆ.

ಹೌದು ಆ ಪ್ರಯೋಗದ ಕೊನೆಗೆ ಕರುಣ ಭಾವನೆ ಅಪರಿಹಾರ್ಯವಾಗಿ ಬಂದಿದೆ. ಸಂಪೂರ್ಣವಾಗಿ ಕೆಟ್ಟು ಹೋಗುವದನ್ನು ನಾನು ನೋಡಲಾರೆ, ಸಹಿಸಲಾರೆ ಎಂತಲೂ ಅನಿಸುತ್ತದೆ.

''ತುಝೇ ಆಹೇ'' ಆದ ಮೇಲೆ ಯಾವ ನಾಟಕ ಬರೆದಿರಿ?

''ತುಝೇ ಆಹೇ'' ದ ನಂತರ ' ಸುಂದರ ಮೀ ಹೋಣಾರ' (ಸುಂದರ ನಾನಾಗುವೆ) ಈ ನಾಟಕ ಬಂತು. ಈ ನಾಟಕಕ್ಕೂ ಒಂದು ಪರಕೀಯ ಕಲ್ಪನೆಯ ಆಧಾರ ಉಂಟು. ಆದರೆ ಆ ನಾಟಕದ ಹೆಸರು ಮಾತ್ರ ಒಂದು ಪ್ರಸಿದ್ಧ ಮರಾಠಿ ಕವಿತೆಯ ಸಾಲುಗಳಲ್ಲಿದೆ. ಈ ನಾಟಕ ಹೆಚ್ಚು ಕಲಾತ್ಮಕವಾಗಿ ಬಂದಿದೆ ಎಂದು ನನಗನಿಸುತ್ತಿದೆ. ಹಾಸ್ಯ ಲೇಖಕನಗಳಿಂದ ಕರುಣ ನಾಟಕ ಬರೆಯಲು ಸಾಧ್ಯವೇ? ಎಂಬ ಪ್ರಯೋಗ ಈ ನಾಟಕ ಬರೆದು ನಾನು ನೋಡಿದೆನಷ್ಟೇ.

ನಿಮ್ಮ ''ತೀನ ಪೈಸಾಂಚಾ ತಮಾಶಾ'' ಈ ನಾಟಕಕ್ಕೂ ಪರಕೀಯ ಕಲ್ಪನಾಧಾರವಿದೆಯೇ?

ಹೌದು. ಈ ನಾಟಕದ ಮೂಲ ಕಲ್ಪನೆ ಬ್ರೆಕ್ಟನದು. ಆದರೆ ಮರಾಠಿ ಸಂಗೀತದ ಸಂದರ್ಭದಲ್ಲಿ ಇದೂ ಒಂದು ಹೊಸ ಪ್ರಯೋಗ ಮಾಡಿ ನೋಡಬೇಕು ಅಂತ ಇದನ್ನ ಬರೆದೆ.

ಯಾವ ಹೊಸ ಪ್ರಯೋಗ?

ಮರಾಠಿ ನಾಟಕದಲ್ಲಿ ಇಲ್ಲಿಯ ವರೆಗೆ ಲಾವಣಿ ಪೋವಾಡಾ ಮುಂತಾದ ಶಾಹಿರೀ ಕವಿತೆಯ ಉಪಯೋಗ ಯಾರೂ ಮಾಡಿರಲಿಲ್ಲ; ಅಲ್ಲದೆ ಆಧುನಿಕ ನಾಟ್ಯಕಥೆಗೆ 'ತಮಾಶಾ' ದಂಥ ಹಳೆ ಗ್ರಾಮೀಣ ನಾಟ್ಯ -ರೂಪವನ್ನು ಎಷ್ಟರ ಮಟ್ಟಿಗೆ ಉಪಯೋಗಿಸಬಹುದೆಂದು ನನಗೆ ನೋಡಬೇಕಾಗಿತ್ತು. ಆ ದೃಷ್ಟಿಯಿಂದ ಇದು ಹೊಸ ಪ್ರಯೋಗ ಅಂತಾ ಹೇಳಿದೆ.

ಅಂದರೆ ಈಚೆಗೆ ಮರಾಠಿಯಲ್ಲಿ ಬೇರೆ ಕಾರಣಕ್ಕಾಗಿ ಬಹು ಚರ್ಚಿತವಾದ 'ಘಾಶೀರಾಮ ಕೋತವಾಲ' ಈ ನಾಟಕದಲ್ಲಿಯೂ ಕೂಡ ತೆಂಡೂಲಕರರು ಮರಾಠಿ ಲೋಕ ಸಂಗೀತವನ್ನು ಆಧುನಿಕ ಕಥೆಗೆ ಉಪಯೋಗಿಸುವ ಪ್ರಯತ್ನ ಮಾಡಿದ್ದಾರೆ. ಹಾಗೇನಾದರೂ ನಿಮ್ಮ ಮನಸ್ಸಿನಲ್ಲಿ ಇತ್ತೇ?

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೌದು ಆ ನಾಟಕದಲ್ಲಿ ತೆಂಡೂಲಕಕರು ತುಂಬಾ ಯಶಸ್ವಿಯಾಗಿದ್ದಾರೆ. ಇಂದಿನ ಮರಾಠಿ ಶ್ರೇಷ್ಠ ನಾಟಕಗಳಲ್ಲಿ "ಘಾಶೀರಾಮ ಕೋತವಾಲ"ವು ಎಲ್ಲ ದೃಷ್ಟಿಯಿಂದಲೂ ಮಹತ್ವಪೂರ್ಣವಾಗಿದೆ ಎಂದು ನನ್ನ ಅಭಿಪ್ರಾಯ. ಮಹಾರಾಷ್ಟ್ರದ ಜಾನಪದ ಸತ್ವವನ್ನು ಕಲಾಕೃತಿಯಾಗಿ ಆಧುನಿಕ ವಿಚಾರಗಳಿಗೆ ಅಭಿವ್ಯಕ್ತಗೊಳಿಸುವದರಲ್ಲಿ ಈ ನಾಟಕವು ಪಡೆದ ಯಶಸ್ಸು ನಿಜವಾಗಿ ಆಶ್ಚರ್ಯಕರವಾದುದು.

ನಿಮ್ಮ "ಫುಲರಾಣಿ" ಈ ನಾಟಕಾನೂ ರೂಪಾಂತರವಿದ್ದರೂ ಮರಾಠಿಯಲ್ಲಿ ತುಂಬ ಲೋಕಪ್ರಿಯವಾಗಿದೆ. ಅದು ಪಿಗ್‌ಮ್ಯಾಲಿಯನ್‌ನ "MY FAIR LADY" ಯ ರೂಪಾಂತರ ಅಲ್ಲವೇ?

ಹೌದು. "MY FAIR LADY" ಯ ಅನುವಾದ ಬಹುಶಃ ಜಗತ್ತಿನ ಎಲ್ಲ ಭಾಷೆಗಳಲ್ಲಿಯೂ ಆಗಿದೆ. ಮರಾಠಿಯಲ್ಲಿಯೂ ಕೂಡ ನನಗಿಂತಲೂ ಮೊದಲು ಕೆಲವರು ಅದನ್ನು ರೂಪಾಂತರಿಸಿದ್ದರು. ಆದರೆ ನನ್ನ ನಾಟಕ ಜನರಿಗೆ ರೂಪಾಂತರ ಅಂತ ಅನಿಸಲೇ ಇಲ್ಲ. ಮರಾಠಿಭಾಷೆಯ ಅಂತಃಸತ್ವದಿಂದಲೇ ಅದು ಮೂಡಿ ಬಂದಿದೆ ಎಂದು ಅವರಿಗೆ ಅನಿಸಿತು. ಇದೇ ಆ ನಾಟಕದ ಸಾಮರ್ಥ್ಯ ಅಂತ ನಾನು ತಿಳಿಯುತ್ತೇನೆ.

ಹೊಸದಾಗಿ ಏನು ಬರೀತಾ ಇದ್ದೀರಿ?

ಒಂದು ಹೊಸ ನಾಟಕ ಈಗಾಗಲೇ ರಂಗಭೂಮಿಯ ಮೇಲೆ ಬಂದಿದೆ. ಅದು ಕೂಡ ಒಂದು ರಶಿಯನ್ ನಾಟಕದ ರೂಪಾಂತರ. ನಾಟಕದ ಹೆಸರು "ಏಕ ಝುಂಜ ವಾರ್‍ಯಾಶೀ." (ಬಿರುಗಾಳಿ ಜೊತೆ ಒಂದು ಹೋರಾಟ) ಇದು ಒಂದು ಸಂಘರ್ಷದ ಮೇಲೆ ಆಧರಿಸಿದ ರಾಜಕೀಯ ನಾಟಕ. ವ್ಯಂಗ್ಯ ಚಿತ್ರಕಾರ ಆರ್. ಕೆ. ಲಕ್ಷ್ಮಣ ಅವರ ಕಾಮನ್ ಮ್ಯಾನ ಬಗ್ಗೆ ನಾವು ಓದುತ್ತೇವೆ. ಅಂಥವನೇ ಒಬ್ಬ ಕಾಮನ್ ಮ್ಯಾನ್ ಈ ನಾಟಕದಲ್ಲಿ ರಾಜಕಾರಣಿ ಪುರುಷನ ಅನ್ಯಾಯದ ವಿರುದ್ಧ ಹೋರಾಡಿ ಅವನನ್ನು ಸೋಲಿಸುತ್ತಾನೆ. ಅವನು ನಡೆಸಿದ ಆ ಸಂಘರ್ಷಣೆಯ ಚಿತ್ರ ಇಲ್ಲಿದೆ. ಮೇಲು ನೋಟಕ್ಕೆ ಇದು ರಾಜಕೀಯ ಸಂಘರ್ಷವೆಂದೆ ಅನಿಸುತ್ತದೆ. ಆದರೆ ಅದು ಒಂದು ಮಾನವನ ಸನಾತನ ಸಂಘರ್ಷ ಇದೆ. ಮೌಲ್ಯ - ಮೌಲ್ಯಗಳ ನಡುವಿನ ಸಂಘರ್ಷವೇ ಈ ನಾಟಕದ ನಾಟ್ಯವಸ್ತುವು ಅಂತ ಹೇಳಬಹುದು.

ನಿಮ್ಮ 'ತುರ್ಝೀ ಆಹೇ ತುಝು ಪಾಶೀ' ಈ ನಾಟಕ ಬಿಟ್ಟರೆ ಉಳಿದೆಲ್ಲ ಮಹತ್ವದ ನಾಟಕಗಳು ಪರಕೀಯ ಕಲ್ಪನೆಗಳನ್ನು ಆಧಾರಿಸಿವೆ ಅಂತ ಕಾಣ್ತದೆ. ನೀವು ಹೇಳಿದ್ದರಿಂದಲೇ ಆ ನಾಟಕಗಳ ಮೂಲ ಪರಕೀಯವೆಂದು ನಂಬಬೇಕಾಗುತ್ತದೆ. ಇಲ್ಲದೆ ಹೋದರೆ ಅವು ನಿಮ್ಮ ಸ್ವತಂತ್ರ ನಾಟಕಗಳೆಂದು ಅನಿಸುವಷ್ಟು ಅಚ್ಚ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೂಲವೆಂಬಂತಾಗಿ ಪ್ರಕಟಗೊಂಡಿವೆ. ಇಂಥ ಲೇಖನ ಸಾಮರ್ಥ್ಯ ನಿಮ್ಮ ಹತ್ತಿರ ಇರುವಾಗ ನಿಮಗೆ ರೂಪಾಂತರದ ಅವಶ್ಯಕತೆ ಯಾಕೆ ಬೀಳಬೇಕು?

ನೀವು ಅಂತೀರಿ ಅದು ನಿಜ. ನನ್ನ ಪ್ರತಿಭಾಶಕ್ತಿಯ ಮರ್ಯಾದೆಗಳನ್ನು ನಾನು ಚನ್ನಾಗಿ ಬಲ್ಲೆ. ನನಗೆ ಹೊಸ ಕಥಾಬೀಜ ಹೊಳೆಯುವದಿಲ್ಲ. ಕೆಲವರಿಗೆ ಹೊಸ ಹೊಸ ಕಥಾ ಬೀಜಗಳು ಹೊಳೆಯುತ್ತವೆ. ಅದು ಅವರ ಸ್ಥಾಯೀಭಾವನೆ. ನನ್ನಲ್ಲಿ ಆ ಕಥಾವಸ್ತು ಹೊಳೆಯುವ ಸಾಮರ್ಥ್ಯ ಇದ್ದಿದ್ದರೆ ನಾನೂ ಕಥಾ ಲೇಖಕನಾಗುತ್ತಿದ್ದೆ ಅಂತಅನಿಸ್ತದೆ. ನನಗೆ ವಾತಾವರಣ ಹೆಚ್ಚು ಹಿಡಿಸುತ್ತದೆ. ನಾನು ನಾಟ್ಯಾನುಭವ ನೀಡಬಲ್ಲೆ. ಅದಕ್ಕಾಗಿ ಕಥಾರಚನೆ ಮಾಡೋದು ಅಷ್ಟೊಂದು ನನಗೆ ಹಿಡಿಸೋದಿಲ್ಲ. ಒಮ್ಮೆ ಕಥಾನಕದಲ್ಲಿ ನನಗೆ ನಾಟ್ಯಾನುಭವ ಕಾಣಿಸಿದರೆ ಸಾಕು. ಅದು ನನಗೆ ನನ್ನ ಎಲ್ಲ ಪಾತ್ರಗಳಲ್ಲಿಯೂ ಕಾಣತೊಡಗುತ್ತದೆ. ಆಗ ಆ ಪಾತ್ರಗಳು ತಮ್ಮ ಭಾಷೆ ಸಹಿತ ನನ್ನ ಜೊತೆ ಮಾತಾಡುತ್ತವೆ.

ಅಂದರೆ ಹೇಗೆ? ಉದಾಹರಣೆ ಹೇಳತೀರಾ?

ಹೇಳತೇನೆ. ಪಿಗ್‌ಮ್ಯಾಲಿಯನ್‌ನ 'MY FAIR LADY' ಓದಿದ ಮೇಲೆ ನನಗೆ ನನ್ನ ನಾಟಕದಲ್ಲಿಯ ಪ್ರೊ. ಜಹಾಗೀರದಾರ ಕಾಣತೊಡಗಿದ. ಮುಂಬಯಿಯ ಜೋಪಡ ಪಟ್ಟಿಯಲ್ಲಿಯ ಆ ನಿರಕ್ಷರ ಯುವತಿ ತನ್ನದೇ ಆದ ಅಸಂಸ್ಕೃತ ಭಾಷೆಯಲ್ಲಿ ನನ್ನ ಜೊತೆಗೆ ಸಂಭಾಷಿಸುತ್ತಲೇ ಬಂದಳು. ನಾನಿದನ್ನು ಅಲಂಕಾರಿಕವಾಗಿ ಹೇಳುತ್ತಿಲ್ಲ ಎಂದು ಒಪ್ಪುತ್ತೀರಾ?

ನೀವು ಹೇಳತೀರಿ ಅಂತ ಒಪ್ಪತೇನೆ. ಆದರೆ ನಿಮಗೆ ಹೊಸ ಕಥಾಬೀಜ ಹೊಳೆಯುವದಿಲ್ಲ ಅನ್ನುವದು ನನಗೆ ಇನ್ನೂ ಸತ್ಯ ಅನಿಸೋದಿಲ್ಲ.

ಮರಾಠಿಯಲ್ಲಿ ಗೋವಿಂದ ಬಲ್ಲಾಳ ದೇವಲರು ಶ್ರೇಷ್ಠ ನಾಟಕಕಾರರೆಂದು ನೀವು ಒಪ್ಪುತ್ತೀರಾ?

ಖಂಡಿತ ಒಪ್ಪುತ್ತೇನೆ.

ಅವರ 'ಶಾರದಾ' ನಾಟಕ ಬಿಟ್ಟರೆ ಉಳಿದೆಲ್ಲವೂ ಆಧಾರಿತ ನಾಟಕಗಳೇ ಆಗಿವೆ. ಅವರ ಅತ್ಯಂತ ಲೋಕಪ್ರಿಯವಾದ 'ಸಂಶಯ ಕಲ್ಲೋಳ' ನಾಟಕವೂ ಪರಕೀಯವೆಂಬುದು ನಿಮಗೆ ಗೊತ್ತಿರಬಹುದು. ' ಝುಂಜಾರರಾವ' ಈ ಪ್ರಸಿದ್ಧ ಮರಾಠಿ ನಾಟಕ ಶೇಕ್ಸಪಿಯರನ 'ಅಥೆಲ್ಲೊ'ದ ಮರಾಠಿ ಅವತಾರವೆಂದು ಹೇಳಿದರೆ ಯಾರಾದರೂ ಇಂದಿಗೂ ನಂಬಲಿಕ್ಕಿಲ್ಲ. ರೂಪಾಂತರದ ಮೂಲಕ ನನ್ನ ಲೌಕಿಕಕ್ಕೆ ಬಾಧೆ ಉಂಟಾಗು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತ್ತದೆ ಎಂದು ಯಾರಾದರೂ ಹೇಳುತ್ತಿದ್ದರೆ 'ಆಗಲಿ' ಎಂದಿಷ್ಟೇ ಈಗ ನಾನು ಹೇಳಲು ಸಾಧ್ಯ.

ನಾನು ಹಾಗೆ ಹೇಳುತ್ತಿಲ್ಲ. ಆದರೆ ನಿಮ್ಮ ನಾಟಕಗಳಲ್ಲಿ ರೂಪಾಂತರಕ್ಕಿಂತಲೂ ಯಾವ ಬೇರೆ ಶಕ್ತಿ ಕಾರ್ಯಾನ್ವಿತವಾಗಿದೆ ಎಂಬುದನ್ನು ತಿಳಿದುಕೊಳ್ಳಬೇಕು ಅಂತ ಅನಿಸುತ್ತದೆ.

ನಾನು ರೂಪಾಂತರಕ್ಕೆ ಒಂದು ಹೊಸ ಶಬ್ದ ಉಪಯೋಗಿಸುತ್ತೇನೆ.

ಯಾವದು?

'ಅನುನಿರ್ಮಿತಿ'

ಓಹೋ! 'ಅನುನಿರ್ಮಿತಿ' ಒಳ್ಳೇ ಅರ್ಥಪೂರ್ಣವಾದ ಶಬ್ದ ಹೇಳಿದಿರಿ.

ರೂಪಾಂತರದಲ್ಲಿ 'ಭಾಷಾಂತರ' ಅನುಸಮ್ಮತವಾಗಿರುತ್ತದೆ. ಆದರೆ ಅನುನಿರ್ಮಿತಿಯಲ್ಲಿ 'ನಿರ್ಮಿತಿ'ಗೆ ಹೆಚ್ಚು ಮಹತ್ವವಿದೆ ಎಂದು ಸೂಚಿಸಿದೆ. "CREATIVE" ಈ ಕಲ್ಪನೆ ಅಲ್ಲಿ ಇದೆ. ಒಂದು CREATIVE ದ ಮೇಲೆ ಮತ್ತೊಂದು ಅಷ್ಟೇ 'CREATIVE' ಆಗುತ್ತದೆ. ಈ ಅರ್ಥದಿಂದ ಅದು ಅನುನಿರ್ಮಿತಿ ಎಂದು ನಾನು ಕರೆಯುತ್ತೇನೆ.

ಅಂದರೆ ನಿಮ್ಮ ನಾಟಕದಲ್ಲಿ ನಮಗೆ ಬೇಕಾದ ರೂಪಾಂತರಕ್ಕಿಂತಲೂ ಬೇರೆ ಶಕ್ತಿ ಈ ಅನುನಿರ್ಮಿತಿಯಲ್ಲಿ ನಾವು ಕಾಣಬಹುದು.

ಕಾಣಬಹುದು.

ಇಂದು ಮರಾಠಿ ನಾಟ್ಯ ಕ್ಷೇತ್ರದಲ್ಲಿ ವಸಂತ ಕಾನೇಟಕರ, ಶಿರವಾಡಕರ, ವಿಜಯ ತಂಡುಲಕರ, ಜಯವಂತ ದಳವಿ ಮುಂತಾದ ನಾಟಕಕಾರರು ಲೋಕಪ್ರಿಯ ಯಶಸ್ವಿ ನಾಟಕಕಾರರೆಂದು ಕೀರ್ತಿ ಗಳಿಸಿದ್ದಾರೆ. ಅವರ ಬಗ್ಗೆ ನಿಮ್ಮ ಅಭಿಪ್ರಾಯ ಏನು?

ಇಂದಿನ ಮರಾಠಿ ರಂಗಭೂಮಿಯ ಮೇಲೆ ಎಲ್ಲಕ್ಕೂ ಹೆಚ್ಚು ಲೋಕಪ್ರಿಯ ನಾಟಕಕಾರರೆಂದರೆ ಕಾನೇಟಕರರು. ತಂತ್ರ ಮತ್ತು ಮಂತ್ರದ ಕೌಶಲ್ಯಪೂರ್ಣ ಸಮನ್ವಯ ಅವರ ನಾಟಕಗಳ ಯಶಸ್ಸಿನ ರಹಸ್ಯ ಅಂತ ನಾ ತಿಳಿದಿದ್ದೇನೆ. ಸಾಹಿತ್ಯಕ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಭಿರುಚಿ ಮತ್ತು ಪ್ರಯೋಗಕ್ಷಮತೆ ಇವುಗಳ ಅಪೂರ್ವ ರಸಾಯನ ಅವರ ನಾಟಕಗಳಲ್ಲಿ ಸಾಧ್ಯವಾಗಿದೆ. ''ರಾಯಗಡಾಲಾ ಜೇವ್ಹಾ ಜಾಗ ಏತೆ'' (ರಾಯಗಡ ಎಚ್ಚೆತ್ತಾಗ) ಇದು ಅವರ ಉತ್ಕೃಷ್ಟನಾಟಕ. ಇದು ಬಾಹ್ಯದಲ್ಲಿ ಐತಿಹಾಸಿಕ ನಾಟಕವೆನಿಸಿದರೂ ಇದರಲ್ಲಿಯ ಶಿವಾಜಿ, ಸಂಭಾಜಿಯವರ ಸಂಬಂಧ ನನಗೆ ತಂದೆ-ಮಗನ ಸಂಬಂಧದ ಸನಾತನ ರೂಪ ಕಾಣುತ್ತದೆ. ಆದ್ದರಿಂದ ಅದು ಒಂದೇ ಕಾಲಕ್ಕೆ ಐತಿಹಾಸಿಕವೂ ಹೌದು ಸಾಮಾಜಿಕವೂ ಹೌದು. ನನಗೆ ಐತಿಹಾಸಿಕ ಪೌರಾಣಿಕ ಈ ಪ್ರಕಾರದ ವರ್ಗೀಕರಣ ಅಷ್ಟು ಮಾನ್ಯವಿಲ್ಲ. ಅಂಥ ನಾಟಕಗಳಲ್ಲಿಯೂ ನನಗೆ ಮನುಷ್ಯ ಮಹತ್ವದವನಾಗಿ ಕಾಣುತ್ತಾನೆ. ಈ ದೃಷ್ಟಿಯಿಂದ ಕಾನೇಟಕರರು ತುಂಬಾ ಯಶಸ್ವಿಯಾಗಿದ್ದಾರೆ.

ಶಿರವಾಡಕರರ ಬಗ್ಗೆ?

ಶಿರವಾಡಕರರು ಮೂಲತಃ ಕವಿಗಳು ಆದ್ದರಿಂದ ಅವರ ನಾಟಕಗಳಲ್ಲಿ (POETIC ELEMENT) ಕಾವ್ಯಾಂಶ ಹೆಚ್ಚು. 'ನಟಸಾಮ್ರಾಟ' ಇದು ಅವರ ಸರ್ವೋತ್ತಮ ನಾಟಕ. ಇದು ಕೂಡ ನನಗೆ ಸೇರುವ ಕಾರಣವೆಂದರೆ ಆ ನಾಟಕ ಬಾಹ್ಯತಃ ಒಬ್ಬ ನಟನ ಕಥೆ ಆಗಿದ್ದರೂ ಅದರಲ್ಲಿ ಆ ದೃಷ್ಟಿಯಿಂದ ಎಲ್ಲ ವೃದ್ಧರ ವ್ಯಥೆ ಇದೆ. ಈ ಸರ್ವಕಾಲೀನತೆ ನನಗೆ ಮಹತ್ವದ್ದು ಎಂದು ಅನಿಸುತ್ತದೆ.

ತೆಂಡೂಲಕರರ ನಾಟಕಗಳಲ್ಲಿ ತಾತ್ಕಾಲಿಕವಾದ ಸಂವೇದನಾತ್ಮಕ (SENSATIONAL) ಘಟನೆಗಳಿದ್ದರೂ ಕೂಡ ಮನುಷ್ಯನ ಮೂಲಭೂತ ವೇದನೆಗಳನ್ನು ಮತ್ತು ದೌರ್ಬಲ್ಯಗಳನ್ನು ಶೋಧಿಸುವ ಅವರ ಪ್ರಯತ್ನ ನಿಜವಾಗಿಯೂ ಆಶ್ಚರ್ಯ ಉಂಟು ಮಾಡುವ ಹಾಗೆ ಇದೆ. ಇಂದು ಮರಾಠಿ ರಂಗಭೂಮಿಯ ಮೇಲೆ ಅವರಷ್ಟು ಪ್ರಯೋಗಶೀಲ ನಾಟಕಕಾರರು ಬೇರೆಯವರಿಲ್ಲ. 'ಶಾಂತತಾ ಕೋರ್ಟ ಚಾಲೂ ಆಹೆ' 'ಘಾಶೀರಾಮ ಕೋತವಾಲ' 'ಸಖಾರಾಮ ಬಾಯಿಂಡರ, 'ಗಿಧಾಡೆ' ಈ ನಾಟಕಗಳು ಮರಾಠಿಯಲ್ಲಿ ಬಿರುಗಾಳಿಯನ್ನೇ ಎಬ್ಬಿಸಿದವು. ಕ್ರೂರತನ ಮತ್ತು ಲೈಂಗಿಕತೆ ಕುರಿತು ಮನುಷ್ಯನ ಆದಿಮ ರೂಪವನ್ನು ಚಿತ್ರಿಸುವ ಅವರ ಪ್ರಯತ್ನ ನಿಜವಾಗಿಯೂ ಮರಾಠಿ ರಂಗಭೂಮಿಯ ಮೇಲೆ ಅದ್ಭುತವೆಂದೇ ಹೇಳಬೇಕು. ಜಯವಂತ ದಳವಿಯವರೂ ಕೂಡ ನನಗೆ ಇಂದಿನ ಮಹತ್ವದ ನಾಟಕಕಾರರೆಂದು ಅನಿಸುತ್ತಾರೆ. ಯಂತ್ರಯುಗದ ಮೂಲಕ ಬಂದ ವೈಫಲ್ಯ ಮತ್ತು ನಿರಾಶೆ ಹಾಗೂ ಸ್ತ್ರೀ ಪುರುಷ ಸಂಬಂಧಗಳಲ್ಲಿಯ ವಿಕೃತವಾಸನೆ ಇವು ಅವರ ನಾಟಕಗಳ ಮುಖ್ಯ ವಿಷಯಗಳು. ತೆಂಡುಲಕರರಷ್ಟು ಸಂವೇದನಪರ ಇರದಿದ್ದರೂ ಅವರ ನಾಟಕಗಳಲ್ಲಿ ಪಾರಂಪಾರಿಕತೆಗೆ ಧಕ್ಕೆ ಕೊಟ್ಟು ಜನರನ್ನು ಅಂತರ್ಮುಖಿಯಾಗಿ ಮಾಡುವ ಸಾಮರ್ಥ್ಯ ಇದೆ. 'ನನಗೆ ಎಲ್ಲಕ್ಕೂ ಹೆಚ್ಚು ಸೇರಿದ ಅವರ ನಾಟಕ ಅಂದರೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ಬ್ಯಾರಿಸ್ಟರ'. ಈ ನಾಟಕದಲ್ಲಿಯ ಅಕೃತ್ರಿಮ ಮತ್ತು ಸಹಜವಾದ ಸಂವಾದ ನನ್ನನ್ನು ಮುಗ್ಧಗೊಳಿಸಿದೆ.

ಇಂದಿನ ಹೊಸ ನಾಟಕಕಾರರ ಬಗ್ಗೆ ಏನು ಅಭಿಪ್ರಾಯ?

ಇಂದು ರಂಗಭೂಮಿಯ ಮೇಲೆ ಹೊಸ ಹೊಸ ಲೇಖಕರು, ನಟರು, ದಿಗ್ದರ್ಶಕರು ನಡೆಸಿದ ಹೊಸ ಪ್ರಯೋಗಗಳನ್ನು ಕಂಡು ನಿಜವಾಗಿಯೂ ನಾನು ಸಂತುಷ್ಟನಿದ್ದೇನೆ. ನಮಗಿಂತಲೂ ಇಂದು ಯುವಕರಿಗೆ ಹೆಚ್ಚು ಸಂಧಿ- ಸಾಧನೆಗಳ ಅನುಕೂಲತೆ ಇವೆ. WORK-SHOP, SEMINAR ಮುಂತಾದವುಗಳು ಉತ್ಸಾಹದಿಂದ ನಡೆದಿವೆ. ಲೋಕ ನಾಟ್ಯದಿಂದ ಪಥ ನಾಟ್ಯದವರೆಗೆ ಎಲ್ಲ ಹೊಸ ಪ್ರಯೋಗಗಳು ಹೆಚ್ಚು ಲೋಕಪ್ರಿಯ ವಾಗುತ್ತಿವೆ. ಸತೀಶ ಆಳೇಕರ, ಮಹೇಶ ಎಲಕುಂಚಲಾರ, ಗೋಪುಪ ದೇಶಪಾಂಡೆ, ಈ ತರುಣ ಲೇಖಕರ ಜೊತೆಗೆ ಡಾ. ಲಾಗೂ, ಜಬ್ಬಾರ ಪಟೇಲ, ವಿಜಯಾ ಮೆಹತಾ, ಮುಂತಾದ ದಿಗ್ದರ್ಶಕರು ಇಂದಿನ ಮರಾಠಿ ರಂಗಭೂಮಿಯ ಮೇಲೆ ಹೊಸ ಯುಗದ ನಾಂದಿಗಳಾಗಿದ್ದಾರೆಂದು ನಿಶ್ಚಿತವಾಗಿ ಹೇಳಬೇಕು. "ಉಧ್ವಸ್ಥ ಧರ್ಮಶಾಳಾ" 'ಗೋಚಿ' 'ಮಹಾನಿರ್ವಾಣ' 'ವಾಸನಾ ಕಾಂಡ' ಈ ಹೊಸ ನಾಟಕಗಳನ್ನು ನಾನು ಮುದ್ದಾಮ ಇಲ್ಲಿ ಉಲ್ಲೇಖಿಸುತ್ತೇನೆ. ಈ ಹೊಸ ಸಮರ್ಥ ಲೇಖಕರು ಬಹಳ ಸಾಮರ್ಥ್ಯದಿಂದ ಮತ್ತು ಆತ್ಮವಿಶ್ವಾಸದಿಂದ ಬರೆಯುತ್ತಿದ್ದಾರೆ. ಎಲಕುಂಚವಾರರು ಬರೆದ 'ವಾಡಾ ಚಿರೇಬಂದಿ' ಮತ್ತು ಹೋದ ತಿಂಗಳೇನೇ ರಂಗಭೂಮಿಯ ಮೇಲೆ ಬಂದ ಅವರ 'ಆತ್ಮಕಥೆ' ನಾಟಕಗಳನ್ನು ನೀವು ಅವಶ್ಯನೋಡಿ. ತಂತ್ರ ದೃಷ್ಟಿಯಿಂದ ಈ ನಾಟಕಗಳ ಸ್ವತಂತ್ರ ಅಭ್ಯಾಸ ಆಗಬೇಕು, ಇಷ್ಟು ಮಹತ್ವವುಳ್ಳವು ಅನಿಸುತ್ತದೆ.

ಯಾವ ವಿಷಯಗಳನ್ನು ಕುರಿತು ಈ ನಾಟಕಗಳಿವೆ.?

ಚಿರೇಬಂದಿ' ಯಲ್ಲಿ ಕುಸಿಯುತ್ತಿರುವ ಒಂದು ಸಂಸ್ಕೃತಿಯ ದಾರುಣ ಚಿತ್ರವಿದೆ. ಮತ್ತು 'ಆತ್ಮಕಥೆ' ಯಲ್ಲಿ ಒಬ್ಬ ಕಾದಂಬರಿಕಾರನ CHARACTER ಗಳು ಅವನ ಜೊತೆಗೆ ತಮ್ಮ ಮೇಲೆ ಆದ ಅನ್ಯಾಯದ ಬಗ್ಗೆ ಸಂಘರ್ಷ ಹೂಡಿವೆ. ಕಲಾವಂತನ ಅನುಭವಗಳ ಭಿನ್ನ ಭಿನ್ನ ಪಾತಳಿಯ ಮೇಲೆ ಹೇಗೆ ಸಂಘರ್ಷ ನಡೆಯುತ್ತವೆ ಎಂಬುದನ್ನು ಬಹಳ ಉತ್ಕಟವಾಗಿ ಇಲ್ಲಿ ಚಿತ್ರಿಸಿದ್ದಾರೆ. ಈ ಎರಡೂ ನಾಟಕಗಳನ್ನು ವಿಜಯಾ ಮೆಹತಾ ಅವರು ಸಮರ್ಥವಾಗಿ ದಿಗ್ದರ್ಶಿಸಿದ್ದಾರೆ. ತಂತ್ರ ಎಳ್ಳಷ್ಟೂ ಭಾವಿಸುವದಿಲ್ಲ; ಇದೇ ಅದರ ತಂತ್ರ ಎಂದು ಹೇಳಬಹುದು.

ಭಾರತದ ಅನ್ಯ ಭಾಷೆಗಳ ರಂಗಭೂಮಿಯ ಬಗ್ಗೆ ನಿಮ್ಮ ಅನುಭವಗಳೇನು?

ಭಾರತದ ಬಹು ಅಂಶ ಥೇಟರ ನಾನು ನೋಡಿದ್ದೇನೆ. ಆದರೆ ಮರಾಠಿ ಮತ್ತು ಬಂಗಾಲಿ ರಂಗಭೂಮಿಯ 'ಮೇಲೆ, ಅಹಂಕಾರದಿಂದ ಹೇಳೋದಿಲ್ಲ - ಎಲ್ಲಕ್ಕೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri
ಹೆಚ್ಚು ಮಹತ್ವದ ಪ್ರಯೋಗಗಳು ನಡೆದಿವೆ ಎಂದು ನನ್ನ ಅನುಭವ. ಓರಿಸಾ, ಗುಜರಾತ ರಂಗಭೂಮಿಯ ಮೇಲೆಯೂ ಕೆಲ ಪ್ರಯೋಗ ನಡೆದಿವೆ. ಗಿರೀಶ ಕಾರ್ನಾಡರು ಇಂದಿನ ಭಾರತೀಯ ರಂಗಭೂಮಿಯ ಮೇಲಿನ ಒಬ್ಬ ಮಹತ್ವದ ನಾಟಕಕಾರರು. ಆದರೆ ಅವರು ಕರ್ನಾಟಕಕ್ಕಿಂತಲೂ ಮಹಾರಾಷ್ಟ್ರದಲ್ಲಿಯೇ ಹೆಚ್ಚು ಲೋಕಪ್ರಿಯರಾಗಿದ್ದಾರೆಂದು ನನ್ನ ಭಾವನೆ. ಮಹಾರಾಷ್ಟ್ರದಲ್ಲಿ ನಾಟಕದ ಅಭಿರುಚಿ ಇದೆ ಇದು ನನ್ನ ದೃಷ್ಟಿಯಿಂದ ಮಹತ್ವದ್ದಲ್ಲ. ಏನೋ ಹೊಸದಾಗಿ ಮಾಡಬೇಕು, ಮಾಡಿದ್ದನ್ನು ಸ್ವಾಗತಿಸಬೇಕು; ಹೀಗೆ ಅಸ್ಪಷ್ಟರಾಗಿ ಚಿಂತಿಸುವ ಜನರು ಇನ್ನೂ ಮಹಾರಾಷ್ಟ್ರದಲ್ಲಿ ಇದ್ದಾರೆ ಇದು ನನ್ನ ದೃಷ್ಟಿಯಿಂದ ಎಲ್ಲಕ್ಕೂ ಹೆಚ್ಚು ಮಹತ್ವದ್ದು.

ನೀವು ಪಾಶ್ಚಾತ್ಯ ರಂಗಭೂಮಿಯನ್ನೂ ಬಹಳಷ್ಟು ನೋಡಿದ್ದೀರಿ. ಭಾರತೀಯ ರಂಗಭೂಮಿಗಿಂತ ಯಾವ ದೃಷ್ಟಿಯಿಂದ ಅದು ಭಿನ್ನವಾಗಿದೆ ಅಂತಾ ಅನಿಸತದೆ?

ವೃತ್ತಿ ರಂಗಭೂಮಿಯ ದೃಷ್ಟಿಯಿಂದ ನಾವು ಅವರಿಗಿಂತ ಎಷ್ಟೋ ಹಿಂದುಳಿದಿದ್ದೇವೆ ಅಂತ ಅನಿಸುತ್ತದೆ. ಅಲ್ಲಿಯ ಜನರು ಕೂಡ ರಂಗಭೂಮಿಯ ಮೇಲೆ ಹುಚ್ಚುಚ್ಚಾರಗಳನ್ನು ಎಳ್ಳಷ್ಟೂ ಸಹಿಸುವದಿಲ್ಲ. ಪ್ರೇಕ್ಷಕರೇ ಹೆಚ್ಚು ಪ್ರಗತ ಮತ್ತು ಪ್ರಯೋಗಶೀಲರಾಗಿದ್ದಾರೆ. ಕೇವಲ ನ್ಯೂಯಾರ್ಕ್ ಇದೊಂದೇ ನಗರದಲ್ಲಿ ೧೬ ಸಾವಿರಕ್ಕಿಂತಲೂ ಹೆಚ್ಚು ಮ್ಯುಝಿಶಿಯನ್ಸ್ ಇರಬಹುದು ಎಂದು ಹೇಳಿದರೆ ಆಶ್ಚರ್ಯವೆನಿಸಬಹುದು. ಸಾವಿರಾರು ಕಲಾವಿದರ ಹೆಸರುಗಳು 'ವೇಟಿಂಗ ಲಿಸ್ಟಿ' ನ ಮೇಲೆ ಇರುತ್ತವೆ. ಟೆಲಿವ್ಹಿಜನ್, ಫಿಲ್ಮ, ರೇಡಿಯೋ, ನಾಟಕ ಈ ಎಲ್ಲ ಕ್ಷೇತ್ರಗಳಲ್ಲಿ ಹೀಗೆಯೇ ಪರಿಸ್ಥಿತಿ ಉಂಟು. ಮತ್ತೆರಡು ಮಹತ್ವದ ಸಂಗತಿಗಳನ್ನು ಹೇಳಬೇಕೆಂದರೆ ಅವರ ಕಡೆಗೆ 'NIGHT' ಪದ್ಧತಿಯಿಲ್ಲ. 'EQUITY' ಎಂಬ ಹೆಸರಿನ ಯುನಿಯನ್ ಇದೆ. ಪ್ರತಿಯೊಬ್ಬ ನಟನು ಈ ಯುನಿಯನ್ನಿನ ಸಭಾಸದನಿರುತ್ತಾನೆ. ಅಮ್ಯಾಚ್ಯುಅರ್ ಥಿಏಟರ್‌ದ ನಟರು ಒಂದು ಕಾಸು ಕೂಡ ಮಾನಧನ ತಕ್ಕೊಳ್ಳುವದಿಲ್ಲ.

ಒಂದು ಕಾಲಕ್ಕೆ ಮರಾಠಿ ರಂಗಭೂಮಿಯ ಮೇಲೆ ಸಂಗೀತ ನಾಟಕಗಳ ಪ್ರಭಾವ ಇತ್ತು. ಇಂದು ಆ ಸಂಗೀತ ನಾಟಕ ಕ್ಷೀಣವಾಗಹತ್ತಿದೆ.

ಆಗಲಿ, ಅದಕ್ಕಾಗಿ ದುಃಖ ಪಡಬೇಕಾಗಿಲ್ಲ. ಸಂಗೀತ-ನಾಟಕ ಈ ಕಲ್ಪನೆಯೇ ನನಗೆ ಸರಿ ಅನಿಸುವದಿಲ್ಲ. ನಿಜವಾಗಿ ಹೇಳಬೇಕಾದರೆ ಮರಾಠಿಯಲ್ಲಿ ಸಂಗೀತ ನಾಟಕಗಳು ಎರಡೇ- ಒಂದು 'ಸೌಭದ್ರ' ಮತ್ತು ತೆಂಡುಲಕರರ 'ಘಾಶೀರಾಮ'. ನಮ್ಮ ಸಂಗೀತ ನಾಟಕಗಳು ಹೆಚ್ಚಾಗಿ ಹಾಡುಗಳನ್ನು ಜೋಡಿಸುವದಕ್ಕಾಗಿ ರಚಿಸಿದ ನಾಟಕಗಳು ಆಗಿವೆ ಎಂದು ನನ್ನ ಸ್ಪಷ್ಟ ಅಭಿಪ್ರಾಯ. ಸಂಗೀತವು ನಾಟಕದ ವಾಹನವಾಗಬೇಕು. ಆದರೆ ಇಲ್ಲಿ ನಾಟಕವೇ ಸಂಗೀತದ ವಾಹನವಾಗಿದೆ. ಯಾವ ನಾಟಕವು ಸಂಗೀತದ ಹೊರತು ನಿಲ್ಲಲು ಸಾಧ್ಯವೇ ಇಲ್ಲವೋ ಅದಕ್ಕೆ ನಾನು 'ಸಂಗೀತ ನಾಟಕ' ಅಂತ ಅನ್ನುತ್ತೇನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri
ಮರಾಠಿ ರಂಗಭೂಮಿಯಮೇಲೆ 'ಬಟ್ಯಾಟ್ಯಾಚೀ ಚಾಳ' ಮತ್ತು 'ವಾರ್‍ಯಾವರಚೀ ವರಾತ' ಈ ನಿಮ್ಮ ಏಕಪಾತ್ರೀ ಪ್ರಯೋಗಗಳು ತುಂಬಾ ಲೋಕಪ್ರಿಯವಾಗಿವೆ. ಕೇವಲ ಮರಾಠಿ ಅಷ್ಟೇ ಅಲ್ಲ, ಭಾರತೀಯ ರಂಗಭೂಮಿಯ ಮೇಲೆ ಅದೊಂದು ಹೊಸ ಕ್ರಾಂತಿಯಾಗಿ ಕಂಡಿತು. ಮರಾಠಿ ರಂಗಭೂಮಿಗೆ ನಾವು ನೀಡಿದ ಬಹು ದೊಡ್ಡ ಕೊಡುಗೆ ಅದು. ಅವುಗಳ ಪ್ರೇರಣೆ ಬಗ್ಗೆ ಹೇಳತಿರಾ?

'ಏಕಪಾತ್ರೀ' ಈ ಶಬ್ದ ನನಗೆ ಮಾನ್ಯವಿಲ್ಲ ಎಂದು ಪ್ರಾರಂಭದಲ್ಲಿಯೇ ಹೇಳಿಬಿಡುತ್ತೇನೆ. ಆ ಶಬ್ದದ ಬದಲಾಗಿ ನಾನು ಅದಕ್ಕೆ 'ಬಹುರೂಪಿ' ಆಟ ಎಂದು ಕರೆಯುತ್ತೇನೆ. ಅದರಲ್ಲಿ ಅನೇಕ ಪಾತ್ರಗಳಿವೆ ಆದ್ದರಿಂದ ಅದು ಏಕಪಾತ್ರೀ ಆಗಲಾರದು. ಅದಕ್ಕೆ ನಾನು 'ಪ್ರಯೋಗ' ಅಂತಲೂ ಅನ್ನುವುದಿಲ್ಲ. ಅದಕ್ಕೆ 'ಆಟ' ವೆಂದೇ ನಾನು ಹೆಸರು ಕೊಟ್ಟಿದ್ದೇನೆ. ಕನ್ನಡದಲ್ಲಿ 'ಬಹುರೂಪಿ' ಶಬ್ದ ಇದೆಯೇ?

'ಬಹುರೂಪಿ' ಶಬ್ದ ಗೊತ್ತಾಗಬಹುದು. ಆದರೆ ಕನ್ನಡದಲ್ಲಿ 'ಆಟ' ಈ ಶಬ್ದ ಪರಂಪರೆಯಿಂದ ನಡೆದು ಬಂದಿದೆ. ದೊಡ್ಡಾಟ, ಬಯಲಾಟ ಈವು ಇಂದಿಗೂ ಕನ್ನಡದಲ್ಲಿ ಲೋಕಪ್ರಿಯವಾಗಿವೆ.

ಚಿಕ್ಕಂದಿನಲ್ಲಿ ನಾನು ನಮ್ಮ ಕಡೆಯ ಬಹುರೂಪಿ ಆಟಗಳನ್ನು ಕಂಡಿದ್ದೆ. ಆದರೆ ನನ್ನ ಪರದೇಶ ಪ್ರವಾಸದಲ್ಲಿ ಅಂತಹದೇ ಒಂದು ಕಾರ್ಯಕ್ರಮ ನೋಡಿದಮೇಲೆ ನಮ್ಮ ಹಳೆಯ ಪರಂಪರೆಗೆ ಹೊಸ ರೂಪ ಯಾಕೆ ಕೊಡಬಾರದು ಅಂತ ವಿಚಾರ ಮನಸ್ಸಿನಲ್ಲಿ ಬಂತು. ಒಂದು ಹೊಸ ಹಾಸ್ಯ Script ಬರೆದೆ. light ಮತ್ತು Sound ಈ ಹೊಸ ತಂತ್ರಗಳ ಆಧಾರದಿಂದ ಅದನ್ನು ರಂಗಭೂಮಿಯ ಮೇಲೆ ತಂದೆ. ಆ ದಿನ 'ಬಟಾಟ್ಯಾಚೀ ಚಾಳ' ಜನ್ಮವಾಯಿತು.

ಬಟಾಟ್ಯಾಚೀ ಚಾಳದಲ್ಲಿ ಇಷ್ಟು ಜೀವನಸ್ಪರ್ಶೀ ಚಿತ್ರಣ ಮಾಡಲು ನಿಮಗೆ ಹ್ಯಾಗೆ ಸಾಧ್ಯವಾಯಿತು? ನೀವೂ 'ಚಾಳ'ದಲ್ಲಿ ಬೆಳೆದಿದ್ದಿರಾ?

ಹೌದು. ಸಾಂಸ್ಕೃತಿಕ ದೃಷ್ಟಿಯಿಂದ ನಾನೂ ಚಾಳಕರೀನೇ. ಆ ಕಾಲದಲ್ಲಿ ಇಡೀ ಮಧ್ಯಮವರ್ಗದ ಮಹಾರಾಷ್ಟ್ರವೇ ಗಿರಗಾಂವ ಚಾಳಿಯಲ್ಲಿಯೇ ವಾಸಿಸುತ್ತಿತ್ತು. ಆಗ 'ದಾದರ' ಎಲ್ಲಿ ಇತ್ತು? ಆ ಮುಂದೆ ಆತು ಅದು. ಅಲ್ಲಿ ಗಿರಗಾಂವಿನಲ್ಲಿ ಹೆಚ್ಚಾಗಿ 'ಚಾಳ' ಅನುಭವಿಸಿದೆ. ಈ ಹೆಸರಿನ ನಿಜವಾದ ಚಾಳ ಇದೆ ಎಂಬುದು ನನಗೂ ಆನಂತರ ಗೊತ್ತಾಯಿತು. 'ಬಟಾಟ್ಯಾಚೀ ಚಾಳ' ಈ ಹೆಸರು ನಾನು ಪತ್ಯೇ ಬಾಪೂರಾವ ಅವರು ಮುಂಬಯಿ ಕುರಿತು ಬರೆದ ಲಾವಣಿಯಿಂದ ತಗೊಂಡಿದ್ದೇನೆ. ಬಟಾಟ್ಯಾಚೀ ಚಾಳ ಎಂದು ನಿಜವಾಗಿಯೂ ಒಂದು ಚಾಳ ಇದೆ ಎಂದು ನನಗೆ ಆಮೇಲೆ ಗೊತ್ತಾಯಿತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ಬಹುರೂಪಿಯ'ಯ ಪ್ರಯೋಗದ ಬಗ್ಗೆ ಏನು ಹೇಳತೀರಿ?

ಬಹುರೂಪಿಯ ಪ್ರಯೋಗ ಸ್ವಲ್ಪ ಚಮತ್ಕಾರಿಕವಿದೆ. ನಿಮ್ಮೊಬ್ಬರಿಗೇ ಎಲ್ಲವನ್ನೂ ಮಾಡಬೇಕಾಗುತ್ತದೆ. ಪ್ರತಿಯೊಂದು ಪಾತ್ರ, ಶಾರೀರಿಕ ಶೀವಿಗಳು, ಅವು ಮಾತನಾಡುವ ರೀತಿ ಇವೆಲ್ಲವುಗಳ ಸೂಕ್ಷ್ಮ ನಿರೀಕ್ಷಣೆ ಮಾಡಿ ಮನಸ್ಸಿನಲ್ಲಿ ಅವುಗಳನ್ನು ಸಿದ್ಧತೆ ಆಗಬೇಕು. ಬಟಾಟ್ಯಾಚೀ ಚಾಳಿನ ೨ ಘಂಟೆಯ Script ನಾನು ಸಂಧ್ಯಾ ಮಂತ್ರಗಳ ಹಾಗೆ ಬಾಯಿಪಾಠ ಮಾಡಿದ್ದೇನೆ. Script ಬಾಯಿಪಾಠ ಇರದಿದ್ದರೆ ನಾಟಕದ ರಚನೆಯೇ ಕೆಟ್ಟು ಹೋಗುತ್ತದೆ. ಈ ಮೂರುವರೆ ಘಂಟೆಗಳಲ್ಲಿ ನಾನು ನನ್ನ ಕೋಣೆಯಲ್ಲಿ ಹುಚ್ಚನಹಾಗೆ ಅಡ್ಡಾಡಿ ಪಾತ್ರಗಳ ಅಭಿನಯ ಮಾಡಿ ನೋಡುತ್ತೇನೆ. ಪ್ರಯೋಗವಿದ್ದ ದಿನ ನಾನು ಮುಂಜಾನೆ ಮೂರು ಘಂಟೆ ಕೂತು Script ಅಂದು ನೋಡುತ್ತೇನೆ. ಆ ದಿನ ನಾನು ಯಾರಿಗೂ ಭೆಟ್ಟಿಯಾಗುವದಿಲ್ಲ.

'ಬಹುರೂಪಿ'ಗೆ ಗಂಭೀರ Script ನಡೆಯಬಹುದೇ?

ನಡೆಯಲಾರದು ಅಂತ ಅನಿಸುತ್ತದೆ. ರಂಜನೆ ಮತ್ತು ಹಾಸ್ಯಗಳಿದ್ದರೇನೇ 'ಬಹುರೂಪಿ' ಜನರಿಗೆ ಸೇರುತ್ತದೆಂದು ನನ್ನ ಅನುಭವ. ನನ್ನ ಪತ್ನಿ ಸೌ. ಸುನೀತಾ 'ಜೀಜಾಬಾಯಿ' ಎಂಬ ಗಂಭೀರ ಪ್ರಯೋಗದಲ್ಲಿ ಕೆಲಸ ಮಾಡುತ್ತಿದ್ದಳು. ಆ ಪ್ರಯೋಗ ಯಶಸ್ವಿ ಆಗಲಿಲ್ಲ.

ಇತ್ತೀಚೆಗೆ ಮರಾಠಿಯಲ್ಲಿ 'ಕಥಾಕಥನದ ಕಾರ್ಯಕ್ರಮಗಳೂ ಹೆಚ್ಚಾಗಿ ಲೋಕಪ್ರಿಯವಾಗಿವೆ. ಕಥಾಕಥನ ಮತ್ತು 'ಬಹುರೂಪಿ'ಯಲ್ಲಿ ಏನು ವ್ಯತ್ಯಾಸ ಹೇಳಬಹುದು?

ಕಥಾಕಥನ ಮತ್ತು 'ಬಹುರೂಪಿ' ಇವುಗಳಲ್ಲಿ ನಿಜವಾಗಿಯೂ ಅಂತರವಿದೆ. ಕಥಾಕಥನದಲ್ಲಿ ಪುಸ್ತಕದಲ್ಲಿರುವ ಕಥೆಯೇ ನೇರವಾಗಿ ಮುಂದೆ ಸಾಗುತ್ತದೆ. ಮುಂದೆ ಸಾಗಿಸುವಷ್ಟೇ ಕೆಲಸ ಅಲ್ಲಿ ಮಾಡಿದರೆ ಆಯಿತು. ಆದರೆ ಬಹುರೂಪಿಯಲ್ಲಿ ಬೇರೆ ಬೇರೆ ಪಾತ್ರಗಳನ್ನು ಜೀವಂತಗೊಳಿಸಿ ವ್ಯಕ್ತಪಡಿಸಬೇಕಾದ್ದರಿಂದ ಅಭಿನಯಕ್ಕೆ ಅಲ್ಲಿ ಹೆಚ್ಚು ಮಹತ್ವವಿದೆ. ಕಥಾಕಥನವು ಹೆಚ್ಚಾಗಿ 'ವಾಂಙ್ಮಯೀನ' ಆಗಿದ್ದರೆ ಬಹುರೂಪಿ ಹೆಚ್ಚಾಗಿ 'ಪ್ರಾಯೋಗಿಕ' ವಾಗುತ್ತದೆ. ಈ ಎರಡೂ ತರಹದ ಪ್ರಯೋಗಗಳು ಇಂದು ಮರಾಠಿಯಲ್ಲಿ ತುಂಬಾ ಲೋಕಪ್ರಿಯವಾಗಿವೆ.

ನಿಮ್ಮ ಬಟಾಟ್ಯಾಚೀ ಚಾಳ ಓದುವಾಗ ಅಥವಾ ಕೇಳುವಾಗ ನಷ್ಟವಾಗುತ್ತಿರುವ ಹಳೆಯ ಸಂಸ್ಕೃತಿ ಬಗ್ಗೆ ನಿಮಗೆ ದುಃಖವಾಗುತ್ತದೆ ಎಂಬ ಭಾವನೆಯೂ ಕಾಣುತ್ತದೆ. ನಿಮ್ಮಲ್ಲಿ ಒಂದು ಬಗೆಯ Nostalgia ಇದೆಯೋ ಏನೋ ಅಂತ ಅನಸ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಾಗಿದ್ದರೆ ನಿಮ್ಮ ನಾಸ್ತಿಕ ಭಾವನೆಗೂ ಮತ್ತು ಈ ಥರದ ಶ್ರದ್ಧೆಗಳಿಗೂ ಯಾವ ಸಂಬಂಧವಿದೆ ಅಂತ ಹೇಳತೀರಿ?

ಹಾಗೆ ನೋಡಿದರೆ ನಾನು ಶ್ರದ್ಧಾವಂತನೆಂದೇ ಹೇಳಬೇಕು. ಬಾಲಗಂಧರ್ವರು ನನಗೆ ಎಲ್ಲಿ ಕಾಣಿಸಿದರೂ ಅವರ ಕಾಲುಗಳ ಮೇಲೆ ಹಣೆ ಹಚ್ಚುತ್ತಿದೆ. ಒಮ್ಮೆ ತಿರಖವಾ ಕೈಯಲ್ಲಿ ತಬಲಾ ತಗೊಂಡು ರೇಡಿಯೋದಲ್ಲಿ ಬಂದರೆ ನಾನು ಸಿಟ್ಟಿಗೆ ಬಂದೆ. ಅಂಥ ಶ್ರೇಷ್ಠ ಕಲಾವಂತನಿಗೆ ತಬಲಾ ಎತ್ತಿಕೊಂಡು ಬರುವ ಪ್ರಸಂಗ ಬರಬೇಕು ಇದು ನಮಗೆ ಲಾಂಛನಾಸ್ಪದವೆಂದು ನನಗನಿಸಿತು. ಬದುಕಿನಲ್ಲಿ ತಲೆ ಬಾಗಿಸಲು ಕಾಲುಗಳು ಬೇಕೇಬೇಕು ಎಂದು ಭಾವಿಸಿದ್ದೇನೆ. ಇಂಗ್ಲಂಡದಲ್ಲಿ ಒಮ್ಮೆ ಅಕಸ್ಮಾತ್ ಚಾರ್ಲೀ ಚಾಪ್ಲೀನ್ ಕಾಣಿಸಿದರು. ಆಗ ಕಣ್ಣಲ್ಲಿ ನೀರು ಬಂದವು. ನಾನು ಕೈ ಮುಗಿದು ಅವರನ್ನು ನಮಸ್ಕರಿಸಿದೆ. ಆ ಮೇಲೆ ಕೆಲ ಕಾಲದ ನಂತರ ನನಗೆ ನನ್ನ ಬಗ್ಗೆ ನಗು ಬಂತು. ಆದರೆ ಅದಕ್ಕೇನು ಪರ್ಯಾಯ ಇಲ್ಲ. ಗಡಕರಿಯವರ ಒಂದು ಪ್ರಸಿದ್ಧ ವಾಕ್ಯವಿದೆ. '' ಟಿಳಕರು ಮಂಡಾಲೆಗೆ ಹೋದಮೇಲೆ ಎದುರಿನಿಂದ ಬಂದವರನ್ನು ಕಂಡು ಕೈಯಲ್ಲಿಯ ಬೀಡಿ ದೂರ ಒಗೆದು ಬಿಡಬೇಕು ಅಂತ ಅನಿಸಬೇಕು ಅಂಥವರು ಯಾರೂ ಇನ್ನು ಈ ಪುಣೆಯಲ್ಲಿ ಉಳಿದಿಲ್ಲವಲ್ಲ?'' ಇದಕ್ಕೆ ಕಾರಣವೆಂದರೆ ನಾವೆಲ್ಲರೂ ದಿನದಿನಕ್ಕೆ ಹೆಚ್ಚು ಹೆಚ್ಚು ಸಂವೇದನ ಶೂನ್ಯರಾಗುತ್ತಿದ್ದೇವೆಯೋ ಏನೋ! 'It is a sin to have a mind' ಅಂತ ಅನಿಸುತ್ತದೆ. ಆದ್ದರಿಂದ ನನಗೆ ಯಾರಾದರೂ ಶ್ರದ್ಧಾವಂತನೆಂದು ಹೇಳುತ್ತಿದ್ದರೆ ಅದಕ್ಕಾಗಿ ನಾನು ದು:ಖಪಡಬೇಕಾಗಿಲ್ಲ.

ನೀವು ಬರೆದ ಕಾಲ್ಪನಿಕ ವ್ಯಕ್ತಿಚಿತ್ರಗಳು ಮರಾಠಿಯಲ್ಲಿ ತುಂಬ ಲೋಕಪ್ರಿಯವಾದವು 'ನಾರಾಯಣ', ಅಂತೂಬರ್ವಾ, ಸಖಾರಾಮ ಗಟಣೆ ಇಂಥ ವ್ಯಕ್ತಿಯ ನಿಮಗೆ ಪ್ರತ್ಯಕ್ಷದಲ್ಲಿ ಭೆಟ್ಟಿಯಾಗಿರೋರೊ ಅಥವಾ ಕಲ್ಪನೆಯಂತೆ ಬಣ್ಣಿಸಿದ್ದೀರಿ.

ನನಗೆ ಮನುಷ್ಯನಲ್ಲಿಯ ವಿಶೇಷ ಲಕಬಿ ಮೊದಲು ಕಾಣುತ್ತದೆ. ಆ ಆಧಾರದಿಂದ ನಾನು ಲಕಬಿಯ ಹಿಂದೆ ಇದ್ದ ಇಡೀ ಮನುಷ್ಯನನ್ನು ಗುರುತಿಸಲು ಆರಂಭಿಸುತ್ತೇನೆ. ನನಗೆ ಆ ಮನುಷ್ಯ ಖಿಡಕಿಯ ಹಾಗೆ ಕಾಣುತ್ತಾನೆ.

ಅಂದರೆ ವೈಶಿಷ್ಟ್ಯದಿಂದ ವ್ಯಕ್ತಿಯ ಕಡೆಗೆ ನೀವು ಬರೆಯುತ್ತ ಹೋಗುತ್ತೀರಿ. ವ್ಯಕ್ತಿಯಿಂದ ವೈಶಿಷ್ಟ್ಯದಕಡೆಗೆ ಅಲ್ಲ.

ಹೌದು. ಆದರೂ ಕೆಲ ಸಮೀಕ್ಷಕರು 'ನಾರಾಯಣ' ಇದು type caste ಇದೆ ಅಂತ ಬರೆದಿದ್ದಾರೆ. ಆದರೆ ನನಗೆ ಹಾಗೆ ಅನಿಸೋದಿಲ್ಲ 'ನಾರಾಯಣ' ಎಲ್ಲ ಮದುವೆ ಹಂದರಗಳಲ್ಲಿ ಕಾಣುವ ವ್ಯಕ್ತಿಯಾದರೂ ಅವ ಜೀವಂತ ವ್ಯಕ್ತಿಯಾಗಿಯೇ ಕಾಣು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri
ತ್ತಾನೆ ಅಂತ ನನ್ನ ಭಾವನೆ.

ನೀವು ಬರೆದ ಪ್ರವಾಸ ವರ್ಣನೆಗಳ ಪುಸ್ತಕಗಳೂ ಕೂಡ ಮರಾಠಿಯಲ್ಲಿ ತುಂಬಾ ವಾಚಕ ಪ್ರಿಯಗಳಾಗಿವೆ. ಪ್ರವಾಸವರ್ಣನೆಯನ್ನು Form ಅಂತ ಅಭ್ಯಸಿಸಬೇಕು ಇಷ್ಟು ನಿಮ್ಮ ಪ್ರವಾಸವರ್ಣನೆಗಳು ಮಹತ್ವವನ್ನುಂಟು ಮಾಡಿವೆ. ಈ ಬಗ್ಗೆ ನಿಮ್ಮ ದೃಷ್ಟಿಕೋನ ಏನು?

ಈಗ ಹಿಂದಿನಷ್ಟು ಪ್ರವಾಸವರ್ಣನೆಯ ಅಪರೂಪತೆ ಉಳಿದಿಲ್ಲ. ಟಿ.ವ್ಹಿ. ಮೂಲಕ ಇಡೀ ಜಗತ್ತೇ ಮನೆಯಲ್ಲಿ ಬಂದು ಕೂತಿದೆ. ನನ್ನ ಪ್ರವಾಸ ವರ್ಣನೆಯ ಲೋಕಪ್ರಿಯತೆಯ ಒಂದು ಕಾರಣ ನನಗೆ ತೋರಿದ ಹಾಗೆ ಹೇಳಬೇಕಾದರೆ ನಾನು ಸ್ಥಲವರ್ಣನೆ ಅಥವಾ ನಿಸರ್ಗವರ್ಣನೆ ಇವುಗಳಿಂತ ಮನುಷ್ಯ ವರ್ಣನೆಯಲ್ಲಿ ಹೆಚ್ಚು ಹೊಕ್ಕಿದ್ದೇನೆ ಅಂತ ಅನಸ್ತದೆ. ನನಗೆ ಎಲ್ಲಿ ಹೋದರೂ ಮನುಷ್ಯನ ಬಗ್ಗೆ ಕುತೂಹಲ ಇದೆ.

ನಿಮ್ಮ ಪ್ರವಾಸವರ್ಣನೆಗಳಲ್ಲಿ ಮತ್ತೊಂದು ಏನು ಕಾಣ್ತದೆ ಅಂದರೆ ನೀವು ಪರದೇಶದಲ್ಲಿದ್ದರೂ ಕೂಡ ನಿಮ್ಮ ಮನಸ್ಸು ಮತ್ತೆ ಮತ್ತೆ ಭಾರತದ ಕಡೆಗೆಯೇ ಬರುತ್ತದೆ. ಭಾರತಕ್ಕೆ ಹೋಲಿಸದ ಹೊರತು ನಿಮ್ಮ ಅಲ್ಲಿಯ ವರ್ಣನೆ ಪೂರ್ಣಗೊಳ್ಳುವದಿಲ್ಲ. ಉದಾಹರಣೆಗೆ ಅಲ್ಲಿಯ Aero-drome ನೋಡಿದಮೇಲೆ ನಿಮಗೆ ಇಲ್ಲಿಯ ಬಸ್ ನಿಲ್ದಾಣದ ನೆನಪಾಗುತ್ತದೆ.

ಹೌದು ! ಪ್ರವಾಸ ವರ್ಣನೆಯು ಆಯಾ ಕಾಲದಲ್ಲಿ ಒಂದು ದೃಷ್ಟಿಯಿಂದ ಆ ಲೇಖಕನ ಆತ್ಮಚರಿತ್ರೆಯೇ ಇರುತ್ತದೆ. ಅಂತ ನನಗೆ ಅನಿಸ್ತದೆ. ಪರದೇಶಕ್ಕೆ ಹೋದಾಗಲೇ ಸ್ವದೇಶದ ಅರಿವು ಹೆಚ್ಚು ತೀವ್ರವಾಗುತ್ತದೆ. ಅಂತ ನನ್ನ ಅನುಭವ ನಾನಿದನ್ನು ಕೇವಲ ಸೆಂಟಿಮೆಂಟಲ್ ಆಗಿ ಹೇಳುತ್ತಿಲ್ಲ.

ನಿಮ್ಮ ಈ ವಿಶ್ವಸಂಚಾರದಲ್ಲಿ ನಿಮಗೆ ಯಾವ ದೇಶಗಳ ಬಗ್ಗೆ ವಿಶೇಷ ಆಕರ್ಷಣೆ ನಿರ್ಮಾಣವಾಗಿದೆ?

ಜಪಾನ ನನಗೆ ತುಂಬಾ ಸೇರಿದೆ. ಅದಕ್ಕೆ ಈಚೆಗೆ ಅದೂ ಬದಲಾಗುತ್ತದೆ ಅಂತ ಕೇಳಿದ್ದೇನೆ. ನನ್ನ 'ಪೂರ್ವರಂಗ' ಪುಸ್ತಕದಲ್ಲಿ ಜಪಾನ ಬಗ್ಗೆ ಬರೆದಿದ್ದೇನೆ. ಸೌಂದರ್ಯ ದೃಷ್ಟಿಯಿಂದ ಕೇಳಿದರೆ ನನಗೆ ಇಂಡೋನೇಶಿಯಾ ಹೆಚ್ಚು ಹಿಡಿಸಿದೆ. ಅಂಥಾ ಹಚ್ಚು ಹಸಿರು ಸೃಷ್ಟಿ ಸೌಂದರ್ಯ ನಾನೆಲ್ಲಿಯೂ ಕಂಡಿಲ್ಲ. ಕಲಾಸಕ್ತ ಮತ್ತು ಎತ್ತರ ನಿಲುವಿನ ಸ್ತ್ರೀ ಪುರುಷರು, ಸಣ್ಣ ಸಣ್ಣ ಊರುಗಳಲ್ಲೆ ಇಡೀ ವರ್ಷ ತುಂಬಿ ನಡೆವ (ಅಲ್ಲಿಯ) ಉತ್ಸವಗಳು ನನ್ನನ್ನು ತುಂಬಾ ಮೋಹಿಸಿವೆ. ಸ್ವಿತ್‌ಝರ್ಲಂಡವೂ ಸೇರಿದೆ. ಇತ್ತೀಚೆಗೆ ನಾನು ಕ್ಯಾನಡಾದಲ್ಲಿಯ ಪ್ಯಾನ್ಸ ಎಂಬುವ ಒಂದುಸಣ್ಣ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri
ಊರು ನೋಡಿ ಬಂದೆ. ಅದನ್ನು ಶಬ್ದಗಳಲ್ಲಿ ವರ್ಣಿಸುವದು ನಿಜವಾಗಿಯೂ ಅಶಕ್ಯವೆನಿಸುತ್ತದೆ. ಸಣ್ಣ ಬಾಲಕರ ಚಿತ್ರಗಳ ಪುಸ್ತಕದಲ್ಲಿ ಹ್ಯಾಗೆ ಒಂದು ಬಣ್ಣದ ಚಿಕ್ಕ ಊರು ಇರುತ್ತದೆ ಹಾಗೆ ಅದು ನನಗೆ ಸಾಕ್ಷಾತ್ ಗೋಚರವಾಯಿತು.

ನೀವು ಅಮೇರಿಕೆಯ ಕುರಿತು 'ವಿಳಾಸ ಕಳೆದಕೊಂಡ ದೇಶ' ಅಂತ ವರ್ಣನೆ ಮಾಡಿದ್ದೀರಿ. ಅದು ನಿಜವಾಗಿಯೂ ಯಥಾರ್ಥವಾಗಿದೆ.

ಅಮೇರಿಕೆ ಸಂಪನ್ನವಾದ ದೇಶ ಆಗಿದೆ. ಆದರೆ ಸಾಂಸ್ಕೃತಿಕವಾಗಿ ಅದು ಹೆಚ್ಚು ದೀನವಾಗುತ್ತಿದೆಯೂ ಎಂಬ ಭಾವನೆ ನನನ್ನು ಆಗ ಕಾಡಿದೆ. ಆದ್ದರಿಂದ ನಾನು ಹಾಗೆ ಬರೆದಿದ್ದೇನೆ.

ಇಚಲಕರಂಜೀ ಸಾಹಿತ್ಯ ಸಮ್ಮೇಲನದಲ್ಲಿ ನೀವು ಅಧ್ಯಕ್ಷಸ್ಥಾನದಿಂದ ಮಾಡಿದ ಭಾಷಣದಲ್ಲಿ ಲೇಖಕನ ವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಆಗ್ರಹದಿಂದ ಹೇಳಿದ್ದಿರಿ. ಇನ್ನೂ ನಿಮ್ಮ ಮತ ಹಾಗೆಯೇ ಇದೆಯೇ?

ಹೌದು. ಇಂದಿಗೂ ಅದೇ ಮತ ಇದೆ. ಆ ಭಾಷಣದಲ್ಲಿ ನಾನು ಜ್ಞಾನೇಶ್ವರರ ಒಂದು ವಚನದಲ್ಲಿ ಸ್ವಲ್ಪ ಬದಲುಮಾಡಿ ತಾನು ಇಷ್ಟಪಟ್ಟದ್ದನ್ನು ಲೇಖಕ ಬರೆಯಲಿ ಎಂದು ಹೇಳಿದೆ. ಆದರೆ ಯಾವಾಗ? ಸ್ನೇಹಭಾವನೆಯನ್ನು Basi ಆಗಿ ಇಟ್ಟುಕೊಂಡಮೇಲೆ ಆತ ಏನೇ ಬರೆದರೂ ಅಡ್ಡಿ ಇಲ್ಲ ಅಂತ ಅನಿಸುತ್ತಿದೆ. ಆದರೆ ಸದ್‌ಭಾವನೆ-ಸ್ನೇಹಭಾವನೆ ಇದು Basie ಬೇಕು ಅಂತ ಆಗಲೂ ನಾನು ಆಗ್ರಹದಿಂದ ಹೇಳಿದ್ದೆ. ಈಗಲೂ ಹೇಳುತ್ತೇನೆ. ಸ್ವಾತಂತ್ರ್ಯ ಮತ್ತು ಉಛ್ರಂಬಲತೆ ಇವುಗಳಲ್ಲಿಯ ವ್ಯತ್ಯಾಸ ನಾವು ತಿಳಿದುಕೊಳ್ಳಬೇಕು. ಪ್ರತಿಯೊಂದು ಸಮಾಜದಲ್ಲಿ ಉಚ್ಛೃಂಖಲ ಪ್ರವೃತ್ತಿಯ ಜನರು ಇದ್ದೇ ಇರುತ್ತಾರೆ. ಉಚ್ಛೃಂಖಲ ಜನರಿಗಾಗಿ ಉಚ್ಛೃಂಖಲ ಸಾಹಿತ್ಯ ನಿರ್ಮಿತ ಆಗುವದು ಸನಾತನ ಕಾಲದಿಂದ ನಡೆದು ಬಂದಿದೆ. ಆದ್ದರಿಂದ ಅಂಥ ಸಾಹಿತ್ಯ ಕುರಿತು ತೀವ್ರವಾಗಿ ಚಿಂತಿಸುವ ಅವಶ್ಯಕತೆ ಇದೆ ಅಂತ ನನಗೆ ಅನಿಸೋದಿಲ್ಲ. ಗಿರಾಕಿ ಬರದಿದ್ದರೆ ವ್ಯಾಪಾರ ತನ್ನ ತಾನೇ ನಿಲ್ಲುತ್ತದೆ. ಹಾಗೆಯೇ ಸಾಹಿತ್ಯ ಕ್ಷೇತ್ರದಲ್ಲಿಯೂ ಕೂಡ ಅಂಥ ಉಚ್ಛೃಂಖಲ ಸಾಹಿತ್ಯಕ್ಕೆ ವಾಚಕರೇ ಕಡಿಮೆ ಆದಾಗ ಅದೂ ಕಡಿಮೆ ಆಗುತ್ತ ಹೋಗಬಹುದು. ಆದ್ದರಿಂದ ಕಾಯದೆ ಮಾಡಿ ಅಂಥ ಸಾಹಿತ್ಯವನ್ನು ನಿರಾಕರಿಸುವದು ಅನೈಸರ್ಗಿಕವೆಂದು ನನಗೆ ಪ್ರಾಮಾಣಿಕವಾಗಿ ಅನಿಸುತ್ತದೆ. ಆದರೆ ಅನ್ಯರನ್ನು ಶೋಷಣೆ ಮಾಡುವ ಪ್ರವೃತ್ತಿ ಅಥವಾ ಅನ್ಯರನ್ನು ದ್ವೇಷಿಸುವ ಪ್ರವೃತ್ತಿ ಬೆಳೆಸುವ ಸಾಹಿತ್ಯ ಮಾತ್ರ ದೂರ ಇಡಬೇಕು ಅಂತ ಅನಿಸುತ್ತದೆ.

ಆದರೆ ಆ ಸಾಹಿತ್ಯ ಹಾಗಿದೆ ಅಂತ ಹೇಳುವ ಅಧಿಕಾರ ಯಾರದು?

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri
ತ್ರ ಅಧಿಕಾರ ಯಾರಿಗೂ ಕೊಡಬೇಕಾಗಿಲ್ಲ. ಅದು ತನ್ನ ತಾನೇ ಸಿದ್ಧವಾಗುತ್ತದೆ. ಸಾಹಿತ್ಯವನ್ನು Control ಮಾಡುವ ಕಲ್ಪನೆ ನನಗೆ ಎಳ್ಳಷ್ಟೂ ಮಾನ್ಯವಿಲ್ಲ. ಕಂಟ್ರೋಲ ಮಾಡುವವನೇ ಮುಂದೆ ಸತ್ತಾಧೀಶನಾಗುತ್ತಾನೆ. ಎರಡು Evils ಗಳಲ್ಲಿ ಯಾವುದಾದರೊಂದು ಆರಿಸುವ ಪ್ರಸಂಗ ಬಂದರೆ ನಾನು ಹುಕುಮ ಶಹಾನಕ್ಕಿಂತಲೂ ಉಚ್ಛೃಂಖಲವಾದಿಯನ್ನೇ ಆರಿಸುವೆ.

ಇಂದಿನ ಸಾಹಿತ್ಯ ಸಮ್ಮೇಲನಗಳ ಸ್ವರೂಪದ ಬಗ್ಗೆ ಹಾಗೂ ಅಧ್ಯಕ್ಷ ಚುನಾವಣೆಯ ಪ್ರಕಾರದ ಬಗ್ಗೆ ಒಂದು ತರದ ಅಸಮಾಧಾನ ಕಾಣುತ್ತದೆ. ನಿಮ್ಮ ಅಭಿಪ್ರಾಯ ವೇನು?

ಇಂದಿನ ಸಮ್ಮೇಲನಗಳು ಹೆಚ್ಚಾಗಿ ಜಾತ್ರೆಗಳಾಗಿವೆ. ಆದ್ದರಿಂದ (ಎಲ್ಲರನ್ನು ಪ್ರಸನ್ನ ಮಾಡಬೇಕಾದರೆ) ಸಾಹಿತ್ಯ ಬಾಹ್ಯ Adjustment ಮಾಡಲೇಬೇಕಾಗುತ್ತದೆ. ಗ್ರಂಥ ಗಳ ಮಾರಾಟ ಮತ್ತು ಗ್ರಂಥಾಭಿರುಚಿ ಬೆಳೆಸುದಕ್ಕೋಸ್ಕರ ಇಂಥ ಜಾತ್ರೆಗಳನ್ನು ಉಪಯೋಗಿಸಲು ಅಡ್ಡಿ ಇಲ್ಲ.

ಜಾತ್ರೆಯ ಸ್ವರೂಪ ಬದಲಾಯಿಸಿದರೆ?

ಯಾಕೆ ಬದಲಾಯಿಸಬೇಕು? ಜನರು ಸಾಹಿತ್ಯದ ಕಡೆಗೆ ಬರಲೇಬೇಕು. ಬೇಕಾದರೆ ಕಥಾಸಮ್ಮೇಲನ, ನಾಟ್ಯಸಮ್ಮೇಲನ, ಕವಿಸಮ್ಮೇಲನ ಹೀಗೆ ಬೇರೆ ಬೇರೆ ವಿಷಯ ಸಮ್ಮೇಲನಗಳನ್ನು ಏರ್ಪಡಿಸಬೇಕು. ಅಂದರೆ ಜನರೂ ಕೂಡ ಆಯಾ ವಿಷಯಗಳ ಪೂರ್ವಸಿದ್ಧತೆ ಯಿಂದ ಬರಬಹುದು.

ಇತ್ತೀಚೆಗೆ ಗ್ರಾಮೀಣ ಸಾಹಿತ್ಯ ಸಮ್ಮೇಲನದ Movement ವೂ ಮರಾಠಿಯಲ್ಲಿ ನಡೆದಿದೆ.

ಗ್ರಾಮೀಣ ಸಮ್ಮೇಲನಗಳು ವಾತಾವರಣ ನಿರ್ಮಿತಿಗಾಗಿ ಅವಶ್ಯಕ ಇವೆ ಅಂತ ನನಗೆ ಅನಿಸುತ್ತದೆ. ಸಾಮಾನ್ಯ ಹಳ್ಳಿಗಳಲ್ಲಿಯೂ ಕೂಡ ಇಡೀರಾತ್ರಿ ಕವಿ ಸಮ್ಮೇಲನ ನಡೆಯುತ್ತದೆ. ಮತ್ತು ಸಾವಿರಾರು ಹಳ್ಳಿಗರು ಇಡೀ ರಾತ್ರಿ ಕೂತು ಕೇಳುತ್ತಾರೆ. ಇದು ನನಗೆ ಹೊಸ ಜಾಗೃತಿ ಅನಿಸುತ್ತವೆ. ಆದ್ದರಿಂದ ಇಂಥ ಸಮ್ಮೇಲನಗಳಿಗೆ ಉತ್ತೇಜನ ಕೊಡಬೇಕು.

ಇತ್ತೀಚೆಗೆ ಮರಾಠಿಯಲ್ಲಿ ಮಾರ್ಕ್ಸವಾದಿ, ಗಾಂಧಿವಾದೀ, ಸಾರವರಕ ವಾದೀ ಈ ಪ್ರಕಾರದ ಸಮ್ಮೇಲನಗಳೂ ಆಗುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಒಂದು ದೃಷ್ಟಿಯಿಂದ ಇಂಥ ಸಮ್ಮೇಲನಗಳೂ ಉಪಕಾರಕ ಇವೆ. ಯಾಕೆಂದರೆ ರಾಜಕೀಯ ಪಕ್ಷಗಳಲ್ಲಿರುವ ಅಭಿನಿವೇಶ ಮತ್ತು ಆತ್ಮಚಿಂತನೆಯ ಅಭಾವ ಇಂಥ ಸಮ್ಮೇಲನಗಳಲ್ಲಿಯ ಚರ್ಚೆಗಳ ಮೂಲಕ ಕಡಿಮೆ ಆಗಬಹುದು ಮತ್ತು ಹೊಸ ಹೊಸ ರೀತಿಯಿಂದ. ಅಭ್ಯಾಸಮಾಡುವ ಪ್ರಯತ್ನ ಬೆಳೆಯಬಹುದೆಂದು ನನಗೆ ಅನ್ನಿಸುತ್ತದೆ.

ಅಶ್ಲೀಲ ಸಾಹಿತ್ಯ ಕುರಿತು ಈಗ ಸಾಕಷ್ಟು ಚರ್ಚೆ ನಮ್ಮ ದೇಶದಲ್ಲಿ ಆಗಿ ಹೋಗಿದೆ. ಆದರೂ ನಿಮ್ಮ ಅಭಿಪ್ರಾಯವೇನು?

'ಅಶ್ಲೀಲ' ಅನ್ನೋದಕ್ಕಿಂತಾ ಲೈಂಗಿಕ ಅಂತ ಶಬ್ದ ಉಪಯೋಗಿಸೋಣ. ಅಂಥ ಸಾಹಿತ್ಯದಲ್ಲಿ ಮೊಟ್ಟಮೊದಲು ಅದರ ಉದ್ದೇಶ ಅದರ ಹೇತು ತಿಳಿದುಕೊಳ್ಳಬೇಕು. ಅದು ಯೋಗ್ಯವಿದ್ದರೆ ಶಬ್ದಗಳಿಗೆ ನಾವು ಅಂಜಬಾರದು ಅಂತ ಅನ್ನಿಸುತ್ತದೆ. ಬಡತನದಿಂದ ಒಬ್ಬ ಮನುಷ್ಯ ಕಾಮವಾಸನೆಗೆ ಬಲಿ ಬೀಳುತ್ತಿದ್ದರೆ ನನಗೆ ಆತನ ಕಾಮವಾಸನೆಗಿಂತಲೂ ಆತನ ಬಡತನ ಹೆಚ್ಚು ಚಿಂತನೆಯ ವಿಷಯ ಅಂತ ಕಾಣ್ತದೆ.

ಕಳೆದ ೧೦-೧೫ ವರ್ಷಗಳಲ್ಲಿ ದಲಿತ ಸಾಹಿತ್ಯ ಕುರಿತು ಬಹಳಷ್ಟು ಚರ್ಚೆ ಚಿಂತನೆ ಆಗಿ ಹೋಗಿವೆ. ನೀವು ಪ್ರಾರಂಭದಿಂದ ದಲಿತ ಸಾಹಿತ್ಯವನ್ನು ಪ್ರೋತ್ಸಾಹಿಸುತ್ತಿದ್ದೀರಿ. ಈವರ್ಷ ಚಂದ್ರಪೂರದಲ್ಲಿ ನಡೆದ ದಲಿತ ಸಾಹಿತ್ಯ ಸಮ್ಮೇಲನದ ಉದ್ಘಾಟಕರೂ ಆಗಿದ್ದೀರಿ. ಇಂದು ದಲಿತ ಸಾಹಿತ್ಯದ ಸ್ವರೂಪ ಹೇಗಿದೆ?

ಮರಾಠಿಯಲ್ಲಿ ಈಗ ದಲಿತ ಸಾಹಿತ್ಯದಲ್ಲಿ ೨ನೇ ೩ನೇ ಪೀಳಿಗೆಯ ಲೇಖಕರು ಬರೆಯುತ್ತಿದ್ದಾರೆ. ಹೊಸ ಹೊಸ ಆತ್ಮಚರಿತ್ರೆಗಳು ನಿರ್ಭಯವಾಗಿ ಪ್ರಗಟವಾಗುತ್ತವೆ. ದಲಿತ ಸ್ತ್ರೀ ಲೇಖಕಿಯರೂ ಕೂಡ ಈಗ ಮುಂದೆ ಬರುತ್ತಿದ್ದಾರೆ. ಹಿಂದಿನ ಅನವಶ್ಯಕ ಕಟುತೆ ಈಗ ಕಡಿಮೆ ಆಗುತ್ತಿದೆ. ಕಥೆ, ಕವಿತೆ, ನಾಟಕ, ಆತ್ಮಚರಿತ್ರೆ, ಸಮೀಕ್ಷೆ ಈಗ ಎಲ್ಲ ಕ್ಷೇತ್ರಗಳಲ್ಲಿ ಹೊಸ ಹುರುಪಿನ ಯುವಕ ಲೇಖಕರು ಆತ್ಮವಿಶ್ವಾಸದಿಂದ ಬರೆಯುತ್ತಿದ್ದಾರೆ. ಇದರ ಸ್ವಾಗತವಾಗಬೇಕು ಅಂತ ನನಗೆ ಅನಿಸುತ್ತದೆ.

ಡಾ. ಅಂಬೇಡಕರ ಪ್ರೇರಣೆಯಿಂದ ನಿರ್ಮಾಣವಾಗುತ್ತಿರುವ ಈ ಸಾಹಿತ್ಯ ಹೆಚ್ಚಾಗಿ ರಾಜಕೀಯ ಅಥವಾ ಸಾಮಾಜಿಕ ಸ್ವರೂಪದ್ದಾಗಿ ಕಾಣುವದರಿಂದ ಅದಕ್ಕೆ ವಿರೋಧವಾಗುತ್ತಿರಬಹುದೆ?

ಈ ಸಾಹಿತ್ಯದ ಮುಖ್ಯ ಪ್ರೇರಣೆ ಅಂಬೇಡಕರರ ವಿಚಾರಗಳು. ನಿಃಸಂಶಯವಾಗಿ ಹೌದು ಈ ಸಾಹಿತ್ಯ ಓದುವಾಗ ನಾವು ನಮಗೇ ಒಂದು ಪ್ರಶ್ನೆ ಕೇಳಬೇಕು. ನನ್ನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬಾಲ್ಯ ಇಂಥದೇ ಪರಿಸ್ಥಿತಿಯಲ್ಲಿ ಕಳೆದಿದ್ದರೆ ಈಗ ನಾನು ಹೇಗೆ ಆಗಬಹುದಿತ್ತು? ದಲಿತರು ಮತ್ತು ಉಳಿದವರು ಇವರ ಪ್ರೇರಣೆಗಳೇ ಭಿನ್ನ ಇವೆ ಎಂಬುದನ್ನು ನಾವು ತಿಳಿದುಕೊಳ್ಳಬೇಕು. ದಲಿತ ಲೇಖಕರು ಸಾಹಿತ್ಯದ ಕಡೆಗೆ ಒಂದು 'ಶಸ್ತ್ರ' ಎಂದೇ ನೋಡುತ್ತಾನೆ. ಅವನ ವೇದನೆಗೆ ಸಾವಿರಾರು ವರ್ಷಗಳ ನಂತರ ಮೊದಲು ಬಾರಿ ಕಂಠ ಒಡೆದಿದೆ.

ಮರಾಠಿಯಲ್ಲಿ ಈ ಮೊದಲು ಮಾಟೆ, ಮಾಡಗೂಳಕರರು ತಮ್ಮ ಕಥೆಗಳಲ್ಲಿ ಈ ವೇದನೆ ಪ್ರಕಟ ಮಾಡಿದ್ದಾರಲ್ಲ?

ಹೌದು. ಅವರ ಸಾಹಿತ್ಯದಲ್ಲಿ ಪ್ರಕಟವಾಗಿದೆ, ಇಲ್ಲ ಅಂತ ಅಲ್ಲ. ಆದರೆ ಅವರ ಮೂಲ ಪ್ರೇರಣೆ 'ದಯಾ' ಅಥವಾ ಕರುಣೆಯದು ಅಂತ ನನಗೆ ಅನಿಸುತ್ತದೆ. ದಲಿತರಿಗೆ ಈ ದಯ ಬೇಡ. ಅವರಿಗೆ ಸಮಾನ ಗೌರವಯುತ ಜೀವಿಸುವ ಹಕ್ಕು ಬೇಕಾಗಿದೆ. ಕೊಡುವವರು ನೀಡುವವರು ನೀವು ಯಾರು ಅಂತ ಅವರು ಕೇಳತಾರೆ. ಆದ್ದರಿಂದ ನಮಗೆ ನಮ್ಮ ಸಾಹಿತ್ಯ ಶಾಸ್ತ್ರವನ್ನೇ ಬದಲಾಯಿಸುವ ಅವಶ್ಯಕತೆ ಇದೆ. ಮತ್ತೊಂದು ಹೀಗೆ ನೋಡಿ - ಯಾವ ಸಾಹಿತ್ಯವೂ ಸಮಾಜ ಬಿಟ್ಟು ಇರುವುದಿಲ್ಲ. ಸಂತ ಸಾಹಿತ್ಯಕ್ಕೂ ಕೂಡ ಸಮಾಜಸುಧಾರಣೆಯ ಪ್ರೇರಣೆ ಇತ್ತು ಅಂತ ನನಗೆ ಅನಿಸುತ್ತದೆ. ಕೇವಲ ಸ್ವಂತ ಸುಖಕ್ಕಾಗಿ ಆ ಸಾಹಿತ್ಯ ಬಂದಿಲ್ಲ. ಇಂದಿನ ದಲಿತ ಲೇಖಕರ ಭಾಷೆ ಹೆಚ್ಚು ಆಕ್ರಮಕವಾಗಿದೆ ಎಂಬುದು ನನಗೂ ಗೊತ್ತಿದೆ. ಅವರ ಭಾಷೆ ನಮಗೆ ಸೇರಲಾರದು ಇದು ನಾನು ಬಲ್ಲೆ. ಆದರೆ ನಾನು ಅನುಭವದಿಂದ ಹೇಳುತ್ತೇನೆ ದಲಿತರಲ್ಲಿಯೂ ಸಮಂಜಸ ಮತ್ತು ವಿವೇಕಿ ಲೇಖಕರು ಈಗ ಮುಂದೆ ಬರುತ್ತಿದ್ದಾರೆ. ಅವರಲ್ಲಿಯೂ ಆತ್ಮಶೋಧನೆ ಪ್ರಾರಂಭವಾಗಿದೆ.

ನನ್ನ ಜಾತಿಯಲ್ಲದವನಿಗೆ ನನ್ನ ಜಾತಿಯ ದುಃಖ ಬರೆಯಲು ಸಾಧ್ಯವಿಲ್ಲ ಎಂಬ ಕಲ್ಪನೆ ಎಷ್ಟರಮಟ್ಟಿಗೆ ಸರಿ?

ಹಾಗಲ್ಲ. ಅದು ತಪ್ಪು. ಹಾಗಿದ್ದರೆ ಹರಿಭಾವು ಆಪಟೆ ಅವರು ಬರೆದ ವಿಧವೆಯರ ದುಃಖಗಳು ಸುಳ್ಳು-ಖೊಟ್ಟಿ ಅಂತ ಹೇಳಬೇಕಾಗುತ್ತದೆ. ಅದು ಹಾಗಲ್ಲ. ರಕ್ತಕ್ಕೆ ಹ್ಯಾಗೆ ಜಾತಿ ಇರುವದಿಲ್ಲವೊ ಹಾಗೆಯೇ ಲೇಖಕನಿಗೂ ಜಾತಿ ಇರುವುದಿಲ್ಲ. creation is the thing. creator ಗೌಣ ಇರತಾನೆ ಇರಬೇಕು. ನನಗೆ ಈ ಜಗತ್ತಿನ creator ಎಲ್ಲಿ ಗೊತ್ತಿದ್ದಾನೆ? ಆದರೆ ಈ ಜಗತ್ತು ಎಷ್ಟು ಸುಂದರವಾಗಿದೆ ಎಂಬುದನ್ನು ನಾನು ನೋಡುತ್ತೇನೆ. ಖರೆ ಪ್ರಶ್ನೆ ಏನು ಇದೆ ಅಂದರೆ ದಲಿತರ ಮನಸ್ಸಿನಲ್ಲಿಯ ಅವಿಶ್ವಾಸ ನಾವು ಕಡಿಮೆ ಮಾಡಲು ಸಾಧ್ಯವಿದೆ ಎಂಬುದು. ಪ್ರೊ. ಗಂಗಾಧರ ಪಾನತಾವಣೆ ಈ ದಲಿತ ಲೇಖಕರು ಎಷ್ಟು ಸುಂದರವಾಗಿ ಅಸ್ಮಿತಾದರ್ಶ ಎಂಬ ಮಾಸಿಕ ಪತ್ರಿಕೆ ಹೊರಡಿಸುತ್ತಾರೆ. ನಾವು ಅದನ್ನು ಯಾಕೆ ಸ್ವಾಗತಿಸಬಾರದು?

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

‘ಆಕ್ರೋಶ’ ದ ಭಾವನೆ ಸದಾ ಸರ್ವಕಾಲ ಶಾಶ್ವತವಾಗಿ ಉಳಿಯಲಾರದು ಇದರ ಅರಿವು ದಲಿತ ಲೇಖಕರಿಗೂ ಇದೆ. ಇನ್ನು ಕೆಲವು ಅಂದರೆ ೧೦-೧೫ ವರ್ಷಗಳ ನಂತರ ದಲಿತ ಸಾಹಿತ್ಯ ಸಮ್ಮೇಲನ ಬೇರೆಯಾಗಿ ಯೋಜಿಸುವ ಅವಶ್ಯಕತೆ ಬೀಳಲಿಕ್ಕಿಲ್ಲ ಅಂಥ ಅನಿಸುತ್ತದೆ. ಯಾಕೆಂದರೆ ಆಗ ‘ದಲಿತ’ ಈ concept ವೇ ಹೋಗಿರಬಹುದು.

ಸಾಹಿತ್ಯ ಅಕೆಡಮಿ ಅಥವಾ ಜ್ಞಾನಪೀಠ ಇಂತಹ ಪಾರಿತೋಷಕಗಳ ಬಗ್ಗೆಯೂ ಭಿನ್ನ ಭಿನ್ನ ಅಭಿಪ್ರಾಯಗಳಿವೆ. ನಿಮ್ಮ ಅಭಿಪ್ರಾಯವೇನು?

ಶಾಸಕೀಯ ಪಾರಿತೋಷಕಗಳ ಬಗ್ಗೆ ಭಿನ್ನಾಭಿಪ್ರಾಯಗಳಿವೆ ಎಂಬುದು ನನಗೆ ಗೊತ್ತಿದೆ. ಹಿಂದೆ ನಾನು ಆಗಿನ ಪಂತಪ್ರಧಾನರಾಗಿದ್ದ ಶ್ರೀಮತಿ ಇಂದಿರಾ ಗಾಂಧಿಯವರ ಜೊತೆಗೆ ಸಾಹಿತ್ಯ ಅಕಾಡಮಿಯ ಕುರಿತು ಸವಿಸ್ತಾರ ಚರ್ಚೆ ಮಾಡಿ ನನ್ನ ಎಲ್ಲ ಸೂಚನೆಗಳನ್ನು ತಿಳಿಸಿದ್ದೆ. ಆದರೆ ಯಾವದೇ ಶಾಸನ ಇದ್ದರೂ ಅದಕ್ಕೆ ಮರ್ಯಾದೆಗಳುಂಟು ಎಂಬುದನ್ನು ನಾವು ತಿಳಿದುಕೊಳ್ಳಬೇಕು. ನನಗೆ ಪಾರಿತೋಷಕ ಸಿಗದಿದ್ದರೆ ನಾನು ಸರಕಾರದ ಮೇಲೆ ಟೀಕೆ ಮಾಡುತ್ತೇನೆ ಇದು ಮಾತ್ರ ನನಗೆ ಸರಿಯಾಗಿ ಕಾಣುವದಿಲ್ಲ. ನಾನು ಇತ್ತೀಚೆಗೆ ನನ್ನ ಪುಸ್ತಕಗಳನ್ನು ಪಾರಿತೋಷಕಕ್ಕಾಗಿ ಸರಕಾರದ ಕಡೆಗೆ ಕಳಿಸುವದೇ ಇಲ್ಲ. ಸಾಹಿತ್ಯದ ಗುಣವತ್ತತೆಯನ್ನು ನಿರ್ಧರಿಸುವ ಅಧಿಕಾರ ನಾವು ಶಾಸನಕ್ಕೆ ಯಾಕೆ ಕೊಡಬೇಕು? ನೀವು ನಿಮ್ಮ ಪುಸ್ತಕ ಕಳಿಸುವದಾದರೆ ನೀವು ಅವರ ನಿರ್ಣಯ ಒಪ್ಪಲೇಬೇಕು. ಅಂತ ನನಗೆ ಅನಿಸುತ್ತದೆ. ೧೦ ನಿರ್ಣಯಗಳಲ್ಲಿ ೨ ನಿರ್ಣಯಗಳು ತಪ್ಪಾಗಿ ಬರಬಹುದು. ಆದರೆ ೮ ನಿರ್ಣಯಗಳ ಬಗ್ಗೆ ಯಾಕೆ ಟೀಕೆ? ಮತ್ತೊಂದು ಈ ಸಂದರ್ಭದಲ್ಲಿ ಹೇಳುವದೆಂದರೆ ಈ ಪಾರಿತೋಷಕಗಳ ಬಗ್ಗೆ ನಾವು ಸಾಹಿತ್ಯಬಾಹ್ಯ ಚರ್ಚೆ ಮಾಡುತ್ತೇವೆ ಅಂತ ನನಗೆ ಅನಿಸುತ್ತದೆ. ಉದಾಹರಣೆಗೆ ಕರ್ನಾಟಕಕ್ಕೆ ಈವರೆಗೆ ೪ ಜ್ಞಾನಪೀಠ ಪಾರಿತೋಷಕಗಳು ದೊರೆತವು. ಮರಾಠಿಗೆ ಮಾತ್ರ ೨ ಯಾಕೆ? ಮರಾಠಿಯಲ್ಲಿಯೂ ಕೂಡ ಕೊಲ್ಹಾಪೂರ, ನಾಸಿಕಕ್ಕೆ ದೊರಕಿತು. ಪುಣೆ ಮುಂಬಯಿಗೆ ಯಾವಾಗ? ಈ ತರದ ಭಾಷೆ ಮತ್ತು ವಿಚಾರ ನನ್ನ ದೃಷ್ಟಿಯಿಂದ ಸಾಹಿತ್ಯ ಸಂಸ್ಕೃತಿಗೆ ಅತ್ಯಂತ ಹಾನಿಕಾರಕವೆಂದು ನಾನು ತಿಳಿದಿದ್ದೇನೆ. ಶಾಸನದ ಪಾರಿತೋಷಕಕ್ಕಿಂತಲೂ ನನಗೆ ಸಾಮಾನ್ಯ ವಾಚಕನಿಂದ ಬಂದ ಒಂದು ಪತ್ರ ಹೆಚ್ಚು ಸಂತೋಷ ನೀಡುತ್ತದೆ. ನನಗೆ ೧ ಲಕ್ಷ ರೂ.ಪಾರಿತೋಷಕ ಬಂತು ಅಂತ ತಿಳಿಯೋಣ. ಆದರೆ ನನ್ನ ಪುಸ್ತಕದ ೧೦ ಪ್ರತಿಗಳು ಕೂಡ ಮಾರಾಟವಾಗಿಲ್ಲ ಅಂತ ತಿಳಿದರೆ ಅದು ನನ್ನ ಪರಾಭವ ಅಂತ ನನಗೆ ಅನಿಸುತ್ತದೆ. ಆಗ ಆ ಪಾರಿತೋಷಕಕ್ಕೆ ಏನು ಅರ್ಥ ಹೇಳಿರಿ?
ಮತ್ತೊಂದು controversy ಜಗತ್ತಿನಲ್ಲಿ ಎಲ್ಲ ಕಡೆಗೂ ಇದೆ. ನೊಬೆಲ್ ಪಾರಿತೋಷಕ ಕೊಡುವಾಗಲೂ ಭಿನ್ನಾಭಿಪ್ರಾಯಗಳು ಆಗುತ್ತವೆಯೋ ಇಲ್ಲವೊ? ನನ್ನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೃಷ್ಟಿಯಿಂದ ಜಗತ್ತಿನಲ್ಲಿ ಇನ್ನೂ ಇಬ್ಬರಿಗೆ ನೋಬೆಲ್ ಪಾರಿತೋಷಕ ಸಿಗಬೇಕಾಗಿತ್ತು. ಒಂದು ಚಾರ್ಲೀ ಚಾಪ್ಲೀನ್ ಮತ್ತು ಎರಡನೆಯದು ವಾಲ್ಟ್ ಡಿಸ್ನೆ. ಇಡೀ ಜಗತ್ತಿಗೆ ಇವರಿಬ್ಬರೂ ಕೊಟ್ಟ ಆನಂದವನ್ನು ಹೇಗೆ ಅಳೆಯಬೇಕು?

ಇಂದಿನ ಮರಾಠಿ ಕಾದಂಬರಿ ಕುರಿತು ಏನು ಹೇಳತೀರಿ?

ಖಾನೋಲ್ಕರ ಮತ್ತು ಆನಂದ ಯಾದವರ ಕಾದಂಬರಿಯಲ್ಲಿ ನನಗೆ ಉತ್ಕಟ ಮಣ್ಣಿನ ವಾಸನೆ ಕಾಣುತ್ತದೆ. ಅಸ್ಸಲ ಭಾರತೀಯ ಜೀವನ ಅದರಲ್ಲಿ ವ್ಯಕ್ತವಾಗಿದೆ.

ನೇಮಾಡೆಯವರ ಬಗ್ಗೆ ಏನು ಹೇಳತೀರಿ?

ನೇಮಾಡೆಯವರ 'ಕೋಸಲಾ' ನನಗೆ ಸರ್ವೋತ್ಕೃಷ್ಟ ಕಾದಂಬರಿ ಅನಿಸಿದೆ. ಮರಾಠಿ ಇತಿಹಾಸದಲ್ಲಿಯೇ ಅದೊಂದು ಮೈಲುಗಲ್ಲು ಅಂತ ಹೇಳಬೇಕು. ಆದರೆ ನೇಮಾಡೆಯವರ ಅನ್ಯ ಕಾದಂಬರಿಗಳು ನನಗೆ ಅಷ್ಟು ಹಿಡಿಸಲಿಲ್ಲ. 'ಕೋಸಲಾ' ದಲ್ಲಿ ಕಾಣುವ ಅಂತರ್ಗತ 'ಲಯ' ಮತ್ತು ಅದರ ಪ್ರವಾಹೀತನ ಅನ್ಯ ಕಾದಂಬರಿಗಳಲ್ಲಿ ಬರಲಿಲ್ಲ. ಅಂತ ನನಗೆ ಅನಿಸುತ್ತದೆ. ಪೇಂಡಸೆ ಅವರ 'ಲವ್ಹಾಳಿ' ಕಾದಂಬರಿ ನನಗೆ ಬಹಳ ಸೇರಿದೆ. ದಾಂಡೇಕರರ ಎಲ್ಲ ಕಾದಂಬರಿಗಳಲ್ಲಿ 'ಮಾಚೀವರಲಾ ಬುಧಾ' ಇದು ನನ್ನ ದೃಷ್ಟಿಯಿಂದ ಸರ್ವೋತ್ಕೃಷ್ಟವಾಗಿದೆ. ಅಪ್ರತಿಮವಾಗಿದೆ. ಮರಾಠಿಯಲ್ಲಿ ದಾಂಡೇಕರರಂಥ ವಿವಿಧ ಅನುಭವಗಳನ್ನು ಪಡೆದ ಇನ್ನೊಬ್ಬ ಲೇಖಕನಿಲ್ಲ. ನನಗೆ ಮರಾಠಿಯಲ್ಲಿ ಎಲ್ಲಕ್ಕೂ ಪ್ರಿಯವಾದ ಕಾದಂಬರಿ ಅಂದರೆ ಉದ್ಧವ ಶೇಳಕೆಯವರ 'ಢಗ' ಈ ಕಾದಂಬರಿ. ಮರಾಠಿಯಲ್ಲಿಯ ಸರ್ವೋತ್ತಮ ಕಾದಂಬರಿಗಳ ಹೆಸರು ಹೇಳಿ, ಅಂತ ಯಾರಾದರೂ ಕೇಳಿದರೆ ಅವುಗಳಲ್ಲಿ 'ಢಗ' ಒಂದು ನಿಃಸಂಶಯವಾಗಿ ಹೇಳುತ್ತೇನೆ. ಅದರಲ್ಲಿ ವ್ಯಕ್ತವಾಗಿರುವ ವರ್ಹಾಡೀ ಬೋಲಿ ಭಾಷೆ ಬಹಳ ಉತ್ಕೃಷ್ಟವಾಗಿದೆ.

ಇಂದಿನ ಕವಿಗಳ ಬಗ್ಗೆ ಏನು ಅಂತೀರಿ?

ಕವಿಗಳ ಸಂಖ್ಯೆ ಬೆಳೆದಿದೆ. ಆದರೆ ಇಂದಿನ ಕವಿತೆಯಲ್ಲಿ Slogan ಗಳೇ ಕೇಳಿ ಬರುತ್ತವೆ. ಸಂತಾಪ, ದುಃಖ, ಕ್ರಾಂತಿ, ಇವುಗಳ ಅಭಿನಿವೇಶ ಚೆನ್ನಾಗಿದೆ. ಇಲ್ಲ ಅಂತ ಅಲ್ಲ. ಆದರೆ ಕೇವಲ ಜಾಹೀರನಾಮೆಗಳು ಘೋಷವಾಕ್ಯಗಳು ಅಂದರೆ ಕಾವ್ಯ ಅಲ್ಲ. ಹಿಂದಿನ ಕಾವ್ಯ ಓದಿದಾಗ ಅಥವಾ ಕೇಳಿದಾಗ ಕವಿತೆಯ ಸಾಲುಗಳು ನಾಲಿಗೆಯ ಮೇಲೆ ಎಷ್ಟೋ ದಿವಸ ನೆಲೆದಾಡುತ್ತಿದ್ದವು. ಆದರೆ ಇಂದಿನ ಕವಿತೆ ತನ್ನ Rhythem ಕಳಕೊಂಡಿದೆ ಅಂತ ಅನಿಸುತ್ತದೆ. ಮುಕ್ತ ಛಂದ ಬಂದ ಮೇಲೆ ಕವಿತೆಯಲ್ಲಿ ಛಂದೋಬದ್ಧತೆ ಇರುತ್ತದೆ, ಇರಬೇಕು ಎಂಬುದನ್ನೇ ನಾವು ಮರೆತುಬಿಟ್ಟಿದ್ದೇವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಾವೀಗ ಕೇವಲ ಗದ್ಯಪ್ರಾಯ ಬರೆದು ಅದಕ್ಕೆ ಕವಿತೆ ಅಂತ ಕರೆತ ಇದ್ದೀವಿ. ಕವಿತೆಗಳಲ್ಲಿಯ ಪ್ರತಿಮೆಗಳು ಕ್ಷೀಣವಾಗಿಯೇನೋ ಅಂತ ಅನಿಸ್ತದೆ. ಕವಿ ಅನಿಲ, ಮರ್ಢೇಕರ, ನಾ.ಘ.ದೇಶಪಾಂಡೆ, ಕುಸುಮಾಗ್ರಜ, ಬೋರಕರ್ ಅವರ ಕವಿತೆ ಒಮ್ಮೆ ಓದಿದಾಗ ಅದು ನಮ್ಮ ಅಂತರಂಗವನ್ನೇ ವ್ಯಾಪಿಸುತ್ತಿತ್ತು. ಶಬ್ದಗಳನ್ನು ಮರೆಯೋದು ಕಠಿಣವಾಗಿತ್ತು. ಇಂದಿನ ಕವಿತೆಯಲ್ಲಿ ಉತ್ತಮ ideas ಗಳಿವೆ. ಆದರೆ ಅದು ಮನಸ್ಸಿನಲ್ಲಿ ಹೊಕ್ಕುವದಿಲ್ಲ. ಕುಸುಮಾಗ್ರಜರ 'ಕ್ರಾಂತೀಚಾ ಜಯಜಯಕಾರ' ಈಗಲೂ ಓದಿದರೆ ನನಗೆ ಆ ನನ್ನ ಎಲ್ಲ ತರುಣ ವಯಸ್ಸಿನ ಕಾಲ ಖಂಡವೇ ಜೀವಂತವಾಗಿ ಕಣ್ಣೆದುರಿಗೆ ನಿಲ್ಲುತ್ತದೆ.

ಈ ಪರಿಸ್ಥಿತಿಗೆ ಮರಾಠೀ ಸಮೀಕ್ಷೆಯೂ ಸ್ವಲ್ಪ ಜವಾಬದಾರ ಇರಬಹುದು ಅಂತ ನನಗನಸ್ತದೆ.

ಸಮೀಕ್ಷಕರ ಬಗ್ಗೆ ಏನು ಹೇಳಲಿ? ಆ ಜಾತಿಯ ಬಗ್ಗೆ ಎಷ್ಟು ಕಡಿಮೆ ಮಾತಾಡಬೇಕೋ ಅಷ್ಟು ಒಳಿತು ಅಂತ ನನ್ನ ಭಾವನೆಯಾಗಿದೆ. ನಿಜವಾಗಿ ಹೇಳೋದಾದರೆ ಇಂದಿನ ಸಮೀಕ್ಷೆಯಲ್ಲೂ ಮುಖ್ಯಾರ್ಥವೇ ನನಗೆ ತಿಳಿಯೂದಿಲ್ಲ. ಸಮೀಕ್ಷೆ ಓದಿದ ಮೇಲೆ ಆ ಮೂಲ ಸಾಹಿತ್ಯಕೃತಿಕಡೆಗೆ ಹೋಗಬೇಕೆಂಬ ಜಿಜ್ಞಾಸೆ ವಾಚಕನಲ್ಲಿ ಉಂಟಾಗಬೇಕು. ಆದರೆ ಇಂದು ಹಾಗೆ ಕಾಣೋದಿಲ್ಲ. ಶ್ರೇಷ್ಠ ಎನಿಸಿಕೊಂಡ ಸಮೀಕ್ಷಕ ಲೇಖನದಲ್ಲಿ ಕೂಡ ನನಗೆ ಸಂಗೀತ ಕ್ಷೇತ್ರದಲ್ಲಿಯ 'ಮುರ್ಖು ಭೀ ಗಿನ್ ಲೊ' ಈ ಪ್ರವೃತ್ತಿಯದಾಗಿ ಕಾಣುತ್ತದೆ. ಸೌಂದರ್ಯಶಾಸ್ತ್ರ ತಿಳಿಯದ ಹೊರತು ಸಾಹಿತ್ಯ ಶಾಸ್ತ್ರ ತಿಳಿಯಲಾರದು ಅಂತ ಹೇಳತಾರೆ, ಅದು ನನಗೆ ಮಾನ್ಯವಾಗಿಲ್ಲ. ಆದರೆ ಇಂಥ ಪರಿಸ್ಥಿತಿಯಲ್ಲಿಯೂ ಕೆಲವು ಅಪವಾದಗಳಿವೆ ಎಂದು ನಾವು ಒಪ್ಪಲೇ ಬೇಕು.

ನೀವು ಸ್ಥಾಪಿಸಿದ ಪು.ಲ.ದೇಶಪಾಂಡೆ ಟ್ರಸ್ಟಿನ ವತಿಯಿಂದ ಎಷ್ಟೋ ಸಾಹಿತ್ಯ ಮತ್ತು ಸಾಮಾಜಿಕ ಸಂಸ್ಥೆಗಳಿಗೆ ಅರ್ಥಸಹಾಯ ನೀಡಿದ್ದೀರಿ. ಒಬ್ಬ ಲೇಖಕನಾಗಿ ನೀವು ಮಾಡಿರುವ ಈ ಕೆಲಸ ಇಡೀ ಭಾರತದಲ್ಲಿ ಮೊದಲನೇ ಉದಾಹರಣೆಯಾಗಿರಬಹುದು. ಯಾವ ಪ್ರೇರಣೆಯಿಂದ ಇದನ್ನು ಮಾಡುತಾ ಇದ್ದೀರಿ?

ನಾನೇನೋ ಬಹಳ ದೊಡ್ಡ ಕ್ರಾಂತಿಕಾರಕ ಕೆಲಸ ಮಾಡುತ್ತಿದ್ದೇನೆಂದು ನಾನು ಭಾವಿಸಿಲ್ಲ. ಆದರೆ ಸಮಾಜಕ್ಕೋಸ್ಕರ ತ್ಯಾಗ ಮಾಡುವವರ ಸಂಸ್ಕಾರಗಳಲ್ಲಿ ನಾನು ಬೆಳೆದಿದ್ದೇನೆ. ಆದ್ದರಿಂದ ಉಪೇಕ್ಷಿತರಿಗಾಗಿ ಏನಾದರೂ ಮಾಡಬೇಕು. ಅಂತ ತೀವ್ರವಾಗಿ ಅನಿಸಿತು. ನಮ್ಮ ಟ್ರಸ್ಟಿದವತಿಯಿಂದ ಪುಣೆಯಲ್ಲಿ ವ್ಯಸನಗ್ರಸ್ತರಿಗಾಗಿ ರೋಗ ನಿವಾರಣೆಯ ಕೇಂದ್ರ, ನಡೆಸಿದ್ದೇವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೊನೆಯ ಪ್ರಶ್ನೆ ಕೇಳುತ್ತೇನೆ. ನಿಮಗೆ ಜ್ಞಾನಪೀಠ ಪಾರಿತೋಷಕ ಸಿಗಬೇಕಿತ್ತು ಅಂತ ಜನರಿಗೆ ಅನಿಸುತ್ತದೆ. ನಿಮಗೆ ಏನು ಅನಿಸುತ್ತದೆ?

ನೋಡಿ. ಸುಳ್ಳು ನಮ್ರತೆಯಿಂದ ಹೇಳೋದಿಲ್ಲ. ಶಿರವಾಡಕರರಿಗೇ ಅದು ಈ ಮೊದಲೇ ಸಿಗಬೇಕಾಗಿತ್ತು. ಅವರ ಗೌರವದಲ್ಲಿ ನಮ್ಮ ಪೀಳಿಗೆಯ ಗೌರವವಾಗಿದೆ ಎಂದು ನನ್ನ ಭಾವನೆ ಇದೆ. ಮತ್ತೊಂದು. ಜ್ಞಾನಪೀಠ ಪಾರಿತೋಷಕ ಒಂದೇ ಪುಸ್ತಕಕ್ಕೆ ಕೊಡದೇ ಈ ಲೇಖಕನ ಇಡೀ ಕಾರ್ಯ ನೋಡಿ ಕೊಡಬೇಕು ಅಂತ ಅನಿಸ್ತದೆ. ಮರಾಠಿಯಲ್ಲಿ ಖಾನೋಲಕರ ಉರ್ಫ ಆರತೀಪ್ರಭು ಅವರಿಗೆ ಈ ಪಾರಿತೋಷಕ ಸಿಗಬೇಕಿತ್ತು. ಗುಣಾತ್ಮಕದೃಷ್ಟಿಯಿಂದ ಅಂವ ನಮಗಿಂತ ಬಹಳ ಶ್ರೇಷ್ಠನಾಗಿದ್ದ ಎಂದು ಒಪ್ಪಲೇಬೇಕು.

- ಡಾ. ಅನಂತ ತೋರೋ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

I CANNOT LOVE IT ENOUGH!

I have been asked to say something about my writing and my experiences as a writer. This reminds me of a saying by Ramdas. He has said लिहिलें तें बोलों नये - one should refrain from talking about what one has written. In short, he has warned us not to talk shop. But in this little gathering of fellow-tradesmen what else can one do but talk shop? All that I can say about my experience as a writer is that in spite of my being in the trade for the last twenty years or more I still love writing. So does my publisher. He also wants me to write, perhaps because my books sell. That is why my critics call me a popular writer, and dismiss me forthwith. I don't blame them. I merely dismiss by calling them critics.

I do not claim to have started new trends in Marathi literature. I have mostly written plays, travelogues, essays and sketches. I don't know why, but my readers laugh when they read my writings. From small fan mail which I receive I find that my writings create a cheerful atmosphere in many houses where till my book arrived there was gloom all over due perhaps to some illness, or the grandmother's very sad demise, or the father-in-law's high blood pressure soaring higher still, or some such domestic calamity, or an emotional hangover. Then someone smuggles my book in and the despondency is dipelled. This, like some other tranquilizers, makes me popular. In short, laughter is my business, and there is good going in it.

But it is a tough business, especially with everyone getting very touchy these days, whether he is a capitalist, a trade union leader or a religious head, or even a docile schoolmaster- with a powerful schoolmasters' union back him, one is not sure when one would trip on someone's tender toes and give rise to a protest meeting. Recenlty some press compositor's union held a protest meeting against me because of an inadvertant remark by me when I said that proof correction can never be foolproof. I would have liked them to protest against the cheap, or bad pun but instead, they sent me a printed resolution stating that their professional pride had been hurt by me. Here again there wąs misprint, because instead of pride

ಪು.ಲ.ದೇಶಪಾಂಡೆ/೭೫
CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

they had printed bride. And since then, in addition to the compositors, my wife has been looking at me with suspicion.

I am rather catholic in my tastes and even in my writing. I have never been a non-conformist, nor a revolutionary in my speech, writing or action. That is perhaps due to my upbringing in a fairly poor middle-class family. The very name Deshpande is enough to show that I belong to a class of baboos. But my grandfather, in addition to being a clerk, was writer. He wrote a history of Hindu festivals, and translated Tagore's Geetanjali into Marathi. My father was also a clerk with a paper merchant. They sold blank paper, a more honest business; I sell printed paper. My father wanted me to be a pleader; I am in fact a law graduate. But he also encouraged me to study music. Perhaps he was not sure about my future as a pleader, and wanted me to be a musician to ensure my daily bread, in case....'! Now my grandfather wanted me to write, my father insisted that I learn music, and I wanted to be an actor. I have been busy fulfilling the wishes of my grand dad, my dad and myself. It is a good thing to be an actor, a musician, a writer and a law graduate, all at once. Musicians respect me as a writer; ;writers praise my musical compositions, and don't say a word about my writings; and fellow-actors come to me for legal advice. This keeps me busy.

I do not write regularly. Nobody should , as a matter of fact. I have left singing, for which lovers of classical Indian Music should always remain grateful to me. Very few of our musicians have shown reverence for this art and kept themselves away from it the way I did. I act on the stage fairly regularly because that is what brings me my daily rice-that is, whenever it is available in the market. I have yet to convice myself that hybrid maize is good human fodder. I do not mind changing my food habits, but I am afraid that might change my writing habits. I want to remain a writer, and not a hybrid writer.

I do not like being called a humorist. I don't sit down to manufacture humour. I write the way I love to write, and I am grateful to my readers when they notice the hidden tear. For me humour is a wonderful armour. I have used it occasionally as a weapon, but I have taken care to see that it does not hit anyone below the belt. Unfortunately, some people wear their

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

belt a little too high! The humour that hurts is ugly, and art abhors ugliness.

Now a word about the book which has won the Akademi Award. The title of this book is Vyakti ani Vlli - which can be roughly translated as Persons And Characters. These are sketches of eighteen persons whom I have never actually met. They are imaginary. There is a man from Konkan, a schoolmaster; there is the man who refused to live in the present; a young man who has lost his moorings; a boootlegger who is worried about the lack of moral values in society; there is also a poor relation who is the most wanted person in a marriage ceremony, and the most unwanted the day it is over; and other such characters. I hope they are all living happily together between the two covers.

So far I have had a pleasant journey in literature because I have never written under any kind of compulsion. I have avoided literary seminars where they discuss the new trends in the modern short story or poetry, or where they read papers on the role of the modern writer in a changing society. I do not like being a writer through all the twenty-four hours of the day. It is only when I sit down to write that I am a writer; when I am on the stage I am an actor; and when I stand in a long bus queue in Bombay I am a passenger cursing the bus company along with the rest of the queuers. That is why the really shrewd organisers of seminars do not invite me to participate in them and read a paper. For one thing, they consider me much too flippant for such scholarly trends in literature-Indians or foreign. So instead of losing myself in the labyrinths of scholarship, I prefer spending an evening in the theatre, or in the company of musicians, or at a favourite pan-shop where I feel young. I have never travelled with a view to writing a travelogue. I did not even make notes. I don't have a writer's scrapbook either. Writing for me has been a joy, and not a task to be fulfilled.

There is any amount of discussion going on today about the freedom of a writer. I like to compare a creative writer with a piece of ice dipped in water. Just as ice is made of water and just as a major part of it remains inside the water and a little of it above it a writer is created out of the people he

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

lives with and he remains with the people, though as an artist he is a little above them. As ice owes its existence to water, the writer owes his to the people with whom he lives, but he has to lift himself a little above them to have a good look at them. That is the minimum freedom he should have. Unless the head is held high I do not see any possibility of a fearless mind which according to me is a primary necessity for all creative activity in art; and a writer who has his roots in the people with whom he lives and whom he loves, will never misuse this freedom. What he writes must come from within and not from without. It is only in this atmosphere that a writer can be true to his convictions. By decmocracy I understand only one thing; the freedom to live by my convictions and let others live by theirs. I have no faith in mere formalistic patterns, and such dehumanised obscure creations and fashionable frustration. As Jean Paul Sartre has said, the function of the writer is to call a spade a spade. If words are sick it is upto us to cure them. I distrust the incommunicable; it is the source of all violence.

I therefore ignore the note of derision in my critic's writings when he dismisses me as a popular writer. No, I rather feel proud that my readers understand me. I want them to understand me. I write for them. Writing is a constant search for someone who will understand you, who will laugh with you, or shed a tear with you. I have never had a fight with my readers, or with people with whom I have lived and want to live in future. My fight is against all that is ugly, all that gives rise to a feeling of frustration in life. I have fought against hypocrisy, against the intellectual phrase mongering against the ideology of who cares for the people and a different weapon came to me when I chose to fight. I did not choose the weapon. That perhaps is a gift which God gives to all poor people: a sense of humour. I laugh; I laugh first at myself, and in return my readers and spectators, also laugh at me first, and suddenly they realise that they have laughed at themselves, which I believe is good for social health. That is all the reward from my writings. Like Napoleon Who said to Josephine, 'I love you but I want to love you a hundred times more' I should also like to say about literature that I love literature but I would like to love it a hundred times more. I am not an angry young man. I am a hungry young man. I want to read

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri
Kannada poems, Bediji's Urdu novels, Kartarsing's Punjabi novel, Tamil novels, Bengali Plays, Telugu songs - I want to love literature in a hundred ways. My only worry is that I cannot love it enough .

Thank you,

नवी दिल्ली येथे साहित्य अकादमीचे 'व्यक्ती आणि वल्ली ' या पुस्तकास मिळालेले पारितोषिक स्वीकारताना केलेले भाषण : २० फेब्रुवारी १९६६.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪು. ಲ. ದೇಶಪಾಂಡೆ ಜೀವನ - ವಿಶೇಷ

ಜನನ : ೮ ನವೆಂಬರ ೧೯೧೯. ಮುಂಬಯಿಯಲ್ಲಿ

ಶಿಕ್ಷಣ : ವಿಲೇಪಾರ್ಲೆ, ಮುಂಬಯಿ ಮತ್ತು ಪುಣೆ. ಎಂ. ಎ. ಎಲ್. ಎಲ್. ಬಿ.

ವೃತ್ತಿ : ಪ್ರಾಧ್ಯಾಪಕರಾಗಿ - ಮುಂಬಯಿ - ಬೆಳಗಾವಿಗಳಲ್ಲಿ
ಪ್ರಾಂಶುಪಾಲರಾಗಿ - ಮಾಲೇಗಾವ ಶಿಕ್ಷಣ ಸಂಸ್ಥೆ
ಆಕಾಶವಾಣಿ ನೃತ್ಯ ವಿಭಾಗ ಮುಂಬಯಿ , ಪುಣೆ.
ದೂರದರ್ಶನದ ಪ್ರಥಮ ನಿರ್ಮಾಣಾಧಿಕಾರಿ - ದಿಲ್ಲಿ

ಮುಖ್ಯತಃ

ಬರಹಗಾರ, ಚಿಂತಕ, ನಟ, ನಾಟಕಕಾರ, ಚಲನಚಿತ್ರ ಕಥಾ ಲೇಖಕ, ವ್ಯಕ್ತಿ ಚಿತ್ರಣ, ಮತ್ತು ಪ್ರಮುಖವಾಗಿ ಹರಟೆಗಾರ - ಹಾಸ್ಯ ಲೇಖಕ. ಅಲ್ಲದೆ ಸಂಗೀತ ವಿದ್ವಾಂಸ, ಅಪರೂಪದ ಹಾರ್ಮೋನಿಯಂ ವಾದಕ. ಚಲನಚಿತ್ರಗಳ ನಿರ್ಮಾಪಕ, ನಿರ್ದೇಶಕ, ಸಂಗೀತ ನಿರ್ದೇಶನ, ನಾಯಕ ನಟ.

ಪ್ರಶಸ್ತಿಗಳು : (ಮಹತ್ವದವು ಮಾತ್ರ ಇಲ್ಲಿವೆ)
ಮರಾಠಿ ತಮಾಶಾ ಪರಿಷತ್ತಿನ ಅಧ್ಯಕ್ಷ
ಮರಾಠಿ ವಾಙ್ಮಯ ಪರಿಷತ್ತಿನ ಅಧ್ಯಕ್ಷ (ಬರೋಡಾ)
ಮರಾಠಿ ನಾಟ್ಯ ಸಮ್ಮೇಳನ ಅಧ್ಯಕ್ಷ (ನಾಂದೇಡ) ೧೯೬೫
ಮರಾಠಿ ಸಾಹಿತ್ಯ ಸಮ್ಮೇಲನದ ಸುವರ್ಣ ಮಹೋತ್ಸವದ ಅಧಿವೇಶನ ಅಧ್ಯಕ್ಷ (ಇಚಲಕರಂಜಿ) ೧೯೭೮
ಮಹಾರಾಷ್ಟ್ರ ರಾಜ್ಯ ಸಾಹಿತ್ಯ ಸಂಸ್ಕೃತಿ ಮಂಡಳ ಸದಸ್ಯ
'ವ್ಯಕ್ತಿ ಆಣಿ ವಲ್ಲಿ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ, ೧೯೬೫
'ಪದ್ಮಶ್ರೀ' ೧೯೬೫
ಕೇಂದ್ರ ಸಾಹಿತ್ಯ ಅಕಾಡೆಮಿ ಫೆಲೊ
ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಉಪಾಧ್ಯಕ್ಷ (ಕಲಕಾಲ)
ಗೌರವ ಡಿ. ಲಿಟ್. - ರವೀಂದ್ರ ಭಾರತಿ ೧೯೭೯
ಗೌರವ ಡಿ. ಲಿಟ್. - ಪೂನಾ ವಿದ್ಯಾಪೀಠ ೧೯೮೦
ಕಾಲಿದಾಸ ಸನ್ಮಾನ (ಮಧ್ಯಪ್ರದೇಶ) ೧೯೮೭
ಗಡಕರಿ ಪಾರಿತೋಷಕ ೧೯೮೮

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೆಲವು ಉಲ್ಲೇಖಾರ್ಹ ವಿಷಯಗಳು:

‘ಪು.ಲ.ದೇಶಪಾಂಡೆ ಪ್ರತಿಷ್ಠಾನ’ ದ ಮೂಲಕ ಹಲವಾರು ಸಾಮಾಜಿಕ ಹಾಗೂ ಸಾಂಸ್ಕೃತಿಕ ಯೋಜನೆಗಳಿಗೆ ಸಹಾಯ. ಪುಣೆಯ ಬಾಲಗಂಧರ್ವ ರಂಗಮಂದಿರವನ್ನು ನಿಲ್ಲಿಸುವಲ್ಲಿ ಮಹತ್ವದ ಕಾರ್ಯ.

ವಿಳಾಸ : ೧, ರೂಪಾಲಿ, ೨೨೨.ಶಿವಾಜಿ ನಗರ, ಕಮಲಾನೆಹರು ಉದ್ಯಾನದ ಹತ್ತಿರ.
ಪುಣೆ - ೪೧೧೦೦೪

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪು. ಲ. ದೇ. ಮತ್ತು ಸೌ. ಸುನೀತಾ ದೇಶಪಾಂಡೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಪು. ಲ. ದೇಶಪಾಂಡೆ ಅವರೊಡನೆ ಸಂದರ್ಶಕ ಡಾ. ತೋರೋ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ರಾಷ್ಟ್ರಪತಿ ಡಾ. ಝಕೀರ ಹುಸೇನರಿಂದ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಪೂರ್ವ ಸಂಗೀತ ಸಂಜೆ : ಡಾ. ವಸಂತರಾವ ದೇಶಪಾಂಡೆ, ಪಂ. ಭೀಮಸೇನ ಜೋಶಿ ಹಾಗೂ ಸುಧೀರ ಫಡಕೆ ಅವರ ಹಾಡುಗಾರಿಕೆಗೆ ಪು. ಲ. ದೇಶಪಾಂಡೆ ಹಾರ್ಮೋನಿಯಂ ನುಡಿಸುತ್ತಿದ್ದಾರೆ.

ಆಪ್ತ ಮಿತ್ರ ಪಂ. ಮಲ್ಲಿಕಾರ್ಜುನ ಮನ್ಸೂರ ಅವರೊಡನೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗ್ರಂಥ ಮಗ್ನ : ಪ್ರ. ಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭಾರತದ ಪ್ರಥಮ ದೂರದರ್ಶನ ನಿರ್ಮಾಣಾಧಿಕಾರಿ ಪು.ಲ. ಅವರು, ಪ್ರಧಾನ ಮಂತ್ರಿ ಪಂ. ನೆಹರೂ ಅವರಿಗೆ ದೂರದರ್ಶನ ಕುರಿತು ವಿವರಿಸುತ್ತಿದ್ದಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಭಿನಯ ಮಗ್ನ : ಪು. ಲ. 'ಬಟಾಟ್ಯಾಚಿ ಚಾಳ' ಏಕಪಾತ್ರಾಭಿನಯದ ಒಂದು ಭಾಗದಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಪ್ರಚಂಡ ವಾಗ್ಮಿ : ಪು.ಲ. ತುರ್ತುಪರಿಸ್ಥಿತಿಯ ಅಂತ್ಯದಲ್ಲಿ ಪುಣೆಯ ಶನಿವಾರವಾಡಾದ ಸಾರ್ವಜನಿಕ ಸಭೆಯಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭಾಗ - ೨

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಾರಾಯಣ

"ನಾರಾಯಣ, ಎಲೀ ಅಡಿಕೆ ತಟ್ಟೆ ಎಲ್ಲ್ಯದs?"

"ನಾರಾಯಣ, ಮಂಗಳಸೂತ್ರ ವೇಳ್ಯಾಕ್ಕ ಸರಿಯಾಗಿ ಬರ್ತದೋ ಇಲ್ಲ ಮತ್ತs?"

"ನಾರಾಯಣ, ಬ್ಯಾಂಡಿನವರ ಪತ್ತೇನs ಇಲ್ಲಾ; ಹಿಂಗಾದರ ಏನ ಗತಿ?"

" ನಾರಾಯಣ, ಪನ್ನೀರಿನ ಶೀಸೆ ಒಡೀತು".

"ನಾನೀ ಕಾಕಾ, ನನ್ನ ಚೊಣ್ಣದ ಕಸೀ ಬಿಗಿಲಾ ಸ್ವಲ್ಪ!"

"ನಾಣಯ್ಯ, ಈ ನನ್ನ ನತ್ತು ನಿಮ್ಮ ಕಡೆಗೆ ಜಪ್ಪಿಸಿಡ್ರಿ; ರಾತ್ರಿ ಮೆರವಣಿಗೆ ಹೊತ್ತಿನಾಗ ಇಸ್ಕೋತೀನಿ."

"ನಾರ್ಯಾ ಮಗನs, ಮ್ಯಾಲ ಇನ್ನೂ ಚಹಾ ಬಂದಿಲ್ಲ-ಬೀಗರು ಬೀಗಿಕೊಂಡ ಕೂತಾರ!"

"ನಾರಪ್ಪ, ಗಡಾನ ಮೂರು ಜಟಕಾ ಹೇಳು ನೋಡೋಣು."

ಸುತ್ತಮುತ್ತ ಹತ್ತಾರು ಕಡೆಗಳಿಂದ ಹಲವಾರು ಅಪ್ಪಣೆಗಳ ಸುರಿಮಳೆ! ಮದುವೆಯ ಮಂಟಪದಲ್ಲಿ ಈ ನಾರಾಯಣ ಇಂಥ ದಾಳಿಗಳನ್ನು ಹಿಮ್ಮೆಟ್ಟಿಸುವ ನಿಲುವಿನಲ್ಲಿ ನಿಂತಿರುತ್ತಾನೆ. ನಿಜ ಹೇಳಬೇಕೆಂದರೆ 'ನಾರಾಯಣ' ಎಂಬುದು ಸಾರ್ವಜನಿಕ ಸಂಕೇತವಾಗಿದೆ. ಇಂಥ ವ್ಯಕ್ತಿ ಪ್ರತಿಯೊಂದು ಮನೆಯಲ್ಲೂ ನೋಡಸಿಗುತ್ತದೆ. ಯಾವದೇ ಮಂಗಲಕಾರ್ಯದಲ್ಲಿ ಮನಸ್ಸುಕೊಟ್ಟು, ಮೈಮುರಿ ದುಡಿಯುವದೇ ತನ್ನ ಜನ್ಮಸಿದ್ಧ ಅಧಿಕಾರ ಎಂದು ಭಾವಿಸುವ ಇಂಥ ವ್ಯಕ್ತಿಗಳು ಮಂಗಲಕಾರ್ಯ ನಿಶ್ಚಯವಾಗುವದೊಂದೇ ತಡ; ಯಾವದಾದರೊಂದು ಬಾದರಾಯಣ ಸಂಬಂಧದ ಬಾಲಾಗಸಿ ಅಂಟಿಸಿಕೊಂಡು ನಂಟಸ್ತನ ಸಾರುತ್ತ ಹಾಜರಾಗುತ್ತಾರೆ.

ಕನ್ಯಾ ಪರೀಕ್ಷೆಗೆಂದು ವರನ ಕಡೆಯುವರು ಬಂದಿರುತ್ತಾರೆ. ವರನ ಕಡೆಯುವರು ಅಂದರೆ ಮದುಮಗನ ತಾಯಿ, ತಂದೆ, ದೂರದ ಕಕ್ಕ (ಈ ದೂರದ ಕಕ್ಕ ಎಂಬುವವರು ನಂಟಸ್ತನದಲ್ಲಿ ದೂರದವರಾಗಿದ್ದರೂ ಸರಿಯಾಗಿ ಈ ಸಮಯಕ್ಕೆ ಇಷ್ಟೊಂದು ಹತ್ತಿರದವರು ಹೇಗೆ ಆಗ್ತಾರೆ ಎಂಬುವದು ಒಡೆಯಲಾಗದ ಕೌಟುಂಬಿಕ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಒಗಟು!) ಮತ್ತು ಸ್ವತಃ ಮದುಮಗ ಹಾಗು ಆತನ ಗೆಳೆಯ. ಈ ವರನಕಡೆಯವರ ತಂಡದಲ್ಲಿ ಎಂಟ್ಹತ್ತು ವರ್ಷ ವಯಸ್ಸಿನ ಚುರುಕು ಹುಡುಗಿಯೊಂದು ಇರ್ತದೆ! ಈ ಬಾಲಿಕೆಯ ಜಾಣತನವನ್ನು ಮದುಮಗಳ ಕಡೆಯವರೆಲ್ಲ ಕೊಂಡಾಡುತ್ತಾರೆ.

ಮದುಮಗಳ ತಂದೆ ವರನ ತಂದೆಯ ಜೊತೆಗೆ ಮಾತುಕತೆ ನಡೆಸಿರುತ್ತಾರೆ. ವರ ಶ್ರೀಮದ್ ಗಾಂಭೀರ್ಯ ಧರಿಸಿರುತ್ತಾನೆ. ಆತನ ಗೆಳೆಯ ಮಾತ್ರ ಎದುರಿನ ಪಡಸಾಲೆಯ ಕಡೆಗೆ ನೋಟ ಹರಿಸಿರುತ್ತಾನೆ. ಅಲ್ಲಿ ಕಿಟಕಿಯ ತೆರೆಯನ್ನು ತುಸುವೇ ಸರಿಸಿ ಇಣುಕಿ ನೋಡುವ ಪೋರೆಯ ಮೇಲೆ ತನ್ನ ಕಣ್ಣು ಕೀಲಿಸಿರುತ್ತಾನೆ. ಇತ್ತ ಒಳಗಡೆ ಭಾವೀ ಬೀಗಿತ್ತಿಯರು ಗತ್ತಿನಲ್ಲಿ ತಮ್ಮ ತಮ್ಮ ಮನೆತನಗಳ ರೀತಿ ನೀತಿಗಳನ್ನು, ನೇರ ನಡತೆಯ ವಿಶೇಷತೆಯನ್ನು ಪರಸ್ಪರರ ಮೇಲೆ ಬಿಂಬಿಸುವದರಲ್ಲಿ ದಂಗಾಗಿರುತ್ತಾರೆ. ಮದುಮಗ ಅಥವಾ ಮದುಮಗಳು ಮೂಗಿನ ನೇರಕ್ಕೆ ಸರಳ ಮಾರ್ಗದಲ್ಲಿ ಸಾಗುವವರಾಗಿದ್ದಾರೆ ಎಂದು ಆವಳ ಅಗ್ಗಳಿಕೆ ಹ್ಯಾಂಗ ಸರಿ ಯಾರಿಗೊತ್ತು! ಯಾಕಂದ್ರ ಅಡ್ಡಾದಿಡ್ಡಿ ಬೆಳೆದ ಊರಾಗ ಅಡ್ಡರಸ್ತೆ, ತಿರುವು ಇರೋವು! ಅಂದಮ್ಯಾಲ ಸರಳದಾರೀನೇ ಹಿಡಿದವರು ಎಂಬ ಹೆಗ್ಗಳಿಕೆ ಏನರ್ಥ? ರೇಖಾಗಣಿತಶಾಸ್ತ್ರಕ್ಕೇ ಸವಾಲಾಗುವ ಈ 'ನೇರಮಾರ್ಗದ ನಡತೆ' ಯ ವ್ಯಾಖ್ಯಾನ ಖರೇ ಅಂದ್ರ ಹೀಂಗ ಅಡ್ಡದಾರಿ ಹಿಡಿದಿರ್ತದ!

ಮದುಮಗಳು ಮಾತ್ರ ಸೌಜನ್ಯದ ಸಾಕಾರ ಮೂರ್ತಿಯಂತೆ ಕುಳಿತಿರುತ್ತಾಳೆ. ಆವಳ ಎಡೆಯ ಮೇಲಿನ ಜವರು ಹನಿಗಳನ್ನು ಒರೆಸುತ್ತಿರುತ್ತಾರೆ ಆಕೆಯ ಗೆಳತಿಯರು ಮತ್ತು ಸಹೋದರಿ. ಅದೇ ಕಾಲಕ್ಕೆ ಆ ಎಂಟ್ಹತ್ತು ವರ್ಷದ ಚುರುಕು ಹುಡುಗಿ- 'ಕಲ್ಪನಾ' 'ಅರ್ಪಿತಾ' ಅಥವಾ 'ಕಪರ್ದಿಕಾ' ಎಂಬಂಥ ಪ್ರಚಲಿತ ಫ್ಯಾಶನ್ನಿನ ಹೆಸರಿನ ಹುಡುಗಿ -ಕಪಾಟು ತೆರೆದು ಪುಸ್ತಕದಲ್ಲಿ ತಲೆ ತೂರಿಸಿರುತ್ತಾಳೆ.

''ಐ ಸುಡ್ಲಿ; ಇಷ್ಟೊಂದು ಸೇರ್ತದs ಪುಸ್ತಕ ಓದೋದು?'' ಎಂಬ ಕೌತುಕದ ಉದ್ಗಾರವನ್ನು ಆಲಿಸುತ್ತಾಳೆ ಆ ಬಾಲೆ. ಈ ಹುಡುಗಿ, 'ನಾ ಚಹಾ ಕುಡಿಯೂದಿಲ್ಲ' ಎಂದು ಬಿಂಕ ಮಾಡ್ತಾಳೆ. ಬಿಸ್ಕಿಟ್ ಮುಟ್ಟೂದಿಲ್ಲ! 'ನಂಗ ಉಂಡಿ ಅಂದ್ರ ಆಗೂದಿಲ್ಲ' ಎಂದು ಜಂಬ ಕೊಚ್ತಾಳೆ. ಒಟ್ಟಿನ ಮೇಲೆ ಬಡಿವಾರ ಬಡ್ಕೊಳ್ಳುವ ಯಾವ ಅವಕಾಶಾನೂ ಕಳೆದುಕೊಳ್ಳುವದಿಲ್ಲ ಈ ಚುರುಕು ಬಾಲಿಕೆ! ಖರೇ ಅಂದ್ರ, ಮದುಮಗಳ ತಾಯಿಗೆ ಈ ಸೊಕ್ಕಿನ ಸೋಗಲಾಡಿಯ ಸೊಂಡಿಗೆ ಬಿಗೀಯಬೇಕು ಎಂದೆನಿಸ್ತದ. 'ಮುದ್ದುಮಾಡಿ ಮುಗಿಲಿಗೇರಿಸ್ಯಾರ ಕಾಣಸ್ತದ' ಎಂಬ ಭಾವನೆ ಮದುಮಗಳ ಮನದಲ್ಲಿ ಮಿಂಚಿ ಹೋಗ್ತದೆ.

ಹೀಗೆ ಪ್ರತಿಯೊಬ್ಬರೂ ತಮ್ಮ ತಮ್ಮ ವಿಚಾರದೊಳಗೆ ಮುಳುಗಿರುವಾಗ ಒಬ್ಬ ವ್ಯಕ್ತಿಯ ಕಡೆಗೆ ಮಾತ್ರ ಯಾರ ಗಮನವೂ ಇರುವದಿಲ್ಲ. 'ಕನ್ಯಾ ನೋಡುವ' ಕಾರ್ಯಕ್ರಮಕ್ಕೆ ವರನ ಕಡೆಯವರು ಬಂದು ಕುಳಿತ ಕೂಡಲೆ ಆರಂಭದಲ್ಲಿ ವರನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಂದೆಯು 'ಈತ, ನಮ್ಮ ನಾರಾಯಣ' ಎಂದು ಸ್ವಲ್ಪದರಲ್ಲಿ ಗುರುತು ಮಾಡಿಕೊಟ್ಟಿರುತ್ತಾನೆ. 'ನಾರಾಯಣ' ಎಂಬ ಈ ಸಂಸ್ಥೆ ಇದಕ್ಕಿಂತ ಮಿಗಿಲಾದ ಉಲ್ಲೇಖನಕ್ಕೆ ಪಾತ್ರವೂ ಇರುವದಿಲ್ಲವೆನ್ನಿ!'ನಾರಾಯಣ' ಎಂದರೆ ಏನು ಎಂಬುದರ ಅಂದರೆ ಆತನ ನಿಜ ಯೋಗ್ಯತೆಯು ದರ್ಶನವಾಗಬೇಕಾದರೆ ಮದುವೆಯ ಹಂದರ ತಲೆ ಎತ್ತಬೇಕು; ಆಗಲೇ ಗೊತ್ತಾಗೋದು ಆತನ ಮಹತಿ!

ಈ ಎಲ್ಲ 'ನಾರಾಯಣ' ಜನ ಎರಡು ಜೇಬಿನ ಅಂಗಿ ತೊಟ್ಟಿರುತ್ತಾರೆ. ಕೆಳಗೆ ಮಾಸಿದ ಧೋತರ, ಕಚ್ಚೆ ಬಿಗಿದು ಉಟ್ಟಿದ್ದು. ಧೋತರದ ಹಿಂಭಾಗ ಸಾಯಕಲ್ ಸೀಟಿಗೆ ಸಿಕ್ಕು ಮುಲ್ಲಾನ ಕೋಳೀ ತುಂಬೋ ಬುಟ್ಟಿಹಾಂಗ ದುಂಡಗ ಉಬ್ಬಿರ್ತದೆ. ಧೋತರದ ಅಂಚು ಮೊಣಕಾಲ ಪರಟಿ ಕೆಳಗೆ ಭಾಳ ಅಂದ್ರ ೨-೩. ಬೊಟ್ಟು ಇಳಿಬಿದ್ದಿರುತ್ತದೆ. ತಲೆಯ ಮ್ಯಾಲ ಬ್ರೌನ್ ಟೊಪ್ಪಿಗೆ. ಖಾಕಿ, ಬ್ರೌನ್ ಮೊದಲಾದ ಹೊಲಸು ಬಿಪ್ಪಿಸುವ ಬಣ್ಣಗಳೇ ಇಂಥ 'ನಾರಾಯಣ'ರಿಗೆ ಬಹಳ ಸೇರ್ತಾವೆ. ಈ ಜನ ಹೊಸ ಚಪ್ಪಲಿ ಕೊಂಡಾಗ ಅವು ಹೇಗಿದ್ದವೋ ಹೇಳುವದು ಕಠಿಣ. ಏಕೆಂದರೆ ಅವರ ಪಾದತ್ರಾಣಗಳ ಅಂಗುಷ್ಟ ಕಿತ್ತಿರುತ್ತದೆ. ನಡುವಿನ ಪಟ್ಟಿ, ಕೆಳಗಿನ ಅಟ್ಟಿ, ಬಾರು, ಹಿಮ್ಮಡಿ ಇವೆಲ್ಲ ಬದಲಾಗುತ್ತ ಬದಲಾಗುತ್ತ, ತಮ್ಮ ಮೂಲ ಸ್ವರೂಪವನ್ನೇ ಮರೆಮಾಚಿಬಿಟ್ಟಿರುತ್ತವೆ. ಇನ್ನೂ ಒಂದು ಮಾತು; ಬಲಗಾಲಿನ ಮೆಟ್ಟು ಅಂಗುಷ್ಟರಹಿತವಾಗಿರುತ್ತಿದ್ದರೆ ಈ 'ನಾರಾಯಣ'ರಿಗೆ ವಿಶೇಷ ಕಳೆ ಏರುತ್ತದೆ! ಆದರೆ ಈ ನಮ್ಮ ನಾರಾಯಣ 'ಕೋಟ್' ಧರಿಸೋದು ಮಾತ್ರ ಅಪರೂಪ. ನಮ್ಮ ನಾರಾಯಣ ಸ್ವಂತದ ಮದುವ್ಯಾಗ ಧರಿಸಿದ್ದ. ಎರಡನೇ ಸಲ ಬೇರೆ ಯಾರದೋ ಸಲುವಾಗಿ 'ಕನ್ಯಾ' ನೋಡಲಿಕ್ಕೆ ಹೋದಾಗ ಮತ್ತು ಮಗದೊಮ್ಮೆ ನೂ ಧರಿಸಿದ್ದ, ಮುನಸೀಪಾಲಿಟಿ ಕಚೇರಿಯೊಳಗ ಗುಮಾಸ್ತ ಅಂತ ನೌಕರಿಗೆ ಸೇರಿಸಿಕೊಂಡ ಸದಾಶಿವರಾಯರನ್ನ ಭೆಟ್ಟಿ ಆಗಲಿಕ್ಕೆ ಹೋದಾಗ! ಮನೆಮನೆಗಳಲ್ಲಿಯ 'ನಾರಾಯಣ'ರು ಹೀಗೆ ಕೋಟ್ ಧರಿಸೋದು ಹಬ್ಬ ಹರಿದಿನಗಳಲ್ಲಿ ಮಾತ್ರ. ಈ ಜನ ಕೋಟಿನ ಕಾಲರಿಗೆ ತಪ್ಪದೆ 'ಸೇಫ್ಟಿಪಿನ್' ಚುಚ್ಚಿಕೊಂಡಿರುತ್ತಾರೆ. ಈ ಪಿನ್ನು ಹಲ್ಲು ಕೊರೀಲಿಕ್ಕೆ ಅಥವಾ ಪ್ರಸಂಗವಶಾತ್ ಯಾರ ಕಾಲಿಗಾದರೂ ಮುಳ್ಳುನೆಟ್ಟಿದ್ದರೆ ಹೊರತೆಗೆಯಲು ಪ್ರಯೋಜನಕಾರಿ! ಈ ಜನ ಧರಿಸುವ ಖಾಕಿ ಅಂಗಿಯ ಎರಡೂ ಜೇಬುಗಳಲ್ಲಿ ಡೈರಿ, ರೇಲ್ವೆ ಟಾಯಿಮ್ ಟೇಬಲ್, ಅಷ್ಟ ಯಾಕ ಕೆಲವು ಸಲ ಒಂದು ಪುಟ್ಟ ಪಂಚಾಂಗ ಸಹ ಇರುತ್ತವೆ.

ಹುಡುಗಿ ಪಾಸ ಬಿದ್ದು ವರದಕ್ಷಿಣೆ, ವರೋಪಚಾರದ ಮಾತುಕತೆ ಮುಗಿದು ಮದುವೆಯ ಮುಹೂರ್ತದ ಮಾತುಗಳು ಸುರುವಾಗುತ್ತಲೆ ಪಂಚಾಂಗಕ್ಕಾಗಿ ಮಾತುಗಳು ನಿಲ್ಲುತ್ತವೆ. ಆ ಸಮಯಕ್ಕೆ ಸರಿಯಾಗಿ ನಾರಾಯಣ ಮುನ್ನುಗ್ಗುವನು. "ತೆಗೊಳ್ರಿ ಪಂಚಾಂಗ ...!" ಎನ್ನುತ್ತ ನಾರಾಯಣ ತನ್ನ ಜೇಬಿನಿಂದ ಪಂಚಾಂಗವನ್ನು ಹೊರಗೆ ತೆಗೆಯುತ್ತ ಮುಂದಕ್ಕೆ ಬರುತ್ತಾನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ಭೇಷ್, ಭೇಷ್!' ಮದುಮಗಳ ತಂದೆ ಕೃತಜ್ಞತೆಯ ನೋಟ ಹರಿಸುತ್ತಾನೆ ನಾರಾಯಣನೆಡೆಗೆ. ಈ ಕ್ಷಣದಿಂದ ನಾರಾಯಣನ ಮಹತಿ ಜನರಿಗೆ ಅರಿವಾಗತೊಡಗುತ್ತದೆ. ಒಳಗಡೆ ಹೆಂಗಸರು ಸಹ ನಾರಾಯಣನ ಈ ಪ್ರಸಂಗಾವಧಾನವನ್ನು ಕೊಂಡಾಡುತ್ತ ಹೆಮ್ಮೆಯಿಂದ ನೋಡುತ್ತಾರೆ! ಆದರೆ ನಾರಾಯಣನಿಗೆ ಎಲ್ಲಿಯೂ ಲಕ್ಷ ಇರುವದಿಲ್ಲ. ಆಗ ಆತನ ತಲೆಯಲ್ಲಿಯ ಯೋಚನಾಚಕ್ರಗಳಿಗೆ ಗತಿ ಬಂದಿರುತ್ತದೆ. ಮದುವೆಯ ಮುಹೂರ್ತ ನಿಗದಿಯಾದ ಕ್ಷಣದಿಂದ ಮದುವೆಯ ಮೆರವಣಿಗೆ ಹೊರಡುವ ತನಕ 'ನಾರಾಯಣೇನ ವಿನಾ' 'ತೃಣಮಪಿ ನ ಚಲತಿ' ಎಂಬ ಸ್ಥಿತಿ ರೂಪುಗೊಳ್ಳುತ್ತದೆ. ನಾಲ್ಕೂ ದಿಕ್ಕಿನಿಂದ ಆತನ ಮೇಲೆ ಹೊಣೆಗಾರಿಕೆಗಳು ಸುರಿಯುತಿರ್ತಾವೆ! ನಾರಾಯಣ ಅವುಗಳನ್ನೆಲ್ಲ ನಿಭಾಯಿಸುವ ಎತ್ತುಗಡೆಯಲ್ಲಿ ನಿರತನಾಗಿರ್ತಾನೆ. ಪ್ರತಿಯೊಂದು ಕೆಲಸ, ಕಾರ್ಯದಲ್ಲಿ "ಹ್ಞಂ, ಮತ್ತs ನಾರಾಯಣನ್ನ ಜೊತೆಗೆ ಕರಕೊಳ್ಳಿ, ಮತ್ತೆ-" ಎಂಬ ಒತ್ತಾಯ ಎಲ್ಲರ ಮಾತಿನಾಗ!!

"ನಾ ಹೇಳ್ತೇನಿ ಕೇಳ್ರಿ; ಪಟ್ಟೆ ಪೀತಾಂಬರ ಭಡಸಾವಳೇಕರರ ಅಂಗಡ್ಯಾಗ ಸೋವೀ ಸಿಗ್ತಾವ, ಬೇರೆ ಕಡೆ ತುಟ್ಟಿ......"

ಸುಮಾರು ಎಂಟ್ಹತ್ತು ಬೇರೆ ಬೇರೆ ಪ್ರಾಯದ (ಮತ್ತು ಬೇರೆ ಬೇರೆ ಆಕಾರದ) ಹೆಂಗಳೆಯರ ತಂಡದೊಡನೆ ನಾರಾಯಣ ಮದುವೆಯ ಜವಳಿ ತೆಗೆಸಲು ಹೊರಟಿರುತ್ತಾನೆ. ಕೈಯಾಗ ಎಂಟ್ಹತ್ತು ಕೈಚೀಲ, ನೇತಾಡ್ತಿರ್ತಾವೆ. ಹಾಗೆ ನೋಡಿದರೆ ಒಬ್ಬ ಹೆಂಗಸಿನ ಕೂಡ ಹೋಗಿ ಬಟ್ಟೆ ಖರೀದಿ ಮಾಡೋದೇ ಮನಃಶಾಂತಿಯನ್ನು ಅಗ್ನಿಪರೀಕ್ಷೆಗೆ ಒಡ್ಡಿಧಾಂಗ ಇರ್ತದ! ಇಲ್ಲಿ ನಾರಾಯಣ ಎಂಟ್ಹತ್ತು ಹೆಣ್ಮಕ್ಕಳ ಸಂಗಡ ನಿರಾಳವಾಗಿ ಹಲವಾರು ಅಂಗಡಿಗಳ ಮೆಟ್ಟಿಲು ಏರಿಳಿಯುತ್ತಿರುವಾಗಿನ ಉತ್ಸಾಹ, ಹುರುಪು ಏನೆಂದು ಬಣ್ಣಿಸೋದು? - ಮೇಲಾಗಿ ಈ ದಂಡನ್ನು ನಗರಸಾರಿಗೆಯ ಬಸ್ಸಿನಲ್ಲಿ ಸರತಿಸಾಲಿನಲ್ಲಿ ತಾ ಕೊನೆಗೆ ನಿಂತು ಏರಿಸುವ ಹೊಣೆ ಬೇರೆ! ನಾರಾಯಣನಿಗೆ ಇದಾವುದು ಎದೆಗೆಡಿಸುವದಿಲ್ಲ. ಈಗ ಆತನ ತಲೆಗೆ ಮದುವೆಯ ಆವೇಶ ಹೊಕ್ಕಿದೆ. ಕಚೇರಿಯ ಕಡೆಗೆ ಸಹ ಆತನ ಲಕ್ಷವಿಲ್ಲ. (ಹಾಂಗ ನೋಡಿದ್ರ ಅತ್ತ ಎಂದೂ ಆತ ಲಕ್ಷ್ಯ ಹರಿಸಿದ್ದಿಲ್ಲ. ಆ ಕೊರತೆಯನ್ನು ಆತ ಹೆಡ್‌ಕ್ಲಾರ್ಕನ ಮನೆಗೆ ಕಾಳುಕಡಿ ಹೊತ್ತೊಯ್ದು ಅಥವಾ ಕೃಷ್ಣಾತೀರದ ಖೋವಾ ಪೂರೈಸಿ ತುಂಬಿಕೊಳ್ಳುತ್ತಾನೆ.) ಮೈಯಾಗ ದೇವ್ರು ಬಂಧಾಂಗ ನಾರಾಯಣನ ಮೈಯಾಗ ಮದುವೆ ಸಂಚಾರ ಆಗಿರ್ತದೆ!

"ಕಕ್ಕೀ, ನನ್ನ ಮಾತು ಕೇಳ್ರಿ. ಮಹೇಶ್ವರೀ ಸೀರೆಗಳ ಸ್ಟಾಕ್ ಇಲ್ಲಿಕಿಂತ 'ದ್ರೌಪದಿ ವಸ್ತ್ರ ಭಾಂಡಾರ' ದಾಗ ಛಲೋ ಅದ; ಇಲ್ಲಿ ಏನದಲಾ, ಬರೀ ಖಣಾ ಮಾತ್ರ ಆರಿಸಿಕೊಳ್ರಿ," ಅಂಗಡಿಯ ಮಾಲೀಕನ ಮುಖದ ಮೇಲೆ ಇಂಥ ಮಾತು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉಚ್ಚರಿಸುವ ಎದೆಗಾರಿಕೆಯನ್ನು ನಾರಾಯಣ ಮಾತ್ರ ಮಾಡಬಲ್ಲ! ಜವಳಿ ಅಂಗಡಿಗಳಿಂದ ಹಿಡಿದು ತುಪ್ಪ ಬೆಣ್ಣೆ ಮಾರ್ಕೆಟ್ಟಿನ ವರೆಗೆ ಏನೇನು ಸಿಗ್ತದೆ ಅಂಬೂದನ್ನ ಪಟಪಟಾಂತ ಉಚ್ಚರಿಸುವ ಈ ನಾರಾಯಣ ಅಂದ್ರ, ಖಾಕಿ ಅಂಗಿ, ಮಾಸಿದ ಧೋತರ ಮತ್ತು ನಾಸೀಪುಡಿ ಬಣ್ಣದ ಟೊಪ್ಪಿಗೆ ಧರಿಸಿ ಓಡಾಡುವ ಯಂತ್ರವೇ ಸೈ!

''ಆಯಿತಪ್ಪಾ, ನೀ ಅಂಧಾಂಗ ಆಗಲಿ'' ಆ ಕಕ್ಕಿ ನಾರಾಯಣನಿಗೆ ಶರಣ ಪತ್ರ ಒಪ್ಪಿಸುತ್ತಾಳೆ.

''ಮಾಮೀ, ಕಕ್ಕಿ ಖಣಾ ನೋಡ್ಕೋತ ಕುಳಿತಿರಲಿ; ಅಷ್ಟರಾಗ ನರಹರ ಶೇಟನ ಅಂಗಡಿ ಕಡೆಗೆ ಹೋಗಿ ಮಂಗಳಸೂತ್ರದ ಡಿಝೈಯಿನ್ ನೋಡ್ಕೊಂಡು ಬರೋಣ.''

'' ಸರಿ, ಹಂಗs ಆಗಲಿ. ಮತ್ತ ಅಳಿಯ ದೇವರ ಬೆರಳಿನ ಅಳತೇನೂ ತಂದೀನಿ ಉಂಗುರದ ಸಲುವಾಗಿ''. ಮಾಮೀ ಉವಾಚ.

''ಉಂಗುರದ್ದು ನರಹರ ಶೇಟನ ಕಡೆಗೆ ಬೇಡಾ. ರಾಮಲಾಲ್ ಲಖನಮಲ್‌ನ ಕಡೆಗೆ ಉಂಗುರ ಮಾಡಿಸಲು ಹಾಕೋಣು. ಇಂದು ಅಳತೆ ಕೊಟ್ಟರ ಬರುವ ಸೋಮವಾರ ಉಂಗುರ ತಯ್ಯಾರ! ಮುಂದಿನ ಮೂರು ದಿನದಾಗ ಬಂಗಾರದ ಧಾರಣೆ ತೇಜಿ ಆಗೋದದೆ. (ಇದೂ ಸಹ ನಾರಾಯಣನಿಗೆ ಗೊತ್ತಿರ್ತದ ಹ್ಲಂ!) ಇಂದs ಬಂಗಾರದ ಖರೀದಿ ಆಗಲಿ ನಡೀರಿ....'' ನಾರಾಯಣನ ಆದೇಶ !

ಬಾಯ್ಮುಚ್ಚಿಕೊಂಡು ಆ ಮಾಮೀ ಮತ್ತು ಮದುವೆಗೆಂದು ಬಂದಂಥ ಬೆಳಗಾವಿಯ ದೊಡ್ಡಮ್ಮ ನಾರಾಯಣನನ್ನು ಹಿಂಬಾಲಿಸುತ್ತಾರೆ. ಸಂದಿಗೊಂದಿಗಳೊಳಗಿಂದ ದಾರಿ ಮಾಡಿಕೊಂಡು ನಾರಾಯಣ ಈ ಮಹಿಳಾಮಣಿಗಳನ್ನು ನರಹರಶೇಟರ ಅಂಗಡಿಗೆ ಕರೆದೊಯ್ಯುತ್ತಾನೆ.

''ಉಂಗುರದ್ದೂ ಇಲ್ಲಿಯೇ ಹಾಕಿದ್ದರೆ ಭಲೋ ಆಗ್ತಿತ್ತು ಅಂತಿದ್ದೆ,'' ಮಾಮೀ ಮೆಲ್ಲನೆ ಪುಟಪುಟಿಸಲು ಹವಣಿಸುತ್ತಾರೆ. ಆದರೆ ನಾರಾಯಣ ಅದನ್ನು ಕಿವಿಗೆ ಹಾಕಿಕೊಳ್ಳಲು ಸಿದ್ಧನಿಲ್ಲ.

'' ಬರ್‍ರ್ಯಲಾ ನಾಲ್ಕೈದು ದಿವಸದಾಗ'' ''ಹೀಂಗ ದೇಶಾವರಿ ಮಾತು ಬೇಡಾ. ನಿಶ್ಚಿತ ದಿವಸ ಹೇಳ್ರಿ. ನನಗ ಹತ್ತೆಂಟು ಸಲ ಎಡ್ತಾಕಲಿಕ್ಕೆ ಬಿಡುವಿಲ್ಲಾ....'' ನಾರಾಯಣ ಅಂಗಡಿಯವನನ್ನು ದಬಾಯಿಸುತ್ತಾನೆ. ಹಾಂಗ ನೋಡಿದ್ರ, ಉಳಿದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೊತ್ತಿನಾಗ ಹಾದಿ ನಾಯಿಗೆ ಸಹ 'ಹಚ್ಯಾ' ಅನ್ನೊ ತಾಕತ್ತು ನಾರಾಯಣನಿಗಿಲ್ಲ. ಆದರೆ ಇಲ್ಲಿ ಮಾತ್ರ ಹಾಗಲ್ಲ; ಈಗ ಮದುವೆ ಹೂಡೇದಲ್ಲ! ಅದನ್ನು ಪಾರುಗಾಣಿಸುವ ಪಾರುಪತ್ಯ ಹೊತ್ತಿರುವವ ನಾರಾಯಣ. ಕಳೆದ ನಾಲ್ಕು ದಿನಗಳಿಂದ ಗಡ್ಡಾ ಬೋಳಿಸಿಕೊಳ್ಳಲಿಕ್ಕೂ ವೇಳೆ ಸಿಕ್ಕಿಲ್ಲ. ಹೇಗಾದರೂ ನಾಲ್ಕು ತಂಬಿಗೆ ನೀರು ತಲೆ ಮೇಲೆ ಸುರುವಿಕೊಂಡು ಅತ ಹೊರಬೀಳ್ತಾನ. ಮಂಗಳಸೂತ್ರದ ಆರ್ಡರ ಕೊಟ್ಟ ಬಳಿಕ ಈ ಗುಂಪು ಮತ್ತೆ ಜವಳಿ ಅಂಗಡಿಗೆ ಮರಳ್ತದೆ. ಅಲ್ಲಿ ಇನ್ನೂ ಮನಸ್ಸಿಗೊಪ್ಪುವ ಖಣಗಳ ಆಯ್ಕೆ ಆಗಿರುವದಿಲ್ಲ. ಆದರೆ ನಾರಾಯಣ ಎದೆಗುಂದುವುದಿಲ್ಲ.

''ಕಕ್ಕೀ, ನಾ ಹೇಳ್ತೀನಿ ಕೇಳ್ರಿ. ಈ ಇಪ್ಪತ್ತೈದು ತೆಗೊಳ್ರಿ- ಅದರಾಗಿನ್ನು ಎಂಟು ಆರಿಸಿರಿ. - ಈ ನಾಲ್ಕು ಜರತಾರಿ ಅಂಚಿನ್ನು- ಇವು ಮದುಮಗಳ ಅತ್ತೆಗೆ ಆಗತಾವ.''
''ಆದರೆ ಅತ್ತೆಗೆ ಅಂದ್ರ ಗರ್ಭರೇಶ್ಮಿಯ ಇದ್ದರೆ-?''

''ಏನ್ಮಾಡೋದದ ಆ ಮುದಿಕೆಗೆ ಗರ್ಭರೇಶ್ಮಿದು?'' ಶತ್ರು ಪಕ್ಷದ ಮಹಿಳಾಮಣಿಯ ಈ ಕುಚೇಷ್ಟೆಯಿಂದ ಹೆಂಗಳೆಯರೆಲ್ಲರೂ ಮನಸಾ ನಗುತ್ತಾರೆ.
'' ಆಯಿತು. ಇನ್ನ ಈ ಸಾದಾ ಖಣಾ ಒಂದು ಹತ್ತಹನ್ನೆರಡು.''

''ಹನ್ನೆರಡು....? ಯಾತಕ್ಕ ಇಷ್ಟು?'' ಕಕ್ಕಿ ಸಂದೇಹದ ರಾಗ ಎಳೀತಾಳ.

''ಬೇಕಾಗ್ತಾವ ಕಕ್ಕೀ.s ಮದುವೆ ಮುಹೂರ್ತ ಸೋಮವಾರ. ಆ ದಿವಸ ಎಲ್ಲ ಪೇಟೆ ಬಂದ್; ಆಯತಾ ಹೊತ್ತಿನಾಗ ಖಣಾ ಬಿಡ್ರಿ, ಗೇಣೂದ್ದ ನಾರ ಎಳೀ ಸಹಾ ಸಿಗ್ಲಿಕ್ಕಿಲ್ಲ....''

ನಾರಾಯಣನ ದೂರದರ್ಶಿತ್ವಕ್ಕೆ ಹೊಗಳಿಕೆ ದಕ್ಕುತ್ತದೆ.

''ಇದು ಮಾತ್ರ ಅಗದೀ ಖರೇ ನೋಡ್ರಿ....'' ಮದುವೆಯ ಜವಳಿ ಖರೀದಿಗೆ ಬಂದ ತಂಡದಲ್ಲಿಯ ಒಬ್ಬ ಅಕ್ಕಾಣಿ ಉದ್ಗರಿಸುತ್ತಾಳೆ.

''.... ನಮ್ಮ ಶಾರೂನ ಮದಿವ್ಯಾಗ ಹೀಂಗs ಆಯಿತ್ರೆವ್ವಾ ಸುದ್ಲಿ. ನೆನಪದ ಇಲ್ಲೋ ನಾರೋಪಂತ? ಬೀಗಿತ್ತಿ ಆಯಿತಾ ವ್ಯಾಳ್ಯಾಕ ಸೆಟಗೊಂಡು ಕೂತಳು; ಮದುಮಗನಿಗೆ ಕರವಸ್ತ್ರ ಬೇಕೇ ಬೇಕು ಅಂತ- ಪ್ಯಾಟಿ ಎಲ್ಲಾ ಬಂದ್, ನಮ್ಮ ನಾರಾಯಣನ s ಎಲ್ಲಿಂದಲೋ ತಂದುಕೊಟ್ಟ ನೋಡ್ರಿ, ನಮ್ಮವ್ವ ss....'' ನಾರಾಯಣ ಉಬ್ಬೇಬಿಟ್ಟ! ''ಕ್ಯಾಂಪಿನ ತನಕ ಸಾಯಕಲ್ ತುಳಿದೆ; ಡಝನ್ ಕರವಸ್ತ್ರದ ಪೊಟ್ಟಣ ತಂದೆಸೆದೆ ಶಾರೂನ ಗಂಡನ ಮುಂದ. ' ಮಗನs ಒರಿಸಿಕೋ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಿನ್ನ ಮೂಗು, ಎಷ್ಟು ಒರಿಸಿಕೋತಿ ಒರೆಸಿಕೋ, ಈ ಕರವಸ್ತ್ರಗಳಿಂದಾ' ಅಂತ ಹೇಳಿದೆ. ಹ್ಞಾಂ, ಹಾಂಗ ಹಿಂಜರಿದು ಹಿಂದೇಟು ಹಾಕೋ ಆಸಾಮಿ ನಾನಲ್ಲ. ಆದರೆ ನಾ ಅಂಬೋದು ಇಷ್ಟs. ಮೊದಲಿನಿಂದ ನಮ್ಮನಮ್ಮ ಹುಶಾರಿಯೊಳಗ ಇದ್ದರೆ ಏನು ತಪ್ಪು ಅಂತ ! ಏನಂತೀರಿ ಗುಜಾಮಾವಶಿ?''

ಆ ಗುಜಾಮಾವಶಿ ಸಹ ತನ್ನ ಅಭಿಪ್ರಾಯವೂ ನಾರಾಯಣನ ಮತಧಾಂಗ ಅದ ಅಂತ ಗೋಣು ಕೊಂಕಿಸಿ ಸಾರುತ್ತಾರೆ. ಹೀಗೆ, ಹೊತ್ತುಪ್ರಸಂಗಕ್ಕ ಬೇಕಂತ ಹನ್ನೆರಡು ಖಣಗಳ ಖರೇದಿ ಸಹ ಆಗ್ತದೆ.

''ಅಯ್ಯ ಸುಡ್ಲಿ; ಮರತs ಬಿಟ್ಟೆವಲ್ಲs ! ಪಂಚೇನ ಖರೇದಿ ಮಾಡ್ಲಿಲ್ಲ......''

''ಪಂಚೆಯ ಪಂಚೇತಿ ನನಗ ಬಿಡ್ರಿ. ಹೆಂಗಸರ ಅರವೀದು ಅಷ್ಟ s ನೋಡಿಕೊಳ್ಳಿರಿ. ಹ್ಞಾಂ, ಖಣಗಳದು ಆಯಿತು, ಪಟ್ಟೇ ಪೀತಾಂಬರದು ಮುಗೀತು. ಉಳೀತು ಅಂತ ಅಂದ್ರ ಉಡುಗೊರೆ ಉಡಿಸೋ ಸೀರೆ ಪತ್ತಲ, ನಡೀರಿ. ಪಳಸುಲೆ ಮತ್ತು ಕಂಪನಿ ಇವರ ಅಂಗಡಿಗೆ ....''

ಪಳಸುಲೆಯವರ ಅಂಗಡಿಗೆ ಹೋಗೋದs ? ನಾ ಅಂತಿದ್ದೆ ಸರಮಳಕರ ಅವರ ಅಂಡಿಗೆ ಹೋದ್ರ ಹ್ಯಾಂಗ? - ನಮ್ಮ ಸರಲೀಮದುವ್ಯಾಗ ಅಲ್ಲೇ ತೆಗೆಸಿದ್ವಿ ಜವಳೀನs ......''

''ಮಾಮೀ ಆಗ ಹಿರಿಯ ಸರಮಳಕರ ಹಯಾತ್ ಇದ್ದರು. ಅವರು ಗೊಟಕ್ ಅಂದು ಆರು ವರ್ಷಾತು. ಈಗೇನ ಅದ ಆ ಅಂಗಡ್ಯಾಗ? ಮಗ ಹಾದಿಗೆ ಹಚ್ಯಾನ ವ್ಯವಹಾರಾನs. ಸೀರೀ ಬಿಡ್ರಿ; ಕುಬಸಕ್ಕ ಅರಿವಿ ಸಿಕ್ಕರ ನಿಮ್ಮ ಪುಣ್ಯಾ!....''

ಒಟ್ಟಿನ ಮ್ಯಾಲ ನಾರಾಯಣನಿಗೆ ಕೇವಲ ಅಂಗಡಿಗಳ ಬಗ್ಗೆ ಗೊತ್ತಿರ್ತದೆ ಅಂತೇನಲ್ಲ; ಅಂಗಡಿಕಾರ, ಅವನ ಆರ್ಥಿಕ ಸ್ಥಿತಿ ಗತಿ, ಎಲ್ಲಾ ಅವಗತವಿರ್ತದೆ! ''ಆಗಲೆಪಾ; ಮತ್ತು ಬೆಳ್ಳಿ ತಾಬಾಣ, ಬಟ್ಟಲು, ಅತ್ತರದಾನಿ......'' ಮಾಮಿಯ ಈ ವಾಕ್ಯವನ್ನು ಅಲ್ಲಿಗೇ ತುಂಡರಿಸುತ್ತ ನಾರಾಯಣ ಗುಡುಗುತ್ತಾನೆ.

''ಬೆಳ್ಳಿಯ ವಸ್ತು ಒಡವೆ ಕಟ್ಟಕಡೆಗೆ ನೋಡೋಣು; ಈಗೇನದಲ್ಲಾ ಅರಿವಿ ಅಂಚಡೀದು, ಅದನ್ನ ಮುಗಿಸಿರಿ. ನಮಸ್ಕಾರs -'' ನಾರಾಯಣನ ಈ ನಮಸ್ಕಾರವು ಪಳಸುಲೆ ಮತ್ತು ಕಂಪನಿ ಜವಳಿ ವ್ಯಾಪಾರಿಗಳು- 'ನಮ್ಮಲ್ಲಿ ಇಂದೂರಿ ಮಹೇಶ್ವರೀ ಇ. ಇ.' - ಇವರನ್ನು ಉದ್ದೇಶಿಸಿ ಸಲ್ಲಿಸಲ್ಪಟ್ಟಿರುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

". ನಮಸ್ಕಾರ ಬರಬೇಕು ಬರಬೇಕು ನಾರಾಯಣರಾವ್......"

"ಹೂಂ, ಕಕ್ಕೀ, ಮತ್ತು ಮಾಮಿ, ಚಟಪಟ ಸೀರಿ ನೋಡಿ ಆರಿಸಿರಿ....." ಸೇನಾನಾಯಕನ ಗತ್ತಿನಲ್ಲಿ ಆಣತಿ ನೀಡುತ್ತಾನೆ ನಾರಾಯಣ!

"ಲೋ, ಅವರಿಗೆ ಸೀರೆ ತೋರಿಸೋ ತಮ್ಮಾ....."

"ಸಾಹುಕಾರ್ರs ನನ್ನ ಸೋದರ ಸೊಸೆಯ ಮದುವಿ...." "ಹೌದ?" ಪಳಸುಲೆ ಮತ್ತು ಕಂಪನಿ ಒಳ್ಳೇ ಆತ್ಮೀಯತೆಯಿಂದ, "ನಿಮ್ಮ ಸೋದರ ಮಾವ ಅಂದರೆ?... ಎಂದು ಕೇಳುತ್ತಾರೆ.

"ಭಾವೂ ಸಾಹೇಬ್ ಪೇಂಡ್ಸೆ - ರಿಟಾಯರ್ಡ್ ಸಬ್‌ಡಿವ್ಹಿಜನಲ್ ಆಫೀಸರ್-"

"ಸರಿ, ಸರಿ, ಅವರ ಮಗಳ ಮದುವೆಯಾ-? " ಖರೇ ಹೇಳಬೇಕೆಂದರೆ ಪಳಸುಲೆ ಮತ್ತು ಕಂಪನಿಯುವರ ಗಮನಕ್ಕೆ ಭಾವು ಸಾಹೇಬ್ ಪೇಂಡ್ಸೆ, ಯಾರು ಎಂಥವರು ಒಂದೂ ಗೊತ್ತಿರುವದಿಲ್ಲ. "ಲೋ, ಮಾಧವಾ, ಮೊನ್ನೆ ಹೊಚ್ಚ, ಹೊಸ ಸ್ಟಾಕು ಬಂದದಲ್ಲ ನಾಗೂಪೂರ ಸೀರೀದು? ಬಿಚ್ಚಿ ತೋರಿಸು" ಎಂದು ವಿಶೇಷ ಆಸಕ್ತಿ ಉಳ್ಳವರ ಹಾಗೆ ಹೇಳಿ ಆತ್ಮೀಯತೆಯನ್ನು ತೋರುತ್ತಾರೆ, ಪಳಸುಲೆ ಮತ್ತು ಕಂಪನಿಯುವರು. ಇದರಿಂದ ಹೆಂಗೆಳೆಯರೆಲ್ಲ ಖುಶಿಗೊಂಡು, "ನಮ್ಮ ನಾರಾಯಣನದು ಬಿಡ್ರೆವ್ವ; ಹೋದಲ್ಲೆಲ್ಲ ಖೂನೂ ಗುರ್ತು!" ಎಂದು ಹೆಮ್ಮೆಯಿಂದ ಆತನನ್ನು ನೋಡುತ್ತಾರೆ. ಇದೇ ಸಮಯಕ್ಕೆ ನಾರಾಯಣ, ಪಳಸುಲೆ ಮತ್ತು ಕಂಪನಿಯ ಮಾಲೀಕನ ಕೈಯಲ್ಲಿಯ ನಶ್ಯದ ಡಬ್ಬಿ ಇಸ್ಕೊಂಡು ಒಂದು ಚಿಮಟಿ ನಶ್ಯ ಮೂಗಿಗೆ ಏರಿಸಿ ಮಾಲೀಕರೊಡನೆ ತನಗಿದ್ದ ಒಗೆತನದ ಬಗೆಯನ್ನು ಬಿಂಬಿಸುತ್ತಾನೆ.

"ಅಂಥಾಂಗ, ಪಟ್ಟೇ ಪೀತಾಂಬರದ ಖರೇದಿ ಆಯ್ತೇನು ನಾರಾಯಣರಾವ್?" ಪಳಸುಲೆಯವರ ಪ್ರಶ್ನೆ. "ಆಗೂದದs - " ನಾರಾಯಣ ಪಕ್ಕದ ಅಂಗಡಿಯೊಳಗ ಪೀತಾಂಬರ ಈಗಾಗಲೇ ಕೊಂಡಾಗಿದೆ ಎಂಬುದರ ಸುಳುಹನ್ನೂ ನೀಡುವದಿಲ್ಲ.

ಹೀಗೆ ಮದುವೆಯ ಖರೇದಿ ಮುಗಿಯುತ್ತಿದ್ದಂತೇ ಮದುವೆಯ ಆಮಂತ್ರಣ ಪತ್ರಿಕೆಯ ಬಗ್ಗೆ ಚರ್ಚೆ ಆರಂಭವಾಗುತ್ತದೆ. ಕರೆಯೋಲೆಯನ್ನು ಮರಾಠಿ, ಹಿಂದಿ ಮತ್ತು ಇಂಗ್ಲೀಷಿನಲ್ಲಿ ಅಚ್ಚು ಹಾಕಿಸಬೇಕೆಂದು ಯೋಚನೆ ಸಾಗಿತು.

"ಇಂಗ್ಲೀಷನಾಗೂ ಯಾಕs ?" ನಾರಾಯಣನ ದೇಶಾಭಿಮಾನ ಎಚ್ಚತ್ತಿತ್ತು; ಅಲ್ಲದೆ ಆಂಗ್ಲರಿಗಿಂತ ಆಂಗ್ಲ ಭಾಷೆಯ ಮೇಲೆ ಆತನಿಗೆ ಭಾಳ ಸಿಟ್ಟು! - ಈ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇಂಗ್ಲೀಷ ಭಾಷೆಯ ಪ್ರಶ್ನೆ ಪತ್ರಿಕೇನೂ ನಾರಾಯಣನನ್ನು ಮ್ಯಾಟ್ರಿಕ್ ಪರೀಕ್ಷಾದಾಗ ಲಾಗಾ ಹಾಕಿಸಿತ್ತು! ಲಗ್ನ ಪತ್ರಿಕೆಯಲ್ಲಿ ವಧೂವರರ ಭಾವಚಿತ್ರ ಇರಬೇಕೋ ಹೇಗೆ? 'ಹಿರಿಯರ ಆಮಂತ್ರಣವನ್ನು ಮನ್ನಿಸಿ ಸಮಾರಂಭಕ್ಕೆ ತಪ್ಪದೇ ಬರಬೇಕು' ಎಂಬ ಕೆಳಗಿನ ಸಾಲಿನಲ್ಲಿ 'ತಮ್ಮ ಆಗಮನಾಭಿಲಾಷಿಗಳು' ಎಂಬಲ್ಲಿ ಯಾರ ಯಾರ ಹೆಸರು ಇರತಕ್ಕದ್ದು?- ಪತ್ರಿಕೆಯ ಮುದ್ರಣದ ಅಕ್ಷರಗಳ ನಮೂನೆ, ಮಸಿಯ ಬಣ್ಣ ಮೊದಲಾದ ಎಲ್ಲ ವಿಷಯಗಳನ್ನು ನಾರಾಯಣನೇ ನಿರ್ಧರಿಸುತ್ತಾನೆ. ಉಳಿದವರು ಕೌಲಿತ್ತನಂತೆ ಗೋಣು ಹಾಕುತ್ತಾರೆ.

''ನಾಳೆ ಸಂಜೀನಾಗ ಕರಡು ಪ್ರತಿ ಬರ್ತದ. ನೆಟ್ಟಗ ನೋಡಿ ತಿದ್ದುಪಡಿ ಮಾಡ್ರಿ. ಇಲ್ಲಾದರೆ ಆ ಅಣ್ಣೂನ ಮದುವ್ಯಾಗ ಆಧಾಂಗ ಅವಾಂತರ ಆದೀತು.....'' ''ಎಂಥಾ ಅವಾಂತರೂ ನಮ್ಮಪ್ಪ?'' ಮಹಿಳಾವರ್ಗದಲ್ಲಿ ಕುತೂಹಲ ಕೊನರುತ್ತದೆ. ಧೋತರದ ಅಂಚಿನಿಂದ ಟೊಪ್ಪಿಗೆಯ ಒಳಪಟ್ಟಿಗೆ ಮೆತ್ತಿದ ಬೆವರು ಸವರುತ್ತ ನಾರಾಯಣ ಈ ಮೊದಲು, ಪ್ರತಿಯೊಂದು ಮದುವೆಯ ಸಂದರ್ಭದಲ್ಲೂ ಸಾರಿದ ಅದೇ ಆ ನಗೆ ಚುಟುಕದ ಪುನರಾವರ್ತನೆ ಮಾಡ್ತಾನೆ.

'' ಏನಾತಂತೀರಿ ವ್ಹಾಳಸಾಕಕ್ಕೀ-'' (ಈ ಕಕ್ಕಿ, ಅಂದರೆ ಬಟ್ಟೆ ಖರೇದಿಗೆ ಹೋದ ಕಕ್ಕಿ ಅಲ್ಲ; ಅವಳು ಯವಲಾ ಊರಿನ ಕಕ್ಕಿ, ಇವಳು ಅಂತೂನ ಕಕ್ಕಿ!) ಕಕ್ಕಿ ಹುರುಪಿನಿಂದ ಕಿವಿಗಳ ಮೇಲಿನ ಸೆರಗನ್ನು ಕಿವಿಗಳ ಹಿಂದೆ ಸಿಗಿಸಿ ಕೇಳತೊಡಗುತ್ತಾರೆ.

''....ಅದೇ ನಮ್ಮ ಅಣ್ಣೂರೀ!.....''

''ಅಂದ್ರ ಆ ಭೀಮಿಯ ಸೋದರಳಿಯಾ ಹೌಂದಲ್ಲೊ, ಗೊತ್ತದಲ್ಲಾ-ಖೋಡಿ, ಅದು ಭಾಳ ಧಾಂಧಲೆ ಖೋರ ಅದ. '' ಎಳ್ಳಷ್ಟು ಅಗತ್ಯವಿರದಿದ್ದರೂ ಕಕ್ಕಿ ಅಣ್ಣೂನನ್ನು ಧಾಂಧಲೇಖೋರ್‌ನನ್ನಾಗಿ ಮಾಡಿ ಬಿಡುತ್ತಾಳೆ.

''ಹ್ಞೂಂ, ಅವನೇ ! ಆತನ ಮದುವೆ ಆತಲ್ಲ ಮೂರು ವರ್ಷದ ಹಿಂದೆ.....''

''ಹೌದೌದು, ಆ ಜಾನೋರಿಕರರ ನಾದಿನಿನ್ನ ತಗೊಂಡದ ಅಂವಗ....'' ಯಾರೊ ಓರ್ವ ಪ್ರಭಾಕ್ಕಾ ಉದ್ಗರಿಸುತ್ತಾಳೆ.

''ಇದನ್ನ ನಾ ನಿನ್ನಿಂದ ತಿಳಿದುಕೊಳ್ಳಬೇಕೂ ? ನಾನು ಹೊಂದಿಸಿದವ ಆ ಮದವೀ; ಹುಡುಗಿ ಕಪ್ಪು ಅಂತ ಹಿಂದೇಟು ಹಾಕ್ತಿದ್ದ ಅಣ್ಣ್ಯಾ; ಕಿವಿಗಡ್ಡಿ ಹಿಡಿದು ನಿಂದಿರಿಸಿದೆ ಹಸೆ ಮಣೆ ಮೇಲೆ..... ಮೋಜಿನ ಮಾತಂದ್ರ, ಆತನ ಮದುವೆಯ ಕರೆಯೋಲೆ ಛಾಪಿಸಿಕೊಂಡಿದ್ದ ಗೋಣೇಶ್ವರ ಮುದ್ರಣಾಲಯದಾಗ ನಾ ಚಾಲಿವರೆದು ಹೇಳಿದೆ, ''· ತಮ್ಮಾ, ನಮ್ಮ ಹರಿಭಾವೂನ ಜ್ಞಾನಮಾರ್ಗ ಮುದ್ರಣಾಲಯದಾಗ ಅಚ್ಚು ಮಾಡಿಸಿಕೋ'' ಅಂತ. ಕೇಳಲಿಲ್ಲ ನನ್ನ ಮಾತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri
ನಂದೇನು ಹೋಗ್ತದ? ಸಾಯಲಿ ಅಂದೆ....."

"ಅಪ್ಪಯ್ಯsss!"
'ಸಾಯಲಿ' ಎಂಬ ಪದದಿಂದ ಬೆಚ್ಚಿದಾಗ ಅಪ್ಪಯ್ಯsss' ಎಂದು ಚೀರಿದ್ದಳು ಓರ್ವ ತರುಣಿ.

"ಅಪ್ಪಯ್ಯ-ಏನು? ನಾನೇನು ಅಂಜ್ತೇನೇನು?" ನಾರಾಯಣನ ಮೈಯಲ್ಲಿ ಆವೇಶ ಸಂಚಾರವಾಗಿರ್ತದೆ.

".......ನಾ ಮೊದಲು ವಾರ್ನ ಮಾಡಿದ್ದೆ. ಆ ಗೋಣೇಶ್ವರ ಮುದ್ರಣಾಲಯ ಅಂದ್ರ ನಾಟಕ, ಸಿನೇಮಾದ ತಿಕೀಟು, ತಮಾಶಾಗಳ ಕರಪತ್ರ ಅಚ್ಚು ಮಾಡೋ ಮುದ್ರಣಾಲಯ; ಕರೆಯೋಲೆ ಏನ್ ಛಾಪಿಸ್ತಾನ ತನ್ನ ತಲೀ? - ಆದರೆ ಕೇಳಲಿಲ್ಲ.... ಮುಂದೆನಾತಂತೀರಿ ಕಕ್ಕೀ, ಪತ್ರಿಕೆ ಛಾಪಿಸಿ ಬಂದ್ವು, ಮತ್ತು ಅವನ್ನು ನೋಡಿದ ಕೂಡಲೆ ಎಲ್ಲಾರ ಮೋರೆ ಕೆರವಲೆ ಹೊಡಿಸಿಕೊಂಡವರ ಹಾಂಗ ಆದು!"

"ಯಾಕ?- ಅಥಾದ್ದೇನಾಗಿತ್ತು?"

"ಹೇಳ್ತೀನಿ ಕೇಳ್ರಿ....." ಉತ್ಕಂಠತೆಯನ್ನು ಶಿಖರಕ್ಕೇರಿಸುವ ಗತ್ತಿನಲ್ಲಿ ನಾರಾಯಣ ನಿಧಾನವಾಗಿ ರಹಸ್ಯ ಸ್ಫೋಟ ಮಾಡ್ತಾನ. ಆತ ಮಾತು ಮುಂದುವರಿಸಿ.

"ಅಂಥಾಂಗ ಪತ್ರಿಕೆಗಳು ಛಾಪಿಸಿ ಟಪಾಲದಾಗ ಬಿದ್ದು ಬಂದ್ವು; ನಾ ಒಂದು ಲಗ್ನ ಪತ್ರಿಕೆ ಎತ್ತಿಕೊಂಡು ನಿರುಕಿಸಿದೆ. ಕೆಳಗಿನ ಸಾಲು ಇರ್ತದಲ್ಲ, 'ಹಿರಿಯರ ಬಿನ್ನಹವನ್ನು ಮನ್ನಿಸಿ ತಪ್ಪದೆ ಸಮಾರಂಭಕ್ಕೆ ಬರಬೇಕಾಗಿ ಕೋರುವ...' ಅಲ್ಲಿ ಅದಕ್ಕ ಬದಲಾಗಿ ತಿಕೀಟು ಮಾರಾಟ ಶುರು ಆಗಿದೆ' ಎಂಬ ಸಾಲು.....!"

ಹೆಂಗಳೆಯರೆಲ್ಲ ನಗೆಗಡಲಿನಲ್ಲಿ ಮುಳುಗುತ್ತಾರೆ.

'ಐ ಸುಡ್ಲಿ; ಆ ಖೋಡಿ ಗೋಣೇಶ್ವರನಿಗೆ ಮದುವೆ ಅಂತಂದ್ರ ಸಿನೇಮಾ ಅಂತ ಅನಿಸ್ತೇನು?"

"ಒಟ್ಟಿನಾಗ ನಾ ಹೇಳೋದಂದ್ರ, ನಾಳೆ ಕರೆಯೋಲೆ ಅಚ್ಚಾಗಿ ಬಂದ ಮೇಲೆ ನೆಟ್ಟಗೆ ನೋಡಿಕೊಂಡಿದ್ರಿ. ಒಂದು ಹೋಗಿ ಇನ್ನೊಂದು ಆದೀತು. ಸರಿ, ನಾ ಇನ್ನು ಹೊರಡತೇನಿ...."

"ಎಲ್ಲಿ ನಡೆದಿ ಮಾರಾಯ, ಈ ಕೆಟ್ಟ ಬಿಸಿಲಾಗ? - ಚಹಾ ಆದರೂ ಕುಡಿದು ಹೋಗೀ ಅಂತ!"

"ಇಲ್ಲಿ ಚಹಾ ಶಡ್ಡಿಕೋತ ಕೂತ್ರ ಅಲ್ಲಿ ಅಡಿಗೆಯವರನ್ನ ಆರ್ಡರ ಯಾರು ಕೊಡೋರು? ನಾನಾ ತೇರದೇಸಾಯಿಗೆ ಭೆಟ್ಟಿ ಆಗಬೇಕಾಗೇದ...."

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

"ನಾನಾ ತೇರೆದೇಸಾಯಿ ಯಾರು?"

"ಚೋಣಳಖಿಣ ಓಣ್ಯಾಗ ಇದ್ದಾನಲ್ಲ-ಅಡಿಗೆಯವರನ್ನ ಪೂರೈಸೋ ಗುತ್ತಿಗೆ ತಗೋತಾನ, ಅಂವಾ."

"ನಾ ಅಂತಿದ್ದೆ ನಾರಾಯಣ- ಒಂದು ಸಲಕ್ಕು ನಾಲ್ಕು ನೂರು ಎಲೀ ಗುತ್ತಿಗಿ ಕೊಟ್ಟರ ಹ್ಯಾಂಗ ಅಂತ - " ಅವಳ ಒಂದು ಉಪಸೂಚನೆ.

"ಬ್ಯಾಡ ತಿಳೀತು, ಅದು ಭಾಳು ತುಟ್ಟಿ ಬೀಳ್ತದ. ತೇರೆದೇಸಾಯಿ ಅಂದ್ರ ಬೆಪ್ಪ ಮನುಷ್ಯ. ನಾಲ್ಕು ಜನ ಅಡಿಗೆಯಾಳನ್ನ ಕಳಸತಾನ. ಬಡಿಸೋದನ್ನ ನಾವು ನೋಡಿಕೊಂಡ್ರ ಆತು...."

ತಲೆಗೆ ಟೊಪ್ಪಿಗೆ ಏರಿಸಿ ನಾರಾಯಣ ಚೋಳಖಿಣ ಓಣಿಯ ಕಡೆಗೆ ಸಾಯಕಲ್ ಓಡಿಸ್ತಾನೆ.

ಖುದ್ದ ಮದುವೆಯ ದಿನವಂತೂ ನಾರಾಯಣ ಅಂದರೆ ರುಂಡ ಕಳಕೊಂಡ ಮುರಾಠಮಾಜಿ ಹಾಂಗ. ಮಂಟಪದಾಗ ಖಬರಿಲ್ಲದ್ಹಾಂಗ ಕುಣೀತಿರ್ತಾನ. ಇವತ್ತು ಆತನ ಮ್ಯಾಲು ನಾಕೂ ದಿಕ್ಕಿನಿಂದ ದಾಳಿ ಆಗ್ತಿರತು ದ. - ಒಂದು ಕೈಯಾಗ ಬಾಳೆಲೆ ಬಿಂಡೆ, ಬಗಲಾಗ ಕಸಬರಗಿ (ಹಸೆ ಮಣೆ ಉಡುಗಲು ಬೇಕಲ್ಲ!), ಜೇಬಿನಾಗಿಂದ ಊದಿನಕಡ್ಡಿ ಬಂಡಲು ಹಣಿಕಿ ಹಾಕತಿರ್ತದ. ಒಂದ ಕೈಲೆ ಯಾರ್ದರೆ ಹಟಮಾರಿ ಕೂಸನ್ನು ಹಿಡಿದಿಟ್ಟಿರ್ತಾನ. ಮತ್ತು ಬಾಯಿಂದ ಕ್ರಿಕೆಟ್ ಕಾಮೆಂಟ್ರಿ ನಡೆದಾಗ ರೇಡಿಯೋ ಹ್ಯಾಂಗ ಅವ್ಯಾಹತವಾಗಿ ಒರಲುತ್ತಿರ್ತದೋ ಹಾಂಗ ನಾಲಿಗೆ ಹರಿಬಿಟ್ಟಿರ್ತಾನೆ.

"ಹ್ಞಂ; ಅಚಾರ್ರು ಇದು ಕಸಬರಗಿ.... ಪಾಂಡ್ಯಾ ಮಗನು ಹಸೆ ಮಣಿ ಝಾಡಿಸಿ ಸ್ವಚ್ಛ ಮಾಡು ..ಏನು? ಕಲ್ಯಾಣ ಮಂಟಪದ ಮ್ಯಾನೇಜರ್ ಕರೀತಾರ? ನನಗ್ಯಾಕ ಕರೀತಾರ, ಅವರಿಗೆು ಹೇಳು, ಇತ್ತ ಬಾ ಅಂತ...... ವಸಂತರಾವ್, ಪಟಕ್ಕನ ಪ್ಯಾಂಟ ಕಳೀರಿ ಮತ್ತು ಧೋತ್ರ ಉಟಕೊಳ್ಳಿ-ಈಗಾಗಲೇ ದೇವರ ಪ್ರತಿಷ್ಠಾಪನೆ ಆಗಬೇಕಾಗಿತ್ತು. ಕಕ್ಕೀ, ಬ್ಯಾಂಡಿನವರು ಸಂಜೀನಾಗ- ಈಗೇನದಲ್ಲ ಬರೇ ತಾಸೇ ಬಜಂತ್ರಿ - ಅವರು ಏಳು ಗಂಟೆಕ್ಕ ಬರೋಬರಿ ಬರ್ತಾರ! ಚಿಂತೀಮಾಡಬ್ಯಾಡರಿ- ಹೆಂಗಸರ ಫಳಾರ ಮುಗೀತಿಲ್ಲೋ? .... ಕೀಲಿಕೈ? ಯಾತಕ್ಕ ಬೇಕಾಗೇದ ಕೈ? ತಾಬಾಣ ಬೇಕಾದರ ನಾ ತೆಗೆದುಕೊಡ್ತೀನಿ, ಕೀಲಿಕೈ ಕೊಡೂದಿಲ್ಲ ಹ್ಞೂಂ - ಬರ್ರಿ ತೇರೆದೇಸಾಯರ s- ಮಥೂ ಅಬಚಿ,-ಅಡಿಗೆಯವರು ಬಂದಾರ. ಹಂ- ನೀವು ನಡೀರಿ ಸರಳ- ಏನು? ಟಾಂಗಾದ ಬಾಡಿಗೀನು ? -ನಾ ಕೊಡ್ತೇನಿ ನೀವ್ ಹೋಗರಿ.... ಚೋಳಖಿಣ ಓಣಿಯಿಂದ ಇಲ್ಲಿಗೆ ಒಂದ್ರೂಪಾಯಿನ?- ನಿಮ್ಮಪ್ಪರೆ ಅಷ್ಟು ಪಡೆದಿದ್ದನೇನು? - ಎಂಟಾಣೇದ ಮ್ಯಾಲ ಒಂದು ಬಿಲ್ಲಿ ಕೂಡ ಸಿಗಲಿಕ್ಕಿಲ್ಲ - ಹ್ಞಂ- ಹತ್ತಾಣೆ ಕೊಡತೀನಿ ತಗೋರಿ. ನಡೀರಿ ಇನ್ನ..... ನೀವ ಎಲ್ಲಿ ಹೊಂಟಿರ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

- ಸರಲಾ? ಈಗ ಯಾರೂ ಎಲ್ಲೂ ಹೋಗಾಂಗಿಲ್ಲ ಹ್ಞಂ-''

ಪ್ರತಿಯೊಬ್ಬರೂ ನಾರಾಯಣನ ಸಲಹೆಯನ್ನು ಪಡೀತಿರ್ತಾರೆ. ಆತನಿಗೆ ಕೆಲಸ ಒಪ್ಪಿಸ್ತಾರೆ. ನಡುನಡುವೆ ಆತನ ಕುಚೇಷ್ಟೆ ಕೂಡ ಮಾಡ್ತಾರೆ. ಹೀಗಿದ್ದರೂ ಪ್ರತ್ಯಕ್ಷ 'ಮದುವೆ' ಎಂಬ ಘಟನೆಯ ಬಗ್ಗೆ ಆತನಿಗೆ ಎಳ್ಳಷ್ಟೂ 'ಇಂಟರೆಸ್ಟ' ಇರುವದಿಲ್ಲ. ಯಾಕಂದರೆ ವಧೂವರರ ತಲೀಮ್ಯಾಲ ಮಂಗಲಾಕ್ಷತೆ ಬೀಳ್ತಿರುವಾಗ 'ಕುರ್ಯಾತ್ ಸದಾ ಮಂಗಲ'ಕ್ಕೆ ನಾಲ್ಕು ಮಂಗಲಾಕ್ಷತೆಗಳನ್ನು ಹಾರಿಸಿ ಅಲ್ಲಿಂದ ಒಮ್ಮೆಲೆ ಒಳಗೆ ಪಂಕ್ತಿ ಬಡಸಲಿಕ್ಕೆ ಹೋಗತಾನೆ. ಊದಿನಕಡ್ಡಿ ಪೊಟ್ಟಣ ಇಟ್ಟ ಠಿಕಾಣೆ ಅಂವಗ ಮಾತ್ರ ಗೊತ್ತು! ಹಾಂಗs ರಂಗೋಲಿ ಎಳೆಯುವ ಕೊಳುವೆ ಸರಿಯಾಗಿ ಸಿಗಲಿ ಅಂತ ಆಯಕಟ್ಟಿನ ಸ್ಥಾನದಾಗ ಸುರಕ್ಷಿತ ಇಟ್ಟವನೂ ಅವನೇ. ಆತನಿಗೆ ಮಾತ್ರ ಎಲ್ಲೆಡೆ ಓಡಿಯಾಡಲು ಅನುಮತಿ ಇರ್ತದೆ. ಹೆಣ್ಮಕ್ಕಳ ಬಿಡಾರದಾಗ ಸಹ ಆತ ಬೇಲಾಶಕ್ ಪ್ರವೇಶಿಸಿ ಮಾಮಿಯ ಟ್ರಂಕಿನ ಒಳಖಾನೆಯೊಳಗಿಟ್ಟ ಕರ್ಪೂರದ ಪುಡಿಕೆ ತೆಗೊಂಡೂ ಬರುವ 'ಲಾಯಸನ್ಸ' ನಾರಾಯಣನಿಗಲ್ಲದೆ ಬೇರೆ ಯಾರಿಗೂ ಸಲ್ಲ !

ಅಷ್ಟರಲ್ಲಿ ಯಾವುದಾದರೊಂದು ಮುತ್ತಜ್ಜಿ,

''.....ಎಷ್ಟರೇ ಒಂದೇ ಸವನ ದುಡಿತಿಯೋ ನಾರಾಯಣಾ!- ಒಂದು ಕಪ್ಪ ಚಹಾ ಆದ್ರೂ ಕುಡಿ; ನಿಲ್ಲು ಸ್ವಲ್ಪ - '' ಅನ್ನುತ್ತಾಳೆ.

ನಿಲ್ಲಲಿಕ್ಕೆ • ನಾರಾಯಣನಿಗೆ ಬಿಡುವೆಲ್ಲಿ? ಆದರೆ ಅದೇ ವೇಳ್ಯಾಕ್ಕ ನೂರರ ನೋಟಿನ ಬಿಚ್ಚು ತಂದು ಕೊಟ್ಟದ್ದನ್ನು ಎಣಿಸಿಕೊಳ್ಳಲಿಕ್ಕೆ ಐದು ನಿಮಿಷವಾದರೂ ಬೇಕಲ್ಲ! ಆ ಮುತ್ತಜ್ಜಿ ತನ್ನ ಕೊರಳಸರದಾಗಿಂದ ಕೀಲಿಕೈ ತೆಗೆದು ಕಪಾಟಿನ ಬೀಗ ತೆರೆದು ನಾಲ್ಕು ಉಂಡಿ ಮತ್ತು ಬಸಿ ತುಂಬ ಚೂಡಾ ಅವನ ಮುಂದೆ ಇಡುತ್ತಾಳೆ...... ಆ ಮೇಲೆ ಆ ಮುತ್ತಜ್ಜಿ ಮತ್ತು ಅವಳ ಈ ಉಪೇಕ್ಷಿತ ಮೊಮ್ಮಗ ಇವರಿಬ್ಬರಲ್ಲಿ - ಒಟ್ಟಿನಮ್ಯಾಲ ಗಂಡಿನ ಕಡೆ ಂ ಬೀಗರ ಬಗ್ಗೆ ಮೆಲ್ಲಗಿನ ಧನಿಯಲ್ಲಿ ಸಂವಾದ ಸಾಗಿರ್ತದೆ. ಮುತ್ತಜ್ಜಿಗೆ ನಾರಾಯಣನ ಬಗ್ಗೆ ಮೊದಲಿನಿಂದಲೂ ಬಹಳ ಅಕ್ಕರಾಸ್ತೆ.ತಬ್ಬಲಿ ಹುಡುಗ ಎಂದು ಕಕ್ಕುಲತೆಯಿಂದ ಕಂಡಿರ್ತಾಳೆ. ಮದುವೆಯ ಗದ್ದಲದಾಗ ನಾರಾಯಣ ಹೊರಗಿನ ತುಂಟತನ ಉಸ್ತವಾರಿಯನ್ನು ನೋಡಿಕೊಂಡರ ಒಳಗಿನ ಈ ಕೋಠಿಕೋಣೆಯ ಹೊಣೆ ಮುತ್ತಜ್ಜೀದು. ಕೊರಳಾಗಿನ ಬೆಳ್ಳಿ ತಂತಿಯ ಸರದಾಗ ಕೂಗಣಿ ಕಡ್ಡಿ, ಬೀಗದ ಕೈಗೊಂಚಲು, ಯಮುನೆಯ ಉಂಗುರ ಪೋಣಿಸಿ ಜೋತು ಬಿಟ್ಟಿರುತ್ತಾಳೆ! ಫಳಾರದ ಸಾಮಾನು ಮತ್ತು ಮುಖ್ಯವಾಗಿ ಸಕ್ಕರೆಯ ದಾಸ್ತಾನು ಕಾಯ್ತಿರ್ತಾಳೆ. ಸಕ್ಕರೆ ಅಳೆದು ಕೊಡುವ ಅಧಿಕಾರ ಅವಳದು! ನಿದ್ದೆಗಣ್ಣಿನ ನಾಲ್ಕಾರು ಹಸುಗೂಸುಗಳು ಅವಳ ಮುಂದೆ ಗುಡಾರದಲ್ಲಿ ಪವಡಿಸಿರುತ್ತವೆ. ಈ ಕೂಸುಗಳ ತಾಯಂದಿರು ಮುತ್ತಜ್ಜಿಯ ಮುಂದೆ ಮಕ್ಕಳನ್ನು ಒಪ್ಪಿಸಿ ಮದುವೆಯ ಮಂಟಪದಲ್ಲಿ ಮೆರೆಯಲು ಹೋಗಿರ್ತಾರೆ. ಮದುವೆಯ ಅಕ್ಕೀಕಾಳು ಬಿದ್ದನಂತರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಧೂವರರು ಹಿರಿಯರಿಗೆ ನಮಸ್ಕರಿಸುವ ಕಾರ್ಯಕ್ರಮವಿರ್ತದಲ್ಲಾ- ಆಗ 'ಎಲ್ಲಿದ್ದಾಳೆ ಮುತ್ತಜ್ಜಿ, ಎಲ್ಲಿದ್ದಾಳೆ ಮುತ್ತಜ್ಜಿ ?' ಎಂಬ ಕೂಗು ಏಳುತ್ತದೆ.

''ಔಕ್ಷವಂತರಾಗ್ರಿ, ಭಾಗ್ಯವಂತರಾಗ್ರಿ'' ಎಂದು ಮುತ್ತಜ್ಜಿ ಆಶೀರ್ವಾದ ಉಸುರುವ ಮುಂದ ಅವಳ ಕೊರಳು ಬಿಗಿದು ಗಂಟಲಾಗ 'ಖರ್' ಎಂಬ ಶಬ್ದ! ಮೊಮ್ಮಗಳ ಬೆನ್ನು ಸವರುವಾಗ ದು:ಖ ನುಂಗುತ್ತಾಳೆ. ನಾರಾಯಣ ಮಾತ್ರ ಒಂದು ಹಿಡಿ ಚಿವಡಾ ಎತ್ತಿ ಬಾಯಲ್ಲಿ ಹಾಕಿಕೊಳ್ಳುತ್ತಾನೆ.

''ಗಂಡಿನವರ ಕಡೆಯವರು ಭಲೋ ತಿಳವಳಕೀ ಮಂದಿ ಕಾಣ್ತಾರ ಹ್ಞಂ !-'' ಎಂದು ಪ್ರಸ್ತಾವನೆ ಹಾಕ್ತಾಳೆ. ಆ ಜನ ನಿಜವಾಗಿಯೂ ತಿಳುವಳಿಕೆಯವರೋ ಹೇಗೆ ಎಂಬ ಪ್ರಶ್ನೆ ಮಾಡಿರುತ್ತಾಳೆ.

''ತಿಳುವಳಿಕೆಯುವರು? ನಿನ್ನ ತಲೀ!'' ನಾರಾಯಣನ ಅಭಿಪ್ರಾಯ.

''ಅಲ್ಲs ಸಣ್ಣ ಮಾತು......... ನಾ ಮದುಮಗನ ದೊಡ್ಡಪ್ಪಗ ಅಂದೆ. ''ನಿಮ್ಮ ಕಡೆಯ ಜನನ್ನ ಎಣಿಸಿರಿ ಒಮ್ಮೆ- ಅಂದ್ರ ಎಲೀಮ್ಯಾಲೆ ಪಟಕ್ಕನೂ ಕೂಡಸಲಿಕ್ಕೆ ಬರ್ತದ. ಆದಕ್ಕ ಅವನೇನು ಅಂದ ಗೊತ್ತದೇನು? ನಾ ಏನು ಶಿರಗಣತಿ ಮಾಡೋ ಗುಮಾಸ್ತ ಅಂತ ಇಲ್ಲಿ ಬಂದಿಲ್ಲ- ಇದೇನು ಆಡೋ ಮಾತೂ ? ನಾವೂ ಮಾತಾಡಬಹುದು ಹೀಂಗ..... ಆದ್ರ ಹೆಣ್ಣಿನವರ ಕಡೆಯವರು ಆಗ್ತೀವಲ್ಲ-'' ಹೊಚ್ಚ ಹೊಸ ಧೋತ್ರಕ್ಕ ಕೈ ಒರಸಿಕೊಂಡ ನಾರಾಯಣ ಅಲ್ಲಿಂದ ಏಳ್ತಾನ ಹಾಗೂ ಮದುವೆ ಮಂಟಪದ ಗದ್ದಲದಾಗ ಮಾಯವಾಗ್ತಾನ. ಒಟ್ಟಿನಲ್ಲಿ ಮುತ್ತಜ್ಜಿಗೆ ಗಂಡಿನ ಕಡೆಯವರಿಗೆ ವ್ಯವಹಾರ ಬುದ್ಧಿ ಇರುವದಿಲ್ಲ ಎಂಬುದಷ್ಟೇ ತಿಳಿಯುತ್ತದೆ.

ಊಟದ ಪಂಕ್ತಿಯಲ್ಲಿ ನೀರು ಬಡಿಸೋ ಕೆಲಸ ಹಾಂಗ ನೋಡಿದ್ರ ನಾರಾಯಣನದಲ್ಲ. ಆದರೆ ಸರಿಯಾದ ಸಮಯಕ್ಕೆ ನೀರು ಬಡಿಸದೇ ಇರೋದೇ ಮದುವೆಯಲ್ಲಿ ನೀರು ಬಡಿಸುವವರ ನಡೆದು ಬಂದ ಸಂಪ್ರದಾಯ. ಬರ್ಫ್ ತರಲೆಂದು ಹೋದ ಆಸಾಮಿ ಎಂದಿಗೂ ವೇಳೆಗೆ ಸರಿಯಾಗಿ ಬರುವದಿಲ್ಲ. ಪಂಕ್ತಿ ಏಳಲಿಕ್ಕೆ ಬಂದಾಗ ಬರ್ಫ ಬರುತ್ತದೆ. ಆಗ ಮಾತ್ರ ನಾರಾಯಣನ ಸಿಟ್ಟು ನೆತ್ತಿಗೇರಿ ನೀರು ಬಡಿಸುವ ಕೆಲಸವನ್ನು ತಾನೇ ಮಾಡುತ್ತಾನೆ. ಲೋಟಾ, ಬಟ್ಟಲು, ಕಪ್ಪು, ಜಾಂಬು, ವಾಟಗಾ ಏನೇನು ಕೈಗೆ ಸಿಗ್ತವೋ ಅವನ್ನೆಲ್ಲ ಕೂಡಿಸಿ ಪ್ರತಿಯೊಂದು ಎಲೆಯ ಮುಂದೆ ಒಂದೊಂದಾಗಿ ಕುಕ್ಕುತ್ತ ಪಾತ್ರೆಯಲ್ಲಿ ಸ್ವಲ್ಪ ನೀರು, ಎಲೆಯಲ್ಲಿ ಉಳಿದ ನೀರು, ಈ ರೀತಿ ಹನಿಸುತ್ತ ಹೋಗುತ್ತಾನೆ. ಅಷ್ಟರಲ್ಲಿ ಪಂಕ್ತಿಯಲ್ಲಿಯೇ 'ಪದಾ ಹಾಡಿರಿ, ಪದಾ ಹಾಡಿರಿ' ಎಂಬ ಒತ್ತಾಯ ಕೇಳ ಬರ್ತದೆ. ಜನ ನಾನೊಲ್ಲೆ, ಎಂದು ಮುರುಕು ಮಾಡುತ್ತಾರೆ. ನಾರಾಯಣನೂ ಸಹ, ''ಲೋ, ಶ್ಲೋಕಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅನ್ರಲ್ಲೋ ಯಾರಾದ್ರು? ಏ, ಚಂದೂ ನೀ ಅನ್ನಲಾ ಒಂದು,'' ಎನ್ನುತ್ತ ಯಾರದಾದರೂ ಮೈ ಮೇಲೆ ಹರಿಹಾಯುತ್ತಾನೆ.

ಚಂದೂ ಇಂಗ್ಲೀಷ ಒಂಬತ್ತನೇ ಇಯತ್ತೆಗೆ ಹೋದಾಗಿನಿಂದ ಶ್ಲೋಕಗಳನ್ನು ಹೇಳುವ ಮರುಳುತನ ಆತನಿಗೆ ಸೇರುವದಿಲ್ಲ. ಮೇಲಾಗಿ ಹೆಣ್ಣಿನವರ ಕಡೆಯ ಫ್ರಾಕ್‌ದಲ್ಲಿಯ ಒಬ್ಬಳು ಹುಡುಗಿ ಎರಡು ಮೂರು ಸಲ ಆತನ ಜೊತೆಗೆ ಮಾತಾಡಿರುತ್ತಾಳೆ. ಅವಳು ಎಂಟನೆಯ ತರಗತಿಯಲ್ಲಿ ಇರುತ್ತಾಳೆ. 'ಜಾಗ್ರಫಿಯ ಸ್ಟಡಿ' ಹೇಗೆ ಮಾಡೋದು ಎಂಬುದರ ಬಗ್ಗೆ ಚಂದೂ ಅವಳಿಗೆ ಸಲಹೆ ಸೂಚನೆ ಕೊಟ್ಟಿರುತ್ತಾನೆ. ಚಂದೂ ತುಸು ಗೊಂದಲಕ್ಕೀಡಾಗಿರುತ್ತಾನೆ. ನಾರಾಯಣನ ಅಪ್ಪಣೆಗೆ ಬೆದರಿ ಆ 'ಫ್ರಾಕ್'ದ ಹುಡಿಗೆಯ ಕಡೆಗೆ ನೋಡುತ್ತಾನೆ. ಅವಳೂ ಅವನತ್ತ ನೋಡಿ ನಗುತ್ತಾಳೆ. ಬಹಳಷ್ಟು ವೇಳೆಯಾದರೂ ಯಾರೂ ಶ್ಲೋಕಗಳನ್ನು ಅನ್ನುವದಿಲ್ಲವೆಂಬುದನ್ನು ನೋಡಿ ನಾರಾಯಣ ಗಡಸು ಧ್ವನಿಯಲ್ಲಿ' ಶುಕನಂತೆ ವೈರಾಗ್ಯವುಳ್ಳವಗೆ' ಈ ಶ್ಲೋಕವನ್ನು ಹೇಳುತ್ತ, ಒಂದು ಕೈಯಿಂದ ನೀರು ಹನಿಸುವ ಗಿಂಡಿ ಹಿಡಿದ್ದಾನೆ, ಎರಡನೆ ಕೈಯಲ್ಲಿ ಒತ್ತಾಯ ಮಾಡಿ ಬಡಿಸಲೆಂದು ಜಿಲೇಬಿ ತುಂಬಿದ ತಟ್ಟೆ ತೂಗಿಸುತ್ತಿದ್ದಾನೆ. ಹಾಗೂ ಬಾಯಿಂದ ಶ್ಲೋಕಗಳ ಸ್ವರಮಾಲೆ ಶುರುವಾಗುತ್ತದೆ.

ನಾರಾಯಣ ಮುದ್ದರಿಗಳನ್ನು ನೋಡಿ ನೋಡಿ ಜಿಲೇಬಿಯನ್ನು ಒತ್ತಾಯಪೂರ್ವಕ ಬಡಿಸುತ್ತಾನೆ. ಒಂದಾದ ಮೇಲೊಂದರಂತೆ ಪಂಕ್ತಿಗಳು ಏಳುತ್ತವೆ. ಯುಧಿಷ್ಠಿರನ ಅರಮನೆಯಲ್ಲಿ ಸ್ವತಃ ಭಗವಂತ ಎಂಜಲೆಲೆ ಎತ್ತಿದ್ದನಂತೆ; ನಾರಾಯಣ ಇಲ್ಲಿ ಎಂಜಲೆಲೆ ಎತ್ತುತ್ತಾನೆ. ಆಳು ಹೋಳು ಆತನ ಜೊತೆಗೂಡಿ ಈ ಕೆಲಸಕ್ಕೆ ಅಣಿಯಾಗುತ್ತಾರೆ. ಆಗ ನಾರಾಯಣ ಅಲ್ಲಿಂದ ಹೊರಜಾರುತ್ತಾನೆ.

ಈಗ ಆತ ಮೆರವಣಿಗೆಯ ವ್ಯವಸ್ಥೆಯಲ್ಲಿ ವ್ಯಸ್ತನಾಗಿರುತ್ತಾನೆ. ಹೂವಿನಿಂದ ಅಲಂಕರಿಸಿದ ಮೋಟಾರನ್ನು ಸ್ವತಃ ಹೋಗಿ ತರುತ್ತಾನೆ. ಬ್ಯಾಂಡಿನವರಿಗೆ ಒಳ್ಳೊಳ್ಳೆ ಹಾಡು ನುಡಿಸುವಂತೆ ದಬಾಯಿಸುತ್ತಾನೆ. ನಡುರಾತ್ರಿಯ ಸುಮಾರಿಗೆ ಮೆರವಣಿಗೆ ಹೊರಡುತ್ತದೆ. ಮದುಮಗಳು (ನಾರಾಯಣನ ಸೋದರ ಸೊಸೆ) ನಾರಾಯಣನಿಗೆ ಬಗ್ಗಿ ನಮಸ್ಕರಿಸುತ್ತಾಳೆ. ಕಳೆದ ಎಷ್ಟೋ ದಿನಗಳಿಂದ ಅತ್ತ ಇತ್ತ ಹುರುಪಿನಿಂದ ಓಡಿಯಾಡಿದ ಹನುಮಂತನಂತಹ ಭೀಮರೂಪಿಯಾದ ಮಹಾರುದ್ರನಂತಿದ್ದ ನಾರಾಯಣನ ಹೃದಯವು ಆಗ ಮಾತ್ರ ತುಂಬಿ ಬರುತ್ತದೆ! ಮದು ಮಗಳಾಗಿ ವಿಜೃಂಭಿಸುತ್ತಿರುವ ಈ ಸುಮಿ! - ಹಸುಗೂಸು ಆಗಿದ್ದಾಗ ತನ್ನ ಮೈ ಮೇಲೆ ಆಡಿ ಬೆಳೆದವಳು! ತಾನೇ ಸ್ವತಃ ಬಾಲವಾಡಿಗೆ ಅವಳನ್ನು ಮುಟ್ಟಿಸಿ ತರುತ್ತಿದ್ದ. ಇಂದು ಅವಳು ಗಂಡನ ಮನೆಗೆ ಹೊರಬಿದ್ದಾಳೆ. ಮೇಲೆ ಮೇಲೆ ಧೈರ್ಯದ ಸೋಗು ತೋರಿಸುತ್ತ ಹ್ಯಾಂಗs ರೆ ನಾರಾಯಣ ಹೇಳುತ್ತಾನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

"ಏ ಸುಮೀ, ಸುಖದಿಂದ ಇರು!....... ವಸಂತರಾವ್, ಇಂಥ ಹುಡಿಗಿ ನಿಮಗ ಸಹಜ ಸಿಗತಿರಲಿಲ್ಲ. ಹಾಂ! ಆಯ್ ಎಮ್ ದ ಸೋಯಿಂಗ ಹರ್ ಚಾಯಿಲ್ಡಹುಡ್...."

ಭಾವನೆಗಳ ಆವೇಶ ತಡೆಯಲೆಂದು ಆಂಗ್ಲಭಾಷೆಯ ಆಸರೆ ಪಡೀತಾನ ನಾರಾಯಣ! ಸದಾಕಾಲ ಮೂಗಿನ ತುದಿಗೆ ಇಳಿಬಿದ್ದಿರುತ್ತಿದ್ದ ಕನ್ನಡಕವನ್ನು ಮೇಲೆ ಒತ್ತುವ ನೆಪ ಮಾಡಿ ನಾರಾಯಣ ತನ್ನ ಕಣ್ಣಂಚಿನ ಕಂಬನಿ ಒರೆಸಿಕೊಳ್ಳುತ್ತಾನೆ. ಭಾಪೂಸಾಹೇಬರ ಕರುಳೂ ಚುರುಗುಟ್ಟುತ್ತದೆ. ಮೆರವಣಿಗೆ ಸಾಗುತ್ತದೆ.

ನಾರಾಯಣ ಮಂಟಪದಲ್ಲಿ ಒಂದು ಕೋಚಿನ ಮೇಲೆ ಮೈ ಮುದುರಿಕೊಂಡು ಮಲಗಿ ಗಾಢ ನಿದ್ರೆಯಲ್ಲಿ ಮುಳುಗಿರುತ್ತಾನೆ. ಮೆರವಣಿಗೆಗೆ ಹೋದ ಜನರು ರಾತ್ರಿ ಒಂದೆರಡು ಗಂಟೆಯ ಸುಮಾರಿಗೆ ಮರಳುತ್ತಾರೆ. ಕೋಚಿನಲ್ಲಿ ಮುದ್ದಿಯಾಗಿ ಮಲಗಿದ ನಾರಾಯಣನ ಕಡೆಗೆ ಯಾರ ಗಮನವೂ ಹೋಗುವದಿಲ್ಲ. ನಾರಾಯಣನ ಹೆಂಡತಿ ಮಾತ್ರ ಒಳಗೆ ಹೋಗಿ ಎಂಟ್ಟುತ್ತು ಕಡೆಗೆ ತೇಪೆ ಹಾಕಿದ ಹೊದಿಕೆ ತಂದು ಮೆಲ್ಲಗೆ ಆತನ ಮೈ ಮೇಲೆ ಹರವುತ್ತಾಳೆ; ಹಾಗು ಮತ್ತೆ ಒಳಗಡೆ ಹೋಗಿ ಹೆಣ್ಮಕ್ಕಳ ಜೊತೆಗೆ ಸೇರಿಕೊಳ್ಳುತ್ತಾಳೆ. ಮಂಟಪದಲ್ಲಿ ಎದುರಿಗೆ ಒಂದು ಗುಡಾರದ ಮೇಲೆ ನಾರಾಯಣನ ಅಳುಬುರುಕ ಹುಡುಗ ಮಲಗಿರುತ್ತಾನೆ. ಅವನ ಚಿಕ್ಕ ಮುಟ್ಟಿಗೆಯಲ್ಲಿ ಬೆಳಗ್ಗೆ ಕೊಟ್ಟ ಬೂಂದೀ ಉಂಡಿ ಹಾಗೇ ಇರುತ್ತದೆ; ಉಂಡಿ ಕಪ್ಪುಗಟ್ಟಿರುತ್ತದೆ!

ಮದುವೆ ಮಂಟಪದಲ್ಲಿ ಈಗ ಮಾತ್ರ ಒಂದು ಕೋಚಿನ ಮೇಲೆ ನಾರಾಯಣ ಮತ್ತು ಅತ್ತ ದೂರದಲ್ಲಿ ಎರಡನೆಯ ತುದಿಗೆ ಮಂಟಪದ ಮಾಲೀಕನ ಆಳು ಗೊರಕೆ ಹೊಡೆಯುತ್ತಿರುತ್ತಾರೆ. ಉಳಿದ ಕಡೆಗೆ ಮಾತ್ರ ಎಲ್ಲೆಡೆಗೂ ನೀರವತೆ ನೆಲೆಸಿರುತ್ತದೆ.

'ವ್ಯಕ್ತಿ ಆಣಿ ವಲ್ಲಿ' ಗ್ರಂಥದಿಂದ

-ಅನಂತ ಕಲ್ಲೋಳ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭ್ರಮಣ ಮಂಡಳ

ಬಟಾಟಾ ಚಾಳದಲ್ಲಿಯ 'ಭ್ರಮಣ-ಮಂಡಳ'ದ ಈ ನಾಲ್ಕು ಜನರು ಪುಣೆ ಪ್ರಯಾಣಕ್ಕೆ ಹೊರಟ ದಿನ ಸುವರ್ಣಾಕ್ಷರದಲ್ಲಿ ಬರೆಯಲು(ಸುವರ್ಣ ಎಷ್ಟೇ ತುಟ್ಟಿಯಾಗುತ್ತಿದರೂ, ಯಾವದೇ ಅಕ್ಷರದಲ್ಲಿ ಬರೆಯಲೇ ಬೇಕು ಅನ್ನುವಷ್ಟು) ಮಹತ್ವದ್ದು. ಈ ದಿನದ ನಿರೀಕ್ಷೆಯಲ್ಲಿ ಅವರು ಕಳೆದ ಎರಡು ತಿಂಗಳಿಂದ ಪ್ರಯಾಸಪಡುತ್ತಿದ್ದರು. ತ್ರಿಲೋಕೇಕರ ಶೇಡಜೆಯವರ ಉತ್ಸಾಹವಂತೂ ಪ್ಯಾಂಟಿನ ಬೆಲ್ಟದಲ್ಲಿ ಹಿಡಿಸಲಾರದೆ ಹೊರಬರುವ ಅವರ ವಂಶಪರಂಪರಾಗತ ಹೊಟ್ಟೆಯಂತೆ ಹೊರಸೂಸುತ್ತಿತ್ತು. ಈ ಉತ್ಸಾಹದಲ್ಲಿ ''ಬಾಬಲಿ ಬಾಯ'' ಹೊರತು ಎಲ್ಲರ ಮೇಲೆ ಅವರು ''ಈಡಿಯಟ್'' ಅಂತ ಒದರಿದ್ದರು. ಕಾಶೀನಾಥ ನಾಡಕರ್ಣಿ ಮತ್ತು ತ್ರಿಲೋಕೇಕರ ಇವರಿಬ್ಬರೂ ಹ್ಯಾಟ್ ತೊಟ್ಟಿದ್ದರು. ತ್ರಿಲೋಕೇಕರವರದು ಫೆಲ್ಟಹ್ಯಾಟ್ ಇತ್ತು. ವರ್ಷಕ್ಕೊಮ್ಮೆ 'ಸ್ಟಾಫ್ ಕ್ರಿಕೆಟ್' ಮ್ಯಾಚಕ್ಕೆ ಅವರು ಈ ಹ್ಯಾಟನ್ನು ಧರಿಸುತ್ತಿದ್ದರು. ಕಾಶೀನಾಥ ನಾಡಕರ್ಣಿಯವರದು ಮಾತ್ರ ಹೊಸ ಹ್ಯಾಟು. ಅವರುಹ್ಯಾಟಿನ ಪಟ್ಟಿಯನ್ನು ಗದ್ದದ ಕೆಳಗೆ ಸುತ್ತಿದ್ದರು. ಪ್ಯಾಂಟಿನ ಬೆಲ್ಟಿಗೆ, ಯಾರು ಹೇಳಿದ್ದರೋ ಗೊತ್ತಿಲ್ಲಾ, ಅವರು ಒಂದು ಚೂರಿಯನ್ನು ಕಟ್ಟಿದ್ದರು. ಬಾಬುಕಾಕಾ ಖರೇಯವರು ಮಾತ್ರ ನೆಹರು ಅಂಗಿ, ಜಾಕೀಟು ತೊಟ್ಟು ಹೆಗಲಮೇಲೆ ಎರಡೂ ಬದಿಗೆ ಕೈಚೀಲಗಳನ್ನು ನೇತುಬಿಟ್ಟು ನಿಂತಿದ್ದರು. ಅವರು ತಲೆಯ ಮೇಲೆ ದುಂಡಗಾದ ಕಪ್ಪು ಟೊಪ್ಪಿಗೆ ಹಾಕಿದ್ದರು. ಟ್ರಾಮ್ ಕಂಡಕ್ಟರ್‌ನ ಹಣೆಯ ಮೇಲೆ ದೀಪದ ನೆರಳು ಹೇಗೆ ಬಿದ್ದಿರುತ್ತೋ ಹಾಗೆ ಇವರು ಟೊಪ್ಪಿಗೆಯಲ್ಲಿ ಪೋಷ್ಟ ಕಾರ್ಡವನ್ನು ಸಿಕ್ಕಿಸಿಕೊಂಡು ಮೋಜು ಮಾಡಿದ್ದರು. ಮತ್ತು ಕೋಚರೇಕರ ಮಾಸ್ತರರು.... ಅರ್ಧಕ್ಕಿಂತಲೂ ಗಿಡ್ಡ ಖಾಕಿ ಚಡ್ಡಿ ಅದಕ್ಕೆ ಎಷ್ಟೆಂದು ಜೇಬುಗಳ ಮಾಡಲು ಸಾಧ್ಯವೋ ಅಷ್ಟು ಜೇಬುಗಳು. ಪ್ರತಿಯೊಂದು ಜೇಬಿನಲ್ಲಿ ಏನೇನೋ ತುರುಕಿದ್ದರು. ಟೊಂಕದ ಬೆಲ್ಟಿನಲ್ಲಿ ಶೀಟಿ, ಹಗ್ಗ, ಚೂರಿ, ಬಲಗಡೆ ಜೇಬಿನಲ್ಲಿ ಚಮಚೆಗಳು, ಎಡಗಡೆಯ ಜೇಬದಲ್ಲಿ ಟಾರ್ಚು. ಖಾದಿ ಅಂಗಿಯ ಬಲಕಿನ ಜೇಬಿನಲ್ಲಿ ಡಾಯರಿ, ಏಳೆಂಟು ಪೆನ್ಸಿಲ್ಲುಗಳು ಮತ್ತು ನಿಂಬಿಹಣ್ಣುಗಳು. ಹಿಂಬದಿಯ ಜೇಬಿನಲ್ಲಿ ಇಸ್ಪೀಟುಗಳ ಸೆಟ್ಟು, ಕೊರಳಲ್ಲಿ ನೀರಿನ ಶೀಸೆ; ಎಡ ಹೆಗಲಮೇಲೆ ಕ್ಯಾಮೆರಾ, ಬೆನ್ನ ಮೇಲಿನ 'ಹ್ಯಾವರ ಸ್ಯಾಕ್' ನಲ್ಲಿ ಜಮಖಾನಿ, ಎಡಗೈಯಲ್ಲಿ ಹಾಸಿಗೆ ಸುರುಳಿ, ಕಾಲೊಳಗೆ ಬ್ರೌನ್ ಬಣ್ಣದ 'ಕ್ಯಾನ್‌ವ್ಹಾಸ' ಬೂಟಗಳು ಹಿಂಬಡದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೇಲೆ ಟ್ರ್ಯಾಫಿಕ್ ಪೋಲೀಸರು ಕಟ್ಟುತ್ತಾರೆ ಹಾಗೆ ಪಟ್ಟಿಗಳು, ಕೊರಳಲ್ಲಿ ಮಫ್ಲರ್, ಮತ್ತು ಕೈಯೊಳಗಿನ ಕೋಲಿಗೆ ಊಟದ ಡಬ್ಬಿ ಕಟ್ಟಿ, ''ಅಯ್ಯೋ, ಕೊಡೆ ತಗೊಳ್ಳೋದು ಮರೆತೇ ಹೋಯಿತಲ್ಲಾ'' ಅಂತ ಚಟಪಟಿಕೆ ಜೇರೆ. ಅವರ ಅಣ್ಣನ 'ಮೇಸಾಪೋಟೆಮಿಯಾದ' ಯುದ್ಧದಲ್ಲಿಯ ಹ್ಯಾಟು, ಅವರ ತಲೆ ಅಷ್ಟೇ ಅಲ್ಲಾ ಮುಖವನ್ನೂ ಮುಚ್ಚಿ ಬಿಟ್ಟಿತ್ತು. ಇವು ಹೊತ್ತುಕೊಳ್ಳುವ ವಸ್ತುಗಳಾದವು. ಇವಲ್ಲದೆ ಟ್ರಂಕುಗಳು, ಹಾಸಿಗೆಗಳು, ಕಾಶೀನಾಥ ನಾಡಕರ್ಣಿಯವರ ದೊಡ್ಡ ಪೆಟ್ಟಿಗೆ ಇಂಥ ಜಡ ಸಾಮಾನುಗಳೂ ಇದ್ದವು. ಅವು ಜೇರೆಯೇ!

ಕಾಶೀನಾಥ ನಾಡಕರ್ಣಿಯವರ ಮಗ ವಿಕ್ಟೋರಿಯಾ (ಕುದುರೆ ಗಾಡಿ, ಟಾಂಗಾ) ತೆಕ್ಕೊಂಡು ಬಂದನು. ಅದರಲ್ಲಿ ಮೊದಲು ಸಾಮಾನು ಹೇಗೆ ಇಡಬೇಕು ಎಂಬ ಕುರಿತು ಸಾರ್ವಜನಿಕ ಚರ್ಚೆ ಪ್ರಾರಂಭವಾಯಿತು. ''ಮೊದಲು ಟ್ರಂಕು, ಪೆಟ್ಟಿಗೆಗಳನ್ನು ಏರಿಸಿರಿ''- ಒಂದು ಸೂಚನೆ. ''ಹೇ, ಹೇ, ಮೊದಲು ನೀವು ಕೂತುಕೊಳ್ಳಿರಿ,'' ಎರಡನೆಯ ಸೂಚನೆ.

''ಹೀಗೇ ಮಾಡ್ರಿ, ಕೋಚರೇಕರ ಮಾಸ್ತರರೇ, ಮೊದಲು ನೀವು ಏರ್ರಿ....''

''ಬೇಡಾ, ತ್ರಿಲೋಕೆಕರ ಶೇಡಜೀಯವರೇ, ನಿಮ್ಮ ತಿಂಡಿ ಡಬ್ಬಿ ತಗೊಂಡು ನೀವೇ ಮೊದಲು ಹತ್ತರಿ-''

''ಅದಕ್ಕಿಂತಲೂ ಬಾಬೂಕಾಕಾಗೇ ಕೂಡ್ರಸರಿ.....'' ''ಬಾಬೂಕಾಕಾ ನಿಮ್ಮ ಕೊರಳೊಳಗಿನ ಚೀಲ ತೆಗೆದಿಡ್ರಿ....'' ''ನಾಡಕರ್ಣಿ, ನಿಮ್ಮ ಹ್ಯಾಟಿನ ಪಟ್ಟಿ ಜರಾ ಬಿಗಿರಿ...'' ''ಕೋಚರೇಕರ ಮಾಸ್ತರರೇ, ನಿಮ್ಮ ನೀರಿನ ಬಾಟ್ಲಿ ಸೋರಲಿಕ್ಕೆ ಹತ್ತೇದ ನೋಡ್ರಿ.....''

ಈ ಪ್ರಕಾರದ ಪ್ರಾಮಾಣಿಕ ಸಲಹೆಗಳು ನಡೆದಿರುವಾಗಲೇ ಬಟಾಟಾ ಚಾಳಿನ ಮೇಲಿನ ಗ್ಯಾಲರಿಯಿಂದ, ''ಅಪ್ಪಯ್ಯಾ ಇವರು ಕೋಚರೇಕರ ಮಾಸ್ತರರೇನು? - ನಾ ತಿಳಕೊಂಡೆ ಇಂವಾ ಎದುರಿಗಿನ ಬಿಲ್ಡಿಂಗಿನ 'ವಾಚ್ ಮನ್' ಇರಬೇಕೇನೋ ಅಂತ'' '' ಅದ ನೋಡ್ರಿ ತ್ರಿಲೋಕೇಕರರ ಹೆಂಡತಿ ಹೇಗೆ ಎಲ್ಲರ ಮುಂದೆ ಮುಂದೆ ಓಡಾಡುತ್ತಿದ್ದಾಳೆ'' - ಇಂಥ ಅಭಿಪ್ರಾಯಗಳನ್ನು ಬಟಾಟಾ ಚಾಳಿನ ಮಹಿಳೆಯರು ಕರ್ತವ್ಯಭಾವನೆಯಿಂದ ವ್ಯಕ್ತಮಾಡುತ್ತಿದ್ದರು. ಇದೊಂದು ತಮಾಷೆ ನಾಟಕ ನಡೆದಿದೆ ಎಂದು ತಿಳಿದು ಮಕ್ಕಳೆಲ್ಲಾ ಸಂತೋಷದಿಂದ ನಗುತ್ತಿದ್ದವು. ಕೊನೆಗೆ, -ಮೊದಲು ಸಾಮಾನು, ಆಮೇಲೆ ಆ ನಾಲ್ಕೂ ಜನರು ಮೇಲೆ ಹತ್ತಿದರು. ಕೋಚರೇಕರ ಮಾಸ್ತರರಿಗೆ ವ್ಹಿಕ್ಟೋರಿಯಾದವನು ತನ್ನ ಪತ್ರ ಕೂಡ್ರಿಸಿಕೊಂಡನು. ಮೇಲೆ ಏರುವಾಗ ಅವರ ಅರ್ಧ ಚಡ್ಡಿ ಸೀಟಿನ ಬುಡಕ್ಕೆ ಸಿಕ್ಕು ಒಂದೆರಡು ನಿಮಿಷ ಹೊರಡುವ ವೇಳೆಗೆ ತಡೆ ಉಂಟು ಮಾಡಿತು. ಆದರೂ ಸಹ ಈ ಎಲ್ಲ ಗಡಿಬಿಡಿಯಲ್ಲಿ ಒಂದು ಥರದ ಉತ್ಸಾಹ ಇತ್ತು. ವ್ಹಿಕ್ಟೋರಿಯಾದವನು ಹೊಡೆದ ಚಬಕ ಮೊದಲು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತ್ರಿಲೋಕೇಕರರಿಗೆ ''ಶೇಕ್ - ಹ್ಯಾಂಡ್'' ಮಾಡಲು ಬಂದ ಅವರ 'ಬ್ರದರ -ಇನ್-ಲಾ'ರ ಹಣೆಗೆ ತಟ್ಟಿ ಆ ಮೇಲೆ ಕುದುರೆಯ ಬೆನ್ನು ಬಾರಿಸಿತು. ಜೋರಾಗಿ ವ್ಹಿಕ್ಟೋರಿಯಾ ಅಲುಗಾಡಿಸಿತು. ಕೂಡಲೆ ಎಲ್ಲರೂ ಸಾಮಾನುಗಳ ಜೊತೆ ಸರಿ ಹೊಂದಿಕೊಂಡು ಬಿಟ್ಟರು.

ಕೋಚರೇಕರ ಮಾಸ್ತರರು ತಮ್ಮ ಡಾಯರಿ ತೆಗೆದು ''ಹೊರಡುವ ವೇಳೆ ೩. ಗಂಟೆ ೨ ನಿಮಿಷ'' ಅಂತ ನಮೂದಿಸಿದರು. ವಿಕ್ಟೋರಿಯಾ ನಾಲ್ಕೂ ಕಡೆಯಿಂದ ಅಲುಗಾಡುತ್ತಿದ್ದುದರಿಂದ ಇಷ್ಟು ಬರೆಯಲು ಅವರಿಗೆ ಒಂದು ಪೂರಾ ಪೆನ್ಸಿಲು ಸವೆಯಿಸಬೇಕಾಯಿತು. ಸರಿಯಾಗಿ ಅದೇ ವೇಳೆಗೆ ದಾರಿಯಲ್ಲಿಯ ತೆಗ್ಗು ಜೋರಾಗಿ ಅಡ್ಡ ಬಂದ ಕಾರಣ ಕೈಯಲ್ಲಿಯ ಪೆನ್ಸಿಲು ಹಾರಿ ಬಿತ್ತು. ಈಗ ಕುದುರೆ ಕೂಡ ಒಳ್ಳೆ ಜೋರಿನಲ್ಲಿ ಬಂದಿತ್ತು. ಆದರಿಂದ ವ್ಹಿಕ್ಟೋರಿಯಾ ನಿಲ್ಲಿಸಿ ಪೆನ್ಸಿಲ್ ಹುಡುಕುವದೂ ಸಾಧ್ಯವಿರಲಿಲ್ಲ.

ವಿಕ್ಟೋರಿಯಾದ ವೇಗದ ಜೊತೆಗೆ ಕೋಚರೇಕರ ಮಾಸ್ತರರ ಧ್ಯೇಯಲ್ಲಿಯ ಪ್ರವಾಸದ ಸ್ಪಿರಿಟ್ಟೂ ಏರತೊಡಗಿತ್ತು. ''ಜ್ಞಾನ ಸಂಪಾದನೆಯೇ ಪ್ರವಾಸದ ಮುಖ್ಯಧ್ಯೇಯ'' ಎಂಬ ವಿಚಾರವನ್ನು ನಾಲ್ಕನೇ ತರಗತಿಗೆ ಅವರು ಎಷ್ಟೋ ಸಲ ಕಲಿಸಿದ್ದರು. ಅದಕ್ಕೆ ಅವರು ವ್ಹಿಕ್ಟೋರಿಯಾದವನ ಹತ್ತಿರ ತಮ್ಮ ವಿಚಾರಣೆಗೆ ಪ್ರಾರಂಭಿಸಿದರು.

''ಎಷ್ಟು ದಿನಗಳಿಂದ ಈ ವ್ಹಿಕ್ಟೋರಿಯಾ ನೀವು ನಡೆಸುತ್ತಿದ್ದೀರಿ?''

''ಎಲಾ ಇವನ !'' ವ್ಹಿಕ್ಟೋರಿಯಾದವನು ಗದ್ದರಿಸಿದನು. ಅವನ ಈ ಆಕಸ್ಮಿಕ ಶಬ್ದಗಳಿಂದ ಕೋಚರೇಕರ ಮಾಸ್ತರರು ಬೆಚ್ಚಿದರು. ಆದರೆ ಆ ಶಬ್ದಗಳು ಎದುರಿಗೆ ಬರುತ್ತಿರುವ ಹುಂಬ ಕೈ ಬಂಡೆಯವನಿಗೆ ಉದ್ದೇಶಿಸಿ ಇದ್ದವು, ತನಗೆ ಅಲ್ಲ ಎಂದು ತಿಳಿದ ಮೇಲೆ ಅವರು ಬಿಡುಗಡೆಯ ನಿಶ್ವಾಸ ಬಿಟ್ಟರು.'' ಹಾದಿಯಲ್ಲಿ ಹೇಗೆ ನಡೆಯಬೇಕು ಎಂಬೋದು ನಮ್ಮ ಈ ಜನರಿಗೆ ಇನ್ನೂ ಗೊತ್ತಿಲ್ಲ ನೋಡ್ರಿ,'' ಅಂತ ಕೋಚರೇಕರ ಮಾಸ್ತರರು ವ್ಹಿಕ್ಟೋರಿಯಾದವನ ಮನಸ್ಸು ಸೆಳೆಯಲು ಪ್ರಯತ್ನಿಸಿದರು. ಅಷ್ಟು ಎತ್ತರದ ಸ್ಥಳದಲ್ಲಿ ಕೂಡ್ರುವ ಪ್ರಸಂಗ ಅವರ ಜೀವನದಲ್ಲಿ ಅದೇ ಮೊದಲ ಬಾರಿ. ಹಿಂದಿನ ಮಗ್ಗಲಲ್ಲಿ ಮಾತ್ರ ಅವರ ಸಹ ಪ್ರವಾಸಿಗಳು ಸರಕುಗಳ ಗುಂಪಿನಲ್ಲಿ ಸಾಮಾನಕ್ಕೆ ಆನಿಸಿಯಾದರೂ ನಿಲ್ಲಲು ಸಿಕ್ಕರೆ ಸಾಕು ಎಂದು ಕಷ್ಟ ಪಡುತ್ತಿದ್ದರು.

ಕೋಚರೇಕರ ಮಾಸ್ತರರು ಮತ್ತೊಮ್ಮೆ ಜ್ಞಾನ ಸಂಪಾದನೆಗೆ ತೊಡಗಿದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

"ಸದ್ಯ ಈ ಕುದುರೆಗಳಿಗೆ ಎಷ್ಟು ಬೆಲೆ?"

"ಎಲಾ ಇವನಽಽ - - ಎ--- ರುಂಬಾಲದವನೇ----" "ವ್ಹಿಕ್ಟೋರಿಯಾ ನಡೆಸಲು ಮನಸ್ಸು ಏಕಾಗ್ರವಾಗಲೇ ಬೇಕು...." ಎಂದು ಕೊನೆಗೆ ಕೋಚರೇಕರ ಮಾಸ್ತರರು ತಮ್ಮ ಮನಸ್ಸಿನಲ್ಲಿಯೇ ನಮೂದಿಸಿದರು.

ಒಂದರ್ಧ ಗಂಟೆಯಲ್ಲಿ ಆ ನಾಲ್ಕೂ ಪ್ರವಾಸಿಗರು ತಮ್ಮ ಸಾಮಾನುಗಳ ಸಮೇತ ಬೋರಿ ಬಂದರ ಸ್ಟೇಶನ್‌ದ ಇದುರಿಗೆ ಬಂದು ತಲುಪಿದರು. ಅಷ್ಟರಲ್ಲಿ ಕೆಂಪು ಬಣ್ಣದ ಅಂಗಿ ತೊಟ್ಟ ಹಮಾಲರು ದಸರಾದ ಬನ್ನಿ ಮುಡಿಯಲಿಕ್ಕೆ ಬಂದ ಹಾಗೆ ಬೇಗ ಬೇಗ ಸಾಮಾನುಗಳನ್ನು ಎಳೆಯಲು ಪ್ರಾರಂಭಿಸಿದರು. ಒಬ್ಬನಂತೂ ಪೆಟ್ಟಿಗೆಯ ಜೊತೆಗೇ ಬಾಬೂಕಾಕಾ ಅವರನ್ನು ಕೆಳಗೆ ಇಳಿಸಿ ಬಿಟ್ಟ.

"ಸಾಲಾ ಈಡಿಯಟ್" ಎಂದು ತ್ರಿಲೋಕೇಕರ ಶೇಡಜೆಯವರು ನಾಲ್ವತ್ತು ಸಲಾ ಆದರೂ ಹಮಾಲರ ಮೇಲೆ ಒದರಿದ್ದರು. ಮಧ್ಯದ ತೂಗಾಟದಲ್ಲಿ "ಬಾಬಲಿ ಬಾಯ'ವರು ಮಾಡಿ ಕೊಟ್ಟ "ಆಲೂಗಡ್ಡೆ ಸಾರು" ಅವರ ಪ್ಯಾಂಟು ಮತ್ತು ಬಾಬು ಕಾಕಾವರ ಧೋತರದ ಮೇಲೆ ಚೆಲ್ಲಿತ್ತು. ಅಷ್ಟರಲ್ಲಿ ಒಬ್ಬ ಹಮಾಲನು ಊಟದ ಡಬ್ಬಿಯನ್ನು 'ಸರಕ್ಕಂತ' ಎಳೆದ. ಆಗ ಉಳಿದಿದ್ದ ಸಾರು, ಕುದಿಸಿದ ಮೊಟ್ಟೆಗಳು, ಚಿತ್ರಾನ್ನ ಮತ್ತು ಟೋಮ್ಯಾಟೋ ಇವೆಲ್ಲವನ್ನು ತಿಂದು ಧರಣೀ ಮಾತೆ ತೃಪ್ತಳಾದಳು.

"ಸಾಲಾ ಈಡಿಯಟ್" ಎಂದು ತ್ರಿಲೋಕೇಕರರು ಮತ್ತೆ ರುಂಡ ಕಡಿದ ಕೋಳೀ ಹಾಗೆ ಒದ್ದಾಡತೊಡಗಿದರು. ಅಷ್ಟರಲ್ಲಿ ವ್ಹಿಕ್ಟೋರಿಯಾದವನ ಹತ್ತರ ಹತ್ತು ರೂಪಾಯಿಯ ಚಿಲ್ಲರೆ ಇಲ್ಲದ ಶುಭ ವರ್ತಮಾನ, ಖಜಾನದಾರರಾಗಿದ್ದ ಬಾಬೂ ಕಾಕಾ ಖರೆಯವರಿಗೆ ತಿಳಿಯಿತು. "ಆಗಲೇ ನಿನಗೆ ಹೇಳಿದ್ದೆ, ಚೇಂಜ ಇಟ್ಟುಕೊಳ್ಳು ಅಂತ, ಸಾಲಾ ಈಡಿಯಟ್! ಟ್ರ್ಯಾವಲ್‌ದಲ್ಲಿ ಯಾವಾಗಲೂ ಚೇಂಜು ಬೇಕೇ ಬೇಕು. ತಡಿ, ನನ್ನ ಹತ್ತರ.. ಹಂ, ನೋಡು ಒನ್ ಟ್ವೆಲ್ವ ಇದೆ. ನಾಡಕರ್ಣಿ, ನಿನ್ನ ಹತ್ತಿರ ಎಷ್ಟಿದೆ ನೋಡು?"

ಕಾಶೀನಾಥ ನಾಡಕರ್ಣಿಯವರು ಪ್ಯಾಂಟಿನ ಬೆಲ್ಟದ ಜೊತೆ ಗುದ್ದ್ಯಾಡಿ ಒಳಗೆ ಸಿಕ್ಕಿಸಿದ ಅಂಗಿಯನ್ನು ಹೊರತೆಗೆದರು. ಆ ಮೇಲೆ ಅದನ್ನು ಮೇಲೆ ಎತ್ತಿ ಒಳಅಂಗಿಯ ಕಳ್ಳ ಜೇಬಿನಿಂದ ಎಂಟಾಣೆಗಳ ನಾಲ್ಕು ನಾಣ್ಯಗಳನ್ನು ತೆಗೆದು ಎರಡು ರೂಪಾಯಿಗಳಷ್ಟು ಹಣ ಜೋಡಿಸಿದರು. ಕೋಚರೇಕರ ಮಾಸ್ತರರು ತಮ್ಮ ಮೇಸಾಪೋಟೆಮಿಯಾದ ಹ್ಯಾಟು ಡಬ್ಬು ಮಾಡಿ ಅದರ ತೊಗಲಿನ ಪಟ್ಟಿಯ ಕೆಳಗಡೆ ಬಚ್ಚಿಟ್ಟ ಒಂದೊಂದು ರೂಪಾಯಿಗಳ ನೋಟುಗಳನ್ನು ತೆಗೆದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

''ಹಾಂ, ಎಷ್ಟು ಹಣ ಕೊಡಬೇಕು ಅವನಿಗೆ ತ್ರಿಲೋಕೇಕರ?''

''ನಾಲ್ಕು ರೂಪಾಯಿ ಹನ್ನೆರಡಾಣೆ....''

''ಬಾಬು ಕಾಕಾ, ಕೊಡೋ ನಿನ್ನ ನೋಟು, ಚಿಲಿ ಸಾಲಾ; '' ಎಲ್ಲರೂ ಓೀಗೆ ಚಿಲ್ಲರೆ ಹಣ ಕೂಡಿಸುತ್ತಿದ್ದಾಗ ಅವರ ಮೋಜು ನೋಡಲು ಅಷ್ಟರಲ್ಲಿ ಎಂಟ್ಹತ್ತು ಜನ ಅವರ ಸುತ್ತುಮುತ್ತಲು ನೆರದರು. ಕೊನೆಗೆ ನಾಲ್ಕು ರೂಪಾಯಿ ಹನ್ನೆರಡು ಆಣೆ ವ್ಹಿಕ್ಟೋರಿಯಾದವನ ಕೈಗೆ ಇತ್ತರು.

''ನಾಲ್ಕು ರೂಪಾಯಿ ಎಂಟಾಣೆ ಅಷ್ಟೇ ಸರ್!'' ಎಂದು ವ್ಹಿಕ್ಟೋರಿಯಾದವನು ಹೇಳಿದಾಗ ತಮ್ಮ ಪ್ರವಾಸದಲ್ಲಿ ''ಸತ್ಯಯುಗದ ಮನುಷ್ಯ ಹೇಗೆ ಸಿಕ್ಕನೋ?'' ಎಂದು ಅಚ್ಚರಿಗೊಂಡು ಹಾಗೆಯೇ ಸಂತೋಷದಿಂದ ತ್ರಿಲೋಕೇಕರರು ಪಂಡರ ಸ್ಟ್ರಕ್ ಆದರು. ಬಾಬೂಕಾಕಾ ಕೂಡ ಆಶ್ಚರ್ಯಚಕಿತರಾದರು. ಕೋಚರೇಕರ ಮಾಸ್ತರರಿಗಂತೂ ಉಕ್ಕಿ ಬಂತು. ''ನೋಡಿದಿರಾ? - ಪ್ರವಾಸದಲ್ಲಿ ಹೇಗೆ ಹೊಸ ಹೊಸ ಅನುಭವಗಳು ಬರುತ್ತವೆ ಅಲ್ರೀ; ಮನುಷ್ಯತ್ವ ಉಳಿದಿಲ್ಲಾ ಅಂತಾರ, ನೋಡ್ರಿ ಈ ಮನುಷ್ಯತ್ವ- ನಾಲ್ಕಾಣೆಗಾಗಿ ಅಂತಾ ಅಂವಾ ಸುಳ್ಳ ಆಡಲಿಲ್ಲ. ನಿಜಕ್ಕೂ ಅವನ ಹೆಸರು, ನಂಬರು ಬರಕೋ ಬೇಕಾಗಿತ್ತು. ಇಂಥ ಸತ್ಯ ಮತ್ತು ಸಜ್ಜನ ಜನರ ಸತ್ಕಾರ ಪ್ರಕಟರೀತಿಯಿಂದಾ ಮಾಡಬೇಕು,'' ತುಂಬಿದ ಅಂತಃಕರಣದಿಂದ ಮಾಸ್ತರರು ಹೇಳಿದರು.

''ಹಾಂ, ನಡೆಯರಿ,---- ಪ್ರತಿಯೊಬ್ಬರೂ ತಮ್ಮ ತಮ್ಮ ಸಾಮಾನುಗಳನ್ನು ನೋಡ್ರಿ.'' ಕಾಶೀನಾಥ ನಾಡಕರ್ಣಿಯವರು ಒದರಿದರು. ಚಿಲ್ಲರೆ ಹಣ ಜೋಡಿಸುವಷ್ಟರಲ್ಲಿ ಹಮಾಲರು ಸಾಮಾನುಗಳ ಸಮೇತ ಕಾಣೆಯಾಗಿದ್ದರು. ಕೊನೆಗೆ ೧೦-೧೫ ನಿಮಿಷ ಹುಡುಕಾಡಿದನಂತರ ಹಮಾಲರು ಸಿಕ್ಕಿದರು. ಹಮಾಲರನ್ನು ಹುಡುಕಲು ನಾಡಕರ್ಣಿಯವರ ದೊಡ್ಡ ಪೆಟ್ಟಿಗೆಯೇ ಕಾರಣವಾಯಿತು. ಇಷ್ಟು ದೊಡ್ಡ ಪೆಟ್ಟಿಗೆ ಇದಕ್ಕೂ ಮೊದಲು ಯಾರೂ, ಅಷ್ಟೇ ಅಲ್ಲ, ಯಾವ ಹಮಾಲರೂ ಕೂಡ ಕಂಡಿರಲಿಲ್ಲ. ಹಳೇ ಕಾಲದಲ್ಲಿ ಜಾದುಗಾರರು ತಮ್ಮ ''ಹಂಡಿ ಬಾಗಾ ''ನನ್ನು ಮಲಗಿಸಲು ಇಂಥ ಪೆಟ್ಟಿಗೆಯನ್ನು ಉಪಯೋಗಿಸುತ್ತಿದ್ದರು. ಶಿವಾಜಿ ಮಹಾರಾಜರು ಆಗ್ರಾದಿಂದ ಓಡಿದ್ದು ಇಂಥ ಬಿದುರಿನ ಪೆಟ್ಟಗೆಯೊಳಗಿಂದಲೇ ಎಂದು ಬಾಬುಕಾಕಾವರು ಹೊಸ ಮಾಹಿತಿ ನೀಡಿದರು. ''ಅಯ್ಯೋ ಘಾತಾಯಿತು'' ಎಂದು ಬಾಬಾಕಾಕಾ ಚೀರಿ ಟಿಕೆಟ್-ಕಲೆಕ್ಟರನ ಬಾಗಲಲ್ಲಿಯೇ ಕುಕ್ಕರಿಸಿದರು. ''ಎಲೇ, ಏನಾಯಿತೋ? ಈಡಿಯಟ್ ಸಾಲಾ! ಟಿಕೆಟ್ಟು ಮರೆತು ಬಂದಿಯಾ? ಸಾಲಾ, ಎರಡು ಗಂಟೆ ಕ್ಯೂದಲ್ಲಿ ನಿಂತು ರಿಝರ್ವ ಮಾಡಿದ್ದಿವಿ.....''

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

"ಎರಡ ಯಾಕರೀ? ಎರಡೂವರೆ ಗಂಟೆ! ನಾನೂ ಕ್ಯೂದಲ್ಲಿಯೇ ನಿಂತಿದ್ದೆ," ಕೋಚರೇಕರ ಮಾಸ್ತರರ ಧೈರ್ಯವೇ ಕಳೆಯಿತು. ಇನ್ನೂ ಅವರು ಪ್ಲ್ಯಾಟಫಾರ್ಮ್‌ದಲ್ಲಿ ಕೂಡ ಪ್ರವೇಶ ಮಾಡಿರಲಿಲ್ಲ. ಆದರೂ ಸಹ ಯಾವದೇ ಯುನಿಫಾರ್ಮದಲ್ಲಿದ್ದ ಯಾವದೇ ವ್ಯಕ್ತಿಯನ್ನು ಕಂಡರೆ ಕೋಚರೇಕರ ಮಾಸ್ತರರ ಎದೆ ಡಬ್ ಡಬ್ ಬಡೆಯುತ್ತಿತ್ತು. "ಹಾಂ ಟಿಕೆಟ್ಟು? ಇವೆ..... ಇಲ್ಲವೇ ಇಲ್ಲ..... ಬಾಬುಕಾಕಾವರ ಮುಖ ದೈನ್ಯದಿಂದ ತುಂಬಿ ಪತಿತ ಮತ್ತು ಅಪರಾಧಿಯ ಹಾಗೆ ಕಾಣುತ್ತಿತ್ತು.

"ಟಿಕೆಟ್ ಉಂಟು' ಹಾಗಾದರೆ ಘಾತೇನಾಯಿತು?" -ತ್ರಿಲೋಕೆಕರ.

"ವ್ಹಿಕ್ಟೋರಿಯಾ........."

"ವ್ಹಿಕ್ಟೋರಿಯಾ ? ಸಾಮಾನ ಏನು ಮರೆತರಾ?"

"ಅಲ್ಲರೀ, ಹತ್ತು ರೂಪಾಯಿ ನೋಟು ಅವನಿಗೆ ಕೊಟ್ಟಿದ್ದೆ."

"ಚಿಲ್ಲರೆ ಇಲ್ಲಾ" - ಅಂದಾ, " ಆದರೆ ನೋಟು ಅವನ ಹತ್ರಾನೇ ಉಳಿಯಿತು: ಮೇಲೆ ನಾಲ್ಕುವರೆ ರೂಪಾಯಿಗಳನ್ನೂ ಎಣಿಸಿದೆವು."

"ಅಂದರೆ ಹದಿನಾಲ್ಕುವರೆ ರೂಪಾಯಿಗಳಿಗೆ ವ್ಹಿಕ್ಟೋರಿಯಾ ಮಾಡಿದಂತಾಯಿತು, ಸಾಲಾ ಈಡಿಯಟ್! ಅಲ್ಲೊ, ನೀನು ಅವನಿಗೆ ಹತ್ತುರೂಪಾಯಿ ನೋಟು ತಿರುಗಿ ಯಾಕೆ ಬೇಡಲಿಲ್ಲಾ?"

"ಅವನಿಂದ ನಾಲ್ಕಾಣೆ ತಗೊಂಡೆ; ಆದರೆ ಆ ಗಡಿಬಿಡಿಯಲ್ಲಿ ನೋಟು ಬೇಡುವದು ಮರೆತೇ ಹೋಯಿತು." "ಇಲ್ಲಿ ಗೊಂದಲ ಬೇಡ, ಆಚೆ ಹೋಗಿ ಸರ್!" ಎಂದು ಟಿಕೆಟ್ ಕಲೆಕ್ಟರ ಒದರಿದ. ಈ ಎಲ್ಲ ಗೋಳಾಟದಲ್ಲಿ ಹಮಾಲರು ಮತ್ತೊಮ್ಮೆ ಕಳಕೊಂಡರು. ಆಗ ಕಾಶೀನಾಥ ನಾಡಕರ್ಣಿಯವರ ದೊಡ್ಡ ಪೆಟ್ಟಿಗೆಯ ಸಹಾಯದಿಂದಲೇ ಅವರನ್ನು ಮತ್ತೊಮ್ಮೆ ಎಲ್ಲರೂ ಹುಡುಕಿ ತೆಗೆದರು. "ಏ, ಬೇಕಾದ ಹಾಗೆ ಸಾಮಾನು ಎಸೆಯ ಬೇಡಾ ಮಹಾಶಯಾ, ರಿಝರ್ವೇಶನ್ ಇದೆ ನಮ್ಮದು..ಹಾಂ....ನೋಡು...."

"ಆದರೆ ಇದು ಸೆಕೆಂಡ ಕ್ಲಾಸ ಡಬ್ಬಿ ಹೌದಲ್ಲೊ? ಸರಿಯಾಗಿ ನೋಡು..." ಕೋಚರೇಕರ ಮಾಸ್ತರರು. ಹಿಂಬದಿಯಿಂದ ಬರುತ್ತಿದ್ದ ಕಾಶೀನಾಥ ನಾಡಕರ್ಣಿ ಮತ್ತು ಬಾಬುಕಾಕಾರ ನಡುವೆ ಈ ಪ್ರಕಾರ ಸಂವಾದ ನಡೆದಿತ್ತು..... "ಅಲ್ರೀ, ವ್ಹಿಕ್ಟೋರಿಯಾದವನಿಗೆ ಕೊಟ್ಟ ಹತ್ತು ರೂಪಾಯಿ ನೋಟು ಹೇಗೆ ಮರೆತರೀ ಅಂತೀನಿ?" "ಅಯ್ಯೋ ಇದ್ನೋಡ್ರಿ......" ಬಾಬುಕಾಕಾ ಧೋತರ ತೋರಿಸುತ್ತ ಹೇಳಿದರು.

"ಸಾರು ಚೆಲ್ಲಿದೆ- ಅದಕ್ಕೂ ಹತ್ತು ರೂಪಾಯಿ ನೋಟಕ್ಕೂ ಏನು ಸಂಬಂಧ?"

"ಅಲ್ಲರೀ ಅರ್ಧಕ್ಕರ್ಧಾ ಸಾರು ಅನ್ನ ಧೋತರದ ಒಳಗಡೆ ಹೋಗಿದೆ. ಯಾವಾಗ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಥೋತರ ಕಳೀತೀನಿ ಅಂತ ಆಗಿದೆ. - ಏನೂ ಗೊತ್ತಾಗುದಿಲ್ಲಾ: ಅದರಾಗ ಎಷ್ಟಂತ ಮೆಣಸಿನಕಾಯಿ ಹಾಕ್ತಾರೋ ಸಾರಿನಲ್ಲಿ ಈ ಜನ''?

''ಅಂದರs ನೀವು ಆ ಸಾರಿನ ರುಚಿ ಗಿಚಿ ನೋಡಿದಿರೇನು ಮತ್ತ?''

''ರುಚಿ ಏನ ನೋಡ್ತಿರೀ, ತೊಡೀ ಉರಿಲಿಕ್ಕೆ ಹತ್ಯಾವ''

ಇನ್ನೂ ರೈಲು ಹೊರಡಲು ಮೂರು ನಿಮಿಷ ಅವಕಾಶ ಇತ್ತು. ಡಬ್ಬಿಯನ್ನು ಹತ್ತಲು ಸ್ವಲ್ಪವೂ ವೇಳೆ ಇರಲಿಲ್ಲಾ. ಅಷ್ಟರಲ್ಲಿಯೇ ಕಾಶೀನಾಥ ನಾಡಕರ್ಣಿಯವರ ಪೆಟ್ಟಿಗೆಯನ್ನು ಇಂಜನದಿಂದ ಗಾರ್ಡನ ಡಬ್ಬಿಯ ವರೆಗೆ ಹಮಾಲರು ನಾಲ್ಕು ಸಲ ಕುಣಿಸಿದರು. ಅವರ ಹಿಂದಿನಿಂದ ತ್ರಿಲೋಕೇಕರರು ತಿಂಡಿ ಡಬ್ಬಿ, ಕೈಚೀಲು ಹಿಡಕೊಂಡು, ಬಾಬುಕಾಕಾ ಕೈಚೀಲಗಳನ್ನು ಕಾಪಾಡುತ್ತ, ಕಾಶೀನಾಥ ನಾಡಕರ್ಣಿಯವರು ತಮ್ಮನ್ನು ತಾವೇ ಕಾಪಾಡುತ್ತ, ಮತ್ತೆ ಕೋಚರೇಕರ ಮಾಸ್ತರರು, ಕಾಲಿನ ಪಟ್ಟಿಗಳು ಬಿಚ್ಚಿದ ಅವಸ್ಥೆಯಲ್ಲಿ ಕೋಲಿಗೆ ಎಣಿಸಲಾರದಷ್ಟು ಸಾಮಾನುಗಳನ್ನು ನೇತು ಬಿಟ್ಟ ಓಡಾಡುತ್ತಿದ್ದರು. -ಕೊನೆಗೆ ಮಹತ್ ಪ್ರಯಾಸದಿಂದ ಸಾಮಾನು ಮತ್ತು ಭ್ರಮಣ ಮಂಡಳದ ಸನ್ಮಾನ್ಯ ಸಭಾಸದರು ಒಂದು ಡಬ್ಬಿಯಲ್ಲಿ ಹತ್ತಿದರು.

ಬಟಾಟ್ಯಾಚೀ ಚಾಳ ಗ್ರಂಥದಿಂದ
-ಸುಚೇತಾ ಅಷ್ಟೇಕರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಡಾ. ಲೋಹಿಯಾ: ಒಬ್ಬ ರಸಿಕ ರುದ್ರತಪಸ್ವಿ

ಈ ಜಗತ್ತಿನಲ್ಲಿ ಸತ್ಯವನ್ನು ಅನುಸರಿಸಿ, ಸಾಮರ್ಥ್ಯದಿಂದ ಬದುಕಬೇಕಾದರೆ, ಒಬ್ಬಂಟಿಗನಾಗಿ ಬಾಳುವ ಸಿದ್ಧತೆ ಬೇಕು. ಡಾ. ಲೋಹಿಯಾ ಅವರು ಹೀಗೆ ಒಬ್ಬಂಟಿಗನಾಗಿ ಹೊರಟ ಸಂನ್ಯಾಸಿಗಳಾಗಿದ್ದರು. ಜೀವನದಲ್ಲಿಯ 'ಸತ್' ಹುಡಕಲು ಹೊರಟವರು. ಜೊತೆಗಾರರಾಗಿ ಅವರೊಡನೆ ನೀವು ಬಂದರೂ ಸೈ, ಬರದಿದ್ದರೂ ಸೈ, ಈ ಮನೋಭಾವದಿಂದ ನಡೆಯುವವರು. ಸಲ್ಲದ ಪ್ರಸಂಗಗಳಲ್ಲಿ ಸತ್ಯವನ್ನಾಡುವ ಚಾಳಿಯಿದ್ದ ಈ ಮನುಷ್ಯ – 'ನ ಬ್ರೂಯಾತ್ ಸತ್ಯಮಪ್ರಿಯಮ್' ದಂತಹ ಸಂಭಾವಿತ ಮುದ್ದುಮುದ್ದಾದ ಮಾತುಗಳನ್ನು ಅರಿಯದವನು. ರಸಿಕನಾದರೂ ಒರಟು: ಆನಂದವನ್ನು ಸಂಚಯಿಸುವವನಾದರೂ ವಿರಕ್ತನು. ಜೀವನದಲ್ಲಿಯ ಸೌಂದರ್ಯವನ್ನು ಉತ್ಕಟತೆಯಿಂದ ಅಪ್ಪುವವನು, ಅಷ್ಟೇ ಅಲಿಪ್ತನು. ಅತ್ಯಂತ ಆಕರ್ಷಕ ಅಂತರಂಗದವನು, ಅಷ್ಟೇ ಭೀತಿದಾಯಕ ಬಹಿರಂಗದವನು. ಪ್ರೀತಿಯಿಂದ ಭೆಟ್ಟಿಯಾಗಲು ಬಂದರೂ ಪೆಟ್ಟು ಹಾಕಲು ಬಂದಂತೆ ಬರುವವನು. ಈ ಒಡ್ಡೊಡ್ಡಾದ ಮಡಿಕೆಯು ವಾಸ್ತವಿಕವಾಗಿ ಡಾಕ್ಟರ್ ಕೇತಕರ್, ವಿಸೂಭಾವೂ ರಾಜವಾಡೇ, ಜ್ಯೋತಿಬಾ ಪುಲೇ ಇಂತಹವರ ಹಾಗೆ ಮರಾಠಿ ಮಣ್ಣಿನಲ್ಲಿಯೇ ಆಕಾರ ತಾಳಲು ಯೋಗ್ಯವಾಗಿತ್ತು. ಗಡಕರಿಯವರು ಬಣ್ಣಿಸಿದ,

ಗಡಸು ದೇಶವು, ಗಟ್ಟಿಗ ದೇಶವು, ಕಲ್ಲಿನದೇ ದೇಶ !
ನಯನಾಜೂಕಿನ, ಕೋಮಲ ದೇಶವು, ಹೂವುಗಳದೂ ದೇಶ !!

ಎಂಬ ವರ್ಣನೆ ಮಹಾರಾಷ್ಟ್ರದಷ್ಟೆಯೇ ಡಾಕ್ಟರ್ ಲೋಹಿಯಾ ಅವರ ವ್ಯಕ್ತಿತ್ವಕ್ಕೂ ಸರಿಹೊಂದಬಹುದಿತ್ತು.

ಲೋಹಿಯಾ ಅವರ ಒರಟುತನಕ್ಕೆ ಅತಿಯಾಗಿ ಪ್ರಸಿದ್ಧಿ ದೊರಕಿತು. 'ಹಣ ತೆತ್ತು ಗೋಳು ಗರೆಯಲು' (ಇಲ್ಲವೆ 'ಗೀಚು ಗೆರೆಯಲು') ಹಚ್ಚುವ ಸಂಪ್ರದಾಯದಲ್ಲಿಯ ಪತ್ರಿಕೋದ್ಯಮಿಗಳು ಸ್ತಂಭಗಳ ಹಿಂದೆ ಸ್ತಂಭಗಳನ್ನು ತುಂಬಿ – ನಿಜವಾಗಿ ಹೇಳಬೇಕಾದರೆ ಸ್ತಂಭಗಳ ಹಿಂದೆ ಅಡಗಿ – ಅವರ ಪ್ರತಿಮೆಯನ್ನು ವಿಕೃತಗೊಳಿಸುವ ಎಷ್ಟೋ ಸಂಧಿಗಳನ್ನು ಸಾಧಿಸಿಕೊಂಡರು. ಲೋಹಿಯಾ ಅವರು ಕೂಡ 'ಗಚ್ಛ ಸೂಕರ ಭದ್ರಂ ತೇ' ಎಂಬ ರೀತಿಯಲ್ಲಿ ತಮ್ಮ ಮೇಲೆ ರಾಡಿಯನ್ನು ಚೆಲ್ಲಲು ಅವರಿಗೆ ಸಾಕಷ್ಟು ಸಂಧಿಗಳನ್ನು ಒದಗಿಸಿಕೊಟ್ಟರು. ಬೇಗಡೆ ಮತ್ತು ಬಂಗಾರ ಇವುಗಳಲ್ಲಿಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವ್ಯತ್ಯಾಸವನ್ನು ತಿಳಿದುಕೊಳ್ಳಲು ಪತ್ರಿಕೋದ್ಯಮಿಗಳಷ್ಟೇ ಏಕೆ, ಸರ್ವಸಾಮಾನ್ಯ ವಾಚಕರಿಗಾದರೂ ಸಮಯವೆಲ್ಲಿದೆ! ಕೋಟಿ ಕೋಟಿ ರೂಪಾಯಿಗಳನ್ನು ಕಬಳಿಸುವ ಶೇಠಿಯಾ' ಜನರನ್ನು ಬೆನ್ನಹಿಂದೆ ಹಾಕುವ ಸಂಸದೀಯ ಸಭ್ಯತೆಗೆ ನಮ್ಮ ಮನ್ನಣೆ ದೊರಕುತ್ತದೆ. ಆದರೆ ಸಮಾಜದ ಮುಖದಲ್ಲಿ ಮಣ್ಣನ್ನೆರಚುವ ಈ ಧನದ ಮತ್ತು ಹಿಡಿದವರನ್ನು ಎದುರಿಸಿ, ಸತ್ಯವನ್ನು ಮನ್ನಿಸುವವರು ಮಾಡಿದ ಅವರ ಸಾದಾ ಶಾಬ್ದಿಕ ಮುಖಭಂಗಗಳೂ ಅಸಭ್ಯವಾಗಿ ತೋರುತ್ತವೆ.

ಹೊಸ ಪೀಳಿಗೆಯ ಮುಂದೆ ಚಿತ್ರಿಸಲಾಗುತ್ತಿದ್ದರು ಪಾರ್ಲಿಮೆಂಟಿನಲ್ಲಿ ಸರಕಾರಕ್ಕೆ ವಿರೋಧಿಗಳಾಗಿ ನಿಂತ ಲೋಹಿಯಾ, ನಾಲ್ವತ್ತೆರಡರ ಚಳುವಳಿಯಲ್ಲಿ ಕಾರಾಗೃಹದಲ್ಲಿ ವಿಪರೀತ ಕಷ್ಟಗಳನ್ನು ಸಹಿಸಿದ ಲೋಹಿಯಾ ಮರೆಯಲಾಗಿದ್ದರು. ಅಮೇರಿಕೆಯಿಂದ ಆಯಾತವಾಗುವ ಆಧುನಿಕ ಸಂಸ್ಕೃತಿಯ ಮೇಲೆ ಶ್ರದ್ಧೆಯನ್ನಿಟ್ಟು ಬಾಳುವವರಿಗೆ ಲೋಹಿಯಾ ಅವರು 'ಕ್ರೂಡ್' ಆಗಿ ಕಾಣುತ್ತಿದ್ದರು. '' ಅಂಗ್ರೇಜಿ ಹಟಾವ್' ಎಂದೆನ್ನುವ ಮನುಷ್ಯನಿಗೆ ಸುಸಂಸ್ಕೃತನೆಂದು ಹೇಗೆ ಕರೆಯಬಹುದು? ಮಮಿ-ಡ್ಯಾಡಿ-ಸಂಸ್ಕೃತಿಯ ಜನರಿಗೆ ಅವರು ಗ್ರಾಮ್ಯರಾಗಿ ತೋರುತ್ತಿದ್ದರು. ಭೋಜನದ ಬಳಿಕ ತಾಂಬೂಲಸೇವನೆಯನ್ನು ಮಾಡಿದಂತೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸವಿಯುವ ಸಾಂಸ್ಕೃತಿಕ ಸ್ವಾತಂತ್ರ್ಯವಾದಿಗಳಿಗೆ ಲೋಹಿಯಾ ಅರಸಿಕರಾಗಿ ಕಾಣುತ್ತಿದ್ದರು. ಲೇನಿನ್ - ಮಾರ್ಕ್ಸವಾದಿ ಪುರಾಣ ಪಂಥೀಯರಿಗೆ ಅವರು ವ್ಯಕ್ತಿವಾದಿಗಳಾಗಿ ಕಾಣುತ್ತಿದ್ದರು. ನವಶ್ರೀಮಂತ ಆಂಗ್ಲ ಭಾರತೀಯರಿಗಂತೂ ಅವರ ಮೇಲೆ ಅದೆಷ್ಟು ಕೋಪ! 'ರೀಡರ್ಸ್ ಡೈಜೆಸ್ಟ್' ನಲ್ಲಿಯ ಹಾಸ್ಯಚುಟುಕುಗಳು, 'ಲೈಫ್' ದಲ್ಲಿಯ ಚಿತ್ರಗಳು, ಮತ್ತು 'ಟೈಮ್ಸ'ದಲ್ಲಿಯ ಮೇಲ್ಪಂಕ್ತಿಗಳು ಇವುಗಳ ಹೊರತಾಗಿ ಈ 'ಕಲ್ಚರ್ಡ್' ಜನರ ವಾಚನದ ಮೇರೆ ಮೀರಿರುವದಿಲ್ಲ. ಕ್ಲಬ್‌ಗಳಲ್ಲಿ ವ್ಹಿಸ್ಕೀಯ ಜೊತೆಗೆ ಬಾಯಿ ಚಪ್ಪರಿಸಲು ಇಷ್ಟು ವ್ಯಾಸಂಗವು ಸಾಕಾಗುತ್ತದೆ. ಮಿಸೆಸ್‌ಗೆ ಲೇಟೆಸ್ಟ್ ಫ್ಯಾಶನ್‌ದ ಬಗ್ಗೆ ಮಾಹಿತಿ ಪೂರೈಸಲು ಭಾರತದಲ್ಲಿಯ ಮತ್ತು ಇಂಗ್ಲಂಡ್ - ಅಮೇರಿಕಾದಿಂದ ಬರುವ ಇಂಗ್ಲಿಷ್ ಮಾಸಪತ್ರಿಕೆಗಳಿರುತ್ತವೆ. ಪಿಂಕಿ ಮತ್ತು ಡಿಂಕಿಗೆ ಹಾರರ್ ಕಾಮಿಕ್ಸ್ ಮತ್ತು ಮರ್ಡರ್ ಸ್ಟೋರೀಜ್‌ಗಳ ಮೇವನ್ನು ಒಗೆದು ಬಿಟ್ಟರೆ ಆ ಪಾಳ್ಯವು ಸದ್ದಿಲ್ಲದೆ ಕೂತುಕೊಳ್ಳುತ್ತದೆ. ಇಂತಹ ನುಣುಪಾದ ಜನರಿಗೆ 'ಅಂಗ್ರೇಜಿ ಹಟಾವ್' ಎಂದೆನ್ನುವ ಲೋಹಿಯಾ ಕ್ರ್ಯಾಕ್, ಬ್ಯಾಕ್‌ವರ್ಡ್, ಜಂಗ್ಲೀ, ಕ್ರೂಡ್ ಎಂದು ಅನಿಸುವದು ಅತ್ಯಂತ ಸ್ವಾಭಾವಿಕವೇ ಆಗಿತ್ತು.

ಸ್ವಾತಂತ್ರ್ಯ ಬಂದಾಯಿತು. ಆದರೆ ಇಂದಿಗೂ ಭಾರತವು ಭಾರತೀಯ ಭಾರತ ಮತ್ತು ಆಂಗ್ಲ ಭಾರತ ಎಂಬ ಅದೃಶ್ಯ ಭಾಗಗಳಲ್ಲಿ ಬೇರ್ಪಟ್ಟಿದೆ. ಭಾರತೀಯ ಭಾರತದಲ್ಲಿ ಭಾಷೆಗನುಗುಣವಾಗಿ ಪ್ರಾಂತರಚನೆಯಾದುದರಿಂದ ಹೊಸ ತುಡಿತಗಳು ನಿರ್ಮಾಣಗೊಂಡಿವೆ. ಆಂಗ್ಲ ಭಾರತೀಯರಲ್ಲಿ ಹಾಗೆ ನೋಡಿದರೆ ಒಕ್ಕಟ್ಟಿದೆ.. ಈ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೇಶಿ ಜನರ ಕೈಯಲ್ಲಿ ಸತ್ತೆಯು ಹೋಗಬಾರದೆಂದು ಅವರಿಗೆ ಇಂಗ್ಲಿಷ್ ಭಾಷೆಯು ಬೇಕಾಗಿದೆ. ರಾಷ್ಟ್ರೀಯತ್ವದ, ಆತ್ಮಗೌರವದ ಬೆಲೆಯನ್ನು ತೆತ್ತು ಅವರು ತಮ್ಮ ಮಕ್ಕಳನ್ನು ಪಾಶ್ಚಾತ್ಯ ಬಣ್ಣದಿಂದ ಅಂತರ್ಬಾಹ್ಯ ಬಳಿಸಿದ್ದಾರೆ. ಇಂಗ್ಲಿಷ್ ಬರುವವನು ತಮ್ಮವನು, ಬರದಿದ್ದವನು ಕೇವಲ 'ಕೂಲಿ'ಯಾಗುವ ಇಲ್ಲವೆ ಹೆಚ್ಚೆಂದರೆ 'ಜೈರಾ' ಆಗುವ ಪಾತ್ರತೆಯ ಮನುಷ್ಯನಾಗಿರುತ್ತಾನೆ ಎಂಬುದು ಆ ಮಕ್ಕಳಿಗೆ ತಿಳಿಯದೆಯೆ ಕಲಿಸಿದ ಪಾಠವಾಗಿರುತ್ತದೆ. ನಾಳೆ ದೇಶಿ ಭಾಷೆಗಳಲ್ಲಿಯೇ ರಾಜ್ಯಕಾರಭಾರವು ಆರಂಭವಾದರೆ ಮುಖ್ಯವಾಗಿ ಕ್ರಿಸ್ತೀ ಮತಗಳಲ್ಲಿ ಕಲಿತ 'ಹರ ಹರ ನ ಓಂದುರ್ನಯವನ:' ಆದ ಹಾಗೂ ರಾಮಕೃಷ್ಣರಿಗಿಂತ ಜೇಮ್ಸ ಬಾಂಡ್‌ನೊಡನೆ ಹೆಚ್ಚು ಸಲಿಗೆ ಇದ್ದ ಆಂಗ್ಲ ಭಾರತೀಯರ ಪಾಡೇನು? ತಿಂಗಳಿಗೆ ಮೂರುನೂರು ರೂಪಾಯಿಗಳನ್ನು ತೆತ್ತಬೇಕಾಗುವ ತುಟ್ಟಿಯಾದ ಶಾಲೆಗಳಲ್ಲಿ ಈ ಹೊಸ ರಾಜ್ಯಕರ್ತೃರನ್ನು ರೂಪಿಸಿಕೊಳ್ಳಲು ಹಾಕಲಾಗಿದೆ. ಇಡಿಯ ಜ್ಞಾನಭಾಂಡಾರವು ಇಂಗ್ಲೀಷನಲ್ಲಿದೆ. ಆದ್ದರಿಂದ ಇಂಗ್ಲಿಷ್ ಇಲ್ಲದಿದ್ದರೆ ಜ್ಞಾನವಿಲ್ಲ ಎಂಬುದು ಅವರ ಯುಕ್ತಿವಾದ. ಹೇಗಿದ್ದರೂ ಇಂಗ್ಲಿಷ್ ಜನರು ಇಂಗ್ಲಿಷ್‌ನ್ನು ಬಿತ್ತೇ ಬಿತ್ತಿದ್ದಾರೆ. ಏಕೆ ಮರಗಳನ್ನು ಕಿತ್ತೆಸೆಯಬೇಕು? ಇಂಗ್ಲಿಷ್‌ರು ಕ್ರಿಸ್ತೀ ಧರ್ಮೋಪದೇಶಕರನ್ನೂ ತಂದಿದ್ದರು. ನಿಜವಾಗಿಯೂ ನಾವೆಲ್ಲರೂ ಕ್ರಿಸ್ತಿಗಳೇ ಏಕಾಗಬಾರದು? ಇದಕ್ಕಿಂತ ರಶಿಯಾ ಇಲ್ಲವೆ ಅಮೇರಿಕಾ, ಇಲ್ಲದಿದ್ದರೆ ಇತ್ತೀಚೆಗಿನ ಚೀನ, ಇವುಗಳದೇ ಒಂದು ಭಾಗ ಎಂದೇಕೆ ನಾವು ಬದುಕಬಾರದು? ಈ ಭಾರತೀಯತ್ವದ ರಾಷ್ಟ್ರೀಯ ಮತ್ತು ಸಾಂಸ್ಕೃತಿಕ ತೊಂದರೆ ಬೇಕಾದದ್ದಾದರೂ ಏಕೆ?

ದುರ್ದೈವವಿಷ್ಟೇ, ಈ ಇಂಗ್ಲಿಷ್‌ಪರರಲ್ಲಿ ಹೆಚ್ಚು ಜನರ ಇಂಗ್ಲಿಷ್ ಪ್ರೇಮವು ನೌಕರಿ ಪಡೆಯುವ ವ್ಯಾಪಕ ಸೌಲಭ್ಯವೆಂಬ ಕಾರಣದಿಂದಾಗಿಯೇ ಇರುತ್ತದೆ. ಹಾಗೆಯೇ ಹಿಂದೂ ಧರ್ಮವನ್ನು ಬಿಟ್ಟು ಅನ್ಯ ಧರ್ಮಗಳನ್ನು ಸ್ವೀಕರಿಸಿದವರ ಧರ್ಮಾಂತರಗಳೂ ಪಾರಮಾರ್ಥಿಕ ಕಾರಣಗಳಿಗಿಂತ ಅಧಿಕವಾಗಿ ಐಹಿಕ ಅಭ್ಯುದಯಕ್ಕಾಗಿಯೇ ಆಗಿವೆ. ಕೆಲವು ಚಾಕರಿಗಾಗಿ, ಕೆಲವಂತೂ ಪುನರ್ಲಗ್ನ ಇಲ್ಲವೆ ವಿವಾಹವಿಚ್ಛೇದನೆಯ ಸೌಕರ್ಯಕ್ಕಾಗಿಯೂ! ಈ ಇಂಗ್ಲಿಷ್‌ವಾದಿಗಳಿಗೆ ಜ್ಞಾನದ ಬಗ್ಗೆ ಎಳ್ಳಷ್ಟೂ ತವಕವಿಲ್ಲ. ಡಾಕ್ಟರ್ ಲೋಹಿಯಾ ಅವರು ಇಂಗ್ಲಿಷ್ ಭಾಷೆಯ ಪಂಡಿತರಾಗಿದ್ದರೆಂಬದು ಅವರಿಗೆ ಗೊತ್ತೂ ಇಲ್ಲ. ಇಂಗ್ಲಿಷ್ ಲೇಖನದಲ್ಲಿಯ ಇಲ್ಲವೆ ಮಾತಿನಲ್ಲಿಯ ವ್ಯಾಕರಣಕ್ಕೆ ಸಂಬಂಧಿಸಿದ ಕ್ಷುಲ್ಲಕ ತಪ್ಪು ಕೂಡ ಅವರು ಒಡನೆಯೇ ಗ್ರಹಿಸುತ್ತಿದ್ದರು. ಯುರೋಪಿಯನ್ ಸಂಸ್ಕೃತಿಯನ್ನು ಮತ್ತು ಇತಿಹಾಸವನ್ನು ಅವರು ಆಳವಾಗಿ ಅಭ್ಯಸಿಸಿದ್ದರು. ಜರ್ಮನ್ ಭಾಷೆಯನ್ನು ಒಳಿತಾಗಿ ಅರಿತಿದ್ದರು. ಅನೇಕ ಭಾರತೀಯ ಭಾಷೆಗಳನ್ನು ಬಲ್ಲವರಿದ್ದರು. ಉತ್ತರ ಭಾರತದವರು ದಕ್ಷಿಣದ ಒಂದಾದರೂ ಭಾಷೆಯನ್ನು ಕಲಿಯಬೇಕು ಎಂದು ಆಗ್ರಹದಿಂದ್ ಅವರು ಪ್ರತಿಪಾದಿಸುತ್ತಿದ್ದರು. ಅವರು ಇಂಗ್ಲಿಷ್ ಭಾಷೆಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿರೋಧಿಗಳಾಗಿರಲಿಲ್ಲ. ಆ ಭಾಷೆಯನ್ನು ಈ ದೇಶದ ರಾಜ್ಯಕಾರಭಾರದ ಭಾಷೆಯನ್ನಾಗಿ ಮಾಡಬಾರದೆಂದು ಅವರ ಮತ. ದೇಶದಲ್ಲಿಯ ಶೇಕಡ ತೊಂಭತ್ತು ಜನರಿಗೆ ಯಾವ ಭಾಷೆಯ ಗಂಧಗಾಳಿ ಇಲ್ಲವೋ ಆ ಭಾಷೆಯಲ್ಲಿ ರಾಜ್ಯಕಾರಭಾರವನ್ನು ಮಾಡುವದೆಂದರೆ ಶೇಕಡ ಹತ್ತು ಜನರು ಇನ್ನುಳಿದ ಶೇಕಡ ತೊಂಭತ್ತು ಜನರನ್ನು ಆಳುವದು. ಅಂದರೆ ಇವರು ಹೊಸ ಮೋಗಲ್‌ರಂತೆ. ಇಂತಹ ಮೋಗಲ್‌ರ ವಿರುದ್ಧ ಲೋಹಿಯಾ ರೊಚ್ಚಿಗೇಳುತ್ತಿದ್ದರು. ಈ ರೊಚ್ಚು ಅನೇಕ ವಿಧದಿಂದ ಪ್ರಕಟವಾಗುತ್ತಿತ್ತು. ಇಂಗ್ಲಿಷ್ ಭಾಷೆಯ ಒತ್ತಾಯ ನಮಗೆ ತಪ್ಪಾಗಿ ಕಾಣುವದಿಲ್ಲ. ಆ ಅನ್ಯಾಯದ ವಿರುದ್ಧ ಮಾಡಿದ ಪ್ರತಿಭಟನೆ ತಪ್ಪಾಗಿ ಕಾಣುತ್ತದೆ. ವಾದಿ, ಪ್ರತಿವಾದಿ ಇಲ್ಲವೆ ಆರೋಪಿಗಳಿಗೆ ಎಳ್ಳಷ್ಟು ತಿಳಿಯದ ಅಂಗ್ರೇಜಿ ಭಾಷೆಯಲ್ಲಿ ಮೊಕದ್ದಮೆಗಳು ನಡೆಸಲಾಗುತ್ತವೆ. ನ್ಯಾಯದಾನವು ಅಂಗ್ರೇಜಿ ತಿಳಿಯುವ ವಕೀಲ ಮತ್ತು ನ್ಯಾಯಾಧೀಶ ಇವರ ನಡುವಿನ ಖಾಸಗಿ ವಿಷಯವಿದ್ದಂತೆ. ಮನುಷ್ಯನ ಜೀವನಮರಣದ ಪ್ರಶ್ನೆಯಾಗಿದ್ದರೂ ಅವನಿಗೆ ತಿಳಿಯದಂತೆ ನ್ಯಾಯಾಲಯದ ಕೆಲಸವನ್ನು ನಡೆಸುವದು ನಮಗೆ ಅಮಾನುಷವಾಗಿ ಕಾಣುವದಿಲ್ಲ. ಆದರೆ ಇಂತಹ ಅಮಾನುಷ ವೃತ್ತಿಯನ್ನು ಖಂಡಿಸುವ ಲೋಹಿಯಾ ಅವರು ನಮಗೆ ಶಿಷ್ಟಾಚಾರವಿಹೀನರೆಂದು ಕಾಣುತ್ತಿದ್ದರು. ಅವರು, ಪರಕೀಯ ಭಾಷೆಯ ಒತ್ತಡದಿಂದ ಮೂಕರಾದ, ಭೀತಿಗ್ರಸ್ತ, ಬಡತನದಿಂದ ಪೀಡಿತರಾದ, ಮಾನವತೆಯ ಪ್ರಾಥಮಿಕ ಅಧಿಕಾರಗಳಿಗೂ ವಂಚಿತರಾದ ಸಾಮಾನ್ಯರ ಪ್ರತಿನಿಧಿಗಳಾಗಿದ್ದರು. ರೇಗಿದಾಗ ಅಡ್ಡತಿಡ್ಡವಾಗಿ ಮಾತಾಡುತ್ತಿದ್ದರು. ಆಗ ಅವರು ಲೋಹಿಯಾ ಇರುತ್ತಿರಲಿಲ್ಲ. - ಆ ಬಳಲಿದ, ಉಪೇಕ್ಷಿತ, ಹಸಿದ, ಸಾಮಾನ್ಯ ಭಾರತೀಯನ ಸಂಚಾರ ಅವರ ದೇಹದಲ್ಲಿ ಆಗುತ್ತಿರಬೇಕು. ಹಸಿವೆಯಿಂದ ಕಂಗೆಟ್ಟ ಮನುಷ್ಯನ ಬಗೆಗಿರುವ ಕಳವಳವು ದೆವ್ವ ಬಡೆದಂತೆ ಬಾಧಿಸುತ್ತಿತ್ತು. ಆ ಗುದ್ದುಸಲ್ಲನ್ನು ಲೋಹಿಯಾ ಅವರು ಮಾಡುತ್ತಿರಲಿಲ್ಲ; ಲೋಹಿಯಾ ಎಂಬ ಗಿಡವನ್ನೇರಿ ಕುಳಿತ ಈ ದೇಶದಲ್ಲಿಯ ಕೋಟ್ಯಾವಧಿ ಅರೆನಗ್ನ, ಅರೆಹೊಟ್ಟೆಯ, ಅರೆಮಾನವನ ಬದುಕನ್ನು ಬದುಕುವ, ಜೀವಂತ ಪಿಶಾಚಿಗಳು ಮಾಡುತ್ತಿದ್ದವು.

ಆ ಹಸಿವೆಯಿಂದ ಬೆಂದ, ರೋಸಿದ ಪಿಶಾಚಿಗಳಿಗಾಗಿ ತನ್ನ ದೇಹದ ಆಲದ ಮರವನ್ನು ಒಡ್ಡುವ ಈ ಮನುಷ್ಯ ನಮ್ಮಿಂದ ಹೊರಟುಹೋಗಿದ್ದಾನೆ. ದಿಲ್ಲಿಯ ಸಾರ್ವಜನಿಕ ಆಸ್ಪತ್ರೆಯಲ್ಲಿ ಅವರು ನಿಧನಗೊಂಡರು. ಸಾಮಾನ್ಯ ಜನರ ಬಗ್ಗೆ ಅತ್ಯಂತ ಒಲವಿದ್ದ ಈ ಅಸಾಮಾನ್ಯ ಮನುಷ್ಯ ಭಾರತದಲ್ಲಿಯ ಸಾಮಾನ್ಯರ ಪಾಲಿಗೆ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಬರುವ ದೈವಭೋಗವನ್ನೇ ಭೋಗಿಸುತ್ತ ಹೋಗಿಬಿಟ್ಟ. ಬದುಕಿನಲ್ಲಿ ಎಂತಹ ಮಾನಮರ್ಯಾದೆಗಳನ್ನೂ ಅವರು ಅಪೇಕ್ಷಿಸಲಿಲ್ಲ. ಸಾಯುವಾಗ ಬೇಡಲು ಬರುವದಿಲ್ಲ, ಆದರೆ ಸಿಗಲೂ ಇಲ್ಲ. ಸುರಿದ ಕಣ್ಣೀರುಗಳು ಮಾತ್ರ ನಿಜವಾಗಿದ್ದವು. ಅಂದಂತೆ ಫಕೀರನಂತೆ ಬದುಕಿದ; ಫಕೀರನಂತೆಯೇ ಸತ್ತ.

ಅನ್ಯಾಯದ ವಿರುದ್ಧ ಸಿಡಿದೇಳುವ ವ್ಯಕ್ತಿತ್ವ ಇದು. ಪ್ರಖರವಾಗಿದ್ದುದು ನಿಜ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆದರೆ ಈ ವಿಷ್ಣುದಾಸನು ಮೇಣಕ್ಕಿಂತಲೂ ಮಿದುವಾಗಿಯೂ ಆಗುತ್ತಿದ್ದನು. ಪಾರ್ಲಿಮೆಂಟಿನಲ್ಲಿಯ ಲೋಹಿಯಾ ಅವರನ್ನು ನೋಡುವವರಿಗೆ ಈ ಮನಸ್ಸಿನ ಗುರುತಿರಲಿಲ್ಲ. ಅವರ ಸಹವಾಸದ, ಅವರ ಅಂತರಂಗದಲ್ಲಿ ಇಣಿಕಿ ನೋಡುವ ಸುಯೋಗವು ಎಲ್ಲರಿಗೂ ಹೇಗೆ ಲಭಿಸಬೇಕು? ನನ್ನ ಕುಂಡಲಿಯಲ್ಲಿ ಇಂತಹ ಯೋಗಗಳು ಬಂದವು. ನಾನು ಆ ನೆನಪುಗಳನ್ನು ಪುಸ್ತಕಗಳಲ್ಲಿ ಇಡಲಾಗುವ ನವಿಲುಗರಿಗಳಂತೆ ಜತನವಾಗಿಟ್ಟಿದ್ದೇನೆ. ನಾಲವತ್ತೆರಡರಲ್ಲಿಯ ಅವರು ನನ್ನ ಪೀಳಿಗೆಯ ಹೀರೋ! ಅಚ್ಯುತರಾವ್ ಪಟವರ್ಧನ್, ಲೋಹಿಯಾ, ಜಯಪ್ರಕಾಶ್, ಎಸ್. ಎಮ್, ಮೆಹೆರ್ ಅಲಿ, ಅರುಣಾ ಅಸಫ್ ಅಲಿ ಇವರು ನಮ್ಮ ದೇವ್ ಆನಂದ್ ಮತ್ತು ಮೀನಾಕುಮಾರಿಗಳಾಗಿದ್ದರು! ಆದರೆ ಆ ವೇಳೆಗೆ ದೂರದಿಂದ ವ್ಯಾಸಪೀಠದ ಮೇಲೆ ಅವರನ್ನು ನೋಡುವದು, ಅವರ ಪರಾಕ್ರಮಗಳನ್ನು ಓದುವದು, ಒಬ್ಬರಿಗೊಬ್ಬರಿಗೆ ಹೇಳುವದು, ಇಷ್ಟೇ. ಪ್ರತ್ಯಕ್ಷ ಭೆಟ್ಟಿಯ ಯೋಗವು ಮಾತ್ರ ಬಹಳ ತಡವಾಗಿ ಬಂತು.

ನನ್ನ ಸ್ನೇಹಿತನೊಬ್ಬನ ಮನೆಯಲ್ಲಿ ಅವರ ಸಹವಾಸದಲ್ಲಿ ನಿಜವಾಗಿಯೂ 'ಅವಿದಿತಗತಯಾಮಾ ರಾತ್ರಿರೇವ ವ್ಯರಂಸೀತ್' ಅನ್ನುವಂತೆ ಆಯಿತು. ಮುಂಬಯಿಯ ಭಾಷೆಯಲ್ಲಿ ಹೇಳಬೇಕಾದರೆ, ಭಯ್ಯಾ ಬಂದು 'ಬಾಯಿ ದೂಧ್' ಎಂದಾಗ ಅರಿವಾಯಿತು ರಾತ್ರಿ ಮುಗಿಯಿತೆಂದು. ಲೋಹಿಯಾ ಅವರೊಂದಿಗೆ ನನ್ನದು ಅದು ಮೊದಲ ಭೆಟ್ಟಿ. ಜಾರ್ಜ ಫರ್ನಾಂಡೀಸ್ ಮುಂತಾದ ಇತರ ಸಂಸೋಪಾದಲ್ಲಿಯ ಸ್ನೇಹಿತರಿದ್ದರು. ಹಾಗೆ ನೋಡಿದರೆ ಈ ಎಲ್ಲ ಜನರು ಜ್ವಾಲಾಗ್ರಾಹಿ ಎಂದೇ ಹೆಚ್ಚು ಪ್ರಸಿದ್ಧರಾಗಿದ್ದರು. ಅವರಲ್ಲೂ ರಾಜಕೀಯ ಪಕ್ಷವೆಂದರೆ ನನಗೆ ಸೇರದ ವಿಷಯ. ಎಂತಹ ತತ್ವಜ್ಞಾನವನ್ನೂ ಪಕ್ಷದ ಚೌಕಟ್ಟಿನಲ್ಲಿ ತುರುಕಿದರೆ, ಕೃತಿಗಿಂತ ಉಕ್ತಿಯ ಮಹತ್ವ ಹಿರಿದಾಗುತ್ತದೆ ಮತ್ತು ಮೂಲ ತತ್ವಜ್ಞಾನವು ಬದಿಗೆ ಸರಿದು ಪಕ್ಷದ ಒಂದು ಸೌಕರ್ಯದ ತತ್ವಜ್ಞಾನವು ತಯಾರಾಗುತ್ತದೆ. ಆ ಮೇಲೆ ಪ್ರತಿಯೊಂದು ಮಾತನ್ನೂ ಆ ಪಕ್ಷದ ತತ್ವಜ್ಞಾನದ ಒರೆಗಲ್ಲಿನ ಮೇಲೆ ಸವೆಯಲಾಗುತ್ತದೆ. ಸಾದಾ ಹಿಂದೂ ಮತ್ತು ಹಿಂದೂ ಮಹಾ ಸಭೆಯ ಹಿಂದೂ ಇವರಲ್ಲಿ ಭೇದ ಉಂಟಾಗುತ್ತದೆ. ಸಮಾಜವಾದಿ, ಪ್ರಜಾಸಮಾಜವಾದಿ, ಲೋಕಶಾಹಿ ಸಮಾಜವಾದಿ ಇಲ್ಲವೆ ಸಂಯುಕ್ತ ಸಮಾಜವಾದಿ ಹೀಗೆ ಬೇರೆ ಬೇರೆ ನಾಮಮುದ್ರೆಗಳು ಮತ್ತು ದೀಕ್ಷೆಗಳು ತಯಾರಾಗುತ್ತವೆ. ಲೋಹಿಯಾ ಅವರು ಸಮಾಜವಾದ ಎಂಬ ವಿಷಯದ ಮೇಲೆ ನನ್ನ ಬಾಯಿಪರೀಕ್ಷೆಯನ್ನು ಆರಂಭಿಸಿದರೆ ಏನಾಗಬಹುದು, ದೇವರೇ ಬಲ್ಲ, ಎಂದು ಮನಸ್ಸಿನಲ್ಲಿ ಭೀತಿಯನ್ನು ತಾಳಿಯೇ ನಾನು ಆ ಸ್ನೇಹಿತರ ಮನೆಗೆ ಹೋದೆ. ತನ್ನ ಓಣಿಯಲ್ಲಿ ಪ್ರತಿಷ್ಠೆಯನ್ನು ಗಳಿಸಿದ ರಾಜಕೀಯ ಪಕ್ಷದ ಒಬ್ಬ ಕಾರ್ಯಕರ್ತನೂ ಕೂಡ ಯಾವಾಗಲೂ ಒಂದು ಅದೃಶ್ಯವಾದ ವೇದಿಕೆಯ ಮೇಲೆ ನಿಂತಿರುವನೆಂದ ಬಳಿಕ ಲೋಹಿಯಾ ಅವರಂತೂ ಅದೆಷ್ಟು ಹಿರಿಯ ಮನುಷ್ಯ ! ನೆಹರೂ ಅವರಿಗೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೂಡ ಅಂಜದವ. ಆ ರಾತ್ರಿ ಲೋಹಿಯಾ ಅವರು ನನಗೆ ಪ್ರಚಂಡ ಧಕ್ಕೆಯನ್ನು ಕೊಟ್ಟರು. ಹೆಚ್ಚೆಂದರೆ ಗ್ಲೂಕೋ ಬಿಸ್ಕತ್ತು, ಅಲ್ಯುಮಿನಿಯಮ್ ತಟ್ಟೆಯಲ್ಲಿ ಎಣ್ಣೆಯಿಂದ ನೆನೆದ ಚಿವಡಾ, ಹಸಿರು ಸಿಪ್ಪೆಯ ಮಾಗದ ಬಾಳೆಹಣ್ಣು ಮತ್ತು ಕೆನೆಯ ಪರಿಸೆ ತೇಲುತ್ತಿರುವ ತಣ್ಣಗಿನ ಚಹವಷ್ಟೇ ಸಿಗಬಹುದೆಂಬ ಅಪೇಕ್ಷೆಯಿಂದ ಹೋದರೆ ಮನೆಯ ಯಜಮಾನರು ಮಾತ್ರ ಮೂವತ್ತೆರಡು ಕೋರ್ಸುಗಳ ಚೀನೀ ಭೋಜನವನ್ನು ಸಾಕೇ ಸಹಿತ ತಯಾರು ಮಾಡಿಟ್ಟಿದ್ದರೆ ಅಲ್ಲಿ ಹೋಗುವವನ ಸ್ಥಿತಿ ಹೇಗಾಗಬೇಡ? ಆ ರಾತ್ರಿ ನನ್ನ ಸ್ಥಿತಿಯೂ ಥೇಟ್ ಹಾಗೇ ಆಯಿತು. ಲೋಹಿಯಾ ಈ ಮನುಷ್ಯನಿಗೆ ಆ ಜಪಾನಿ ಗೇಶಾ ''ನನಗೆ ಈವರೆಗೆ ಭೆಟ್ಟಿಯಾದ ಜನರಲ್ಲಿ ನೀವು ನನಗೆ ಎಲ್ಲರಿಗಿಂತ ಅದ್ಭುತವಾಗಿ ಕಂಡಿದ್ದೀರಿ!'' ಎಂದು ಅಂದಿದ್ದಳಂತೆ. ಈ ಮಾತನ್ನೇ ನಾನೂ ಇಂದಿಗೂ ಆ ರಾತ್ರಿಯ ನೆನಪಾದೊಡನೆ ಅನ್ನುತ್ತೇನೆ. ಚಿತ್ರ, ಶಿಲ್ಪ, ಸಾಹಿತ್ಯ, ನಾಟ್ಯ, ಇತಿಹಾಸ - ಲೋಹಿಯಾ ಅವರ ಜೀವನವನ್ನು ಸಮೃದ್ಧಗೊಳಿಸುವ ಅವೆಷ್ಟು ವಿಷಯಗಳು. ಇವೆಲ್ಲವುಗಳ ಜೊತೆ ಅವರ ಮಾತಿನ ಗಾರುಡಿ! ಅವರು ಆ ರಾತ್ರಿಯನ್ನು ತಮ್ಮ ರಸಿಕತೆಯಿಂದ ಬೆಳಗಿಸಿದರು. ಅನುಭವದ ಅಮೃತ ಕುಂಭಗಳು ಬರಿದಾಗುತ್ತಿದ್ದವು. ಅವರು ಪ್ರಶ್ನೆಗಳೆತ್ತಿ ಕೆರಳಿಸುತ್ತಿದ್ದರು. ಗೇಲಿ ಮಾಡುತ್ತಿದ್ದರು. ಒಂದೇ ಕ್ಷಣದಲ್ಲಿ ಅವರು ನನ್ನನ್ನು ನಿರಾತಂಕವನ್ನಾಗಿ ಮಾಡಿಬಿಟ್ಟಿದ್ದರು. ಗಂಟೆ, ಎರಡು ಗಂಟೆಗಳ ನಂತರ ಅಲ್ಲಿಗೆ ಬಂದವರಿಗೆ ನಾವಿಬ್ಬರೂ ಹಿಂದೊಮ್ಮೆ ಒಂದೇ ಓಣಿಯಲ್ಲಿ ಕಲ್ಲುಹರಳಿನ ಆಟವಾಡುವ ಗೆಳೆಯರಾಗಿದ್ದಿರಬಹುದೆಂದು ಅನಿಸಿರಲು ಸಾಕು. ಇದು ಲೋಹಿಯಾ ಅವರ ಮಾಟ.

ಅವರು ತಾವೇ ಅಂತರವನ್ನು ಕತ್ತರಿಸುತ್ತ ನಿಮ್ಮ ಸಮೀಪ ಬರುತ್ತಿದ್ದರು. ದಡಪಡಿಸುವ ಕಷ್ಟವನ್ನು ನಿಮಗೆ ಕೊಡುತ್ತಿರಲಿಲ್ಲ. ಆ ರಾತ್ರಿ ಈ ಹಿರಿದಾದ ಮನುಷ್ಯನ 'ದರ್ಶನ'ವು ನನಗಾಯಿತು. ಲೋಹಿಯಾ ಅವರಲ್ಲಿಯ 'ಕವಿ'ಯನ್ನು ನಾನು ಕಂಡೆ. 'ದೀದಾವರ' ನನ್ನು ಕಂಡೆ. ಈತ ಬಣ್ಣ, ರಸ, ಗಂಧ, ಸ್ಪರ್ಶ, ನಾದಗಳ ಇಷ್ಟು ಲೋಭಿಯಾಗಿರಬಹುದೆಂದು ನನಗೆ ಕಲ್ಪನೆ ಇರಲಿಲ್ಲ. ನಮ್ಮ ರಾಜಕೀಯ ಪುಢಾರಿಗಳ ಅರಸಿಕತ್ವವು ಹೊಗಳುವಂತಹದು. ತಮ್ಮ ಮಂತ್ರಿಪದ ಇಲ್ಲವೆ ಸಾದಾ ಎಮ್.ಎಲ್.ಎ. ಪದವನ್ನು ಮರೆತು ದೇವರ ದರ್ಶನವನ್ನು ತೆಗೆದುಕೊಳ್ಳುವದು ಕೂಡ ನಮ್ಮ ಎಷ್ಟೋ ರಾಜಕೀಯ ಮುಖಂಡರಿಗೆ ಸಾಧಿಸದು. ಸಾಂಸ್ಕೃತಿಕ ಕಾರ್ಯಕ್ರಮದ ಅಧ್ಯಕ್ಷರೆಂದು ಅವರಲ್ಲಿಯ ಕೆಲ ಜನರು ವೇದಿಕೆಯ ಮೇಲೆ ಕೂತಿದ್ದನ್ನು ನೋಡಿದಾಗ ನನ್ನಲ್ಲಿ ಅವರು, ನಾವು ಮತ್ತು ನಮ್ಮ ಸಂಸ್ಕೃತಿಯ ಬಗೆಗೆ ಕರುಣೆ ಮೂಡುತ್ತದೆ. ಇಲ್ಲಿಯಂತೂ ಗಡಸು, ಅಸಭ್ಯ, ಜಗಳಗಂಟ ಇಂತಹ ದೂಷಣಗಳಿಂದ ಬಳಿಯಲಾಗಿದ್ದ ಮನುಷ್ಯ ಭಾರತೀಯ ಶಿಲ್ಪದ ಮೇಲೆ ಮಾತಾಡುತ್ತಿದ್ದ. ಯುರೋಪಿಯನ್ ಚಿತ್ರಕಲೆಯಲ್ಲಿಯ ಸೂಕ್ಷ್ಮ ಅಂಶಗಳನ್ನು ವಿಶದ ಪಡಿಸುತ್ತಿದ್ದ. ಗಟಿಯ ವಾಙ್ಮಯದಲ್ಲಿಯ ಹಿರಿತನದಿಂದ ಮೈಮರೆಯುತ್ತಿದ್ದ. ಭಾರತೀಯ ಲೋಕವಾಙ್ಮಯದಲ್ಲಿಯ ಆತ್ಮೀಯತೆಯಿಂದ ಭಾವಪರವಶನಾದಂತೆ ಮಾತಾಡುತ್ತಿದ್ದ. ಇದೆಲ್ಲ ಸ್ನೇಹಭಾವನೆಯಿಂದಲೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಡೆದಿತ್ತು. ಗುರುಶಿಷ್ಯ ಸಂಬಂಧದಲ್ಲಿ ಅಲ್ಲ. ಶಿಕ್ಷಣವು ಕೊಡುವವನ ಮತ್ತು ಸ್ವೀಕರಿಸುವವ ಗೆಳೆತನದ ಪಾತಳಿಗೆ ಬಂದಾಗಲೇ ಅದು ಈ ಹೃದಯದಿಂದ ಆ ಹೃದಯಕ್ಕೆ ದಾಟುತ್ತದೆ. ಬೌದ್ಧಿಕಗಳು ರುಕ್ಷ. ಹಾರ್ದಿಕಗಳು ಬೇಕು; ಅವುಗಳಲ್ಲಿ ಜ್ಞಾನವು ದ್ರವಿಸಿ ಮನಸ್ಸಿನಲ್ಲಿ ಇಳಿದು ಬರುತ್ತದೆ. 'ಕಾವ್ಯಶಾಸ್ತ್ರವಿನೋದೇನ' ಎಂಬಲ್ಲಿಯ ವಿನೋದದ ಮಹತ್ವದ ಸ್ಥಾನವು ಇಂತಹ ಸಮಯದಲ್ಲಿ ಅರ್ಥವಾಗುತ್ತದೆ. ಕಾವ್ಯ, ಶಾಸ್ತ್ರಗಳು ಹಣೆಗೆ ಗಂಟುಗಳನ್ನಿಟ್ಟು ನಡೆದಾಗ ಆ ಚರ್ಚೆಗಳಿಂದ ಜ್ಞಾನಪ್ರದರ್ಶನದ ಅಹಂಕಾರವು ಹೊರಬರುವದು ಕಾಣುತ್ತದೆ. ಇವೆಲ್ಲ ನಗುನಗುತ್ತ ಸಾಗಿದಾಗಲೇ ಆ ಚರ್ಚೆಗಳು ರುಚಿಕರವಾಗುತ್ತವೆ, ಸುವಾಸಿಕವಾಗುತ್ತವೆ. ಡಾಕ್ಟರರು ವಿದ್ವಾಂಸರಾಗಿದ್ದರು, ಆದರೆ 'ಭಾರಿ' ಪಂಡಿತರಾಗಿರಲಿಲ್ಲ. ಭಾರಿತನವು ಮೇದವೃದ್ಧಿಯ ಲಕ್ಷಣ. ಅರಗದ ಅನ್ನದಿಂದ ಮೇದ ಉಂಟಾಗುತ್ತದೆ. ಅರಗದ ವಿದ್ವತ್ತೆಯಿಂದ ಪಾಂಡಿತ್ಯದ ಜಡತ್ವ ಒದಗುತ್ತದೆ. ಪಾಂಡಿತ್ಯವು ಅರಗಿದಾಗ ಪಂಡಿತನೂ ಕೂಡ ಎಷ್ಟು ಸಹಜವಾಗಿ ವ್ಯವಹರಿಸುತ್ತಾನೆಂಬುದು ಡಾಕ್ಟರ್‌ರಂತಹರೊಡನೆ ಮಾತಾಡಿದಾಗಲೇ ಅರಿವಾಗುತ್ತದೆ. ಸುತ್ತಲಿನ ಸಮುದಾಯವು ಸಣ್ಣದೇ ಇರಲಿ, ಅಥವಾ ಪ್ರಚಂಡ ಸಭೆಯೇ ಇರಲಿ, ಲೋಹಿಯಾ ಅವರ ಅಲ್ಲಿಯ ನಡೆನುಡಿಗಳಲ್ಲಿಯ ಸಹಜತೆಯು ವಿಲಕ್ಷಣವಾಗಿರುತ್ತಿತ್ತು. ಇನ್ನೊಬ್ಬರು ಹೇಳುವದನ್ನು ಕೇಳುವಾಗ ಅತ್ಯಂತ ಗಂಭೀರತೆಯಿಂದ, ಎಲ್ಲ ಶಕ್ತಿಗಳೂ ಶ್ರವಣೇಂದ್ರಿಯದಲ್ಲಿ ಒಂದುಗೂಡಿದಂತೆ ಕೇಳುತ್ತಿದ್ದರು. ಮಾತಾಡಲು ಆರಂಭ ಮಾಡಿದೊಡನೆ ಬಿಚ್ಚು ಬಯಲಾಗುತ್ತಿದ್ದರು.

ದಿಲ್ಲಿಗೆ ನಾನು ನಾಟ್ಯಪ್ರಯೋಗಗಳನ್ನು ಮಾಡಲು ಹೋಗಿದ್ದೆ. ಲೋಹಿಯಾ ಅವರು ಪ್ರಯೋಗಗಳನ್ನು ನೋಡಿದರು. ನನ್ನನ್ನೂ, ನನ್ನ ಎಲ್ಲ ಸಂಗಡಿಗ ಕಲಾವಿದರನ್ನೂ ತಮ್ಮ ಮನೆಗೆ ಚಹಪಾನಕ್ಕಾಗಿ ಕರೆದರು. ಅಲ್ಲಿ ಹೋದರೆ, ದಿಲ್ಲಿಯಲ್ಲಿಯ ಸಾಹಿತ್ಯ ಮತ್ತು ಕಲಾಕ್ಷೇತ್ರಗಳಲ್ಲಿಯ ನೂರು-ನೂರೈವತ್ತು ಹೆಸರಾದ ಜನರು ಹಾಜರಾಗಿದ್ದರು. ಮನೆಯ ಮುಂದಿನ ಹುಲ್ಲುಮೈದಾನದಲ್ಲಿ ಸಮೂಹ ನೆರೆದಿತ್ತು. ಈ ಸಂನ್ಯಾಸಿಯ ಮನೆಯಲ್ಲಿಯ, ಗೃಹಸ್ಥಾಶ್ರಮಿಯನ್ನೂ ನಾಚಿಸುವಂತಹ ಆತಿಥ್ಯವನ್ನು ನಾನೆಂದಿಗೂ ಮರೆಯಲಾರೆ. ಆ ಎಲ್ಲ ನೆಂಟರ ಆದರೋಪಚಾರಗಳನ್ನು ಸ್ವತ: ಮಾಡುತ್ತಿದ್ದರು ಆಗ್ರಹದಿಂದ. ಸಾಹಿತ್ಯ ಮತ್ತು ಇನ್ನಿತರ ಕಲೆಗಳಿಗೆ ಸಂಬಂಧಿಸಿದ ಚರ್ಚೆಗಳು ನಡೆದಿದ್ದವು. ರಾಜಕಾರಣದ ಮೇಲೆ ವಾದವಿವಾದಗಳು ಜರುಗಿದ್ದವು. ವಿವಿಧ ಮತಗಳ ಜನರು ಆ ಸಮಾರಂಭದಲ್ಲಿ ಪಾಲುಗೊಂಡಿದ್ದರು. ಲೋಹಿಯಾ ಅವರ ರಾಜಕೀಯ ಪಕ್ಷದೊಡನೆ ನನಗೆಷ್ಟೂ ಸಂಬಂಧವಿಲ್ಲ. ಅದು ಬರಬೇಕೆಂದು ಅವರು ಎಂದಿಗೂ ತಪ್ಪಿಕೂಡ ಸೂಚಿಸಲಿಲ್ಲ. ಅವರ ಕಲಾಭಿರುಚಿಯು ಉಚ್ಚಮಟ್ಟದ್ದಿತ್ತು. ಆದ್ದರಿಂದ ಕಲಾವಿದರನ್ನು ಪಕ್ಷದ ಪ್ರಚಾರದ ಕಿನ್ನರಿ ಬಾರಿಸಲು ಹಚ್ಚುವ ಕಲಾಹೀನ ವಿಚಾರವು ಅವರ ಮನಸ್ಸಿಗೆ ಸೋಂಕುವದೂ ಶಕ್ಯವಿರಲಿಲ್ಲ. ಅವರೊಂದಿಗೆ ಆದ ಭೆಟ್ಟಿಯಿಂದಾಗಿ ನನಗೆ ಮೇಲಿಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೇಲೆ ಅನಿಸುವದೇನೆಂದರೆ ಈ ಬಹಿರಂಗದಲ್ಲಿ ಒರಟಾದ ಮನುಷ್ಯನ ಅಂತರ್ಯಾಮದಲ್ಲಿಯ ಸೌಂದರ್ಯಾಸಕ್ತಿಯ ದರ್ಶನವನ್ನು ಅಧಿಕಾಧಿಕ ಜನರಿಗೆ ಮಾಡಿಕೊಡಬಹುದಾದರೂ ಹೇಗೆ? ಈ ಪುಸ್ತಕದ ಮೂಲಕ ಸ್ವಲ್ಪಮಟ್ಟಿಗೆ ಆ ಯೋಗ ಬಂದಿದೆ. ಆದರೆ ಅದೆಷ್ಟು ತಡವಾಗಿ!

ಉತ್ತಮ ಕಲಾನಂದಕ್ಕಾಗಿ ಹಾತೊರೆಯುವ ಲೋಹಿಯಾ, ಮಾನವತೆಯಿಂದ ತುಂಬಿ ತುಳುಕುವ ಲೋಹಿಯಾ, ತತ್ವಚಿಂತಕ ಲೋಹಿಯಾ, ಬುದ್ಧಿವಂತ ಲೋಹಿಯಾ, ಜೀವನಾಸಕ್ತ ಲೋಹಿಯಾ, ಹೀಗೆ ಸರ್ವಸಾಮಾನ್ಯ ಜನರಿಂದ ಮರೆಯಾಗಿದ್ದ ಅವರ ಅಂತರಂಗದ ವಿವಿಧ ರೂಪಗಳು ಮುಂದಿನ ಪುಟಗಳಲ್ಲಿ ಕಾಣಬಹುದು. ಈ ಲೇಖನಗಳಿಗೆ ರಾಜಕಾರಣದಿಂದ ದೊರೆತ 'ಪುರುಸತ್ತಿನ ಕೆಲಸ' ಎಂದು ಅವರು ಪರಿಹಾಸದಿಂದ ಅಂದಿದ್ದಾರೆ. ಇದು ಅವರ ಭಾಷೆಯಲ್ಲಿ ಒಂದು ಪ್ರಕಾರದ 'ಹುಡುಗಾಟಿಕೆ' (ಫ್ರಿವಾಲಿಟಿ) ಆಗಿದೆ. ಲೋಹಿಯಾ ಅವರೆಂದಿಗೂ ಮುಖದ ಮೇಲೆ ಮುಖವಾಡವನ್ನು ಧರಿಸಲಿಲ್ಲ; ಆದ್ದರಿಂದ ಅದನ್ನಿಳಿಸಿ ಬದಿಗಿಡುವ ಪ್ರಶ್ನೆಯೇ ಉದ್ಭವಿಸುವದಿಲ್ಲ. ಅವರ ಎಲ್ಲ ಕಾರುಭಾರು ಬಟ್ಟಬಯಲು. ಅವೆಷ್ಟೋ ಪರದೇಶೀಯ ಸಂಸ್ಕಾರಗಳನ್ನು ಅರಗಿಸಿ ಮನುಷ್ಯ ಅತ್ಯಂತ 'ದೇಶಿ'ಯಾಗಿದ್ದನು. ಒಳಗೆ - ಹೊರಗೆ ಬೇರೆಯಾಗಿರಲಿಲ್ಲ. ಮನಸ್ಸಿನಲ್ಲಿ ಬಂದದ್ದು, ಮುಖದಿಂದ ಹೊರಬಿತ್ತು - ಹಿಗಿತ್ತು ಅವರ ರೀತಿ. ಅಂದ ಬಳಿಕ ಆ ಪ್ರಹಾರ ನೆಹರೂ ಅವರ ಮೇಲೆಯೋ, ಇನ್ನುಳಿದ ಬೇರೆ ಯಾರ ಮೇಲೆಯೋ ಎನ್ನುವುದರ ಪರಿವೆ ಅವರಿಗೆ ಇರಲಿಲ್ಲ. ಹಟತೊಟ್ಟು ಪ್ರಿಯವಾಗುವ ಹಂಬಲ ಇರದವನಿಗೆ 'ಅಪ್ರಿಯ' ನಾಗುವ ಭೀತಿ ಏಕೆ? ಸ್ತ್ರೀಸೌಂದರ್ಯಕ್ಕೆ ಸುಮ್ಮನೆ ಉಚ್ಚ ಉದಾತ್ತತೆಯ ಪೊಳ್ಳು ಮಡಿವಸ್ತ್ರವನ್ನು ಉಡಿಸುವ ಪ್ರಯತ್ನವನ್ನು ಅವರೆಂದಿಗೂ ಮಾಡಲಿಲ್ಲ. ಝಗಝಗನೆ ಮಿನುಗುವ ಸೌಂದರ್ಯ ಮತ್ತು ಮನೆಯ ಒಳಅಂಕಣದಲ್ಲಿ ಉರಿಯುವ ಮಂದ ದೀಪದ ಬತ್ತಿಯಂತೆ ಮಿಣಮಿಣಸುವ ಸೌಂದರ್ಯ ಇವುಗಳಲ್ಲಿಯ ವ್ಯತ್ಯಾಸವನ್ನು ಅವರು ಅರಿತವರಾಗಿದ್ದರು. ಅಮೇರಿಕೆಯಲ್ಲಿ ಒಂದು ವ್ಯಾಖ್ಯಾನದ ಪ್ರಸಂಗದಲ್ಲಿ ಆ ಅಮೇರಿಕನ್ ಹೆಂಗಸರಿಗೆ, ಅಮೇರಿಕನ್ ಹೆಣ್ಣು ಹೇಗೆ ರಾಜಕನ್ಯೆಯಂತೆ ಥಳಥಳಿಸುತ್ತಾಳೆ ಎಂದು ಹೇಳಿದರು. ಮತ್ತು ಆ ಸಂದಣಿಯಲ್ಲಿ ನಟರಾಜ ವಶೀ ಅವರ ಪತ್ನಿ ಅವರ ಕಣ್ಣಿಗೆ ಬಿದ್ದಳು. ಆ ರಾಜಕನ್ಯೆಯವರ ಬೆಡಗಿನ ಸಮಾರಂಭದಲ್ಲಿ ಸೌಮ್ಯ, ಶೀತಲವಾದ ಸೌಂದರ್ಯವು ಅವರಿಗೆ ಕಂಡಿತು. ಆಗ ಒಮ್ಮೆಲೇ ಅವರು ಆ ಅಮೇರಿಕನ್ ಹೆಂಗಸರನ್ನುದ್ದೇಶಿಸಿ, ''ನೀವು ರಾಜಕನ್ನೆಯರು ನಿಜ. ಆದರೆ ನಮ್ಮ ಭಾರತೀಯ ಸ್ತ್ರೀಯರು ದೇವಕನ್ಯೆಯವರಂತೆ ಸುಂದರವಾಗಿರುತ್ತಾರೆ.'' ಎಂದರು. ನಮ್ಮ ಹೊಲಗದ್ದೆಗಳಲ್ಲಿ ಕಷ್ಟಪಡುವ 'ವಲ್ಕಲೇನಾಪಿ ತನ್ವೀ' ಎಂಬಂತೆ ಕಾಣುವ ನೂರಾರು ಕೃಷಿಕನ್ನೆಯರು, ಗಿರಿಜಾ, ಮತ್ಸ್ಯಗಂಧಾ ಇವರೆಲ್ಲರು ಯಾರ ಕಣ್ಮುಂದಿನಿಂದ ಥಟ್ಟನೆ ಹಾಯ್ದುಹೋಗಬಹುದೋ ಅಂತಹವರಿಗೆ ಮಾತ್ರ ಡಾಕ್ಟರರ ಈ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸೌಂದರ್ಯಚಿಕಿತ್ಸೆಯ ಮರ್ಮವು ಸಹಜವಾಗಿ ತಿಳಿಯಬಹುದು.

ಅಸಾಮಾನ್ಯ ಅನುಭೂತಿಗಳ ಅತ್ಯಂತ ಆಕರ್ಷಣೆ ಇದ್ದ ಮನುಷ್ಯ ಈತ. ಅಮೇರಿಕೆಗೆ ಹೋಗುವಾಗ ಗ್ರೇಟಾ ಗಾರ್ಬೋ ಮತ್ತು ಆಯಿನ್‌ಸ್ಟಾಯಿನ್ ಅವರನ್ನು ಭೆಟ್ಟಿಯಾಗುವ ತೀವ್ರ ಇಚ್ಛೆಯನ್ನು ಮನಸ್ಸಿನಲ್ಲಿಟ್ಟು ಹೋಗಿದ್ದ. ಎಲ್ಲ ಬದಿಗಳಿಂದಲೂ ತನ್ನ ಬಾಳನ್ನು ಪರಿಪೂರ್ಣವನ್ನಾಗಿ ಮಾಡಬೇಕೆನ್ನುವ ಹಠದ ಬೇರೆ ಇನ್ನಾವ ಉದಾಹರಣೆ ಬೇಕು? 'ಉತ್ಕಟ ಭವ್ಯವಲ್ಲವನ್ನೂ ಸ್ವೀಕರಿಸಬೇಕು, ಸಪ್ಪೆಯಾದುದನ್ನೆಲ್ಲ ತ್ಯಜಿಸಬೇಕು' ಎಂಬ ಸಮರ್ಥ ರಾಮದಾಸರ ಈ ಮಾತುಗಳಲ್ಲಿಯೇ ಅವರ ವ್ಯಕ್ತಿಮತ್ವದ ಸಾರವಿದೆ. ಖಾಸಗಿ ಇಲ್ಲವೆ ಸಾರ್ವಜನಿಕ ಜೀವನದಲ್ಲಿಯ ನಿಸ್ಸತ್ತ್ವತೆಯಿಂದ ಅವರು ಕೆರಳುತ್ತಿದ್ದರು. ದೇವರು ಮತ್ತು ದೈವ, ಎರಡೂ ದುರ್ಬಲರಿಗಾಗಿ ಘಾತಕವಾಗಿರುತ್ತವೆ. ರಾಜಕಾರಣದ ಅರ್ಥವನ್ನು ಈಗ ಕೇವಲ 'ಮುಚ್ಚುಮರೆಸುವ'ದರಲ್ಲೇ ಕಂಡುಕೊಳ್ಳುವ ಇಂದಿನ ಕಾಂಗ್ರೆಸ್‌ದೊಂದಿಗೆ ಇಂತಹ ಮನುಷ್ಯನು ಹೇಗೆ ಸರಿಹೊಂದುವನು? ಲೋಹಿಯಾ ಅವರ ಸ್ವಭಾವಕ್ಕೆ ಹೊಸ ಸಾಮಾಜಿಕ ಪರಿವರ್ತನೆಗಳು ಹಿತಕರವಾಗುವಂತಹವು. ಆದರೆ ಮೂಲಧಾರ ಮಾತ್ರ ಸಂಪೂರ್ಣ ಭಾರತೀಯ. "ರಾಮ, ಕೃಷ್ಣ ಮತ್ತು ಶಿವ ಎಂದರೆ ಭಾರತೀಯರಿಗೆ ಬಿದ್ದ ಪರಿಪೂರ್ಣತೆಯ ಕನಸುಗಳು." ಇಂತಹ ಸೂತ್ರಮಯ ವಾಕ್ಯವು ಅಕಾರಣವಾಗಿ ಬರುವದಿಲ್ಲ. ಈ ನಿಬಂಧದ ಕೊನೆಗಿರುವ ಅವರ ಪ್ರಾರ್ಥನೆಯಂತೂ ಸರಿಯಾಗಿ ವಿವೇಕಾನಂದರ ಸ್ಮರಣೆಯನ್ನೂ ತಂದುಕೊಡುತ್ತದೆ. ಭಾರತಮಾತೆಯ ಕಡೆಗೆ ಬಾಲಕನ ಆರ್ತತೆಯಿಂದ ಕೊಡುಗೆಯನ್ನು ಬೇಡುವ ವ್ಯಾಕುಲ ಲೋಹಿಯಾರವರ ದರ್ಶನವು ಅಲ್ಲಿಗಾಗುತ್ತದೆ.

"ಭಾರತಮಾತೆಯೇ, ನಮಗೆ ಶಿವನ ಮತಿಯನ್ನು ಕೊಡು, ಕೃಷ್ಣನ ಅಂತಕರಣವನ್ನು ಕೊಡು, ರಾಮನ ಕೃತಿಯನ್ನು ಕೊಡು. ಅಪರಿಮಿತ ಮನಸ್ಸನ್ನೂ ಕೊಟ್ಟು ನಮ್ಮನ್ನೂ ರೂಪಿಸು. ಉನ್ಮೇಷಶಾಲಿಯಾದ ಹೃದಯವನ್ನು ಕೊಡು. ಆದರೆ ಬದುಕಿನಲ್ಲಿ ಮಾತ್ರ ತಾಳ್ಮೆಯನ್ನು ದಯಪಾಲಿಸು."

ಉಪನಿಷತ್ ಕಾಲದಲ್ಲಿಯ ಋಷಿಗಳಾದರೂ ಬೇರೆಯದೇನನ್ನು ಬೇಡಿದ್ದರು? ಈ ಕಳವಳ ಸಂತರದು, ರಾಜಕಾರಣಿ ಮುಖಂಡನದಲ್ಲ. ಭಾರತೀಯರ ಸಾಂಸ್ಕೃತಿಕ ಪರಂಪರೆಯು ರಾಮ, ಕೃಷ್ಣ ಮತ್ತು ಶಿವ ಇವರಿಂದ ಬಂದುದು ಎಂದು ಹೇಳುವಾಗ ಲೋಹಿಯಾ ಅವರಿಗೆ ಸಮಾಜವಾದ ಅಡ್ಡಬರುವದಿಲ್ಲ. ಏಕೆಂದರೆ ಅವರಿಗೆ ರಾಮ, ಕೃಷ್ಣ ಮತ್ತು ಶಿವ ಈ ಜೀವನದ ಬಗೆಗಿದ್ದ ಮೂರು ದೃಷ್ಟಿಕೋನಗಳಲ್ಲಿ ವಿಶ್ವಾತ್ಮಕತೆಯು ಕಂಡುಬರುತ್ತದೆ. ಹಸಿ ಸೆಕ್ಯೂಲರ್ ಜನರಿಗೆ ಇವು ಹಿಂದೂ ದೇಶದ ಹೆಸರುಗಳೆಂದು ಅನಿಸಬಹುದು. ಅವುಗಳನ್ನು ಹೀಗೆ ಜಾಹೀರು ರೀತಿಯಿಂದ ಉಚ್ಚರಿಸುವದೇ? ಶಿವ ಶಿವಾ, ರಾಮ, ಗೋವಿಂದಾ !

ಪು.ಲ.ದೇಶಪಾಂಡೆ/೧೦೫

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಲೋಹಿಯಾ ಅವರು ಭಾರತೀಯ ತತ್ವಜ್ಞಾನದಲ್ಲಿಯ ಕರ್ಮಯೋಗವನ್ನು ಆಚರಿಸಿ ತೋರಿಸಿದರು. ಕಬೀರನ ಒಂದು ಪದ್ಯದಲ್ಲಿ ಅವನು, ''ತನ್ನ ಮನೆಯನ್ನು ಸುಟ್ಟು, ಅದರ ವಿಭೂತಿಯನ್ನು ಬಳಿದು ತಯಾರಾಗಿದ್ದವನೇ ನನ್ನ ಬೆನ್ನ ಹಿಂದೆ ಬರಬೇಕು'' ಎಂದು ಘೋಷಿಸಿದ್ದನು. ಮ.ಗಾಂಧಿಯವರ ಹಿಂದೆ ಆ ಕಾಲದಲ್ಲಿ ಅಸಂಖ್ಯ ಉಗ್ರತಪಸ್ವಿಗಳು ಹೊರಟರು. ಸತ್ತೆಯ ಮೇನಕೆ - ಉರ್ವಶಿಯರು ಅವುಗಳಲ್ಲಿಯ ಅನೇಕರ ತಪೋಭಂಗವನ್ನು ಮಾಡಿದರು. ವಿನೋಬಾ, ಜಯಪ್ರಕಾಶ, ಸಾನೇ ಗುರೂಜಿ, ಯುಸುಫ್ ಮೆಹೆರ ಅಲಿ, ಅಣ್ಣಾಸಾಹೇಬ ಸಹಸ್ರಬುದ್ಧೇ ಇವರಂತಹ ಅಪವಾದ ಸ್ವರೂಪ ತಪಸ್ವಿಗಳು ತಮ್ಮ ವ್ರತದಿಂದ ದೂರ ಸರಿಯಲಿಲ್ಲ. ''ಸಾಧನಾನಾಮ್ ಅನೇಕತಾ'' ಇರಬಹುದು; ಆದರೆ ತಪಸ್ಸು ಮುಂದುವರೆಯಿತು. ಲೋಹಿಯಾ ಅವರು ಇಂತಹ ಯಾತ್ರೆಯಲ್ಲಿಯ ಪಥಿಕರು. ಭಯವಿರಹಿತ ಚಿತ್ತ ಉಳ್ಳವರು. ಬೆನ್ನಹುರಿಗೆ ಮಣಿಯುವ ಅಭ್ಯಾಸವಿಲ್ಲದವರು. ಭಾರತವು ಸ್ವತಂತ್ರವಾಯಿತು. ಗೋವೆಯ ವ್ಯಥೆಯು ಚುಚ್ಚುತ್ತಿತ್ತು. ಆ ಪಾಶವಿ ಸತ್ತೆಯ ವಿರುದ್ಧ ಈ ಒಬ್ಬನೇ ಒಬ್ಬ ಮನುಷ್ಯನು ತೋಳನ್ನು ತಟ್ಟಿ ಎದುರಾದನು. ಗೋವೆಯ ಚಿಕ್ಕಪುಟ್ಟ ಮಕ್ಕಳೆಲ್ಲರೂ ಬಾಕಿಬಾಬ ಬೋರಕರ್‌ರ ಹಾಡನ್ನು ಹಾಡುತ್ತ ಸೆಟೆದು ನಿಂತರು, ''ಗೋಯಾಂತ್ ಲೋಹಿಯಾ ಆಯ್ಲೊ ರೇ'' (ಗೋವೆಯಲ್ಲಿ ಲೋಹಿಯಾ ಅವರು ಬಂದರೋ ಬಂದರು.) ''ಗೋವಿಂದಾ ಬಂದನೋ ಬಂದಾ, ಗೋಕುಳದಲ್ಲಿ ಆಯ್ತು ಆನಂದಾ.'' ಭೀತಿಯು ತೊಲಗದಿದ್ದರೆ ಆನಂದವಾಗುವದಿಲ್ಲ. ಹೊಟ್ಟೆಯ ಪಾತ್ರೆಯಲ್ಲಿ ಭೀತಿ ಇದ್ದರೆ ಆನಂದವು ಹುಳಿತಾಗುತ್ತದೆ. ಕಂಸನ ಭಯ ಹೋದಾಗಲೇ ಗೋಕುಳದಲ್ಲಿ ಆನಂದವಾಯಿತು. ಪೋರ್ತುಗೀಜರ ಭಯ ಕಳೆದೊಡನೆ ಗೋವೆಯಲ್ಲಿ ಆನಂದವಾಯಿತು. ಇಂದಿಗೆ ಪಣಜಿಯ ಬಂದರದ ಮೇಲೆ ಸಿಂಧುಸಾಗರದತ್ತ ದೃಷ್ಟಿಯನ್ನಿಟ್ಟ ವಿಗ್ರಹವನ್ನು ಸ್ಥಾಪಿಸಬೇಕು ಈ ಅಭಯಕಾರಿ ರಾಮಮನೋಹರ ಲೋಹಿಯಾ ಅವರದು! ಆದರೆ ಈ ಕೆಲಸವನ್ನು ಮಾಡುವವರು ಯಾರು? ಸಾರ್ವಜನಿಕ ಸ್ಮೃತಿಯು ಅತ್ಯಂತ ಹೆಳವಾಗಿರುತ್ತದೆ! ಲೋಹಿಯಾ ಅವರು ಭಯವಿಹೀನ, ವಾಸನಾರಹಿತ ಮತ್ತು ನೈರಾಶ್ಯವಿರದ ಮನಸ್ಸೇ ಯೋಗ್ಯ ವಿಚಾರ ಮಾಡುತ್ತದೆ ಎನ್ನುತ್ತಾರೆ. ಸತ್ಯದ ಉಪಾಸಕನ ಸಾಧನತ್ರಯಿ ಇದು. ಲೋಹಿಯಾ ಅವರ ಕಣ್ಣುಗಳಲ್ಲಿ ಈ ತರದ ನಿರ್ಭಯತೆ ಇತ್ತು. ಈ ಅಸಂಗ್ರಹ ವೃತ್ತಿಯ ಮನುಷ್ಯನು ಹಿಂದಿಟ್ಟ ಆಸ್ತಿ ಏನಾಗಿತ್ತು? ಐದೇಳು ಟ್ರಂಕುಗಳ ತುಂಬ ಪುಸ್ತಕಗಳು ಮತ್ತು ಅಸಂಖ್ಯ ಸ್ನೇಹಿತರು. ಬಳಿಗೆ ಸಂಗ್ರಹವಿದ್ದಿಲ್ಲ; ಆದ್ದರಿಂದ ಅಪಹರಣದ ಭೀತಿ ಇರಲಿಲ್ಲ. ಆದ್ದರಿಂದಲೇ ದಿಲ್ಲಿಯಲ್ಲಿಯ ಸತ್ತೆಗಾಗಿ ಮತ್ತು ಶ್ರೀಮಂತಿಕೆಗಾಗಿ ಹಾತೊರೆಯುವ ಸಂಧಿಸಾಧುಗಳ ಐತಿಹಾಸಿಕ ಕಾಲದಿಂದಲೂ ಇಂದಿನವರೆಗೆ ನಡೆದು ಬಂದ ಹೇಸಿಕೆ ಹುಟ್ಟಿಸುವ ಲೀಲೆಗಳನ್ನು ನೋಡಿ ಅವರೆಂದಿದ್ದಾರೆಃ '' ಈ ನಗರಭವಾನಿ (ವೇಶ್ಯೆ)ಯು ಗೆದ್ದವರ ಮುಂದೆ ತನ್ನ ಸ್ತನಗಳನ್ನು ಎಂದೆಂದಿಗೂ ಒಡ್ಡಿರುತ್ತಾಳೆ.'' ಭಿಕ್ಷಾಪಾತ್ರೆಯಲ್ಲಿ ಅನ್ನಧಾನ್ಯಗಳನ್ನು ಚೆಲ್ಲುವ ಪರದೇಶಿ ಚೆಲುವರ ಮುಂದೆ ಸಿಂಗರಿಸಲಿಕ್ಕೆ ಈಕೆ ತನಗಾಗಿ ನೀರಿನಂತೆ ಹಣವನ್ನು ಸೂರೆ ಮಾಡುತ್ತಾಳೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆದರೆ ಲಕ್ಷಾವಧಿ ಭಾರತೀಯ ನಾಗರಿಕರು ಒಂದುಗೂಡುವ ತೀರ್ಥಕ್ಷೇತ್ರಗಳಲ್ಲಿ ಆಧುನಿಕ ಕಕ್ಕಸಗಳ ಸೌಲಭ್ಯವೂ ಇಲ್ಲ, ಒಳ್ಳೆಯ ರಸ್ತೆಗಳೂ ಇಲ್ಲ. ದಿಲ್ಲಿಯಲ್ಲಿಯ ಚಾಣಕ್ಯಪುರಿ ಥಳಥಳನೆ ಹೊಳೆಯುತ್ತದೆ. ಆದರೆ ಈ ಸಾಕ್ಷಾತ್ ದೇವಪುರಿಗಳಲ್ಲಿ ಮಾತ್ರ ಉತ್ತಮ ಫ್ಲಶಿಂಗ್‌ದ ವ್ಯವಸ್ಥೆ ಮಾಡಬೇಕು, ಉಳಿಯಲಿಕ್ಕೆ ಸುಂದರ ಧರ್ಮಶಾಲೆಗಳನ್ನು ಕಟ್ಟಬೇಕು, ಆಧುನಿಕ ಸೌಕರ್ಯಗಳ ಲಾಭವು ನಮ್ಮ ಬಡ ಜನತೆಗೂ ಸಿಗಬೇಕು ಎಂಬ ಚಿಂತೆ, ಕಪ್ಪು ಗೌರವರ್ಣದ ಶೇಠಜಿಯವರನ್ನು ರಮಿಸುವ ವಾರಾಂಗನೆಯ ಸಂಸ್ಕೃತಿಯ ಜೋಪಾಸನೆಯನ್ನು ಮಾಡುತ್ತಿರುವ ದಿಲ್ಲಿಗೆ ಕಾಡುವದಿಲ್ಲ. ಕಾರಣವೇನೆಂದರೆ ದಿಲ್ಲಿಯು ಇಂದಿಗೂ ಮೊಗಲ್‌ಕಾಲದ್ದೇ ರಾಜಧಾನಿಯಾಗಿದೆ. ಅದು ಲೋಕಧಾನಿಯಾಗಿಲ್ಲ. ರಾಷ್ಟ್ರಪತಿಗಳ ಕೈಯಿಂದ ಶಾಲನ್ನು ತೊಡಿಸಿ ಶಾಲೆಯ ಮಾಸ್ತರರ ಸತ್ಕಾರವಾಗುತ್ತದೆ, ಆದರೆ ಅವರಿಗೆ ಉಳಿದುಕೊಳ್ಳಲು 'ಅಶೋಕ್ ಹಾಟೆಲ್' ಸರಕಾರಿಯಾಗಿದ್ದರೂ ಸಿಗುವದಿಲ್ಲ. 'ಗುರುರ್ ಬ್ರಹ್ಮಾ' ನನ್ನು ಚಳಿಮಳೆಯಲ್ಲಿಯೂ ಹರಕಲು ತಂಬುವಿನಲ್ಲಿ ಕಳಿಸಲಾಗುತ್ತದೆ. ಗೌರವರ್ಣದ ಅತಿಥಿಗಳ ಸುವ್ಯವಸ್ಥೆ ಮಾತ್ರ ಅಶೋಕ್ ಹಾಟೆಲಿನಲ್ಲಿ! ಏಕೆಂದರೆ ಅವರು ಖುಷಿಯಿಂದ ಕೊಡುವ ಬಕ್ಷೀಸು ಡಾಲರ್ಸ್ ಇಲ್ಲವೆ ರೂಬಲ್ಸ್‌ನಲ್ಲಿ. ಅಲ್ಲದೆ, ತೀರ್ಥಕ್ಷೇತ್ರಗಳಲ್ಲಿ ಲಕ್ಷಾವಧಿ ಭಾರತೀಯರು ಒಂದುಗೂಡಿದರೂ ಅವರೆಲ್ಲರೂ ಮುಖ್ಯವಾಗಿ ಹಿಂದೂ ! ನಿಧರ್ಮಿಯಾದ ರಾಜ್ಯದಲ್ಲಿ ಅವರಿಗಾಗಿ ಸೌಕರ್ಯಗಳನ್ನು ಒದಗಿಸಿದರೆ ಕುಲಕ್ಕೆ ಕಲಂಕ ಹತ್ತೀತು! ಮಿಶನರಿಗಳ ಶಾಲೆಗಳಲ್ಲಿ ರಾಷ್ಟ್ರದ್ರೋಹದ, ಸಕ್ಕರೆಯ ಆವರಣವನ್ನು ಹಾಕಿದ ಪಾಠಗಳನ್ನು ಕಲಿಸಲಾಗುತ್ತವೆ ಎಂದು ಬರೆಯಲು ಲೋಹಿಯಾ ಅವರು ಹಿಂಜರಿಯಲಿಲ್ಲ. ಹಿಂದೂ ಜನರಲ್ಲಿಯ ಜಾತಿಭೇದದ ಬಗೆಗೆ ಅವರಿಗಿರುವ ಜಿಗುಪ್ಸೆಯನ್ನೂ ಅವರು ಸಂದಿಗ್ಧ ಶಬ್ದಗಳಲ್ಲಿ ವ್ಯಕ್ತಮಾಡಿದ್ದಾರೆ. ಮುಜಗರು ಮಾಡುವ ಪ್ರಯೋಜನ ಅವರಿಗಿರಲಿಲ್ಲ. ಕಾರಾಗೃಹದಲ್ಲಿಯ ಕಷ್ಟಗಳನ್ನು ಸಹಿಸುತ್ತ ಅವರಿಗೆ ಯೋಗಸಾಧನೆ ಅವಗತವಾಗಿತ್ತು. "ಶುಚಿನಾಂ ಶ್ರೀಮತಾಂ ಗೇಹೆ ಯೋಗ ಭ್ರಷ್ಟೋಭಿಜಾಯತೇ " ಎಂಬ ಗೀತೆಯಲ್ಲಿಯ ವಚನವು ಇಲ್ಲಿಗೆ ನೆನಪಾಗುತ್ತದೆ. ಶಂಕರಾಚಾರ್ಯ, ರಾಮ,ಕೃಷ್ಣ, ಇವರಂತಹ ಶುಚಿ ಮತ್ತು ಶ್ರೀಮತ್ ವಿಭೂತಿಗಳ ಮನೆಯಾಗಿದ್ದುದು ನಮ್ಮ ದೇಶ. ಪೂರ್ವ, ಪಶ್ಚಿಮ, ದಕ್ಷಿಣ, ಉತ್ತರ - ಹೀಗೆ ನಾಲ್ಕು ದಿಕ್ಕುಗಳು ಒಂದೇ ಅದ್ವೈತ ತತ್ವಜ್ಞಾನದಿಂದ ಪ್ರಭಾವಿತಗೊಂಡ ಖಂಡಪ್ರಾಯ ಈ ಅಖಂಡ ಭಾರತಭೂಮಿಯಿಂದು, "ಯಮುನೆಯ ದಡದಲ್ಲಿ ಹುಟ್ಟಿದ ಕೃಷ್ಣನ ಅಂತ್ಯವು ದ್ವಾರಕಾನಗರಿಯ ಸಮುದ್ರದಂಡೆಯಲ್ಲಾದರೆ ಆ ಸಮುದ್ರ ತೀರದ ಮೇಲೆ ಜನ್ಮ ತಾಳಿದ ಮೋಹನದಾಸನ ದೇಹಾಂತವು ಯಮುನೆಯ ಅಂಚಿನಲ್ಲಿ" ಎನ್ನುವಂತಹ ಯೋಗವು ಪೂರ್ವ ಪಶ್ಚಿಮಗಳನ್ನು ಸಂಧಿಸಿಬಿಡುತ್ತದೆ. ಕೇರಳದಲ್ಲಿಯ ಕಾಲಡಿಯ ಒಬ್ಬ ಮಹಾನ್ ನಂಬುದ್ರಿ, ಕಾಶ್ಮೀರಿನಲ್ಲಿಯ ಶ್ರೀನಗರದಲ್ಲಿ ಶಂಕರನಿಗೆ ಸ್ತೋತ್ರಾಭಿಷೇಕವನ್ನು ಮಾಡಿ ಉತ್ತರ ದಕ್ಷಿಣಗಳನ್ನು ಜೋಡಿಸುತ್ತಾನೆ. ಇಂತಹ ಈ ದೇಶದ ಅಖಂಡತ್ವಕ್ಕೆ ರಾಮ, ಕೃಷ್ಣ, ಶಿವ ಇವರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಮನ್ವಯದ ತತ್ವಜ್ಞಾನದಿಂದ ಒಂದುಗೂಡಿಸಬೇಕಲ್ಲದೆ ಮತ್ತಾವುದರಿಂದ? ಮನಸ್ಸು ಒಂದುಗೂಡಬೇಕಾಗುತ್ತದೆ, ಮತ್ತು ಮನಸ್ಸನ್ನು ಒಂದುಗೂಡಿಸಬೇಕಾದರೆ ತತ್ವಜ್ಞಾನದಂತಹ ಬೇರೆ ಸಿಮೆಂಟಿಲ್ಲ . ಇದನ್ನು ಕಂಡು ಕೊಂಡವರ ಬದುಕು ನಿಜವಾದ ಅರ್ಥದಲ್ಲಿ ಶ್ರೀಮಂತವಾಗುತ್ತದೆ. ಎಲ್ಲ ಭಾರತೀಯರ ನಿಷ್ಕ್ರಿಯತೆಯನ್ನು ಝಾಡಿಸಿ ಅವರನ್ನು ಒಂದೆಡೆಗೆ ತರುವ ಶಿವರಾಯನನ್ನು ಸಮರ್ಥರು ಶ್ರೀಮಾನ್ ಯೋಗಿ ಎಂದಿದ್ದಾರೆ; ಅದು ಈ ಅರ್ಥದಿಂದಲೇ.

ಇಂತಹ ಅಧ್ಯಾತ್ಮಿಕ ಮತ್ತು ಸೌಂದರ್ಯಸಂಚಯ ಮಾಡುವ ಶ್ರೀಮಂತಿಕೆಯ ಅಸಂಖ್ಯ ಪ್ರಮಾಣಗಳು ಮುಂದಿನ ಪುಟಗಳಲ್ಲಿ ಅಡಿಗಡಿಗೆ ಹರಡಿವೆ. ಶ್ರೀಪಾದರಾವ್ ಕೇಳಕರ್ ಮತ್ತು ಅವರ ಸಹಧರ್ಮಚಾರಿಣಿ ಸೌ. ಇಂದೂತಾಯಿ ಕೇಳಕರ್ ಇವರು ಲೋಹಿಯಾ ಅವರ ಈ ವಿಚಾರಧನವನ್ನು ಮರಾಠಿಯಲ್ಲಿ ತಂದಿದ್ದಾರೆ. ಮರಾಠಿ ತಿಳಿಯುವ ವಾಚಕರ ಮೇಲೆ ಅವರು ಉಪಕಾರ ಮಾಡಿದ್ದಾರೆ. ಈ ಲೇಖನಗಳನ್ನು ನಾನು ಮೊದಲು ಇಂಗ್ಲಿಷ್‌ನಲ್ಲಿ ಓದಿದ್ದೆನು. ಡಾಕ್ಟರರ ಇಂಗ್ಲಿಷ್ ಶೈಲಿಯು ವಿಲಕ್ಷಣ ಆಕರ್ಷಕವಾಗಿದೆ. ಲೇಖನಗಳನ್ನೋದುವಾಗ ತಮ್ಮ ಭೇಧಕ ಕಣ್ಣುಗಳಿಂದ, ತುಟಿಗಳನ್ನು ತುಂಟತನದಿಂದ ತಿರುಚುತ್ತ, ಆ ದಪ್ಪ ಹುಬ್ಬುಗಳನ್ನು ಬಗ್ಗಿಸುತ್ತ, ಹಿಗ್ಗಿಸುತ್ತ ಮಾತಾಡುವ ಲೋಹಿಯಾ ಅವರು ಸತತವಾಗಿ ನನ್ನ ಕಣ್ಮುಂದೆ ಬರುತ್ತಿದ್ದರು. ಅತ್ಯಂತ ಪಾರದರ್ಶಕವಾದ ಅವರ ಲೇಖನ ಇದು.

ದಿಲ್ಲಿಯಲ್ಲಿ ಅವರೊಂದಿಗೆ ಆದ ನನ್ನ ಕೊನೆಯ ಭೆಟ್ಟಿಯಲ್ಲಿ ಅವರು ನನ್ನ ಮನೆಗೆ ಬರುವ ವಚನ ನೀಡಿದ್ದರು. ಅವರು ಹೀಗೆ ಕೇವಲ ಪುಸ್ತಕದ ಬೀರಿನಲ್ಲಿ ಬಂದು ವಾಸಿಸಬಹುದು ಮತ್ತು ಬರಿಯೆ ಪುಟಗಳ ಹಿಂದಿನಿಂದಲೇ ಮಾತಾಡುತ್ತ ಇರಬಹುದೆಂಬುದು ನನ್ನ ಕನಸಿನಲ್ಲಿಯೂ ಬಂದಿರಲಿಲ್ಲ. ಈಗ ಅವರ ಸಹವಾಸದಲ್ಲಿ ರಾತ್ರಿಯನ್ನು ಕಳೆಯುವದೆಂದರೆ ಅವರ ಪುಸ್ತಕಗಳನ್ನು ತೆರೆದು ಕೂತುಕೊಳ್ಳುವದು, ಮಾನಸಪೂಜೆಯಂತೆ ಮಾನಸಭೆಟ್ಟಿಯನ್ನು ಪಡೆಯುವದು, ಎಂದಿಷ್ಟೇ ಉಳಿದಿದೆ. ಅವರ ನಿಧನದ ಬಗ್ಗೆ ಶೋಕ ಮಾಡುವದು ನಮ್ಮ ಧರ್ಮಶಾಸ್ತ್ರಗಳ ವಿರುದ್ಧವಾಗುತ್ತದೆ. ಸಂನ್ಯಾಸಿಯ ಮೃತ್ಯುವಿಗಾಗಿ ಶೋಕ ಮಾಡಲಾಗದು. ಅವರ ಅಮರತ್ವವನ್ನು ಅಲ್ಲಗಳೆದಂತಾಗುತ್ತದೆ. ದು:ಖ ಒಂದೇ ಘಟನೆಯದು. ಕಾಲಪುರುಷನಿಗೆ ಎಂದಿಗೂ ಅಳುಕದ, ಅಷ್ಟೇ ಏಕೆ, ನನ್ನದೂ ನಿನ್ನದೂ ಒಂದು ಅಲ್ಪ ಭೆಟ್ಟಿಯಾಯಿತು ಎಂದು ಅವನನ್ನು ದ್ವೇಶಿಸಿ ಹೇಳುವ, ಯೋಗಿಯ ಅಲಿಪ್ತತನದ ಬಾಳಿನಲ್ಲಿ ನಲಿಯುವ ಈ ಮನುಷ್ಯನನ್ನು ಮರಣದ ದಾರಿಯಲ್ಲಿ ಒಯ್ಯುವ ಅವಸರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆ ಕಾಲಪುರುಷನಿಗೆ ಇಷ್ಟೇಕೆ ಆಗಿತ್ತು? ಅಂತೂ ಕಾಲವು ಇಂತಹದೇನನ್ನಾದರೂ ವಿಪರೀತ ಮಾಡದಿದ್ದರೆ, ''ಕಾಲಾಯ ತಸ್ಮೈ ನಮಃ'' ಎಂದು ಅವನಿಗೆ ಕಡ್ಡಾಯದ ನಮಸ್ಕಾರವನ್ನಾದರೂ ಯಾರು ಮಾಡುವರು? ಸತ್ತಾಧೀಶರ ಕೆಟ್ಟ ಚಾಳಿಗಳು ಅವನಿಗೂ ಅಂಟಿವೆ.

ಶ್ರೀಮತಿ ಇಂದೂತಾಯೀ ಕೇಳಕರ
ಅವರು ಬರೆದ ಡಾ. ಲೋಹಿಯಾ
ಅವರ ಚರಿತ್ರೆಯ ಮುನ್ನುಡಿ

-ಆನಂದ ವರ್ಟಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಖಾರಾಮ ಗಟಣೆ

''ಸರ್, ಈ ಪೇಡೆ ಸ್ವೀಕರಿಸಿರಿ'' ಸಖಾರಾಮ ಗಟಣೆ ನನ್ನ ಕೈಯ್ಯಲ್ಲಿ ಒಂದು ಪುಡಿಕೆಯನ್ನಿತ್ತ.

''ಪೇಡೆ ಯಾಕೋ?''

''ಪ್ರಾಜ್ಞದ ಪರೀಕ್ಷೆಯಲ್ಲಿ ನಾನು ಉತ್ತೀರ್ಣನಾದೆ ಸರ್''

''ಹೌದಾ?'' ಪ್ರಾಜ್ಞ ಪರೀಕ್ಷೆಯ ಮಟ್ಟವನ್ನರಿಯಲು ನನಗೆ ಹೆಚ್ಚು ಸಮಯ ಬೇಕಾಗಲಿಲ್ಲ.

'' ಎಷ್ಟು ಪರ್ಸೆಂಟ್ ಮಾರ್ಕುಗಳು ದೊರೆತವು?''

''ಇನ್ನೂ ಅಂಕಗಳ ವಿವರ ತಿಳಿದಿಲ್ಲ ಸರ್. ತಿಳಿದೊಡನೆಯೇ ಹೇಳುವೆ. ಆದರೆ ಪ್ರತಿಶತ ಅರವತ್ತೈದರಷ್ಟಾದರೂ ಖಂಡಿತ ದೊರಕಬಹುದು''.

ಸಖಾರಾಮ ಗಟಣೆ ಪ್ರಾಜ್ಞ ಮರಾಠಿಯಲ್ಲಿ ಮಾತನಾಡುವವ. ಮಳೆಗಾಲದಲ್ಲಿ ರಸ್ತೆಯಲ್ಲಿ ಕಂಡ ಒಂದು ದೀನವಾದ ನಾಯಿಮರಿಯನ್ನೆತ್ತಿ ಮನೆಗೆ ತಂದಂತೆ ನನ್ನ ಹಾಗೂ ಗಟಣೆಯ ಯೋಗ ಕೂಡಿಬಂದಿತ್ತು. ಮುಖ ನೋಡಿದರೆ ಕರುಣಾಭಾವಕ್ಕಿಂತ ಬೇರೆ ಯಾವುದೇ ಭಾವನೆಗಳು ಜಾಗೃತವಾಗದಂತಹ ಕಾರುಣ್ಯಜನಕರಲ್ಲಿ ಆತ ಒಬ್ಬ. ಜನರಾದರೂ ಹುಟ್ಟುವಾಗಲೇ ವಿವಿಧವಾದ ಭಾವನೆಗಳನ್ನು ಮುಖದ ಮೇಲೆ ಪ್ರಕಟಿಸಿಕೊಂಡೇ ಹುಟ್ಟುತ್ತಾರೋ ಏನೋ! ಕೆಲವರು ಸದಾ ಕಾಲವು ಅನಾಥಾಲಯದ ಚಂದಾ ಬೇಡಲು ಬಂದವರಂತೆ, ಕೆಲವರು ಅದೇ ತಾನೇ ಬಸ್ ತಪ್ಪಿಸಿಕೊಂಡವರಂತೆ ಆದರೆ ಇನ್ನು ಹಲವರು ಯಾವಾಗಲೂ ಆಶ್ಚರ್ಯಚಕಿತರಾದವರಂತೆ ಕೆಲವರು ಸದೈವ ಆಲೋಚನಾ ಮಗ್ನರಾದವರಂತೆ, ಇನ್ನೂ ಕೆಲವರು ನಿಷ್ಕಾರಣವಾಗಿ ಗಂಟು ಮೋರೆ ಹಾಕಿದಂತೆ ಇರುವರು. ಸಖಾರಾಮ ಗಟಣೆಯ ಮುಖ ಗಾಳಿ ಹೋದ ಫುಟ್ ಬಾಲಿನಂತಿದೆ. ಅವನನ್ನು ನಾನು ಮೊದಲು ಸಲ ಭೆಟ್ಟಿಯಾದಾಗಲೂ ಆತನ ಮುಖ ಹಾಗೆಯೇ ಇತ್ತು. ಹಾಗೆ ನೋಡಿದರೆ ಆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹುಡುಗ ನನ್ನ ಸಂಬಂಧಿಕನಲ್ಲ. ಒಂದು ಸಲ ನನ್ನ ಭಾಷಣದ ನಂತರ ಆತನ ಪರಿಚಯವಾಯಿತು. ಆಗ ಆತ ಮೆಟ್ರಿಕ್ ಕ್ಲಾಸಿನಲ್ಲಿದ್ದ. ಅರ್ಧ ಚಡ್ಡಿಯೊಳಗೆ ಬಿಳಿ ಅಂಗಿಯನ್ನು ಸಿಕ್ಕಿಸಿಕೊಂಡು ಮೂಗಿನ ಮೇಲೆ ಸರಳವಾಗಿ ಗಾಂಧಿ ಟೊಪ್ಪಿಗೆ ಹಾಕಿದ, ಭಾವಶೂನ್ಯವಾದ ಸಣ್ಣ ಕಣ್ಣುಗಳುಳ್ಳ, ಕಪ್ಪು ಬಣ್ಣದ ಸೊಟ್ಟ ಸೊಟ್ಟ ಹಲ್ಲುಗಳುಳ್ಳ ಈ ಹುಡುಗ ಆ ಹಾಲ್‌ನ ಬಾಗಿಲಲ್ಲಿ ನಿಂತಿದ್ದ. ನಾನು ಹಾರ ತುರಾಯಿ ತೆಗೆದುಕೊಂಡು ಹೊರಗೆ ಬರುತ್ತಿದ್ದಂತೆಯೇ ನನ್ನ ಗಮನ ಆತನ ಕಡೆ ಹರಿಯಿತು. ಆತನು ನನಗೆ ಆದರಪೂರ್ವಕವಾಗಿ ನಮಸ್ಕರಿಸಿದ.

'ಹಸ್ತಾಕ್ಷರ ಸರ್' ಎನ್ನುತ್ತಾ ತನ್ನ ಟಿಪ್ಪಣಿ ಪುಸ್ತಕವನ್ನು ಮುಂದೆ ಮಾಡಿದ.

''ಇಲ್ಲಪ್ಪಾ, ನಾನೇನು ಹಸ್ತಾಕ್ಷರವನ್ನು ಕೊಡುವುದಿಲ್ಲ'' ನಾನು ಸ್ವಲ್ಪ ರೇಗಿದೆ.

''ತಮ್ಮ ಇಚ್ಛೆ ಸರ್''

ಆತ ತನ್ನೆರಡೂ ಕೈಗಳನ್ನು ಮುಗಿದು ದೇವರಿಗೆ ನಮಸ್ಕರಿಸುವಂತೆ ನನಗೆ ನಮಸ್ಕಾರ ಮಾಡಿದ. ಮತ್ತೆ ಯಾರಾದರೂ ನನಗೆ ಆ ರೀತಿ ನಮಸ್ಕಾರ ಮಾಡಿದ್ದರೆ ನಾನು ವಿಪರೀತ ಕೋಪಗೊಳ್ಳುತ್ತಿದ್ದೆ. ಆದರೆ ಸಖಾರಾಮ ಗಟಣೆಯ ನಮಸ್ಕಾರ ಎಷ್ಟೊಂದು ಪ್ರಾಮಾಣಿಕವಾಗಿತ್ತೆಂದರೆ ಅದು ನನ್ನ ಮನಸ್ಸಿನಾಳಕ್ಕೆ ತಲುಪಿತು. ನಾನು ಹಸ್ತಾಕ್ಷರವನ್ನು ಕೊಡಲು ತಿರಸ್ಕರಿಸುವುದು ಇದೇನೂ ಮೊದಲಸಲವಾಗಿರಲಿಲ್ಲ. ನಾನು ಯಾವಾಗಲೂ ಅದನ್ನು ತಿರಸ್ಕರಿಸುತ್ತೇನೆಂದಲ್ಲ. ಆದರೆ ಒಮ್ಮೊಮ್ಮೆ ಚಿಕ್ಕವರೆದುರು ಕಾರಣವಿಲ್ಲದಿದ್ದರೂ ದೊಡ್ಡಸ್ತಿಕೆ ತೋರಿಸುವ ಇಚ್ಛೆಯಾಗುವುದು. ಹಸ್ತಾಕ್ಷರವನ್ನು ಕೊಡುವುದರಲ್ಲಿ ಅರ್ಥವಿಲ್ಲವೆಂಬುದು ನಿಜ. ಆದರೆ ಕೊಡದಿರುವುದರಲ್ಲಿಯೂ ವಿಶೇಷ ಅರ್ಥವಿದೆಯೆಂದು ಅನ್ನಿಸುವದಿಲ್ಲ. ಸಖಾರಾಮ ಗಟಣೆ ಮೂಲೆಯಲ್ಲಿ ನಿಂತಿದ್ದ. ಅಷ್ಟರಲ್ಲಿ ಸಂಸ್ಥೆಯ ಸೆಕ್ರೆಟರಿ ಒಂದು ದೊಡ್ಡ ರಿಜಿಸ್ಟರ್ ಹಿಡಿದುಕೊಂಡು ನನ್ನ ಹತ್ತಿರ ಬಂದರು.

''ಸಂಸ್ಥೆಯನ್ನು ಸಂದರ್ಶಿಸುವ ಮಹನೀಯರ ಸಹಿಯನ್ನು ನಾವು ಈ ಪುಸ್ತಕದಲ್ಲಿ ಸಂಗ್ರಹಿಸುತ್ತೇವೆ. ಪುಣೆಯಲ್ಲಿದ್ದು ಕೂಡ ತಮ್ಮ ಭೇಟಿಯ ಯೋಗವು ಇಂದು ಒದಗಿತು.''

ನಾನು ಆ ರಿಜಿಸ್ಟರನ್ನು ನೋಡತೊಡಗಿದೆ. ಅನೇಕರು ಈ ಸಂಸ್ಥೆಯನ್ನು ನೋಡಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದ್ದರು. ನಾನು ಕೂಡಾ ಅಸಂತೋಷವನ್ನು ವ್ಯಕ್ತಪಡಿಸುವಂತಹದೇನೂ ನಡೆದಿರಲಿಲ್ಲವೆಂದು ನಾಲ್ಕಾರು ವಾಕ್ಯಗಳಲ್ಲಿ ನನಗಾದ ಆನಂದವನ್ನು ವ್ಯಕ್ತಪಡಿಸಿದೆ. ಆಮೇಲೆ ಕಾರ್ಯಕಾರೀ ಸದಸ್ಯರೊಂದಿಗೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಚಹಾಪಾನವಾಯಿತು. (ಗ್ಲೊಕೋ ಬಿಸ್ಕಿಟುಗಳು, ಚೂಡಾ ಹಾಗೂ ಬಾಳೆಯ ಹಣ್ಣು!!) ಸದಸ್ಯರ ಸಾಧಾರಣ ದರ್ಜೆಯ ಹಾಸ್ಯ ಚಟಾಕಿಗಳನ್ನು ಸಹಿಸುತ್ತಿದ್ದೆ. ಆದರೆ ತನ್ನ ಟಿಪ್ಪಣಿ ಪುಸ್ತಕವನ್ನು ಗಟ್ಟಿಯಾಗಿ ಹಿಡಿದುಕೊಂಡು ಹೊರಗೆ ನಿಂತಿದ್ದ ಸಖಾರಾಮ ಗಟಣೆ ನನ್ನನ್ನು ನಿಷ್ಕಾರಣವಾಗಿ ಅಸ್ವಸ್ಥಗೊಳಿಸುತ್ತಿದ್ದ. ಆತ ಅನಿಮಿಷ ನೇತ್ರಗಳಿಂದ ಒಳಗೆ ನೋಡುತ್ತಿದ್ದ. ಆ ಕಟ್ಟಡದ ಉದ್ದವಾದ ವರಾಂಡಾದಲ್ಲಿ ಒಂದು ಮೂಲೆಯಲ್ಲಿ ನಿಂತಿದ್ದ ಆ ನಾಲ್ಕು ನಾಲ್ಕುವರೆ ಅಡಿಯ ಜೀವ ಒಂದು ಪೂರಕೆಯನ್ನಿಟ್ಟಂತೆ ತೋರುತ್ತಿತ್ತು. ಆ ಹುಡುಗನ ಕಡೆ ನೋಡಬಾರದೆಂದು ನಾನು ಹತ್ತು - ಹನ್ನೆರಡು ಸಲ ನಿಶ್ಚಯಿಸಿದೆ. ಆದರೆ ಆ ದೃಷ್ಟಿ ತಾನಾಗಿಯೇ ಅತ್ತ ಕಡೆಗೆ ಹೊರಳುತ್ತಿತ್ತು. ಸ್ವಲ್ಪ ಹೊತ್ತಿನ ನಂತರ ಆ ಹುಡುಗನು ಆ ರೀತಿಯಾಗಿ ಅಲ್ಲಿ ನಿಂತಿರುವುದು ನನಗೆ ಅಸಹನೀಯವಾಯಿತು. ಅಂತೆಯೇ ನಾನು ಕಾರ್ಯದರ್ಶಿಯವರಿಗೆ ಆತನನ್ನು ಒಳಗೆ ಕರೆಯಲು ಹೇಳಿದೆ.

''ಯಾರನ್ನು? ಸಖ್ಯಾನನ್ನೆ?'' ಸೆಕ್ರೆಟರಿ ಆಶ್ಚರ್ಯದಿಂದ ಕೇಳಿದರು.

''ನನಗೆ ಆತನ ಹೆಸರು ಗೊತ್ತಿಲ್ಲ; ಆದರೆ ಅಲ್ಲಿ ನಿಂತಿರುವನಲ್ಲ ಅವನೇ''

''ಅವನೇ ಸಖ್ಯಾ...ಏ ಗಟಣೇ''

ಇಷ್ಟು ದೂರದಿಂದಲೂ ಸಖಾರಾಮ ಗಟಣೆಯ ಬೆದರುವಿಕೆ ನನಗೆ ಕಾಣಿಸಿತು. ಆತ ಅಷ್ಟೊಂದು ತೀವ್ರವಾಗಿ ಬೆದರಿದ. ಒಬ್ಬ ಅಪರಾಧಿಯಂತೆ ಆತ ನನ್ನೆದುರಿಗೆ ಬಂದು ನಿಂತ. ''ನಿನ್ನ ಹೆಸರೇನು ತಮ್ಮ''? ಸಾಧ್ಯವಿದ್ದಷ್ಟು ಮೆತ್ತಗಿನ ಸ್ವರದಿಂದ ನಾನು ಕೇಳಿದೆ.

''ಸಖಾರಾಮ ಅಪ್ಪಾಜಿ ಗಟಣೆ''

''ಈತನ ಅಕ್ಷರ ತುಂಬಾ ಚೆನ್ನಾಗಿದೆ ಸರ್. ನಮ್ಮ ಭಾಷಣ ಮಾಲೆಯ ಜಾಹಿರಾತುಗಳನ್ನು ಇವನೇ ಬರೆಯುವನು. ಈತನ ತಂದೆಯವರು ಅಪ್ಪಾ ಬಳವಂತ ಚೌಕಿನಲ್ಲಿ ಸಾಯಿನ್ ಬೋರ್ಡ್ ಪೆಂಟಿಂಗ್‌ನ ಅಂಗಡಿಯಿಟ್ಟಿದ್ದಾರೆ.''

''ಅಲ್ಲಪ್ಪಾ, ನಿನ್ನ ಅಕ್ಷರವೇ ಇಷ್ಟು ಚೆನ್ನಾಗಿದ್ದರೆ ಮತ್ತೆ ಬೇರೆಯವರ ಹಸ್ತಾಕ್ಷರವನ್ನೇಕೆ ಸಂಗ್ರಹಿಸುತ್ತಿಯೋ?'' ಈ ವಾಕ್ಯದಲ್ಲಿ ಜೋರಾಗಿ ನಗುವಂತಹದೇನೂ ಇರಲಿಲ್ಲ. ಆದರೂ ಮೆನೆಜಿಂಗ್ ಕಮಿಟಿಯ ಎಲ್ಲಾ ಸದಸ್ಯರು ನಕ್ಕರು. '' ಯಾರ್‍ಯಾರ ಹಸ್ತಾಕ್ಷರಗಳನ್ನು ಸಂಗ್ರಹಿಸಿರುವಿ ನೋಡುವಾ''

''ನಾನು ಕೇವಲ ಸಾಹಿತಿಗಳ ಹಸ್ತಾಕ್ಷರಗಳನ್ನಷ್ಟೇ ಸಂಗ್ರಹಿಸುವೆ'' ಹಸ್ತಾಕ್ಷರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಗ್ರಹಿಸಿದ ಪುಸ್ತಕವನ್ನು ನನ್ನ ಕೈಯಲ್ಲಿಡುತ್ತಾ ಸಖಾರಾಮ ಗಟಣೆ ಹೇಳಿದ.

ಆತನ ಸಂಗ್ರಹವನ್ನು ನಾನು ನೋಡತೊಡಗಿದೆ. ಪ್ರತಿಯೊಬ್ಬ ಸಾಹಿತಿಯ ಲೇಖನದಿಂದ ಒಂದೊಂದು ವಾಕ್ಯವನ್ನಾರಿಸಿ ಆಯಾ ವಾಕ್ಯಗಳ ಕೆಳಗೆ ಗಟಣೆಯು ಆಯಾ ಸಾಹಿತಿಗಳ ಹಸ್ತಾಕ್ಷರವನ್ನು ಬರೆಸಿಕೊಂಡಿದ್ದ. ನಾನು ಕೊನೆಯ ನನ್ನ ಪುಟವನ್ನು ತೆರೆದೆ. ಆ ವಾಕ್ಯದ ಕೆಳಗೆ ರುಜುವಿರಲಿಲ್ಲ.

''ಈ ವಾಕ್ಯ ಯಾರದು?''

''ನಿಮ್ಮದೇ ಒಂದು ನಾಟಕದಲ್ಲಿಯದು ಸರ್!'' ಸಖಾರಾಮ ಗಟಣೆ ಅತಿ ಆದರಪೂರ್ವಕವಾಗಿ ಹೇಳಿದ. ಸಂದರ್ಭರಹಿತವಾದ ಈ ವಾಕ್ಯವನ್ನು ನೋಡಿ ನನಗೆಯೇ ನನ್ನ ಬಗೆಗೆ ದಯೆಯೆನಿಸಿತು.

''ಈ ವಾಕ್ಯವನ್ನೇ ಯಾಕೆ ನೀನು ಆಯ್ದುಕೊಂಡಿರುವಿ ತಮ್ಮಾ?''

''ಈ ವಾಕ್ಯದಲ್ಲಿ ನನಗೆ ತಮ್ಮ ಜೀವನದ ಸೂತ್ರ ಅಡಗಿದಂತೆ ಕಾಣುತ್ತದೆ.''

''ಅಯ್ಯೋ, ಮಹಾರಾಯಾ!'' ನಾನು ಮನಸ್ಸಿನಲ್ಲಿಯೇ ಉದ್ಗರಿಸಿದೆ. ಈ ನಾಲ್ಕು ನಾಲ್ಕುವರೆ ಅಡಿ ಎತ್ತರದ ದೀನ ದುರ್ಬಲವಾದ ಶರೀರದಿಂದ ಜೀವನದ ಸೂತ್ರ ಮುಂತಾದ ಶಬ್ದಗಳನ್ನು ನಾನು ಅಪೇಕ್ಷಿಸಿರಲಿಲ್ಲ. ನಾನು ಆತನ ಮುಖವನ್ನೇ ನೋಡತೊಡಗಿದೆ. ಕಾರ್ಯಕಾರಿ ಮಂಡಳಿಯ ವಯಸ್ಕರ ಸದಸ್ಯರೊಬ್ಬರ ಮೇಲೆ ಗಟಣೆಯ 'ಜೀವನದ ಸೂತ್ರ' ಈ ಶಬ್ದವು ತನ್ನ ಪರಿಣಾಮವನ್ನು ಬೀರಿತೆಂದು ಕಾಣುತ್ತದೆ. ಅವರು ಗಟಣೇನಿಗೆ ಕುರ್ಚಿಯಲ್ಲಿ ಕುಳಿತುಕೊಳ್ಳಲು ಹೇಳಿದರು.

''ಹೇಗೆ ಹೇಳುವಿ? ನೀನು ನನ್ನ ಪುಸ್ತಕಗಳನ್ನು ಓದಿರುವಿಯೇನು?''

''ತಮ್ಮ ಅಚ್ಚಾದ ಪ್ರತಿಯೊಂದು ಪುಟವನ್ನು ಮತ್ತು ಪ್ರತಿಯೊಂದು ಸಾಲನ್ನೂ ನಾನು ಓದಿರುವೆ. ತಾವು ಮತ್ತು ಸಾನೆಗೂರುಜಿಯವರು ನನ್ನ ಆದರ್ಶ ಲೇಖಕರು.''

'ಅಲ್ಲೋ, ಆದರೆ ಹೋದ ಸಲ ಯಾರೋ ಬಂದಾಗ ಅವರು ಮತ್ತು ಸಾನೆಗುರೂಜಿ ಅಂದಿದ್ದೆಯಲ್ಲ-'' ಸೆಕ್ರೆಟರಿ ನಡುವೆಯೇ ಬಾಯಿ ಹಾಕಿದರು.

ಸೆಕ್ರೆಟರಿಯೆಂಬ ಮನುಷ್ಯ ಪ್ರಾಣಿಗೆ ತಿಳುವಳಿಕೆಯೇ ಇರಬಾರದೆಂಬ ಅಲಿಖಿತ ನಿಯಮವಿರಬೇಕು. ನಿಜವಾಗಿಯೂ ಗಟಣೆಯು ಇನ್ನೊಬ್ಬ ಲೇಖಕರನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಾನೆಗುರೂಜಿಯುವರ ಜೊತೆಗೂಡಿಸಿರಬಹುದು. ಬಹುಶ: ಮತ್ತೊಂದೆರಡು ವಾರಗಳಲ್ಲಿ ಮತ್ತೊಬ್ಬ ಸಾಹಿತಿ ಬಂದರೆ ಅವರು ಮತ್ತು ಸಾನೆಗೂರುಜಿಯೆಂಬ ಜೋಡಿಯೂ ಆದೀತು. ಇದರ ಮುಖ್ಯ ಕಾರಣವೆಂದರೆ ಗಟಣೆ ಇನ್ನೂ ಸಾನೆಗೂರುಜಿಯುವರ ಈಯುತ್ತೆಯಿಂದ ಹೊರ ಬಂದಿರಲಿಲ್ಲ. ಆದರೂ ಕಿಡಕಿಯ ಹೊರಗಿನ ಇತರ ದೃಶ್ಯಗಳೂ ಈಗ ಆತನಿಗೆ ಇಷ್ಟವಾಗಹತ್ತಿದ್ದವು.

ಸೆಕ್ರೆಟರಿಯ ಮಾತಿನಿಂದ ಸಖಾರಾಮ ನಿರುತ್ಸಾಹಿತನಾದ. ವಿಷಯ ಬದಲಾಯಿಸುವ ದೃಷ್ಟಿಯಿಂದ ನಾನು ಆತನನ್ನು 'ಏನೇನು ಕಲಿಯುತ್ತೀ?' ಎಂದು ಕೇಳಿದೆ.

''ಈ ವರ್ಷ ಎಸ್ಸೆಸ್ಸಿಗೆ ಕೂಡುವೆನು.''

''ಹೌದಾ?'' ನಾನು ಆತನ ಅನೇಕ ಸಾಹಿತಿಗಳ ಜೀವನದ ಸೂತ್ರದ ಸುತ್ತುಗಳಿಂದ ತುಂಬಿದ ಪುಸ್ತಕವನ್ನು ನೋಡಿದೆ. ಹಸ್ತಾಕ್ಷರಕ್ಕಾಗಿ ಹೆದರುತ್ತಾ ಮುಂಬರುವ ಸಖಾರಾಮ ಗಟಣೆ ಮೊದಲಿಗನಾಗಿರಲಿಲ್ಲ. ಹಸ್ತಾಕ್ಷರವನ್ನು ಪಡೆಯಲು ಇಂಥಿಂಥ ಅಸಾಮಿ ಲಾಯಕ್ ಆಗಿರುವನೆಂಬ ತಪ್ಪು ತಿಳುವಳಿಕೆಯು ಒಂದು ಗಾಳಿಸುದ್ದಿಯಂತೆ ನೋಡು ನೋಡುವಷ್ಟರಲ್ಲಿ ಎಲ್ಲೆಡೆಯಲ್ಲೂ ಹಬ್ಬುತ್ತದೆ. ಆದರೆ ಹಸ್ತಾಕ್ಷರ ಕೂಡಿ ಹಾಕಲು ಬಂದ ಅನೇಕ ಹುಡುಗ ಹುಡುಗಿಯರ ಮುಖದಲ್ಲಿ ಹೆಚ್ಚಾಗಿ ಒಂದು ರೀತಿಯ ತುಂಟತನ ಕಾಣುವುದು. ಸಹಿಯ ಪುಸ್ತಕ ಮುಂದಕ್ಕೆ ಚಾಚುವಾಗ ಮಾತ್ರ ಅವರ ಮುಖದ ಮೇಲೆದ್ದು ಕಾಣುವುದು ಗೌರವದ ಪೆರಿಕೆತನದ ಅಭಿನಯ! ಹಸ್ತಾಕ್ಷರ ಕೊಡುವದರಲ್ಲಿ ನುರಿತವರಿಗೆ ಅದನ್ನು ಗುರುತಿಸುವುದು ಕಷ್ಟವಲ್ಲ. ಆದರೆ ಸಖಾರಾಮನ ಮುಖದಲ್ಲಿಯ ಪ್ರತಿಯೊಂದು ರೇಖೆಯೂ ಆತನ ಪ್ರಾಮಾಣಿಕತೆಯನ್ನು ಪ್ರತಿಬಿಂಬಿಸುತ್ತಿತ್ತು. ಆತನ ಚಿಕ್ಕ ಕಣ್ಣುಗಳು ಯಾವುದೇ ರೀತಿಯ ಸುಳ್ಳು ಅಥವಾ ಮುಚ್ಚುಮರೆಯ ಭಾವನೆಗಳನ್ನು ಪ್ರದರ್ಶಿಸಲು ಅಸಮರ್ಥವಾಗಿದ್ದುವು.

''ತಾವು ತಮ್ಮ ಹಸ್ತಾಕ್ಷರವನ್ನು ನೀಡಿದರೆ ನಾನು ಆಜನ್ಮ ತಮಗೆ ಉಪಕೃತರಾಗಿ ಉಳಿಯುವೆ ಸರ್!'' ಸಖಾರಾಮನ ಬಾಯಿಯಿಂದ ಈ ವಾಕ್ಯವನ್ನು ಕೇಳುವಾಗ ಆತನ ಬಾಯಿಯಲ್ಲಿ ಹಲ್ಲುಗಳ ಬದಲಾಗಿ ಅಚ್ಚಿನ ಮೊಳೆಗಳನ್ನು ಕೂಡಿಸಿದ್ದಾರೆನೋ ಎಂದು ನನಗನಿಸಿತು. ಈ ಹುಡುಗನ ಮಾತುಗಳೆಂದರೆ ಅಚ್ಚಿನಿಂದ ಹೊರಬಂದಂತೆ ಇರುತ್ತವೆಯಾದರೂ ಆತನ ಅಚ್ಚಿನ ನುಡಿ ಮಾತ್ರ ತೀರ ನೈಜವೂ ಆಗಿ ಕಾಣುತ್ತದೆ. ನಾನು ಆತನ ಪುಸ್ತಕವನ್ನು ತೆರೆದು ನನ್ನ ಜೀವನದ ಸೂತ್ರದ ಕೆಳಗೆ ಸುಮ್ಮನೇ ರುಜುಹಾಕಿದೆ. ಅನಂತರದ ಸಖಾರಾಮನು ಮಾಡಿದ ನಮಸ್ಕಾರದಿಂದ ನನ್ನ ಹೊಟ್ಟೆಯಲ್ಲಿ ಕೈ ಹಾಕಿ ಕಲಸಿದಂತಾಯಿತು. ಸಾಡೇ ಸಾತಿಯಿಂದ ಪೀಡಿತರಾದವರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶನಿಯ ಪೀಡೆಯನ್ನು ತೊಲಗಿಸುವ ಹನುಮಂತನಿಗೂ ಇಷ್ಟೊಂದು ಕರುಣಾಪೂರ್ಣ ಹಾಗೂ ಭಕ್ತಿ ಭಾವನೆಯಿಂದ ನಮಸ್ಕರಿಸಲಾರರು. ನನ್ನ ಆಯುಷ್ಯದಲ್ಲಿಯೇ ನಾನು ಇಷ್ಟೊಂದು ನಾಚಿ ನೀರಾಗಿರಲಿಲ್ಲ.

ಸಖಾರಾಮ ಗಟಣೆಯ ಈ ಬಾಬತ್ತು ಅಂದಿನಿಂದ ನನ್ನ ಬಾಳಿನ ಖಾತೇ ಪುಸ್ತಕದಲ್ಲಿ ನೋಂದಾಯಿಸಲ್ಪಟ್ಟಿತು. ಈ ಘಟನೆ ನಡೆದು ಅನೇಕ ವರ್ಷಗಳಾದುವು. ಅದರ ನಂತರ ಸಖಾರಾಮ ಗಟಣೆ ನಮ್ಮ ಮನೆಗೆ ಬರತೊಡಗಿದ. ಮೊಟ್ಟ ಮೊದಲಸಲ ಆತ ದಸರೆಯ ದಿನ ಬನ್ನಿ ಕೊಡಲೆಂದು ಬಂದಿದ್ದ. ನನ್ನ ಕೆಲವು ಗೆಳೆಯರು ಮನೆಗೆ ಬಂದಿದ್ದರು. ಅವರಲ್ಲಿಯ ಒಬ್ಬರೂ ಕೂಡಾ ನಾನು ಬರೆದ ಒಂದೇ ಒಂದು ಅಕ್ಷರವನ್ನು ಓದಿಲ್ಲ, ಇನ್ನು ಮುಂದೆ ಕೂಡಾ ಓದುವುದಿಲ್ಲವಾದುದರಿಂದಲೇ ನಮ್ಮ ಗೆಳೆತನ ಸುರಕ್ಷಿತವಾಗಿದೆ. ರಮಿ, ಹಾಳುಹರಟೆ, ನಿದ್ದೆಗೇಡಾಗುವ ಸೀಮಾರಹಿತವಾದ ಶಕ್ತಿ ಮುಂತಾದ ಗಟ್ಟಿಮುಟ್ಟಾದ ಅಡಿಗಲ್ಲಿನಮೇಲೆ ನಮ್ಮ ಗೆಳೆತನ ನಿಂತಿದೆ. ಸಾಹಿತಿಗಳೊಂದಿಗೆ ನನ್ನ ಸಂಬಂಧ ಅಷ್ಟಕಕ್ಕಷ್ಟೇ. ಆದುದರಿಂದ ನಾನೊಬ್ಬನೇ ಇದ್ದಾಗ ನಾನು ಈ ಸಾಹಿತ್ಯ ಸಂಗತಿಗಳನ್ನು ಸಹಿಸಬಲ್ಲೆ. ಆದರೆ ನನ್ನೀ ವಿಶೇಷ ಗೆಳೆಯರ ಗುಂಪಿನಲ್ಲಿದ್ದಾಗ ನನ್ನ ಓದುಗನೇ ಏಕೆ ನನ್ನ ಪ್ರಕಾಶಕನೂ ಬೇಡವೆನಿಸುತ್ತಾನೆ.

ಸಖಾರಾಮ ಗಟಣೆ ಒಳಗೆ ಬಂದು ನನ್ನ ಕಾಲನ್ನು ಮುಟ್ಟಿ ಅತ್ಯಂತ ಆದರ ಪೂರ್ವಕವಾಗಿ ನಮಸ್ಕರಿಸಿ ನನಗೆ ದಸರೆಯ ಬನ್ನಿಯನ್ನು ಕೊಟ್ಟ. ನನ್ನ ಹಾಳು ಗೆಳೆಯರು ಈ ದೃಶ್ಯವನ್ನು ನೋಡುತ್ತಿದ್ದರು.

''ಬಹುಶಃ ತಾವು ನನ್ನನ್ನು ಗುರುತಿಸಿರಲಾರಿರಿ-''

''ಓಹೋ! ಗುರುತಿಸದೇ ಏನು? ಹಿಂದೆ ಒಂದು ಸಲ ನನ್ನ ಭಾಷಣಕ್ಕೆ ನೀನು ಬಂದಿದ್ದಿ.''

''ಇದೆಂದರೆ ಸೂರ್ಯನು ಮಿಣುಕುಹುಳವನ್ನು ನೆನಪಿನಲ್ಲಿಟ್ಟುಕೊಂಡಂತಾಯಿತು ಸರ್!'' ಗಟಣೆ ತನ್ನ ಅಭ್ಯಾಸಬಲದಿಂದ ಗ್ರಾಂಥಿಕ ವಾಕ್ಯವನ್ನು ಎಸೆದನು.

ಈ ಹುಡುಗನಿಗೆ ಏನು ಮಾಡಬೇಕೋ ತಿಳಿಯದಂತಾಯಿತು. ಬನ್ನಿ ಕೊಡಲೆಂದು ಮನೆಗೆ ಬಂದವನಿಗೆ ಒಂದು ಕಪ್ ಚಹಾ ಆದರೂ ಕೊಡಲೇಬೇಕು. ಗಟಣೆಯ ಮುಖದಲ್ಲಿಯ ಭಕ್ತಿಭಾವದಿಂದ ನಾನು ಕಂಗಾಲಾದೆ.

''ತಮಗೆ ಕೆಲವು ಪ್ರಶ್ನೆಗಳನ್ನು ಕೇಳಬೇಕೆಂದು ಕೊಂಡಿದ್ದೆ.''

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

''ನಾವು ಮತ್ತ್ಯಾಯಾವಾಗಲಾದರೂ ಭೆಟ್ಟಿಯಾಗೋಣ. ಆದೀತೆ?''

''ಯಾವಾಗ ಬರಲಿ? ತಮ್ಮ ಪ್ರತಿಭಾಸಾಧನೆಯ ಸಮಯಕ್ಕೆ ಹೊರತಾದ ಬೇರೆ ಯಾವ ಸಮಯವನ್ನಾದರೂ ಸೂಚಿಸಿರಿ.''

''ತಮ್ಮಾ - ಮನುಷ್ಯನಂತೆ ಮಾತಾಡೋ ಮಾರಾಯಾ. ನಿನ್ನ ನಾಲಿಗೆಗೆ ಅಚ್ಚಿನ ನುಡಿಯ ಈ ಚಟ ಅದ್ಯಾವ ಕತ್ತೆ ಹಚ್ಚಿತು? ನಿನ್ನ ತಲೆ, ಪ್ರತಿಭಾ ಸಾಧನೆಯ ವೇಳೆ ಎಂಥದಿರುತ್ತದೆ?'' ಎಂದು ಎತ್ತರದ ದನಿಯಲ್ಲಿ ಕೂಗಿಕೊಳ್ಳಬೇಕೆನ್ನಿಸಿದರೂ ನಾನು ಇದಾವುದನ್ನೂ ಮಾಡಲಿಲ್ಲ. ಗಟಣೆಯ ಕಣ್ಣುಗಳಲ್ಲಿ ನೂರಾರು ಮೊಲಗಳ ವ್ಯಾಕುಲತೆ ತುಂಬಿ ತುಳುಕುತ್ತಿತ್ತು. ಮಾತಾಡುವಾಗ ಆತನ ಕಣ್ಣುಗಳು ಹೊಂದುವ ಪರಿ, ಆತನ ಹಣೆಯ ಮೇಲಿನ ಹಾಗೂ ಕುತ್ತಿಗೆಯ ನರಗಳು ವಿಚಿತ್ರವಾಗಿ ಸೆಟೆದುಕೊಳ್ಳುವ ರೀತಿಗಳಲ್ಲಿ ಇರುವಾಗ ಇಂಥವನು ಯಾರಾನ್ನಾದರೂ ಚೆನ್ನಾಗಿ ಬೈದರೂ ಕೂಡ ಬೈಸಿಕೊಂಡವನಿಗೆ ಮಾತ್ರ ಆತನ ಮೇಲೆ ದಯೆಯೇ ಬರುವಂತಿತ್ತು. ಇವನ ನಾಲಿಗೆಯ ಮೇಲಾದರೋ ಸರಸ್ವತಿಯು ಮರಾಠಿಯ 'ಕ್ಲಾಸ್' ನ್ನೇ ತರೆದಿದ್ದಳು!

''ನೋಡು, ಮುಂದಿನ ವಾರದಲ್ಲಿ ಒಂದು ಸಂಜೆ ಬಾ,''

''ನಿಶ್ಚಿತವಾದ ದಿನವನ್ನು ತಾವು ಹೇಳಬಹುದೆ? ಹೇಳದಿದ್ದರೂ ಚಿಂತೆಯಿಲ್ಲ. ನಾನು ನಿತ್ಯ ಬರುವೆ. ಪ್ರಯಾಸವು ಪ್ರತಿಭೆಯ ಪ್ರಾಣವಾಯುವಾಗಿದೆಯೆಂದು ಕುಡಚೇಡಕರರು ಅಂದಿದ್ದಾರಲ್ಲವೆ?''

''ಯಾರು?''

''ಶ್ರೀ ಸ.ತ.ಕುಡಚೇಡಕರ - ಕೇದಿಗೆ ಹಳದಿಯಾಯತು'- ವನ್ನು ರಚಿಸಿದ ಪ್ರಸಿದ್ಧ ಸಾಹಿತಿ.''

''ಹಾಗೋ'' ಕುಡಚೇಡಕರ ಹೆಸರಿನ ಯಾವನೋ ಸಾಹಿತಿ ಮರಾಠಿಯಲ್ಲಿ ಇರುವನೆಂದು ನನಗೆ ಗೊತ್ತೇ ಇರಲಿಲ್ಲ. ಆದರೆ ಗಟಣೆಗೆ ಆತನ 'ಕೇದಿಗೆ ಹಳದಿಯಾಯಿತು' (ಅದು ನಾಟಕವೋ, ಕಾದಂಬರಿಯೋ, ಮತ್ತೇನೋ ದೇವರಿಗೆ ಗೊತ್ತು) ಪುಸ್ತಕದಲ್ಲಿಯ ವಾಕ್ಯಗಳು ಬಾಯಿಪಾಠವಾಗಿದ್ದವು.

ಈ ಗಟಣೇನ ಕೇಸು ತೀರಾ ಕೈಮೀರಿ ಹೋಗಿತ್ತು. ಆತ ಹಬ್ಬ ಹರಿದಿನಗಳಲ್ಲಿ ನನ್ನ ಕಡೆ ಬರುತ್ತಿದ್ದ. ಸಂಕ್ರಾಂತಿಯ ಕಾರ್ಡುಗಳು, ದೀಪಾವಳಿಯ ಶುಭ ಚಿಂತನೆ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೊಸ ವರ್ಷದ ಶುಭಾಶಯಗಳನ್ನೆಲ್ಲಾ ತಪ್ಪದೇ ಕಳಿಸುತ್ತಿದ್ದ. ನಾನು ಬರೆದದ್ದು ಎಲ್ಲಿಯಾದರೂ ಪ್ರಕಟನೆಯಾದದ್ದೇ ತಡ, ತನ್ನ ಅಂದವಾದ ಅಕ್ಷರಗಳಲ್ಲಿ ಅದನ್ನು ಓದಿದ ಸುದ್ದಿ ತಿಳಿಸುತ್ತಿದ್ದ. ನಡುನಡುವೆ ಭೆಟ್ಟಿಯಾಗಲೂ ಬರುತ್ತಿದ್ದ.

ಒಂದು ದಿನ ಸಖಾರಾಮ ಗಟಣೆ ಮನೆಗೆ ಬಂದ. ಎಂದಿನಂತೆ ಮೂಗಿನ ನೇರಕ್ಕೆ ಟೊಪ್ಪಿಗೆ, ಕೈಯ್ಯಲ್ಲಿ ಕೈಚೀಲವನ್ನು ಹಿಡಿದುಕೊಂಡ ಆತನ ಸಣಕಲು ಶರೀರ, ಕಣ್ಣುಗಳಲ್ಲಿ ಮಾತ್ರ 'ವಂದಿಪೆ ನಿನ್ನ, ಗೋವಿಂದಾ...' ಎನ್ನುವ ಭಕ್ತಿಭಾವವನ್ನು ಹೊತ್ತು ಆತನ ಅವತಾರ ನಮ್ಮ ಮನೆಯ ಬಾಗಿಲಲ್ಲಿ ಅವತರಿಸಿತು.

''ಬಾ!'', ನಾನು ಆತನನ್ನು ಒಳಗೆ ಕರೆದೆ.

''ತಮ್ಮ ಸಾಧನೆಯಲ್ಲಿ ಆತಂಕವುಂಟಾಗಲಿಲ್ಲವಷ್ಟೇ?''

''ಸಾಧನೆಯೆಲ್ಲಿ ಬಂತು? ಹಾಯಾಗಿ ಬಿದ್ದುಕೊಂಡಿದ್ದೆ.''

''ಚಿಂತನೆ ಏನಾದರೂ ನಡೆದಿತ್ತೇನು ಸರ್?''

''ಇಲ್ಲಪ್ಪಾ, ಚಿಂತನೆ ಗಿಂತನೆ ಯಾವುದೂ ಇಲ್ಲ. ಹೂಂ! ಚಹಾ ತಗೋತೀಯಾ?''

''ಬೇಡ ಸರ್. ನಾನು ಚಹಾ ಸೇವಿಸುವುದಿಲ್ಲ. ಉತ್ತೇಜಕ ಪೇಯಗಳಿಂದ ನಾನು ಮೊದಲಿನಿಂದಲೂ ಅಲಿಪ್ತನಾಗಿರುವೆ.'' ಈ ಹುಡುಗನ ಮೆದುಳಿನಲ್ಲಿ ನೀರಿನ ಕಾರಂಜಿ ಹೊಡೆಸಿ ಅಲ್ಲಿಂದ ಈ ಎಲ್ಲಾ ಸಾಹಿತ್ಯಮಯ ಶಬ್ದಗಳ ಜಾಡಬುಡಿಯನ್ನು ತೊಳೆಯಬಹುದೇ? ಎಂದು ನಾನು ಯೋಚಿಸತೊಡಗಿದೆ.

'ಅಲ್ಲಪ್ಪ, ಚಹಾ ಉತ್ತೇಜಕ ಪೇಯವೆಂದು ಯಾರು ಹೇಳಿರುವರು?''

''ಉನ್ನತಿ ಮಾಸಿಕದ ವಿಜಯದಶಮಿಯ ಅಂಕದಲ್ಲಿ ಚೌಖಿರೇ ಗುರೂಜಿಯವರ 'ಜೀವನೋನ್ನತಿಯ ಆರು ಸೋಪಾನಗಳು' ಎಂಬ ಒಂದು ಉತ್ತಮ ಲೇಖನವಿದೆ. ಜೀವನೋನ್ನತಿಯ ಆರುಸೋಪಾನಗಳು' ಈ ಶಬ್ದಗಳು ಗಟಣೆಯ ಸೊಟ್ಟು ಸೊಟ್ಟಾದ ಹಲ್ಲುಗಳಿಂದ ಹುಡುಗರ ಚಡ್ಡಿಯ ಜೇಬುಗಳನ್ನು ತಿರುವುಮುರುವು ಮಾಡಿದಾಗ ಬೀಳುವ ಗೋಲಿಗಳಂತೆ ಹೊರಬಿದ್ದವು!

''ನನ್ನ ಮಾತು ಕೇಳುತ್ತೀಯಾ, ಗಟಣೆ,? ಇಂತಹ ಲೇಖನಗಳನ್ನು ಓದಬೇಡ''

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

''ಈ ವಿಷಯವಾಗಿಯೇ ತಾವು ನನಗೆ ತಮ್ಮ ಸುಯೋಗ್ಯವಾದ ಮಾರ್ಗದರ್ಶನವನ್ನು ನೀಡಬೇಕೆಂದು ಕೋರಿಕೊಳ್ಳಲು ನಾನಿಂದು ಆಗಮಿಸಿದ್ದೆ.''

''ಎಂತಹ ಮಾರ್ಗದರ್ಶನ?''

'ನನಗೆ ನನ್ನ ವ್ಯಾಸಂಗವನ್ನು ವೃದ್ಧಿಸಬೇಕಾಗಿದೆ. ಯೋಗ್ಯವಾದ ವ್ಯಾಸಂಗದ ಹೊರತು ವ್ಯಕ್ತಿತ್ವದ ವಿಕಾಸವಾಗುವುದಿಲ್ಲ''

''ಯಾವ ಕತ್ತೆ ನಿನಗೆ ಇದನ್ನು ಹೇಳಿದ್ದು?'' ಗಟಣೆ ಬೆದರಿದ. ಅಸಂಖ್ಯರಾದ ಆತನ ಗುರುಗಳಲ್ಲಿಯ ಅದ್ಯಾವನೋ ಒಬ್ಬ ಗುರುವಿನ ಪಂಚೆಗೆ ನನ್ನರಿವಿಲ್ಲದೆಯೇ ನಾನು ಕೈಯಿಕ್ಕಿದ್ದೆ. ಗಟಣೆ ಸುಮ್ಮನೇ ನಿಂತಿದ್ದ. ಆತನ ಆ ದೀನವಾದ ಕಣ್ಣುಗಳಲ್ಲಿ ನೀರು ತುಂಬುವುದಷ್ಟೇ ಬಾಕೀ ಉಳಿದಿತ್ತು. ನನ್ನ ಉದ್ಗಾರಗಳ ಬಗೆಗೆ ನನ್ನಮೇಲೆ ಕೋಪ ಬಂದಿತ್ತು. ಆದರೆ ಗಟಣೆಯ ಒಂದೊಂದು ವಾಕ್ಯವೂ ನನ್ನ ಸಹನಶಕ್ತಿಯ ಸೀಮೆಯನ್ನು ಪರೀಕ್ಷಿಸುವಂತಿತ್ತು. ಈ ಹುಡುಗನನ್ನು ಹೇಗೆ ಸರಿಯಾಗಿ ಕೆಡಿಸಬೇಕೆನ್ನುವುದನ್ನು ನಾನು ಯೋಚಿಸತೊಡಗಿದೆ.

''ನೋಡು, ಸ್ವಲ್ಪ ಚಹಾ ಕುಡಿ. ಇದಕ್ಕೂ ಮುಂಚೆ ಕುಡಿದಿದ್ದಿಯೇನು?'' 'ಹೌದು, ಮುಂಚೆ ಕುಡಿಯುತ್ತಿದ್ದೆ.'' ಒಂದು ಮಹಾಪಾತಕವನ್ನು ಒಪ್ಪಿಕೊಳ್ಳುವಂತಹ ಮುಖಮಾಡಿ ಆತ ಹೇಳಿದ. ನನ್ನ ಆದೇಶದಂತೆ ಆತ ಚಹಾ ಕುಡಿದ. ಆತನ ಅನೇಕ ಗುರುಗಳ ಪೈಕಿ ನಾನೂ ಒಬ್ಬನಾಗಿದ್ದೆ. ಚಹಾ ಕುಡಿಯುವಾಗ ಮಾತ್ರ ಆತನ ಮುಖವನ್ನು ನೋಡುವುದಾಗಲಿಲ್ಲ. ಸರ್ಕಸಿನಲ್ಲಿ ಹುಲಿಯ ತಟ್ಟೆಯಲ್ಲಿ ಆಡಿಗೆ ಊಟ ಮಾಡಹಚ್ಚಿದರೆ ಆಗ ಆಡಿನ ಮುಖ ಹೀಗೆಯೇ ಆಗುತ್ತಿರಬೇಕು. ಹಾಗೆ ನೋಡಹೋದರೆ ಗಟಣೆ ಹಾಗೂ ಆಡಿನಲ್ಲಿ ಅದಾವುದೋ ಹೋಲಿಕೆಯಿದೆ. ಆಡು ಮರಗಳನ್ನು ಎಲೆಗಳನ್ನು ತಿನ್ನುತ್ತದೆ, ಈತ ಮಾತ್ರ ಪುಸ್ತಕಗಳ ಪುಟಗಳನ್ನು ತಿನ್ನುತ್ತಾನೆ. ನನಗೆ ನೆನಪಾದ ಪುಸ್ತಕಗಳ ಹೆಸರುಗಳನ್ನು ಬರೆದು ನಾನೊಂದು ಪಟ್ಟಿ ಮಾಡಿದೆ. ಈ ಪಟ್ಟಿಯನ್ನು ಓದುವಾಗ ಆತನ ಮುಖದ ಮೇಲೆ ಅತಿಯಾದ ಕೃತಜ್ಞತೆಯ ಭಾವನೆ ತುಂಬಿ ಬಂದಿತ್ತು. ಸಾಧಾರಣ ಇಪ್ಪತ್ತು ಇಪ್ಪತ್ತೆರಡು ಪುಸ್ತಕಗಳ ಹೆಸರುಗಳನ್ನು ನಾನು ಬರೆದಿರಬೇಕು.

''ಇವುಗಳನ್ನು ನಾನು ಓದಿರುವೆ ಸರ್!''

''ಎಲ್ಲವನ್ನೂ?'' ನಾನು ಖುರ್ಚಿಯಿಂದ ಕೆಳಗೆ ಕುಸಿಯುವದೊಂದೇ ಬಾಕಿ!

''ಹೌದು. ಆದರೆ ಮತ್ತೊಮ್ಮೆ ಓದುವೆ.''

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬೇಡ, ಬೇಡ. ಮತ್ತೊಮ್ಮೆ ಯಾಕೆ ಓದುವಿ''? ನಿಜವಾಗಿ ಮಿತ್ರಾ. ಇನ್ನು ಐದು ವರ್ಷ ನೀನು ನಿತ್ಯದ ವರ್ತಮಾನ ಪತ್ರ ಕೂಡಾ ಓದಬೇಡ'' ಎಂದು ಅವನಿಗೆ ಹೇಳಬೇಕೆನಿಸಿತು. 'ಭಸ್ಮರೋಗ' ಎಂಬ ಒಂದು ರೋಗವಿರುವುದಂತೆ. ಅದಾದವನಿಗೆ ತಿನ್ನಬೇಕು ಎಂಬ ಹಂಬಲವಾಗುವುದಂತೆ. ತಿಂದಕೂಡಲೇ ಭಸ್ಮವಾಗುವುದಂತೆ. ಗಟಣೆಗೆ ಇಂತಹದೇ ಪುಸ್ತಕದ ಭಸ್ಮರೋಗವಾಗಿರಬೇಕು. ಈ ಹುಡುಗನಿಗೆ ಇನ್ನೇನು ಮಾಡಬೇಕೋ ನನಗೆ ತಿಳಿಯದಂತಾಯಿತು. ಕೊನೆಗೆ ನಾನು ನನ್ನ ಪುಸ್ತಕದ ಕಪಾಟು ತೆರೆದೆ. ಅದರಲ್ಲಿಯ ಪುಸ್ತಕಗಳನ್ನು ನೋಡಿ ಆಟಿಗೆಗಳ ಅಂಗಡಿಗೆ ಕರೆದುಕೊಂಡು ಹೋದಾಗ ಮಕ್ಕಳ ಮುಖವಾಗುವಂತೆ ಆತನ ಮುಖವಾಯಿತು.

''ಇದರಲ್ಲಿಯ ಬೇಕಾದ ಪುಸ್ತಕಗಳನ್ನು ತೆಗೆದುಕೊಂಡು ಹೋಗು'' ಎಂದು 'ವತ್ಸಾ, ನಿನಗೆ ಕಲ್ಯಾಣವಾಗಲಿ' ಎನ್ನುವ ಆಶೀರ್ವದಿಸುವ ಧಾಟಿಯಲ್ಲಿ ಆತನಿಗೆ ನಾನೆಂದೆ.

''ಇದೇ ರೀತಿಯಾಗಿ ವ್ಯಾಸಂಗವನ್ನು ಮುಂದುವರಿಸುವ ಇಚ್ಛೆ ನನ್ನದಾಗಿದೆ ಸರ್'' ಗಟಣೆಯ ಈ ಉದ್ಗಾರದಿಂದ ನನಗೆ ನಾಚಿದಂತಾಯಿತು. ಆ ಪುಸ್ತಕಗಳಲ್ಲಿ ಅರ್ಧಕ್ಕರ್ಧ ಪುಸ್ತಕಗಳನ್ನು ನಾನು ತೆರೆದು ಕೂಡಾ ನೋಡಿರಲಿಲ್ಲ. ತನ್ನ ಚೀಲದಲ್ಲಿ ಪುಸ್ತಕಗಳನ್ನು ತುಂಬಿಕೊಂಡು ಗಟಣೆ ಹೋದನಂತರ ನಾನು ನಿಡುಗಡೆಯ ನಿಟ್ಟುಸಿರು ಬಿಟ್ಟೆ.

ಎಂಟು ಹತ್ತು ದಿನಗಳ ನಂತರ ಒಂದು ಸಂಜೆ ಆತನ ''ತಮ್ಮ ಸಾಧನೆಯಲ್ಲಿ ನಾನು ವ್ಯತ್ಯಯವನ್ನು ತರಲಿಲ್ಲವಷ್ಟೆ?'' ಎಂಬ ವಾಕ್ಯ ನನ್ನನ್ನು ಚುಚ್ಚಿತು. ಆತನ ಕೈಯ್ಯಲ್ಲಿ ಪುಸ್ತಕಗಳಿಂದ ತುಂಬಿದ ಚೀಲವಿತ್ತು. ಗಟಣೆಯು ಎಂಟುಹತ್ತು ದಿನಗಳಲ್ಲಿ ಹದಿನೇಳು ಹದಿನೆಂಟು ನೂರು ಪುಟಗಳನ್ನು ತಿಂದಿದ್ದ. ಇದೆಂದರೆ ಅಲ್ಲಾಉದ್ದೀನದ ದೀಪದ ಕಥೆಯಲ್ಲಿಯ ರಾಕ್ಷಸನಂತಹ ಅವಸ್ಥೆಯಾಗಿತ್ತು. ಪುಸ್ತಕ ಸಿಗುತ್ತಲೇ ತಿನ್ನುವುದು, - ಸಿಗುತ್ತಲೇ ತಿನ್ನುವುದು- ಅಂತೂ ಈ ಪ್ರಕರಣ ತೀರ ಕಠಿಣವೇ ಆಗಿತ್ತು.

''ಏನಪ್ಪ! ಪುಸ್ತಕಗಳು ಹೇಗನಿಸಿದವು?'' ಏನಾದರೂ ಕೇಳಬೇಕೆಂದು ನಾನು ಕೇಳಿದೆ. ಗಟಣೆ ಒಂದು ಮಾತೂ ಆಡದೇ ನಿಂತಿದ್ದ. ಈತನಿಗೆ ಪ್ರಶ್ನೆ ಕೇಳಿಸಿಲ್ಲವೆಂದು ನಾನು ಮತ್ತೊಮ್ಮೆ ಕೇಳಿದೆ. ಆತನ ಕಣ್ಣುಗಳಲ್ಲಿ ನೀರು ತುಂಬಿ ಕೊಳ್ಳುತ್ತಿತ್ತು. ಯಾರಾದರೂ ಅಳಲು ತೊಡಗಿದರೆ ನನಗಂತೂ ಏನೂ ತೋಚುವುದಿಲ್ಲ. ''ಯಾಕೋ, ಏನಾಯಿತು?'' ಎಂದು ಒಮ್ಮೆಲೆ ಆತನನ್ನು ಕೇಳಿದೆ. ನನ್ನ ಆತ್ಮೀಯತೆಯಿಂದ ಆತ ಇನ್ನೂ ಹೆಚ್ಚು ಅಳತೊಡಗಿದ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಳುವಾಗ ಗಟಣೆ ಒಬ್ಬ ತೀರ ಚಿಕ್ಕ ಹುಡುಗನಂತೆ ಕಾಣುತ್ತಿದ್ದ. ಈಗ ಆತ ಇಪ್ಪತ್ತರ ಗಡಿ ದಾಟಿದ್ದ. ಆದರೆ ನಾನು ಅವನನ್ನು ಮೊದಲು ಬಾರಿಗೆ ಕಂಡನಂತರ ಅವನಲ್ಲಿ ಯಾವುದೇ ಬದಲಾವಣೆ ಆದದ್ದು ಕಾಣಲಿಲ್ಲ. ಅರ್ಧ ಚಡ್ಡಿ ಹೋಗಿ ಪಾಯಜಾಮಾ ಕೋಟು ಬಂದಿತ್ತು. ಟೋಪ್ಪಿಗೆಯ ತುದಿ ಆಗಿನಂತೆ ಮೂಗಿನ ನೇರಕ್ಕೇ ಇತ್ತು. ಕಣ್ಣುಗಳಲ್ಲಿಯ ಭಾವ ಕೂಡ ಹಾಗೆಯೇ ಇತ್ತು.

''ಏನಾಯಿತು ಗಟಣೆ? ಅಳಬೇಡ''

''ನನ್ನನ್ನು ಕ್ಷಮಿಸಿ''

''ಪುಸ್ತಕ ಓದಲು ಸಮಯ ದೊರೆಯಲಿಲ್ಲವೆ?''

''ಹಾಗಲ್ಲ ಸರ್. ರಾತ್ರಿಗಳನ್ನು ದಿನಗಳನ್ನಾಗಿ ಪರಿವರ್ತಿಸಿ ತಮ್ಮ ಅನುಜ್ಞೆಯ ಪ್ರಕಾರ ಎಲ್ಲಾ ಪುಸ್ತಕಗಳನ್ನೂ ಓದಿ ತೆಗೆದೆ. ಇದನ್ನು ನೋಡಿ'' ಎಂದು ಒಂದು ಟಿಪ್ಪಣಿ ಪುಸ್ತಕವನ್ನು ನನ್ನ ಕೈಗಿಡುತ್ತಾ ಆತ ಹೇಳಿದ.

''ಮತ್ತೆ?'' ಆತನ 'ಅನುಜ್ಞೆ' ಈ ಶಬ್ದ ಕೇಳಿ ನನಗೆ ಮೋಜೆನಿಸಿತು. ಯಾವ ವಯಸ್ಸಿನಲ್ಲಿ ಬಾಯಿಯಲ್ಲಿ ಹತ್ತಿಪ್ಪತ್ತು ಬೈಗಳಿರಬೇಕೋ ಅಂತಹ ವಯಸ್ಸಿನಲ್ಲಿ 'ಅನುಜ್ಞೆ' 'ಮಾರ್ಗದರ್ಶನ' 'ಜೀವನಾನುಭೂತಿ' 'ಸಮಗ್ರತೆಯಿಂದ ಲಭಿಸುವ ಸಮಾಧಾನ' ಮುಂತಾದ ಅಚ್ಚಿನಲ್ಲಿಯ ನಿರರ್ಥಕ ಶಬ್ದಗಳ ಸಂಚಯ ಆತನ ಬಾಯಿಯಲ್ಲಿ ತುಂಬಿಕೊಂಡಿತ್ತು. ಆತನು ಅತ್ಯಂತ ಸುಂದರವಾದ ಅಕ್ಷರಗಳಲ್ಲಿ ಬರೆದ ಪುಸ್ತಕವನ್ನು ತೆರೆದೆ.

''ಇದರಲ್ಲಿ ತಾವು ಕೊಟ್ಟ ಪ್ರತಿಯೊಂದು ಪುಸ್ತಕದ ಸಮಾಲೋಚನೆ ಬರೆದಿರುವೆ''

ಗಟಣೆ ಪ್ರತಿಯೊಂದು ಪುಟದಲ್ಲಿ 'ಸಮಾಲೋಚನೆ'ಯನ್ನು ಬರೆದಿದ್ದ. ಪುಸ್ತಕವನ್ನೋದಲು ತಗಲಿದ ಸಮಯ ರಾತ್ರಿ ಎಂಟೂವರೆಯಿಂದ ರಾತ್ರಿ ಒಂದು ಗಂಟೆ ಮೂವತ್ತೇಡು.'' ನಿಮಿಷ. ಪುಟಗಳ ಸಂಖ್ಯೆ ಎರಡು ನೂರಾ ಮುವತ್ತೆರಡು'' ಈ ರೀತಿಯಾಗಿ ಮೊದಲಿನ ಕಾಲಮ್ಮುಗಳನ್ನು ತುಂಬಿದ್ದ. ಮುಂದೆ ಲೇಖಕನ ಸಂಪೂರ್ಣ ಹೆಸರು, ಪ್ರಕಾಶಕರ ಹೆಸರು, ವಿಳಾಸ,ಪುಸ್ತಕದ ಕ್ರಯ ಮುಂತಾದ ವಿವರವಿತ್ತು. ಆ ನಂತರ ಕೆಳಗೆ ಸಮಾಲೋಚನೆಯಿತ್ತು. ಕಥಾವಸ್ತು ಆಕರ್ಷಕವಾಗಿದೆ. ಪಾತ್ರನಿರ್ಮಿತಿ ವಿಲೋಭನೀಯವಾಗಿದೆ. ಕಥೆ ಮುಂಬಯಿ, ನಾಗಪೂರ ಹಾಗೂ ಲಖನೌಗಳಲ್ಲಿ ನಡೆಯುತ್ತದೆ. '' ಈ ರೀತಿಯಾಗಿ ಪ್ರತಿಯೊಂದು ಪುಸ್ತಕದ ಪಂಚನಾಮೆಯನ್ನು ಅಂದವಾದ ಅಕ್ಷರಗಳಲ್ಲಿ ಮಾಡಿದ್ದ. ಗಟಣೆಯ ಈ 'ವ್ಯಾಸಂಗ'ವನ್ನು ನೋಡಿ ನಾನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬೆರಗಾದೆ. ಶಬ್ದಗಳೆಂದರೆ ಹೊಂಡದಲ್ಲಿ ಹಾವಸೆಕಟ್ಟಿದಂತೆ ತುಂಬಿ ಕೊಂಡಿದ್ದವು. ನೇತ್ರದೀಪಕವೇನು, ಅಹ್ಲಾದವೇನು, ಮನಸ್ಸಿನ ಪ್ರಗಲ್ಭವಾದ ಆಳವೇನು, ಛೆ! ಹೊಟ್ಟೆ ಖಾಲಿ ಮಾಡಲು ಔಷಧಿ ಕೊಡುವಂತೆ, ತಲೆಯಲ್ಲಿಯ ಈ ಶಬ್ದಗಳನ್ನು ಇಲ್ಲವಾಗಿಸುವ ಒಂದು ಔಷಧಿ ಯಾಕೆ ಹುಡುಕಬಾರದು, ಎಂದು ನಾನು ಯೋಚಿಸತೊಡಗಿದೆ. ಕೊನೆಗೆ ಏನಾದರೂ ಮಾತಾಡಲೇಬೇಕೆಂದು ನಾನೆಂದೆ, ''ಶಾಬಾಸ್, ತೀರಾ ವಿವರವಾಗಿ ಅಭ್ಯಾಸ ನಡೆಸಿರುವಿಯಲ್ಲ'' ''ಇದು ನನ್ನ ಜೀವನದ ವಾಙ್ಮಯೀನ ಕಾಲಖಂಡದ ಕೊನೆಯ ಪ್ರಕರಣ ಸರ್....''

''ಅಂದರೇ?'' ಈ ಹುಡುಗ ಆತ್ಮಹತ್ಯೆ ಮಾಡಿಕೊಳ್ಳುವನೋ ಎಂದು ನನಗೆ ಹೆದರಿಕೆಯಾಯಿತು. ಯಾಕೆಂದರೆ ಈ ರೀತಿ ಪುಸ್ತಕ ತಿಂದು ಜೀವಿಸುವ ಹುಡುಗರು ಯಾವುದೋ ಶ್ರೀಮಂತರ ಬರೀ ಬಿಳಿಯ ಬಣ್ಣದ ಸುಂದರಿಯನಿಸಿಕೊಂಡ ಹುಡುಗಿಯ ಪ್ರೇಮದಲ್ಲಿ ಸಿಕ್ಕುಬಿದ್ದು ತಮ್ಮ ಜೀವವನ್ನು ಕಳೆದುಕೊಳ್ಳುವದುಂಟು. ಇಲ್ಲವೇ ಹೆದರಿಕೊಳ್ಳುವವರಾಗಿದ್ದಾದರೆ angry young men ಎಂದು ಚಿತ್ರವಿಚಿತ್ರ ಬಟ್ಟೆ ತೊಟ್ಟು ತಿರುಗುತ್ತಾ ಇನ್ನೊಬ್ಬರ ಖರ್ಚಿನಲ್ಲಿ ಕಾಫಿ ಹೌಸಿನಲ್ಲಿ ಕಾಫಿ ಕುಡಿಯುತ್ತಾ ಭಯಂಕರ ರೂಪದ ಕಡ್ಡಿಯಂತಹ ತುಸು ಮೀಸೆಯಿರುವ ಹುಡುಗಿಯರ ಜೊತೆಗೆ ಹೇಸಿಗೆ ಬರುವಂತಹ ಚಿತ್ರಗಳಲ್ಲಿಯ ಹಾಗೂ ಕವಿತೆಗಳಲ್ಲಿಯ ಕಲೆಯನ್ನು ಹುಡುಕುತ್ತಾರೆ. ಆದರೆ ಗಟಣೆ ಈ ಎರಡೂ ಗುಂಪಿನಲ್ಲಿ ಸೇರುವಂತಹನಿರಲಿಲ್ಲ. ಬರೇ ಫಟಾಕಿ ಹಾರಿಸಿದ ಶಬ್ದ ಕೇಳಿ ಈತನ ಜೀವ ಹಾರಿಹೋಗಬಹುದು. ಆದರೆ ಈ ಗಟಣೆ ನನ್ನೆದುರಿಗೆ ಕುಳಿತು ಏನಾದರೂ ಹೇಳುವ ಪ್ರಯತ್ನಪಡುತ್ತಿದ್ದ. ಆದರೆ ಆತನಿಗೆ ಕ್ಷಣಕ್ಷಣಕ್ಕೆ ಅಳು ಬರುತ್ತಿತ್ತು. ಒಟ್ಟಿನಲ್ಲಿ ತೀರಾ ವಿಚಿತ್ರವಾದ ಪ್ರಸಂಗವಾಗಿತ್ತು. ಕೊನೆಗೆ ಗಟಣೆಯು ತನ್ನ ಅಳುನಿಲ್ಲಿಸಿ ಮಾತನಾಡಲು ಪ್ರಾರಂಭಿಸಿದ.

''ನನ್ನನ್ನು ಕ್ಷಮಿಸಿ ಸರ್. ಇನ್ನು ಮೇಲೆ ನಾನು ನಿಮಗೆ ಯಾವುದೇ ರೀತಿಯ ಕಷ್ಟ ಕೊಡುವುದಿಲ್ಲ -''

''ಅಂದರೇ?'' ನಾನು ನನ್ನ ಗೆಳೆಯರ ಗುಂಪಿನಲ್ಲಿ ಎಂದಾದರೂ ಈತನ ಚೇಷ್ಟೆಮಾಡಿದ್ದು ಅವನ ಕಿವಿಯತನಕ ಹೋಯಿತೇನು? ಆದರೆ ಅದು ಸಾಧ್ಯವೇ ಇರಲಿಲ್ಲ. ನನ್ನ ಗೆಳೆಯರು ಹಾಗೂ ಗಟಣೆಯ ಸಂಬಂಧ ಇರುವುದೇ ಸಾಧ್ಯವಿರಲಿಲ್ಲ. ಒಬ್ಬ ಪೋಲೀಸ ಪ್ರಾಸಿಕ್ಯೂಟರ್, ಒಬ್ಬ ಮೋಟಾರಿನ ಸ್ಪೇರ್ ಪಾರ್ಟಿನ ಮಾರಾಟಗಾರ, ಇನ್ನೊಬ್ಬ ಫಾಯರ್ ಇನುರೆನ್ಸ್‌ನ ಏಜಂಟನಾದರೆ ಮತ್ತೊಬ್ಬ ಮಿಲಿಟರಿಯಲ್ಲಿಯ ಕ್ಯಾಪ್ಟನ್ .... ಇಂತಹ ಗೆಳೆಯರ ಕಥೆ ಕಾವ್ಯದ ದಾರಿಯೆಡೆಗೆ ತಪ್ಪಿ ಕೂಡಾ ಹೋಗದ ನಿರೋಗಿ ಗುಂಪಿನಲ್ಲಿ ನಾನೊಬ್ಬನೇ ಬರವಣಿಗೆ ಮಾಡುವವನಾಗಿದ್ದೆ. ಅವರು ಜೀವಿಸುತ್ತಿದ್ದರು. ನಾನು ಬರೆಯುತ್ತಿದ್ದೆ. ನನ್ನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗೆಳೆಯರ ವಾಸನೆಯಿಂದಲೇ ಗಟಣೆ ಮೂರ್ಛೆ ಬೀಳಬಹುದಿತ್ತು. ನಾನು ಆತನನ್ನು ರಮಿಸುವ ಧ್ವನಿಯಲ್ಲಿ ಕೇಳಿದೆ,

''ಅಲ್ಲೋ, ತೊಂದರೆಯಂತಹದು?''

''ಹಾಗಲ್ಲ ಸರ್, ತಾವು ನನಗೋಸ್ಕರ ತುಂಬಾ ಉಪಕಾರ ಮಾಡಿದ್ದೀರಿ. ವಟವೃಕ್ಷದ ಶೀತಲ ಛಾಯೆಯಲ್ಲಿ ಅನೇಕ ಪಾಂಥಸ್ಥರು ಬರುತ್ತಾರೆ. ಆದರೆ ಕಲ್ಪನೆ ವಟ ವೃಕ್ಷಕ್ಕೆ ಹೇಗಿರುವುದು ಸಾಧ್ಯ?''

ಗಟಣೆಯ ಈ ವಾಕ್ಯದಿಂದ ಆತ 'ನಾರ್ಮಲ್'ಗೆ ಬಂದಿರುವನೆಂದು ನನಗೆ ಅರ್ಥವಾಯಿತು. ನನ್ನನ್ನು ವಟವೃಕ್ಷಕ್ಕೆ ಹೋಲಿಸಿದ್ದನ್ನು ನೆನೆಸಿಕೊಂಡು ನನ್ನ ಮೂಗಿನ ಕೆಳಗೆ ಒಂದು ಪಾರಂಬಿಯು ಇಳಿಬಿದ್ದಂತೆ ಅನಿಸಿ ನನಗೆ ನಗು ಬಂದಿತು.

ತಾವು ನನ್ನೀ ಮುಗ್ಧವಾದ ಮಾತಿಗೆ ನಗುವುದು ಸಹಜವೇ. ಆದರೆ ತಮ್ಮ ವಾತ್ಸಲ್ಯದ ಶೀತಲ ಛಾಯೆಯಲ್ಲಿ ಕುಳಿತಿರುವ ಭಾಗ್ಯ ನನಗಿಲ್ಲ. ಜೀವನದಲ್ಲಿ ....''

''ಎಲೋ .. ನಾನು ಜೀವನ ಮುಂತಾದ ಶಬ್ದಗಳಿಗೆ ಭಯಂಕರ ಅಂಜುವೆ. ಜೀವಿಸುವದಕ್ಕೆ ಜೀವನ ಅನ್ನಬೇಕೆನ್ನುವಂಥಹ ಜನ ಸಾವಿರವರ್ಷಕ್ಕೊಮ್ಮೆ ಜನಿಸುವರು.'' ಗಟಣೆ ತನ್ನ ಬದುಕಿಗೆ ಜೀವನವೆನ್ನುವುದು ಮೊಲವು ತನ್ನ ನೆತ್ತಿಗೆ ಗಂಡಸ್ಥಲವೆನ್ನುವಂತಾಯಿತು. ಆತನ 'ಜೀವನ'ದಿಂದ ಪ್ರಾರಂಭವಾಗುವ ವಾಕ್ಯವನ್ನು ನಡುವೆಯೇ ನಿಲ್ಲಿಸಿ ನಾನೆಂದೆ,

''ಆದರೆ ಗಟಣೆ, ಆದದ್ದಾದರೂ ಏನು?''

''ನನ್ನ ಜೀವನದಲ್ಲಿ ಒಂದು ಹೊಸ ಪರ್ವ ಪ್ರಾರಂಭವಾಗಲಿದೆ ಸರ್..''

ಈ ಹುಡುಗ ತೀರ ಕೈಮೀರಿದ್ದ. ಸಾಯಿನ್ ಬೋರ್ಡ್ ಪೆಂಟರನ ಮಗ ತಾನು ಮಹಾಭಾರತದ ನಾಯಕನಿರುವಂತೆ ಪರ್ವ, ಗಿರ್ವ ಅನ್ನತೊಡಗಿದ್ದ.

''ಪರ್ವವೆಂತಹದೋ''..?

''ಹೇಗೆ ಹೇಳಲಿ ಸರ್?'' ತನ್ನ ಚೆದರಿದ ಕಣ್ಣುಗಳಿಂದ ಕಾಲುಗಳಿಗೆ ನೋಡುತ್ತ ಆತ ಕೇಳಿದ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಮ್ಮ ತಂದೆಯ ಹೆಸರಿನಲ್ಲಿ ಬೋರ್ಡ ಬರೆಸಿಕೊಂಡು ಹೋಗಲು ಮೋಟಾರಿನಲ್ಲಿ ಬಂದಿದ್ದ ಯಾವುದೋ ಶ್ರೀಮಂತ ಯುವತಿಯು ಗಟಣೆಯನ್ನು ಫಾಸಿ ಮಾಡಿರಬೇಕೆಂಬುದು ನನಗೆ ಖಾತ್ರಿಯಾಯಿತು. ಆಗಲೇ ಇಂದಿನವರೆಗೆ ಗಟಣೆ ಓದಿದ ಕಾದಂಬರಿಗಳ ಕಥಾಸಾರಾಂಶ ಆತನ ತಂದೆಗೆ ಮನದಟ್ಟಾಗಿರಬೇಕು. ಅಲ್ಲಿಯೇ ಸಖಾರಾಮ ಗಟಣೆ ಸಮಾಪ್ತನಾಗಿರಬೇಕು! ಈ ವಿಚಾರ ನನ್ನ ಮನಸ್ಸಿನಲ್ಲಿ ಬಂದಾಗ ನಾನೇ ಆತನನ್ನು ಕೇಳಿದೆ.

"ಎಲ್ಲಿಯಾದರೂ ಪ್ರೇಮಪ್ರಕರಣ ನಡೆದಿದೆಯೇನೋ ಗಟಣೆ...?"

"ಇಲ್ಲ ಸರ್.. ಈ ಕಾಲದಲ್ಲಿ ಶುದ್ಧವಾದ ಪ್ರೀತಿ ಎಲ್ಲಿಯೂ ದೊರಕುವುದೇ ಇಲ್ಲ" 'ವಿಜಾಪೂರದ ದರಬಾರಿನಲ್ಲಿ ಪುಟ್ಟ ಶಿವಾಜಿಯು ಎದೆಯುಬ್ಬಿಸಿ ಬಾದಶಹಾನಿಗೆ ಹೇಳಿದಂತೆ ತನ್ನ ಇಪ್ಪತ್ತೆಂಟು ಇಂಚಿನ ಎದೆಯುಬ್ಬಿಸಿ ಗಟಣೆ ಹೇಳಿದ.

"ನಿನಗೆ ಯಾರು ಹೇಳಿದರು?"

"ನಿಮ್ಮದೇ 'ಪಕ್ಷಿಯ ಶಾಲೆ ' ನಾಟಕದ ನಾಯಕನ ವಾಕ್ಯವಿದಾಗಿದೆ ಇದು ಸರ್..." ನಾನು ಮನಸ್ಸಿನಲ್ಲಿಯೇ ಹಣೆ ಚಚ್ಚಿಕೊಂಡೆ. 'ಪಕ್ಷಿಯ ಶಾಲೆ'ಯಲ್ಲಿಯ ಒಂದು ಹಾಸ್ಯಪಾತ್ರದ ಬಾಯಿಯಲ್ಲಿ ಈ ವಾಕ್ಯವಿದೆ. ಕೊನೆಗೆ ಇದೆಲ್ಲಾ ನನಗೂ ಅಸಹ್ಯವೆನಿಸಿ ನಾನು ಕೇಳಿದೆ.

"ನಿನಗೆ ಆಗಿದದ್ದಾದರೂ ಏನು? ಎಂತಹ ತರುಣ ನೀನು! ನೀನು ಇಷ್ಟೊಂದು ವ್ಯಾಸಂಗಿ. ನನಗಿಂತಲೂ ನಿನ್ನ ಓದು ಹೆಚ್ಚು. ಇಷ್ಟಿದ್ದೂ ಅಳುತ್ತೀಯಾ?"

'ಏನು ಮಾಡಲಿ ಸರ್? ಪರಿಸ್ಥಿತಿಯು ಅಶ್ರುಗಳ ಎಲ್ಲಕ್ಕೂ ದೊಡ್ಡ ಕಾರಖಾನೆಯಾಗಿದೆಯೆಂದು ವಾಳಿಂಬೆ ಅನ್ನುತ್ತಿದ್ದರು."

"ಯಾರು ಈ ವಾಳಿಂಬೆ?"

"ನಮ್ಮ ಪ್ರಾಜ್ಞದ ಗುರುಗಳು ಸರ್..." ಆ ವಾಳಿಂಬೆ ನನ್ನ ಕೈಗೆ ಸಿಕ್ಕಿದ್ದರೆ ನಾನು ಹಳೆಯ ಸುಲ್ತಾನಂತೆ ಆತನನ್ನು ತಲೆಕೆಳಗೆ ಮಾಡಿ ತೂಗುಹಾಕಿ ಪುಸ್ತಕಗಳನ್ನು ಸುಟ್ಟು ಅವುಗಳ ಹೊಗೆ ಕೊಡುತ್ತಿದ್ದೆ.

"ನಿನಗೆ ಅಂತಹದೇನು ಗಂಡಾಂತರ ಬಂದಿದೆಯೋ?"

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

''ನನ್ನ ತಂದೆಯುವರಿಗೆ ನನ್ನ ಜೀವನದ ಧ್ಯೇಯ ತಿಳಿಯುವುದಿಲ್ಲ ಸರ್...''

ನನ್ನ ಕಣ್ಣೆದುರಿಗೆ ಸಖಾರಾಮು ಗಟಣೆಯ ಪೆಂಟರ್ ತಂದೆ ಸುಳಿದ. ಆತ ಕಪ್ಪಗಿರುವನೋ, ಬೆಳ್ಳಗಿರುವನೋ ಅದು ಕೂಡಾ ನನಗೆ ಗೊತ್ತಿಲ್ಲ. ಆತ ಪೆಂಟರ್ ಇರುವುದರಿಂದ ಆತ ಕೇವಲ ಕಪ್ಪು ಬಿಳಿಯೇ ಯಾಕೆ, ಅನೇಕ ಬಣ್ಣಗಳಿಂದ ಕೂಡಿದವನೂ ಇರಬಹುದು. ಅಕ್ಷರಗಳನ್ನು ಇಂಚಿನಲ್ಲಿ ಎಣಿಸಿ ಬಣ್ಣ ತುಂಬುವವನಿಗೆ ತನ್ನ ಮನೆಯಲ್ಲಿ ಜನಿಸಿದ ಈ ಬಾಲಬೃಹಸ್ಪತಿಯ ಜೀವನಧ್ಯೇಯ ಹೇಗೆ ತಾನೇ ತಿಳಿದೀತು? 'ಜೀವನ ಧ್ಯೇಯ' ಅಂದ ಕೂಡಲೇ ಯಾವ ಸಾಯಿಜಿನಲ್ಲಿ ಬರೆಯುಲಿ ಸಾಹೇಬರೇ? ಎಂದು ಕೇಳುವವ ಆತ!

''ನಿನ್ನ ಯಾವ ಜೀವನ ಧ್ಯೇಯ ಅವರಿಗೆ ತಿಳಿದಿಲ್ಲ ಅನ್ನುತ್ತಿ?''

''ಅವರು ನನ್ನ ಮದುವೆ ಮಾಡುವ ಕುಟಿಲ ಕಾರಸ್ಥಾನವನ್ನು ರಚಿಸಿದ್ದಾರೆ!'' ಗಟಣೆಯ ಪುಟ್ಟ ನೇರಳೇ ಬಣ್ಣದ ತುಟಿಗಳು ನಡುಗುತ್ತಿದ್ದವು.

''ಅಲ್ಲೋ, ಅದರಲ್ಲಿ ಕುಟಿಲ ಕಾರಸ್ಥಾನವೆಂತಹದು? ನಿನಗೆ ಮದುವೆ ಮಾಡಿಕೊಳ್ಳುವುದಿಲ್ಲದಿದ್ದರೆ ಇಲ್ಲವೆಂದು ಹೇಳು!''

''ಅದನ್ನೇ ವಿನಂತಿಸಲು ನಾನು ಬಂದಿದ್ದೆ. ಸರ್'' ನನಗೆ ನನ್ನದೇನೂ ವಿಶೇಷವೆನಿಸುವುದಿಲ್ಲ.'' 'ಜೀವನದ ಸಮರದಲ್ಲಿ...' ಮತ್ತೆ 'ಜೀವನ' ! ಗಟಣೆ ಈಗ ಒಡ್ಡು ಒಡೆದಂತೆ ಮಾತನಾಡುತ್ತಿದ್ದ.

''ಜೀವನದ ಸಮರದಲ್ಲಿ ರಕ್ತದಿಂದ ಮೈ ತೋಯಿಸಿಕೊಳ್ಳುವ ಪ್ರಸಂಗ ಬಂದೇ ಬರುವುದು ಸರ್....''

''ಅಲ್ಲೋ, ನಿನ್ನ ತಂದೆ, ಚೆನ್ನಾಗಿ ಮದುವೆ ಮಾಡುತ್ತಿದ್ದಾರೆ; ಅಂದ ಬಳಿಕ ನಿನಗೆ ರಕ್ತದಿಂದ ಮೈತೊಯಿಸಿಕೊಳ್ಳುರವಪ್ರಸಂಗ ಯಾತಕ್ಕೆ ಬರುವುದೋ?''

''ನನಗೆ ನನ್ನದೇನೂ ಅನಿಸುವುದಿಲ್ಲ. ನಾನು ತಂದೆಯುವರ ಆಜ್ಞೆಯಂತೆ ವಿವಾಹಬಂಧನದಲ್ಲಿ ಸೆರೆಯಾಳಾಗಲು ತಯಾರಿರುವೆ! ಪ್ರಭುರಾಮಚಂದ್ರರೇ ನನ್ನ ಆದರ್ಶ ಸರ್! ನಾನೂ ಅಂತೆಯೇ ತಂದೆಯುವರ ಅಪ್ಪಣೆ ಪಾಲಿಸುವೆ''

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಭುರಾಮಚಂದ್ರನು ಮದುವೆಯಾದ ನಂತರ ತಂದೆಯ ಅಪ್ಪಣೆ ಪಾಲಿಸಿದ್ದನೆಂಬ ವಿವರವನ್ನು ಗಟಣೆ ಮರೆತಿದ್ದ. ಆ ಪುಟ್ಟದೇಹದಿಂದ ಪ್ರಭುರಾಮಚಂದ್ರ ಮುಂತಾದ ಶಬ್ದಕೇಳುವಾಗ ನನಗಂತೂ ನಗು ತಡೆಯುವುದಾಗಲಿಲ್ಲ.

"ಸರಿ ನೀನು ಅನ್ನುವುದಾದರೂ ಏನು? ನಾನು ನಿನ್ನ ತಂದೆಯವರನ್ನು ಭೆಟ್ಟಿಯಾಗಲೇ?"

"ಅದನ್ನು ತಮಗೆ ಒಪ್ಪಿಸುತ್ತೇನೆ ಸರ್. ನಾನು ಮದುವೆಗೆ ತಯಾರಿರುವೆ." ಈ ವೀರ ತಾನಾಗಿಯೇ ತನ್ನ ಕುತ್ತಿಗೆಯನ್ನು ಕೊಡಲು ಸಿದ್ಧನಿದ್ದಾಗ ನಾನೇನು ಶತ್ರುವಿನ ಖಡ್ಗಕ್ಕೆ ಮೊನೆಮಾಡಿ ಬರಬೇಕೆ?

"ನಾನು ಒಂದು ಸಲವಲ್ಲ, ಹತ್ತು ಸಲ ಮದುವೆಗೆ ತಯಾರಿರುವೆ ಸರ್. ಆದರೆ ನಿಮ್ಮನ್ನು ವಂಚಿಸಲಾರೆ" ಗಟಣೆಯ ಕಣ್ಣುಗಳಲ್ಲಿ ಹುಚ್ಚಿನ ಛಾಯೆ ಕಾಣುತ್ತಿದೆಯೇ ಎಂದು ನಾನು ನೋಡತೊಡಗಿದೆ.

"ನನಗೆಂತಹ ಮೋಸವೊ?"

"ತಾವು ಮರೆತಿರೆಂದು ನಾನು ಮರೆಯಲಾರೆ. ತಾವು ತಮ್ಮ ಮೊದಲ ಭೇಟಿಯಲ್ಲಿ ಕೊಟ್ಟ ಹಸ್ತಾಕ್ಷರವನ್ನು ನಾನು ಪ್ರತಿನಿತ್ಯ ಓದುವೆ. ಅದರಲ್ಲಿ 'ಸಾಹಿತ್ಯದೊಂದಿಗೆ ನಿಷ್ಠನಾಗಿರು.' ಎಂದು ತಾವು ಸಂದೇಶ ಬರೆದಿರುವಿರಿ.

ನಾನು ಕೋಟು ಟೊಪ್ಪಿಗೆ ಹಾಕಿಕೊಂಡು ಅವನ ತಂದೆಯವರನ್ನು ಭೆಟ್ಟಿಯಾಗಲು ಹೋದೆ. ಒಂದು ಹಳೆಯ ವಾಡೆಯ ಮುಂದೆ ನಮ್ಮ ಟಾಂಗಾ ನಿಂತಿತು. ವಾಡೆಯಲ್ಲಿಯ ಯಾವ ಕತ್ತಲು ಕೋಣೆಗೆ ಈ ನನ್ನ ಹನುಮಂತ ಕರೆದುಕೊಂಡು ಹೋಗುವನೋ ಎಂದು ನಾನು ದಾರಿ ನೋಡುತ್ತಿದ್ದೆ. ಅಷ್ಟರಲ್ಲಿ ಎಡಗಡೆಯ ಮೆಟ್ಟಿಲುಗಳಿಂದ ಕತ್ತಲಿನಿಂದ ಒಬ್ಬ ಧೀಮಂತ ವ್ಯಕ್ತಿತ್ವದ ಗೃಹಸ್ಥ ಇಳಿದು ಬಂದರು. ದೊಡ್ಡದಾದ ಬಕ್ಕ ತಲೆ, ಹುರಿ ಮಾಡಿದ ಮೀಸೆ, ಕಿವಿಯ ಮೇಲೂ ಕೂದಲು, ಹಣೆಗೆ ಎರಡು ಬೊಟ್ಟು ಗಂಧ, ಹೊಟ್ಟೆಯ ನಗಾರಿಯು ಅಂಗಿಯಿಂದ ಹೊರಗೆ ಇದಕ್ಕಿಂತೆ ಆಗುತ್ತಿತ್ತು. ಶುಭ್ರವಾದ ಧೋತರವುಟ್ಟಕೊಂಡ ಐವತ್ತರ ಸುಮಾರಿನ ಸುಧೃಢ ಗೃಹಸ್ಥನೇ ಗಟಣೆಯ ತಂದೆಯೆಂಬುದು ತಿಳಿದಕೊಡಲೇ ನನಗೆ ಎದೆಗುದಿಯಾಯಿತು. ನಾನು ಅವರಿಗೆ ನಮುಸ್ಕರಿಸಿದೆ. ಗಟಣೆಯ ಮನೆಯ ಕುರಿತಾದ ನನ್ನ ಕಲ್ಪನೆ ತಪ್ಪಾಗಿತ್ತು. ಬಣ್ಣದ ಅಂಗಡಿಯು ಅವರ ಅನೇಕ ಉದ್ಯೋಗಗಳ ಪೈಕಿ ಒಂದಾಗಿತ್ತು. ಆತನ ತಂದೆ ಬಣ್ಣದ ಬ್ರಶ್ ಅಂತೂ ಹೋಗಲಿ ಗಡ್ಡದ ಬ್ರಶ್ ಕೂಡಾ ಕೈಯಲ್ಲಿ ಹಿಡಿದಂತಿರಲಿಲ್ಲ. ಯಾಕೆಂದರೆ ಅವರು ಕೆಳಗೆ ಇಳಿದ ಕೂಡಲೇ ಕಟ್ಟೆಯ ಮೇಲೆ ನಿಂತಿದ್ದ ನಾವಲಿಗನಿಗೆ ತಾವು ಇಂದು ಗಡ್ಡಮಾಡಿಕೊಳ್ಳುವುದಿಲ್ಲವೆಂದು ಹೇಳಿದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇಂಥ ಘನಗಂಭೀರವಾದ ಮನುಷ್ಯನ ಮನೆಯಲ್ಲಿ ಈ ಸಾಹಿತ್ಯದ ಬೇರು ಹೇಗೆ ಹುಟ್ಟಿಕೊಂಡಿತೋ ನನಗೆ ತಿಳಿಯದಂತಾಯಿತು.

''ಬನ್ನಿ ಸ್ವಾಮಿ!'' ಗಟಣೆಯ ತಂದೆಯವರು ಗಂಭೀರ ಸ್ವರದಲ್ಲಿ ನನ್ನನ್ನು ಸ್ವಾಗತಿಸಿದರು.

''ಸಖ್ಯಾ, ಒಳಗೆ ಹೋಗಿ ಚಹಾ ಹೇಳು'' ಹೋರಿನಲ್ಲಿ ಇಲಿ ಸೇರಿಕೊಳ್ಳುವಂತೆ ಸಖ್ಯಾ ಒಳಗೆ ಓಡಿದ. ಅರ್ಧಗಂಟೆಯ ಸಂದರ್ಶನದ ನಂತರ ಪುಣೆಯಲ್ಲಿ ಗಟಣೆಯವರ ಒಡೆತನದ ಆರು ಕಟ್ಟಡಗಳಿವೆಯೆಂಬ ಮಾಹಿತಿ ದೊರೆಯಿತು. ಅವರ ಮನೆಯಲ್ಲಿ ಮುದುಕಿಯಾದ ವಿಧವೆ ಸೋದರತ್ತೆಯ ಹೊರತಾಗಿ ಹೆಂಗಸರಾರು ಇಲ್ಲವೆಂಬುದು ತಿಳಿಯಿತು. ಈಗ ಆ 'ಮುದುಕಿ ದಮ್ಮಿನಿಂದ ಕಾಯಿಲೆ ಬಿದ್ದಿರುವುದರಿಂದ ಮನೆಯಲ್ಲಿ ಹೆಂಗಸರು ಇರುವುದು ಎಷ್ಟು ಅಗತ್ಯವಾಗಿದೆಯೆಂಬುದನ್ನೂ ಅರಿತಂತಾಯಿತು. ಹುಲಿಯಂತಹ ಮುಖಚರ್ಯೆಯುಳ್ಳ ತಂದೆಯು, ಸಖ್ಯಾನ ಅಮ್ಮ ಆತನು ಹುಟ್ಟಿದ ಹನ್ನೆರಡನೆಯ ದಿನ ತೀರಿಕೊಂಡ ನಂತರ ಮತ್ತೆ ಮದುವೆಯಾಗಿರಲಿಲ್ಲ.

''ಮಲತಾಯಿಯ ದುಃಖವನ್ನು ನಾನು ಅನುಭವಿಸಿರುವೆ ಸ್ವಾಮಿ. ನಿಮ್ಮಂತಹ ವಿದ್ವಾಂಸರ ಮುಂದೆ ನಾನೇಕೆ ಸುಳ್ಳು ಹೇಳಲಿ? ಇಂದಿನವರೆಗೆ ಮೂವರು ಹೆಂಗಸರನ್ನು ಇಟ್ಟುಕೊಂಡೆ.'' ಬೆರಳಿನಲ್ಲಿಯ ಹವಳದ ಉಂಗುರದ ಕಡೆಗೆ ನೋಡುತ್ತಾ ಸಖ್ಯಾನ ತಂದೆ ಹೇಳಿದರು.

''ಇಂದು ನಿಮ್ಮಂಥವರ ಆಶೀರ್ವಾದದಿಂದ ಎಲ್ಲವೂ ಸುವ್ಯವಸ್ಥಿತವಾಗಿದೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ವಾಮಿ''

ಗಟಣೆಯ ತಂದೆಯ ಶ್ರೀಮಂತಿಕೆ ಹಾಗೂ ನನ್ನಂಥವನ ಆರ್ಶೀವಾದ ಈ ಜೊತೆ ವಿಚಿತ್ರವಾಗಿತ್ತು. ಇದೆಂದರೆ ಸಲ್ಲಿಯ ಆರ್ಶೀವಾದದಿಂದ ಮಳೆ ಬಂದಂತೆ ಆಯಿತು.

''ಏನು ಬೇಕಾದರೂ ಮಾಡಿ ಸ್ವಾಮಿ, ಆದರೆ ಹುಡುಗನನ್ನು ಮದುವೆಗೆ ತಯಾರು ಮಾಡಿ!'' ಎಂತಹ ಬಲಿಷ್ಠನಾದ ಮನುಷ್ಯ ನನ್ನೆದುರಿಗೆ ಕುರಿಮರಿಯಂತಾಗಿದ್ದ.

''ಕನ್ಯೆ ನಕ್ಷತ್ರದಂತಿರುವಳು ಸ್ವಾಮಿ! ಸೋನಗಾಂವ್‌ಕರ್ ಸರಾಫರ ಹೆಸರನ್ನು ನೀವು ಕೇಳಿರಬೇಕಲ್ಲ...''

ನಾನು ಸರಾಫರ ಕೇವಲ ಹೆಸರನ್ನೇ ಕೇಳಿರುತ್ತೇನೆಂಬ ಸತ್ಯವನ್ನು ಆತನಿಗೆ ಹೇಳುವ ಮೋಹವನ್ನು ನುಂಗಿಕೊಂಡೆ.

''ಬುಧವಾರ ಪೇಟೆಯಲ್ಲಿ ಐದು ಮನೆಗಳಿರುವವು. ಒಬ್ಬಳೇ ಮಗಳು. ನಾಲ್ಕೈದು ಕ್ಲಾಸಿನವರೆಗೆ ಕಲಿತಿರುವಳು. ಅಲ್ಲದೇ ಕುಂಡಲಿಯೂ ಕೂಡುತ್ತದೆ. ಆದರೆ ಸಖ್ಯಾ ಏನೋ ಹುಚ್ಚನಂತೆ ಮಾಡುತ್ತಿದ್ದಾನೆ. ನಿಮಗೆ ವಚನ ಕೊಟ್ಟಿರುವೆಯೆಂದು ಅನ್ನುತ್ತಿದ್ದಾನೆ.

''ಛೆ...ಛೆ!''

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

''ಮೇಲೆ ನಡೆಯಿರಿ ಸ್ವಾಮಿ''

ನಾಲ್ಕೈದು ಕತ್ತಲೆಯಲ್ಲಿಯ ಮೆಟ್ಟಿಲುಗಳನ್ನೇರಿ ಸಖ್ಯಾನ ಕೋಣೆಗೆ ಹೋದೆವು. ನನ್ನ ಕೋಣೆಯಲ್ಲಿ ಪುಸ್ತಕದ ಒಂದು ಕಪಾಟು ಇತ್ತಾದರೆ ಸಖ್ಯಾನ ಕೋಣೆಯಲ್ಲಿಯ ಎಲ್ಲಾ ಗೋಡೆಗಳೂ ಕಪಾಟುಗಳಿಂದ ತುಂಬಿದ್ದವು. ಗೋಡೆಯ ಮೇಲೆ ಸಾನೇ ಗುರೂಜಿಯವರ ಪಕ್ಕಕ್ಕೆ ನನ್ನ ಫೋಟೋ ಇತ್ತು. ಅದರ ಕೆಳಗೆ ನನ್ನ ಹಸ್ತಾಕ್ಷರದಲ್ಲಿಯೇ ಬರೆದ ಒಂದು ಬೋರ್ಡು ಇತ್ತು. 'ಸಾಹಿತ್ಯದೊಂದಿಗೆ ಏಕನಿಷ್ಠನಾಗಿರು,! ಅದರ ಕೆಳಗೆ ನನ್ನ ರುಜುವಿನಂತೆ ರುಜುವಿತ್ತು.

ಸಖ್ಯಾನ ಮದುವೆಯಲ್ಲಿ ನಾನು ನನ್ನ ಎಲ್ಲ ಪುಸ್ತಕಗಳನ್ನು ಉಡುಗೊರೆಯಾಗಿ ಕೊಟ್ಟೆ. ಪ್ರತಿಯೊಂದು ಪುಸ್ತಕದ ಮೇಲೆ ಹೊಸ ಸಂದೇಶವನ್ನು ಬರೆದು ಕೊಟ್ಟೆ. ''ಸಾಹಿತ್ಯದೊಂದಿಗೆ ಏಕನಿಷ್ಠನಾಗಿರು- ಹಾಗೆಯೇ ಜೀವನದೊಂದಿಗೂ!'' ನಾನು ನನ್ನ ಕೈಯಿಂದ ಜೀವನ ಈ ಶಬ್ದವನ್ನು ಆ ಮೇಲೆ ಮತ್ತೆ ಬರೆದಿಲ್ಲ. ಸಖ್ಯಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜೀವನದೊಂದಿಗೆ ಏಕನಿಷ್ಠನಾಗಿರುವುದು ನನಗೆ ವರ್ಷ ತುಂಬುವುದರೊಳಗೆಯೇ ತಿಳಿಯಿತು. ಸಖ್ಯಾನ ತಂದೆ ಸಂಭ್ರಮದಿಂದ ತಾವೇ ಬಂದು ಮೊಮ್ಮಗ ಹುಟ್ಟಿದ ಪೆಢೆ ಬೆಳ್ಳಿಯ ಬಟ್ಟಲಿನಲ್ಲಿ ತಂದುಕೊಟ್ಟರು. ಹಲವು ವರ್ಷಗಳ ಹಿಂದೆ ಸಖ್ಯಾನು ಪ್ರಾಜ್ಞದ ಪೇಢೆ ಕೊಟ್ಟಿದ್ದ. ಆತನ ತಂದೆ ಮೊಮ್ಮಗನ ಪೆಢೆ ಕೊಟ್ಟರು. ಸಖಾರಾಮ ಗಟಣೆ ದಾರಿಗೆ ಬಂದ. ಆತನ 'ಜೀವನ'ದಲ್ಲಿಯ ಸಾಹಿತ್ಯದ ಮುದ್ದೆ ಹೊರಬಂದಿತು. ಪ್ರವಾಹ ಹರಿಯತೊಡಗಿತು.

'ವ್ಯಕ್ತೀಆಣಿವಲ್ಲೀ' - ಗ್ರಂಥದಿಂದ
-ಮೀನಾ ವಾಂಗೀಕರ್.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪೂರ್ವರಂಗ

ಒಸಾಕಾ - ಕೊಬೆ ಇದು ಟೋಕಿಯೋ ನಗರದ ಆರೇಳು ಅಂತಸ್ತಿನ ಭದ್ರವಾದ ಡಿಪಾರ್ಟಮೆಂಟಲ್ ಸ್ಟೋರ್ಸ ಆಗಿದೆ, ಕಣ್ಣು ಕೋರೈಸುವಂಥದು. ಇದರ ಮಾಲೀಕರು ನೆಲದ ಕೆಳಗೆ ಸ್ವತ: ಖರ್ಚಿನಿಂದ ಒಂದು ರೇಲ್ವೆ ಸ್ಟೇಶನ್ ಕಟ್ಟಿದ್ದಾರೆ. ಸ್ಟೋರ್ಸಿನಲ್ಲಿ ನೂರಾರು ಸುಂದರಿಯರು ನಗುಮುಖದಿಂದ ಗಿರಾಕಿಗಳ ಸ್ವಾಗತಕ್ಕೆ ನಿಂತಿರುತ್ತಾರೆ. ಯುರೋಪ ಅಮೇರಿಕಗಳಂತೆ ಇಲ್ಲಿಯೂ ಶಾಪಿಂಗ್ ಅಂದರೆ ಆನಂದದ ಕೆಲಸವೆನಿಸುತ್ತದೆ. ನಮ್ಮಲ್ಲಿ ಕಾಯಿಪಲ್ಲೆ ತರಲು ಹೋಗುವದು ಅಂದರೆ 'ಇಂಡಿಯನ್ ಪಿನಲ್' ಕೋಡಿನಲ್ಲಿ ಶಿಕ್ಷೆ ಅಂತ ನಮೂದಿಸಲು ಅಡ್ಡಿಯಿಲ್ಲ. ಎಷ್ಟು ಉದ್ಧಟರಂತೆ ಒರಟಾಗಿ ಮಾತಾಡುವರು ನಮ್ಮಲ್ಲಿಯ ಮಾರಾಟಗಾರರು! ಮೊಳ ಉದ್ದದವರು! ಕೂತಲ್ಲಿಂದಲೇ ಪಿ-ಚಕ್ ಎಂದು ಉಗುಳುವವರು! ಒಳ್ಳೇ ತಾಜಾ ಪಲ್ಯದಲ್ಲಿ ಕೊಳೆತದ್ದನ್ನು ಬಚ್ಚಿಡುವವರು! 'ಲೇ, ನಿನ್ನಪ್ಪನಾದರೂ ಪಾವ ಲಿಯ ಬಟಾಣಿ ಕಾಳು ತಿಂದಿದ್ದನೇನಲೇ? - ಮೂರು ಕಾಸಿನವನೇ?' ಎಂದು ಸ್ವಾಗತ ದೊರಕುತ್ತದೆ, ನಮ್ಮ ಮಾರುಕಟ್ಟೆಗಳಲ್ಲಿ. ಆದರೆ ಇಲ್ಲಿ?- ತಿರುಗುವ ಮಹಡಿಯ ಮೆಟ್ಟಲ ಮೇಲೆ 'ದಯವಿಟ್ಟು ಸಾವಧಾನದಿಂದ ಹೆಜ್ಜೆ ಇಡಿ' ಎಂದು ಹೇಳಲಿಕ್ಕೇ ನಗುಮುಖದ ಸುಂದರಿಯರು ಇರುತ್ತಾರೆ. ಪ್ರತಿಯೊಂದು ವಸ್ತುವಿನ ನಿಗದಿಯಾದ ಬೆಲೆಯನ್ನು ಸರಿಯಾಗಿ ಬರೆದಿರುತ್ತಾರೆ. ಬೇಕಾದ ವಸ್ತು ನಿಮಗೆ ಸಿಗಲಿಲ್ಲವಾದರೆ ಪ್ರಯತ್ನಪಟ್ಟು ಅದನ್ನು ಹುಡುಕಿ ತರುತ್ತಾರೆ. ಈ ಭವ್ಯ ಅಂಗಡಿಗಳಲ್ಲಿ ಬರೀ ವಸ್ತುಗಳೇ ಅಲ್ಲ, ಖರೀದಿದಾರರ ಮನರಂಜನೆಗೋಸುಗ ಪುಟ್ಟ ನಾಟ್ಯ ಗೃಹಗಳೂ ಇರುತ್ತವೆ. ಇಂಥಹದೇ ಒಂದು ಸಣ್ಣ ನಾಟ್ಯಗೃಹದಲ್ಲಿ ಪ್ರೊಫೆಸರ ಸಕಾಕಿಬಾರಾ ಅವರ ಒಬ್ಬ ಶಿಷ್ಯೆ ನಡೆಸುವ ಒಂದು ಶಾಲೆಯ ಪುಟ್ಟ ಮಕ್ಕಳ ನೃತ್ಯ ಪ್ರಯೋಗ ನೋಡಿದೆ. ಗುರುವರ್ಯ ಸಕಾಕಿಬಾರಾ ಅವರು ಆ ಮಕ್ಕಳಿಗೆ ಬಹುಮಾನ ವಿತರಣೆ ಮಾಡಿದರು. ಆ ಎಲ್ಲ ಖರ್ಚು ಡಿಪಾರ್ಟಮೆಂಟಲ್ ಸ್ಟೋರ್ಸ ಮಾಡಿದ್ದು. ಐದನೆಯ ಅಂತಸ್ತಿನಲ್ಲಿ ಸುಮಾರು ಐನೂರು ಜನ ಕೂಡುವಷ್ಟು ಥಿಯೇಟರ ಅದು. ಸುಂದರವಾದ ರಂಗಮಂಚ. ಪ್ರಕಾಶ ಯೋಜನೆಯು ಉತ್ತಮವಾಗಿತ್ತು. ಆ ಒಂದೂ ವರೆ ಎರಡು ಫೂಟಿನ ಪುಟ್ಟಪುಟ್ಟ ಪುಟಾಣಿಗಳು ಬಣ್ಣಬಣ್ಣದ ಪೋಷಾಕು ತೊಟ್ಟು ಚಿಟ್ಟೆಗಳಂತೆ ಕುಣಿಯುತ್ತಿದ್ದವು. ಥಿಯೇಟರೆಲ್ಲ ಹೆಂಗಳೆಯರಿಂದ ತುಂಬಿತ್ತು. ಸಕಾಕಿ ಬಾರಾ ಅವರು ಭಾಷಣ ಮಾಡಲು ನಿಂತಾಗ ಅವರ ಶಿಷ್ಯರೂ ರಂಗಮಂಚದ ಮೇಲೆ ಎದ್ದು ನಿಂತರು. ಗುರು ನಿಂತಿರುವಾಗ ಶಿಷ್ಯ ಕೂತಿರಬಾರದು ಎಂಬ ಪ್ರಾಚೀನ ದಂಡಕವನ್ನು ಜಪಾನಿಯರೂ ಇಂದೂ ಅನುಸರಿಸುತ್ತಾರೆ. ಭಾಷಣ ಮುಗಿಸಿ ಅವರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri
ಕೂತ ನಂತರವೇ ಅವರ ಶಿಷ್ಯಗಣವೂ ಕುಳಿತುಕೊಂಡಿತು. ಇಂತಹ ದೃಶ್ಯ ನೋಡಿದರೆ ಮನಸ್ಸು ತುಂಬಿ ಬರುತ್ತದೆ. ಜಪಾನೀಯರು ತಮ್ಮ ಸುಂದರ ಪಾರಂಪಾರಿಕ ಸಂಸ್ಕಾರಗಳಿಂದ ಅಲಂಕರಿತ ಆತ್ಮಗಳನ್ನು ಇನ್ನೂ ಜೋಪಾನವಾಗಿ ಇಟ್ಟಿದ್ದಾರೆಂದೆನಿಸಿತು.

ಪ್ರೊಫೆಸರ ದೋಹಿಯವರ ಸಂಗಡ ಇನ್ನೂ ಒಂದು ಭವ್ಯ ಕಟ್ಟಡಕ್ಕೆ ಭೆಟ್ಟಿ ಕೊಟ್ಟೆ. ಆಗ ಅಲ್ಲಿ ಒಂದು ಪುಷ್ಪ ಪ್ರದರ್ಶನ ನೋಡಿದೆ. ವನಸ್ಪತಿಯ ಒಂದು ಜಾದು ಅಲ್ಲಿ ಇತ್ತು. ಅದು ಅಂದರೆ ಬೋನ್‌ಸಾಯ. ಮರಗಳನ್ನು ಬೇಕೆಂತಲೇ ಬರೀ ಒಂದು ಅಥವಾ ಒಂದೂವರೆ ಮೊಳದಷ್ಟೇ ಬೆಳೆಸುತ್ತಾರೆ. ಐವತ್ತು ವರ್ಷದ ಮರವಿದ್ದರೂ ಅದರ ಎತ್ತರ ಅಷ್ಟೇ. ಬೇಕೆಂದೇ ಇಂತಹ ಮರಗಳನ್ನು ಬೆಳೆಸುತ್ತಾರೆ. ಕೆಲವು ವಿಶಿಷ್ಟ ರಾಸಾಯನಿಕ ಸಂಸ್ಕರಣ ಮಾಡಿ ಅದರ ಎತ್ತರ ಮತ್ತು ಅಗಲ ಹೆಚ್ಚು ಬೆಳೆಯದಂತೆ ನೋಡಿಕೊಳ್ಳುತ್ತಾರೆ. ಅದರ ಬೆಳೆಯುವಿಕೆಯನ್ನೇ ಕುಂಠಿಸುತ್ತಾರೆ. ಟೋಕಿಯೋದ ಒಂದು ಭಾಗದಲ್ಲಿ ಇಂತಹ ಕುಬ್ಜ ವೃಕ್ಷಗಳ ಬಗೀಚೆ ಇದೆ. ಈ ಎಲ್ಲ ವೃಕ್ಷಗಳು ಹಲವಾರು ಆಕೃತಿಯ ಮಣ್ಣಿನ ಪಾತ್ರೆಗಳಲ್ಲಿ ಇಟ್ಟಿದ್ದಾರೆ. ಅವುಗಳ ಬೇರು, ಟೊಂಗೆ ಎಲ್ಲವೂ ವೃಕ್ಷಗಳಂತೆಯೇ. ಆದರೆ ಆಕೃತಿ ಮಾತ್ರ ಕುಬ್ಜ. ಹೂವು ಹಣ್ಣು ಕೂಡ ಸಣ್ಣ ಪುಟ್ಟ ಆಕೃತಿಯವು. ಒಂದು ಕಾಲದಲ್ಲಿ ಪ್ರಚಂಡ ಶಿಲೆಗಳ ಮಧ್ಯದಲ್ಲಿ ಇಂತಹ ಒಂದು ಪುಟ್ಟ ಆಕೃತಿಯ ಮರ ಇತ್ತಂತೆ. ಆದರಿಂದಲೇ ಈ ವೃಕ್ಷಗಳ ತೋಟ ಮಾಡುವ ಯೋಚನೆ ಬಂದಿತಂತೆ. ನನಗೆ ಮಾತ್ರ ಆ ಗಿಡಗಳನ್ನು ನೋಡಿ ದಯೆ ಬಂತು. ಒಂದು ತರಹದ ಕ್ರೂರತನ ಮಾಡಿದ್ದಾರೆ ಅನಿಸಿತು. ಒಂದೆರಡು ಫೂಟಿನ ಮನುಷ್ಯನನ್ನು ನೋಡಿದರೆ ಆಗುವಂತೆ ತಳಮಳವಾಯಿತು. ಆದರೆ ಜಪಾನೀಯರಿಗೆ ಬೋನ್‌ಸಾಯಿಯ ಅಭಿಮಾನ ಬಹಳ. ಹಳೆಯ ಗಿಡಗಳನ್ನು ಅವರು ಸಾವಿರಾರು ರೂಪಾಯಿಗೆ ಮಾರುತ್ತಾರೆ.

ಜಪಾನಿನ ಡಿಪಾರ್ಟಮೆಂಟಲ್ ಸ್ಟೋರ್ಸ್ ಅಂದರೆ ಸಂಸ್ಥಾನಗಳು ಇದ್ದಂತೆ. ದಯಾಮಾರು, ಮಿತ್ಸಕೋಶೀ, ಮಾತ್ಸುಬಾಯಾ ಮುಂತಾದ ಅಂಗಡಿಗಳ ಶಾಖೆಗಳು ಜಪಾನದೇಶದಲ್ಲಿ ಎಲ್ಲೆಡೆಗೆ ಇವೆ. ನಾನು ಅಮೇರಿಕೆಯಲ್ಲಿ ಡಿಪಾರ್ಟಮೆಂಟಲ್ ಸ್ಟೋರ್ಸ್ ಅಥವಾ ಸುಪರ ಮಾರ್ಕೆಟ್ಟುಗಳನ್ನು ನೋಡಿದ್ದೇನೆ. ಆದರೆ ಜಪಾನೀ ಭಂಡಾರಗಳ ಸಾಟಿ ಅವಕ್ಕಿಲ್ಲ. ಇವು ಬಹಳ ವಿಶಾಲವಾಗಿವೆ. ಒಂದೇ ಒಂದು ಅಂಗಡಿ ನೋಡೋಣವೆಂದರೂ ಒಂದು ದಿನ ಪೂರ್ತಿ ಬೇಕು; ಆದಲ್ಲದೆ ಕಾಲು ಅಸಾಧ್ಯ ನೋವಿನಿಂದ ತುಂಡಾಗಿ ಹೋಗುತ್ತವೇನೋ ಅನಿಸುತ್ತದೆ. ಬರೀ ತಯಾರು ಬಟ್ಟೆಗಳದ್ದೇ ಮಹಡಿಗಳು ಆಗುವಷ್ಟು ಸಾಲುಗಳಿರುತ್ತವೆ. ಫರ್ಲಾಂಗುಗಳಷ್ಟು ಉದ್ದದ ಆ ಸಾಲುಗಳ ಮಜಲುಗಳಲ್ಲಿ ಬರೀ ಕೋಟುಗಳನ್ನು ತೂಗು ಹಾಕಿದ್ದು ಕಾಣಬಹುದು. ಇದೇ ವೈಭವ ಇತರ ಬಟ್ಟೆಗಳದ್ದೂ. ಈ ಅರಿವೆ ನಿರ್ಮಿತಿಯಲ್ಲಿ ಜಪಾನೀಯರ ವೈಶಿಷ್ಟ್ಯವೇ ಬೇರೆ. ಅಂಗಡಿಗಳಲ್ಲಿ ಕುಬೇರ ಹೊಕ್ಕರೂ ಅವನು ಭಿಕಾರಿಯಾಗೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೊರಗೆ ಬರಬೇಕು. ಜಪಾನೀ ಗಾಜಿನ ವಸ್ತುಗಳೂ ಇದೇ ತರಹ ಹುಚ್ಚು ಹಿಡಿಸಿ ಬಿಡುತ್ತವೆ. ಉತ್ತಮವಾದ ಪೇಯಗಳ ಸ್ವಾದ ಹೀರಲು ವಿಶಿಷ್ಟವಾದ ಪಾತ್ರೆಗಳು ಬೇಕು. 'ಚಹ ರುಚಿಕರವಾಗಿದ್ದರೆ ಆಯ್ತಪ್ಪ. ಅದಕ್ಕೆ ಇಂಥದೇ ಕಪ್ಪು ಏಕೆ ಬೇಕು. ಅಂಥದೇ ಬಸಿ ಏಕೆ ಬೇಕು?' ಎನ್ನುವ ವಿಚಾರ ಹಳತಾಯಿತು. ಜಪಾನೀಯರು ಹಳಬರಾಗಲು (ಮುದುಕರಾಗಲು) ತಯಾರಿಲ್ಲ. ಬರೀಯ ಕಪ್ಪು ಬಶಿಗಳ ಚಿತ್ತಾರ ನೋಡಬೇಕು ಅಂದರೂ ಆಯುಷ್ಯ ಮುಗಿಯುತ್ತದೆ. ಬರೀ 'ಬಿದಿರು' ಈ ವಿಷಯ ವನ್ನು ಮುಂದಿಟ್ಟು ಅಸಂಖ್ಯ ಚಿತ್ರಗಳು ಇರುತ್ತವೆ. ಬರಿಯ ಬಿದಿರಿನ ಎಲೆಯದೇ ನೂರಾರು ವೈವಿಧ್ಯಗಳಿರುತ್ತವೆ. ಕಪ್ಪನ್ನು ತುಟಿಗೆ ಹಚ್ಚುತ್ತಲೇ ಅದರ ಸ್ಪರ್ಶವೂ ಅತ್ಯಂತ ನಾಜೂಕಾಗಿ ಇರುತ್ತದೆ. ಕಿಟ್ಲಿಗಳೂ ಅಸಂಖ್ಯ ಪ್ರಕಾರದವು ಇರುತ್ತವೆ. ತರ-ತರದ ಟ್ರೇಗಳು! ಬುದ್ಧಿವಂತರು ಆಟಿಗೆ ಸಾಮಾನುಗಳ ವಿಭಾಗದಲ್ಲಿ ಹೋಗದೇ ಇರುವದೇ ಉತ್ತಮ. ಆ ಆಟಿಗೆಗಳ ವೈವಿಧ್ಯ ಮತ್ತು ತದೇಕ ದೃಷ್ಟಿಯಿಂದ ಕಣ್ಣು ಹಿಗ್ಗಿಸಿ ಹಿಗ್ಗಿಸಿ ಅವು ಬಿಚ್ಚಿ ಹೋಗುತ್ತವೆನೋ ಎನ್ನುವಂತೆ ನೋಡುತ್ತಿರುವ ಆ ಜಪಾನಿ ಪುಟಾಣಿಗಳನ್ನು ನೋಡಿದರೆ ಆ ಆಟಿಗೆಗಳನ್ನು ಮಾಡಿದ ಆ ಕೆಲಸಗಾರರನ್ನು ನನ್ನ ಪ್ರಾಣದಾರತಿಯಿಂದ ಪೂಜಿಸಬೇಕು ಅನ್ನಿಸದೆ ಇರಲಿಲ್ಲ. ಮಾರಾಟ ಮಾಡುವ ಹುಡಿಗೆಯರೂ ಎಷ್ಟು ಚಾಲಾಕು ಎಂದರೆ ಅಲ್ಲಿ ಬಂದ ಮಕ್ಕಳ ಜೊತೆ ಅಲ್ಲಿಯ ಆಟಿಗೆಗಳನ್ನು ತೆಗೆದುಕೊಂಡು ಆಡಿ ಆಡಿ ಆ ಮಕ್ಕಳ ತಾಯಂದಿರನ್ನು ಹೈರಾಣಾಗಿಸಿ ಬಿಡುತ್ತಾರೆ. ಆಡುವಾಗ ಆಟಿಗೆ ಮುರಿದರೂ ಯಾರೂ ಏನೂ ಅನ್ನುವದಿಲ್ಲ, ಅಷ್ಟು ಸ್ವಾತಂತ್ರ್ಯವಿದೆ. "ಲೇ ಮಗನೇ, ನಿಮ್ಮಪ್ಪನ ಅಂಗಡಿ ಏನಲೇ? ಇಡೋ ಆ ಚೆಂಡನ್ನು ಕೆಳಗೆ. ಕಾಲು ಮುರಿದೇನು !" ಅಂತಾ ಯಾರಾದರೂ ಅಂದರೋ ಸಂಪೂರ್ಣ ದೇಶವೇ ಅವನ ವಿರುದ್ಧ ಎದ್ದೀತು. ಎಲ್ಲ ಅಂಗಡಿಗಳು ಈ ಬಾಲಗೋಪಾಲರು ಮತ್ತು ಅವರ ತಾಯಂದಿರ ಕಲರವದಿಂದ ತುಂಬಿರುತ್ತವೆ. ಉಪಹಾರ ಗೃಹಗಳೂ ಇಲ್ಲಿ ಇರುತ್ತವೆ. ಮಕ್ಕಳಿಗೆ ಆಡಲು ಬಗೀಚೆ ಕೂಡ ಇರುತ್ತವೆ. ಟೆಲಿವ್ಹಿಜನ್ ಕೂಡ ಆನ್ ಮಾಡಿ ಇಟ್ಟಿರುತ್ತಾರೆ. ಲೋಕಪ್ರಿಯ ನಟ ನಟಿಯರು ಸ್ವಾಕ್ಷರಿ ಹಾಕಲು ಬರುತ್ತಾರೆ. ಜಪಾನಿನ ಸಮೃದ್ಧಿ ಎಂದರೆ ಏನು? ಇದಕ್ಕೆ ಉತ್ತರ ನಮಗೆ ಆ ಅಂಗಡಿ ನೋಡಿ ಸಿಗುತ್ತದೆ. ಎಲ್ಲಿಯೂ ಚೆನ್ನಾಗಿಲ್ಲದ, ಹೊಲಸು ಅನ್ನುವಂಥಹದು ಏನೂ ಇಲ್ಲವೇ ಇಲ್ಲ. ಆ ಅಂಗಡಿಗಳ ಅಂಥ ಜನನಿಬಿಡ ಗೊಂದಲಮಯ ವಾತಾವರಣದಲ್ಲಿ ಅಲ್ಲಿಯ ತರುಣಿಯರು ಅದು ಹೇಗೆ ತೆಳು ಹಾಸ್ಯವನ್ನು ಕಾಪಾಡಿಕೊಳ್ಳುತ್ತಾರೋ ಏನೋ! ಎಲ್ಲಿಯೂ ತಂಟೆ ತಕರಾರುಗಳು ಇಲ್ಲ. ಚೌಕಾಸಿ ಇಲ್ಲ. ಮರ್ಯಾದೆ ಕೊಟ್ಟು ಮರ್ಯಾದೆ ತೆಗೆದುಕೊಳ್ಳುತ್ತಾರೆ. ಎಲ್ಲೆಡೆಗೆ ಶಾಂತಿ ಸಮಾಧಾನ ಕಾಣಿಸುತ್ತದೆ. ಇಲ್ಲಿಯ ನೌಕರ ವರ್ಗದವರೂ ಹರತಾಳ ಮಾಡುತ್ತಾರೆ. ಮುಷ್ಕರ ಹೂಡುತ್ತಾರೆ. ಹಕ್ಕುಗಳಿಗಾಗಿ ಹೋರಾಡುತ್ತಾರೆ. ಆದರೆ ಇದೆಲ್ಲ ಮುಗಿದ ನಂತರ ಯಾವದೇ ಇರುಸು ಮುರುಸಿಲ್ಲ. ನಗು ಮುಖದಿಂದ ಕಷ್ಟದ ಕೆಲಸ ಮಾಡುವದು ಇವರ ರಕ್ತಗುಣ. ಎಲ್ಲ ದೆಶೆಯಿಂದ ಜೀವನದ ಎಲ್ಲ ಸ್ತರಗಳಲ್ಲೂ ಅವರು ತಮ್ಮ ಜೀವನವನ್ನು ಶೃಂಗರಿಸುತ್ತಾ ಇರುತ್ತಾರೆ. ಒಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕುಟುಂಬ ಚಹಾಪಾನಕ್ಕೆ ಕೂತರೂ ಎಷ್ಟೊಂದು ಉಲ್ಲಾಸದಿಂದ ಕೂತಿರುತ್ತಾರೆ. ಜೀವನದಲ್ಲಿ ಎಲ್ಲರೂ ಮೊದಲನೆಯ ಸಲವೇ ಚಹಾಪಾನ ಮಾಡುವವರಂತೆ ಸೇರಿರುತ್ತಾರೆ. ಮುತೊ ಹೆಸರಿನ ಒಬ್ಬ ಜಪಾನೀ ತರುಣನ ಮನೆಗೆ ನಾನು ಊಟಕ್ಕೆ ಹೋಗಿದ್ದೆ. ಕಾರಕೂನಿ ಮಾಡುವ ಮನುಷ್ಯ ಅವನು. ತಿಂಗಳಿಗೆ ಮುನ್ನೂರು ಮುನ್ನೂರೈವತ್ತು ರೂಪಾಯಿ ಗಳಿಸುವವ. ಆದರೆ ಅವನ ಮನೆ ಮಾತ್ರ ಪುಟ್ಟದಿದ್ದರೂ ಚಿತ್ರದಂತಿತ್ತು. ಡೋಂಬಿವಲಿಯಿಂದ ಕುಲಾಬಾಕ್ಕೆ ಬರುವಂತೆ ಅವನು ಆಫೀಸಿಗೆ ಹೋಗುತ್ತಿದ್ದ. ನಮ್ಮಲ್ಲಿ ಮಧ್ಯಮ ವರ್ಗದಂತೆ ಇರುವಂತಹ ಸಂಸಾರ ಅವನದು. ಎಲ್ಲರೂ ಸ್ಮಿತಹಾಸ್ಯದವರು. ಯುದ್ಧದಲ್ಲಿ ಅವರು ಸರ್ವಸ್ವವನ್ನೂ ಕಳೆದುಕೊಂಡಿದ್ದರು. ಮನೆಯ ಹಿರಿಯರು ಕೊಲ್ಲಲ್ಪಟ್ಟಿದ್ದರು. ಅದನ್ನು ಹೇಳುವಾಗಲೂ ಯಾವದೇ ಕಹಿ ಭಾವನೆ ಇಲ್ಲ. ಯುದ್ಧದಲ್ಲಿ ಬೂದಿಯಾಗಿ ಹೋದ ಟೋಕಿಯೋ ನಗರವನ್ನು ಇಂತಹ ಕುಟುಂಬಗಳೇ ಪುನರ್ ನಿರ್ಮಾಣ ಮಾಡಿದವು. ಮತ್ತೆ ಮನೆಗಳನ್ನು ಕಟ್ಟಿದರು. ತೋಟಗಳನ್ನು ನಿರ್ಮಿಸಿದರು. ತಾಕೊ ನಾಮಾ ಅಲಂಕರಿಸಿದರು. ಸುಂದರ ಪರಂಪರೆಯನ್ನು ಕಾಪಾಡಿದರು. ಒಳ್ಳೆಯ ಹೊಸ ವಿಷಯಗಳನ್ನು ಸ್ವೀಕರಿಸಿದರು. ಜಪಾನೀ ಸ್ತ್ರೀಗೆ ಮನೆಯನ್ನು ಸ್ವಚ್ಛವಾಗಿ ಇಡುವುದು ಸೌಭಾಗ್ಯವನ್ನು ಕಾಪಾಡಿಕೊಳ್ಳುವಷ್ಟೇ ಮಹತ್ವದ್ದು.

ಮನೆಮನೆಗಳಲ್ಲಿ ಅಂದವಾದ ಪುಷ್ಪರಚನೆಗಳು ಇರಲೇಬೇಕು. ಅದೊಂದು ಜಪಾನೀ ಶಾಸ್ತ್ರ ಮತ್ತು ಕಲೆಯೂ ಹೌದು. ಚಹಾಪಂಡಿತರಂತೆ ಇಲ್ಲಿ ಪುಷ್ಪ ಪಂಡಿತರೂ ಆಗಿ ಹೋಗಿದ್ದಾರೆ. ಈ ಕಲೆಯೂ ಮನೆತನದಿಂದ ನಡೆದು ಬಂದಿದೆ. ಮನೆತನಗಳ ನಿಯಮಗಳು ಇವೆ. ಪುಷ್ಪ ರಚನೆ ಕಲಿಸುವ ವಿದ್ಯಾಲಯಗಳೂ ಇವೆ. ಒಂದೇ ಒಂದು ಸಪೂರವಾದ ಟೊಂಗೆ ಮತ್ತು ಒಂದೇ ಪುಷ್ಪದಿಂದ ಈ ಜನ ಪುಷ್ಪ ಕಾವ್ಯವನ್ನೇ ನಿರ್ಮಿಸುತ್ತಾರೆ. ಎಷ್ಟೋ ಸಲ ಈ ರಚನೆ ಸೂಚಕವಾಗಿಯೂ ಇರುತ್ತದೆ. ಪ್ರಿಯಕರಪ್ರೇಯಸಿಯರು ತಮ್ಮ ಮನೋಗತ ವ್ಯಕ್ತಪಡಿಸುತ್ತಾರೆ. ಪುಷ್ಪರಚನೆಗೆ ಜಪಾನೀ ಭಾಷೆಯಲ್ಲಿ ಇಕೆ-ಬಾನಾ ಅನ್ನುತ್ತಾರೆ. ಬುದ್ಧ ದೇವನ ಚರಣಗಳಲ್ಲಿ ಈ ಪುಷ್ಪ ರಚನೆಯ ವಿಕಾಸವಾಯಿತು. ಬರಿಯ ಹೂವೇ ಏಕೆ?. ಇಲ್ಲಿಯ ಜನ ಒಣಗಿದ ಮುಳ್ಳುಗಳಿಂದಲೂ ಸುಂದರ ಚಿತ್ರಾಕೃತಿಯನ್ನು ಮಾಡುತ್ತಾರೆ. ಪ್ರತಿಯೊಬ್ಬ ಜಪಾನೀ ಸ್ತ್ರೀಗೆ ಹೆಚ್ಚು ಕಡಿಮೆ ಪ್ರಮಾಣದಲ್ಲಿ ಈ ಕಲೆ ಬಂದೇ ಬರುತ್ತದೆ. ವಾಸ್ತವಿಕವಾಗಿ ಹಿಂದೂ ಜೀವನದಲ್ಲಿ ನಮ್ಮ ಪೂರ್ವಜರೂ ಕೂಡ ಹೂವು ಹೆಣೆಯುವದರಲ್ಲಿ ಬಹಳ ಪರಿಣತರಿದ್ದರು! ಆದರೆ ಮೊದಲು ತುರುಕರ, ನಂತರ ಫಿರಂಗಿಗಳ ಗುಲಾಮಗಿರಿಯಲ್ಲಿ ನಾವು ನಮ್ಮ ಎಷ್ಟೋ ಪರಂಪರೆಗಳನ್ನು ಮರೆತೇ ಹೋದೆವು - ಹಳೆಯ ಸಾಂಪ್ರದಾಯಗಳನ್ನು ಮುರಿದೆವು. ಆದರೆ ಹೊಸ ಸಾಂಪ್ರದಾಯಗಳನ್ನು ಸರಿಯಾಗಿ ಜೋಡಿಸಲೂ ಇಲ್ಲ. ಹೀಗಾಗಿ ಪೂರ್ತಿ ಸಮಾಜವೇ ಕೈಕಾಲು ಜಾಡಿಸುತ್ತಾ ಇದೆ ! - ಹೊಸ, ಪಟ್ಟಣದ ಜೀವನದ ಒತ್ತಡದಿಂದ ಆ ಮರ -ಬಳ್ಳಿ - ಎಲೆ -ಮೊಗ್ಗು - ಹೂವು ಎಲ್ಲವೂ ನುಚ್ಚು ನೂರಾದವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮನುಷ್ಯನಿಗೆ ವಾಸಕ್ಕೆ ಮನೆ ಬೇಕು. ಎಂದು ಐವತ್ತು ಅರವತ್ತು ವರ್ಷ ಹಳೆಯ ಮರಗಳಿಗೆ ಕೊಡಲಿ ಏಟು ಹಾಕಿದೆವು. ಹೊಸ ಗಿಡಗಳನ್ನು ನೆಡುವ ಸರಕಾರೀ ಸಂಕಲ್ಪಗಳು ಬಿದ್ದು ಹೋಗುತ್ತವೆ. ಜಪಾನೀ ಜೀವನದಲ್ಲಿ ಹೂವಿಗೆ ಬಹಳ ಮಹತ್ವವಿದೆ. ಪುಷ್ಪರಚನೆಯಿಲ್ಲದ ಮನೆ ಬಿಡಿ, ಒಂದು ಸಾಧಾರಣ ಅಂಗಡಿಯೂ ಕೂಡ ಇಲ್ಲ. ನಾನಂತೂ ಟೋಕಿಯೋದಲ್ಲಿ ಟ್ಯಾಕ್ಸಿ ನಡೆಸುವವರು ತಮ್ಮ ಟ್ಯಾಕ್ಸಿಗಳಲ್ಲಿ ಹೂಪಾತ್ರೆಗಳನ್ನು ಇಟ್ಟಿದ್ದನ್ನು ನೋಡಿದ್ದೇನೆ. ಮುಂಬಯಿಯಲ್ಲಿ ದಿನವೊಂದಕ್ಕೆ ಒಂದು ಲಕ್ಷ ರೂಪಾಯಿಯ ಹೂವು ಮಾರಾಟವಾಗುತ್ತವೆ ಎಂದು ಓದಿ ಜನರಿಗೆ ಪರಮಾಶ್ಚರ್ಯವಾಯಿತು. ಆದರೆ ನಾನು ಮಾತ್ರ ಮುಂಬಯಿಯ ಜನರ ಬಗೆಗೆ ಆಶಾವಾದಿಯಾದೆ. ಅದರಲ್ಲಿ ಆ ಎಲೆಗಳಿಂದ ತುಂಬಿದ ಅಧ್ಯಕ್ಷರ ಕೊರಳಿಗೆ ಹಾಕುವ ಮಾಲೆ ಮತ್ತು ಮದುವೆಯ ಮಂಟಪದಲ್ಲಿ ಕಡ್ಡಿಗೆ ಸುತ್ತಿದ, ವಾಸನೆಯಿಲ್ಲದ ಎಲೆಗಳಿಂದ ಸುತ್ತುವರೆದ 'ಗುಚ್ಛ' ಎಂಬ ಭಯಾನಕ ಹೆಸರು ಪಡೆಯುವ ಮತ್ತು ಹೊಲಸು ವಾಸನೆ ಕೊಡುವ ವಸ್ತುವನ್ನು ವಜಾ ಮಾಡಲೇಬೇಕು. ನಾನು ಪುಣೆಯ ಬುಧವಾರ ಚೌಕಿನಲ್ಲಿ ದಿಬ್ಬಣದ ಒಂದು ಮೋಟಾರನ್ನು ಅಲಂಕರಿಸಿದ್ದನ್ನು ಈ ಕೆಲ ದಿನಗಳ ಹಿಂದೇ ನೋಡಿದೆ. ಪುಣೆಯ ತೋಟಗಾರರ ಈ ಹತ್ತು ಹನ್ನೆರಡು ವರ್ಷಗಳ ಪ್ರಗತಿ ಕೌತುಕಾಸ್ಪದವೆನಿಸಿತು. ಜಾಜಿ ಮಲ್ಲಿಗೆಯ ಸುತ್ತುವ ಮಂಟಪದ ಕೆಳಗೆ ಆಯುಷ್ಯದ ಮೊದಲ ರಾತ್ರಿ ವಧೂವರರು ಮೆರವಣಿಗೆಯಲ್ಲಿ ಹೋದರೆ ಏನು ತಪ್ಪಾಯಿತು? ಸದಾಕಾಲವೂ ದೇಶದ ಚಿಂತೆಯ ಮುಂಡಾಸು ಸುತ್ತಿದೆ. ಮನುಷ್ಯ ಮತ್ತು ಜೀವಂತವಿರುವಾಗಲೇ ಪರಲೋಕವಾಸಿಯಾದ ಸೂತಕದಲ್ಲಿ ಇರುವ ಜನ, ಭಾರತೀಯ ಜೀವನವನ್ನು ಹರಿದು ಚಿಂದಿ ಮಾಡಿ ಬಿಟ್ಟಿದ್ದಾರೆ. ಹಿಂದೂ ಜೀವನದಲ್ಲಿ ಹೂವು ಇದೆ, ಹಣ್ಣು ಇದೆ. ವನವಿಹಾರ ಇದೆ. ಸ್ವರಗಳಿವೆ, ಗಂಧ ಇದೆ. ಎಲ್ಲವೂ ಇದೆ. ಹೂವಿನೊಂದಿಗೆ ಆಡುವ ಜಪಾನೀ ತರುಣರು ಸಮಯ ಬಂದಾಗ ದೇಶಕ್ಕಾಗಿ ಪ್ರಾಣ ತೆತ್ತಲಿಲ್ಲವೇ? ಜೀವನದಲ್ಲಿ ಹಾಡೂ ಬೀಡೂ ನಾಡೂ ಬೇಕು. ಜಪಾನ ದೇಶ ಇದೆಲ್ಲವನ್ನು ಸವಿಯುತ್ತದೆ. ಕಳೆದ ಯುದ್ಧದಲ್ಲಿ ಜಪಾನದ ಲೆಕ್ಕ ತಪ್ಪಿತು. ಆದರೆ ಆದರಿಂದ ಅವರು ಹತಬಲರಾಗಲಿಲ್ಲ; ಹುರುಪು ಕಳೆದುಕೊಳ್ಳಲಿಲ್ಲ. 'ಪುನಶ್ಚ ಹರಿ ಓಂ' ಎಂದು ಎದ್ದು ನಿಂತಿತು. ಕಾಬುಕಿಯೂ ನಿಂತಿತು. ಮಾರು ಕಟ್ಟೆಯ ಮೇಲೆ ತನ್ನ ಪ್ರಭುತ್ವ ಸ್ಥಾಪಿಸಿತು. ಜಪಾನವು ತನ್ನ ಲಷ್ಕರದ ಖರ್ಚನ್ನು ಅಮೇರಿಕದ ಮೇಲೆ ಹಾಕಿದ್ದಾರೆ ಅನ್ನುತ್ತಾರೆ; ಇರಬಹುದು. ಆದರೆ ಅದೇ ಜಪಾನ ದೇಶ ನಾಳೆ ಅಣ್ವಸ್ತ್ರಗಳ ಸ್ಪರ್ಧೆಗಳಲ್ಲಿ ಪ್ರಥಮ ಕ್ರಮಾಂಕ ಗಿಟ್ಟಿಸೀತೆಂಬುದರಲ್ಲಿ ನನಗೆ ಸಂಶಯ ಎಲ್ಲ.

ಈ ಜಪಾನೀಯರ ರಕ್ತವೇ ಬೇರೆ, ಕ್ಷಣ ಕ್ಷಣಕ್ಕೂ ದಿಗ್ಭ್ರಾಂತಿಯನ್ನುಂಟು ಮಾಡುವಂಥಹದು. ಸತತವಾಗಿ ಕೆಲಸ ಮಾಡುತ್ತಾರೆ. ಮತ್ತು ಅಷ್ಟೇ ಮಜಾ ಮಾಡುತ್ತಾರೆ. ಒಂದು ತಿಂಗಳು ಈ ದೇಶದಲ್ಲಿ ಇದ್ದೆ. ಆದರೆ ಒಬ್ಬನೇ ಒಬ್ಬ ಭಿಕಾರಿ ಕಣ್ಣಿಗೆ ಬೀಳಲಿಲ್ಲ. ಹರಕು ಅರಿವೆಯಲ್ಲಿ ಒಬ್ಬರಾದರೂ ಸ್ತ್ರೀಪುರುಷ ಕಾಣಲಿಲ್ಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri
ಒಂದು ಪೀಚಲು ಮಗು ಕೂಡ ಕಾಣಲಿಲ್ಲ. ಆದರೆ ಟೋಕಿಯೋದಲ್ಲಿ ಒಂದು ಸಲ ಐದಾರು ಮೈಲುದ್ದದ ಕಾರ್ಮಿಕರ ಮೆರವಣಿಗೆ ನೋಡಿದೆ. ಅವರ ಅಗ್ರಭಾಗದಲ್ಲಿ ಮತ್ತು ಮಧ್ಯದಲ್ಲಿ ಅಲ್ಲೊಂದು ಇಲ್ಲೊಂದು ಕೆಂಪು ಧ್ವಜ ಕುಣಿಯುವದನ್ನು ಕಂಡೆ. ನನಗೆ ರಾಜಕೀಯ ಕುಂಡಲಿಗಳನ್ನು ಬರೆಯುವ ಅಭ್ಯಾಸವಿಲ್ಲ. ಕೆಂಪು ಮಂಗಳದ ಪಿಟ್ಟುಗಣ್ಣನ್ನು ಅಲ್ಲಿ ಅಂದು ನೋಡಿದೆ. ಅಂದೇ ಟೋಕಿಯೋ ನಗರದ ನಭೋವಾಣಿ ಮತ್ತು ಚಿತ್ರವಾಣಿ ಕೇಂದ್ರಗಳನ್ನು ನೋಡಿದೆ. ಅಲ್ಲಿನ ಅಧಿಕಾರಿಗಳನ್ನು 'ನಿಮ್ಮ ದೇಶದಲ್ಲಿ ರೇಡಿಯೋ ಸೆಟ್ಸ ಎಷ್ಟು ಇವೆ?' ಎಂದು ಕೇಳಿದೆ. ಅವರು ನಗುನಗುತ್ತ ಹೇಳಿದರು, ''ನಾವು ಸೆಟ್ಸ ಎಣಿಸುವದನ್ನು ಬಿಟ್ಟು ಬಿಟ್ಟಿದ್ದೇವೆ. ಈಗ ನಾವು ಬರೀ ಟೆಲಿವ್ಹಿಜನ್ ಸೆಟ್ಸ ಮಾತ್ರ ಎಣಿಕೆ ಮಾಡುತ್ತೇವೆ. ಮತ್ತು ಈ ಎಣಿಕೆ ಈಗಾಗಲೇ ಲಕ್ಷದ ಮನೆಯಲ್ಲಿವೆ. ಜಪಾನಿನಲ್ಲಿ ಟೆಲಿವ್ಹಿಜನ್ ಬಂದು ಬರೀ ಹತ್ತು ವರ್ಷಗಳಾಗಿವೆ. ಇಷ್ಟು ಸಣ್ಣ ಈ ಜಪಾನಿನಲ್ಲಿ ಇನ್ನೂರಾ ನಾಲವತ್ನಾಲ್ಕು ರೇಡಿಯೋ ಸ್ಟೇಶನ್‌ಗಳು ಮತ್ತು ಎಪ್ಪತ್ತು ಟೆಲಿವ್ಹಿಜನ್ ಸ್ಟೇಶನ್‌ಗಳಿವೆ. ನಮ್ಮ ವಿಸ್ತಾರವಾದ ದೇಶದಲ್ಲಿ ಇನ್ನೂ ಮೂವತ್ತು ಆಕಾಶವಾಣಿ ಕೇಂದ್ರಗಳು ಇಲ್ಲ. ಟೋಕಿಯೋದ ಟೆಲಿವ್ಹಿಜನ್ ಪ್ರಸರಣ ಕೇಂದ್ರದ ಕಂಬದ ಎತ್ತರ ಒಂದು ಸಾವಿರ ಫೂಟು. ಅಂದರೆ ಸುಮಾರು ನೂರು ಮಹಡಿಯ ಕಟ್ಟಡದ ಎತ್ತರ ! ಟೋಕಿಯೋದ ಟೆಲಿವ್ಹಿಜನ್ ಕೇಂದ್ರದ ಅಧಿಕಾರಿಯನ್ನು ನಾನು ಸಹಜವಾಗಿ ಕೇಳಿದೆ. ''ನೀವು ಯಾವ ಕ್ಯಾಮರಾ ಉಪಯೋಗಿಸುತ್ತೀರಿ?'' ಆಗ ಅವರು ನನ್ನನ್ನು ಒಂದು ಕೋಣೆಗೆ ಕರೆದೊಯ್ದು ಹಾಲಂಡಿನಿಂದ ತರಿಸಿದ ಒಂದು ಕ್ಯಾಮೆರಾ ತೋರಿಸಿ ನಗನಗುತ್ತ ಹೇಳಿದರು: ''ಇವನು ಮೂಲ ಪುರುಷ, ಮತ್ತು ಈ ನೂರಾರು ಕ್ಯಾಮೆರಾಗಳು ಇದ್ದಾವಲ್ಲ. ಇವು ಅದರ ಜಪಾನೀ ಸಂತತಿಗಳು!'' ಪ್ರತಿಯೊಂದು ವಸ್ತು ''ಮೇಡ ಇನ್ ಜಪಾನ್!'' ಕ್ಯಾಮೆರಾ, ಟೇಪ ರೆಕಾರ್ಡರ, ಟ್ರಾಂಜಿಷ್ಟರ, ಮಾಯಕ್ರೋಫೋನ್, ಅಸಂಖ್ಯ ಪ್ರಕಾರದ ದೀಪಗಳು, ಇಷ್ಟೇ ಅಲ್ಲ ಮಕ್ಸ ಫ್ಯಾಕ್ಟರನ್ನ ನಾಚಿಸುವಂಥಹ ಮುಖವನ್ನು ರಂಗಿಸುವ ಬಣ್ಣಗಳು ಸಹ ಥೇಟ ಅಂತಹುವೇ! ಮುಂದಿನ ಮೂರು ವರ್ಷ ಕಾಲ ಸಾಕಾಗುವಷ್ಟು ಸಂಗೀತ ಶೇಖರಣೆ ಧ್ವನಿಮುದ್ರಿತ ಮಾಡಿಟ್ಟಿದ್ದರು. ಸುದ್ದಿಗಳು, ಚಿತ್ರಗಳು, ಸುದ್ದಿ ಪಟಗಳು ಇವುಗಳ ಸರಬರಾಜು ತಕ್ಷಣ ಆಗಲು ನಭೋವಾಣಿ ಕೇಂದ್ರದ ತಾರಸಿಯ ಮೇಲೆ ಹೆಲಿಕ್ಯಾಪ್ಟರ ಇಳಿಸಲು ವಿಮಾನ - ತಳ ಇದೆ. ಒಂದು ಸುಂದರ ಥಿಯೇಟರ ಇದೆ. ಅಲ್ಲಿ ನೂರಿನ್ನೂರು ವಾದಕರ ವಾದ್ಯವೃಂದದ ಕಾರ್ಯಕ್ರಮ ನಡೆದಿತ್ತು. ಈ ದೇಶ ಉತ್ಸಾಹದಲ್ಲಿ ಮುಂದಿದೆ. ಭಾರತೀಯ ಸಂಗೀತದ ಅಭ್ಯಾಸ ಮಾಡುತ್ತಿರುವ ಪ್ರೊಫೆಸರ ಕಾನಾಯಿ ಸೇಕಿ ನನಗೆ ವ್ಯಾಖ್ಯಾನದ ನಂತರ ಭೆಟ್ಟಿಯಾಗಿದ್ದ. ನಾನು ಮುಂಬಯಿಯವ ಅಂತ ತಿಳಿದ ತಕ್ಷಣ ತನ್ನ ನೆನಪಿನ ಪುಟದಲ್ಲಿ ಇಣುಕಿ ಆತ ನನಗೆ 'ಲಾವಣಿ' ಹಾಡಲು ಹೇಳಿದ. ಪ್ರೊಫೆಸರ ದೋಹಿಯ ವರಂತೂ ತಮ್ಮ ಅಸ್ಖಲಿತ ಹಿಂದಿಯಿಂದ ಕ್ಷಣ ಕ್ಷಣಕ್ಕೂ ನನ್ನನ್ನು ಸೋಲಿಸುತ್ತಿದ್ದರು. ಆಯಪ್ಪ ತಪ್ಪಿಯೂ ಒಂದಾದರೂ ಇಂಗ್ಲೀಷ ಶಬ್ದವನ್ನು ನಾಲಗೆಯ ಮೇಲೆ ತರುತ್ತಿರಲಿಲ್ಲ. ಡಿಪಾರ್ಟಮೆಂಟಲ್ ಸ್ಟೋರ್ಸ ತೋರಿಸುವಾಗಲೂ ಸಹ, 'ಚಲಿಯೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಿತ್ಸುಕೋಶಿ ವಸ್ತು ಭಂಡಾರ ದೇಖಿಯೆ ಹಮಾರೇ ಸಾಥ ದೇಶಪಾಂಡೇಜೀ' ಅಂದನಂತರ ನಾನಂತೂ ಪೂರ್ತಿ ತಣ್ಣಗಾದೆ. ಏನು ಉದ್ಯೋಗ ಮಾಡುತ್ತಾರಪ್ಪಾ ಈ ಜನ!

ಜಪಾನಿನ ಮುಕ್ಕಾಮಿನಲ್ಲಿ ಇದ್ದಾಗ ಭೆಟ್ಟಿಯಾದ ಪ್ರತಿಯೊಬ್ಬ ಜಪಾನೀಯನಿಗೆ ಭಾರತದ ವಿಷಯದಲ್ಲಿ ನಿಜವಾಗಿಯೂ ಪ್ರೀತಿಯಿದ್ದುದು ಕಂಡು ಬಂದಿತು. ಅವರಿಗದು ಅವರ ಬುದ್ಧನ ಪವಿತ್ರ ಭೂಮಿ ಅನಿಸುತ್ತದೆ. ಭಾರತೀಯ ದಾರ್ಶನಿಕರು ಅವರಿಗೆ ಅಧ್ಯಾತ್ಮದ ಪಾಠ ಕೊಟ್ಟಿದ್ದು ಅವರ ವಿದ್ವಾಂಸರಿಗೆ ಜ್ಞಾತವಿದೆ. ದೂರದ ರಸ್ತೆಯಿಂದ ತಂದುದಕ್ಕೆ ಸ್ವತಃಕ್ಕೆ ಶಿಕ್ಷೆ ಎಂದು ಅರ್ಧ ಮಾತ್ರ ದುಡ್ಡನ್ನು ತಕ್ಕೊಂಡ ಜಪಾನೀ ಟ್ಯಾಕ್ಸಿಯವ ತನ್ನ ದೇಶದ ಬಗೆಗೆ ನಮ್ಮಲ್ಲಿ ಆದರ ಭಾವ ಹುಟ್ಟಿಸಿ ಹೋದ. ಹಾಟೆಲ್, ಅಂಗಡಿ, ವಿಶ್ವವಿದ್ಯಾಲಯ, ಥಿಯೇಟರ ಎಲ್ಲಿ ಹೋದರಲ್ಲಿ ನಮಗೆ ಪ್ರೇಮ ಕಾದಿತ್ತು. ಈ ಜನರೇ ಬಹಳ ಸರಳ ಮನಸ್ಸಿನವರು. ಆಗ್ನೇಯ ಏಶಿಯಾದ ಪ್ರಮುಖ ದೇಶಗಳಲ್ಲಿ ಸಂಚರಿಸಿದೆ. ಆದರೆ ಜಪಾನ ಮಾತ್ರ ನನ್ನ ಅಂತಃಕರಣದಲ್ಲಿ ಮನೆ ಮಾಡಿತು. ಅನೇಕರಿಗೆ ಜಪಾನೀ ಮನುಷ್ಯ ಎಂದರೆ ಒಗಟು ಇದ್ದಂತೆ ಅನಿಸುತ್ತದೆ. ಪಾಶ್ಚಾತ್ಯ ಉದ್ಯೋಗತಜ್ಞರಂತೂ ಜಪಾನೀ ಕಾರಖಾನೆದಾರರು ಮತ್ತು ವ್ಯಾಪಾರಸ್ಥರ ಮೇಲೆ ಪುಸ್ತಕ ಬರೆದು ಸಾಕಷ್ಟು ಕೆಸರು ಎರಚಿದ್ದಾರೆ. ಜಪಾನೀ ಸ್ವಭಾವ ಅಗಮ್ಯ ಇದೆ ಎಂದು ಅವರು ಅನ್ನುತ್ತಾರೆ. ಮಾನವ ಸ್ವಭಾವವೇ ಅಗಮ್ಯ ಎಂದು ನನ್ನ ಅಭಿಪ್ರಾಯ. ಯಾವ ಜಪಾನೀನ ಹಾಟೆಲುಗಳಲ್ಲಿ ನಾವು ಕೋಣೆಗೆ ಬೀಗ ಹಾಕಲಿಲ್ಲವೋ, ಟೇಬಲ್ ಮೇಲೆ ಮರೆತು ಉಳಿದ ದುಡ್ಡನ್ನು ಕಾಗದದಲ್ಲಿ ಪುಡಿಕಟ್ಟಿ ಕೋಣೆಯನ್ನು ಗುಡಿಸಿ, ಒರೆಸುವ ಹೆಂಗಸು ಇಟ್ಟಿದ್ದಳೋ ಅದೇ ಜಪಾನಿನಲ್ಲಿ ಕಳ್ಳತನ ಲೂಟಿಯೂ ಇವೆ. ಕೊನೆಗೆ ಮನುಷ್ಯನ ಸ್ವಭಾವದ ಉತ್ತರವನ್ನು ಹೇಳಬಲ್ಲ ಲೆಕ್ಕವನ್ನು ಯಾರು ಮಂಡಿಸಬಲ್ಲರು?

ಇದೇ ಟೋಕಿಯೋದಿಂದ ಪ್ರೇಕ್ಷಣೀಯ ಸ್ಥಳಗಳ ಪ್ರವಾಸಕ್ಕೆ ಒಂದು ಬಸ್ಸಿನಿಂದ ಹೋಗಿದ್ದೆವು. ನನ್ನ ಪಕ್ಕದಲ್ಲಿ ಒಬ್ಬ ಅಮೇರಿಕನ್ ಪ್ರವಾಸಿ ಕೂತಿದ್ದ. ಸುಮಾರು ಐವತ್ತು ವರ್ಷ ವಯಸ್ಸಿನವ. ಅವನಂತಹ ಅಮೇರಿಕನ್ ಮನುಷ್ಯನನ್ನು ನಾನು ಎಲ್ಲಿಯೂ ನೋಡಿಲ್ಲ, ಅವನನ್ನು ಭೆಟ್ಟಿಯಾಗುವ ಮೊದಲೂ ನಂತರವೂ. ನಾವು ಇಳಿದ ದಾಯಿ-ಇಚಿ ಹೊಟೇಲಿನಲ್ಲೇ ಅವನೂ ಇಳಿದಿದ್ದ. ಮಧ್ಯಾಹ್ನ ಎರಡು - ಎರಡೂವರೆ ಗಂಟೆಗೆ ನಾವು ಹೊರಟಿದ್ದೆವು. ಆಗ ಆ ಮನುಷ್ಯ ಚೆನ್ನಾಗಿ ಕುಡಿದು ಬಂದಿದ್ದ. ಅರ್ಧೋನ್ಮಿಲಿತ ಕಣ್ಣುಗಳಿಂದ ಅದೇನು ಟೋಕಿಯೋ ನೋಡುವನೋ ಎನಿಸಿತು. ಎಚ್ಚರ ಹಾಗೂ ಎಚ್ಚರದಪ್ಪುವ ಸೀಮಾರೇಕ್ಷೆಯ ಮೇಲಿದ್ದ. ಮಾತಾಡುತ್ತ ನಡೆಯುತ್ತಿದ್ದ; ಆದರೆ ತಡೆ ತಡೆಯುತ್ತ. ನನಗೆ ಅಂದ, "ನೀನು ಇಂಡಿಯನ್ ಅಥವಾ ಆಫ್ರಿಕನ್?" "ಇಂಡಿಯನ್" ಅಂತಾ ಕೋಪನುಂಗಿ ಉತ್ತರಿಸಿದೆ. ನಾನೇನೂ ಗೌರ ವರ್ಣದವನಲ್ಲ ಆದರೂ ಇಷ್ಟೊಂದು ಖಂಡಾಂತರ ಆಗಬೇಕೆಂದಿಲ್ಲವಲ್ಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ಪಿಯೆಲಾ ಆದಮೀ ಹೈ' ಅದ್ಕೊಂಡು ಸುಮ್ಮನಾದೆ. ಆದರೆ ಅವನು ಮಾತ್ರ ಆ ಅವಸ್ಥೆಯಲ್ಲೂ ಮಾತಿಗೆ ಆರಂಭಿಸಿದ. ಅವನು ಏನು ಮಾತಾಡುತ್ತಿದ್ದ ಅನ್ನುವದು ನಾನು ಶುದ್ಧಿಯ ಮೇಲಿದ್ದರೂ ನನಗೆ ಸರಿಯಾಗಿ ತಿಳಿಯುತ್ತಿರಲಿಲ್ಲ. ನಾವು ಬೇರೆ ಬೇರೆ ಸ್ಥಳಗಳನ್ನು ನೋಡಿ ಬರುತ್ತಿದ್ದೆವು. ಅವ ಮಾತ್ರ ಬಸ್ಸಿನಲ್ಲಿ ಕೊತೇ ಇರುತ್ತಿದ್ದ. ಸುಮಾರು ಒಂದು ಗಂಟೆಯ ನಂತರ ತಲೆಗೆ ತಂಗಾಳಿ ಬಡೆದಿದ್ದರಿಂದ ಇರಬಹುದು, ಆಯಪ್ಪನಿಗೆ ಪೂರ್ತಿ ಪ್ರಜ್ಞೆ ಬಂತು.

''ಎಷ್ಟು ದಿನದಿಂದ ಜಪಾನಿನಲ್ಲಿ ಇದ್ದೀರಿ?'' ಅವನು ಕೇಳಿದ.

''ಒಂದು ತಿಂಗಳು ಆಯ್ತು.''

''ಬಹಳ ಜಪಾನೀ ಜನರನ್ನು ಕಂಡಿರಾ?''

''ಸ್ವಲ್ಪ ಜನರನ್ನು ಭೆಟ್ಟಿಯಾದೆ.''

''ಪುಣ್ಯವಂತರಿದ್ದೀರಿ ! ನಾನು ಬಂದು ಎಂಟು ದಿನ ಆಯ್ತು. ಯಾರೂ ಭೆಟ್ಟಿಯಾಗಿಲ್ಲ; ಮಾತಾಡುವದೂ ಇಲ್ಲ ಈ ಜಪಾನೀ ಗುಡಿಗಳನ್ನು ಬಗೀಚೆಗಳನ್ನು ನೋಡುವ ಇಷ್ಟವಿಲ್ಲ ನನಗೆ. ಫಿಲ್ಮಗಳಲ್ಲಿ ನೋಡಬಹುದು ಅದೆಲ್ಲ. ಜಪಾನೀ ಮನುಷ್ಯರನ್ನು ಭೆಟ್ಟಿಯಾಗುವ ಇಚ್ಛೆ ಇದೆ. ಅವರ ಕುಟುಂಬಗಳಲ್ಲಿ ಇರುವ ಇಚ್ಛೆ ಇದೆ. ಒಂದು ವರ್ಷದಿಂದ ಜಗತ್ತಿನ ಪ್ರವಾಸದಲ್ಲಿ ಇದ್ದೇನೆ.''

ಆಸ್ಥೆಯಿಂದ ಕೇಳುವ ಶ್ರೋತೃ ಸಿಕ್ಕಂತೆನಿಸಿ ತನ್ನ ಆತ್ಮ ಚರಿತ್ರೆ ಹೇಳತೊಡಗಿದ. ಅಮೇರಿಕೆಯಲ್ಲಿ ಅವನ ಸ್ವಂತದ ಕೋಕೋಕೋಲಾ, ಸೋಡಾ, ಲೆಮನ್ ಇತ್ಯಾದಿ ಪೇಯಗಳ ಬಾಟ್ಲಿಂಗ ವ್ಯವಸಾಯ ಇದೆ. ಲಕ್ಷಾನುಗಟ್ಟಲೆ ಡಾಲರ್ಸ ಗಳಿಸುತ್ತಾನೆ. ಇವನು ಆ ಡಾಲರ್ಸಗಳಿಗೆ ಬೇಸತ್ತು ಹೊರಟಿದ್ದಾನೆ. ಆದರೆ ಅವನ ಉದ್ದಿಮೆಯೇ ಎಂತಹದು ಅಂದರೆ ದುಡ್ಡು ಅವನ ಬೆಂಬತ್ತಿದೆ. ಆಯುಷ್ಯವನ್ನೆಲ್ಲ ದುಡ್ಡುಗಳಿಸುವದ ರಲ್ಲಿ ಕಳೆದೆ ಅಂತ ಪಶ್ಚಾತ್ತಾಪದಿಂದ ಈಗ ಸುಖದ ಶೋಧದಲ್ಲಿದ್ದಾನೆ. ಚರ್ಚಿನಲ್ಲಿ ಅವನಿಗೆ ಈಗ ವಿಶ್ವಾಸವಿಲ್ಲ. ಯಾವದೋ ಚರ್ಚಿಗೆ ಸಾವಿರಾರು ಡಾಲರ್ಸ ಕೊಟ್ಟಿದ್ದ ನಂತೆ. ಅಲ್ಲಿಯ ಪಾದ್ರಿಗಳು ಅವನ ಇಚ್ಛೆಗೆ ವಿರುದ್ಧವಾಗಿ ಆ ಚರ್ಚ್‌ಗೆ ಕಳಸ ಕಟ್ಟಿಸಿದರಂತೆ .

''ಸ್ವಾಯಿನ್ಸ ! ಹಂದಿ ನನ್ಮಕ್ಕಳು ! ಕಟ್ಟಡಗಳನ್ನು ಕಟ್ಟುವ ಕೆಲಸ ಮಾಡುತ್ತಾರೆ. ಆದರೆ ಮನುಷ್ಯ ಮನುಷ್ಯನಿಗೆ ಸಿಗುವದಿಲ್ಲ. ನಾನು ಅವರಿಗೆ ದುಡ್ಡುಕೊಟ್ಟು ಹೇಳಿದೆ. ಮನುಷ್ಯ ಮನುಷ್ಯರ ಭೆಟ್ಟಿ ಒಬ್ಬರಿನ್ನೊಬ್ಬರ ಮನೆಯಲ್ಲಿ ಮಾಡಿಸಿರಿ. ಸಭೆ ಬೇಡ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಮಾರಂಭ ಬೇಡ. ನಮ್ಮ ಊರಿನ ಒಬ್ಬ ಮನುಷ್ಯನನ್ನು ಇನ್ನೊಬ್ಬನ ಮನೆಗೆ ಅತಿಥಿ ಅಂತ ಕಳಿಸಿ ಅವನ ಖರ್ಚು ಕೊಡಿ. ಕ್ರಿಸ್ತನ ಹೆಸರು ಹೇಳಲು ಇಷ್ಟು ದೊಡ್ಡ ಕಟ್ಟಡವೇಕೆ? ಆದರೆ ಪ್ರತಿಯೊಬ್ಬನಿಗೆ ಪಬ್ಲಿಸಿಟಿ ಬೇಕಲ್ಲ? ಕ್ರಿಸ್ತನ ಮನೆಯ ಕಳಸ ಸಾಕಷ್ಟು ಎತ್ತರ ಮಾಡಿ ಅದರದ್ದು ಸಹ ಪಬ್ಲಿಸಿಟಿ ಮಾಡುತ್ತಾರೆ. ಸ್ಟಾಯಿನ್ಸ ! (ಇದು ಅವನ ಪ್ರೀತಿಯ ಶಬ್ದ.) ನನಗೆ ಜಪಾನೀ ಮನುಷ್ಯರು ಭೆಟ್ಟಿಯಾಗುವದೇ ಇಲ್ಲ. "ಆಯ್ ವಾಂಟ ಟು ಮೀಟ ಮೆನ್ ! ಮೆನ್ ಇನ್ ಫ್ಲೆಶ್ ಎಂಡ ಬ್ಲಡ್, ಯು ಸೀ!"

ಕೆಲಹೊತ್ತಿನ ನಂತರ ಅವನಿಗೆ ಪೂರ್ತಿ ಪ್ರಜ್ಞೆ ಬಂದಿತು. ಕಳೆದ ರಾತ್ರಿ ಅವನಿಗೆ ಯಾರೋ ಗೆಯಶಾ ಹತ್ತಿರ ಕರೆದುಕೊಂಡು ಹೋಗುತ್ತೇನೆ ಎಂದು ಹೇಳಿ ಯಾವದೋ ವೇಶ್ಯೆಯ ಹತ್ತಿರ ಕರೆದೊಯ್ದನಂತೆ. ಅಲ್ಲಿ ಅವನು ಸೆರೆ ಕುಡಿದು ಪ್ರಜ್ಞೆ ತಪ್ಪಿದ. ಯಾವನೋ ಒಬ್ಬ ಹಾಟೇಲಿಗೆ ತಂದು ಬಿಟ್ಟ. ಅವನಿಗೆ ಏನೂ ನೆನಪಿರಲಿಲ್ಲ. ಆದರೆ ತಂದು ಬಿಟ್ಟವ ಅವನ ದುಡ್ಡು ದೋಚಿದ್ದ. ಇನ್ನೂರು ಮುನ್ನೂರು ಡಾಲರ್ಸ ಇತ್ತಂತೆ. ಅದನ್ನೂ ಹಾರಿಸಿದ್ದರು. ಅವನಿಗೆ ದುಡ್ಡಿನ ಯೋಚನೆ ಇರಲಿಲ್ಲ. ಬದಲಾಗಿ ಹಾಟೇಲಿಗೆ ತಂದು ಬಿಟ್ಟ ಬಗ್ಗೆ ಕೃತಜ್ಞತೆ ಇತ್ತು. ಅವನ ದೇಶದಲ್ಲಿ ಇಂತಹ ಸಜ್ಜನರು ಇಲ್ಲ ಅಂತ ಅವನು ಹೇಳ್ತಾ ಇದ್ದ. ಕೊನೆಗೆ ತನ್ನ ಕಿಸೆಯಿಂದ ಒಂದು ಕಾಗದ ತೆಗೆದು ತೋರಿಸುತ್ತ, " ಈ ಊರು ಎಲ್ಲಿ ಇದೆ?" ಎಂದು ಕೇಳಿದ.

ಹಿಂದೂಸ್ತಾನದಲ್ಲಿಯ ಮಸೂರಿಯಲ್ಲಿ ಒಂದು ಕ್ರಿಸ್ತೀ ಶಾಲೆಯ ವಿಳಾಸ ಇತ್ತು. "ಈ ವಿಳಾಸ ನಿಮ್ಮ ಹತ್ತಿರ ಹೇಗೆ ಬಂದಿತು?" ನಾ ಕೇಳಿದೆ.

"ಇಲ್ಲಿ ನನ್ನ ಒಬ್ಬ ಮಗ ಕಲಿಯುತ್ತಾನೆ. ಅವನನ್ನು ಭೆಟ್ಟಿಯಾಗುವವನಿದ್ದೇನೆ. ಜಗತ್ತಿನ ಹದಿನಾರು ಹದಿನೇಳು ದೇಶಗಳಲ್ಲಿ ನನ್ನ ಮಕ್ಕಳು ಕಲಿಯುತ್ತಿದ್ದಾರೆ. ಆದರೆ ನಿಮ್ಮ ದೇಶದಲ್ಲಿ ಮಾತ್ರ ಶಿಕ್ಷಣ ಬಹಳೇ ಸೋಯಿ. ಈ ನನ್ನ ಮಗನಿಗೆ ನಾನು ತಿಂಗಳಿಗೆ ಬರೀ ಇಪ್ಪತ್ತೈದು ಡಾಲರ ಕಳಿಸುತ್ತೇನೆ," ನಂತರ ಅವನು ಕಿಸೆಯಿಂದ ಒಂದು ಡಾಯರಿ ತೆಗೆದ ಅದರಲ್ಲಿ ಎಷ್ಟೋ ಮಕ್ಕಳ ಫೋಟೋಗಳಿದ್ದವು. ಹಿಂದೀ, ಚೀನೀ ನಿಗ್ರೊ, ಗೌರಕಾಯರು. ಅವನ ಈ ಅಂತರಾಷ್ಟ್ರೀಯ ಸಂತತಿ ನೋಡಿ ನಾನು ಬೆರಗಾದೆ. ಇವರಿಬ್ಬರು ಅಮೇರಿಕೆಯಲ್ಲಿ ಇದ್ದಾರೆ. ಅವರನ್ನು ನೋಡಿದ್ದೇನೆ. ಇವ ಹಾಂಗ್ ಕಾಂಗದ ಮೊದಲನೆಯವ. ಇವನು ಬೆಂಗಕಾಕ್‌ದ ಮೊದಲನೆಯವ " - ನಾನೂ ಇನ್ನೂ ಗಲಿಬಿಲಿಗೊಂಡೆ. ಕೊನೆಗೆ ಗೊತ್ತಾಯಿತು ಏನೆಂದು. ಈ ಗೃಹಸ್ಥ ಬೇರೆ ಬೇರೆ ದೇಶಗಳ ಹದಿನಾರು ಹದಿನೇಳು ಮಕ್ಕಳ ಶಿಕ್ಷಣದ ಹೊಣೆ ಹೊತ್ತಿದ್ದಾನೆ. ಅವರಿಂದ ಅವನಿಗೆ "ಡಿಯರ್ ಡ್ಯಾಡ್" ಎಂಬ ಸಂಬೋಧನೆ ಹೊತ್ತು ಪತ್ರಗಳು ಬರುತ್ತವೆ. ಈ ಗೃಹಸ್ಥನಿಗೆ ಬೇರೆ ಬೇರೆ ದೇಶಗಳ ಕುಟುಂಬಗಳಲ್ಲಿ ಹೋಗಿ ಇರುವ ಇಚ್ಛೆ ಇತ್ತು. "ಈ ಮಕ್ಕಳು ದೊಡ್ಡವರಾಗಿ ಮದುವೆಯಾದರೆ ನನಗೆ ಬೇರೆ ಬೇರೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೇಶಗಳಲ್ಲಿ ಹೋಗಿ ಇರಲು ಮನೆ ಇರುತ್ತದೆ,'' ಎಂದು ಹೇಳುವಾಗ ಆನಂದದಿಂದ ಅವನ ಎದೆ ತುಂಬಿ ಬರುತ್ತಿತ್ತು. ಅವನ ಲಗ್ನದ ಹೆಂಡತಿ ಅವನನ್ನು ಬಿಟ್ಟು ಹೋಗಿದ್ದಳು. ಆದ್ದರಿಂದ ''ಅಮೇರಿಕನ್ ಸ್ತ್ರೀ '' ಯ ವಿಷಯದಲ್ಲಿ ಅವನಿಗಿದ್ದ ಅಭಿಪ್ರಾಯ ನಾಲ್ಕು ಜನರಲ್ಲಿ ಹೇಳುವಂತಹದಲ್ಲ.

''ನಿನ್ನ ದೇಶದಲ್ಲಿ ನೀನು ನನ್ನನ್ನು ನಿನ್ನ ಮನೆಗೆ ಕರೆಯುವಿಯಾ?''

''ಅವಶ್ಯವಾಗಿ - '' ನಾನು ಅವನಿಗೆ ಆಶ್ವಾಸನ ಕೊಟ್ಟೆ. ''ಆದರೆ ಮುಂಬಯಿಯಲ್ಲಿ ನಿನಗೆ ಸರಾಯಿ ಕೊಡುವದು ನನಗೆ ಸಾಧ್ಯವಿಲ್ಲ. ಏಕೆಂದರೆ ಅಲ್ಲಿ ಅದರ ಬಂದಿ ಇದೆ'' - ನನ್ನ ಮಾತು ಕೇಳಿ ಏನೋ ಒಂದು ವಿನೋದ ಕೇಳಿದವನಂತೆ ಬಿದ್ದು ಬಿದ್ದು ನಕ್ಕ.

ರಾತ್ರಿ ನಾನು ಡಾಯೀ - ಇಚೀ ಹಾಟೇಲಿನ ಲಾಜನಲ್ಲಿ ಆರಾಮಾಗಿ ಕುಳಿತಿದ್ದೆ. ಅಷ್ಟರಲ್ಲಿ ಸ್ವಾಗತಕಕ್ಷೆಯ ಮುಂದೆ ಜನರು ಸೇರಿದ್ದು ನೋಡಿದೆ. ಇತರರಂತೆ ನಾನೂ ಓಡಿದೆ. ನೋಡಿದರೆ ಹದಿನಾರು ಮಕ್ಕಳ ಧರ್ಮಪಿತ ಸಾಕಷ್ಟು ಕುಡಿದು ನೆಲಕವಚಿ ಬಿದ್ದಿದ್ದ. ತಕ್ಷಣ ನಾನು ಮುಂದೆ ಹೋಗಿ ಅವನನ್ನು ಎತ್ತುವಲ್ಲಿ ಸಹಾಯ ಮಾಡಿದೆ. ಆ ಅವಸ್ಥೆಯಲ್ಲೂ ಅವನು ನನ್ನನ್ನು ನೋಡಿದ. ಕಣ್ಣುಗಳು ಅಗಲವಾದವು. ಬಹಳ ವಿಚಿತ್ರವಾಗಿ ನನ್ನ ನೋಡಿ, ''ಓ sss ಯೂ sss ಇಂಡಿಯಾ .... ಯs ಸ್ ವುಯಿ ಮೆಟ್'' ''ನಾವು ಭೆಟ್ಟಿಯಾಗಿದ್ದೆವು. ಗಾಡ್ ಬ್ಲೆಸ್ ಯು!'' ನೆರೆದವರು ನನ್ನ ಮುಖ ನೋಡಿದರು. ನನ್ನ ಡಾಯರಿಯಲ್ಲಿ ಅವನ ಕಾರ್ಡು ಇತ್ತು. ಅವನ ಹೆಸರಿನಿಂದ ಹಾಟೇಲಿನವರು ಅವನ ಕೋಣೆ ಹುಡುಕಿದರು. ನಾವೆಲ್ಲ ಅವನನ್ನು ಎತ್ತಿ ಅವನ ಕೋಣೆಗೆ ಒಯ್ದು ಅವನನ್ನು ಪಲಂಗದ ಮೇಲೆ ಮಲಗಿಸಿದೆವು. ಮನುಷ್ಯನನ್ನು ಅರಸುತ್ತ ಜಗತ್ತಿನ ತುಂಬ ತಿರುಗುವವ, ಅಜ್ಞಾತ ದೇಶಗಳ ಅನಾಥ ಮಕ್ಕಳಿಗೆ ಶಿಕ್ಷಣ ಕೊಟ್ಟು, ವೃದ್ಧಾಪ್ಯದಲ್ಲಿ ಅವರೆಲ್ಲರ ಕುಟುಂಬಗಳಲ್ಲಿ ಅಜ್ಜನೆನಿಸಿಕೊಂಡು ಇರುವ ಇಚ್ಛೆಯಿದ್ದ ಸಹೃದಯಿ ಮನುಷ್ಯನೀತ ಅಂತ ನನಗೊಬ್ಬನಿಗೇ ಗೊತ್ತಿತ್ತು ಅಲ್ಲಿ. ಉಳಿದವರ ದೃಷ್ಟಿಯಲ್ಲಿ ಪ್ರಮಾಣ ಮೀರಿ ಕುಡಿಯುವ ಕುಡುಕನಾಗಿದ್ದ ಅವನು. ಸುತ್ತುವರಿದ ಜನ 'ಅರಗಿಸುವ ಶಕ್ತಿ ಇಲ್ಲದಿದ್ದರೆ ಏಕೆ ಇಷ್ಟು ಕುಡಿಯಬೇಕು?'' ಎನ್ನುವಂತೆ ನಮ್ಮ ಕೆಲಸ ನೋಡುತ್ತ ಇದ್ದರು. ಆ ಅಮೇರಿಕನ್ ನನ್ನ ಕೈಯನ್ನು ಗಟ್ಟಿಯಾಗಿ ಹಿಡಿದಿದ್ದ. ಒಬ್ಬ ಮನುಷ್ಯ ಅವನಿಗೆ ಸಿಕ್ಕಿದ್ದ. ಆ ಅವಸ್ಥೆಯಲ್ಲೂ ಅವನನ್ನು ಬಿಡುವ ಮನಸ್ಸು ಆ ಅಮೇರಿಕನನಿಗೆ ಇರಲಿಲ್ಲ. ನಾನೂ ಕೆಲಹೊತ್ತು ನನ್ನ ಕೈಯನ್ನು ಅವನ ಕೈಯಲ್ಲೇ ಇಟ್ಟು ಸುಮ್ಮನಿದ್ದೆ. ಅವನ ಸುಖ ದು:ಖಗಳ ಕಥೆ ನಾನು ಕೇಳಿದ್ದೆ. ''ದುಡ್ಡಿನಲ್ಲೇನಿದೆ?'' ಎಂಬ ಅವನ ತತ್ವಜ್ಞಾನವನ್ನು ಕೆಲವು ಕ್ಷಣ ನಾನೂ ಒಪ್ಪಿದ್ದೆ. ಕ್ರಿಸ್ತ ಚರ್ಚಿನಲ್ಲಿ ಇರುವದಿಲ್ಲವೆಂಬ ಅಭಿಪ್ರಾಯವನ್ನು ನಾನೂ ಒಪ್ಪಿದ್ದೆ. ಅದೂ ಅಲ್ಲದೆ ಅನಾಥ ಮಕ್ಕಳ ಪಾಲನೆ ಮಾಡೋ ಅಂಥಾ ಈಶ್ವರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸೇವೆಯನ್ನೇ ನೀನು ಮಾಡುತ್ತಿದ್ದಿಯಾ ಎಂಬುದಾಗಿ ಏನೇನೋ ಅವನಿಗೆ ಹೇಳಿದ್ದೆ. ದಿನವೂ ಸರಾಯಿ ಗ್ಲಾಸಿನಲ್ಲಿ ತನ್ನನ್ನು ಮುಳುಗಿಸಿ ಇಡುವ ಈ ಧನಿಕ ಅಮೇರಿಕನ್ ಪ್ರವಾಸಿಗೆ ನನ್ನಂತಹ ಪೂರ್ಣ ಪರಕೀಯ ಮನುಷ್ಯನಿಂದ ಸಿಕ್ಕ ಚುಟುಕಿಯಷ್ಟು ತನ್ನತನ ಲೆಕ್ಕವಿಲ್ಲದಷ್ಟು ಅನಿಸಿತೋ ಏನೋ, ಅಂತಹ ಪ್ರಜ್ಞೆ ತಪ್ಪಿದ ಅವಸ್ಥೆಯಲ್ಲೂ ಅವನು ನನ್ನ ಕೈಯನ್ನು ಗಟ್ಟಿಯಾಗಿ ಹಿಡಿದಿದ್ದ.

ಒಂದೆರಡು ದಿನಗಳಲ್ಲಿ ನಾವು ಟೋಕಿಯೋಕ್ಕೆ ವಿದಾಯ ಹೇಳುವವರಿದ್ದೆವು. ಅಷ್ಟರಲ್ಲಿ ಆ ಗೃಹಸ್ಥನನ್ನು ಭೆಟ್ಟಿಯಾಗುವ ಪ್ರಯತ್ನ ಮಾಡಿದೆ. ಆದರೆ ಅವನು ಮಾಯವಾಗಿದ್ದ. ಮನುಷ್ಯರನ್ನು ಹುಡುಕುವದಕ್ಕಾಗಿ ಜಗತ್ತಿನಲ್ಲಿ ಸಂಚರಿಸುತ್ತಿದ್ದ. ಏಕಾಕಿ ದಿನದ ಇಪ್ಪತ್ತುನಾಲ್ಕು ಗಂಟೆ ಪ್ರಜ್ಞೆ ಕಳೆದುಕೊಂಡು ಇರುತ್ತಿದ್ದ. ಮುಂದೆ ಅವನದೇನಾಯಿತೋ ದೇವರೇ ಬಲ್ಲ. ಮನುಷ್ಯ ಸ್ವಭಾವವೂ ಎಷ್ಟು ವಿಚಿತ್ರ? ಆದ್ದರಿಂದ ಮುಂದೆ ಎಂದಾದರೂ ಆ ಮನುಷ್ಯನ ಆಯುಷ್ಯ ತೀರಿದರೆ ಆ ಹದಿನಾರೆರಡಲೇ ಮೂವತ್ತೆರಡು ಕಣ್ಣುಗಳಿಂದ ನೀರಾದರೂ ಬರುವದೋ ಇಲ್ಲವೋ ಎಂಬ ಶಂಕೆ ನನ್ನ ಮನಸ್ಸಿನಲ್ಲಿ ಇಣುಕಿ ಹೋಯಿತು. ಏಕೆಂದರೆ ಕೃತಜ್ಞತೆಯ ಅಶ್ರುಗಳೂ ದಿನೇ ದಿನೇ ದುರ್ಮಿಳವಾಗುತ್ತಿವೆ.

ಜಪಾನಿಗೆ ವಿದಾಯ ಹೇಳುವ ಮೊದಲು ಇನ್ನೊಂದು ಸಲ ಅರಳಿ ಬಿರಿದ ಸಾಕೂರಾ ನೋಡೋಣ ಎಂದು ನಾವು ಆ ವಿಸ್ತೀರ್ಣ ಏನೋ ಪಾರ್ಕಿಗೆ ಹೋದೆವು. ಬೆಳಗಿನ ಹೊತ್ತು. ಹಿಂದಿನ ದಿನ ಆ ಪಾರ್ಕಿನಲ್ಲಿ ಮಜ ಮಾಡಲು ಬಂದ ಜನ ಆ ಸುಂದರ ತೋಟದಲ್ಲಿ ತಿಂದೆಸೆದ ಕಾಗದಗಳ ಉಂಡೆ, ಖಾಲಿಯಾದ ಡಬ್ಬಗಳು, ಬಾಟಲಿಗಳು ಇವುಗಳಿಂದ ತುಂಬಿ ಅದು ನರಕದಂತೆ ಕಾಣುತ್ತಿತ್ತು. ಮಳೆಯಿಂದಾಗಿ ಎಲ್ಲ ಕಡೆಗೆ ರಾಡಿಯೂ ಆಗಿತ್ತು. ಸಾಕೂರಾ ಇತ್ತು. ಆದರೆ ಗಿಡಗಳ ಮೇಲೆಯೇ ಹೊಲಸು ಬೆಳೆದರೆ ಬರುವಂತಹ ಹೀನ ಕಳೆ ಈ ಪಾರ್ಕಿಗೆ ಬಂದಿತ್ತು. ಈ ಚೆರಿಯ ಚರಿತ್ರೆಯೇ ಹಾಗೇ, ನಾಲ್ಕೇ ದಿನದ್ದು! ಅದರಲ್ಲೇ ' ದೋ ಆರಜೂ ಮೆ ಕಟಗಯೇ ದೊ ಇಂತಜಾರಮೆ,' - ಅಂದರೆ ದಾರಿ ಕಾಯ್ತಾ ಕಾಯ್ತಾ ಎರಡು ತೀರಿದರೆ, ಎರಡು ಚಿಂತೆಯಲ್ಲಿ ತೀರಿದವು ! ಐದನೆಯ ದಿನ ಅದಕ್ಕೆ ಮೃತಕಳೆ ಬರುತ್ತದೆ. ಸಾಕೂರೆಯ ಉತ್ಸವ ಮುಗಿದಿತ್ತು. ದೇವರ ಜಾತ್ರೆ ಮುಗಿದನಂತರ ಅಲ್ಲಿ ಉಳಿಯುವದು ಹೆಜ್ಜೆಗಳ ಗುರುತು ಮತ್ತು ಉದಾಸೀನತೆ. ಆ ದಿನವೂ ಏನೋ ಪಾರ್ಕ ನೋಡಿದಾಗ ನನಗೆ ಹಾಗೇ ಅನಿಸಿತು.

ಜಪಾನಿನಲ್ಲಿರಲು ಇನ್ನು ಒಂದೇ ಒಂದು ದಿನ ಉಳಿದಿತ್ತು. ಪರುಳೇಕರ ಅವರು ಪುನಃ ತಮ್ಮ ಕಾರು ತಂದರು. ಆಗ ನಾವು ಫುಜಿ ಪರ್ವತದ ಸರೋವರದ ವಿಭಾಗದಲ್ಲಿ ಸುತ್ತಾಡಿ ಬಂದೆವು. ಆ ದಿನ ರವಿವಾರ. ಎಂದಿನಂತೆ ಟೋಕಿಯೋ ನಗರದ ಹೊರಗೆ ಸಾವಿರಾರು ಮೋಟಾರು. ಅದಕ್ಕೂ ಹತ್ತುಪಟ್ಟು ಸ್ಕೂಟರುಗಳ ಸಾಲು ನಿಂತಿತ್ತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾತಾವರಣವೆಲ್ಲ ಆನಂದಮಯವಾಗಿತ್ತು. ಆ ದಿನ ಜಪಾನಿನ 'ಪುತ್ರ ದಿನ' ಇತ್ತು. ನಾವು ಆಕಾಶ ದೀಪಗಳನ್ನು ಹಾಕುವ ಹಾಗೆ ಅಲ್ಲಿ ಬಿದಿರಿನ ಗಳಕ್ಕೆ ಸುಂದರವಾದ ಕಾಗದದ ಮೀನುಗಳನ್ನು ತೂಗು ಹಾಕಿದ್ದರು. ಅವು ಗಾಳಿಯಲ್ಲಿ ತೇಲುತ್ತಿದ್ದವು. ಬಿಸಿಲಿಗೆ ಹೊಳೆಯುತ್ತಿದ್ದವು. ಮೀನುಗಳು ಹೇಗೆ ಪ್ರವಾಹದ ವಿರುದ್ಧ ದಿಶೆಯಲ್ಲೂ ಈಜುತ್ತವೆಯೋ ಹಾಗೇ ಮನುಷ್ಯ ಕೂಡ ಎಂಥದೇ ಪ್ರತಿಕೂಲ ಪರಿಸ್ಥಿತಿಯಲ್ಲೂ ಸ್ಥೈರ್ಯ ಬಿಡದೆ ಮುಂದುವರೆಯಬೇಕು, ಎಂಬುದರ ಪ್ರತೀಕವದು. ಮನೆಯಲ್ಲಿ ಮಕ್ಕಳೆಷ್ಟೊ ಅಷ್ಟೇ ಮೀನುಗಳು ಹಿರೇ ಮಗುವಿನದು ದೊಡ್ಡ ಮೀನು. ಹತ್ತು ಹತ್ತು ಫೂಟಿನ ಆಕಾರದ ಮೀನು ಇರುತ್ತವೆ. ಜಪಾನೀಯರು ತಮ್ಮ ಮಕ್ಕಳೆದುರು ಈ ಮೀನುಗಳ ಆದರ್ಶವನ್ನು ಇಟ್ಟುಕೊಂಡು ಬಂದಿದ್ದಾರೆ. ...ಂದ ಆಪತ್ತುಗಳನ್ನು ಎದುರಿಸಲು ಕಲಿಸುವ ಈ ಕಲೆ ಮಕ್ಕಳ ಎಳೆ ಮನಸ್ಸಿನ ಮೇಲೆ ಬಲವಾದ ಪರಿಣಾಮ ಬೀರುತ್ತದೆ. ಇಂಥಹ ಹಬ್ಬಗಳಿಂದ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ರಾಷ್ಟ್ರದ ಚಾರಿತ್ರ್ಯವನ್ನು ನಿರ್ಮಿಸುತ್ತವೆ. ಇದನ್ನು ಹೀಗೂ ಹೇಳಬಹುದು. ರಾಷ್ಟ್ರೀಯ ಸ್ವಭಾವದ ಪ್ರತಿಬಿಂಬವನ್ನು ಈ ಹಬ್ಬಗಳನ್ನು ಆಚರಿಸುವ ಪದ್ಧತಿಯಲ್ಲಿ ಕಾಣಬಹುದು. ಪರಾಕ್ರಮೀ ಮರಾಠಿಗರ ದಸರೆ ಹಬ್ಬವನ್ನು ಸೀಮೋಲ್ಲಂಘನದಿಂದಲೇ ಆಚರಿಸಲಾಗುತ್ತಿತ್ತು. ಮರಾಠಿ ನಾಟಕದ ಕಂಪನಿಗಳ ಜಾಹೀರಾತುಗಳಲ್ಲಿ ಪುಣೆ, ಸೋಲಾಪುರ ಜಯಿಸಿ, ಕಂಪನಿ, ನಾಗಪುರದ ಮುಕ್ಕಾಮಿಗೆ ಬರುತ್ತಾ ಇದೆ - ' ಎಂಬ ಸೈನ್ಯದ ಭಾಷೆಯಲ್ಲಿಯೇ ಇರುತ್ತದೆ. ಹಬ್ಬ ಮತ್ತು ವಾಕ್ - ಪ್ರಚಾರಗಳಿಂದ ಆಯಾ ಪ್ರಾಂತದ ಸ್ವಭಾವ ದರ್ಶನವಾಗುತ್ತದೆ. ಆ ದಿನ ಶೃಂಗರಿಸಿದ ಪಲ್ಲಕ್ಕಿಗಳನ್ನು ತಕ್ಕೊಂಡು ಮೆರೆಯುತ್ತ ನಡೆದ ನೂರಾರು ಮಕ್ಕಳನ್ನು ನಾವು ಕಂಡೆವು. ಹಾಡುತ್ತ ಬಾರಿಸುತ್ತ ಮೆರವಣಿಗೆಗಳು ಸಾಗಿದ್ದವು. ಪಲ್ಲಕ್ಕಿಗಳ ಕಲಾಕುಸುರು ಮೆಚ್ಚುವಂತಹದಿತ್ತು. ಜಪಾನಿನಲ್ಲಿ 'ಪುತ್ರ ದಿನ' ದಂತೆ 'ಕನ್ಯಾ ದಿನ' ವನ್ನೂ ಆಚರಿಸುತ್ತಾರೆ. ಆ ದಿನ ಗೊಂಬೆಗಳ ಪೂಜೆಯಾಗುತ್ತದೆ. ನಮ್ಮಲ್ಲಿಯ ಗೌರಿ ಪೂಜೆಯ ತರಹವೇ ಆರಾಸನ್ನು ಮಂಡಿಸಿರುತ್ತಾರೆ. ಡಿಪಾರ್ಟಮೆಂಟ ಸ್ಟೋರ್ಸಗಳಲ್ಲಿ ಈ ಆರಾಸಿನ ಸಾಮಾನುಗಳನ್ನು ವರ್ಷವಿಡೀ ಮಾರುತ್ತಾರೆ. ಜಪಾನಿನ ಮಕ್ಕಳಿಗಾಗೇ 'ಶಿಚೀ-ಗೋ-ಸಾನ' ಎಂಬದೊಂದು ಹಬ್ಬವಿದೆ. 'ಶಿಚೀ-ಗೋ-ಸಾನ' ಎಂದರೆ ಏಳು, ಐದು, ಮೂರು, ಆಗ ಯಾರಿಗೆ ಈ ಮೂರರ ಪೈಕಿ ಒಂದು ವರ್ಷ ಹತ್ತಿರುತ್ತದೋ ಅವರಿಗಾಗಿ ಈ ಹಬ್ಬ. ಆ ದಿನ ಆ ಮಕ್ಕಳಿಗೆ 'ಕಿಂಟೋಕೀ' ಹೆಸರಿನ ವಜ್ರದೇಹಿ ಪುರಾಣಪುರುಷನ ಮೂರ್ತಿಯನ್ನು ಕಾಣಿಕೆಯಾಗಿ ಕೊಡುತ್ತಾರೆ. ಈ ಜಪಾನೀ ಭೀಮ ಜೀವಂತ ಕರಡಿಯನ್ನು ಕೈಯಿಂದ ಗುದ್ದಿ ಗುದ್ದಿ ಕೊಂದಿದ್ದನಂತೆ. 'ದಾರುಮಾ' ಹೆಸರಿನ ಇನ್ನೊಂದು ಗಂಡು ಗೊಂಬೆಯಿದೆ. ಇವನನ್ನು ನೀವು ಎಷ್ಟೋ ಸಲ ಬೀಳಿಸಿದರೂ ಅದು ಮತ್ತೆ ಎದ್ದು ಕೂರುತ್ತೆ. ಎಲ್ಲ ಆಟಿಗೆಗಳು ಸೂಚ್ಯವಾಗಿವೆ.

ಸಂಪೂರ್ಣ ಜಪಾನ ದೇಶವೇ ಆ ಮೀನುಗಳು ಅಥವಾ ದಾರುಮಾ ತರಹ ಇದೆ. ಸದೈವ ಅಪರಾಜಿತ. ಚಿಕ್ಕಂದಿನಂದಲೇ ವಿಪತ್ತುಗಳನ್ನು ಎದುರಿಸಿ ಮೇಲೇಳುವ ಪಾಠ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಲಿತಿರುತ್ತಾರೆ. ಭೂಕಂಪದಲ್ಲಿ ಮನೆಗಳು ನೆಲಸಮವಾಗುತ್ತವೆ. ಚಳಿಗಾಲದಲ್ಲಿ, ಹಿಮದ ಆಚ್ಛಾದನೆಯಲ್ಲಿ ಹೆಪ್ಪುಗಟ್ಟಿರಬೇಕಾಗುತ್ತದೆ. ಭಯಾನಕ ಟಾಯಫೂನ್ಸ ಗಳೂ ಬರುತ್ತವೆ. ಪ್ರತಿ ಜಪಾನೀಯನಿಗೆ ನಿಸರ್ಗದೊಡನೆ ಹೋರಾಡುತ್ತಲೇ ಜೀವಿಸಬೇಕಾಗುತ್ತದೆ. ಅಂತಹುದರಲ್ಲಿ ಯುದ್ಧಗಳೂ ಪ್ರಾರಂಭವಾಗುತ್ತವೆ. ಕಟ್ಟಿಗೆಯ ಮನೆಗಳಿಗೆ ಬೆಂಕಿ ಬೀಳುತ್ತದೆ. ಊರಿಗೆ ಊರೇ ಭಸ್ಮವಾಗಿ ಹೋಗುತ್ತದೆ. ಪ್ರತಿಯೊಂದು ಹಳ್ಳಿಯಲ್ಲಿ ಅಗ್ನಿರಕ್ಷಕರಿಗೆ ಊರಿನ ನಿಗಾ ಇಡಲು ಎತ್ತರವಾಗಿ ಕಟ್ಟಿದ ಸ್ತಂಬಗಳಿರುತ್ತವೆ. ಈ ಎಲ್ಲ ಆಪತ್ತುಗಳಿಂದ ಅವನ ಪಾಲಿಗೆ ಉಳಿದುದೆಲ್ಲ ಅವನಿಗೆ ಬಹಳ ಅಪರೂಪದ್ದು ಅನಿಸುತ್ತದೆ. ಅವನು ಹೂವು ಗಿಡಗಳನ್ನು ಜತನದಿಂದ ಕಾಪಾಡುತ್ತಾನೆ. ಮನೆಯನ್ನು ಬಹಳ ಮುತುವರ್ಜಿಯಿಂದ ನೋಡಿಕೊಳ್ಳುತ್ತಾನೆ. ಶ್ರೀಮಂತ ಅಥವಾ ಬಡವನಿರಲಿ ಅವನು ತನ್ನ ಮಕ್ಕಳನ್ನು ಪ್ರಾಣಕ್ಕಿಂತ ಮೇಲಾಗಿ ಪ್ರೀತಿಸುತ್ತಾನೆ. ಅಷ್ಟೇ ಅಲ್ಲ ಜೀವನವನ್ನು ಎಲ್ಲ ಸ್ಥಿತಿಗಳಲ್ಲಿ ಎದೆಗಾರಿಕೆಯಿಂದ ಎದುರಿಸಲು ಕಲಿಸುತ್ತಾನೆ. ದಿನನಿತ್ಯದ ನಡುವಳಿಕೆಯಲ್ಲಿ ಮೇಣದಂತೆ ಮೃದುವೆನಿಸಿದ ಜಪಾನಿಗ ಫುಜಿ ಪರ್ವತದಂತೆ ಕಂಡ. ನೋಡಲು ಚಂದ್ರನಂತೆ ಶೀತಲ, ಸೌಮ್ಯ ಆದರೆ ಉಳಿದರೆ ಪ್ರಳಯ.

ನಿಜವಾದ ಫೂಜಿ ಮಾತ್ರ ಆ ದಿನ ನಮ್ಮ ಮೇಲೆ ನೊಂದಿದ್ದ. ಆ ಪರಿಸರದಲ್ಲಿ ಮೋಟಾರಿನಲ್ಲಿ ಸಾಕಷ್ಟು ತಿರುಗಿದೆವು. ಆದರೆ ಫೂಜಿಯಪ್ಪ ಮಾತ್ರ ತಲೆ ಮೇಲೆ ದಟ್ಟವಾದ ಮಂಜಿನ ಚಾದರ ಹೊತ್ತು ಕೂತಿದ್ದ. ಅದನ್ನುಅವ ಕಿಂಚಿತ್ತೂ ಸರಿಸಲಿಲ್ಲ. ತಮ್ಮ ಅತಿಥಿಗಳನ್ನು ಅರೆ ಮನಸ್ಸಿನಿಂದ ಕಳಿಸಿದ ಇವನೊಬ್ಬನೇ ಜಪಾನಿ ನಮಗೆ ಪರಿಪೂರ್ಣ ಆನಂದ ಕೊಟ್ಟಿತು. ಅಂತಲೇ ಆ ಭೂಮಿಯನ್ನು ಬಿಡುವ ಮೊದಲು ಆಶೆಬುರುಕನ ಹಾಗೆ ಕಾರಿನಲ್ಲಿ ಕೂತು ನೂರಿನ್ನೂರು ಮೈಲು ಆ ಸುಂದರ ಭೂಮಿಯಲ್ಲಿ ತಿರುಗಿ ರಾತ್ರಿ ಟೋಕಿಯೋಕ್ಕೆ ಬಂದೆ. ಮರುದಿನ ಮುಂಜಾನೆ ಏಅರ್ ಇಂಡಿಯಾದ ಮೆಟ್ಟಿಲ ಮೇಲೆ ನಿಂತು ಕ್ಷಣ ಹೊತ್ತು ಆ ವಿಸ್ತೀರ್ಣವಾದ ವಿಮಾನ ನಿಲ್ದಾಣವನ್ನು ನೋಡುತ್ತ, ಆ ಪುರುಷಾರ್ಥ ಗಹನ ಮತ್ತು ಸುಂದರ ಜಪಾನವನ್ನು ಉದ್ದೇಶಿಸಿ ನಾನೇ ಅಂದೆ. '' ಸಾಯೊನಾಽಽ ರಾ!''

-ಅತಿ ಪೂರ್ವದ ಯಾತ್ರೆ ತೀರಿತು. ನಾಲ್ಕು ತಿಂಗಳು ತಿರುಗುತ್ತಾ ಇದ್ದೆ. ಪ್ರತಿಯೊಂದು ದಿನವೂ ಹೊಸ ದಿನವಿತ್ತು. ಮನಸ್ಸಿನಲ್ಲಿ ಯಾವುದೇ ಪೂರ್ವಗ್ರಹವಿರಲಿಲ್ಲ. ರಾಜಕೀಯ, ಧಾರ್ಮಿಕ ಅಥವಾ ಕಲೆಗಳ ಬಗೆಗೆ ಯಾವುದೇ ಹಟ ಹಿಡಿಯದೇ ನೋಡಲು ಸಿಕ್ಕದ್ದನ್ನು ನೋಡಿದೆ. ಭೆಟ್ಟಿಯಾಗಲು ಸಾಧ್ಯವಿದ್ದವರನ್ನು ಭೆಟ್ಟಿಯಾದೆ. ಎಲ್ಲಿಯಾದರೂ ಸಂಭಾಷಣೆಗೆ ಪ್ರಾರಂಭ ಮಾಡಿದರೆ ಪ್ರತಿಸಾದ ಸಿಕ್ಕುವಂತಹ ಮುಖ ಕಂಡರೆ ನಾನೇ ಮೊದಲು ಮಾತಿಗೆ ಆರಂಭಿಸುತ್ತಿದ್ದೆ. ಎಷ್ಟೋ ಅಪರಿಚಿತರೊಡನೆ ಹರಟಿದೆ. ವಿಮಾನಿನದೇ ಅಲ್ಲ ಬಸ್ಸಿನ ತಿಕೀಟು ತೆಗೆಯುವದರಿಂದ ಹಿಡಿದು ಹಾಟೇಲಿನಲ್ಲಿ ಕೋಣೆ ಗಿಟ್ಟಿಸುವದರ ತನಕ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮತ್ತು ದೇಶಿ ವಿದೇಶೀ ರಾಯಭಾರಿ ಕಚೇರಿಗಳಿಂದ ವ್ಹೀಸಾ ಮತ್ತು ತತ್ಸಮ ಪರವಾನಿಗೆಗಳನ್ನು ಪಡೆಯಲು ಹಾಕಬೇಕಿದ್ದ, ವಾದ ವಿವಾದ ಹಾಗೂ ಎಡತಾಕು ಪಟ್ಟಿಗಳ ಕೆಲಸವನ್ನು, ನನ್ನ ಜೊತೆಗೆ ಇದೊಂದೇ ಅಲ್ಲದೆ ಆಯುಷ್ಯದ ಪ್ರವಾಸದ ಮೇಲೆಯೇ ಹೊರಟ ನನ್ನ ಸಹಧರ್ಮಚಾರಿಣಿಯ ಮೇಲೆ ಹೊರಿಸಿದ್ದೆ. ಆ ನಾಲ್ಕು ತಿಂಗಳಲ್ಲಿ ಪೂರ್ವದ ಸೂರ್ಯೋದಯವನ್ನು ನಾನಾ ಊರುಗಳಲ್ಲಿ ನೋಡಿದೆ. ಒಂದೆಡೆ ಬಿಸಿಲು ಇದ್ದರೆ ಇನ್ನೊಂದೆಡೆ ಮಳೆ ಇತ್ತು. ಒಂದೆಡೆ ಹೆಪ್ಪುಗಟ್ಟುವ ಚಳಿ ಇದ್ದರೆ ಇನ್ನೊಂದೆಡೆ ಬೆವರಿನ ಒದ್ದೆಯಾಗುವ ಶೆಖೆ. ಒಬ್ಬ ಪ್ರೀತಿಯಿಂದ ಬೇಯಿಸಿದ ಗೋವಿನ ಜೋಳದ ತೆನೆ ಕೊಟ್ಟ. ಇನ್ನೊಬ್ಬ ಮೂರು ಮೂರು ಗಂಟೆ ನಡೆಯುವ ಚೀನಿ ರಸದೌತಣಕ್ಕೆ ಆಮಂತ್ರಿಸಿದ. ಯಾತ್ರೆ ಮುಗಿಯುತ್ತ ಬಂದಾಗ ಈ ಎಲ್ಲ ಚಿತ್ರಗಳು ತಲೆಯಲ್ಲಿ ದಟ್ಟಣೆ ಮಾಡುತ್ತಾ ಇದ್ದವು. ಒಬ್ಬ ಜಪಾನೀ ಗೃಹಸ್ಥ ನನ್ನನ್ನು ಕೇಳಿದ.

''ಏನ್ರೀ, ಈ ಪ್ರಯಾಣ ಯಾವ ಸಂಸ್ಥೆಯ ವತಿಯಿಂದ ಕೈಗೊಂಡಿರಿ?''

''ಕುಟುಂಬ ಸಂಸ್ಥೆಯ ವತಿಯಿಂದ! ಒಂದೇ ಚಪ್ಪರದ ಕೆಳಗೆ ಇರುವ ಕುಟುಂಬ. ಇದು ನನ್ನ ಮೆಚ್ಚಿನ ವಿಷಯ'' ಅವನಿಗೆ ಬಹಳ ಆನಂದವಾಯಿತು. ಅವನ ಮನೆಯಲ್ಲಿ ಮಕ್ಕಳ ಮರಿಗಳೊಂದಿಗೆ ಕುಳಿತು ಊಟ ತಿಂಡಿ ಆಯಿತು. ಮನೆಯಲ್ಲಿ ಅತಿಥಿ ಇರಬೇಕು ಎನ್ನುವ ಇಚ್ಛೆ ಎಲ್ಲ ಕಡೆಗೂ ಕಂಡು ಬಂದಿತು. ಮಕ್ಕಳ ಚಿಲಿಪಿಲಿ ಇದೆ. ವೃದ್ಧ ತಾತ ಅಜ್ಜಯ್ಯರ ಕಣ್ಣುಗಳಿಂದ ಅವರ ಕನ್ನಡಕದ ಹೊರಗೆ ಆದರಭಾವ ಒಸರುತ್ತಿತ್ತು. ಯಜಮಾನಿ ದಕ್ಷತೆಯಿಂದ ಕೆಲಸ ಮಾಡುತ್ತಾಳೆ. ಯಜಮಾನ ಭಾರತದ ಬಗ್ಗೆ ಹಿಂದೂ ರೀತಿ ಪದ್ಧತಿಗಳ ಬಗೆಗೆ ಪ್ರಶ್ನೆ ಕೇಳುತ್ತಿದ್ದರು. ಒಬ್ಬ ಹಾಡು ಕೇಳಿಸುತ್ತಿದ್ದಾನೆ ಮತ್ತು ನಮ್ಮ ಹಾಡುಕೇಳುತ್ತಾನೆ. ದುಡಿದು ಚೆನ್ನಾಗಿ ಸಂಪಾದಿಸುವ ಮೊಮ್ಮಗ ಮತ್ತು ಸುಲಕ್ಷಣಿಯಾದ ಅವನ ಹೆಂಡತಿಯ ಬಗೆಗೆ ಅಜ್ಜನ ಮನೆಯಲ್ಲಿ ಹೇಗೆ ಮೆಚ್ಚುಗೆ ಅಭಿಮಾನಗಳು ಇರುತ್ತವೋ - ಹಾಗೇ ಆ ಜನರ ಬಗೆಗೆ, ಯಾರನ್ನು ಈ ಮೊದಲು ಭೆಟ್ಟಿಯಾಗಿರಲಿಲ್ಲವೋ ಮತ್ತು ಮುಂದೆ ಭೆಟ್ಟಿಯಾಗುವ ಸಂಭಾವನೆ ಇರಲಿಲ್ಲವೋ ಅಂತಹ ಮಲಾಯಾ - ಸಯಾಮಿ- ಬಾಲಿ- ಜಪಾನ ಮುಂತಾದ ದೂರದ ದೇಶಗಳ ಅಪರಿಚಿತ ಛತ್ರದ ಕೆಳಗೆ ಕಳೆದ ನಾಲ್ಕು ತಿಂಗಳು ಮೆಚ್ಚುಗೆಯ ಮಳೆ ಸುರಿದಿತ್ತು. ಈ ಎಲ್ಲವುಗಳ ಮೇಲೆ ವಿಜಯ ಸಾಧಿಸುವ ತನ್ನತನ ಎಲ್ಲ ಕಡೆಯೂ ವಿಪುಲವಾಗಿ ಸಿಕ್ಕಿತು. ಕೈಯ್ಯಲ್ಲಿಯ ಕೆಲಸ ಬದಿಗಿಟ್ಟು ಪರದೇಶದ ಜನ ನಮಗೆ ದಾರಿ ತೋರಿಸಲು ತಮ್ಮ ದಾರಿಗಳಲ್ಲಿ ತೊಂದರೆ ತಂದುಕೊಂಡರು.

ಈಗಲೂ ಶಾಂತ ಸಮಯದಲ್ಲಿ ಒಂದೊಂದು ಸಲ ಬಾಲೀ ಬೆಟ್ಟದಲ್ಲಿನ ಒಂದು ಮುಖದ ನೆನಪಾಗುತ್ತದೆ. ಜಕಾರ್ತಾದ ಮಣೀಭಾಯಿ ನೆನಪಾಗುತ್ತಾರೆ. ಫಾಗನ ಮನೆಯ ಉಗಾದಿಯ ನೆನಪಾಗುತ್ತದೆ. ಹಿಂದುಸ್ತಾನದ ಮೇಲೆ ಅಪರಂಪಾರ ಪ್ರೀತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇರುವ ಮದಾಮ್ ಜ್ಯಾ ನೆನಪು ಬರುತ್ತಾರೆ. ಮುಗ್ಧ ಮೇರಿಯು ನೆನಪಾಗುತ್ತೆ. ಪ್ರೊಫೆಸರ ದೋಹಿಯವರ ಸೌಮ್ಯ ಸ್ವಭಾವದ ಸ್ಮರಣೆಯಾಗುತ್ತದೆ. ಸಯಾಮೀ ಯುವತಿಯರ ನಮಸ್ಕಾರ ನೆನಪಾಗುತ್ತದೆ. ಕುಶಲತೆ ತಿಳಿಸಿ - ಒಂದು ಪತ್ರ ಬರೆಯುತ್ತೇನೆ. ಅದರ ಮೇಲೆ ಒಂದು ಸಲ ಬಾಲಿಯು ವಿಳಾಸವಿದ್ದರೆ ಇನ್ನೊಂದು ಸಲ ಹಾಂಗಕಾಂಗದ್ದು, ಟೋಕಿಯೋದ್ದು ಬರುತ್ತದೆ. ಆಗ ನನ್ನ ಪುಟ್ಟ ಪ್ರಪಂಚದ ವಿಸ್ತಾರ ಬಹಳ ಬೆಳೆದಿದೆ ಎನಿಸುತ್ತದೆ. ದೂರದೂರದ ದೇಶಗಳಲ್ಲಿ ಈಗ ನನಗೆ ಎಷ್ಟು ಹತ್ತಿರದ ಬಾಗಿಲುಗಳು ಇವೆ ಎಂದರೆ ರಾತ್ರಿ ಅಪರಾತ್ರಿ, ಹೋಗಿ ಬಾಗಿಲು ತಟ್ಟಿ, "ನಾನು ಬಂದಿದ್ದೇನೆ. ಬಾಗಿಲು ತೆರೆಯಿರಿ", ಎಂದರೂ ಆ ಎಲ್ಲ ಕುಟುಂಬವೇ ನನ್ನ ಸ್ವಾಗತಕ್ಕೆ ಓಡಿ ಬಂದೇ ಬರುವದು ಎನ್ನುವ ಖಾತ್ರಿ ನನಗೆ ಇದೆ. ಏಕೆಂದರೆ ಮನುಷ್ಯ ಮನುಷ್ಯರಲ್ಲಿ ಇರುವ ಆತ್ಮೀಯತೆಯ ಹೊರತು ಬೇರೆ ಏನೂ ಕೇಳಲು ನಾನು ಹೋಗಿರಲಿಲ್ಲ. ಅದನ್ನೇ ನಾನು ಅವರಿಗೆ ಎಷ್ಟು ಕೊಟ್ಟೆ ಎಂದು ಏನು ಹೇಳಲಿ? ಅವರು ಮಾತ್ರ ನನಗೆ ಬಹಳ ಕೊಟ್ಟರು.(ಪಂಢರಿಗೆ ಹೋಗುವ ವಾರಕರಿಗೆ ಯಾತ್ರಾರ್ಥಿಗೆ ಪಾಂಡುರಂಗನ ದರ್ಶನಾಭಿಲಾಷೆ ಜೊತೆಗೆ ಇರುವ ವಾರಕರಿಗಳ ಸಹಜವಾಸದ ಮೋಹ ಅಧಿಕವಾಗಿರುತ್ತದೆ. ಅದಕ್ಕೆಂದೇ ವಾರಕರಿಗಳು ಒಬ್ಬರಿಗೊಬ್ಬರು ಆತ್ಮೀಯದಿಂದ ಭೆಟ್ಟಿಯಾಗಲು ನೂರಾರು ಮೈಲಿಗಳ ದಾರಿ ಕ್ರಮಿಸಿ ಬರುತ್ತಾರೆ. ಬರಿಯ ವಿಠ್ಠಲನ ದರ್ಶನ ಬೇಕಾದರೆ ಮೋಟಾರಿನಿಂದ ಬಂದು ಹೋದರೂ ಸಿಗುತ್ತದೆ. ಆದರೆ ಅದು ವಾರಿ ಅಲ್ಲವಲ್ಲ ! ನಾನು ಪೂರ್ವದ ಯಾತ್ರೆ ಮಾಡಿದ್ದೇ ಜೀವನದ ದಾರಿಯನ್ನು ಬೇರೆ ಬೇರೆ ಲಹರಿಗಳನ್ನು ಸವೆಸುವ ನಾನಾ ದೇಶದ ಅಪರಿಚಿತ ವಾರಕರಿಗಳನ್ನು ಭೆಟ್ಟಿಯಾಗಲಿಕ್ಕೆ ಮತ್ತು ಆನಂದ ಸಂಗತಿ ಎಂದರೆ ನನಗೆ ನನ್ನ ಈ ಜಾತಿಯ ಸಾಕಷ್ಟು ಜನ ಭೆಟ್ಟಿಯಾದರು.)

ಈಗ ಮಾತ್ರ ಪೂರ್ವದ ಬಣ್ಣ ಅಧಿಕ ಸ್ಪಷ್ಟವಾಗಿ ಕಂಡಂತೆ ಆಗಿದೆ. -ಏಕೆಂದರೆ ಅದರಲ್ಲಿ ನನ್ನ ಅಂತರಂಗವೂ ಒಂದಾಗಿದೆ. !

'ಪೂರ್ವರಂಗ' ಗ್ರಂಥದಿಂದ
-ವಿಜಯಲಕ್ಷ್ಮೀ ರೇವಣಕರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಳಾಸ ಶೋಧನೆಯ ಪ್ರಕರಣ

ಹಾಂಗ ನೋಡಿದ್ರ, ಯಾವುದಾದರೂ ಗುರುದೇವರ ಬೆರಳು ನಿರ್ದೇಶನದಲ್ಲಿ ಭಗವಂತನ ವಿಳಾಸದ ಪತ್ತೆ ಹಚ್ಚುವುದು ಸುಲಭಸಾಧ್ಯವಿತ್ತು, ಆದರೆ ರವಿವಾರದ ಧಗಧಗಿಸುವ ಬಿಸಿಲಿನಾಗ ಯದ್ವಾತದ್ವಾ ಹಡ್ಡಿ, ತೋಡಿದ ರಸ್ತೇದಗುಂಟ ನನ್ನವಳನ್ನು ಮತ್ತು ನಮ್ಮ ಸಂತಾನದ ಸೈನ್ಯವನ್ನು ಸಂಗಡ ಕರೆದುಕೊಂಡು ಒಂದೆರಡು ಗಂಟೆ ಸುತ್ತಾಡಿದರೂ ನಮ್ಮವಳ ಪಾರ್ಲೆಯ ದೊಡ್ಡಮ್ಮಳ ಮನೆಯ ವಿಳಾಸ ಮಾತ್ರ ಗೊತ್ತು ಹಚ್ಚುವದು ಶಕ್ಯವಾಗಿರಲಿಲ್ಲ!

''ಇಲ್ಲೇ ಎಲ್ಲಿಯೋ ಇತ್ತು ಆ ಓಣಿ'' ನಲವತ್ತನೇ ಸಲಕ್ಕೆ ಉಸುರಿದಳು ನನ್ನವಳು ಈ ವಾಕ್ಯವನ್ನು!

''ನಿನ್ನ ಆ ಓಣಿ ಇಲ್ಲೇ ಇದ್ದಿದ್ದರೆ ಈಗೆಲ್ಲಿ ಕಾಣೆ ಆಯ್ತು?'' ನಾನು ಬೇಸತ್ತು ಕೇಳಿದೆ. ಯಾವಾಗಲೂ ನನ್ನವಳದು ಇದೇs ಹಾಡು! ಸರಿಯಾಗಿ ಎಂದೂ ವಿಳಾಸಗಳನ್ನು ಕೇಳಿ ತಿಳಿದುಕೊಳ್ಳುವುದಿಲ್ಲ. ತನ್ನ ಪಾರ್ಲೇದ ದೊಡ್ಡಮ್ಮ ಅಂತ ಅಂದ್ರ, ವಿಶ್ವವಿಖ್ಯಾತ ವ್ಯಕ್ತಿ ಎಂಬ ಧೋರಣೆಯಲ್ಲಿ ಹೊರಟಿದ್ದಳು ನನ್ನ ಮಡದಿ!

''ಅಲ್ಲs, ಓಣಿಯ ಹೆಸರರೇ ನೆನಪು ಅದೆ ಇಲ್ಲೋ?''

''ಹ್ಞೂಂ, ಮಹಾತ್ಮಾ ಗಾಂಧಿ ಅಥವಾ ನೆಹರು ಅಂತ ಏನೋ ಹೆಸರಿದೆ...''

ಮಹಾತ್ಮಾ ಗಾಂಧಿ ಅಥವಾ ನೆಹರು ಅಂತ ಏನೋ ಹೆಸರಿದೆ ಎಂಬ ಮಾತಿಗೆ ವಿಳಾಸ ಶೋಧನೆಯ ಯತ್ನದಲ್ಲಿ ಏನಾದರೂ ಅರ್ಥ ಇರಬಹುದೇ? ಹೇಳ್ರಿ! ಇಂಥ ನಿರರ್ಥಕ ಮಾತುಗಳನ್ನು ಕೇವಲ ಹೆಂಗಸರೇ ಆಡಲು ಸಾಧ್ಯ! ಈ ಅಪರಿಚಿತ ಊರಿನಲ್ಲಿ ನಮ್ಮ ಮೆರವಣಿಗೆ ಸಾಗಿತ್ತು. ಅಷ್ಟರಲ್ಲಿ ಶಂಕರ್ಯಾ ಒದರಿದ,

ಅಪ್ಪಾ, ನೀರಡಿಕೆ!''

ಶಂಕರ್ಯಾನಿಗೆ ಎಲ್ಲಿಯೋ ಹೊಟೆಲ್ ಕಂಡಿದೆ ಎಂಬುದು ನನಗೆ ಮನದಟ್ಟಾಯಿತು. ಹೊಟೆಲ್ ಕಂಡಕೂಡಲೇ ಆತನಿಗೆ ಎಲ್ಲಿಲ್ಲದ ನೀರಡಿಕೆ ಹತ್ತುತ್ತದೆ!

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೆಲವರಿಗೆ ದೇವರು ಬೊಗಸೆ ತುಂಬಿ ನೆಂಟರನ್ನು ನೀಡಿರುತ್ತಾನೆ. ನನ್ನ ಮಡದಿಯೂ ಸಹ ಅಂಥ ಭಾಗ್ಯವಂತಳು ! ಚರ್ನಿ ರೋಡದಿಂದ ಬೊರಿವಲಿ ಮತ್ತು ಬೋರಿಬಂದರದಿಂದ ಡೊಂಬಿವಲಿ ತನಕ ನನ್ನವಳ ನಂಟರು. ಅತಂದ್ರೆ ನನ್ನವಳ ದೊಡ್ಡಮ್ಮನ ಮಗಳು ಅಥವಾ ಈ ತರಹದ ಯಾವುದಾದರೂ ಬಳಗದ ವ್ಯಕ್ತಿ ವಾಸಿಸದಂಥ ಒಂದೂ ಸ್ಟೇಶನ್ ದೊರಕುವುದಿಲ್ಲ! ಕರೀ ರೋಡ್, ಚಿಂಚಪೋಕಳಿ, ಮುಳುಂದ್, ವಾಂಗಣಿ ಎಂಬಂಥ ಹೆಸರಿನ ಊರುಗಳಲ್ಲಿ ಸಹ ಇವಳ ನೆಂಟರ ಪೈಕಿ ಯಾರಾದರೂ ಇದ್ದೇ ಇದ್ದಾರೆ! ಅದs ನನ್ನ ನಂಟರ ಬಗ್ಗೆ ಹೇಳಬೇಕಂದ್ರ, ಕಲ್ಯಾಣದಲ್ಲಿ ಇರುವ ಸೋದರತ್ತೆಮಗ ಒಬ್ಬನೇ! ಯಾವಾಗಲೋ ಒಂದು ಸಲ ಆತನ ಮನೆಗೆ ಹೋಗಿದ್ದೆವು. ಹೋದ ಕೂಡಲೇ ಆತ ಕಲ್ಯಾಣದಲ್ಲಿ ಸಿಡುಬು ಮತ್ತು ಶೀತಜ್ವರದ ಪಿಡುಗು ಹಬ್ಬಿದೆ ಎಂದು ಹೇಳಿದ್ದ. ಆ ದಿನದ ಲಾಗಾಯ್ತು ಮತ್ತೆ ಕಲ್ಯಾಣದ ಕಡೆಗೆ ಪಾದ ಬೆಳೆಸಿಲ್ಲ! ಇವಳ ನಂಟರ ಮಾತು ಬಿಡಿರಿ, ಪರೇಳದ ಪಾರೂ ಅತ್ಯಾ, ದಾದರದಾಗಂತೂ ದೊಡ್ಡಮ್ಮ ಚಿಕ್ಕಮ್ಮಗಳ ಜಾತ್ರೆ, ಬಾಂದ್ರಾದಲ್ಲಿ ಕಕ್ಕಿಯ ಮಗಳು, ಸಾಂತಾಕ್ರೂಜದಲ್ಲಿ ಫಡಣ್ವೀಸರ ಮನೆತನದಲ್ಲಿ ಕೊಟ್ಟ ಸೋದರಸೊಸೆ! ಆ ಸೋದರಸೊಸೆಯನ್ನು ಮದುವೆ ಮಾಡಿಕೊಡಲಿಕ್ಕೆ ಬೇರೆ ಯಾವ ಊರು ಹ್ಯಾಂಗ ಸಿಗಲಿಲ್ಲ ಅವಳ ತಾಯ್ತಂದೆಗಳಿಗೆ ಅಂತೀನಿ! ದೂರ ನಿಪ್ಪಾಣಿ ಅಥವಾ ಚಂದ್ರಪುರಕ್ಕ ಸಾಗಹಾಕಿದ್ದರ ಏನು ಗಂಟು ಹೋಗ್ತಿತ್ತು? ಸಾಂತಾಕ್ರೂಜಕ್ಕs ಕೊಡಬೇಕಂತ ಸಂಕಲ್ಪ ಇತ್ತೇನು? ಅಂಧೇರಿಯಲ್ಲಿ ಚಂದಗಡದ ಕಕ್ಕಿ. ಅವರ ಮಗ 'ಜೇಲೀಫ್' ಇದ್ದಾನಂತ! 'ಜೇಲೀಫ್ ಇದ್ದಾನ' ಎಂಬ ವಾಕ್ಯವನ್ನು ನನ್ನವಳು 'ಹಾಯ್‌ಕೋರ್ಟಿನಲ್ಲಿ ಚೀಫ್ ಜಸ್ಟಿಸ್ ಇದ್ದಾರ' ಎಂಬ ಗತ್ತಿನಲ್ಲಿ ಉಸುರುತ್ತಾಳೆ! ಚರ್ನಿರೋಡ್‌ದಿಂದ ವಿಲೇಪಾರ್ಲೇದ ತನಕ ಪ್ರತಿಯೊಂದು ನಿಲ್ದಾಣದಲ್ಲೂ ನನ್ನವಳು ತನ್ನ ನಂಟರ ಹೆಸರುಗಳನ್ನು ಉರು ಹೊಡೆಯುತ್ತಿದ್ದಳು. ಎಂದಿಲ್ಲದೆ ಇಂದು ತಪ್ಪಿ ಲೋಕಲ್‌ದ ಡಬ್ಬಿಯಲ್ಲಿ ತಲೆಯ ಮೇಲೆ ಫ್ಯಾನ್ ತಿರುಗುತ್ತಿತ್ತು. ಹೀಂಗ ಒಂದು ಝೊಂಪು ನಿದ್ದೆ ಹತ್ತೋದೇ ತಡ ಶಂಕರ್ಯಾ, '' ಅಪ್ಪಾ ಸಪೋಟಾ'' ಅಥವಾ ' ಅಪ್ಪಾ, ಕಿತ್ತಳೆ,' ಎಂದು ಕೂಗುತ್ತಿದ್ದ. ಕಣ್ಣಿಗೆ ಕಣ್ಣು ಹಚ್ಚಗೊಟ್ಟಿರಲಿಲ್ಲ!

ಕೊನೆಗೊಮ್ಮೆ ಪಾರ್ಲೆ ನಿಲ್ದಾಣ ಬಂದಿತು, ಮತ್ತು ಈ ಎಲ್ಲ ಮ್ಯಾಳ ತೂಗಿಸಿಕೊಂಡು ಪಾರ್ಲೆಯ ನಿಲ್ದಾಣದ ಸೇತುವೆ ಏರಿದಾಗ ಬಲಕ್ಕೆ ಹೊರಳೋದೋ ಅಥವಾ ಎಡಕ್ಕೆ ತಿರುಗುವುದೋ ಎಂಬ ಸಂಭ್ರಮದಲ್ಲಿದ್ದೆ. ನನ್ನವಳು,

'' ಐ ಸುಡ್ಲಿ, ಹೀಂಗ್ಯಾಕ ಮಾಡ್ತೀರಿ ಮಳ್ಳಿಹಾಂಗ'' ಎಂದು ನನಗೆ ಹಾಗೂ ಉಳಿದ ನಾಲ್ಕೆಂಟು ಜನ ಸಮೀಪದ ಪಯಣಿಗರಿಗೆ ಗೊತ್ತಾಗುವಂತೆ ಸಾರಿ ನಮ್ಮ ಮೆರವಣಿಗೆಯನ್ನು ಬಲದಿಕ್ಕಿಗೆ ಹೊರಳಿಸಿದಳು.

'' ನೋಡ್ರಿ, ಇಲ್ಲಿಂದ ಮುಂದೆ ಹೋದ ನಂತರ ಒಂದು ಓಣಿ ಸಿಗ್ತದ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅರಳಿಕಟ್ಟೆಯ ಗುರ್ತು ನನಗೆ ಗಟ್ಟಿಯಾಗಿ ನೆನಪದೆ '' ಎಂದೆನ್ನುತ್ತ ನನ್ನವಳು ತನ್ನ ಸುತ್ತಮುತ್ತ ತಮ್ಮ ಕಾಲುಗಳ ಮೇಲೆ ನಡೆಯಲು ಶಕ್ಯವಿದ್ದ ಕೆಲ ಪ್ರಜೆ ಹಾಗೂ ತನ್ನ ಹೆಗಲ ಮೇಲೊಂದು ಮತ್ತು ನನ್ನ ಹೆಗಲ ಮೇಲೊಂದು ಮರಿ ಹೇರಿಕೊಂಡು ದಾಂಡೀ ಯಾತ್ರೆಯಂತೆ ಅವಳ ದೊಡ್ಡಮ್ಮನ ಮನೆಯ ತಾವು ಹುಡುಕುತ ಸಾಗಿದಳು. ತಲೆಯ ಮೇಲೆ ಕೆಂಡಕಾರುವ ನೇಸರ. ಮೇಲಾಗಿ ರವಿವಾರದ ಬಿಸಿಲಿಗೆ ಝಳ ಬಹಳ! ಹೀಗೆಂದು ನನಗೆ ಅನೇಕ ವರ್ಷಗಳ ಅನುಭವವಿದೆ. ಹಾಗ ನೋಡಿದ್ರ ಶನಿವಾರದ ಮಧ್ಯಾಹ್ನದ ಬಿಸಿಲು ಬಹಳೇ ಸೌಮ್ಯವಿರುತ್ತದೆ.

ನಮ್ಮ ಶಂಕರ್‍ಯಾ ಆ ಬೀದಿಯಲ್ಲಿ ತರಗೆಲೆ ಹಾರಾಡಿಧಾಂಗ ಎತ್ತಬೇಕತ್ತ ಹರಿದಾಡುತ್ತಿದ್ದ. ಕೊನೆಗೆ ನಾನು ಜೇಸತ್ತು ಆತನ ಮುಖಕ್ಕೆ ಬಿಗಿದೆ. ಆತ 'ಶ್ರದ್ಧಾನಂದ ರೋಡ್' ಎಂಬ ಫಲಕದ ಕೆಳಗೆ ತುಂಬಿದ ರಸ್ತೆಯಲ್ಲಿ ಧರಣಿ ಕುಳಿತು ಸತ್ಯಾಗ್ರಹ ಹೂಡಿದ. ಅವನನ್ನು ಮತ್ತೆ ದಾರಿಗೆ ತರಬೇಕಾದರೆ ಮಾತುಕತೆಯಲ್ಲಿ ಸಾಕಷ್ಟು ಸಮಯ ಸರಿಯಿತು. ಕೊನೆಗೊಮ್ಮೆ ನಮ್ಮ ಮತ್ತು ಆತನ ಅದೃಷ್ಟದಿಂದ ಅಲ್ಲಿಗೆ ಬಣ್ಣದ ಬರ್ಫದ ಉಂಡಿ ಮಾರುವವನ ಗಾಡಿ ಬಂದಿತು. ಆ ಉಂಡಿಗಳು ಆತನ ಸಹಿತ ಎಲ್ಲರ ಕೈಸೇರಿದನಂತರವೇ ದೊಡ್ಡಮ್ಮನ ಮನೆಯ ಹುಡುಕಾಟದ ಯತ್ನ ಮುಂದುವರಿಯಿತು. ನಾನು ನನ್ನವಳಿಕೆ ಆಗಾಗ ಹೇಳುತ್ತಿದ್ದೆ 'ಯಾರಿಗಾದರೂ ವಿಳಾಸದ ಬಗ್ಗೆ ಕೇಳೋಣ' ಎಂದು. ಆದರೆ ಕೆಲವರಿಗೆ ವಿಳಾಸದ ಬಗ್ಗೆ ವಿಚಾರಣೆ ಮಾಡೋದು ಅಂದರೆ ಕುಂದು ಎಂಬ ಧೋರಣೆ ಇರುತ್ತದೆ. ಇಂಥ ಧೋರಣೆಗೆ ಏನು ಕಾರಣ ಎಂಬುದನ್ನು ಆ ಪರಮಾತ್ಮನೇ ಬಲ್ಲ. ದಾರಿಯಲ್ಲಿ ನೂರಾರು ಜನರು ನಮ್ಮ ಕಡೆಗೆ ಕುತೂಹಲದಿಂದ, ಕುಚೇಷ್ಟೆಯಿಂದ, ಸಹಾನುಭೂತಿಯಿಂದ ಒಟ್ಟಿನ ಮೇಲೆ ಒಂದು ನರಪ್ರಾಣಿ ಇನ್ನೊಂದು ನರಪ್ರಾಣಿಯನ್ನು ಯಾವ ಯಾವ ಭಾವದಿಂದ ನೋಡಬಹುದೋ ಆ ಎಲ್ಲ ಬಗೆಯಿಂದ ನಿರುಕಿಸುತ್ತ ಸಾಗಿದ್ದರು. ನಾನು ಯಾರನ್ನಾದರೂ ವಿಳಾಸದ ಬಗ್ಗೆ ಕೇಳುವಾ ಎಂದು ಮುಂದಡಿ ಇಡುವುದೊಂದೇ ತಡ ನನ್ನವಳು '' ರೀ, ಇಲ್ಲಿಯೇ ಅದೆ ಬಲಕ್ಕೆ'' ಎಂದು ಧನಿ ತೆಗೆಯುತ್ತಿದ್ದಳು. ಅವಳು ಹೇಳುತ್ತಿದ್ದ ಆ ಬಲದ ತಿರುವು ಮಾತ್ರ ಕಾಣದೇ ನಾವು ಹತಬಲರಾಗುತ್ತಿದ್ದೆವು.

''ರೀ, ಇಲ್ಲೇ ಎಲ್ಲಿಯೋ ಅದೇ ಆ ಬಲದ ತಿರುವು. ದೊಡ್ಡ ಅರಳೀಕಟ್ಟೆ ಇದೆ ಅಂಬೂದು ನನಗ ನೆಟ್ಟಗ ಲಕ್ಷ್ಯದಾಗ ಇದೆ. ಅಂಥಾಂಗ ಆಟೆ ವರ್ಷ ನಾನು ದೊಡ್ಡಮ್ಮನ ಸಂಗಡ ಬಂದಿದ್ದಿಲ್ಲs ಚಂಪಿಯ ಮಂಗಳಗೌರಿವ್ರತಕ್ಕ?'' ಅವಳ ಆ ಮುಂದಿನ ಮಾತುಗಳನ್ನು ಕೇಳುವ ತಾಳ್ಮೆ ನನಗುಳಿಯಲಿಲ್ಲ. ಚಂಪಿಯ ಮಂಗಳ ಗೌರಿವ್ರತಕ್ಕೂ ಈ ಹುಡುಕಾಟಕ್ಕೂ ಎಲ್ಲಿಯ ಸಂಬಂಧ? ಈ ಅಸಂಬದ್ಧತೆಯ ಬಗ್ಗೆ ನಾನು ಬಾಯಿಬಿಟ್ಟರೆ ಬಣ್ಣಗೇಡು! ಪಾರ್ಲೆಯ ಜನರಿಗೆ ಪುಗಸಟ್ಟೆನಲ್ಲಿ ಬಡೇಮಿಯಾ ಬಸಲಿಂಗಿಯ ಬಡೆದಾಟದ ಪ್ರದರ್ಶನವಾಗ್ತಿತ್ತು. ವನವಾಸಕ್ಕೆ ತೆರಳಿದ ರಾಮನನ್ನು ಹಿಂಬಾಲಿಸಿದ ಸೀತೆಯಂತೆ ನಾನು ನನ್ನವಳನ್ನು ಅನುಸರಿಸಿದೆ. ಆದರೆ ಆ ಗುರುತಿನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri
ಅರಳೀಕಟ್ಟೆ ಮಾತ್ರ ಗೋಚರವಾಗಲಿಲ್ಲ.

'' ಆ ಅರಳೀಮರ ಕಡಿದಾರೋ ಏನೋ?'' ನನ್ನ ಅನುಮಾನವನ್ನು ಗುಣುಗುಣಿಸಿದೆ.

''ಅರಳಿಮರ ಕಡಿತಾರೇನು? ಏನರೆ ಒಂದು ಅಪದ್ಧ ಮಾತಾಡಬೇಡ್ರಿ''

''ಅಲ್ಲಽ ನಮ್ಮ ವಠಾರದ ಎದುರಿಗಿನ ಅರಳೀಮರ ಕಡದಿಲ್ಲಽ ?''

''ರಸ್ತೆ ದೊಡ್ಡದು ಮಾಡುವ ಸಲುವಾಗಿ ಕಡದಿದ್ದು. ಓಣಿ ಯಾತಕ್ಕ ಹರವು ಮಾಡ್ತಾರ ಸುಳ್ಳೆ? ಆದ್ರ ಒಂದು ಮಾತ್ರ ಖರೇನಽ. ಆಗಿನಕ್ಕಿಂತ ಈಗ ಪಾರ್ಲೆ ಭಾಳ ಬದಲಾಗೇದ.''

ನನ್ನವಳ ಕೊನೆಯ ವಾಕ್ಯದಿಂದ ಅವಳ ಪರಾಭವದ ನಾಂದಿವಚನ ವ್ಯಕ್ತವಾಯಿತು. ಈ ಸುಳುಹು ಹೊಳೆಯುವಷ್ಟರಲ್ಲಿಯೇ ಅದು ನಿಚ್ಚಳವೂ ಆಯಿತು.

''.... ರೀ, ಅಲ್ಲಿ ಎದುರಿಗೆ ಬರಲಿಕ್ಕೆ ಹತ್ಯಾರಲ್ಲ ಅವರನ್ನ ಕೇಳಿ ನೋಡ್ರಿ. ದೊಡ್ಡಮ್ಮನ ಪಕ್ಕದ ಮನೆಯವರ ಹಾಂಗ ಕಾಣಿಸ್ತಾರ....'' ಎಂದು ನನ್ನವಳು ಉಸುರಿದಳು.

ನಿಜ ಹೇಳಬೇಕೆಂದರೆ ಈ ಗೃಹಸ್ಥರು ದೊಡ್ಡಮ್ಮನ ನೆರೆಯಲ್ಲಿ ಖಂಡಿತವಾಗಿಯೂ ವಾಸಿಸುತ್ತಿರಲಿಲ್ಲ. ಆದರೆ ವಿಳಾಸದ ಬಗ್ಗೆ ವಿಚಾರಣೆ ಕೂಡದು ಎಂಬ ತತ್ವಕ್ಕೆ ಚ್ಯುತಿಯುಂಟಾಗಬಾರದು ಎಂಬುದಕ್ಕಾಗಿ ಈ ಬಳಸು ಮಾತು. ಸುಮ್ಮನೆ ಮಾತಿಗೆ ಮಾತು ಬೆಳೆಸಿ ಪ್ರಯೋಜನವೇನು ಎಂದು ಬಗೆದು ನಾನು ಆ ಗೃಹಸ್ಥರ ಬಳಿ ಸಾರಿ ನಮಸ್ಕರಿಸಿದೆ. ಅವರು ಪ್ರಾಯದಲ್ಲಿ ಹಿರಿಯರು.

''ನಮಸ್ಕಾರ''

''ಓಽ ಹೋ ಹೋಽಽ ನಮಸ್ಕಾರ. ಮತ್ತೇನ್ನಪಾ, ಇಂದು ಈ ಕಡೆ ಪಾದ ಬೆಳೆಸೇರಿ?...'' ಆ ಗೃಹಸ್ಥರು ಏಳೇಳು ಜನ್ಮದ ಗೆಳೆತನ ಇದ್ದಾಂಗ ಧನಿ ತೆಗೆದರು. ನಾನ್ಯಾರು ಎಂಬುದು ಅವರಿಗೆ ಗೊತ್ತಿರುವ ಕಾರಣವೇ ಇರಲಿಲ್ಲ. ಆದರೆ ತಪ್ಪಿ ಎಲ್ಲಿಯೋ ಪರಿಚಿತ ವ್ಯಕ್ತಿಯೇ ಎದುರಾಗಿರಬೇಕು ಎಂಬ ಭಾವನೆಯಲ್ಲಿ ಅವರು ''.. ಇಂದು ಈ ಕಡೆ ಪಾದ ಬೆಳೆಸೀರಿ?'' ಎಂಬ ಸಾಮಾನ್ಯ ಉಪಚಾರದ ಪ್ರಶ್ನೆ ಎಸೆದರು. ಅವರ ಭ್ರಮನಿರಸನ ಮಾಡುವ ಗೊಡವೆಗೆ ಹೋಗದೆ ನಾನಂದೆ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

" ಹೀಗೇ ಬಂದಿದ್ವಿ, ನನ್ನ ಅರ್ಧಾಂಗಿಯ ಮದರ್-ಇನ್-ಲಾ ಇರ್ತಾರಲ್ಲ ಇಲ್ಲಿ....." ಇಷ್ಟು ಉಚ್ಚರಿಸುವುದೊಂದೇ ತಡ ನಾನು ನಾಲಿಗೆ ಕಚ್ಚಿದೆ. ನನ್ನ ಮಾತಿನಲ್ಲಿಯ ವಿಸಂಗತಿ ನನಗರಿವಾಯ್ತು. 'ದೊಡ್ಡಮ್ಮನ' ನ ತರ್ಜುಮೆಯನ್ನು 'ಮದರ್-ಇನ್-ಲಾ' ಎಂದು ತಪ್ಪಿ ಮಾಡಿದ್ದೆ. ಈ ಆಭಾಸ ಹೊಳೆಯುತ್ತಿದ್ದಂತೇ ನನ್ನ ಮೊಗ ಕರ್‍ರನೇ ಕಂದಿತು. ಆದರೆ ಆ ಮಹಾಶಯನ ಗಮನಕ್ಕೆ ಇದಾವುದೂ ಬರಲಿಲ್ಲ. ಏಕೆಂದರೆ ಅವರು,

"ಹೀಂಗೇನು ವ್ಹಾ ವ್ಹಾ, ಪರವಾ ಇಲ್ಲ" ಎಂದಂದು ತಮ್ಮ ಮಿದುಳಿನ ಇಲಾಖೆಯಲ್ಲಿ ನೆನಪಿನ ಕಡತಗಳನ್ನು ತಡಕಾಡುತ್ತ ನಿಂತಿದ್ದರು. ಈ ಹಿರಿಯಲಿಗೆ ನೇರವಾಗಿ,

" ರೀ ಮುತ್ಯಾ, ನಂದು ನಿಮ್ದು ಈ ಮೊದಲು ಎಂದೂ ಭೆಟ್ಟಿ ಆಗಿಲ್ಲ. ಇದs ಮೊದಲ ಸಲ ಎದುರುಗೊಂಡೇವಿ. ಸುಮ್ಮಸುಮ್ಮನ, ಗುಡಿಯೊಳಗ ಗಂಟೆ ಬಾರಿಸುವಾಗ ಧೋತರದ ಕಚ್ಚೆ ಕಳೆದಾಗ ಹ್ಯಾಂಗ ಆಗ್ತದಲ್ಲ, ಹಾಂಗ ಮುಖಿ ಮಾಡಬ್ಯಾಡ್ರಿ. ನಮ್ಮವಳ ದೊಡ್ಡಮ್ಮನ ವಿಳಾಸ ಗೊತ್ತಿದ್ದ ಹೇಳ್ರಿ" ಎಂದು ಸಾರಿ ಬಿಡಬೇಕೆನಿಸಿತು. ಆದರೆ ಇಷ್ಟು ಬಿಚ್ಚುಮಾತು ಉಚ್ಚರಿಸುವ ಸಮಯ ಸರಿದು ಹೋಗಿತ್ತು. ಈ ಕಣ್ಣುಮುಚ್ಚಾಲೆಯ ಆಟ ಮುಂದುವರಿಸಲೇಬೇಕಾಗಿತ್ತು.

"ಏನು ಮನೆಯೊಳಗೆಲ್ಲ ಸೌಖ್ಯನs ?" ಆ ಮುದುಕರು ಮತ್ತೊಂದು ವ್ಯರ್ಥ ವಿಚಾರಣೆ ಮಾಡಿದರು. ನನ್ನ ನಾಲಿಗೆಯ ತುದಿಯ ತನಕ ಬಂದಿತ್ತು. 'ಮನೆಯೊಳಗಿನವರು ಅಷ್ಟs ಯಾಕ ಇಡೀ ಜಗತ್ತಿನಲ್ಲಿಯ ಸಮಸ್ತ ಜನರು, ನನ್ನೊಬ್ಬನನ್ನು ಬಿಟ್ಟು, ಸೌಖ್ಯದಿಂದ ಇದ್ದಾರ' ಎಂದು. ಆದರೆ ಆ ಮುದುಕರ ಮೇಲೆ ಹರೀ ಹಾಯೋದ್ರಾಗ ಏನು ಹಶೀಲದೆ? ಮುದುಕರು ನಮ್ಮ ಮಕ್ಕಳ ಸೈನ್ಯ ನಿರುಕಿಸಿ,

" ಅಲs ಲ s ನಿಮ್ಮ ಮಕ್ಕಳು ಕಾಣಿಸ್ತಾವ" ಎಂಬ ಉದ್ಗಾರ ತೆಗೆದರು. ನಮ್ಮ ಶಂಕರ್ಯಾ ಮತ್ತು ಇತರ ಸಂತತಿಯನ್ನು ನೋಡಿದ ಕುರುಡನೂ ಸಹ ಇಂಥ ಪ್ರಶ್ನೆ ಕೇಳುವ ಗೋಜಿಗೆ ಹೋಗಲಿಕ್ಕಿಲ್ಲ.

"ಹೆಸರೇನಪಾ ತಮ್ಮಾ?"

"ಛತ್ರಪತಿ ಶಿವಾಜಿ ಮಹಾರಾಜ "

ಶಂಕರ್ಯಾನ ಈ ಉತ್ತರದಿಂದ ನಾನು ತತ್ತರಿಸಿದೆ. ಆ ಮುದುಕರ ಮುಖದಿಂದ ಹಲ್ಲಿನ ಸೆಟ್ಟು ಸಿಡಿಯುವಂಥ ಪ್ರಸಂಗ. ಶಂಕರ್ಯಾ ಗೋಡೆಗೆ ಅಂಟಿಸಿದ ಶಿವಾಜಿ ಛಾಪ ಬೀಡಿಯ ಜಾಹೀರಾತು ನೋಡಿ ಕೂಗಿದ್ದ ಎಂಬ ಸಂಗತಿ ನಂತರ ನಮ್ಮ ಲಕ್ಷ್ಯಕ್ಕೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri
ಬಂದಿತು. ಅಷ್ಟರಲ್ಲಿಯೇ ನಾನು ನನಗೆ ಇಷ್ಟವಾದ ಪ್ರಶ್ನೆಯ ನಂಬರು ತಿರುವಿದೆ.

''ಇಲ್ಲಿ ಗಣಪುಲೆ ಎಂಬುವವರು ಎಲ್ಲಿರ್‍ತಾರ ಅಂಬೋದು ಗೊತ್ತದ ಏನು ನಿಮಗ?''

''ಅಯ್ಯ ಸುಡ್ಲಿ, ಗಣಪುಲೆ ಅಲ್ಲ ಅವರ ಅಡ್ಡ ಹೆಸರು...'' ನನ್ನವಳು ಅಡ್ಡ ಬಂದು ಅಬ್ಬರಿಸಿದಳು.

''.......ದೊಡ್ಡಮ್ಮನ ಅಡ್ಡ ಹೆಸರು ಗಣಪುಲೆ ....''

'' ಮತ್ತಽ ದೊಡ್ಡಮ್ಮನ ಕಡೆಗೇಽಹೊರಟಿಲ್ಲಽಽ ನಾವು?'' ನಾನು ಯಥಾ ಪ್ರಕಾರ ಧನಿ ಏರಿಸಿದೆ. ಬೇರೆಯವರ ಮುಂದೆ ನಾನು 'ಗಂಡ' ಎಂಬುದನ್ನು ಬಿಂಬಿಸಲೋಸುಗ ಈ ವಿಶಿಷ್ಟ ಧ್ವನಿ ಕಾಯ್ದುಕೊಂಡಿರುವೆ.

'' ಅಲ್ರಿ ಽಽ ದೊಡ್ಡಮ್ಮಳ ಅಡ್ಡ ಹೆಸರು ಗಣಪುಲೆ... ಆದ್ರ ಅವಳ ಚಂಪಿಯನ್ನು ಕೊಟ್ಟದ್ದು ಗೋಡಬೋಲೆಯವರ ಮನೆತನಕ್ಕ. ಚಂಪಿಯ ಗಂಡನ ಹೆಸರು ಉಲ್ಲೇಖ ಮಾಡಿರಿ''

'' ನೀನಽ ಮಾಡು.'' ನಾನಂದೆ. ಅವಳೇ ಮುಂದೆ ಸಾರಿ ಕೇಳಿದಳು.
''ಲಂಬೋದರ ಗೋಡಬೋಲೆ ಎಲ್ಲಿರ್‍ತಾರ ಗೊತ್ತದಽ ಏನು? ನನಗನಿಸ್ತದ ನಿಮ್ಮ ನೆರೆಯಲ್ಲಿರಬೇಕು ಅಂತ.''

'' ನನ್ನ ನೆರೆಮನ್ಯಾಗ ಲಂಬೋದರ ಗಣಪುಲೆ...''

''ಗಣಪುಲೆ ಅಲ್ಲ, ಗೋಡಬೋಲೆ.''

''ಓಽ ಗೊತ್ತಾಯ್ತು, ಲಂಬೋದರ ಗೋಡಬೋಲೆ ಅಲ್ಲ ? ಹ್ಞಾಂ, ನನಗನಿಸ್ತದೆ ಗೋಡಬೋಲೆ ಎಂಬ ಹೆಸರಿನವರು ಒಬ್ಬರು ಚಿತ್ತರಂಜನ ರೋಡದಲ್ಲಿ ಇದ್ದಾರಂತ. ನನ್ನ ಸೋದರಸೊಸೆ ಇರ್‍ತಾಳ ಆ ರೋಡಿನಲ್ಲಿ. ಅಲ್ಲಿ ಒಬ್ಬರು ಗೋಡಬೋಲೆ ಅಂತ ಇದ್ದಾಂಗಿತ್ತು..''

'' ಹ್ಞೂಂ ಇಂಥಾದ್ದೆ ಏನೋ ಹೆಸರಿತ್ತು ಆ ರಸ್ತೇಕ್ಕ'' ನಮ್ಮವಳ ಉದ್ಗಾರ. ಈ ಸಂವಾದ ಸಾಗಿದಾಗ ನಮ್ಮ ಶಂಕರ್‍ಯಾ ಒಂದು ಕತ್ತೆಯನ್ನು ನಿರುಕಿಸುತ್ತ ನಿಂತಿದ್ದ. ಆತನಿಗೆ ಗಿರಗಾಂವದಲ್ಲಿ ಇಂಥ ಪ್ರಾಣಿ ನೋಡಸಿಗುವುದಿಲ್ಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

''ಶಂಕರ್ಯಾ, ಅಲ್ಲೇನು ನಡೆಸಿರುವಿ? ಕತ್ತೆ ಒದ್ದೀತು ಮಗನಽ ''

ಶಂಕರ್ಯಾ ಕೇವಲ ಅರ್ಧ ಹೆಜ್ಜೆ ಹಿಂದಿಟ್ಟ, ಮತ್ತು ತನ್ನ ಗಾರ್ದಭ ನಿರೀಕ್ಷಣೆ ಮುಂದು ವರಿಸಿದ.

'' ನೋಡಿದಿರೇನು, ಮಕ್ಕಳಲ್ಲಿ ಎಂಥ ಪರಿ ಕ್ಯುರಿಯೋಸಿಟಿ ಇರ್ತದ. ಪಾರ್ಲೇದಾಗ ಇನ್ನೂ ಹಳೆಯದು ಮತ್ತು ಹೊಸ ಕಾಲದ ಸಮ್ಮಿಶ್ರಣ ನೋಡಲು ಸಿಗ್ತದೆ. ಹಳೆಯ ಸಂಸ್ಕೃತಿ ಮತ್ತು ಹೊಸ ಸಂಸ್ಕೃತಿಯ ಸಮನ್ವಯ ಆಗಬೇಕು ಅಂತಾರಲ್ಲ. ಹಳೇ ಬೇರು ಹೊಸ ಚಿಗುರು..... '' ಆ ವೃದ್ಧ ಪಿತಾಮಹ ಉಪನ್ಯಾಸ ಆರಂಭಿಸಿದರು. ಕತ್ತೆಗೂ ಮತ್ತು ಹಳೆಯ ಸಂಸ್ಕೃತಿಗೂ ಎತ್ತಣ ಸಂಬಂಧ? ನನಗೇನೂ ಅರ್ಥವಾಗ ಲಿಲ್ಲ. ನಾನು ಶಂಕರ್ಯಾನ ಚೆಂಡಮೇಲೆ ಕೈ ಹಾಕಿ ಹಿಂದೆಳೆದೆ. ಆ ಮುದುಕರು ಮುಂದುವರಿಸಿದರು,

''.....ಹುಡುಗರ ಜಿಜ್ಞಾಸೆಯ ಕುಡಿ ಚಿವುಟಬಾರದು. ನಲವತ್ತು ವರ್ಷ ನಾ ಶಿಕ್ಷಕನಾಗಿ ದುಡಿದಿರುವೆ. ಹುಡುಗರು ಎಂಥೆಂಥ ಮೋಜಿನ ಪ್ರಶ್ನೆ ಕೇಳ್ತಾರ ಅಂತೀರಿ? ಛ್ಯಾ!''

ನನಗೆ ಒಂದೂ ಅರ್ಥವಾಗಲಿಲ್ಲ! 'ಗೋಡಬೋಲೆ ಎಲ್ಲಿರ್ತಾರೆ?' ಎಂಬ ಸಸಾರ ಪ್ರಶ್ನೆಗೆ ಈ ಸಾಂದೀಪನಿ ಉತ್ತರಿಸಲು ಅಸಮರ್ಥನಾಗಿದ್ದಾನಲ್ಲ ಎಂಬ ಸಂಭ್ರಮದ ಲ್ಲಿದ್ದಾಗ ಆ ಮುದುಕರು ಹುರುಪಿನಿಂದ ಪುರಾಣ ಬಿಚ್ಚಿದ್ದರು.

''....ಈಗ ನೋಡ್ರಿ, ನಿಮ್ಮ ಆ ಗಣಪುಲೆಯ ವಿಳಾಸ .....''

''ಗಣಪುಲೆ ಅಲ್ರಿಽ ಗೋಡಬೋಲೆ! ಗಣಪುಲೆಯವರ ಮನೆಯಲ್ಲಿ ನಮ್ಮ ದೊಡ್ಡಮ್ಮನ್ನ ಕೊಟ್ಟಿದ್ದರು.''

''ಯಾವ ಗಣಪುಲೆ ಅಂತ್ರ ಅಂದ್ರಿ?'' ಮುದುಕರು ಮತ್ತೆ ರೈಲಿನ ಹಳಿ ಬದಲಾಯಿಸಿದರು! ತವರು ಮನೆಯವರ ಬಗೆಗೆ ಹೀಂಗ ಆಸ್ಥೆಯಿಂದ ಕೇಳೋ ದೊಂದೇ ತಡ ನನ್ನವಳ ಉತ್ಸಾಹಕ್ಕೆ ಗರಿ ಮೂಡಿದವು. ಕಂಕುಳಲ್ಲಿಯ ಕೂಸನ್ನು ಮತ್ತೊಮ್ಮೆ ಎತ್ತಿ ಸರಿಯಾಗಿ ಕೂಡಿಸುತ್ತ ನನ್ನವಳು ಮುನ್ನುಗ್ಗಿ ಬಂದು,

''ಗಣಪುಲೆ ಅಂತಂದ್ರ, ನಮ್ಮ ದೊಡ್ಡಮ್ಮನ ಯಜಮಾನರು. ವಡಗಾಂವದ ಮುನಸಿಪಾಲಿಟಿಯೊಳಗ ನೌಕರಿಗೆ ಇದ್ದರು''

''ವಡಗಾಂವ್? ವಡಗಾಂವ್ ಅಂದ, ಪುಣೆ ಜಿಲ್ಲೆಯೊಳಗಿನದೋ ಅಥವಾ ನಗರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri
ಜಿಲ್ಲೆಯೊಳಗಿನದೋ?''

ನಾವು ಕುಟುಂಬಸಮೇತವಾಗಿ ನಡುಮಧ್ಯಾಹ್ನದ ಸುಡುಬಿಸಿಲಿನಲ್ಲಿ ಪಾರ್ಲೆಯ ಡಾಮರು ರಸ್ತೆಯ ಮೇಲೆ ನಿಂತಾಗ ಈ ಮುದುಕರು ಮಹಾರಾಷ್ಟ್ರದ ಭೂಗೋಲ ದಲ್ಲಿ ಹೊಕ್ಕಿದ್ದರು!

''....ಮಹಾರಾಷ್ಟ್ರದಾಗ ಒಟ್ಟು ಇಪ್ಪತ್ತೆರಡು ವಡಗಾಂವಗಳು ಮತ್ತು ಹನ್ನೊಂದು ತಳೇಗಾಂವಗಳು ಇವೆ, ಏನ್ರೆಪಾ?''

''ಹಿಂಗೇನು?'' ನಾನಂದೆ. ಇಪ್ಪತ್ತೆರಡು ಯಾಕ ಎರಡೂವರೆ ಸಾವಿರ ವಡಗಾಂವ ಗಳು ಮತ್ತು ಒಂದೂಕಾಲು ಸಾವಿರ ತಳೇಗಾಂವಗಳು ಇದ್ದರೂ ನನ್ನ ಗಂಟೇನೂ ಹೋಗುತ್ತಿರಲಿಲ್ಲ! ನನಗೆ ಬೇಕಾಗಿದ್ದುದು ನನ್ನವಳ ಆ ದಿವ್ಯ ದೊಡ್ಡಮ್ಮಳ ವಿಳಾಸ ಮಾತ್ರ. ಅಷ್ಟರಲ್ಲಿ ಶಂಕರ್ಯಾ ಕತ್ತೆಯ ಹಿಂದೆ ಸಾಗಿದ್ದ.

''ಶಂಕರ್ಯಾss '' ನಾನು ಕೂಗಿದೆ. ನನ್ನ ಈ ಕೂಗನ್ನು ಕೇಳಿ ಆ ಕತ್ತೆ ಬೆದರಿತು; ಆದರೆ ಶಂಕರ್ಯಾನ ಮೇಲೆ ಯಾವ ಪರಿಣಾಮವೂ ಆಗಿರಲಿಲ್ಲ!

''ಅಲ್ರೀs ರಾಯರs ಹೀಂಗ ಹುಡುಗರ ಮ್ಯಾಲ ಹರೀ ಹಾಯಬಾರದು''

''ಹರಿ ಹಾಯಲಿಲ್ಲರಿ; ನಾ ಅವನಿಗೆ ಮಾಹಿತಿ ನೀಡುವ ಉದ್ದೇಶದಿಂದ ಕೂಗಿದೆ. ಶಂಕರ್ಯಾ, ನಮ್ಮ ಮಹಾರಾಷ್ಟ್ರದಾಗ ಎಷ್ಟು ವಡಗಾಂವ್‌ಗಳು ಅವೆ ಗೊತ್ತದೇ ಏನು? ಅಂಥಾಂಗ ಎಷ್ಟ ಅವ ಅಂದಿರಿ ಮುತ್ಯಾ?''

''ಇಪ್ಪತ್ತೆರಡು ಅವ ಏನಪಾ ಶಂಕರಾಚಾರ್ಯ'' ಎಂದೆನ್ನುತ್ತ ಆ ಅಜ್ಜಪ್ಪ ಶಂಕರ್ಯಾನ ಕೆನ್ನೆಗೆ ಮುದ್ದುಕೊಟ್ಟರು. ಆಮೇಲೆ ಮುಂದುವರಿಯುತ್ತ,

''.....ಮತ್ತs ಹನ್ನೊಂದು ತಳೇಗಾಂವ್ ಇವೆ'

''ಅದ್ರ ಕತ್ತೆಗೆ ಕೋಡು ಯಾಕಿರಾಂಗಿಲ್ಲ?'' ಶಂಕರ್ಯಾನ ಪ್ರಶ್ನೆ.

''ಮುತ್ಯಾನ್ನ ಕೇಳು'' ನಾನಂದೆ.

''ಹೆs ಹೆss ; ಈಗಿನ ಪೀಳಗಿ ನೋಡ್ರಿ ಭಾಳ ಚುರುಕು. ಏನಂತೀರಿ ಗಣಪುಲೆ?''

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನನ್ನನ್ನೇ ಗಣಪುಲೆ ಮಾಡಿದ ಆ ಮುದಿಯ!

“....ಒಳ್ಳೇದು; ಸಿಕ್ಕೀತು ಬಿಡ್ರಿ ನಿಮಗ ಬೇಕಾಗಿರೋ ಮನೆಯ ವಿಳಾಸ. ಪಾರ್ಲೆದೊಳಗೇನು, ಗುರ್ತಿನವರು ಸಿಕ್ಕಸಿಗ್ತಾರ ಹಪ್ಪs” ಎಂದೆನ್ನುತ್ತ ನಡೆದರು.

ಈ ಅಜ್ಜಪ್ಪ ಶಂಕರ್‍ಯಾನ ಮುದ್ದು ತೆಗೊಳ್ಳುವಾಗ ನಮ್ಮ ಶಂಕರ್‍ಯಾ ಅವರನ್ನು ಕಚ್ಚಲಿಲ್ಲ ಯಾಕ ಅಂತ ಅನಿಸಿತು. ಉಳಿದ ಹೊತ್ತಿನಾಗ ಎಲ್ಲ್ಯಂದರಲ್ಲಿ ಬಾಯಿ ತೂರೋ ತುಂಟ ಮುದುಕ ಮುದ್ದುಗರೆಯುವಾಗ ಯಾಕ ಮುದ್ದಿಯಾಗಿ ಕುಳಿತಿತ್ತೋ!

“ನನಗನಿಸ್ತದ ಆ ಮುಂದಿನ ಓಣೀನ ಇರಬೇಕು; ಹೌದು ಅದs ....’ ಹೀಂಗನ್ನುತ್ತ ನನ್ನವಳು ಮತ್ತೊಂದು ತಿರುವಿಗೆ ಹೊರಳಿದಳು.

“ಅಲ್ಲs, ಇದು ಮಾಲವೀಯ ಮಾರ್ಗ ಅದs”

“ಹೀಂಗ ಏನೋ ಹೆಸರಿತ್ತು ಆ ಓಣೀದು”

“ಧನ್ಯ ಆಯ್ತು! ಒಮ್ಮೆ ಅಂದಿ; ಮಹಾತ್ಮಾಗಾಂಧೀನೋ, ನೆಹರೂ ರೋಡನೋ ಅಂತ. ಮತ್ತೊಮ್ಮೆ ಶ್ರದ್ಧಾನಂದ ರಸ್ತೆ ಅಂತ ಅಂದಿ. ಆ ಮುದುಕರು ಚಿತ್ತರಂಜನ ರಸ್ತೆ ಅಂತ ಅಂದಾಗ ಅಂಥಾದ್ದs ಏನೋ ಹೆಸರು ಅಂತ ಗೋಣು ಹಾಕಿದಿ. ನೆಟ್ಟಗ ವಿಳಾಸ ವಿಚಾರಿಸಿದು ಅಂತ ಅಂದ್ರ ಆ ಮಾತಿಲ್ಲ. ‘ಯಾರಿಗೆ ಕೇಳಿದ್ರು ಹೇಳ್ತಾರ’ ಅನ್ನೊ ದೊಡ್ಡಿಸ್ತನ ಬೇರೆ! ನಿನ್ನ ಪಾರ್ಲೇದ ದೊಡ್ಡಮ್ಮ ಅಂತ ಅಂದ್ರ ಪಾರ್ಲೆ ಬಿಸ್ಕೀಟ್ ಕಾರಖಾನೆಧಾಂಗ ವಿಶ್ವವಿಖ್ಯಾತ ಅಂತ ಮಾಡಿದಿ ಏನು?” ಸಿಟ್ಟಿನಿಂದ ಇನ್ನೂ ಉದ್ಧಾರ ಮಾಡುವವನೇ. ಆದರೆ ಅಷ್ಟರಲ್ಲಿ ಶಂಕರ್‍ಯಾ ಕಿರುಚಿದ.

“ಅಪ್ಪಾ, ಅಲ್ಲಿ ನೋಡಿರಲ್ಲ” ಏನದು? ನಾನು ಅತ್ತ ಮುಖ ತಿರುಗಿಸಿದೆ. ಒಂದು ಹೆಣ್ಣು ಹಂದಿ ತನ್ನ ಡಝನ್‌ಗಟ್ಟಲೆ ಮರಿಗಳನ್ನು ಸಂಗಡ ಕರೆದುಕೊಂಡು ಶಾಪಿಂಗ್‌ಗೆ ಹೊರಟ ಶೀವಿಯಲ್ಲಿ ನಡೆದಿತ್ತು..

“ಅಲ್ಲೋ, ಅದಕ್ಕ ಹಂದಿ ಅಂತಾರ,” ನಮ್ಮ ಗಿರಗಾಂವದಲ್ಲಿ ಈ ಪ್ರಾಣಿ ಸಹ ಇಲ್ಲ.

“ಹಂಗ?”

“ಹ್ಞೂಂ; ಹೌದು”

“ನೀವು ನನಗ ಆಗಾಗ ಹಂದಿ ಅಂತ ಅಂತೀರಿ; ಅದು ಅಂದ್ರ, ಇದs ?”

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಿಷ್ಕಪಟಭಾವ ಅಂತ ಏನೋ ಅಂತಾರಲ್ಲ ಹಾಂಗ ಮುಖ ಮಾಡಿ ಶಂಕರ್ಯಾ ಕೇಳಿದ.

''ಹೌದು; ಅದೇ ಇದು. ನಡಿರಿ ಮುಂದೆ''

''ಆದರೆ ದೊಡ್ಡಮ್ಮನ ಮನೆ ಯಾವಾಗ ಬರ್ತದೆ?''

''ನಿಮ್ಮಪ್ಪನ್ನs ಕೇಳು''

ಈಗ ನನ್ನವಳ ಧೈರ್ಯ ಸಹ ಕುಸಿದಿತ್ತು. ಅಷ್ಟರಲ್ಲಿ ಎದುರಿಗೆ ಒಬ್ಬ ಸೈಕಲ್ ಸವಾರ ಬಂದ. ನಾನು ಆತನಿಗೆ 'ಪುಕ್, ಪುಕ್' ಅಂತ ಸನ್ನೆ ಮಾಡಿ ನಿಲ್ಲಿಸಿದೆ.

''ರೀ, ಲಂಬೋದರ ಗೋಡಬೋಲೆ ಎಂಬುವವರು ಎಲ್ಲಿರ್ತಾರ ಅಂಬೋದು ಗೊತ್ತದ ಏನ್ರೀ?''

''ಯಾರಿಗ್ಗೊತ್ತು? ಯಾರರೇ ಆರೇರನ ಕೇಳ್ರಿ'' ಎಂದೆನ್ನುತ್ತ ಸಾಯಕಲ್ ಹೊರಟು ಹೋಯಿತು.

''ಆರೇರುಅಂದ್ರ ಏನು ಅಪ್ಪಾ?'' ಶಂಕರ್ಯಾನ ಪ್ರಶ್ನೆ.

''ನಿಮ್ಮಪ್ಪ!'' ನಾನು ಜೇಸತ್ತು ನುಡಿದೆ.

''ಅಂದ್ರ ನೀವs ಅಲ್ಲಾ?'' ಶಂಕರ್ಯಾ ನಿರ್ವಾಂತತನದಿಂದ ಅಂದ.

''ಶಂಕರ್ಯಾ, ಬಾಯ್ಮುಚ್ಚಿಕೊಂಡು ನಡಿ ನೋಡೋಣು'' ಎಂದಂದೆ. ಇದಕ್ಕೂ ಮಿಗಿಲಾಗಿ ನಾನೇನು ಮಾಡುವಂತಿತ್ತು? ಹೆಗಲ ಮೇಲಿನ ಮಗು ನಿದ್ದೆಹೋಗಿತ್ತು. ಆದ್ದರಿಂದ ಅದರ ಭಾರ ಹೆಚ್ಚಿತ್ತು. ಬೆರಳು ಹಿಡಿದು ಸಾಗಿದ ಮಗು ನಡುನಡುವೆ ತೊಡಗಾಲು ಹಾಕುತ್ತಿತ್ತು. ಆದ್ದರಿಂದ ಯಾವ ಚಣಕ್ಕೆ ಅದನ್ನ ಎತ್ತಿ ಹೊರುವ ಪ್ರಸಂಗ ಬಂದೀತು ಎಂಬುದು ಹೇಳಲಳವಲ್ಲ. ಮೇಲಾಗಿ ದೊಡ್ಡಮ್ಮನ ಮನೆಯೋ ಇನ್ನೂ ದೊರಕಿರಲಿಲ್ಲ. ಅಷ್ಟರಲ್ಲಿ,

''ಅಲs ಲs , ಇತ್ತ ಕಡೆಗೆ ಬಂದಿರಿ?'' ಎಂಬ ಪರಿಚಿತ ಧ್ವನಿ ಕೇಳಿತು. ಎದುರಿಗೆ ನಾನೂ ಸರಂಜಾಮೆ ನಿಂತಿದ್ದ.

''ಏನಂತೀರಿ ಧೋಂಡುರಾಯರೆ; ವ್ಹಾಟ್ ಬ್ರಿಂಗ್ಸ್ ಯೂ ಹಿಯರ್?''

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

''ಇವಳ ದೊಡ್ಡಮ್ಮ''

''ಹೀಂಗೇನು? ಎಲ್ಲಿರ್‍ತಾರ ಅವರು ಇಲ್ಲಿ?''

''ಅದನ್ನ ಕೇಳುತ್ತ ಸಾಗಿದ್ದೇವೆ; ಎರಡು ತಾಸಾಯ್ತು! ನೀವು ಇತ್ತ ಭಾವುಜೀ?''

''ಇಲ್ಲಿ ನಮ್ಮದು ಒಂದು ಸಂಡೇ ಆಫ್ಟರ್‌ನೂನ್ ಕ್ಲಬ್ ಅದ''

''ಅಂದವ್ಯಾಲ ಪ್ರತಿ ರವಿವಾರ ಗಿರಗಾಂವದಿಂದ ಪಾರ್ಲೇತನಕ ಬರತೀರಿ ಅನ್ನಿರಿ ಭಾವುಜೀ''

''ಬರಲೇ ಬೇಕಲ್ಲ ವೈನೀ; ನವ ಸಮಾಜದ ನಿರ್ಮಾಣ ಮಾಡುವುದು ಅಂದರೆ....''

''ನಾನ್ಯಾ, ಬಿಸಿಲಿನ ಧಗೆಯಿಂದ ಈಗಾಗಲೇ ಕುದಿಯಲಿಕ್ಕೆ ಹತ್ತೇನಿ; ಅದರ ಮ್ಯಾಲ ನಿನ್ನ ವ್ಯಾಖ್ಯಾನ ಒಂದು ಬ್ಯಾಡ. ಲಂಬೋದರ ಗೋಡಬೋಲೆ ಎಂಬುವವರು ಎಲ್ಲಿರ್‍ತಾರ ಗೊತ್ತಿದ್ದರ ಹೇಳು''

''ಲಂಬೋದರ ಗೋಡಬೋಲೆ...?'' ತನ್ನ ಹೋತಿನ ಗಡ್ಡ ಕೆರೆಯುತ್ತ ನಾನೂ ಸರಂಜಾಮೆ ವಿಚಾರಮಗ್ನನಾದ. ಅಷ್ಟರಲ್ಲಿ ತನ್ನ ಕೋಟಿನ ಅಂಚನ್ನು ಎಳೆದ ಹಾಗಾಯ್ತು. ಇಂಥ ಎಳೆಯುವಿಕೆ ಅಂದರೆ ನಮ್ಮ ಶಂಕರ್‍ಯಾನ ಕರಾಮತ್ತು!

''ಅಪ್ಪಾss''

ಏನೋ?''

''ನನಗ ನಾನೂಕಾಕಾನಂಥ ಗಡ್ಡ ಹಚ್ಚಿ ಕೊಡ್ತೀರೇನು?'' ಶಂಕರ್‍ಯಾ ತನ್ನ ಕೋರಿಕೆ ಬಿತ್ತರಿಸಿದ.

''ನನ್ನದೇ ಗಡ್ಡ ಹಚ್ಚಲೇನು?'' ನಾನೂ ಕೇಳಿದ.

''ಬೇಡ; ನನಗ ಖರೇಖರೇ ಗಡ್ಡನs ಬೇಕು. ''

''ಇದೂ ನಿಜವಾದ ಗಡ್ಡನs ಅದೆ ಮರೀ'' ನಾನೂ ಕೆಳಗೆ ಬಗ್ಗಿ ಸಾರಿದ. ಶಂಕರ್‍ಯಾ ಅದನ್ನು ಎಳೆದು ಖಚಿತಪಡಿಸಿಕೊಂಡ. ನಾನೂ ಆ ನೋವನ್ನು ನಗೆಯಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತೇಲಿಸಲೆತ್ನಿಸಿದ.

''ದೊಡ್ಡಮ್ಮನ ಹೆಸರು ಏನಂದಿರಿ, ಧೋಂಡುರಾವ್?''

''ಲಂಬೋದರ ಗೋಡಬೋಲೆ''

''ಅಯ್ಯ ಓಂಗ್ಯಾಕ ಮಾಡ್ತೀರಿ? ಲಂಬೋದರ ಗೋಡಬೋಲೆ ಹ್ಯಾಂಗ ಆದೀತು ಅವಳ ಹೆಸರು? ಆಕೆ ಹೆಸರು ಪಾರ್ವತಿಬಾಯಿ ಗಣಪುಲೆ. ಆಕೆಯ ಅಳಿಯಂದಿರು ಲಂಬೋದರ ಗೋಡಬೋಲೆ''

''ಅದ್ಸರಿ ವೈನೀ, ರಸ್ತೇದ ಹೆಸರೇನು?''

''ಅದೇನೋ ಅಂತಾರಲ್ರಿSS ಅದS ಅದೆ''

ಹೆಸರುಗಳನ್ನು ಹೇಳುವಾಗ, ರಸ್ತೇದ್ದೇ ಇರಲಿ ಅಥವಾ ಮತ್ತ್ಯಾವುದರ ಹೆಸರೇ ಇರಲಿ, 'ಅದೇನೋ ಅಂತಾರಲ್ರಿSS' ಅಂತ ಜನ ಯಾಕ ರಾಗ ತೆಗೀತಾರೋ ತಿಳಿಯೂದಿಲ್ಲ. ಧಗಧಗಿಸುವ ಸುಡುಬಿಸಿಲಿನಲ್ಲಿ ಅರಳಿನ್ಹ್ಯಾಂಗ ಹುರುಪಳಿಸುವ ಸಂದರ್ಭದಾಗ ಯಾರಾದರೂ ಇಂಥ ನಿರರ್ಥಕ ಮಾತು ಆಡಿದರ ಅವರ ಸೊಂಡಿಗೆ ಬಾರಿಸಬೇಕಂತ.....!

''ಅಯ್ಯಯ್ಯ ಅಲ್ಲಿ ನೋಡ್ರಿ, ಹೆಂಗ್ಸರು ಬರ್ತಾ ಇದ್ದಾರ; ಗೊತ್ತಿದ್ದ ಮುಖಗಳ ಹಾಂಗ ಕಾಣಸ್ತಾವ....''

ಈಗ ನಮ್ಮಾಕಿಗೆ ಕಂಡಕಂಡ ಮುಖಗಳೆಲ್ಲ ಗುರ್ತಿನವು ಎಂದು ಭಾಸವಾಗಲಿಕ್ಕೆ ಹತ್ತಿತ್ತು. 'ಹೆಂಗ್ಸರು ಬರ್ತಾ ಇದ್ದಾರೆ' ಎಂಬ ಮಾತು ಕೇಳುತ್ತಲೆ ನಾನ್ಯಾ ತನ್ನ ಗಡ್ಡದ ಚುಕ್ಕಾಣಿಯನ್ನು ಆ ದಿಕ್ಕಿಗೆ ಹೊರಳಿಸಿದ.

''ಯಾರದರೇ ವಿಳಾಸ ಬೇಕಾಗೇನು?'' ಆ ಗುಂಪಿನಲ್ಲಿಯ ಹಿರಿಯ ಮಹಿಳೆಯೊಬ್ಬಳು ಮುಂದೆ ಬರುತ್ತ ಕೇಳಿದಳು.

''ಹೌದು ಗೋಡಬೋಲೆಯವರದು....''

''ಯಾವ ಗೋಡಬೋಲೇS? ''

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

''ಲಂಬೋದರ ಗೋಡಬೋಲೆ''

''ಎಲ್ಲಿಯೋ ಹೆಸರು ಕೇಳಿಧಾಂಗ ಅನಿಸ್ತದೆ; ಇಲ್ಲಿಯ ವಿಳಾಸನs ಹೇಳ್ಯಾರಲ್ಲsS?''

''ಹ್ವಾದೌದು ಇಲ್ಲಿಯದs ಇಲ್ಲಿಯದs ಆಚೇ ವರ್ಷ ನಾ ಬಂದಿದ್ದೆನಲ್ಲ ನಮ್ಮ ದೊಡ್ಡಮ್ಮನ ಮಗಳ ಮಂಗಳಗೌರಿ ವ್ರತಕ್ಕ....''

ಅಷ್ಟರಲ್ಲಿ ಆ ಗುಂಪಿನಲ್ಲಿಂದ ಓರ್ವ ಹೆಂಗಸು, ನಾಟಕದಲ್ಲಿ ಸಂವಾದವನ್ನು ಉಸುರುತ್ತ ಉಸುರತ್ತ ಪ್ರವೇಶಿಸುವವರಂತೆ, ಮುನ್ನುಗ್ಗಿ

''...ಅಯ್ಯ ನಮ್ಮವ್ವ, ಆಗಿಂದ ನೋಡಲಿಕ್ಕೆ ಹತ್ತೇನಿ; ಮೋತಿ ಆಗದೀ ಗುರುತಿಂದು ಅನಿಸಸ್ತದೆ, ಧನಿ ಗೊತ್ತಿದ್ದದ್ದು ಅಂತ ಗೊತ್ತಾಗ್ತದೆ, ಆದರೂ ಯಾರಿವರು ಅಂತ.....''

ಆ ಮಹಿಳೆಯ ಮಾತು ಹೀಗೆ ಮುಂದುವರಿಯುವ ಸಮಯದಲ್ಲಿಯೇ ನಮ್ಮವಳು ಒಮ್ಮೆಲೆ,

''ಅಯ್ಯಯ್ಯsS ಅಕ್ಕಾಣೀ ಅಲ್ಲ ನೀನು!'' ಎಂದು ಕೂಗಿದಳು. ನನ್ನವಳಿಗೆ ತನ್ನ ತವರು ಮನೆಯ ಕಡೆಯ ಯಾರೋ ಅಕ್ಕಾಣೀ ಸಿಕ್ಕಳು. ಆಮೇಲೆ ಅಲ್ಲಿ ಭರತಮಿಲಾಪದ ದೃಶ್ಯದ ಪುನರಾವರ್ತನೆ ಆಯಿತು. ನೆತ್ತಿಯ ಮೇಲಿನ ರಣ ರಣ ಬಿಸಿಲಿಗೆ ಸೊಪ್ಪು ಹಾಕದೇ ಈ ಮಹಿಳಾವರ್ಗ ಹಾಳುಹರಟೆಯಲ್ಲಿ ಮುಳುಗಿತು.

''ಅಲ್ರಿsS ಈಕೆ ಅಂತಂದ್ರ, ನಮ್ಮ ಯಶೋದಾಬಾಯಿಯ ಕಮಲೀ ಇಲ್ಲsS; ಅವಳ ನಿಗೆಣ್ಣಿ....''

''ನಾಲ್ಕು ಸಾವಿರ ವರದಕ್ಷಿಣೆ; ಪ್ಯಾಲ ವರೋಪಚಾರ..''

''ಹ್ಞೂಂ; ಮೋಟರ ಕೊಂಡರ ಏನಾತು? ಮನುಷ್ಯತ್ವs ಮರೀಬೇಕು ಅಂತ ಅದs ಏನು....?''

ಇಂಥ ಸಂಭಾಷಣೆಯ ತುಣುಕುಗಳು ಕಿವಿಯ ಮೇಲೆ ಅಪ್ಪಳಿಸತೊಡಗಿದವು. ಅಷ್ಟರಲ್ಲಿ ಆ ಅಕ್ಕಾಣಿ,

''ಏನಂದ್ರೂ ಮದುವ್ಯಾಗ ಇಷ್ಟು ದಪ್ಪ ಕಾಣ್ತಿರಲಿಲ್ಲ ಬಿಡು ನಮ್ಮವ್ವ!'' ಎಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನನ್ನ ಬಗ್ಗೆ ಉದ್ಗಾರ ತೆಗೆದದ್ದೂ ನನ್ನ ಕಿವಿಗೆ ಬಿತ್ತು. ನಾನು ರಸ್ತೆಯ ಬದಿಯ ಮರದ ನೆರಳಿನ ಆಸರೆಗೆ ಹೋಗಿ ನಿಂತೆ. ಶಂಕರ್ಯಾ ತನ್ನ ತಲೆಯ ಮೇಲಿನ ಟೊಪ್ಪಿಗೆಯನ್ನು ಚೆಂಡಿನಂತೆ ಮಾಡಿ ಎತ್ತರಕ್ಕೆ ಎಸೆದು ಬುತ್ತಿ ಹಿಡಿಯುವ ಕಾಯಕದಲ್ಲಿ ನಿರತನಾಗಿದ್ದ. ನಾನ್ಯಾ ನಲವತ್ತರ ಗಡಿಯಲ್ಲಿದ್ದ ಆ ಮಹಿಳಾಮಣಿಗಳ ಗುಂಪಿನ ಮೇಲೆ ಕೊನೆಯ ಸಲ ಮತ್ತೊಮ್ಮೆ ತನ್ನ ಕಣ್ಣೋಟ ಹರಿಸಿ ಅಲ್ಲಿಂದ ಓಟ ಕಿತ್ತಿದ್ದ. ನಾನು ದೂರದಿಂದಲೇ, ಕೊರಳು ಕೊಂಕಿಸಿ ಬೆರಳು ತೋರಿಸಿ- ಯಾವ ಯಾವ ತೆರನಾಗಿ ಸನ್ನೆಮಾಡಲು ಬರುತ್ತಿತ್ತೋ ಆ ತೆರನಾಗಿ ಮಾಡಿ, 'ಸಾಕು ಮಾಡ್ರಿ ಇನ್ನ' ಎಂದು ಸೂಚಿಸಿದೆ. ೧೫-೨೦ ನಿಮಿಷಗಳು ಹೀಂಗs ಕಳೆದವು. ಆಮೇಲೆ ಇವಳು ಒಳ್ಳೆಯ ಆತ್ಮವಿಶ್ವಾಸದಿಂದ ಹೆಜ್ಜೆ ಅಪ್ಪಳಿಸುತ್ತ ಬಂದಳು.

''ಸಿಕ್ಕಿತು, ನಡೀರಿನ್ನ''

ಕೋಲಂಬಸನ ಹಡಗಿನ ಮೇಲೆ ಸಮುದ್ರದಂಡೆಯ ಹಕ್ಕಿಗಳು ಬಂದು ಕುಳಿತಾಗ ಆತನಲ್ಲಿ ಎಂಥ ಹರ್ಷೋಲ್ಲಾಸ ಹೊಮ್ಮಿತ್ತೋ ಆ ಬಗೆಯ ಉತ್ಸಾಹ ನಮ್ಮಲ್ಲಿ ಸಂಚರಿಸಿತು.

''ಎಲ್ಲಿ ಅದೆ ಮನೆ?''

''ಇಲ್ಲಿಯೇ ಅದೆ, ಮದ್ರಾಸಿ ರಾಮನ ಗುಡಿಯ ಹತ್ತಿರ''

''ಮದ್ರಾಸಿ ರಾಮ?'' ವನವಾಸಿ ರಾಮ ನಾನು ಕೇಳಿದ್ದೆ; ಮದ್ರಾಸಿ ರಾಮ ಎಂಬ ಈ ಕಾಂಡ ಹೊಸದೆನಿಸಿತು! ನಾನಂದೆ,

''ಅಲ್ಲs ಮಾರಾಯ್ತಿ ಈ ಮದ್ರಾಸಿ ರಾಮನ ಗುಡಿ ನಿನಗ ಗೊತ್ತದ ಏನು?''

''ಅಯ್ಯs ಹೀಂಗ್ಯಾಕ ಮಾಡ್ತೀರಿ; ಪ್ರಸಿದ್ಧ ಗುಡಿ ಅದs ಅದು''

''ಅಪ್ಪಾ, ಅಪ್ಪಾ; ಮದ್ರಾಸಿ ರಾಮನ್ನ ನೋಡಲಿಕ್ಕೆ ಹೋಗೋಣು'' ಶಂಕರ್ಯಾ ಹಟ ಹಿಡಿದ.

''ನಿಮ್ಮ ಅಜ್ಜಿಯ ಮನೆಯ ಹುಡುಕಾಟದ ಈ ವನವಾಸ ಮುಗೀಲಿ, ಆ ಮ್ಯಾಲ ನೋಡೋಣಂತ ಮದ್ರಾಸಿ ರಾಮ, ಪಂಜಾಬಿ ಮಾರುತಿ, ಬಂಗಾಲಿ ಸೀತಾ....?''

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇದಾದ ಬಳಿಕ, 'ನೀವು ಕಂಡೀರ್ಯಾ ಮದ್ರಾಸಿ ರಾಮುನ್ನ' ಎಂಬ ವಿಚಾರಣೆಯಲ್ಲಿ ಸಾಕಷ್ಟು ಸಮಯ ಕಳೆಯಿತು. ಜನರಾದರೂ ಎಂಥೆಂಥ ವಿಳಾಸದ ಗುರ್ತು ಹೇಳ್ತಾರಂತೀರಿ? ಓರ್ವ ಬುಶ್‌ಕೋಟಿನ ಮಹಾಶಯ ಹೇಳಿದ,

''ಹೀಂಗ ನೆಟ್ಟಗ ಹೋಗ್ರಿ; ಆಮ್ಯಾಲ ಎಡಕ್ಕ ಒಂದು ಸಂದಿ ಬರ್ತದ. ಅದನ್ನೂ ಬಿಟ್ಟ ಮುಂದೆ ಹೋಗಿರಿ. ಅಲ್ಲಿ ಬಲಕ್ಕೆ ತಿರುಗಿರಿ. ಪಾರ್ಲೇಶ್ವರ ಗುಡಿ ಅಥವಾ ಪಾರಥಿಯವರ ಬಂಗಲೆ ಎಲ್ಲ್ಯದ ಅಂತ ಕೇಳಿರಿ. ಅಲ್ಲಿಂದ ಮುಂದೆ ಮತ್ತ ನೆಟ್ಟಗ ನಡೀರಿ; ಸ್ವಲ್ಪ ಹೊತ್ತಿನಾಗ ಸೋನಾಲಿ ರೋಡ್‌ಗುಂಟ. ಬಟನ್ ಫ್ಯಾಕ್ಟರಿಯ ಓಂಬದಿಯಿಂದ ಬಲಗಡೆಗೆ ಮುಖಾ ಮಾಡಿದ್ರಿ ಅಂದ್ರ ಸುಭಾಷ ರಸ್ತೆ ಹತ್ತುತ್ತದೆ. ಅಲ್ಲಿ ಯಾರು ಬೇಕಾದ್ದವರನ್ನ ಕೇಳ್ರಿ; ಮದ್ರಾಸಿ ರಾಮನ ಗುಡಿ ಅಂದ್ರ ತೋರಿಸ್ತಾರ... ಸರಿ ನಾ ಹೊರಡ್ತೇನಿನ್ನ.''

''ಎದುರಿಗಿನ ದಿಕ್ಕಿನಲ್ಲಿ ಒಂದು ಫರ್ಲಾಂಗು ಹಾದಿ ಸವೆಸಿದ ಮೇಲೆ ನಮಗರಿವಾಯಿತು, ನಾವು ಹಿಡಿದ ದಾರಿ ಮದ್ರಾಸಿ ರಾಮನದಲ್ಲ, ಗಿಡ್ಡರಾಮನ ಗುಡಿಯದು ಎಂದು! ಇದಾದ ಬಳಿಕ ಮತ್ತೊಬ್ಬ ಮಹಾಶಯ ತಿಳಿವಳಿಕೆ ನೀಡಿದ,

''ಅಲ್ರಿಕ ಮದ್ರಾಸಿ ರಾಮು ಅಂದ್ರ ಯಾರಿಗೆ ಗೊತ್ತಾಗಬೇಕು? ಆತನನ್ನು ಊರುಗೋಲುಸ್ವಾಮಿಯ ರಾಮು ಅಂತಾರ''

ಆದರೆ ಈ ನಾಮದ ಮಹಿಮೆ ಸಹ ಒಂದೇ ಫರ್ಲಾಂಗದ ಫಾಸಲೆಯಲ್ಲಿ ಮಾಯವಾಯ್ತು; ಮುಂದೆ ಯಾರಿಗೂ ಈ ಹೆಸರು ಅರಿಯದ ವಿಷಯವಾಗಿತ್ತು! ಎದುರಿಗಿನ ಅಡ್ಡರಸ್ತೆಯ ಮೂಲೆಯಲ್ಲಿ ಎಲೆಯಡಿಕೆಯವನ ಅಂಗಡಿ ಕಂಡಿತು. ಅಲ್ಲಿ ಕೇಳಿದೆ,

''ಅಣ್ಣಾ; ಇಲ್ಲಿ ಊರುಗೋಲುಸ್ವಾಮಿ ರಾಮನ ಗುಡಿ ಎಲ್ಲಿ ಅದರಿ?''

''ಊರುಗೋಲು ಸ್ವಾಮಿ? ಯಾಂಬಲ್ಲ? ಈ ಹೆಸರು ಕೇಳಿ ಗೊಂತಿಲ್ರೀ, ಯಾನೋ ನಿಂಗಣ್ಣಾರ ! ನಿಂಗೇನರೇ ಗೊಂತ್ತೈತೇನ?'' ಎದುರಿಗೆ ಕುಳಿತ ಆಸಾಮಿಯನ್ನು ಆ ಎಲೆಅಡಿಕೆ ಅಂಗಡಿಯಂವ ಕೇಳಿದ.

''ಪಿಚಕ್'' ಅಂತ ಬಾಯಲ್ಲಿಯ ತಾಂಬೂಲದ ತುಪ್ಪಯನ್ನು, ಕುಳಿತ ಬೇಂಚಿನ ಕೆಳಗೆ, ಓಕುಳಿಯಂತೆ ಸಿಡಿಸಿ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

''ಇಲ್ಲೋ ಯಪ್ಪಾ; ಹ್ಞೂಂ ಊರುಗೋಲುಸ್ವಾಮಿ ಅಂತ ಒಬ್ಬಾಂವ ಅಲ್ಲಿ ರಾಮನ ಗುಡಿಯಾಗ ಇರ್‍ತಾನೆ. ಅಂವನೇನು ಮತ್ತ?'' ಎಂಬ ಪ್ರತಿಪ್ರಶ್ನೆ ಬಂತು.

''ಹೌದು, ಹೌದು'' ಉತ್ಸಾಹಿತನಾಗಿ ನಾನಂದೆ.

''ಹಂಗಾದ್ರ, ಮದ್ರಾಸಿ ರಾಮನ ಗುಡಿ ಅಂತ ಕೇಳ್ರಿಯಪ್ಪಾ! ಯಾಂವ ಬೇಕಾದ್ದಾಂವ ಹೇಳ್ತಾನು... ಹೀಂಗ ಸೀದಾ ಹೋಗ್ರಿ, ಆ ಸಾಲೀತನಕ. ಸಾಲೀ ಬರ್‍ತೈತಿ, ಯಾನ? ಅಲ್ಲಿ ಕೇಳ್ರಿಯಪ್ಪಾ, ಮದ್ರಾಸಿ ರಾಮನ ಗುಡಿ. ಇಲ್ಲಾದರ ಹೀಂಗ ಮಾಡಿರಿ, ಶೆಟ್ಟರ ವಠಾರ ಎಲ್ಲ್ಯದ ಕೇಳಿರಿ....''

''ಶೆಟ್ಟರ ವಠಾರ?''

''ಪಿಚಕ್'' ಹೌದು ಎಂಬಂತೆ ಕೊರಳುಕೊಂಕಿಸಿ ನಿಂಗಣ್ಣಾ ಉತ್ತರಿಸಿದ.

''ಶೆಟ್ಟರ ವಠಾರದಾಗ ಈ ಗುಡಿ ಅದs ನs ?''

''ಛೀ ನಿಮ್ ಮಂಜ್ಯಾಳ ಹೋಗಾ; ಶೆಟ್ಟರ ವಠಾರ ಮುಂದ ಉಳೀತೈತಿ ಶೆಟ್ಟರ ವಠಾರ ಅಂತ ಅಂದ್ರ ಮಂದಿಗೆ ಗೊತ್ತೈತಿ ಅದಕ್ಕ ಹೇಳಿದ್ನಿ; ಯಾನ?''

''ಅಪ್ಪಾ, ಪೇಪೇsss!''

ಆ ಎಲೆಅಡಿಕೆಯ ಅಂಗಡಿಯಲ್ಲಿಯ ನೂರಾರು ಶೀಸೆಗಳಲ್ಲಿ ಈ ನಮ್ಮ ಶಂಕರ್‍ಯಾನಿಗೆ ಆ ಪೆಪ್ಪರಮಿಂಟಿನ ಶೀಸೆಯೊಂದೇ ಹ್ಯಾಂಗ ಸರಿಯಾಗಿ ಕಣ್ಣಿಗೆ ಬಿತ್ತೋ ದೇವರಿಗೆ ಗೊತ್ತು!

''ನಡೀರಿ ಶೆಟ್ಟರ ವಠಾರ ನೋಡೋಣಂತ''

ಕೊನೆಗೊಮ್ಮೆ ಆ ಮದ್ರಾಸಿ ರಾಮನ ದರ್ಶನವಾಯ್ತು! ಆ ಗುಡಿಯ ಬಲಗಡೆಯ ಓಣಿ ಸಿಕ್ಕಿತು. ಎಲ್ಲಕ್ಕಿಂತ ಮಿಗಿಲಾಗಿ ಆ ಅರಳೀಕಟ್ಟಿ ಸಹ ಕಾಣಿಸಿತು. ಎರಡು ಎರಡೂವರೆ ಗಂಟೆಗಳ ಕಾಲು ಕಸರತ್ತು ಮಾಡಿ ಮುಗಿಸಿ ನಂತರ ನಮ್ಮಾಕಿಯ ಆ ಪಾರ್ಲೆಯ ದೊಡ್ಡಮ್ಮಳ ಮನೆಯ ಮುಚ್ಚಿದ ಬಾಗಿಲು ಮತ್ತು ಅದಕ್ಕೆ ದೊಡ್ಡ ಬೀಗ ನೇತಾಡುತ್ತಿದ್ದುದು ಕಣ್ಣಿಗೆ ಕಂಡಿತು. ಪಕ್ಕದ ಮನೆಯಿಂದ ಒಬ್ಬ ಮುದುಕವ್ವ ಹೊರಬಂದಳು.

''ಗೋಡಬೋಲೆಯವರ ಕಡೆಗೆ ಬಂದೀರೇನು?''

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

''ಹೌದ್ರೀ''

''ಅವರೆಲ್ಲರೂ ಆಗಲೇ ಹೊರಗ ಹೋಗ್ಯಾರ. ಬರ್ರೆಲ್ಲಾ, ಒಳಗ''

ಆ ಮಹಾತಾಯಿ ನಮ್ಮನ್ನು ತನ್ನ ಮನೆಯೊಳಗೆ ಕರೆದುಕೊಂಡು ಒಯ್ದಳು. ಈಗ ಶಂಕರ್ಯಾನಿಗೆ ನೀರಡಿಕೆ ಆದುದು ನನಗೂ ಹಿತಕರವೆನಿಸಿತು. ಆ ಮುದುಕಮ್ಮ ಎಲ್ಲರಿಗೂ ನೀರು ಕುಡಿಸಿದಳು. ಮಕ್ಕಳಿಗೆ ತಿಂಡಿ ಕೊಟ್ಟಳು. ಅಷ್ಟರಲ್ಲಿಯೇ ನಮ್ಮವಳು ಅಡುಗೆಮನೆಯೊಳಗೆ ಪ್ರವೇಶಿಸಿ, ನಿಂತು ಅಡುಗೆಮಾಡುವ ವಿಧಾನ ಪರಿಶೀಲಿಸಿದಳು. ಆ ಮುದುಕಿಯ ಮಗ ಮತ್ತು ಸೊಸೆ ಸಿನೇಮಾಕ್ಕ ಹೋಗಿದ್ರಂತ. ಇದೇ ಅವಕಾಶದ ಪ್ರಯೋಜನ ಪಡೆದು ಆ ಮುದುಕಿ ಇಂದಿನ ಸೊಸೆಯಂದಿರು ಎಂಬ ವಿಷಯದ ಮೇಲೆ ವ್ಯಾಖ್ಯಾನ ಬಿಗಿದಳು; ಕೇಳಲು ಕೇಳುಗರು ದೊರಕಿದ್ದರಲ್ಲ!

''ಅಂಥಾಂಗ ಗಿರಗಾಂವದಾಗ ತಂಗಿಯ ಮಗಳು ಇದ್ದಾಳಂತ. ಅವಳನ್ನು ನೋಡಲಿಕ್ಕೆ ಹೋಗ್ಯಾರಂತ ಎಲ್ಲಾರು ಗೋಡಬೋಲೆಯವರ ಮನೆಯವರು...'' ಎಂಬ ವಾಕ್ಯ ಆ ಮುದುಕಿಯ ಬಾಯಿಂದ ಬಂದೊಡನೆ ನಮ್ಮಾಕಿಯ ಕಿವಿ ನಿಮಿರಿತು. ಆ ತಂಗಿಯ ಮಗಳು ಅಂದರೆ ತಾನೇ ಎಂಬುದನ್ನು ಮರೆಮಾಚಿ ನಮ್ಮಾಕೆ ಮುದುಕಿಯ ಮಾತು ಆಲಿಸುತ್ತಿದ್ದಳು.

''.... ಹ್ಞೂಂ; ಆ ದೊಡ್ಡಮ್ಮ ಯಾವತ್ತೂ ಆ ಗಿರಗಾಂವದ ತಂಗಿಯ ಮಗಳ ವಿಷಯ ಹೇಳ್ತಾನs ಇರ್ತಾಳ. ಸಂಸಾರ ಸಾಗಿಸಲಿಕ್ಕೆ ಬಹಳ ಜಾಣೆ ಇದ್ದಾಳಂತ ಆ ಹುಡುಗಿ. ಆದರೆ ಆಕೆ ಗಂಡ ಮಾತ್ರ ಶುದ್ಧ ಬೀದಿ ಬಸವಣ್ಣ ಅಂತ. ಈಕಡೆ ಕಡ್ಡಿ ಆ ಕಡೆ ಎತ್ತಿ ಇಡೂದಿಲ್ಲಂತ.....'' ಮುಂದಿನ ಮಾತುಗಳನ್ನು ಕೇಳುವ ಗೋಜಿಗೆ ನಾನು ಹೋಗಲಿಲ್ಲ.

(ಆಸಾಮಿ..ಆಸಾಮಿ.. ಗ್ರಂಥದಿಂದ-)
ಅನಂತ ಕಲ್ಲೋಳ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ನೆನಹುಗಳು

ಕೆಲವು ಸಾಹಿತ್ಯಿಕ, ಕೆಲವು ಪ್ರಾಮಾಣಿಕ

ಸುಪ್ರಸಿದ್ಧ ಲೇಖಕರೂ, ಕವಿಗಳೂ, ಮುಖಂಡರೂ ಆಗಿದ್ದ ನನ್ನ ಪ್ರಿಯ ಮಿತ್ರ 'ಸಖಾರಾಮ ಸೂನು' ಇವರು ಕೆಲವೇ ವರ್ಷಗಳ ಹಿಂದೆ ದಿವಂಗತರಾದರು. ಆ ಘಟನೆಯಿಂದ ಉದ್ಭೂತವಾದ ಎಲ್ಲ ಅನಿವಾರ್ಯ ಉಪದ್ವ್ಯಾಪಗಳಿಂದ ಈಗೇನೋ ಬಿಡುಗಡೆಯಾದಂತಾಗಿ ಸ್ವಲ್ಪ ಹಾಯಾಗಿರುವಾ ಎನ್ನುತ್ತಿರುವಷ್ಟರಲ್ಲಿ ನಮ್ಮೂರಿನ ಇನ್ನೂ ಒಬ್ಬ ಅಂತಹನೇ ಸಜ್ಜನ ಕಳೆದುಹೋದ. ನಾನು ಮೊದಲಿಗೇ ಮಿತ್ರರಿಗೆ ಹೇಳಿಬಿಟ್ಟಿದ್ದೆ: ''ಹೆಗಲು ಕೊಡಲೇನೋ ಬರುವೆ- ಆದರೆ ಸ್ಮಾರಕ -ಸಮಿತಿಯ ಗೋಜು ಬೇಡ!'' - ಪ್ರತಿಷ್ಠಿತರೆಂಬುವರ ಮರಣದ ವಾರ್ತೆ ಇತ್ತೀಚೆಗೆ ಅವರಿಗಿಂತ ಹೆಚ್ಚಾಗಿ ನನ್ನನ್ನೇ ಎದೆಗೆಡಿಸುತ್ತಿದೆ. ಸ್ಮಶಾನ ಭೂಮಿಯಲ್ಲಿನ ಆ ''ಮರಣಾಂತಾನಿ ವೈರಾಣಿ'' ಎನ್ನುವ, ಸ್ವಂತದ ಹೃದಯದ ಎಳ್ಳಷ್ಟೂ ಇಲ್ಲದ ಉದಾತ್ತತೆಯನ್ನು ಇನ್ನಷ್ಟು ಹಿಗ್ಗಿಸಿ ತೋರಲೆಳಸುವ ಆ ಭಾಷಣಗಳು, ಆ ಕೃತಕ ಸಹಾನುಭೂತಿಯ ತುಂಬು ಹೃದಯದ ಪ್ರದರ್ಶನ, ಅಲ್ಲಿಂದ ತಿರುಗಿ ಮನೆಮುಟ್ಟುವ ದಾರಿಗುಂಟ ಮರುದಿನ ಸ್ವಾಭಾವಿಕವಾಗಿ ಆಗಲೇಬೇಕಾದ ಶೋಕಸೂಚಕ ಸಭೆಯ ತಯ್ಯಾರಿ, ಅದರಲ್ಲಿಯೂ ಅಂದಿನ ಅಧ್ಯಕ್ಷಸ್ಥಾನಕ್ಕೆ ಆಯ್ಕೆಯಾಗಲಿರುವ ಹೆಸರಿನ ಬಗ್ಗೆ ಕೆಲವರ ಹೊಟ್ಟೆ ಕಡಿತ, ಮರುದಿನ ಆ ಶೋಕ ಸಭೆಯಲ್ಲಿ ಮತ್ತೆ ಅಂತಹದೇ ಕೃತಕ ಗುಣಗಾನ. ಅವೇ ಸಾರ್ವಜನಿಕವಾಗಿ ಪ್ರಕಟವಾಗುವ ದು:ಖಾತಿರೇಕದ ಬಿಕ್ಕುಗಳು, ಮತ್ತೆ ಅದರಿಂದಲೇ ಮತ್ತೊಂದು ಸ್ಮಾರಕ ಯೋಜನೆಯ ಸಂಕಲ್ಪ. ಸ್ಮಾರಕಯೋಜನೆ ಎಂದ ಮೇಲೆ ಕಮೀಟಿ, ಆಯ್ಕೆ, ಇಬ್ಬಣ, ಹೊಡೆದಾಟ, ಕಚ್ಚಾಟ, ಪಾವತಿ ಪುಸ್ತಕಗಳು, ಆ ಪುಸ್ತಕಗಳನ್ನು ಕೈಯಲ್ಲಿ ಪ್ರದರ್ಶಿಸುತ್ತ ಮನೆಮನೆಗಳನ್ನು ನುಗ್ಗುವ ನಿರುದ್ಯೋಗಿಗಳಾದ ಸುಖವಸ್ತು -ಶ್ರೀಮಂತ ಕುಟುಂಬಗಳೊಳಗಿನ ಸ್ತ್ರೀ ವೃಂದ, ಮತ್ತು ಫೀ ತೆತ್ತು ಅವರ ಕಾಲೇಜಿಗೆ ಹೋಗುವ ಅಹಂಭಾವಿಗಳಾದ ಹುಡಿಗೆಯರು, ಒಂದು ಧರ್ಮಾರ್ಥ ನಾಟ್ಯ ಪ್ರಯೋಗ ಮತ್ತು ಆ ಪ್ರಯೋಗದಿಂದುಂಟಾಗುವ ಹಾನಿಯನ್ನು ಪರಿಪಡಿಸಲು ಮಾಡಬೇಕಾಗುವ ಇನ್ನೆಷ್ಟೋ ಪ್ರಯೋಗಗಳು, ಇವೆಲ್ಲ ಹಿಂಬಾಲಿಸಿದಂತೆಯೋ ! ''ಮೃತ್ಯುವಿನ ಹಂದರದ ಕೆಳಗೇ ಜೀವನದ ವ್ಯಾಪಾರ ನಡೆಯುತ್ತದೆ,'' ಎಂದೇನೋ ಅನ್ನುತ್ತಾರಲ್ಲ, ಅದು ಇದೇ ಎಂದು ತೋರುತ್ತದೆ.!

ನಿಜವಾಗಿಯೂ ಇಂಥ ಅನರ್ಥಗಳಿಗೆ ಕಾರಣವೆಂದರೆ: '' ಅಳಿದೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೀರ್ತಿರೂಪದಿಂದುಳಿ'' ಎಂಬ ಸ್ವಾಮೀರಾಮದಾಸರ ಗುರುಮಂತ್ರವೇ ಎಂಬುದರಲ್ಲಿ ಸಂದೇಹವಿಲ್ಲ! ಈಜಿಪ್ತಿನ ''ಮಮಿ'' ಗಳಂತೆ ಕೀರ್ತಿಯ ಮಸಾಲೆಗಳನ್ನು ತುಂಬಿ ದಿವಂಗತರಾದ ದೊಡ್ಡ ಮನುಷ್ಯರ ಹೆಸರುಗಳನ್ನು ಚಿರಂತನವಾಗಿಸಲೆಳಸುವ ಅವರ ಆಪ್ತೇಷ್ಟರ ಪರದಾಟವನ್ನು ನೋಡಿ ಯಾರಿಗೂ ಅವರ ಬಗ್ಗೆ ಕನಿಕರವಾಗದಿರದು. ಅದೆಷ್ಟೇ ಪ್ರಸಿದ್ಧಿ ದೊರೆತರೂ ತಾನೊಬ್ಬ ''ಉಪೇಕ್ಷಿತ ಕಲಾವಿದ'' ಎನ್ನುವ ಭಾವನೆ ಇಂಥವರ ಬೆನ್ನು ಬಿಡುವದಿಲ್ಲ. ಅದೊಂದು ಮನೋವಿಕಾರವೇ ಎನ್ನಿರಿ. ಆದ್ದರಿಂದ ಅವರ ಲೇಖನಕಾವ್ಯಗಳೊಳಗೆಲ್ಲ ತಮಗೆ ತಕ್ಕ ಮನ್ನಣೆ ದೊರೆಯದೇ ಹೋಯಿತೆಂಬ ಅಳುಕು ಮುಳುಮುಳು ಪ್ರವಹಿಸುತ್ತಲೇ ಇರುತ್ತದೆ. ದೀರ್ಘಾಯುಷಿಗಳಾಗಿ ಅರವತ್ತರ ಹುಟ್ಟುಹಬ್ಬದ ಸೌಭಾಗ್ಯ ಸುರಿದುಕೊಂಡವರಿಗೂ, ಅದಷ್ಟೇ ಸಾಲದಾಗಿ ಸತ್ತ ಮೇಲೆಯೂ ''ಸ್ಮರಣಿಕಾಗ್ರಂಥ ಮತ್ತು ಸ್ಮತಿ ಚಿತ್ರಗಳ'' ಅಚ್ಚು ಹಾಕಿದ ಆದರಾಂಜಲಿಗಳನ್ನು ಪ್ರಸಿದ್ಧಪಡಿಸಿ, ಅವುಗಳ ಉಳಿದ ಪ್ರತಿಗಳನ್ನು ಗಂಟುಕಟ್ಟಿ ಕಾರ್ಯದರ್ಶಿಗಳ ಮನೆಯ ಬಿಸಿನೀರು ಕಾಯಿಸುವ ಬಂಬಿನ ಉರುವಲಕಟ್ಟಿಗೆಯ ತುಂಡುಗಳೊಡನೆ ಬಚ್ಚಲು ಮನೆಯ ಮಾಳಿಗೆ-ಗೂಡು ಕಾಣಿಸಿದ ಮೇಲೆಯೇ, ಇಂತಹ ಉತ್ಸಾಹೀ ಸಾಹಿತ್ಯ-ಪ್ರೇಮಿಗಳ ತಂಡ, ಇಂಥಹದೇ ಮಗದೊಂದು ದೊಡ್ಡ ಕಾರ್ಯದ ಕಾವೇರುವ ವರೆಗೂ ತಣ್ಣಗಾಗಿರುವುಂಟು. ಮತ್ತೊಂದು ಅಂತಹ ಕಾರ್ಯದ ಸಂಧಿ ದೊರೆಯುತ್ತಲೇ ಮತ್ತೊಮ್ಮೆ ಅಲಾಬಿಯ ಕುಣಿತ - ಅದೇ ಸಡಗರ - ಸಂಭ್ರಮ, ಮತ್ತು ಇನ್ನೊಂದು ಸ್ಮತಿಗ್ರಂಥದ ಬಣ್ಣದ ಕಾಗದಗಳ ಗೋಪುರ ಕಟ್ಟಿ ''ಯಾಯ್ ಮೋನ ಥೀನ್'' ಎಂದು ಹುಲಿ ಕುಣಿತಕ್ಕೆ ಆರಂಭ!!

ಇಷ್ಟೇ ಅಲ್ಲ, ದೊಡ್ಡಿಸ್ತಿಕೆಯ ಮೆಟ್ಟಲೇರುತ್ತಿರುವ ನನ್ನ ಮಿತ್ರನೊಬ್ಬ ಇನ್ನೂ ಜೀವಂತನಿರುವಾಗಲೆ ತನ್ನವೇ ''ಗತ-ಸ್ಮತಿ''ಗಳನ್ನು ತಾನೇ ಬರೆದು, ಕೆಳಗೆ ಬೇರೆಯವರ ಹೆಸರುಗಳ ಚೀಟಿಗಳನ್ನು ಅಂಟಿಸಿ, ಮುಂಬರುವ ಸ್ಮಾರಕ - ಸಮಿತಿಯ ಕೆಲಸದ ಭಾರವನ್ನು ಮೊದಲಿಗೇ ಹಗುರಾಗಿಸುವ ಹೊಂಚು ಹಾಕಿದ್ದಾನೆ. ಮಹಾರಾಷ್ಟ್ರದ ಒಂದಾನೊಂದು ಸುಪ್ರಸಿದ್ಧ ಶಹರದ ಸುಪ್ರಸಿದ್ಧ ಪೇಟೆಯೊಳಗಿನ ಕೆಲವು ಸುಪ್ರಸಿದ್ಧರು ಸಹಕಾರಿ ಮಂಡಳಿಗಳ ಸೂತ್ರವನ್ನನುಸರಿಸಿ, ಪರಸ್ಪರ ಸ್ಮಾರಕ ಗ್ರಂಥಗಳನ್ನೂ ಅವುಗಳಿಗಾಗಿ ಅನಿವಾರ್ಯವಾದ ನೆನಪಿನ ಚೌಕಟ್ಟಿನ ಕತೆಗಳನ್ನು ಬರೆದೇ ಇಡುವ ಮಹೋದ್ಯಮವನ್ನು ಆರಂಭಿಸಿದ್ದಾರೆ ಎಂದುಸುದ್ದಿ ಬೇರೆ ಕೇಳಿದ್ದೇನೆ; ನಂಬಿರಿ, ಬಿಡಿರಿ.

ನಾನು ಸಿಕ್ಕಿಹಾಕಿಕೊಂಡ ಸ್ಮಾರಕಸಮಿತಿಯಾದರೋ ನನ್ನ ಮಿತ್ರವರ್ಯರೂ ಕವಿ ಮತ್ತು ಲೇಖಕವರ್ಯರು ಆಗಿದ್ದ ಸ್ವ. 'ಸಖಾರಾಮ ಸೂನು' ಗಳದು. ಅವರು ಮೂಲದಲ್ಲಿ ಪಾರಲಯಿ ಗ್ರಾಮದವರು. ಅವರ ಬಗೆಗಿನ ನೆನಪುಗಳನ್ನು ಪ್ರಕಾಶಕ್ಕೆ ತರುವ ನಿರ್ಣಯವಾದ ಮೇಲೆ ಕೆಲವು 'ಸಾಹಿತ್ಯಿಕ' ಮತ್ತೆ ಕೆಲವು 'ಪ್ರಾಮಾಣಿಕ' ನೆನಪುಗಳ ಲೇಖನಗಳು ಬಂದವು. 'ಪ್ರಾಮಾಣಿಕ'ವಾದವುಗಳನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮುದ್ರಿಸುವಂತಿರಲಿಲ್ಲವಾದ್ದರಿಂದ ಸ್ಮಾರಕಗ್ರಂಥದಲ್ಲಿಯೇ ಸೋ ಸಾಹಿತ್ಯಿಕವಾದವುಗಳನ್ನೇ ಸೇರಿಸಲಾಯಿತು; ಪ್ರಸ್ತುತ ಮಾತ್ರ ಎರಡೂ ತರಹದ ಕೆಲವು ಸ್ಮೃತಿಗಳನ್ನಾರಿಸಿ ಹೇಳಬಯಸುತ್ತೇನೆ.

ಮುನ್ನುಡಿಯ ಒಕ್ಕಣಿಕೆಯ ನಮೂನೆ

.....'ಪಾರಲಯೀ - ಶಾರದಾ ಚರಣಾರವಿಂದ ಸಾಹಿತ್ಯ ಮಂಡಲಿ'' ಯು ಈ ನಮ್ಮ ಮಹಾರಾಷ್ಟ್ರಶಾರದೆಯ ಕತ್ತನ್ನಲಂಕರಿಸಲು ಕೊಡಮಾಡಿದ ಬಹು ಅಮೂಲ್ಯವಾದ ರತ್ನಗಳಲ್ಲಿ, ದಿವಂಗತ ''ಸಖಾರಾಮ ಸೂನು'' (ಗಜಾನನ ಸಖಾರಾಮ ಪಾರಲಯಿಕರ) ಇವರುಗಳು ಅಪರೂಪದ ರತ್ನವೆಂದೇ ಹೇಳಬೇಕು....

ಕೇವಲ ಪ್ರಸಿದ್ಧಿ ವಿಮ್ಮುಖತೆಯಿಂದಾಗಿ 'ಸಖಾರಾಮ ಸೂನು' ಇವರು ''ಫುಲ್ ಮೇನಿ ಏ ಫ್ಲಾವರ ಆಫ್ ಪ್ಯುಅರೆಸ್ಟ ರೇ ಸಿರೀನ ....'' ಎನ್ನಿಸಿಕೊಂಡರು.

.... ಮಹನೀಯರು ಆಜನ್ಮ ಅವಿವಾಹಿತರಾಗಿಯೇ ಉಳಿದು ದೇಶಸೇವೆಗಾಗಿಯೇ ಸವೆಯುವದಾಗಿ ಪಣ ತೊಟ್ಟು ಹೊರಟವರು. ಕಸ್ಟಮ್ಸ ಖಾತೆಯಲ್ಲಿ ನವಕರಿ ಹಿಡಿದದ್ದರಿಂದ ದೇಶದ ಸೇವೆ ಮಾಡುವ ಸಂಧಿ ಅವರಿಗೆ ದೂರವಾಯಿತು; ಹಾಗೆಯೇ ''ಮಾಡುವದಾದರೆ ಅವ್ಯಭಿಚಾರೀ ಭಾವದಿಂದಲೇ ಮಾಡಿಯೇನು'' ಎಂಬುದೇ ಅವರ ಮೂಲ ಮಂತ್ರವಾದ್ದರಿಂದ ದೇಶಸೇವೆಯ ವ್ರತದೊಡನೆಯೇ ಬ್ರಹ್ಮಚರ್ಯದ ವ್ರತವನ್ನೂ ತ್ಯಜಿಸಿ ವಿವಾಹಬದ್ಧರಾದರು. ಈಗ ತಮ್ಮ ಹಿಂದೆ ಅವರು ಆರು ಜನ ಹೆಣ್ಣುಮಕ್ಕಳು, ಐದು ಜನ ಗಂಡು ಮಕ್ಕಳು, ಪತ್ನಿ ಮತ್ತೆ ಇನ್ನಿತರ ಅಸಂಖ್ಯ ಮಿತ್ರಪರಿವಾರವನ್ನು ಬಿಟ್ಟುಹೋಗಿದ್ದಾರೆ.....

.... ಅವರ ಅಮೌಲ್ಯವಾದ ಸಾಹಿತ್ಯ-ಸೇವೆಯ ಋಣವನ್ನು ಅಂಶಮಾತ್ರವಾಗಿಯಾದರೂ ಪರಿಹರಿಸಬೇಕು ಎಂಬ ಇಚ್ಛೆಯಿಂದಲೇ ಈ ಸ್ಮೃತಿ-ಗ್ರಂಥವನ್ನು ಪ್ರಕಾಶಿತಗೊಳಿಸುತ್ತಲಿದ್ದೇವೆ.

ಸಾಹಿತ್ಯಿಕ ನೆನಪುಗಳು;
ಕವಿ ಮಿತ್ರರ ಸ್ಮೃತಿಶಲಾಕೆ

ನನ್ನ ಪರಮ ಪ್ರಿಯ ಮಿತ್ರರಾದ ಕವಿವರ್ಯ ''ಸಖಾರಾಮ ಸೂನು''ಗಳು ದಿವಂಗತರಾದ ಕಟುವಾರ್ತೆ ನನ್ನ ಕಿವಿಗೆ ಬಿದ್ದ ಕ್ಷಣ ನನ್ನ ಭಾವನಿಕ ಜೀವನವನ್ನೇ ಕದಡಿಬಿಡುವ ದು:ಸಹವಾದ ವಿಕ್ಷಗಳಿಗೆಯಾಯಿತು. ನನ್ನ ಏಕಮೇವ ಮಿತ್ರರಾದ ಅವರ ನಿಧನವಾರ್ತೆಯು ಆಘಾತವು ನನ್ನ ಏಕಮೇವ ಮಾತೆಯ ನಿಧನದ ಸಮಯದಲ್ಲಿ ನನ್ನ ಮೇಲೆ ಎರಗಿದ ಕೊಡಲಿಯ ಪ್ರಹಾರದಂತೆನಿಸಿತು. ''ಸಖಾರಾಮ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri
ಸೂನು'' ಗಳ ಅನೇಕ ನೆನಪುಗಳು ನನ್ನ ಮನಃಪಟಲದ ಮೇಲೆ ತಾಂಡವ ನೃತ್ಯವನ್ನೇ ಆರಂಭಿಸಿದವು. ನಾನು ಮತ್ತು ''ಸಖಾರಾಮ ಸೂನು'' ಈರ್ವರೂ ಒಂದೇ ತಿಥಿಯಲ್ಲಿಯೇ ನಮ್ಮ ಮೊದಲ ಕವನವನ್ನು ರಚಿಸಿದೆವು. ನನ್ನ ಕವಿತೆ ಒಬ್ಬ ''ಗತ ಭರ್ತೃಕೆ''ಯನ್ನು ಉದ್ದೇಶಿಸಿ ಬರೆದದ್ದು. '' ಹೇ ಮಾದೇವಾ, ಅದೆಂತು ನಿಷ್ಠುರನಾದೆಯೋ ನೀನು'' ಎಂಬ ಮೊದಲ ಚರಣವನ್ನಾಲಿಸಿಯೇ ಅವಳಿಗೆ ತಡೆಯದ ದುಃಖ ಉಮ್ಮಳಿಸಿ ಬಂದಿತ್ತು. ಆನಂತರ ನಾನು ನನ್ನ ಮೊದಲ ಕಾವ್ಯ ಸಂಗ್ರಹ ''ಕಣ್ಣೀರಿನ ಹೌದು'' ಇದನ್ನು ಒಂದು ಭೆಟ್ಟಿಯಲ್ಲಿ ಅವರ ಮುಂದೆ ಸಹಜವಾಗಿ ಓದಿ ತೋರಿಸಿದ್ದೆ. ಮುಂದೆ ಬೇನೆಯಿಂದ ಮಲಗಿಕೊಂಡಾಗ ಅದೆಷ್ಟೋ ಬಾರಿ ಮೋಸಂಬಿಹಣ್ಣುಗಳ ಕಾಣಿಕೆಯೊಡನೆ ಅವರ ಮನೆಗೆ ಹೋಗಿದ್ದೆ. ಒಮ್ಮೆ ನಮ್ಮ ಕವಿಮಿತ್ರರ ಹರಟೆಯ ಪ್ರಸಂಗವೊಂದರಲ್ಲಿ ಮಹಾರಾಷ್ಟ್ರದ ''ಶೆಲ್ಲಿ'' ಯಾರು ಎಂಬ ಪ್ರಶ್ನೆ ಸಹಜವಾಗಿ ಉಪಸ್ಥಿತವಾದಾಗ ಸಖಾರಾಮ ಸೂನುಗಳು ಒಂದಿಷ್ಟೂ ತಡಮಾಡದೆ ನನ್ನ ಹೆಸರನ್ನೇ ನಿರ್ದೇಶಿಸಿದರು. ನಾನೂ ಕೂಡ ಅವರನ್ನು ಅದೇ ಅಕ್ಕರೆಯಿಂದ ಮಹಾರಾಷ್ಟ್ರದ ''ಕೀಟ್ಸ'' ಎಂದೇ ಸಂಬೋಧಿಸುತ್ತಿದ್ದೆ. ಅವರ ನಿಧನದಿಂದಾಗಿ ಮಹಾರಾಷ್ಟ್ರ ಕಾವ್ಯದೇವತೆಯ ಕೊರಳೊಳಗಿನ ಪುತ್ಥಳಿಹಾರವೇ ಇಲ್ಲದಂತಾಗಿದೆ, ಅಲ್ಲವೇ?

ಕವಿ ಅಶ್ವಮೇಧ ಉಪಾಖ್ಯ ಪ್ರಾ. ಚಿಂ. ತು. ಗೋರಾಯೀಕರ

ನಾಡೀ ಪರೀಕ್ಷೆ!

''ಸಖಾರಾಮ ಸೂನು'' ಗಳ ದೀರ್ಘಪರಿಚಯವಾದ ನಂತರ ನಾವೆಲ್ಲ ಆತ್ಮೀಯತೆಯಿಂದ ಅವರಿಗೆ 'ಬಾಪ್ಪಾ' ಎಂದು ಕರೆಯುತ್ತಿದ್ದೆವು. ಇ.ಸ. ಮೂವತ್ತರಲ್ಲಿ ನಡೆದ ಭುದರಗಡ ಸಾಹಿತ್ಯ ಸಮ್ಮೇಲನದಲ್ಲಿ ಮೊದಲ ಬಾರಿ ನನ್ನ ಮತ್ತು 'ಬಾಪ್ಪಾ' ಅವರ ಪರಿಚಯವಾಯಿತು. ಅಂದಿನಿಂದಲೂ ನಮ್ಮಲ್ಲಿ ಪರಸ್ಪರ ಅಕೃತ್ರಿಮವಾದ ಸ್ನೇಹಭಾವ ನೆಲೆಸಿತು. ಆ ಸಮಯದಲ್ಲಿ ನನ್ನ ''ಹರಿದು ಹೋದ ನಾಡಿ'' ಈ ಕಾದಂಬರಿಯು ಬೃಹನ್ಮಹಾರಾಷ್ಟ್ರದಲ್ಲಿ ಒಂದು ಪ್ರಚಂಡ ಕ್ರಾಂತಿಯನ್ನೇ ಉಂಟು ಮಾಡಿದ್ದಿತು. ನನ್ನ ಮತ್ತು ಅವರ ಪರಿಚಯ ಮಾಡಿಕೊಡುವಾಗ ನಾಗಪೂರಿನ ಸುಪ್ರಸಿದ್ಧ ಕಾದಂಬರಿಕಾರರಾದ ಜನಾರ್ಧನಪಂತ .ಬೂಟ ಇವರು ಹೇಳಿದ್ದರು, ''ಇವರು ಹರಿದು ಹೋದ ನಾಡಿ''ಯ ಲೇಖಕರಾದ ನಾನಾಸಾಹೇಬ ಸಾಥಲೆ!''

''ಇವರ 'ಹರಿದು ಹೋದ ನಾಡಿ'ಯು ಕೇವಲ ಮಹಾರಾಷ್ಟ್ರವಷ್ಟೇ ಅಲ್ಲ, ಇಡೀ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri
ಮಾನವ್ಯದ ನಾಡಿಯನ್ನೇ ಗುರುತಿಸಿದೆ!'' ಸಖಾರಾಮ ಸೂನ್ಸುಗಳು ಕೂಡಲೆ ಉದ್ಗರಿಸಿದರು.

ಅ ಹ ಹ, ಅದೆಂತಹ ಸಮಯಸೂಚಕತೆ!!!

ನಾ.ವ. ಪಾಥಲೆ
''ಹರಿದು ಹೋದ ನಾಡಿ'' ಮುಂತಾದ
ಕಾದಂಬರಿಗಳ ಕರ್ತೃಗಳು

ಇತಿಹಾಸಕಾರರ ನೆನಪು

ಕೈ ಸಖಾರಾಮ ಸೂನುಗಳ ಬಗೆಗಿನ ನೆನಪುಗಳನ್ನು ಕಳುಹಿಸುವ ಕುರಿತು ಸಮಿತಿಯವರ 'ವಿನಂತಿ ಮುಟ್ಟಿತು. ಇತ್ತೀಚೆಗೆ ನಾನು ದೂರದಲ್ಲಿ ಹಲೇವಾಡಿಯಂತಹ ಊರೊಂದರಲ್ಲಿ ಇರುತ್ತೇನೆ. (ಇಲ್ಲಿಂದ ಇಪ್ಪತ್ತೆರಡು ಮೈಲುಗಳ ಅಂತರದಲ್ಲಿ ಸಫದರಜಂಗ ಅವರ ಮಕಬಾರಾ ಇದೆ.) ಪ್ರಕೃತಿಯೂ ಮೊದಲಿನಂತೆ ಉಳಿದಿಲ್ಲ. ರಕ್ತದ ಒತ್ತಡವಂತೂ ಇದ್ದೇ ಇದೆ. ಅಲ್ಲದೆ ಕಣ್ಣಿಗೂ ಹೂವು ಬಿದ್ದಂತಾಗಿದೆ.

ಸದ್ಯಕ್ಕೆ 'ಪೂರ್ವ - ಪೇಶ್ವೆಕಾಲೀನ ಪಾಗೋಟೆಗಳು' (ಕಟ್ಟಿದ ರುಮಾಲು) ಎಂಬ ವಿಷಯ ಕುರಿತು ನನ್ನ ಸಂಶೋಧನೆ ನಡೆದಿದೆ. ಆದ್ದರಿಂದ ಇತರ ಬರವಣಿಗೆಗೆ ವೇಳೆಯೇ ದೊರೆಯುತ್ತಿಲ್ಲ. ಇತ್ತೀಚೆಗೆ ದಿಲ್ಲಿಯಲ್ಲಿ ನೆರೆದಿದ್ದ ಎಲ್ಲ ಇತಿಹಾಸ ಸಂಶೋಧಕರ ಪರಿಷತ್ತಿನಲ್ಲಿ ನನ್ನ ಒಂದು ಇಂಗ್ಲೀಷ ಗ್ರಂಥದ (''ದಿ ಫೋರ್ಟ ಕೇಮ್ ಬಟ್‌ದ ಲಾಯನ್ ವೆಂಟ'') ಪ್ರಕಾಶನವಾಗುವದಿತ್ತು. ಅದಕ್ಕಾಗಿ ನಾನು ಅಲ್ಲಿಗೆ ಹೋಗಿದ್ದೆ. ದಿಲ್ಲಿಯಿಂದ ಮರಳುವಾಗ ದಾರಿಯಲ್ಲಿ ಝಾಂಶಿಯಲ್ಲಿ ಸಖಾರಾಮ ಸೂನುಗಳ ನಿಧನ ವಾರ್ತೆ ತಿಳಿಯಿತು. ನಮ್ಮ ೬೧ಯ ಹುಟ್ಟುಹಬ್ಬದ ನಿಮಿತ್ತವಾಗಿ ಅವರು ರಚಿಸಿದ ಕವನವನ್ನು ಯಾವಾಗಲೂ ನಮ್ಮ ಟೇಬಲ್‌ನ ಎದುರಿಗೆ ಫ್ರೇಮ ಮಾಡಿಸಿ ತೂಗುಹಾಕಲಾಗಿದೆ. ನನ್ನ ಜ್ಯೇಷ್ಠ ಕನ್ಯೆ ಸುಮಿತ್ರೆಗೆ ಆ ಕಾವ್ಯ ಬಹಳಷ್ಟು ಪ್ರಿಯವಾದುದು. ಅವಳು ಅದನ್ನು ಕಂಠಸ್ಥವಾಗಿಸಿದ್ದಾಳೆ. ಮತ್ತು ಮನೆಗೆ ಯಾರಾದರೂ ಅತಿಥಿಗಳು ಬಂದಾಗ ತನ್ನ ಮಧುರ ಕಂಠದಿಂದ ಹಾಡಿ ತೋರಿಸುತ್ತಾಳೆ. ಸದ್ಯಕ್ಕೆ ಅವಳು ಏರಂಡವಣಾ ವಿದ್ಯಾಲಯದಲ್ಲಿ G.A. ಕ್ಲಾಸಿನಲ್ಲಿ ಕಲಿಯುತ್ತಿದ್ದಾಳೆ. ಪರಮೇಶ್ವರನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥನೆ!

ಬಾಜೀ ಖಂಡೋ ಢಭೋಯಿಕರ
ಇತಿಹಾಸ ಸಂಶೋಧಕರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೊಡ್ಡ ಕವಿ ಮತ್ತು ದೊಡ್ಡ ಮನುಷ್ಯ

ಸಖಾರಾಮ ಸೂನುಗಳ ಚಿಕ್ಕದೊಂದು ನೆನಪುಂಟು. ಚಿಕ್ಕದಾದರೂ ಬೋಧಪ್ರದವಾದುದು. ಒಮ್ಮೆ ಅವರು ಮುಂಬಯಿಯಿಂದ ಪುಣೆಗೆ ಹೊರಟಿದ್ದರು. ಟ್ರೇನಿನಲ್ಲಿ ತುಂಬ ಜನಸಂದಣಿ. ಇಷ್ಟರಲ್ಲಿ ಸುಂದರ ತರುಣಿಯೊಬ್ಬಳು ಡಬ್ಬಿಯೊಳಗೆ ಪ್ರವೇಶಿಸಿದಳು. ಅಂಥ ಗದ್ದಲದಲ್ಲಿ ಅವರು ಎದ್ದು ನಿಂತು ಅವಳಿಗೆ ಜಾಗ ಮಾಡಿಕೊಟ್ಟರು. ಮತ್ತೆ ಉಳಿದೆಲ್ಲ ಪ್ರವಾಸ ನಿಂತುಕೊಂಡೇ ಮಾಡಿದರು. ಮುಂದೆ ತನಗೆ ಹೀಗೆ ಕಿಕ್ಕಿರಿದ ಟ್ರೇನಿನಲ್ಲಿ ಜಾಗ ಮಾಡಿಕೊಟ್ಟವರು ಅವರಿವರಾಗದೆ ಮಹಾರಾಷ್ಟ್ರದ ಕವಿಪುಂಗವರಾದ ಸಖಾರಾಮ ಸೂನುಗಳೇ ಆಗಿದ್ದರು, ಎಂದು ತಿಳಿದ ಕ್ಷಣ ಆ ತರುಣಿಗೆ ನಾಚಿಕೆಯಿಂದ ತಲೆ ಕೆಳಗೆ ಮಾಡುವಂತಾಯಿತು. ಪ್ರಿಯ ವಾಚಕ ಭಗಿನಿಯರೇ, ಆ ತರುಣಿ ಅಂದರೆ ನಾನೇ!

ಕು. ಸರಲಾಬಾಲಾ ಘೋಡನದೀಕರ
ಬಿ.ಎ.ಎಸ್.ಟಿ.ಸಿ.
ರಿಟಾಯರ್ಡ ಹೆ. ಮಿಸ್ಟ್ರೆಸ್ ಸರಕಾರೀ ತಜೇಲಾ
ಗರ್ಲ್ಸ ಹಾಯಸ್ಕೂಲ

ಸಮಾಜ ಸುಧಾರಕ ಸಖಾರಾಮಸೂನು

ಮಹಾರಾಷ್ಟ್ರದ ಸಮಾಜಸುಧಾರಕರಲ್ಲಿ ಸಖಾರಾಮ ಸೂನುಗಳ ಹೆಸರು ಚಿರಂತನವಾದುದು. ಪಾರಲಯಿ ಗ್ರಾಮದ ಹರಿಜನ ವಸತಿಯಲ್ಲಿ ಅವರು ಯಾವಾಗಲೂ ವ್ಯಾಖ್ಯಾನಗಳನ್ನು ಕೊಡುತ್ತಿದ್ದರು. ಅಲ್ಲಿ ಹರಿಜನ - ಸಹಾಯಕ ನಿಧಿ ಯೊಂದನ್ನು ನಿರ್ಮಿಸಿ ಅವರು ಸಾಕಷ್ಟು ಹರಿಜನ ಸೇವೆ ಮಾಡಿದ್ದರು. ತಮ್ಮ ಮನೆಗೆ ಹರಿಜನರು ಯಾವಾಗಲೂ ಬರುತ್ತಿರಬೇಕು ಎಂಬ ಉದ್ದೇಶದಿಂದ ತಮ್ಮ ಸ್ವಂತದ ಮನೆಗೆ ಮೇಲುಪ್ಪರಿಗೆಯೊಂದನ್ನು ಕಟ್ಟಿಸಿಕೊಂಡು ಅದಕ್ಕೆ 'ಹರಿಜನ ಮಂದಿರ' ಎಂದು ನಾಮಾಭಿಧಾನ ಮಾಡಿದರು. ಅವರ ಮೃತ್ಯುವಿನಿಂದಾಗಿ ಮಹಾರಾಷ್ಟ್ರವು ಒಬ್ಬ ಕಳಕಳಿಯ ಕಾರ್ಯಕರ್ತನನ್ನು ಕಳೆದುಕೊಂಡಂತಾಗಿದೆ.

ಶಾ. ಪಂಪುರೇತ ಶ್ಯಾಮಳದಾಸ
ಅಧ್ಯಕ್ಷ ಪಾರಲಯಿ ಕಾಂಗ್ರೆಸ - ಕಮೀಟಿ

ತೊಟ್ಟಿಲಲ್ಲಿಯೇ ಮಗುವಿನ ಕಾಲಗುಣ

ನಾನು ಮತ್ತು 'ಸಖಾರಾಮ ಸೂನು' ಉಪಾಖ್ಯಗಜಾ ಬಾಲಮಿತ್ರರು. ರಜಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಿನದ ಹೊತ್ತಿನಲ್ಲಿ ಯಾವಾಗಲೂ ಅಭ್ಯಾಸ ಮಾಡುತ್ತಿರಲಿಲ್ಲ. ಒಂದು ದಿನ ಶಿಕ್ಷಕಕರು ಆ ಬಗ್ಗೆ ಅವನನ್ನು ವಿಚಾರಿಸಿದರು.

ಆಗ ಎಳ್ಳಷ್ಟೂ ಅಳುಕದೆ ಆ ತೇಜಸ್ವಿಯಾದ ಬಾಲಕನು ತಟ್ಟನೆ ಉತ್ತರಿಸಿದನು. ''ನನಗೆ ದೊಡ್ಡವನೆಂದು ಹೆಸರು ಪಡೆಯುವದಿದೆ! ಅದ್ದರಿಂದ ರಸ್ತೆಯ ಮೇಲಿನ ಮುನಸಿಪಾಲಟಿಯ ದೀಪದ ಕಂಬದ ವಿದ್ಯುದ್ದೀಪ ಇರದಿದ್ದರೆ ನಾನಂತೂ ಅಭ್ಯಾಸ ಮಾಡುವವನಲ್ಲ.''

ನುಡಿದಂತೆಯೇ ನಡೆವ ಅವರ ಮನಸ್ಸಿನ ದಾರ್ಢ್ಯವೆಂತಹದೆಂದರೆ ಆ ವರ್ಷ ಅವರ ಮನೆ ಎದುರಿನ ಕಂಬದ ಮೇಲೆ ದೀಪವು ಕೆಟ್ಟು ಹೋಗಿ ಬೆಳಗದೆ ಹೋದದ್ದರಿಂದ, ಆ ವರ್ಷ ಗಜಾನನನು ಅಭ್ಯಾಸದ ಗೊಡವೆಗೆ ಹೋಗಲೇ ಇಲ್ಲಾ.

ಸದಾಶಿವ ತಡಫಳೆ

ಸೆಕ್ರೆಟರಿ, ಪಾರಲಯಿ ಸಾಹಿತ್ಯ ಸಂಘ

ಪ್ರಾಮಾಣಿಕ ನೆನಹುಗಳು
(ಈ ವರೆಗೆ ಅಪ್ರಾಮಾಣಿಕ)

ಯಾರಿವನು ಸಖಾರಾಮಸೂನು? ನನಗಂತೂ ನೆನಪಾಗಲೊಲ್ಲದು. ನಂತರ ಯಾರೋ ಒಬ್ಬರು ಹೇಳಿದರು. ಗೋಡಬೋಲೆಯವರ ಸಂದ್ರಿಯಲ್ಲಿದ್ದ ಗಜಾನನ ಪಾರಲಯೀಕರನೇ ಎಂದು ! ಬಹಳ ಬಡಪಾಪ ಮನುಷ್ಯ! ನಾನು ಆರು ತಿಂಗಳ ಕಾಲ ಅವನ ಮನೆಯಲ್ಲಿ ಬಾಡಿಗೆರದಾನಾಗಿದ್ದೆ. ಸಭೆ ಸಮ್ಮೇಲನಗಳಲ್ಲೇನೋ ವಿಶ್ವಬಂಧುತ್ವವೇ ಮೊದಲಾದ ಬಹಳ ದೊಡ್ಡ ತತ್ವಗಳ ಸುರಿಮಳೆ ಸುರಿಸುತ್ತಿದ್ದ. ಗಾಂಧಿ ಟೊಪ್ಪಿಗೆ ಹಾಕಿಕೊಂಡು, ಪ್ರತಿಷ್ಠಿತತೆಯ ಶಾಲು ಹೊದ್ದುಕೊಂಡು ಇದ್ದ. ಪಾರಲಯೀ ಊರಿಗೆ ನನಗೆ ವರ್ಗವಾದಾಗ ಇವನ ಮನೆಯಲ್ಲಿ ಮೂರು ರೂಮುಗಳ ಬ್ಲಾಕ್ ತೆರವಾಗಿದ್ದಿತು. ಆದರೆ ಎರಡು ರೂಮುಗಳಲ್ಲಿ ತಾತ್ಪೂರ್ತಿಕವಾಗಿ ಇಡುತ್ತೇನೆಂದು ಎಷ್ಟೋ ಸಾಮಾನುಗಳನ್ನು ರಚಿಸಿ ಇಟ್ಟಿದ್ದವನು ಆರು ತಿಂಗಳಾದರೂ ಅವುಗಳನ್ನು ಬೇರೆಡೆಗೆ ಇಡಲೇ ಇಲ್ಲಾ. ಬಾಡಿಗೆ ಮಾತ್ರ ಆರು ತಿಂಗಳ ಅಡ್ವಾನ್ಸ ತಕ್ಕೊಂಡ: ಮೇಲೆ ರಸೀದಿ ಕೊಡುವದಿಲ್ಲಾ ಅಂದ. ಆರು ತಿಂಗಳು ಹೇಗೋ ಒಂದೇ ರೂಮಿನಲ್ಲಿ ಕಳೆದೆ. ಈಗ ಮನೆಯಾಕೆಯನ್ನು ತವರಿಗೆ ಕಳಿಸಿ ಗುಜರಾತ ಲಾಜಿನಲ್ಲಿ ವಾಸವಾಗಿದ್ದೇನೆ. ಒಂದು ದಿನ ರಾತ್ರಿ ಉಳಿದೆರಡು ರೂಮುಗಳನ್ನು ಯಾವಾಗ ಕೊಡುವಿರೆಂದು ಚವಕಸಿ ಮಾಡಲು ಹೋದಾಗ ಒಂದು ತಾಸು ಹೊರಗೆ ಕಾಯುತ್ತ ನಿಲ್ಲಬೇಕಾಯಿತು. ರಾತ್ರಿ ಒಂಬತ್ತರಿಂದ ಹತ್ತರ ವರೆಗೆ ಚರಖಾಸೇವೆ ಎಂದು ಹೇಳುತ್ತ ಹೊರಬಂದಾಗ ನೋಡಿದರೆ ಅವನ ಬಾಯಿಗೆ ಸರಾಯಿಯ ಹೊಲಸು ವಾಸನೆ ಹೊಡೆಯುತ್ತಿತ್ತು, ಅಲ್ಲದೆ ಅವನಿಗೆ ಸರಿಯಾಗಿ ನಿಲ್ಲಲೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri
ಬರುತ್ತಿರಲಿಲ್ಲ!

ಈ ನನ್ನ ನೆನಪನ್ನು ಅವಶ್ಯವಾಗಿ ಮುದ್ರಿಸಿರಿ.

ರಂಗನಾಥ ಗಟಣೆ
ಪಾರ್ಸಲ್ ಕ್ಲಾರ್ಕ

ನಿಮ್ಮ ಸಖಾರಾಮ ಸೂನು ಸತ್ತ ಆದರೆ ನನ್ನ ಕೊರಳಿಗೆ ಉರುಲು

ಮೊನ್ನೆ ಸದೂನ ಸಲೂನಿನಲ್ಲಿ ಗಡ್ಡಮಾಡಿಸಿಕೊಳ್ಳಲು ಹೋದಾಗ ವರ್ತಮಾನಪತ್ರದಲ್ಲಿ ಗಜಾ ಪಾರಲಯೀಕರನ ಫೋಟೋ ಕಾಣಿಸಿತು. ಕೆಳಗೆ ಒಕ್ಕಣಿಕೆ ನೋಡಿದೆ. 'ಮಹಾರಾಷ್ಟ್ರದ ಕವಿಪುಂಗವನ ಸ್ವರ್ಗವಾಸ' ಎಂದೇನೋ ವರ್ಣನೆ! ಈ ಬದಮಾಷ ಪಾರಲಯೀಕರನನ್ನು ಸ್ವರ್ಗದಲ್ಲಿ ಕಂಡುದೇ ಆದರೆ ನಾಲ್ಕಾಣೆ ಸ್ಟಾಂಪು ಅಂಟಿಸಿ ಅವನನ್ನು ನರಕಕ್ಕೆ ಕೂಡಲೆ ಬದಲಿ ಮಾಡಬೇಕೆಂದು ಯಮರಾಜನ ಕೋರ್ಟಿನಲ್ಲಿ ಅರ್ಜಿ ಮಾಡಿಯೇ ತೀರುತ್ತೇನೆ.- ನೂರೆಂಟು ಕಮಿಟಿಗಳ ಹಣವನ್ನು ತಿಂದು ಹಾಕಿದಂಥವನು ಇವನು! - ನನ್ನ ಹಾಟೆಲ್ಲಿನಿಂದ ಸೋಡಾ ಬಾಟಲಿಗಳನ್ನು ನೂರಾರು ಸಲ ಪುಕ್ಕಟೆಯಾಗಿ ಒಯ್ದಿದ್ದಾನೆ! ಮತ್ತೆ ನನ್ನ ಹಾಟೇಲನ್ನೇ ಡಿಸ್‌ಮಿಸ್ ಮಾಡಿಸುವ ಠರಾವ ಮುನಸೀಪಾಲಿಟೀ ಮೀಟಿಂಗಿನಲ್ಲಿ ಬರುತ್ತಿದೆ ಎಂದು ಕೇಳಿ ಪಾರಲಯೀಕರ ಗಜಾನನಿಗೆ ಭೆಟ್ಟಿಯಾಗಲು ಹೋದೆ. ಅವನೂ ಆ ಕಮಿಟಿಯಲ್ಲಿ ಇದ್ದ. ನನ್ನ ಕಡೆಯಿಂದ ಒಂದು ಸಾವಿರ ರೂಪಾಯಿಗಳನ್ನು ತಿಂದು ಹಾಕಿದ ಬಡ್ಡೀ ಮಗ, ಮತ್ತ ಈಗ ಸತ್ತೇ ಹೋದ. ಅಂದ್ರೆ, ನನ್ನ ಸಾವಿರ ರೂಪಾಯಿಗಳೂ ಹೋದವು ಮತ್ತೆ ನನ್ನ ಕೊರಳಿಗೆ ಉರುಲು ತಂದ!

ಅಣ್ಣಾ ವಿಶ್ವಂಭರ ದೇವರುಖಿಕರ
ಹಾಟೇಲ ಮಾಲೀಕ

ಎಂಥ ಸೂನುಸೋ ಏನು ಮಣ್ಣೋ!

'ಸತ್ತು ಹೋದವರ ನಿಂದೆ ಮಾಡದಿರಿ' ಎಂಬ ವಚನವೇ ಇದೆಯಷ್ಟೇ. ಅಂಥದರಲ್ಲಿಯೂ ನಾನು ಮತ್ತು ಕೈ. ಗಜಾನನರಾವ ಬೀಗತನ ಮಾಡುವವರಿದ್ದೆವು. ಮೊನ್ನೆ ಅವರ ಬಗ್ಗೆ ನಡೆದ ಶೋಕ ಸೂಚಕ ಸಭೆಯಲ್ಲಿ ಯಾರೋ ಮಾತನಾಡುತ್ತ 'ಅವರಂಥ ತ್ಯಾಗಿಗಳಾದ ಮನುಷ್ಯರು ಮಹಾರಾಷ್ಟ್ರದಲ್ಲಿಯೇ ದುರ್ಮಿಳರು' ಎಂದು ಉದ್ಗರಿಸಿದರು. ನನ್ನ ಹಣೆ ಬರಹ! ಅವರ ಮಗನಿಗೆ ನನ್ನ ಮಗಳನ್ನು ಕೊಡುವದಾಗಿ ನಿಶ್ಚಯವಾಗಿತ್ತು - ಎಲ್ಲ ಕೂಡಿ ಬಂದಿತ್ತು. ಆದರೇನು ? - ಕೇವಲ ಐನೂರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri
ರೂಪಾಯಿ ವರದಕ್ಷಿಣೆ ಹೆಚ್ಚಿಗೆ ಎಂಬಷ್ಟಕ್ಕೇ ನಿಶ್ಚಯಿಸಿದ ಲಗ್ನವನ್ನು ಮುರಿದು ರಾವಬಹದ್ದೂರ ಧಾಂಡಿಗರ ಮೆಳ್ಳೆಗಣ್ಣಿನ ಕುಂಟಿ ಹುಡಿಗೆಯನ್ನು ಸೊಸೆ ಎಂದು ತಂದು ಕೊಂಡರು. ಅವನೆಂಥ "ಸಖಾರಾಮು ಸೂನು" ಮತ್ತು ಅವನೆಂಥ "ಮುಖಂಡ"?

ಧುಂಡಿರಾಜ ತ್ರಿವಿಕ್ರಮು ಕುಲಕರ್ಣಿ
ಇನ್‌ಕಮ್ ಟ್ಯಾಕ್ಸ ಆಫೀಸ

ಮತ್ತೆ ಪೇಪರ ತುಂಬ ಎಲ್ಲ ಇವರವೇ ಫೋಟೋ!

ನಮ್ಮ ಆಫೀಸಿನಲ್ಲಿಯ ಚಹಾವಾಲಾ ಭಟ್ಟನಿಂದ ಹಿಡಿದು ಹೆಡ್‌ಕ್ಲಾರ್ಕನ ವರೆಗೆ ಎಲ್ಲರಿಂದಲೂ ತಕ್ಕೊಂಡ ಹಣವನ್ನು ಕಾಯಂ ಆಗಿ ಮುಳುಗಿಸಿಯೇ ಮಿ. ಪಾರ್ಲೆಯೀಕರ ಸತ್ತು ಹೋದರು. ನಮ್ಮ ಆಫೀಸಿನಲ್ಲಿರುವ ಟಾಯಿಪಿಸಿಸ್ಟ ಫರ್ನಾಂಡೀಸನಿಗೆ ತಮ್ಮ ಹೆಸರಿನ ಮೇಲೆ ಹಣ ಹಚ್ಚುವ ಬಗ್ಗೆ ಹೇಳಿದ. ಕುದುರೆಗೆ ಏನೋ ಆಯಿತು. ನಂಬರ ಹತ್ತಲಿಲ್ಲ. ಬೆಟಿಂಗದ ಹಣವನ್ನೇ ಕೊಡಲಾರ. ಕುದುರೆ ಗೆದ್ದು ಬಂದಲ್ಲಿ ಮಾತ್ರ ಹಣ ಪಡೆಯಲು ಉತ್ಸುಕ! ಇದೆಂತಹ ಸ್ಪೋರ್ಟ್ಸ್‌ಮನ್-ತನ? ಅಲ್ಲದೆ ಇವರ ಇನ್ನಿತರ ಉಪದ್ವ್ಯಾಪಗಳಿಗೇನೂ ಕೊರತೆಯೇ ಇರಲಿಲ್ಲ. ಆದ್ದರಿಂದ ಆಫೀಸಿನಲ್ಲಿನ ಅವರ ಕೆಲಸವನ್ನೂ ನಮಗೇ ಮಾಡಿ ಮುಗಿಸಬೇಕಾಗುತ್ತಿದ್ದಿತು. ಇವರು ಮಾತ್ರ ಸಾಹಿತ್ಯ ಸಮ್ಮೇಲನದಲ್ಲಿ ಭಾಷಣ ಬಿಗಿಯಲು ತೆರಳುವವರು. ನಮ್ಮ ಬರ್ವೆಸಾಹೇಬರ ಮಗಳ ಮದುವೆಯಲ್ಲಿ ಕವಿತೆ ಮಾಡಿ ಕೊಟ್ಟರೆಂದರೆ ಸಾಹೇಬರಿಗೆ ತುಂಬ ಖುಶಿ.

ದ್ವಾರಕಾನಾಥ ಗುಪ್ತೆ
ಮಂಗೇಶ ನಾಡಕರ್ಣಿ
ಕ್ಲಾರ್ಕ್ಸ್, ಕಸ್ಟಮ್ಸ ಆಫೀಸ

ಮರೆತು ಹೋದ ಮಾತು

ಈ ಪತ್ರ ಕೇವಲ ಖಾಸಗಿ ಎಂದೇ ತಿಳಿದಿರಿ. ಸ್ವಾಮೀ! ಸುಮ್ಮನೆ ಬರ್ವೆಸಾಹೇಬರಿಗೇನಾದರೂ ತಿಳಿದರೆ ನಮಗೆ ಇಲ್ಲದ ಪೀಕಲಾಟ.

ದ್ವಾ.ಗು. ಮಂ.ನಾ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ವಾರ್ಥಿ

ನಿಜವಾಗಿ ಹೇಳಿಬಿಡಲಾ? ಗಜಾನನ ಪಾರಲಯೀಕರನೆಂದರೆ ಅಪ್ಪಟ ಸ್ವಾರ್ಥಿ ಮನುಷ್ಯ. ಬಂಗಾಲದ ಕ್ಷಾಮ ಪೀಡಿತರಾಗಿ ನಾವು ಹಣ ಕೂಡಿಸುವಾಗ ನನಗೆ ಅದರಲ್ಲಿ ೨೫% ಕಮೀಶನ್ ಕೊಡುವದಾಗಿ ಪ್ರಾಮಿಸ್ ಮಾಡಲಾಗಿತ್ತು. ನಾನೊಬ್ಬನೇ ಆರುನೂರು ರೂಪಾಯಿಗಳಷ್ಟು ಟಿಕೀಟುಗಳನ್ನು ಖರ್ಚು ಮಾಡಿದ್ದೆ. ಆದರೆ ಈ ಗಜಾನನ ಪಾರಲಯೀಕರನೊಬ್ಬನೆ ಹದಿನೇಳುನೂರು ರೂಪಾಯಿಗಳನ್ನು ನುಂಗಿದ್ದ.

ಬಾಬು ಪೇಪರವಾಲಾ

ಸುಧಾರಣೆ?

ಕೈ. ಸಖಾರಾಮ ಸೂನುಗಳು ಪ್ರಸಿದ್ಧ ಕವಿಗಳಾದ್ದರಿಂದ ನನ್ನ ಮೊದಲನೆಯ ಕವನವನ್ನು ಅವರಿಗೆ ತೋರಿಸಲು ತಗೊಂಡು ಹೋಗಿದ್ದೆ. ಅವರು ಅದರಲ್ಲಿ ಕೆಲವು ಸುಧಾರಣೆಗಳನ್ನು ಮಾಡಿಕೊಡುತ್ತೇನೆ ಅಂದರು. ಹದಿನೈದು ದಿನಗಳನಂತರ ಅವರ ಮನೆಗೆ ಹೋದೆ. ಆಗ ಅವರು ನನ್ನ ಕವಿತೆ ಮಾಸಪತ್ರಿಕೆಯೊಂದರಲ್ಲಿ ಪ್ರಿಂಟಾದದ್ದನ್ನು ನೋಡಿದೆ. ಅದರಲ್ಲಿ ಒಂದೇ ಒಂದು ಸುಧಾರಣೆ ಮಾಡಲಾಗಿತ್ತು. ಕವಿತೆಯ ಕೆಳಗಿದ್ದ ನನ್ನ ಹೆಸರನ್ನು ಅಳಿಸಿಬಿಟ್ಟು "ಸಖಾರಾಮ- ಸೂನು" ಎಂದು ಬರೆಯಲಾಗಿತ್ತು.

ಅರುಣ -ಚಂದ್ರ,
ಕುಮಾರ ಸಾಹಿತ್ಯಿಕ
ಇಯತ್ತೆ ೭ ಬ.

ಕೊನೆಗೆ ನನ್ನ ಸ್ಮೃತಿ ಪುಸ್ತಕದಲ್ಲಿ ಪ್ರಿಂಟಾದದ್ದು

ಸಖಾರಾಮ ಸೂನುಗಳು ದಿವಂಗತರಾದರು. ಈ ಅಕ್ಷರಗಳನ್ನು ಬರೆಯುತ್ತಿರುವಾಗ ನನ್ನ ಲೇಖನಿಯಿಂದ ಪ್ರವಹಿಸುತ್ತಿರುವದು ಮಸಿಯಲ್ಲ, ಅಶ್ರುಗಳೇ ಧಾರೆಗಟ್ಟಿವೆ. ಪಾರಲಯಿಯ ಸಾಹಿತ್ಯ ಸಂಘದ ವಿವಿಧ ವಿಷಯಗಳ ಮೇಲಿನ ಚರ್ಚೆಗೆ ಇನ್ನು ಮುಂದೆ ಕಳೆ ಏರಲಾರದು. ಅವರ ಮರಣದ ದು:ಖದ ಭಾರವು ನಮ್ಮ ಸಾಹಿತ್ಯ ಸಂಘಕ್ಕೆ ಸಹನೆ ಮೀರಿದಂಥಾದ್ದು. ಆದ್ದರಿಂದ ಸಂಘವನ್ನು ಕಾಯಂ ಆಗಿ ಮುಚ್ಚಿಬಿಡಲಾಗಿದೆ. ಹೋದ ತಿಂಗಳಲ್ಲಿ ಅವರ ನೂರನೆಯ ಕವಿತೆಯ ಜನ್ಮೋತ್ಸವ ಸಮಾರಂಭವನ್ನು ಸಂಘದ ಆಶ್ರಯದಲ್ಲಿ ಅದೆಷ್ಟು ಅದ್ದೂರಿಯಿಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಡೆಸಲಾಗಿತ್ತು! ನಂತರ ಹದಿನೈದೇ ದಿನಗಳಲ್ಲಿ ಈ ಮಹನೀಯ ವ್ಯಕ್ತಿಗಳು ದೈವಾಧೀನರಾದರು.

ಅದರ ಮುಂದಿನ ಮುದ್ರಿಸದೇ ಹೋದ ಪಂಕ್ತಿಗಳು

ಮೇಲ್ಕಂಡ ಸಮಾರಂಭದ ವೆಚ್ಚವೆಲ್ಲವನ್ನೂ ಅವರೇ ಕೊಡುವದಾಗಿ ಅವರಿಂದ ಲಿಖಿತ ಒಪ್ಪಿಗೆಯನ್ನನುಸರಿಸಿ ನನ್ನ ಹಣವನ್ನೇ ಹಾಕಿ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಈಗ ವೆಚ್ಚದ ಭಾರವೆಲ್ಲ ನನ್ನ ಮೇಲೆಯೇ!

'ಯೋಗಿರ ಭರತಿ, ಗ್ರಂಥದಿಂದ
ಡಿ. ಎಸ್. ಕುಲಕರ್ಣಿ

ಪ್ರ.ಲ.ದೇಶಪಾಂಡೆ/೧೭೨
CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಕಾರವಾರ

ಚಿಕ್ಕವನಿದ್ದಾಗ, ಶಾಲೆಗೆ ಮೇ ತಿಂಗಳ ರಜೆ ಬಿದ್ದಮೇಲೆ ಕ್ಲಾಸಿನಲ್ಲಿಯ ಹುಡುಗರು ಒಬ್ಬರನ್ನೊಬ್ಬರನ್ನು ಕೇಳುತ್ತಿದ್ದರು, 'ನೀನು ರಜೆಯಲ್ಲಿ ಎಲ್ಲಿಗೆ ಹೋಗುವಿ? ನೀನೆಲ್ಲಿ ಹೋಗುವಿ? ನೀನೆಲ್ಲಿ ಹೋಗುವಿ?' - ಆಮೇಲೆ ಯಾರೋ ಅನ್ನುತ್ತಿದ್ದ, 'ನಾನು ವೆಂಗುರ್ಲೆಗೆ ಹೋಗುವೆ' ಇನ್ನಾರು ಹೇಳುವ 'ನಾನು ಕೊಲ್ಹಾಪುರ್', ಮಗದೊಬ್ಬ, ನಾನು ಸಾಂಗ್ಲಿ- ನಾನು ಮಾತ್ರ ಸುಮ್ಮನೆ ಕುಳಿತುಕೊಳ್ಳುತ್ತಿದ್ದೆ. ಏಕೆಂದರೆ, ನನ್ನ ಜನ್ಮವಾದದ್ದು ಮುಂಬಯಿಯಲ್ಲಿ - ಮನೆ ಮುಂಬಯಿಯಲ್ಲಿ. 'ಊರು' ಅನ್ನುವದಂತಹದೇನೂ ನನಗೆ ಇರಲೇ ಇಲ್ಲ. ನನಗೆ ಬಹಳ ದು:ಖವಾಗುತ್ತಿತ್ತು. ಎಲ್ಲ ಹುಡುಗರಿಗೂ ಊರುಗಳಿದ್ದವು. ಆಮೇಲೆ ನಾನೂ ಕೂಡ ಹೇಳುತ್ತಿದ್ದೆ, 'ನಾನು ನನ್ನ ಊರಿಗೆ ಹೋಗುವ' ಅವರಲ್ಲಿಯೂ ಯಾರಾದರೂ ಕಿಡಿಗೇಡಿ ಕಿಟ್ಟ ಇರುವವನೇ. ಅವನು ಕೇಳುತ್ತಿದ್ದ, 'ಅದಾವದು ನಿನ್ನ ಊರು, ದೇಶಪಾಂಡ್ಯಾ?' ನಾನು ಉತ್ತರಿಸುತ್ತಿದ್ದೆ, 'ನನ್ನ ಊರು 'ಕಾರವಾರ!' 'ಕಾರವಾರ?' 'ಕಾರವಾರದಲ್ಲಿ ದೇಶಪಾಂಡೆ ಎಲ್ಲಿದ್ದಾರೋ? ಕಾರವಾರದಲ್ಲಿ ವಾಗಳೇ, ನಾಡಕರ್ಣಿ, ವಾಘ, ನಾಯಕ ಇವರೇ ಇರೋದು.'

'ಆದರೆ ನನ್ನ ಅಜ್ಜನ ಮನೆ ಇದೆ ಕಾರವಾರದಲ್ಲಿ ! ಅಲ್ಲಿ ನನ್ನ ಅಜ್ಜಿ ಇರುತ್ತಾಳೆ. ಅಜ್ಜನಿದ್ದಾನೆ, ಮಾಮುಂದಿಯರಿದ್ದಾರೆ, ಗೊತ್ತಿಲ್ಲೋ ನಿನಗೆ? ಸದಾಶಿವಗಡಕ್ಕೆ ಹೋಗಿದ್ದಿಯಾ ಎಂದೊಮ್ಮೆ? ಗಡದ ಮೇಲಿಂದ ಮಾಜಾಳಿಗೆ ಹೋಗುವ ರಸ್ತೆ ಇದೆ, ಗೊತ್ತಿದೆ ನಿನಗೆ? ಅಲ್ಲೇ, ರಸ್ತೆಯ ಬದಿಗೇ ನಮ್ಮ ಮನೆ ಇದೆ. ಕಾಳಿ ನದಿಕೂಡ ಕಾಣುತ್ತದೆ ನಮ್ಮ ಮನೆಯಿಂದ! ಅಲ್ಲೇ, ದೋಣಿಯಲ್ಲಿ ಕೂತುಕೊಂಡು ನಾವು ಸಂಜೆಗೆ ಕಾಜೂಬಾಗಕ್ಕೆ ಹೋಗಿ ಬರುತ್ತೇವೆ, ಇಲ್ಲವೆ ಕಾರವಾರದ ಸಮುದ್ರದಂಡೆಗೆ ಹೋಗುತ್ತೇವೆ!'

'ನೀನೆಂದಿಗೆ ಹೋಗಿದ್ದೆಯೋ, ಕಾರವಾರಕ್ಕೆ?'

'ಎಂದಿಗೆ? ಹೇ, ರಜೆ ಬಿದ್ದಕೂಡಲೇ ನಾವು ಕಾರವಾರದಲ್ಲೇ' ಕಾಜೂಬಾಗ್, ಬೈತಖೋಲ್, ದೇವಗಡದ ದೀಪಸ್ತಂಭ, ಸುರೀಪಾರ್ಕ್ ಇವೆಲ್ಲ ಹೆಸರುಗಳನ್ನು ಅವರ ಮುಂದೊಮ್ಮೆ ಉಚ್ಚರಿಸಿದರೆ ಅವರ ಸಮಾಧಾನವಾಗುತ್ತಿತ್ತು. ಇಷ್ಟೇ ಅಲ್ಲ ಇವನು ಬಹುಶ: ಕಾರವಾರದವನೇ ಇರಬೇಕು ಎಂದೂ ಅವರಿಗೆ ಮನದಟ್ಟಾಗುತ್ತಿತ್ತು!

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಿಜವಾಗಿ ಹೇಳಬೇಕಾದರೆ, ನಾವು ದೇಶಪಾಂಡೆಯುವರು ಬೆಳಗಾವಿಯುವರು. ಬೆಳಗಾವಿಯಿಂದ ಇಪ್ಪತ್ತೈದು - ಮೂವತ್ತು ಮೈಲುಗಳಾಚೆ, ಚಂದಗಡದ ಬದಿಗೆ, ನಮ್ಮ ದೇಶಪಾಂಡೆಯವರ ಊರಿದೆ. ಇನ್ನೂತನಕ ನಾನು ಆ ಊರನ್ನು ನೋಡಿಲ್ಲ! ಆ ಊರಿನಲ್ಲಿ ನಮ್ಮ ಮನೆ ಇಲ್ಲ. ಕಾಡಿನಲ್ಲಿ ಹೊಲವಿಲ್ಲ, ಅಕ್ಕರೆಯ ನೆಂಟರಿಷ್ಟರೂ ಇಲ್ಲ. ಕಾರವಾರದಲ್ಲಿ ಮನೆ ಮತ್ತು ಹೊಲಗಳಿಲ್ಲದಿದ್ದರೂ ಬೇಕಾದ ಜನರು ಮಾತ್ರ ತುಂಬ. ಅದಕ್ಕಾಗಿಯೇ, ಚಿಕ್ಕಂದಿನಲ್ಲಿ ಯಾರಾದರೂ ನಿನ್ನ ಊರು ಯಾವದೆಂದು ಕೇಳಿದರೆ, ನಾನು ಹೇಳುತ್ತಿದ್ದೆ - 'ಕಾರವಾರ!' ಕಾಯದೆಯಿಂದ ನೋಡಿದರೆ, ನಾನು ಕಾರವಾರದವನಲ್ಲ. ಆದರೆ ಭಾವನೆಯ ನೆಂಟಿನಿಂದ ನಾನು ಕಾರವಾರದವನೇ, ಏಕೆಂದರೆ ನನ್ನ ಬಯಕೆಗಳು ಅಕ್ಕರೆಯಿಂದ ಪೂರೈಸಲಾಗುತ್ತಿದ್ದವು ಕಾರವಾರದಲ್ಲಿಯೇ. ಅಲ್ಲಿ ನನ್ನ ಅಜ್ಜಿಯಂದಿರಿದ್ದರು. ಅಜ್ಜನವರಿದ್ದರು. ಅತ್ತೆ, ಸೋದರತ್ತೆಗಳಿದ್ದರು. ಮೇ ತಿಂಗಳಲ್ಲಿ ಬರಬೇಕೆಂದು ಡಜನ್ನಿನಷ್ಟು ಕಾಗದಗಳು ಬರುತ್ತಿದ್ದವು, ಕಾರವಾರದಿಂದಲೇ.

ಎಷ್ಟೋ ವರ್ಷಗಳು ಸಂದಿ ಹೋಗಿವೆ. ಈಗ ಅಲ್ಲಿ ಯಾರೂ ಉಳಿದಿಲ್ಲ. 'ಈಶಾಡ್ ಮಾವಿನಹಣ್ಣುಗಳನ್ನು ತಿನ್ನಲಿಕ್ಕೆ ನಿನ್ನ ಮಕ್ಕಳನ್ನು ಕಳಿಸಿಕೊಡು' ಎಂದು ಕಾಗದಗಳನ್ನು ಬರೆಯುತ್ತಿದ್ದ ನನ್ನ ಅಜ್ಜನೂ ಈಗ ಉಳಿದಿಲ್ಲ. - ಚಿಪ್ಪೆಕಲ್ಲನ್ನು ಹಾಕಿದ ಬಸಲೆ ಸೊಪ್ಪಿನ ಪಲ್ಯ ಮತ್ತು ಪಾತೋಳಿ (ಅರಿಶಿಣ ಎಲೆಗಳಲ್ಲಿ ಬೇಯಿಸಿದ ಹೋಳಿಗೆ)ಗಳನ್ನು ಮಾಡುವ ಅಜ್ಜಿ ಎಂದಿಗೋ ಮಾಯವಾದಳು. ಪುರುಷೋತ್ತಮಾ, ಇಂತಹ ಮೋರಿ ಮೀನು ನಿನಗೆ ಮುಂಬಯಿಯಲ್ಲಿ ಸಿಗಲಿಕ್ಕಿಲ್ಲ ತಮ್ಮಾ' ಎಂದು ಹೇಳುವ ನನ್ನ ತಾಯಿಯ ಸೋದರಳಿಯ - ನಾವು ಭಾವಣ್ಣಾ ಎಂದರವನ್ನು ಕರೆಯುತ್ತಿದ್ದೆವು ಅವನೂ ಎಂದಿಗೋ ಹೋಗಿಬಿಟ್ಟ.

ಈಗ ಕಾರವಾರ ಉಳಿದಿದೆ ನನ್ನ ಅಂತ:ಕರಣದ ಒಂದು ಮೂಲೆಯಲ್ಲಿ. ಆ ಕಾರವಾರವನ್ನು ನಾನೊಬ್ಬನೇ ನೋಡುತ್ತ ಕುಳಿತುಕೊಳ್ಳುತ್ತೇನೆ. ಒಮ್ಮೆಲೆ ಕಣ್ಮುಂದೆ ಬರುವದೇನೆಂದರೆ ಅಲ್ಲಿಯ ಸಮುದ್ರದಂಡೆ! ಸೂಚೀಪರ್ಣದ ಗಿಡಗಳ ಹಿಂದಿನಿಂದ ನೋಡಿದ ಸೂರ್ಯಾಸ್ತ! ದೇವಗಡದ ದೀಪದ ಝುಕ್ ಪಕ್ ಝುಕ್ ಪಕ್ ಮಾಡುವ ಬೆಳಕು ಮತ್ತು ಕೋಡಿ ಬಾಗದಿಂದ ಕಾಣುವ ಆ ಸದಾಶಿವಗಡ! ಇವೆಲ್ಲವೂ ನನ್ನೊಡನೆ ರಕ್ತದ ಸಂಬಂಧವಿದ್ದವು! ನಾನು ಆನಂತರ ಎಷ್ಟೊ ಸಮುದ್ರದಂಡೆಗಳನ್ನು ನೋಡಿದ್ದೇನೆ. ಆದರೆ ಕಾರವಾರದ ಸಮುದ್ರದಂಡೆಯ ಹೆಸರನ್ನು ತೆಗೆದುಕೊಂಡರೆ ನನಗೇನಿಸುತ್ತದೆ ಎಂಬುದನ್ನು ಹೇಳಲಿಕ್ಕಾಗದು! ಆ ಕಾಲದಲ್ಲಿ ಸಮುದ್ರ ದಂಡೆಯ ಮೇಲೆ ಕಟ್ಟಿದ ಕೋಟೆಗಳ ಮಳಲಿನ ಹಸಿಸ್ಪರ್ಶವನ್ನು ಇಂದಿಗೂ ನನ್ನ ಅಂಗೈಗಳು ಅನುಭವಿಸಬಲ್ಲವು. ಈಗಲೂ ಎಲ್ಲಿಂದಲೋ ಒಂದು ಪದ್ಯದ ಸ್ವರಗಳು ಕಿವಿಯ ಮೇಲೆ ಬರುತ್ತವೆ ಮತ್ತು ನಾನು ಪುನ: ಸಣ್ಣವನಾಗುತ್ತೇನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಡದ ಮೇಲೆ ನಾವು ಗಾಳಿಗೆಂದು ತಿರುಗಾಡಲು ಹೋಗಿದ್ದೆವು. ಗೋಡಂಬಿಯ ಹಣ್ಣುಗಳನ್ನು ತಿನ್ನುತ್ತ ಅಲೆದಾಡುವಾಗ, ದೂರದಿಂದ ಸದ್ದು ಬಂದಿತ್ತು - 'ಚಾಂಗ್ ಕುಳಾಚಿ ಮ್ಹಣ, ಆನ ಆಮಾನ ಮಾಕಾ ಧಾರ ಓತೂನ ದಿಲೇಲಿ - ಹೇ ದೇವಾ, ಧಾರ ಓತೂನ ದಿಲೇಲಿ (ನಾನು ಒಳ್ಳೆಯ ಕುಲದವಳೆಂದು ನನ್ನ ತಂದೆತಾಯಿಯವರು ನನ್ನನ್ನು ನೀರಿನ ಧಾರೆ ಎರೆದು ಕೊಟ್ಟಿದ್ದಾರೆ. ದೇವರೇ, ನೀರಿನ ಧಾರೆ ಎರೆದು ಕೊಟ್ಟಿದ್ದಾರೆ) ನನ್ನ ಜೀವನದಲ್ಲಿ ನಾನು ಎಷ್ಟೋ ಗಾಯನಗಳನ್ನು ಕೇಳಿದ್ದೇನೆ, ನಾನೂ ಮಾಡಿದ್ದೇನೆ. ಆದರೆ ಆ ಹಾಡು ನನ್ನನ್ನು ಹಿಂತಿರುಗಿ ಆ ಗಡದ ಮೇಲೆ ಕೊಂಡೂಯ್ಯುತ್ತದೆ. ಅಲ್ಲಿಂದ ನಾನು ಕಾಳಿನದಿಯನ್ನು ಪುನಃ ನೋಡುತ್ತೇನೆ. ಗಡದ ಮೇಲಿಂದ ಸರಸರವಾಗಿ ಕೋಡಿಬಾಗಕ್ಕೆ ಹೋಗುವ ದೋಣಿಯನ್ನು ನೋಡುತ್ತೇನೆ.

ನಾನು ಮೊಟ್ಟಮೊದಲು ಕಾರವಾರಕ್ಕೆ ಹೋದದ್ದು ವರ್ಷ, ಒಂದುವರೆ ವರ್ಷದವನಿದ್ದಾಗ. ಆನಂತರ ಶಾಲೆ, ಹಾಯಸ್ಕೂಲು, ಕಾಲೇಜಿನಲ್ಲಿದ್ದಾಗ. ಹೀಗೆ ವಯಸ್ಸಿನ ಬೇರೆ ಬೇರೆ ಅವಸ್ಥೆಗಳಲ್ಲಿ. ಕಾರವಾರವೆಂದರೆ ಈಶಾಡ್ ಮತ್ತು ಫರ್ನಾಂಡ್ ಮಾವಿನಹಣ್ಣುಗಳು ಮತ್ತು ಅಜ್ಜಂದಿರು, ಸೋದರತ್ತೆಯರು ಹಾಗೂ ಅವರು ತೋರಿಸುವ ಪ್ರೀತಿ ಎಂದಿಷ್ಟೇ ಅರ್ಥವಿತ್ತು. ಅಂದಿನಿಂದ ಆಬೋಲೀ ಮತ್ತು ಪೊಂವಳಾಂ ಈ ಹೂಗಳು ಬಣ್ಣ ಮತ್ತು ಸುಗಂಧಗಳ ಜೊತೆಗೆ ಇನ್ನೆಷ್ಟೋ ಕತೆಗಳನ್ನೂ ಅರುಹುತ್ತವೆ ಎಂದು ತಿಳಿಯಲು ತೊಡಗಿದೊಡನೆ ನನ್ನ ಕಾರವಾರವೂ ಸುಂದರವಾಗುತ್ತ ನಡೆಯಿತು! ಕಾರವಾರದ ಆ ಸಮುದ್ರದಂಡೆಯ ಮೇಲೆ ಕುಳಿತು ನಾನು ಮುಳುಗುವ ಸೂರ್ಯನ ತರತರದ ಬಣ್ಣಗಳನ್ನು ನೋಡಿದೆ. ಕೆಲ ಕಾಲದ ನಂತರ ಆ ಬಣ್ಣಗಳಲ್ಲಿಯೂ ನಾನು ವಿವಿಧ ಅರ್ಥಗಳನ್ನು ಕಂಡುಕೊಂಡೆ.

ನೆನಪಾಗುತ್ತದೆ, ದೀನಾನಾಥರಾವ್ ಮಂಗೇಶಕರರ ನಾಟಕ ಕಂಪನಿಯು ಕಾರವಾರಕ್ಕೆ ಬಂದಿತ್ತು! ರಣದುಂದುಭಿ ನಾಟಕವು ಎಲ್ಲರಿಗೂ ಹುಚ್ಚು ಹಿಡಿಸಿತ್ತು. ಮಿತ್ರ ಸಮಾಜದಿಂದ ಸಂತೇಪೇಟೆಯವರೆಗೆ ಎಲ್ಲಿ ಹೋದಲ್ಲೆಲ್ಲ - 'ಹೀ ಸಖಿ ರಾಧಾ ಖೇಳೇ ಶೃಂಗಾರ' ಇಲ್ಲವೆ 'ಪರವಶತಾ ಪಾಶ ದೈವೇ ಜ್ಯಾಂಚ್ಯಾ ಗಳಾ ಲಾಗಲಾಽ ಈ ಹಾಡುಗಳು ಕಿವಿಯ ಮೇಲೆ ಬೀಳುತ್ತಿದ್ದವು. ಅದನ್ನು ನೋಡಿ ನಾನು ಮತ್ತು ನಮ್ಮ ದತ್ತಾರಾಮನೂ ಕೂಡಿ ಎರಡೆರಡು ದುಡ್ಡಿನ ತಿಕೀಟನ್ನಿಟ್ಟು ನಾಟಕವಾಡಿದ್ದೆವು. ಕಂಪನಿಗೆ ಸುಮಾರು ಎಂಟಾಣೆ ಉತ್ಪನ್ನವಾಗಿತ್ತು. ಮನೆಯಲ್ಲಿಯ ದೊಡ್ಡವರು ಪುಕ್ಕಟೆ ಪಾಸಿನ ಮೇಲೆ ಬಂದಿದ್ದರು ಮತ್ತು ನಮ್ಮ ನಾಟಕಗಳನ್ನು ಕಾಸು ತೆತ್ತದೆ ನೋಡಿ ಮೇಲೆ, 'ಎಂಥಾ ದುಶ್ಚಾಳಿ ಮಕ್ಕಳು, ಎಲ್ಲಿಂದ ಏನನ್ನು ನೋಡಿ ಬರುತ್ತಾರೋ, ಯಾರಿಗೆ ಗೊತ್ತು' ಎಂದೆನ್ನುತ್ತ ಕೊಂಡಾಡಿದ್ದರು. ಉತ್ಪನ್ನದ ಎಂಟಾಣೆಯಲ್ಲಿ ನಾವು ಆ ಮೇಲೆ ಪಾರ್ಟಿ ಮಾಡಿದ್ದೆವು. ಮುಂಬೈಕರನ ಹಾಟೇಲಿನಲ್ಲಿ 'ಗರಂ ಮಸಾಲಾ ಪೋಹೆ' ಮತ್ತು ಪಾತಳ್ ಭಾಜಿ ಬಾಯಿತುಂಬ ಸರಾಗವಾಗಿ ತಿಂದದ್ದರ ರುಚಿ ಇಂದಿಗೂ ನನ್ನ ನಾಲಿಗೆಯ ಮೇಲಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆ ದಿನಗಳನ್ನು ಜನರಾಡುವ ವಿಷಯಗಳೂ ಸಾದಾ ಆಗಿದ್ದವು! ಕಾರವಾರ ಎಂದರೆ ಪೆನ್ಶನರರ ಊರು. ಮುಖ್ಯ ವಿಷಯ ಅಂದರೆ, 'ಈ ಹೊತ್ತು ಏನು ಸಿಕ್ಕಿತೋ, ಅಂತೂಬಾಬ್?' ಆ ಮೇಲೆ ಅಂತೂಬಾಬ್ ಅನ್ನುವ, ' ಹಾಳಾಗಿ ಹೋಯ್ತು ನೋಡು! ಮೀನು ಎಂದರೆ ಕಣ್ಣಿಗೆ ಕಾಣದಾಗಿದೆ ಇತ್ಲಾಗೆ! ತಾರಲೆ ಸಿಕ್ಕಿದವು!!' ಅಂದಾಗ ಮಂಗೇಶಮಾಮರುಅಭಿಮಾನದಿಂದ ಹೇಳುವರು, ''ತಾರಲೆ? ಹೆ:- ನಗಲ್ಯೋ ಬಂದಿ ಅಲ್ಲಾ, ಪಾಪಿ.' 'ತುಟ್ಟಿ ಅಪ್ಪಾ!' ಅಂತೂಬಾಬ್ ಅನ್ನುತ್ತಿದ್ದ. 'ನಿನಗೇನೋ ತುಟ್ಟಿ? ಪ್ರಮೋಶನ್ ಸಿಕ್ಕಿದೆ ಅಂತಲ್ಲಾ ನಿನ್ನ ಮಗನಿಗೆ?' ಇವರ ಮಕ್ಕಳೆಲ್ಲರೂ ಮುಂಬಯಿಯಲ್ಲಿ ನೌಕರಿ ಮಾಡಿ ಹಣ ಕಳಿಸುತ್ತಿದ್ದರು. ಯಾರ ಮಗನು ಅಕೌಂಟಂಟ ಆದನು. ಇನ್ನೊಬ್ಬನ ಅಳಿಯ ಮ್ಯಾನೇಜರ್ ಆದನು. ಇನ್ನಾರೋ ಮತ್ತೇನೇನೋ, ಏನೋ ಗಡಿಬಿಡಿ ಮಾಡಿದನೆಂದು ಕೇಳುತ್ತೇನೆ! ನಮ್ಮ ಪ್ಪಾರುದ್ರನ ಕಾಗದ ಬಂದಿದೆ, ಅದರಲ್ಲಿ ಬರೆದಿದ್ದಾನೆ ಆತ' 'ಬಾಬಲಿ ಮಾಮನ ವಿರೂಪಾಕ್ಷನು ಅದೇನೋ ಹಣ ತಿಂದವನಂತೆ.ಏನಾಯ್ತೋನೋ ಅಂತಾನೆ ಮಾರಾಯರೇ.'

ಎಲೆಗಿಲೆ ತಿಂದು ಮಧ್ಯಾಹ್ನ ಗೊರಕೆ ಹೊಡೆಯುತ್ತ ನಿದ್ದೆ ತೆಗೆದು, ಸಂಜೆಗೆ ಮಿತ್ರಸಮಾಜ ಇಲ್ಲವೆ ಮುರಲೀಧರನ ಮಂದಿರ ಇಲ್ಲವೆ ಗುಡ್ಡದ ಮೇಲೆ ತಿರುಗಾಡಿ ಬಂದರೆ ರಾತ್ರಿ ಪುನ: ನಗಲೀ ಮೀನು ಸಿಕ್ಕಿತೋ, ಚಿಪ್ಪೆಕಲ್ಲು ಸಿಕ್ಕಿತೋ ಎಂದು ವಿಚಾರಿಸುತ್ತ, ಅಡಿಗೆಮನೆಯತ್ತ ನೋಡಿ, 'ಕೇಳಿದಿಯಾ? ನಗಲೀ ಮೀನು ಒಳ್ಳೇ ತಾಜಾ ಇತ್ತು. ತೆಪಳಾ (ಮಸಾಲೆಗೆ ಹಾಕುವ ಖಾರವಾದ ಚಿಕ್ಕ ಹಣ್ಣು) ಬಿಪಳಾ ಹಾಕಿ, ತುಸು ದಪ್ಪನ್ನಾಗಿ ಮಾಡು' ಎಂದು ಹೇಳುತ್ತ ಬೀಡಿ ಸೇದುತ್ತ ಕುಳಿತುಕೊಳ್ಳುವ ಮುದುಕರು ಇನ್ನೂ ಕಣ್ಮುಚ್ಚಿಕೊತರೆ ನನ್ನೊಡನೆ ಹರಟೆ ಹೊಡೆಯಲು ಬರುತ್ತಾರೆ.

ಒಬ್ಬನ ಹೆಸರು 'ಕಡಕಡೊ', ಇನ್ನಾರೋ ' ಧುಮ್ ಠೋ', ಮತ್ತಾರೋ 'ಥರಥರೊ' ಹೀಗೆ ಪ್ರತಿಯೊಬ್ಬ ಮುದುಕನಿಗೆ ವ್ಯಂಗ್ಯವಾಗಿಟ್ಟ ಹೆಸರುಗಳಿದ್ದವು. ಅದರಿಂದಾಗಿ ಅವರೂ ರೇಗುತ್ತಿರಲಿಲ್ಲ. ದತ್ತಾಮಾಮ ಒಂದು ದಿನ ಸಂಜೆಗೆ ಮನೆಗೆ ಬಂದಿದ್ದ. ನರ್ಮದಕ್ಕ ಒಳಗೆ ಅಡಿಗೆಮನೆಯಲ್ಲಿ ಒಣ ಮೋರಿಮೀನನ್ನು ಸುಡುತ್ತಿದ್ದಳು. 'ಬಾಪ್ಪಾ ಇದ್ದಾನೆಯೇ?' ಎಂದವನು ಕೇಳಿದ. ಒಳಗಿಂದಲೇ ನರ್ಮದಕ್ಕ,' ''ಇಲ್ಲಾ, ಕಿನ್ನರಕ್ಕೆ ಹೋಗಿದ್ದಾರೆ. ಯಾರು ಬಂದಿದ್ದನೆಂದು ಹೇಳಲಿ?'' ಎಂದು ಕೇಳಿದಳು.

''ದತ್ತಾ ಬಂದಿದ್ದನೆಂದು ಹೇಳು''

''ಯಾವ ದತ್ತಾ?''

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಏಕೆಂದರೆ, ಒಂದು ಕಾರವಾರದಲ್ಲಿಯೇ ಸುಮಾರು ನೂರು 'ದತ್ತಾ'ಗಳಿರುತ್ತಿದ್ದರು. ನಾಡಕರ್ಣಿ ದತ್ತಾ, ಬೋರಕರ್ ದತ್ತಾ, ವಾಗಳೇ ದತ್ತಾ, ಮುಝುಮದಾರ ದತ್ತಾ, ಈ ದತ್ತಾ ಆ ದತ್ತಾ, ಇದರಲ್ಲಿಯ ಯಾವ ದತ್ತಾ? ಈ ಪ್ರತಿಯೊಬ್ಬ ದತ್ತನಿಗೆ ಬೇರೆ ಬೇರೆ ಹೆಸರುಗಳಿದ್ದವು.

ನರ್ಮದಕ್ಕಳ ' ಯಾರ ಬಂದಿದ್ದನೆಂದು ಹೇಳಲಿ?' ಈ ಪ್ರಶ್ನೆಗೆ 'ಆಗೋ, ಬರಣಿ ದತ್ತಾ ಬಂದಿದ್ದ ಎಂದ್ಹೇಳು!' ಎಂದು ಹೇಳಿ ದತ್ತಾಮಾಮ ಹೋದ. ನನಗೆ ನಗೆಯೂ ಬಂತು ಮತ್ತು ಸೋಜಿಗವೂ ಆಯಿತು. ದತ್ತಾಮಾಮ ಮೈಯಿಂದ ಸ್ಥೂಲ ಮತ್ತು ಕುಳ್ಳ. ಉಪ್ಪಿನಕಾಯಿ ಭರಣಿಯಂತೆಯೇ ಕಾಣುತ್ತಿದ್ದ. ಆದ್ದರಿಂದಲೇ ಜನರು ಅವನನ್ನು ಕರೆಯುತ್ತಿದ್ದರು ಬರಣಿ ದತ್ತಾ! ಆದರೆ ಜನರು ಎನ್ನುತ್ತಿದ್ದರು ಕುತ್ಸಿತವೃತ್ತಿಯಿಂದ. ದತ್ತಾಮಾಮನಿಗೆ ಸಿಟ್ಟಿರಲಿಲ್ಲ. ಅವನು ತಾನೇ ತನ್ನನ್ನು ಬರಣಿ ಎಂದೇ ಸಂಬೋಧಿಸುತ್ತಿದ್ದ.

ಪರಿಹಾಸ್ಯದ ಮಾತನ್ನಾಡುವದರಲ್ಲಿ ಕಾರವಾರದ ಜನರ ಬಾಯಿ ಮುಚ್ಚುವವರು ಯಾರಾದರೂ ಇರಬಹುದೆಂದು ನನಗನಿಸುವದಿಲ್ಲ. ನನ್ನ ಸ್ವಭಾವದಲ್ಲಿಯೂ ಈ ತುಂಟತನ ಇಳಿದು ಬಂದಿದೆ ಎಂದು ಹೇಳುವವರಿದ್ದಾರೆ. ನನಗಂತೂ ಹಾಗೇನನಿಸುವದಿಲ್ಲ. ಆದರೆ ಹಾಗೆ ಬಂದೇ ಬಂದಿದ್ದರೆ ಅದಕ್ಕೆ ಹೊಣೆಗಾರ' ಚಿಕ್ಕಂದಿನಲ್ಲಿ ನಾನುಂಡ ಆ ಕಾರವಾರದ ಕುಚ್ಚಿಗೆಯುಕ್ಕಿಯ ಗಂಜಿ ಮತ್ತು ಬರಣಿಯಲ್ಲಿಯ ಉಪ್ಪಿನ ಮಾವಿನಕಾಯಿ ಆಗಿರಬೇಕು. ಆದರೆ ಆ ಕುಚೋದ್ಯತನದ ಹಿಂದೆ ಕಾರವಾರದ ಜನರ ಮನಸ್ಸಿನಲ್ಲಿ ಯಾರಿಗಾದರೂ ಕೆಡಕು ಬಗೆಯಬೇಕೆಂದೇನಿರುವದಿಲ್ಲ. ಯಾರಿಗಾದರೂ ಒಳಿತಾದರೆ, ಯಾರಿಗಾದರೂ ಪ್ರಮೋಶನ್ ಸಿಕ್ಕಿದರೆ ಸಂತೆ ಪೇಟೆಯಿಂದ ಬರುವ ಪ್ರತಿಯೊಬ್ಬ ಮುದುಕನೂ 'ಆಯ್ತು! ಒಳ್ಳೇದಾಯ್ತು ಬಿಡಿ, ಮಹಾಮಾಯಿ ಪ್ರಸನ್ನಳಾದಳು'. ಎಂದೇ ಹೇಳವರು. ಅನೇಕ ಪ್ರಕಾರದ ಕಾಯಿಪಲ್ಯಗಳನ್ನು ಒಟ್ಟಿಗೆ ಮಾಡಿ ತಯಾರಿಸಿದ 'ಖತಖತೆ' ಎಂಬ ಪಲ್ಯವನ್ನು ಬೇಯಿಸುತ್ತ ಯಾರೊಬ್ಬ ತುಳಸಕ್ಕ 'ಆಗಲಿ ಬಿಡಿ, ಭಾಗ್ಯಕ್ಕಳ ಮಕ್ಕಳೆಲ್ಲ ಒಳ್ಳೆಯ ಸ್ಥಿತಿಗೆ ಮುಟ್ಟಿದರೆನ್ನಿ! ಬಡವಳು ಗಂಜಿಯ ಮೇಲೆಯೇ ಅವರನ್ನು ಬೆಳೆಯಿಸಿದಳು. ಪಾಪ.' ಎಂದು ಮರುಗುವಳು.

ಮತ್ತೊಂದು ಮಾತು. ಕಾರವಾರದಲ್ಲಿಯೇ ಏಕೆಂತೆ? ನಮ್ಮ ಇಡಿಯ ಕೊಂಕಣದಲ್ಲಿಯೇ ನನಗೆ ಅತ್ಯಂತ ಇಷ್ಟವೆಂದರೆ ನಮ್ಮ ಏಕವಚನ! ನಾವು ಕೇವಲ ನಮ್ಮ ಸ್ವಾಮಿಗಳವರನ್ನೇ ಬಹುವಚನದಲ್ಲಿ ಸಂಬೋಧಿಸುತ್ತೇವೆ. ಅವಷ್ಟನ್ನು ಬಿಟ್ಟರೆ, ಯಾರ ಮಗ ದೊಡ್ಡ ಕಲೆಕ್ಟರ್ ಆಗಿ ಬಂದರೂ ಮ್ಹಾಮಾಯೆಯ ಗುಡಿಯಲ್ಲಿಯ ಮುರಾರಿ ಬಜಂತ್ರಿಯೂ ಅವನನ್ನು ನೋಡಿ ಬಾರಿಸುವದನ್ನು ಮಧ್ಯೆಯೇ ನಿಲ್ಲಿಸಿ ಅವನಿಗೆ ಅನ್ನುವನು, 'ಬಾ ಮಗನೇ, ಘನುಮಾಮಾನ ರುದ್ರಾ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಲ್ಲವೇ ನೀನು? ಕಲೆಕ್ಟರ್ ಆದಿಯಾ? ಒಳ್ಳೆಯದಾಯ್ತು!

ಈ ಪ್ರೀತಿ-ಕೌತುಕ ನನ್ನ ಚಿಕ್ಕಂದಿನಲ್ಲಿ ಕಾರವಾರದಲ್ಲಿ ನನ್ನ ಪಾಲಿಗೆ ತುಂಬ ಬಂತು. ಕಾರವಾರದ ಸರಸ್ವತ್ಯಕ್ಕ, ಆವಡಕ್ಕ, ಅಂತೂಬಾಬ್, ಮಂಗೇಷಮಾವ್ ಅವರು ಅದನ್ನು ಕೊಟ್ಟರು. ಸುರೀಪಾರ್ಕ್‌ವು ಕೊಟ್ಟಿತು. ಸಮುದ್ರದಂಡೆಯು ಕೊಟ್ಟಿತು. ಹಾಗೆಯೇ ಕಾರವಾರ ಸದಾಶಿವಗಡದ ಮುರಲೀಧರನೂ, ಮ್ಹಾಮಾಯೆಯೂ ಕೊಟ್ಟರು. ಅದಕ್ಕಾಗಿಯೇ ಇಂದಿಗೂ ಯಾರದಾದರೂ ಮುಖದಿಂದ ಕಾರವಾರವೆಂದು ಕೇಳಿದರೆ, ಇಲ್ಲವೆ 'ಕಾರವಾರ' ಎಂಬ ಅಕ್ಷರಗಳನ್ನು ಓದಿದರೆ ಕೂಡ ನಾನು ಎಷ್ಟೋ ಚಿಕ್ಕವನಾಗುತ್ತೇನೆ. ಮತ್ತು ತಪ್ಪಿನನ್ನ ಮುಖದಿಂದ ಬಂದೇ ಬಿಡುತ್ತದೆ. ' ಬಾಪ್ಪಾ, ನನಗೊಂದು ಕತೆಯನ್ನು ಹೇಳುತ್ತಿಯಾ?'

ನನ್ನನ್ನು ಇಷ್ಟು ಸಣ್ಣವನನ್ನಾಗಿ ಮಾಡುವ ಶಕ್ತಿ ಕಾರವಾರ ಬಿಟ್ಟರೆ ಇನ್ನಾವ ಅಕ್ಷರಗಳಲ್ಲಿಯೂ ಇಲ್ಲ.

(೧೯೬೦ರಲ್ಲಿ ಪ್ರಕಾಶಿತವಾದ 'ಸ್ವಾತಿ' ಎಂಬ ಪ್ರಾತಿನಿಧಿಕ ಕೊಂಕಣಿ ಲೇಖನ ಸಂಗ್ರಹದಲ್ಲಿಯ ಲೇಖನದ ಅನುವಾದ)

ಲೇ.-ಪು.ಲ. ದೇಶಪಾಂಡೆ
ಅನುವಾದ: ಆನಂದವರ್ಟಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಗೀತದಲ್ಲಿ ವಾಸಿಸುವ ಒಂದು ವ್ಯಕ್ತಿ.

ಮಲ್ಲಿಕಾರ್ಜುನ ಮನ್ಸೂರರು ಸಂಗೀತದಲ್ಲಿ ವಾಸಿಸುತ್ತಿರುವ ಮನುಷ್ಯರು. ಹಾಗೆ ಅವರ ಅಂಚೆಯ ವಿಳಾಸ, ''ಮೃತ್ಯುಂಜಯ ನಿವಾಸ, ಧಾರವಾಡ'' ಎಂದಿದೆ. ಆದರೆ ಅಣ್ಣನ ವಾಸ್ತವ್ಯ ಸಂಗೀತದಲ್ಲಿ. ಬೆಳಿಗ್ಗೆ ಅವರು ತೋಡಿ, ಆಸಾವರಿಯಲ್ಲಿ ಇದ್ದರೆ, ಮಧ್ಯಾಹ್ನದಲ್ಲಿ ಸಾರಂಗದ ಛಾಯೆಯಲ್ಲಿರುತ್ತಾರೆ. ಸಾಯಂಕಾಲ ಪೂರಿಯಾ, ಮಾರವಾಗಳ ದಂಡೆಯ ಮೇಲೆ ಬಂದು ಕುಳಿತಿರುತ್ತಾರೆ. ರಾತ್ರಿ, ಯಮನ, ಭೂಪ - ಬಾಗೇಶ್ರೀಗಳ ಮಹಡಿಯ ಮೇಲಿರುತ್ತಾರೆ.

ಅಣ್ಣನವರು, ಹೆಂಡತಿ, ಐದಾರು ವಿವಾಹಿತ, ಅವಿವಾಹಿತ ಹೆಣ್ಣುಮಕ್ಕಳು, ಒಬ್ಬ ಮಗ-ಸೊಸೆ, ಬಂಧು-ಬಳಗ ಹೀಗೆ ತಮ್ಮ ಪರಿವಾರವನ್ನು ಸಂಭಾಳಿಸುವ ಗೃಹಸ್ಥರೂ ಅಹುದು. ತಮ್ಮ ಆಯುಷ್ಯದ ಗಳಿಕೆಯಿಂದ ಧಾರವಾಡದಲ್ಲಿ ಒಂದು ಚಿಕ್ಕದಾದ 'ಬಂಗಲೆ'ಯನ್ನೂ ಕಟ್ಟಿಸಿದ್ದಾರೆ. ಆದರೆ ಅದು ಒಬ್ಬ ಗಂಡ, ಅಪ್ಪ, ಅಜ್ಜ ಎಂಬ ಮಲ್ಲಿಕಾರ್ಜುನ ಮನ್ಸೂರರದು. ಆ ನೀಳವಾದ ಶರೀರದಲ್ಲಿ ಇನ್ನೊಬ್ಬ ಮಲ್ಲಿಕಾರ್ಜುನರು ಇರುತ್ತಾರೆ. ಅವರ ವಾಸ್ತವ್ಯ ಮಾತ್ರ ಸಂಗೀತದಲ್ಲಿ ಇರುತ್ತದೆ. ವಯಸ್ಸಿನ ಎಂಟೋ-ಒಂಭತ್ತನೆಯ ವರುಷದಲ್ಲಿ ಅವರು ಅಲ್ಲಿ ಬಂದು ಕುಳಿತುಬಿಟ್ಟಿದ್ದಾರೆ. ಅಂದಿನಿಂದ, ಇಂದು ವಯಸ್ಸಿನ ಅರವತ್ತೊಂದರಲ್ಲೂ ಅಲ್ಲಿಯ ಅವರ ಸಂಗೀತ ಸಭೆ ಅವ್ಯಾಹತವಾಗಿ ನಡೆದುಕೊಂಡು ಬಂದಿದೆ. ಆ ಸಂಗೀತ ಸಭೆಗೆ 'ಬಾಡಿಗೆಯ ಹಾಲ್' ಬೇಕಾಗಿಲ್ಲ. ಮ್ಯೂಜಿಕ್ ಸರ್ಕಲ್ ಕಾರ್ಯದರ್ಶಿಯ ಆಮಂತ್ರಣವೂ ಬೇಡ. ಜೊತೆಗಾರ ಪೇಟಿ-ತಬಲಜೀಗಳೂ ಬೇಡ. ಎದುರಿಗೆ ಕೇಳಲು ಕೂಡ ಯಾರೂ ಬೇಡ. ಆ ಸಂಗೀತ ಸಭೆ ನಡೆದಿದೆ ಎಂಬುದಕ್ಕೆ ಸಾಕ್ಷಿಯಾಗಿ ಅವರ ಮಧ್ಯ ಅಣ್ಣ ಮಾತನಾಡುತ್ತಾರೆ, ಕೇಳುತ್ತಾರೆ, ನೋಡುತ್ತಾರೆ. ಆದರೆ ಸಂಪೂರ್ಣವಾಗಿ ಮಾತನಾಡುತ್ತಿರುವುದಿಲ್ಲ, ಕೇಳುತ್ತಿರುವುದಿಲ್ಲ, ನೋಡುತ್ತಿರುವುದಿಲ್ಲ. ಆ ವ್ಯಕ್ತಿ ಎಲ್ಲಿಯೋ ಅರ್ಧ ಕಳೆದುಕೊಂಡು ಬಿಟ್ಟಿರುತ್ತಾರೆ. ಅವರ ಕಣ್ಣುಗಳು ಯಾವುದೋ ರಾಗದ ಸ್ವರವನ್ನು ನೋಡುತ್ತಿರುತ್ತವೆ. ಬಹಳ ದಿನಗಳ ಅನಂತರ ಭೆಟ್ಟಿಯಾದ 'ಚೀಜ'ದ ಆನಂದದಲ್ಲಿ ಹೊಳೆಯುತ್ತಿರುತ್ತವೆ. ಆಗ ಸ್ವರ ಜಗತ್ತಿನ ಇನ್ನೊಬ್ಬ ಯಾತ್ರಿಕ ಭೆಟ್ಟಿಯಾದರೆ, ಮಾತನಾಡುತ್ತ -ಆಡುತ್ತ ತಟ್ಟನೆ ' ಈ ಬಂದಿಶ್ ನೋಡಿ' ಎಂದು ಹೇಳಿ ವ್ಯಾವಹಾರಿಕ ಜಗತ್ತಿನಿಂದ ಆ ಸ್ವರ - ಜಗತ್ತಿಗೆ ತೆಗೆದುಕೊಂಡು ಹೋಗುತ್ತಾರೆ. ಆಗ ಗಡಿಯಾರದ ಮುಳ್ಳುಗಳು ನಿಂತುಬಿಡುತ್ತವೆ. ಭೂಮಂಡಲದ ಪಂಚೇಂದ್ರಿಯಗಳಿಗೆ ಸಂಬಂಧಿಸಿದ ವಾತಾವರಣ ಮರೆತು ಹೋಗುತ್ತದೆ. ಆಗ ಅಲ್ಲಿ ಕೇವಲ ಸ್ವರಲೀಲೆಯ ಅಪೂರ್ವದರ್ಶನ ಮಾತ್ರ ಘಟಿಸುತ್ತಿರುತ್ತದೆ.

ಪು.ಲ.ದೇಶಪಾಂಡೆ/೧೭೯

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಳೆದ ಮೂವತ್ತೈದು, ಮೂವತ್ತಾರು ವರುಷಗಳಿಂದ ನಾನು ಅವರ ಸಂಗೀತವನ್ನು ಕೇಳುತ್ತ ಬಂದಿರುವೆ. ಅವರ ಸಂಗೀತದಷ್ಟೇ ನಾನು ಅವರ ಸಹವಾಸದ ಲೋಭಿಯೂ ಆಗಿದ್ದೇನೆ. ಸಂಗೀತದ ವಿಷಯದಲ್ಲಿ ಮನುಷ್ಯನ ಸಹಜ ಸ್ವಭಾವಗುಣವಾದ ಮುಂಜೋಲಿತನ ನನ್ನಲ್ಲಿ ಬಾಲ್ಯದಿಂದಲೂ ಬಂದಿದೆ. ಅದರಿಂದಾಗಿ ಶಾಲಾವಯದಲ್ಲಿ ಕೂಡ ನಾನು, ನನ್ನ ಗೆಳೆಯ ಶರೂ ರೇಡಕರನೊಂದಿಗೆ ಅವರ ಸಂಗೀತ ಬೈಠಕಿಗಳಿಗೆ ಹೋಗಿ ಮಾಳಿಗೆಯ ಮೇಲೆ ಕುಳಿತು ಕಿವಿ ಹಚ್ಚಿ ಕೇಳಿದ್ದೇನೆ. ದೇವರ ಪ್ರಸಾದದ ಹುಚ್ಚು ಇದ್ದರೆ, ಭಟ್ಟರ ಕೈಯ್ಯಲ್ಲಿಯ ತಟ್ಟೆಯವರೆಗೆ ಮುಖ ತೂರುವ ಕಲೆಯನ್ನು ಕಲಿಯಬೇಕಾಗುತ್ತದೆ. ನಾಲ್ಕು ಜನ 'ಲೇ ಲೇ' ಎಂದು ಕೂಗಿದರೂ ಕೂಡ ಅದನ್ನು ಮನಸ್ಸಿಗೆ ಹಚ್ಚಿಕೊಳ್ಳಬಾರದು. ಸಂಗೀತ ಸಭೆಗಳಲ್ಲಿ ಎಲ್ಲರಿಗಿಂತ ಮುಂದಿನ ಸ್ಥಳ ಹಿಡಿಯಲು ಎಲ್ಲ ಟ್ರಿಕ್ಕುಗಳನ್ನೂ ಸಾಧಿಸಬೇಕಾಗುತ್ತದೆ. ಕುದುರೆಗಾಡಿಯಿಂದ ಇಳಿಯುವ 'ಬುವಾಜಿ'ಯ ತಂಬೂರಿಯನ್ನು ಎತ್ತಿ ವೇದಿಕೆಯ ವರೆಗೆ ತೆಗೆದುಕೊಂಡು ಹೋಗುವ ಕಲೆಯನ್ನು ಹಸ್ತಗತ ಮಾಡಿಕೊಳ್ಳದವನಿಗೆ ಸಂಗೀತದಲ್ಲಿ ಮುಳುಗುವ ಮೊದಲನೆಯ ಜಗಿತವೇ ಬಂದಿರುವುದಿಲ್ಲ. ಈ ಸ್ವಯಂಸೇವಕತನವನ್ನು ನಾನು, ಅನೇಕ ಸಂಗೀತಗಾರರಲ್ಲಿ ಮಾಡಿ ಭಾರತೀಯ ಸಂಗೀತದ ಚಾಕರಿಯನ್ನು ಮಾಡಿದ್ದೇನೆ. ಅವುಗಳಲ್ಲಿ ಅಣ್ಣಾನ ಸೇವೆ ಬಹಳಸಲ ಘಟಿಸಿದೆಯೆಂದು ನನಗನಿಸುತ್ತದೆ. ಅವರ ಹಾಡಿಗೆ ಪೇಟಿಯ ಜೊತೆಕೊಟ್ಟು ಅವರ ಸೌಜನ್ಯದ ಪರೀಕ್ಷೆಯನ್ನೇ ಮಾಡಿದ್ದೇನೆ.

ತಂಬೂರಿಯೊಂದಿಗೆ ಒಳಗೆ ಹೋಗುವಲ್ಲಿ ಇನ್ನೂ ಒಂದು ಉದ್ದೇಶವಿರುತ್ತದೆ. ತಂಬೂರಿಯ ಸ್ವರವನ್ನು ಹೊಂದಿಸುವಾಗ ಅದನ್ನು ಕೇಳುತ್ತ ಕುಳಿತುಕೊಳ್ಳುವುದರಲ್ಲೂ ಒಂದು ದೊಡ್ಡ ಆನಂದವಿರುತ್ತದೆ. ತಂಬೂರಿಯ ಸ್ವರವನ್ನು ಹೊಂದಿಸುವಾಗ ಜನರು ಹರಟೆಹೊಡೆಯುತ್ತ ಕುಳಿತುಕೊಳ್ಳುವವರನ್ನು ಕಂಡರೆ ನನಗೆ ಸಿಟ್ಟು ಬರುತ್ತದೆ. ಸ್ವರ ಸಂಯೋಜನೆಯಲ್ಲಿಯ ತಂಬೂರಿಯ ನಾದವನ್ನು ಕೇಳುವುದೆಂದರೆ, ಪ್ರಸಾಧನದಲ್ಲಿ ತಾದಾತ್ಮ್ಯ ಹೊಂದಿದ ಯುವತಿಯನ್ನು ನೋಡುವ ಆಹ್ಲಾದವಿದೆ. ಬರಿಕಿವಿಯ ಹಾಲೆಯಲ್ಲಿ ಮುತ್ತಿನ ಓಲೆಯನ್ನು ಹಾಕಿಕೊಂಡಾಗ ಬದಲಾಗುವ ದೃಶ್ಯದಂತೆ ಮಂದ ಸ್ವರದ ತಂಬೂರಿಯ ತಂತಿಗಳನ್ನು ಹೊಂದಿಸಿ ಮೀಟಿದಾಗ ಉಂಟಾಗುತ್ತದೆ. ಆಗ ಆ ಸ್ವರ, ಗಾಯಕನ ಕಂಠದಿಂದ ಯಾವಾಗ ಒಮ್ಮೆ ಬಂದೀತೆಂಬ ಉತ್ಕಟ ಇಚ್ಛೆಯಾಗುತ್ತದೆ. ಪ್ರಸಾಧನ ಮುಗಿದ ನಂತರ ಆ ಸುಂದರ ಸ್ತ್ರೀ ನಮ್ಮತ್ತ ನೋಡಿ ಪ್ರಸನ್ನ ನಗುವಿನ ಕೃಪೆಯನ್ನು ಯಾವಾಗ ಮಾಡಿಯಾಳು ಎಂಬ ಆತುರತೆಯಂತೆಯೇ ಈ ಪ್ರಥಮ ಷಡ್ಜ ಮಿಲನದ ಉತ್ಸುಕತೆಯಿರುತ್ತದೆ! ಆ ಮೊದಲು ಷಡ್ಜದಲ್ಲಿಯೇ ಯುವತಿಯ ಪ್ರಥಮ ನಗುವಿನಂತೆ, ಎದುರಿನ ಜನರನ್ನು ಗೆಲ್ಲುವ ಸಾಮರ್ಥ್ಯವಿರುತ್ತದೆ. ಬೇಗಂ ಅಖ್ತಾರಳ ಸಂಗೀತವನ್ನು ಕೇಳಲು ನಮ್ಮ ರಾಮೂ ಭಯ್ಯಾ ಹೋಗಿದ್ದ. ಪ್ರಥಮ ಷಡ್ಜ ಕಿವಿಯಲ್ಲಿ ಬೀಳುತ್ತಿದ್ದಂತೆಯೇ 'ಆಯ್ತು! ಮುಟ್ಟಿತು!!' ಎಂದು ಉದ್ಗಾರ ತೆಗೆದಿದ್ದ. ಅಂದರೆ ಹತ್ತಿರವಿದ್ದ ಪ್ರತಿಕ್ರಿಯೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಿಸುವ ಒಂದಿಷ್ಟು ಮೌಲ್ಯ ಆ ಮೊದಲ ಷಡ್ಜದಲ್ಲಿಯೇ ಮುಗಿದುಹೋಗಿತ್ತು. ಇನ್ನುಳಿದ ಆನಂದದ ಋಣದ ಪ್ರತಿಯಾಗಿ ಪ್ರತಿಕ್ರಿಯೆ ಅಭಿವ್ಯಕ್ತ ಪಡಿಸಲು ಹತ್ತಿರ ಏನೂ ಉಳಿದಿರಲಿಲ್ಲ. ಮುಂದಿನ ಸಂಗೀತವೆಲ್ಲ ಋಣದ ಭಾರವೇ!

ಹೀಗೆ ಮೊದಲ ಷಡ್ಜದಲ್ಲಿಯೇ ನಮ್ಮನ್ನು ಋಣಿಗಳನ್ನಾಗಿ ಮಾಡಿ ತಮ್ಮ ಎದುರಿಗೆ ಕುಳ್ಳಿರಿಸಿಕೊಳ್ಳುತ್ತಾರೆಯೋ ಅಂಥ ಶ್ರೇಷ್ಠ ಗಾಯಕರಲ್ಲಿ ಮಲ್ಲಿಕಾರ್ಜುನ ಮನ್ಸೂರರು ಒಬ್ಬರಾಗಿದ್ದಾರೆ. ವಜ್ರದಂಥ ಷಡ್ಜದಲ್ಲಿ ಕೂಡಿಕೊಳ್ಳುವ ಅವರ ಆ ಪ್ರಥಮ ಷಡ್ಜವನ್ನು ಕೇಳುವ ಸೌಭಾಗ್ಯ ಕಳೆದ ಮೂವತ್ತೈದು -ಮೂವತ್ತಾರು ವರುಷಗಳಿಂದ ನನಗೆ ಲಭಿಸಿದೆ. ಆ ಷಡ್ಜವು ಸಂತತವಾಗಿ ಅವರ ಹೃದ್ವೀಣೆಯನ್ನು ನುಡಿಸುತ್ತಿರುತ್ತದೆ. ಹೆಚ್ಚೇನು? ಆ ವೀಣೆ ಎಂದರೆಯೇ ಮಲ್ಲಿಕಾರ್ಜುನ ಮನ್ಸೂರರು.

ಆ ಸಭೆಗೆ ಮತ್ತೆ ಯಾವ ತರದ ಅವಶ್ಯಕತೆಗಳೂ ಬೀಳುವುದಿಲ್ಲ. ಕಳೆದ ಎಷ್ಟೋ ವರುಷಗಳ ಪರಿಚಯದಲ್ಲಿ ನಾನು ಅವರ ಸಂಗೀತವನ್ನು ಎಲ್ಲೆಲ್ಲಿ ಕೇಳಿದ್ದೇನೆಂದು ನೆನೆಸಿಕೊಂಡರೆ, ಅಂದರೆ ಮತ್ತೆ-ಮತ್ತೆ ಅದನ್ನೇ ಹೇಳಬೇಕಾಗುತ್ತದೆ. ಮಲ್ಲಿಕಾರ್ಜುನ ಮನ್ಸೂರರೆಂದರೆ ಕೇವಲ ಸಂಗೀತದಲ್ಲಿ ಇರುವ ಮನುಷ್ಯ. ಮತ್ತೆ ಯಾರೂ ಹೀಗಿಲ್ಲ. ಬಹಳ ವರುಷಗಳಿಂದ ಹಿಂದೆ, ಅಂದರೆ ಮುಂಬಯಿಯಲ್ಲಿ ಆಗ ಒಂದು ಆಣೆಗೆ, ಅಂದರೆ ಇಂದಿನ ಐದು ಪೈಸೆಗಳಿಗೆ ಒಂದು ಅಖಂಡ 'ರಾಯಿಸ್ ಪ್ಲೇಟ' ಜೊತೆಗೆ ಒಂದು ಬಟ್ಟಲು ಮಜ್ಜಿಗೆ ಹಾಗೂ ಹಪ್ಪಳ ಕೂಡ ದೊರೆಯುತ್ತಿತ್ತು. ಆ ದಿನಗಳಲ್ಲಿಯ ಕಥೆ. ಮುಂಬಯಿಯ ಝೂವಬಾವಾಡಿಯ ಚಕ್ರವ್ಯೂಹದಂಥ ಒಂದ 'ಚಾಳ'ದಲ್ಲಿ ರಾಯಕರ ಎಂಬ ಹೆಸರಿನ ಅಣ್ಣಾನ ಸ್ನೇಹಿತ ಇರುತ್ತಿದ್ದ. ಎಂಟು ಗುಣಿಲೆ ಎಂಟು ಇದಕ್ಕಿಂತ ಒಂದಿಂಚು ಕೂಡ ಹೆಚ್ಚಿನ ಸ್ಥಳವಿರದ ಕೋಣೆಯಲ್ಲಿ ರಾಯಕರ ಅವರ 'ಬ್ರಹ್ಮಚರ್ಯಾಶ್ರಮ' ವಿತ್ತು. ಅಲ್ಲಿ ಸಂಗೀತ ಸಭೆಯನ್ನು ನಡೆಸುವುದೆಂದಾದರೆ, ಇಬ್ಬರು ತಂಬೂರಿಯನ್ನು ಹಿಡಿಯುವವರ ಮಧ್ಯ ಗಾಯಕ ಹಾಗೂ ಎದುರಿಗೆ ಪೇಟಿಯವನು ಕುಳಿತುಕೊಳ್ಳುತ್ತಾನೆ. ತಬಲಾದವನು ಹೊರಗೆ ಗ್ಯಾಲರಿಯಲ್ಲಿ ಕುಳಿತು 'ಠೇಕೆ' ಹಾಕುವುದಲ್ಲದೆ ತನ್ನ ತಬಲಾಗಳನ್ನು ಹೋಗುಬರುವವರ ಪಾದ ಸ್ಪರ್ಶದಿಂದ ಸಂಭಾಳಿಸುವ ಜವಾಬ್ದಾರಿಯೂ ಇರುವಂಥ ದಿವಾಣಖಾನೆ ಅದಾಗಿತ್ತು. ಅಂದು ಬೆಳಗಿನ ಸಮಯವಾಗಿತ್ತು. ಆ ಕೋಣೆಯಲ್ಲಿ ಒಂದು ಬಚ್ಚಲವೂ ಇತ್ತು. ಹಳೆಯ 'ಚಾಳ'ಗಳಲ್ಲಿ ಇವು ವಿಶಿಷ್ಟ ಅಟ್ಯಾಚ್ಡ ಬಾಥ ರೂಮ್ಸ ! ಕಿಂಬಹುನಾ ಉಳಿದ ಕೋಣೆಯೇ ಆ ಬಚ್ಚಲಕ್ಕೆ ಅಟ್ಯಾಚ್ಡ! ಅದರಲ್ಲಿ ಕುಳಿತು ಅಣ್ಣಾನ ಸ್ನಾನ ನಡೆದಿತ್ತು. ಮೂಲೆಯಲ್ಲಿ ತಂಬೂರಿ ಬೆತ್ತಲೆಯಾಗಿ ನಿಂತಿತ್ತು. ಒಳಗೆ ಬಂದ ಅತಿಥಿಯ ಬೆರಳುಗಳು ಚಡಪಡಿಸಿದುವು. ಚಟ ಎಂಬಂತೆ ತಂತಿಗಳನ್ನು ಮೀಟಿದ.

'ಹೂಂ ! ಆಗಲಿ ... ಆಗಲಿ...' ಎಂದು ಬಚ್ಚಲದಿಂದಲೇ ಅಣ್ಣಾ ಹೇಳಿದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ಆಗಲಿ...' ಎಂದ ಮೇಲೆ ಮತ್ತೇನು ಬೇಕು? ತಂಬೂರಿಯಲ್ಲಿ ಹುದುಗಿದ ಷಡ್ಜ ಪಂಚಮವು ಕೋಣೆಯನ್ನೆಲ್ಲ ವ್ಯಾಪಿಸಿತು. ಬಚ್ಚಲದಲ್ಲಿ ಗವಯಿಗಳು ತೋಡಿಯನ್ನು ಪ್ರಾರಂಭಿಸಿದರು. ಬಕೆಟ್ಟಿನಲ್ಲಿಯ ನೀರು ಮುಗಿಯಿತು. ಮೈಮೇಲಿನ ನೆನೆದ ವಸ್ತ್ರ ಕೂಡ ಒಣಗಿರಬೇಕು. ಆದರೆ, ದೇವಮಂದಿರದ ಗರ್ಭಗುಡಿಯಲ್ಲಿ ತುಂಬಿದ ಅಭಿಷೇಕದ ನೀರಿನಂತೆ 'ತೋಡಿ'ಯ ನೀರಿನಿಂದ ಇಡೀ ಕೋಣೆಯು ತುಂಬಿ ತುಳುಕುತ್ತಿತ್ತು. ಅದರ ಹಿಂದಿನ ರಾತ್ರಿಯೇ ಗಿರಗಾಂವದಲ್ಲಿಯ ಅಂಬೇವಾಡಿಯ ಗಣೇಶೋತ್ಸವದಲ್ಲಿ ಹಾಡಿದ ಭೈರವಿರಾಗದಲ್ಲಿಯ 'ಮತ ಜಾ ಜೋಗಿ' ಎಂಬ ಮೀರಾಬಾಯಿಯ ಗೀತದ ನಾದವು ಅವರ ಶರೀರವನ್ನೆಲ್ಲ ವ್ಯಾಪಿಸಿರಬೇಕು. ನಸುಕಿನಲ್ಲಿ ಅಲ್ಲಿಂದ ಬಂದು ಹಾಸಿಗೆಗೆ ಬೆನ್ನು ಹಚ್ಚುವಾಗ 'ತೋಡಿ' ಬಂದು ಯಾವಾಗಲೋ- ಇವರನ್ನು ಸೇರಿಕೊಂಡಿರಬೇಕು. ಅದು ಅಲ್ಲಿಯೇ ತಿರುಗಾಡುತ್ತಿತ್ತೇನೋ. ತಂಬೂರಿಯ ಕೀಲಿ ಹತ್ತುವುದೊಂದೇ ತಡ, ಮನದ ಕವಾಟಗಳನ್ನು ತೆರೆದು ತೋಡಿ ಹೊರಬಿದ್ದಿತ್ತು. ಆ ದರಿದ್ರ ಬಚ್ಚಲ-ಕೋಣೆಗಳ ದೈವ! ಸ್ವರಮಂದಿರವಾಗಿದ್ದುವು. ನೆನೆದ ಮೈಯ್ಯ ನೆನಪು ಹಾರಿ ಹೋಗಿತ್ತು. 'ಲಂಗರ ಕಾ ಕರಿಯಾ' ದ ಸ್ವರ ಬಳ್ಳಿಯ ಉಗಮವಾಗಿತ್ತು. ನೀರಿನಿಂದ ನೆನೆದ ಮೈಯ್ಯಂತೆ ಅಲ್ಲಿದ್ದ ಕೈಚೆರಳೆಣಿಕೆಯ ಇಬ್ಬರು ಮೂವರು ಆ ಆರ್ದ್ರ ತೋಡಿಯಿಂದ ಒಳಹೊರಗೆಲ್ಲ ನೆನೆದುಹೋಗಿದ್ದರು !

ಬಹಳಷ್ಟು ಗವಯಿಗಳು ಹಾಡುತ್ತಾರೆ. ಸಿದ್ಧತೆಯಿಂದ ಹಾಡುತ್ತಾರೆ. ಆದರೆ ಅವರ ಕಂಠದಲ್ಲಿಯ ಸ್ವರ ನೆನೆದಿರುವುದಿಲ್ಲ. ಅಂಥ ಸ್ವರ ರಸಿಕನಿಗೆ ಸ್ವರಪಾನದ ಆನಂದವನ್ನು ಕೊಡುವುದಿಲ್ಲ. 'ದಯಾ ಛಾಯಾ ಘೇ' ಎಂದು ಬಾಲಗಂಧರ್ವರು ಹಾಡುವಾಗ ಹೃದಯ ನೀರಾಗುವುದು ಆ ಸ್ವರದಲ್ಲಿಯ ಆರ್ದ್ರತೆಯಿಂದ - ಆ ಆರ್ಜವದಿಂದ. ಇಂಥ ಗಾಯಕರು ಕೇಳುಗರ ಮನೋಭೂಮಿಯಮೇಲೆ ಸ್ವರವನ್ನು ಸಿಂಪಡಿಸಿ ಹೋಗುತ್ತಾರೆ! ಯಾವುದೇ ದಾನದಲ್ಲಿ ಈ ನೆನೆಯುವಿಕೆಗೆ ತುಂಬ ಮಹತ್ವ ಇದೆ. ಅಂತೆಯೇ ದಕ್ಷಿಣೆಯನ್ನು ಕೊಡುವಾಗಲೂ ಕೂಡ ನಾಣ್ಯದ ಮೇಲೆ ನೀರನ್ನು ಸಿಂಪಡಿಸಿ ಕೊಡುವ ಪದ್ಧತಿ ಬಿದ್ದಿರಬೇಕು. ಸ್ವರದ ನೆನೆತ - ಅಣ್ಣನ ಸ್ವರದ ಲಾಕ್ಷಣಿಕ ವೈಶಿಷ್ಟ್ಯವಾಗಿದೆ. ಅವರು ಸ್ವರ ಭಾಂಡಾರವನ್ನು ಪಡೆದ ಗಾಯಕರಾಗಿದ್ದಾರೆ. ಅಣ್ಣನ ಹತ್ತಿರ ಸ್ವರಗಳ ಝರಿಗಳೇ ಇವೆ. ಅವು ಯಾವಾಗಲೂ ಹರಿಯುತ್ತಲೇ ಇರುತ್ತವೆ.

ಅವರ ಇಂಥದೇ ಒಂದು ತೋಡಿಯ ನೆನಪು ನನಗೆ ಯಾವಾಗಲೂ ಬರುತ್ತದೆ. ಪುಣೆಯ ಕೇಶವರಾವ ಭೋಳೆ ಅವರ ಮನೆಯಲ್ಲಿ ಬೆಳಿಗ್ಗೆ ಕೂಡುವುದೆಂದು ನಿರ್ಧರಿಸಿತ್ತು. 'ನೀವು. ಅಂದರೆ, ಕೇವಲ ನೀವೊಬ್ಬರೇ' ಎಂದು ಕೇಶರಾವ ಅವರು ಹತ್ತಿಪ್ಪತ್ತು ಜನರಿಗೆ ಹೇಳಿ ಆಮಂತ್ರಣ ಕೊಟ್ಟಿದ್ದರು. ಅದರಲ್ಲಿ ನನ್ನ ಹೆಸರೂ ಇತ್ತು. ನಾನು ಗೇಟಿನ ಹತ್ತಿರ ಗಾಯಕರ ಟಾಂಗಾದ ದಾರಿಯನ್ನು ನೋಡುತ್ತ ನಿಂತಿದ್ದೆ. ಆ ಕಾಲದಲ್ಲಿ ಆಟೋರಿಕ್ಷಾ ಎಂದು ಹೆಸರಿನ ಮೈಮೇಲೆ ಬರುವ ವಾಹನ ಬಂದಿರಲಿಲ್ಲ! ಮಂದ.ಉಯದಲ್ಲಿ ಕುದುರೆಗಳ ಖುರಪುಟಗಳ ಮಾತ್ರೆಗಳನ್ನು ಎಣಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸುವ ಸವಲತ್ತಿನ ಕುದುರೆಯ ಗಾಡಿಗಳೇ ಇದ್ದುವು. ಆ ಕುದುರೆ ಗಾಡಿಗಳಲ್ಲಿ ಕುಳಿತಾಗ ನಮ್ಮಂಥವರ ಮನಸ್ಸಿನಲ್ಲೂ ಸಂಗೀತ ಎಚ್ಚರಗೊಳ್ಳುತ್ತಿತ್ತು! ಗವಯಿಗಳು ಆ ಲಯವನ್ನೇ ಹಿಡಿದು ಮೈಯ್ಯಲ್ಲಿ 'ತೋಡಿ' ಬಂದವರಂತೆ ಜೋಲಿ ಹೊಡೆಯುತ್ತಲೇ ಬಂದರು. ಒಳಗಡೆಗೆ ತಂಬೂರಿಯನ್ನು ಹೊಂದಿಸಿಯಾಗಿತ್ತು. ತಬಲಾ ಕೂಡ ಹತ್ತಿತ್ತು. ಕೇಶವರಾಯರು ಇಂಥದಕ್ಕೆಲ್ಲ ದಕ್ಷರು. ಸಂಗೀತಗಾರರನ್ನು ಮತ್ತು ಅವರು ಅಂದು ಹಾಡುವ ರಾಗವನ್ನು ನಿರ್ಧರಿಸುವಾಗಲೇ ಯಾವ ಸ್ವರದ ತಂಬೂರಿಯನ್ನು ಹೊಂದಿಸಬೇಕು ಎಂಬುದನ್ನು ವಿಚಾರಿಸಿ, ಹೊಂದಿಸಿಯೇ ಇಟ್ಟಿರುತ್ತಿದ್ದರು. ಅಷ್ಟೇ ಅಲ್ಲ, ತಂಬೂರಿಯವರನ್ನು ಆ ಸಿದ್ಧ ಸ್ಥಿತಿಯಲ್ಲಿಯೇ ಕುಳ್ಳಿರಿಸಿರುತ್ತಿದ್ದರು! ತಬಲಜಿಯ ಬೀಡಿ-ಎಲೆ ಅಡಿಕೆಗಳ ಸಮಾರಾಧನೆಯನ್ನು ಮೊದಲೆಯೇ ಮುಗಿಸಿರುತ್ತಿದ್ದರು. ಗಾಯಕರು ಒಳಬರುವುದೊಂದೇ ತಡ, ಎರಡೂ ತಂಬೂರಿಗಳ ಮಧ್ಯದಲ್ಲಿ ಕುಳಿತರು. ಹಾಗೂ ಷಡ್ಜ ಕೋಮಲ ರಿಷಭ ಗಾಂಧಾರದ ಒತ್ತುಕೊಟ್ಟು ಅವರು 'ತೋಡಿ'ಯನ್ನು ಪ್ರಾರಂಭಿಸಿಯೇ ಬಿಟ್ಟರು. ವಿನಾಕಾರಣವಾಗಿ ನಮಸ್ಕಾರ ಚಮತ್ಕಾರಗಳ ಎಣ್ಣೆಯನ್ನು ಸುಡಲಿಲ್ಲ. 'ಏನ್ರೀ, ಹ್ಯಾಂಗಿದ್ದೀರೀ? ಜಳಗಾಂವದಾಗ ಭೆಟ್ಟಿ ಆದವರು ಆ ಮ್ಯಾಲ ಇವತ್ತು ಯೋಗ ಕೂಡಿ ಬಂತು ನೋಡ್ರಿ,' ಎಂಬಂಥ ಸಂಭಾಷಣೆಗಳೂ ಇಲ್ಲ, ಏನೇನೂ ಇಲ್ಲ. ಆ ದಿವಾಣಖಾನೆಯಲ್ಲಿ ಒಳಬಂದವರು ಮಲ್ಲಿಕಾರ್ಜುನ ಮನ್ಸೂರರಾಗಿರಲಿಲ್ಲ ಸಾಕ್ಷಾತ್ ತೋಡಿ ರಾಗವೇ ಆಗಿದ್ದರು!

ಅನಂತರ ಆ ಕೋಣೆಯಲ್ಲಿ ಗಂಟೆ - ಒಂದೂವರೆಗಂಟೆ ತೋಡಿಯ ಸಾಮ್ರಾಜ್ಯವಿತ್ತು. ಚೀಜ ಮುಗಿಯಿತು. ಶ್ರೋತೃಗಳಿಗೆ ಆಶ್ಚರ್ಯ! ನಿಮಿಷದ ಆ ಮೌನದ ಅನಂತರ ಕೇಶರಾವ ಹೇಳಿದರು. ''ಬುವಾಜಿ, ಈಗ ಹದಿನೈದು ನಿಮಿಷ ಸುಮ್ಮನೇ ಕೂಡ್ರಿ. ಈ ಕೋಣೆಯಲ್ಲಿಯ 'ತೋಡಿ' ಒಮ್ಮೆ ಪೂರ್ತಿಯಾಗಿ ಹೊರಗೆ ಹೋಗಲಿ!''

ಅಣ್ಣನ ಸಂಗೀತವನ್ನು ನಾನು, ಅವರ ಭರ್ತೀ ಹರೆಯದ ಇಪ್ಪತ್ತೈದರಲ್ಲೂ ಕೇಳಿರುವೆ. ನಾಲ್ವತ್ತರಲ್ಲೂ ಕೇಳಿರುವೆ. ಈಗ ಅವರ ಅರವತ್ತರಲ್ಲಿ (ಮತ್ತು ನನ್ನ ಐವತ್ತರಲ್ಲಿ)ಯೂ ಕೇಳುತ್ತಿರುವೆ. 'ಘೃಷ್ಟಂ, ಘೃಷ್ಟಂ ಚಂದನಂ ಚಾರುಗಂಧಮ್' ಅನ್ನುತ್ತಾರಲ್ಲ ಹಾಗೆ ಅವರ ಸಂಗೀತ ಬೆಳೆಯುತ್ತಿರುವ ವಯಸ್ಸಿನೊಂದಿಗೆ ಸುಂದರವಾಗಿ ಅರಳುತ್ತಿದೆ.! ತಂಬೂರಿ ಕೂಡುವುದೊಂದೇ ತಡ, ಗುಂಜನ ಪ್ರಾರಂಭ. ನಾಲ್ಕು ನಾಲ್ಕು ಐದೈದು ಗಂಟೆಗಳ ಸಭೆಯಲ್ಲಿ ಸ್ವರಗಳ ಆ ಗುಂಜನ. ಎಲ್ಲಿಯೂ ಹರಿದದ್ದಿಲ್ಲ. ನೀರಿನ ಬುಗ್ಗೆಯಂತೆ ಆ ಸ್ವರಗಳ ಲೀಲೆ ಧಾರಾಕಾರವಾಗಿ ನರ್ತಿಸುತ್ತಿರುತ್ತವೆ. ಕಡಿತವೆಂಬುದೇ ಇರುವುದಿಲ್ಲ. ಆ ನರ್ತನದಲ್ಲಿಯ ಶಕ್ತಿಯೂ ಕಡಿಮೆಯಾಗುವುದಿಲ್ಲ. ಪ್ರತಿಯಾಗಿ ವೃದ್ಧಿಯಾಗುತ್ತಿರುವ ತಪಸ್ಸಿನ ತೇಜದಿಂದ ಆ ನೀರಿಗೆ ಈಗ ತೀರ್ಥದ ಸ್ವರೂಪ ಲಭಿಸಿದೆ.

ಅಣ್ಣಾ, ಹಾಗೆ ಶಾಸ್ತ್ರೀಯ ಸಂಗೀತದಲ್ಲಿಯ ವ್ಯಾಕರಣ ಶುದ್ಧತೆಯನ್ನು ತುಂಬ ಮನ್ನಿಸುತ್ತಾರೆ. ಸಂಗೀತಗಾರರ ಮನೆತನದ ಪಾವಿತ್ರ್ಯವನ್ನು ಒಪ್ಪುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ಬಂದಿಶ್'ಗಳನ್ನು ಕಟ್ಟಿದ ಹಿರಿಯರನ್ನು ದೇವತಾ ಸಮಾನರಾಗಿ ಕಾಣಿಸುತ್ತಾರೆ. ಆದರೆ ಈ ಶ್ರದ್ಧೆ ವಿಲಕ್ಷಣ ದೃಷ್ಟಿಯದಾಗಿದೆ. ಆ ಹಳೆಯ ಬಂದಿಶ್‌ಗಳಲ್ಲಿಯ ಅಸಮಾನ್ಯ ಸ್ಥಳಗಳನ್ನು ಯಾವಾಗಲೂ ಹುಡುಕುತ್ತ ಕುಳಿತಿರುತ್ತಾರೆ. ಒಬ್ಬ ಪುರಾಣ ವಸ್ತು ಸಂಶೋಧಕನಿಗೆ ತನ್ನ ಹತ್ತಿರವೇ ಇದ್ದ ಪ್ರಾಚೀನ ಮೂರ್ತಿಯಲ್ಲಿ, ತನಗೆ ಲಕ್ಷ್ಯಕ್ಕೆ ಬರದ ಒಂದು ಅಲಂಕಾರವು ಅಕಸ್ಮಾತ್ತಾಗಿ ಗೋಚರಿಸಿದರೆ. ಅದರಿಂದ ತನ್ನ ಜ್ಞಾನದ ಕಕ್ಷೆಯನ್ನು ಇನ್ನಷ್ಟು ವಿಸ್ತರಿಸಿದಂತೆ ಅನಿಸುತ್ತದೆ !. ಹಾಗೆ ಅಣ್ಣನಿಗೆ ಆ ಬಂದಿಶ್‌ದಲ್ಲಿಯ ಒಂದು ವಿಶಿಷ್ಟ ಸಂಗತಿಯು ದೊರೆತಂತೆ ಆಗುತ್ತದೆ!. ''ಭೂಪರಾಗವನ್ನು ಹಾಡುವಾಗ ಯಾವುದೋ ಒಬ್ಬ ದೊಡ್ಡ ಗಾಯಕನಿಗೆ 'ಅರೆ, ನನ್ನನ್ನೂ ತುಸು ಒಳಗೆ ಕರೆದುಕೊಳ್ಳಿರಲ್ಲ' ಎಂಥ ವಿನಂತಿಸುವ ಶುದ್ಧ ಮಧ್ಯಮ ಕಂಡಿರಬೇಕು. ಅದಕ್ಕೆ ಆತ 'ಆಗಲಿ' ಎಂದು ತುಸು ಸ್ಥಳ ಕೊಟ್ಟಿರಬೇಕು!'' ಎಂದು ಕುಮಾರ ಗಂಧರ್ವರು ಶುದ್ಧ ಕಲ್ಯಾಣದ ಕುರಿತು ಹೇಳುವಾಗ ಒಂದು ಸಲ ಅಂದಿದ್ದರು. ಅದರಂತೆ ಅಣ್ಣ ಕೂಡ ಚೀಜಗಳಲ್ಲಿ ಸಂಕೋಚದಿಂದ ಓಂದೆ ಉಳಿದಿದ್ದ ಸೌಂದರ್ಯವನ್ನು ಅವರು ಆವಾಹನೆ ಮಾಡುತ್ತಾರೆ.

ನನ್ನ ಶಿಲ್ಪಕಾರ ಮಿತ್ರ, ಶರ್ವರಿ ರಾಯಚೌಧರಿ ಅವರು ಮಲ್ಲಿಕಾರ್ಜುನ ಮನ್ಸೂರರ ಸಂಗೀತವನ್ನು ತುಂಬಿ ಮೆಚ್ಚುತ್ತಾರೆ. ಅವರನ್ನು ಕರೆದುಕೊಂಡು ನಾನೊಮ್ಮೆ ಧಾರವಾಡಕ್ಕೆ ಹೋಗಿದ್ದೆ. ಎರಡು ಮೂರು ದಿನ ನಮ್ಮ ವಾಸ್ತವ್ಯ ಅಣ್ಣನವರ ಮನೆಯಲ್ಲಿಯೇ ಆಗಿತ್ತು. ಒಂದು ದಿನ ಮಧ್ಯಾಹ್ನ ನಾಲ್ಕರಿಂದ-ಏಳು-ಏಳೂವರೆಯ ವರೆಗೆ ಸಂಗೀತ ಸಭೆ ಕೂಡ ನಡೆಯಿತು. ರಾತ್ರಿ ಮಾಳಿಗೆಯ ಮೇಲೆ ಹರಟೆಹೊಡೆಯುತ್ತ ಕುಳಿತಿದ್ದೆವು. ಆ ಹರಟೆಯಲ್ಲಿ ಭಾಸ್ಕರ ಬುವಾ ಅವರ ನೆನಪು ಕೂಡ ಬಂದಿತು. ಬಹಳ ದಿನಗಳ ಮೇಲೆ ಜೀವಸ್ಯ-ಕಂಠಸ್ಯ ಮಿತ್ರನ ನೆನಪು ಬಂದಂತೆ ಅವರ 'ಕವನ ದೇಸ ಗಯೋ' ಎಂಬ ಚೀಜದ ನೆನಪೂ ಬಂದಿತು. ಆ ಚೀಜದಲ್ಲಿಯ ಸುಂದರ, ಅತಿ ಸುಂದರವಾದ ಸ್ಥಳಗಳನ್ನು ಅಣ್ಣ ಹೃದಯಾಂತರಾಳದಿಂದ ಹೊರ ತೆಗೆದು ತೋರಿಸಿದರು. ಆಗ 'ಸ್ವರ-ಪ್ರೇಮ' ಎಂದು ಉಪಯೋಗಿಸುವ ಸವಕಳಿಯ ಶಬ್ದದ ನಿಜವಾದ ಅರ್ಥ ಅಂದು ನನಗಾಯಿತು.

ಕ್ಷಣಮಾತ್ರ ಸ್ವರದ ವಿರಹವನ್ನು ಅವರು ತಾಳಲಾರರು. ಅಷ್ಟೊಂದು ಸ್ವರದ ಮಾಯೆ ಅಣ್ಣನ ಮೇಲಾಗಿದೆ. ಅದು ಅಲೌಕಿಕವಾಗಿದೆ. ಒಂದು ಸಲ ದಿಲ್ಲಿಯ ಕೆನಾಟ್ ಪ್ಲೇಸದಲ್ಲಿಯ ಭರ್ತೀ ರಸ್ತೆಯನ್ನು ದಾಟುತ್ತಿರುವಾಗ ಟ್ರಾಫಿಕ್ ಆಯ್‌ಲ್ಯಾಂಡಿನಲ್ಲಿ ಅವರು 'ಯೇ ಹೋ ನೀಂದ ನ ಆಯೆ' ಎಂಬ ಬಂದಿಶ್‌ದಲ್ಲಿಯ ಅಡಗಿದ ಕೆಲವು ವೈಶಿಷ್ಟ್ಯಗಳನ್ನು ತೋರಿಸಿದ್ದರು. ಯಾವಾಗ, ಎಲ್ಲಿ, ಯಾವ ಚೀಜು ಅವರ ಕೊರಳಲ್ಲಿ ಬಂದು ಬೀಳುತ್ತದೆಂಬುದನ್ನು ಹೇಳಲು ಬರುವುದಿಲ್ಲ. ಅದರಲ್ಲೂ ವಿಶಿಷ್ಟ ಚೀಜಗಳ ದೊಡ್ಡ ಭಾಂಡಾರವೇ ಅವರ ಹತ್ತಿರ ಇದೆ. ಬಹಳ ಪರಿಶ್ರಮದಿಂದ ಅವರು ಈ ಧನವನ್ನು ದೊರಕಿಸಿಕೊಂಡಿದ್ದಾರೆ. ಗುರುಜನರ ಆಶೀರ್ವಾದವು ಅವರಿಗೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಲಭಿಸಿದೆ. ಅದರ ಕಾರಣವೆಂದರೆ, ಆ ವಿದ್ಯೆಯ ಮೇಲಿನ ಈ ಶಿಷ್ಯನ ಅಲೌಕಿಕ ಶ್ರದ್ಧೆಯೇ ಆಗಿದೆ!

ಅಣ್ಣನವರದು ಧಾರ್ಮಿಕ ಜೀವನ. ಅವರ ಮನೆಯ ಪಡಶಾಲೆಯ ಗೋಡೆಗಳ ಮೇಲೆ ಲಿಂಗಾಯತ ಧರ್ಮಪಂಥದಲ್ಲಿಯ ಗುರುಗಳ ಚಿತ್ರಗಳನ್ನು ತೂಗು ಹಾಕಿದ್ದಾರೆ. ಸಣ್ಣ ಮೂರ್ತಿಯೂ ಇದೆ. ಆದರೆ ಅದೇ ಗೋಡೆಯಮೇಲೆ ಅಲ್ಲಾದಿಯಾಖಾನ ಸಾಹೇಬರ ಚಿತ್ರವೂ ಇದೆ. ಅವರ ಸುಪುತ್ರ ಮಂಜೀಖಾನ ಮತ್ತು ಭುರ್ಜೀಖಾನರ ಚಿತ್ರಗಳೂ ಇವೆ. ಗಾನಧರ್ಮದ ಮಲ್ಲಿಕಾರ್ಜುನರಿಗೆ ಅವರೂ ಧರ್ಮಗುರುಗಳೇ. ಕಿಂಬಹುನಾ, ಅವರಿಂದ ದೊರೆತ ಸ್ವರಗಳಲ್ಲಿಯೇ ಅವರಿಗೆ ಪರಮಶಿವನ ದರ್ಶನವಾಗುತ್ತಿರುತ್ತದೆ. ಪ್ರತಿದಿನ ದೀಪಹಚ್ಚುವ ಹೊತ್ತಿನಲ್ಲಿ ಅವರ ಮಗಳು ಶಿವಸ್ತೋತ್ರವನ್ನು ಹಾಡುತ್ತಾಳೆ. ಬಸವೇಶ್ವರರ ವಚನಗಳನ್ನು ಕಾಲುವೆಯ ನೀರು ಜುಳು-ಜುಳು ಹರಿದಂತೆ ಸ್ವರಬದ್ಧವಾಗಿ ಹಾಡುತ್ತಾಳೆ. ಈ ವಚನಗಳನ್ನು, ಸ್ತೋತ್ರಗಳನ್ನು ಅಣ್ಣನವರು ತಮ್ಮ ಮಕ್ಕಳಿಗೆ ಕಲಿಸಿದ್ದಾರೆ. ಅವರು ಮಕ್ಕಳ ಸ್ವರವನ್ನಷ್ಟೇ ತಿದ್ದಿಲ್ಲ, ಸಂಸ್ಕೃತ ಶ್ಲೋಕಗಳಲ್ಲಿಯ ಉಚ್ಚಾರಗಳನ್ನು ಕೂಡ ತಿದ್ದಿದ್ದಾರೆ. ಶಾಸ್ತ್ರೀಯ ಸಂಗೀತದ ಉಪಾಸಕರಾದ ಅವರು ಶಬ್ದಪ್ರಧಾನ ಸಂಗೀತದಲ್ಲಿಯ ಶಬ್ದದ ಮೌಲ್ಯವನ್ನು ಗುರುತಿಸಿ ರಚನೆ ಮಾಡುತ್ತಾರೆ. ಅವರು ಚಿಕ್ಕವರಿದ್ದಾಗ ಕನ್ನಡ ಸಂಗೀತ ನಾಟಕಗಳಲ್ಲಿ ಪಾತ್ರ ವಹಿಸಿದ್ದಾರೆ. ಅವರ ಸಹೋದರ ಕನ್ನಡ ರಂಗಭೂಮಿಯ ಒಳ್ಳೆಯ ನಟರು. ಅಣ್ಣನ ಬೈಠಕಿಯಲ್ಲಿ ತಮ್ಮ ಸಿಹಿದನಿಯೊಂದಿಗೆ ತಂಬೂರಿಯ ಜೊತೆಯನ್ನು ಕೊಟ್ಟದ್ದು ಇನ್ನೂ ನನ್ನ ನೆನಪಿನಲ್ಲಿದೆ. ಮರಾಠಿ ಸಂಗೀತ ನಾಟಕಗಳಲ್ಲಿ ಕನ್ನಡದ ಸುಂದರವಾದ 'ನಡೆ'ಗಳನ್ನು ಕಿರ್ಲೋಸ್ಕರ ಅವರು ತಂದರು. ಮುಂದೆ ಬಾಲಗಂಧರ್ವರ ಗಾಯನ ಕರ್ನಾಟಕಕ್ಕೆ ಹೋಯಿತು. ಅದರಿಂದಾಗಿ ಆ ರಂಗಭೂಮಿಯಮೇಲೂ ಸ್ವರ, ಲಯ ಹಾಗೂ ಶಬ್ದಗಳ ಮೌಲ್ಯವನ್ನು ಗುರುತಿಸಿ ಹಾಡುವ ಶಿಕ್ಷಣ ಅವರಿಗೆ ನಾಟಕಗಳಲ್ಲಿ ದೊರೆಯಿತು. ಹಿಂದೆ ಅಣ್ಣನವರು ಮುಂಬಯಿ ಸಂಗೀತ ಸಭೆಗಳಲ್ಲಿ 'ಹೇ ರಾತ ಸವತ ಬಾಯೀ' 'ನಾವ ಚಾಲೆ ಡುಲೆ' 'ಜಾವೂ ಕುತೆ ವನವಾಸೀ' 'ಹೋಯೀ ಬಾಲಾ ಕಾಮುಕಾ' ಇತ್ಯಾದಿ ಮರಾಠಿ ಹಾಡುಗಳನ್ನು ಚೆನ್ನಾಗಿ ಹಾಡುತ್ತಿದ್ದರು. ಅವರು ಕನ್ನಡ ಚಲನಚಿತ್ರದ ಸಂಗೀತ ನಿರ್ದೇಶನವನ್ನು ಕೂಡ ಮಾಡಿದ್ದಾರೆ. ಆದರೆ ಮನಸ್ಸು ಕೂಡಿದ್ದು ಹಿಂದುಸ್ಥಾನೀ ಶಾಸ್ತ್ರೀಯ ಸಂಗೀತದಲ್ಲಿ ಮಾತ್ರ.

ಅವರ ಪ್ರಾರಂಭದ ಶಿಕ್ಷಣ ಪಂಡಿತ ನೀಲಕಂಠಬುವಾಗಳ ಹತ್ತಿರ ಆಯಿತು. ಗ್ವಾಲಿಯರ ಮನೆತನದ ಸಂಗೀತದ ಉತ್ತಮ ಸಂಸ್ಕಾರ ಅವರ ಸಂಗೀತದ ಮೇಲೆ ಆಯಿತು. ಗ್ವಾಲಿಯರ ಮನೆತನ ಎಂದರೆ ಹಿಂದುಸ್ತಾನೀ ಸಂಗೀತದ ಕಾಶಿ-ವಾರಣಾಸಿ ಇದ್ದಂತೆ. ಈ ಮನೆತನದ ಸಂಗೀತವನ್ನು ದಕ್ಷಿಣದಲ್ಲಿ ತಂದವರು ಪಂ. ಬಾಳಕೃಷ್ಣಬುವಾ ಇಚಲಕರಂಜೀಕರರು. ಆ ಕಾಲದ ದಕ್ಷಿಣ ಮಹಾರಾಷ್ಟ್ರದಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri
ಮಿರಜ, ಸಾಂಗಲಿ, ಕೊಲ್ಲಾಪುರ, ಇಚಲಕರಂಜಿ, ಕುರುಂದವಾಡ, ಜತ್ತ, ಜಮಖಿಂಡಿ ಸಂಸ್ಥಾನಗಳೆಲ್ಲ ಕರ್ನಾಟಕ ಮಹಾರಾಷ್ಟ್ರದ ಗಡಿ ಪ್ರದೇಶಗಳಲ್ಲಿದ್ದವುಗಳು. ಈ ಸಂಸ್ಥಾನಗಳಲ್ಲಿ ಆಸ್ಥಾನ ಸಂಗೀತಗಾರರಿರುತ್ತಿದ್ದರು. ಅವರು ಆಸ್ಥಾನದಲ್ಲಿ ಹಾಡಬೇಕು. ಹಾಗೂ ಶಿಷ್ಯರಿಗೆ ಸಂಗೀತವನ್ನು ಕಲಿಸಬೇಕು. ದಕ್ಷಿಣ ಮಹಾರಾಷ್ಟ್ರ ಹಾಗೂ ಉತ್ತರ ಕರ್ನಾಟಕದಲ್ಲಿ ಆ ಕಾಲದಲ್ಲಿ ಎಷ್ಟೋ ಸಂಗೀತಗಾರರು ಇರುತ್ತಿದ್ದರು. ಕುರುಂದವಾಡದಲ್ಲಿ ರಹಿಮತಖಾನ ಸಾಹೇಬರು, ಮಿರಜದಲ್ಲಿ ಬಾಳಕೃಷ್ಣ ಬುವಾ, ಆ ನಂತರ ಅಬ್ದುಲ್ ಕರೀಮಸಾಹೇಬರು, ಕೊಲ್ಲಾಪುರದಲ್ಲಿ ಅಲ್ಲಾದಿಯಾಖಾನ ಸಾಹೇಬರು, ಮಂಜೀಖಾನ, ಭುರ್ಜೀಖಾನ, ಶಾಲಿಗ್ರಾಮ ಬುವಾ, ಬೆಳಗಾವಿಯಲ್ಲಿ ವಝೆ ಬುವಾ ಇರುತ್ತಿದ್ದರು. ಧಾರವಾಡದಲ್ಲಿ ಭಾಸ್ಕರ ಬುವಾ ಅವರ ವಾಸ್ತವ್ಯವಿತ್ತು. ಸಿತಾರದ ರಹಿಮತಖಾನ ಸಾಹೇಬರು ಇದ್ದರು. ಕುಂದಗೋಳದಲ್ಲಿ ರಾಮಭಾವು ಸವಾಯಿ ಗಂಧರ್ವರು ಇರುತ್ತಿದ್ದರು. ಇವುಗಳು ಸಹಜವಾಗಿ ನೆನಪಾದ ಹೆಸರುಗಳು. ಇಂದಿನ ಖ್ಯಾತನಾಮ ಸಂಗೀತಗಾರರಲ್ಲಿ ಮಲ್ಲಿಕಾರ್ಜುನ ಮನ್ಸೂರ, ಕುಮಾರ ಗಂಧರ್ವ, ಭೀಮಸೇನ ಜೋಶಿ, ಗಂಗೂಬಾಯಿ ಹಾನಗಲ್ಲ ಬಸವರಾಜ ರಾಜಗುರು ಅಲ್ಲದೆ ಹೊಸಬರಲ್ಲಿ ಮುಂದೆ ಬರುತ್ತಿರುವ ಸಂಗಮೇಶ್ವರ ಗುರವ, ಅರ್ಜುನಸಾ ನಾಕೋಡ ಮೊದಲಾದ ಎಲ್ಲ ಈ ಕಲಾವಿದದರು ಒಂದೇ ಪರಿಸರದವರು. ಒಂದೊಂದು ಪ್ರದೇಶದ ಸೌಭಾಗ್ಯ!

ಮಲ್ಲಿಕಾರ್ಜುನ ಮನ್ಸೂರರ, ಮನ್ಸೂರ ಎಂಬ ಹಳ್ಳಿ ಧಾರವಾಡದ ಹತ್ತಿರವೇ ಇದೆ. ಅವರು ನೀಲಕಂಠ ಬುವಾರ ಹತ್ತಿರ ಸಂಗೀತ ಕಲಿಯಲು ಅಲ್ಲಿಂದಲೇ ಮಿರಜಕ್ಕೆ ಹೋದರು. ಇಪ್ಪತ್ತೆರಡು- ಇಪ್ಪತ್ಮೂರರ ಹರೆಯದಲ್ಲಿಯೇ ಅವರ ಕಾರ್ಯಕ್ರಮಗಳು ಮುಂಬಯಿಯ ಗಣೇಶೋತ್ಸವ ಹಾಗೂ ಮ್ಯೂಜಿಕ್ ಸರ್ಕಲ್‌ಗಳಲ್ಲಿ ಪ್ರಾರಂಭವಾಗಿದ್ದುವು. ಮಾಸ್ಟರ್ ಕೃಷ್ಣರಾವ್, ರಾಮಭಾವು ಸವಾಯಿ ಗಂಧರ್ವ, ಹೀರಾಬಾಯಿ ಬಡೋದೇಕರ, ಮೋಗೂಬಾಯಿ ಕುರ್ಡೀಕರ, ಫೈಯ್ಯಾಜಖಾನ ಸಾಹೇಬ, ವಝೆ ಬುವಾ, ನಿಸಾರಹುಸೇನಖಾನ ಸಾಹೇಬ, ವಿಲಾಯತಖಾನ, ಕೇಸರಬಾಯಿ ಕೇರಕರ ಅವರಂಥ ಗಾಯಕ - ಗಾಯಕಿಯರ ಸಂಗೀತ ಪ್ರಸಿದ್ಧಿಯ ಕಾಲವದು! ಗ್ವಾಲಿಯರ ಮನೆತನದ ರಾಜಾಭೈಯ್ಯಾ ಪೂಛವಾಲೆ, ಕೃಷ್ಣರಾವ ಪಂಡಿತ ಮೊದಲಾದ ಹಳೆಯ ಹುಲಿಗಳು ಬಂದು ತಮ್ಮ ಮನೆತನದ ಧ್ವಜ ಹಚ್ಚಿ ಹೋಗುತ್ತಿದ್ದರು. ಅಂಥ ಆ ಟೆಸ್ಟ ಟೀಮಿನಲ್ಲಿ ಈ ತರುಣ ಗಾಯಕ ಹಾಂ, ಹಾಂ ಎಂಬಷ್ಟರಲ್ಲಿ ಬಂದು ಕುಳಿತಿದ್ದರು.

ಅದು ಗಾಯಕರ ಜಗತ್ತಾಗಿತ್ತು, ವಾದಕರದಾಗಿರಲಿಲ್ಲ. ಆ ಕಾಲದಲ್ಲಿಯೇ ಮುಂಬಯಿಯ ಒಬ್ಬ ಗಾಯಕ ನಮ್ಮನ್ನು ಹುಚ್ಚು ಹಿಡಿಸಿದ್ದ. ಆ ಗುಣಿ ಗಾಯಕರೆಂದರೆ ಅಲ್ಲಾದಿಯಾಖಾನ ಸಾಹೇಬರ ಸುಪುತ್ರ ಮಂಜೀಖಾನ ಸಾಹೇಬರು. ಶಾಸ್ತ್ರೀಯ ಸಂಗೀತದಲ್ಲಿ ಅವರ ಯೋಗ್ಯತೆ ದೊಡ್ಡದಾಗಿತ್ತು. ಅದರೊಂದಿಗೆ ಲಲಿತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಗೀತದಲ್ಲಿ ಕೂಡ ಅವರ ಗತಿ ಅಪರೂಪದ್ದಾಗಿತ್ತು. ಅದರಿಂದಾಗಿ ಸಂಗೀತ ಗೊತ್ತಿರುವವರ ಜೊತೆಗೆ, ಗೊತ್ತಿಲ್ಲದವರು ಕೂಡ ಅವರ ಸಂಗೀತವನ್ನು ಮೆಚ್ಚುತ್ತಿದ್ದರು. ಕಾಣಲು ಠಾಕು - ಠೀಕಾದ ವ್ಯಕ್ತಿ. ಹಾಡುವಾಗ ಪ್ರಸನ್ನ ಮುಖ, ಕೈಗಳ ಹಾವಭಾವ, ಮಾತು ನಡತೆ ರಾಜ ಗಾಂಭೀರ್ಯದ್ದು. ಆದ್ದರಿಂದಲೇ ಆ ಕಾಲದ ಕಾಲೇಜ ವಿದ್ಯಾರ್ಥಿಗಳು ಕೂಡ ಅವರ 'ಜಿಕಿವ ತವ ಮಧು ಬೋಲ' ಮತ್ತು ಗಡಕರಿಯವರ 'ಮುರಲಿ'ಯನ್ನು ಕೇಳಲು ಹೋದವರು ಗೊತ್ತಿಲ್ಲದೆಯೇ ಅವರ ಶಾಸ್ತ್ರೀಯ ಸಂಗೀತದ ಪ್ರವಾಹದಲ್ಲಿಯೂ ಆನಂದದಿಂದ ಈಜಾಡುತ್ತಿದ್ದರು. ಮಲ್ಲಿಕಾರ್ಜುನ ಮನ್ಸೂರರು ಅಂಥ ನಮ್ಮ ಪ್ರೀತಿಯ ಉಸ್ತಾದದ 'ಗಂಡಾ' ಕಟ್ಟಿದ ಶಿಷ್ಯರಾದರೆಂಬ ಸುದ್ದಿಯನ್ನು ಕೇಳಿದ ದಿನ, ಆ ಸುದ್ದಿಗೇ ನಾವು ಸಂಗೀತದಷ್ಟು ಮಹತ್ವ ಕೊಟ್ಟೆವು ! ವರುಷೆರಡು ವರುಷ ಮಾತ್ರ ಈ ಶಿಕ್ಷಣ ನಡೆಯಿತು. ಮಂಜೀಖಾನರು ಅಕಾಲಮೃತ್ಯುವಿಗೀಡಾದರು. ಆದರೆ ಒಂದು ಶ್ರೇಷ್ಠ ಮನೆತನದ ಗಾಯಕಿಯ ಜೋಪಾನದ ಕೀಲಿಕೈಯನ್ನು ಈ ಪ್ರೇಮದ ಶಿಷ್ಯನಿಗೆ ಅವರು ಕೊಟ್ಟು ಹೋಗಿದ್ದರು. ಶಿಕ್ಷಣ ಎಷ್ಟು ವರ್ಷದ್ದಾಯಿತೆಂಬುದಕ್ಕೆ ಅಷ್ಟು ವಿಶೇಷ ಅರ್ಥ ಇರುವುದಿಲ್ಲ. ಜಾಣ ವಿದ್ಯಾರ್ಥಿಗೆ ಒಂದು ಸಂಜ್ಞೆ ಕೂಡ ಸಾಕು. ಮುಂದಿನ ದಾರಿಯನ್ನು ಆತನೇ ಹುಡುಕಿಕೊಳ್ಳುತ್ತಾನೆ.

ಅಣ್ಣಾನವರು. ಅತ್ರೋಲಿ ಮನೆತನದ ಸಂಗೀತದಲ್ಲಿಯ ವೈಭವಕ್ಕೆ ಮಾರು ಹೋಗಿದ್ದರು. ಮೂಲದ ಗ್ವಾಲಿಯರ ಗಾಯಕಿಯಿಂದ ಅಷ್ಟೇನು ಸರಿದು ಹೋಗುವ ಗಾಯಕಿಯಲ್ಲ. ಸ್ವರದ ಸ್ವಚ್ಛಂದತೆಯನ್ನು ತೋರಿಸುವ ಗ್ವಾಲಿಯರ ಪದ್ಧತಿ ಹಾಗೂ ಅಟ್ರೋಲಿ ಪದ್ಧತಿ ಒಂದೇ ಆಗಿದೆ. ಎರಡೂ ಗಾಯಕಿಗಳಲ್ಲಿ ಸಂಗೀತದ ಮೌಲ್ಯವನ್ನು ಉಳಿಸಿಕೊಂಡು ಬಂದಿದ್ದಾರೆ. ಯಾವುದೇ ಒಂದು ಭಾಗಕ್ಕೆ ಪ್ರಾಧ್ಯಾನ್ಯವೆಂಬುದಿಲ್ಲ. ಎಲ್ಲ ಭಾಗಗಳೂ ಸರಿ-ಸಮ. ಈ ಎಲ್ಲವನ್ನೂ ಗಮನದಲ್ಲಿಟ್ಟುಕೊಂಡೇ ಅಣ್ಣಾನವರು ತಮ್ಮ ಉಪಾಸನೆಯನ್ನು ನಡೆಸಿದ್ದರು.

ಮಂಜೀಖಾನರು ಹೋದನಂತರ ಮನ್ಸೂರರು ಖಿನ್ನರಾಗಿದ್ದರು. ಆದರೆ ಅವರ ಸುದೈವವೆಂಬಂತೆ, ಭುರ್ಜೀಖಾನ ಸಾಹೇಬರು ಅವರ ಗುರುಪದವನ್ನು ಸ್ವೀಕರಿಸಿದರು. ಭುರ್ಜೀಖಾನರು ಉತ್ತಮ ಶಿಕ್ಷಕರಾಗಿದ್ದರು. ಶಿಷ್ಯನಿಗೆ 'ಗಾಯಕಿ'ಯ ಬಾಗಿಲನ್ನು ಚಾತುರ್ಯದಿಂದ ತೆರೆದು ತೋರಿಸುವವರಾಗಿದ್ದರು. ಈ ಶಿಷ್ಯನ ಮೇಲೆ ಅವರ ಪ್ರೇಮ ಹೆಚ್ಚಿತು. ಆ ಪರಂಪರೆಯ ಅಭ್ಯಾಸದಲ್ಲಿ ಖಂಡ ಬೀಳಲಿಲ್ಲ. ಪರಂಪರೆಯನ್ನು ನಡೆಸುವುದೆಂದರೆ ಗುರುಗಳ ಹಾಡುಗಳನ್ನು ನಕಲು ಮಾಡುವುದಲ್ಲ! ಈ ಕುರಿತು ನನಗೊಂದು ಘಟನೆ ನೆನಪಾಗುತ್ತಿದೆ. ಪುಣೆಯಲ್ಲಿ ಒಮ್ಮೆ ಮನ್ಸೂರರ ಖಾಸಗೀ ಸಂಗೀತ ಸಭೆ ಏರ್ಪಾಡಾಗಿತ್ತು. ಆ ದಿನ ಅವರು ತಮ್ಮ ಕರುಳಿನಿಂದ ಹೊರಡಿಸಿದ ಒಂದೊಂದು ಕಠಿಣ ರಾಗಗಳ ಬಂದಿಶ್‌ಗಳನ್ನು ಕೇಳಿ ನಮ್ಮ ಬುದ್ಧಿ ಶೂನ್ಯವಾಗಿತ್ತು. ಎದುರಿಗೆ ಒಬ್ಬ ಗೃಹಸ್ಥ, ಮುಖದ ಮೇಲೆ ಸುಂಕದ ಅಧಿಕಾರಿಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತನಿಖಾ ಭಾವವನ್ನು ಧರಿಸಿ ಕುಳಿತುಕೊಂಡಿದ್ದ. ಅಂಥ ಸಂಗೀತ ಸಭೆಗಳಲ್ಲಿ, ಒಮ್ಮೊಮ್ಮೆ ನಾಟಕಗಳಲ್ಲಿ ಕೂಡ, ದೇವರು ಬೇಕಂತಲೇ ಸೃಷ್ಟಿಸಿದ ಇಂಥ ಕೆಲವು ಊಂಷ್ಟ್ರ ಮಂಡಳಿ ಬಂದು ಕುಳಿತಿರುತ್ತವೆ! ಭಾರೀ ಲೆಕ್ಕಪತ್ರದವರು! ಅಣ್ಣಾ ಒಂದು ಚೀಜನ್ನು ಅಪರೂಪವಾಗಿ ಸುಂದರವಾಗಿ ಮಂಡಿಸಿದ್ದರು. ಮೇಲಿನ ಷಡ್ಜದಲ್ಲಿ ಹೋಗಿ ವಿಹರಿಸುವಾಗ, ಆ ಏಕತಾನತೆಗೆ 'ವಾಹ್ ವಾ' ಎಂಬ ಉದ್ಗಾರ ಕೂಡ ಅಪ್ರಸುತವೆಂದೇ ಗಣಿಸುತ್ತಿತ್ತು! ಅಂಥದ್ದರಲ್ಲಿ ಈ 'ಬತ್ತಮೀಜ್' ಮನುಷ್ಯ ತುಂಬಿದ ಸಭೆಯಲ್ಲಿ 'ಬಡೇ ಖಾನಸಾಹೇಬರು ಅಂತರಾದಲ್ಲಿ ಹೀಗೆ ಏರಿಸುತ್ತಿರಲಿಲ್ಲ ----' ಎಂದು ಶರಾ ಹೊಡೆದು ಬಿಟ್ಟ. ಅವನ ಮಾತಿನ ರೀತಿ ' ನಿಮಗೆ ಅಂತರಾವನ್ನು ಚೆನ್ನಾಗಿ ಪ್ರಸ್ತುತ ಪಡಿಸಲು ಬಂದಿಲ್ಲ' ಎಂಬುದಾಗಿತ್ತು!

ಮನ್ಸೂರರು ತಮ್ಮ ತೀಕ್ಷ್ಣ ದೃಷ್ಟಿಯಿಂದ ಆ ವ್ಯಕ್ತಿಯ ಕಡೆಗೆ ನೋಡುತ್ತ ತಮ್ಮ ಉತ್ತರ ಕನ್ನಡ ಭಾಷೆಯ ರೀತಿಯಲ್ಲೇ ಊರ್ದುದಲ್ಲಿ ಹೇಳಿದರು: ' ಬಡೇಮಿಯಾ ಅಂತರಾವನ್ನು ಹೀಗೆ ಏರಿಸುತ್ತಿರಲಿಲ್ಲ ಎಂಬುದು ನಮಗೂ ಛಲೋ ಗೊತ್ತದ. ಆದರ ನಾವು ಹೀಂಗs ಏರಸೋದು. ನಾವೇನು ಬಡೆಮಿಯಾನ ಕೈಕೆಳಗಿನ ಸ್ಟೆನೋಗ್ರಾಫರ ಅಂತ ತಿಳಿದೀರೇನು? ಈಗ ಬೇಕಾದರ ಕೇಳಿರಿ ಬಡೇಮಿಯಾ ಹೇಗೆ ಏರಿಸುತ್ತಿದ್ದರು.... ನಮ್ಮ ಗುರು ಮಂಜೀಖಾನ ಸಾಹೇಬರು ಹೇಗೆ ಏರಿಸುತ್ತಿದ್ದರು... ಹಾಗೂ ನಾವು ಹೇಗೆ ಏರಿಸುತ್ತೇವೆ...' ಎಂದು ಹೇಳಿ ಆ ಅಂತರಾದ ಅದೇ ಭಾವವನ್ನು ಉಳಿಸಿಕೊಂಡು ಅವರು ಒಂದರ ಹಿಂದೆ ಒಂದಾಗಿ ವಿವಿಧ ರೀತಿಗಳಲ್ಲಿ ಸ್ವರವನ್ನು ಏರಿಸಿ, ಅತ್ಯಂತ ಏರಿಕೆಯ ಷಡ್ಜದಲ್ಲಿ ಅದನ್ನು 'ಸಮ್'ಗೆ ಕೂಡಿಸಿ ತೋರಿಸಿದರು! ಚೀಜದ ಬಂದಿಶ್‌ದಲ್ಲಿ, ಅಧಿಕೃತ ಕಲಾವಂತನೊಬ್ಬ ತನ್ನ ಕಲೆಯನ್ನು ತೋರಿಸುವುದೆಂದರೆ ಅವನಿಗೆ ಮೂಲ ಚೀಜದಲ್ಲಿಯ ವೈಶಿಷ್ಟ್ಯ ಗೊತ್ತಿಲ್ಲವೆಂದು ತೋರಿಸುತ್ತಿರುವುದಿಲ್ಲ. ಆ ವೈಶಿಷ್ಟ್ಯದ ಅನುಕರಣೆಯಲ್ಲಿಯೇ ಲಯದ ಅನೇಕ ಆಕರ್ಷಕ ಸ್ಥಾನಗಳನ್ನು ತೋರಿಸುತ್ತಿರುತ್ತಾನೆ. ಇಂಥ ಸಣ್ಣ ವಿಷಯ ಕೂಡ ಆ ಅಹಂಮನ್ಯ ಘರಾಣೇಬಾಜ ಮನುಷ್ಯನಿಗೆ ಗೊತ್ತಿರಲಿಲ್ಲ. ಇಲ್ಲಿಯೇ ಘರಾಣೆಯ ಭಕ್ತನಿಗೂ ಮತ್ತು ತಿಳುವಳಿಕೆಯುಳ್ಳ ಕಲಾವಂತನಿಗೂ ಅಂತರವಿದೆ. ಸ್ವತ: ಮಂಜೀಖಾನರು ಅಲ್ಲಾದಿಯಾ ಖಾನ ಸಾಹೇಬರ ಅನುಕರಣೆಯನ್ನೇನೂ ಮಾಡುತ್ತಿರಲಿಲ್ಲ. ಪ್ರತಿಯೊಬ್ಬ ಕಲಾವಂತನಿಗೂ ಕಲ್ಪನಾ ಶಕ್ತಿಯನ್ನು ಕೊಟ್ಟಿರುತ್ತದೆ. ಆದರೆ ಪರಂಪರೆ ಮತ್ತು ಹೊಸ ಸೃಷ್ಟಿ ಇವುಗಳ ಕುರಿತು ನಮ್ಮ ಸಂಗೀತ ಕ್ಷೇತ್ರದಲ್ಲಿರುವಷ್ಟು ಗೊಂದಲ ಇನ್ನಾವ ಕಲೆಯ ಕ್ಷೇತ್ರಗಳಲ್ಲೂ ಇರಲಿಕ್ಕಿಲ್ಲ.

ಶ್ರೇಷ್ಠ ಗಾಯಕರಲ್ಲಿ ಶಿಕ್ಷಣ ಪಡೆದದ್ದರಿಂದ, ತೇಜಃ ಪುಂಜವಾದ ಹಾಡನ್ನು ಕೇಳುವಾಗ ಆ ಗುರುವಿನ ನೆನಪನ್ನು ಆ ಸ್ವರವೇ ಮಾಡಿಕೊಡುತ್ತದೆ. ತಾಯಿಯ ಮುಖವನ್ನು ನೋಡಿ, ಆತ ಆ ಹೆಣ್ಣುಮಗಳ ಮಗನೇ ಎಂದು ಗುರುತಿಸುವುದಾದರೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆ ಹುಡುಗ ತನ್ನ ಇಡೀ ಆಯುಷ್ಯವನ್ನು ತಾಯಿಯಂತೆಯೇ ಕಳೆಯಬೇಕೆ? ಹಾಡಿನ ಮೂರ್ತಿ ಗುರುಮನೆತನದ ನಡೆಯನ್ನು ತೋರಿಸುತ್ತಿದ್ದರೂ ಕೂಡ ಆ ಮೂರ್ತಿಗೆ ಸ್ವಂತದ ಸೌಂದರ್ಯವಿರಬಾರದೆ? ಇಲ್ಲವಾದರೆ ಎಲ್ಲರೂ ಪಡಿಯಚ್ಚಿನ ಗಣಪತಿಗಳೇ ಆಗುತ್ತಾರೆ. ಅತ್ರೋಲಿ ಗಾಯಕಿಯಲ್ಲಿಯ ಎಲ್ಲ ವೈಶಿಷ್ಟ್ಯಗಳನ್ನು ಅವರು ವಿಚಾರ ಪೂರ್ವಕವಾಗಿಯೇ ಆತ್ಮಸಾತ್ ಮಾಡಿಕೊಂಡಿದ್ದಾರೆ. ಅಣ್ಣನ ಸಂಗೀತದಲ್ಲಿ ಲೆಕ್ಕವಿಲ್ಲದ್ದು ಔಷಧಕ್ಕಾದರೂ ದೊರೆಯುವುದಿಲ್ಲ. ಆ ತ್ರಿತಾಳ-ಝುಪತಾಳಗಳಲ್ಲಿಯ ಲಯವನ್ನು ಕ್ಷಣ ಕ್ಷಣಕ್ಕೂ ಸಕಾರಣವಾಗಿ ಉಪಯೋಗಿಸಬೇಕೆಂಬ ಭಾವನೆಯಿಂದ, ಕ್ಷಣ ಮಾತ್ರವೂ ಲಯದ ಭಂಗವಾಗದಂತೆ ಅವರ ರಾಗವಿಸ್ತಾರವು ನಡೆದಿರುತ್ತದೆ.

ಹಾಡಿನ ಮೇಲಿಂದ 'ಧ್ರುಪದ' ಹಾಗೂ 'ಖ್ಯಾಲ' ಇವುಗಳಲ್ಲಿಯ ಅಂತರವನ್ನು ಒಮ್ಮೆ ನನ್ನ ಹೆಂಡತಿ ಅವರನ್ನು ಕೇಳಿದ್ದಳು. ಅವರು ಹಳೆಯ ಧ್ರುಪದಗಳನ್ನು ಹಾಗೂ ಹಳೆಯ ಧ್ರುಪದಗಳಿಂದ ಆದ ಖ್ಯಾಲಗಳನ್ನು ಹಾಡಿ ತೋರಿಸುತ್ತ, ಈ ಅಂತರವನ್ನು ಅತಿ ಸುಲಭವಾಗಿ ಗುರುತಿಸುವಂತೆ ತಿಳಿಸಿ ಹೇಳಿದ್ದರು. 'ಲಯಕಾರಿ' ಇದು ಬಹಳಷ್ಟು ಸಲ 'ತಾಲಕಾರಿ'ಯಾಗಿರುತ್ತದೆ. ಹಾಗೂ ಅನಂತರದ ಆಘಾತದಿಂದ ಟೊಳ್ಳುತನ ಬರುತ್ತದೆ. ಆಗ ಸೌಂದರ್ಯ ಹೋಗುತ್ತದೆ ಮತ್ತು ಲೆಕ್ಕ ಉಳಿಯುತ್ತದೆ. ಗ್ವಾಲಿಯರ ಗಾಯಕಿಯಲ್ಲಿ ಧ್ರುಪದದ ಮೂಲ ವ್ಯವಸ್ಥೆಯನ್ನು ಕೆಡಿಸಿಲ್ಲ. ಪ್ರತಿಯಾಗಿ ಲಯದ ತತ್ವದಲ್ಲಿ ಸಾಕಷ್ಟು ಪ್ರಾಮಾಣಿಕರಾಗಿದ್ದು ಸ್ವರವಿಸ್ತಾರಕ್ಕೆ ಹೆಚ್ಚಿನ ಹರವನ್ನು ಕೊಟ್ಟಿದ್ದಾರೆ. ಈ ಹರವನ್ನು ತಾಳ ಅಥವಾ ಲಯದ ಮಹತ್ವವನ್ನು ಗಮನದಲ್ಲಿಟ್ಟುಕೊಂಡೇ ಕೊಟ್ಟಿದ್ದಾರೆ. ಅದು ಮುಕ್ತಛಂದದಲ್ಲಿಯ 'ಛಂದ' ಇದ್ದಂತೆ. ವೃತ್ತಗಳಿಂದ ಕವಿತೆಗಳು ಬಿಡುಗಡೆಯಾದನಂತರ ಅವುಗಳಿಗೆ ಸ್ವಾತಂತ್ರ್ಯ ದೊರಕಿದಂತೆ; ಆ ಕವಿತೆಗಳಲ್ಲಿಯ ಕಾವ್ಯ ಹಾಗೂ ಲಯತತ್ವದೊಂದಿಗಿನ ಬಂಧನದ 'ಛಂದ' ಬಿಡುಗಡೆಯಾಗಲಿಲ್ಲ. ಆದರೆ ನಿರ್ದಿಷ್ಟ ಅಕ್ಷರಗಳು ಹಾಗೂ ಲಘು-ಗುರುಗಳ ಗಣಿತದಿಂದ ಅದು ಬಿಡುಗಡೆ ಹೊಂದಿತು. ಅದರಂತೆಯೇ ಕೆಲವು ಪ್ರಕಾರಗಳು ಇಲ್ಲಿಯೂ ಆಗಿವೆ. ಆನಂದದಿಂದ ಸ್ವೀಕರಿಸಿದ - ಸಂಯಮದ ಈ ಮುಕ್ತತೆ ಅತ್ರೋಲಿ ಗಾಯಕಿಯಲ್ಲಿ ಕಾಣಸಿಗುತ್ತದೆ. ಕೊನೆಯಲ್ಲಿ ಖ್ಯಾಲಕ್ಕೂ ಕೂಡ ಆಕಾರವಿದೆ. ಆಕಾರ ಅಥವಾ ಆಕೃತಿ ಎಂದಾಗ ಆ ರೇಖೆಗಳಿಗೆ ತಾಳ-ಮೌಲ್ಯಗಳ ಮರ್ಯಾದೆಯೂ ಬಂದಿತು. ಅಣ್ಣನ ಸಂಗೀತದಲ್ಲಿ ಇಂಥ ಹರವಿನ ಕೃತಿಗಳು ಅತ್ರೋಲಿ ಸಂಸ್ಕಾರದಿಂದ ಬಂದವುಗಳಾಗಿವೆ. ಅಂತೆಯೇ ರಾಗಗಳ ಸ್ವರೂಪಗಳನ್ನು ಅವರು ಕಷ್ಟಪಟ್ಟು ಕಾಯ್ದುಕೊಳ್ಳುತ್ತಾರೆ. ಆಯಾಯ ರಾಗಗಳಲ್ಲಿಯ ಆಯಾಯ ಸ್ವರಗಳು ಸರಿಯಾಗಿ ಹೊಂದಿಕೊಂಡು ಹೋಗುತ್ತವೆ. ಒಂದು ಚೀಜನ್ನು ಅರ್ಧ ಗಂಟೆ ಹಾಡಲಿ ಅಥವ ಐದೇ ನಿಮಿಷ ಹಾಡಲಿ, ಪ್ರಥಮ ಕ್ಷಣದಲ್ಲಿಯೇ ಆ ರಾಗದ ಸ್ವರೂಪವು ಕೇಳುಗರ ಮುಂದೆ ಎದ್ದುನಿಲ್ಲುತ್ತದೆ. ಬಸಂತೀಕೇದಾರ ಅಥವಾ ಬಹಾರದಂಥ ಜೊತೆರಾಗಗಳನ್ನು ಹಾಡುವಾಗ ಆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಾಗಗಳನ್ನು ಒಂದೆಡೆ ಅಂಟಿಸಿ ತಂದಂತೆ ಅನಿಸುವುದಿಲ್ಲ. ರಾಗದ ಕಡೆಗೆ ಮತ್ತು ಚೀಜದ ಕಡೆಗೆ ನೋಡುವಾಗ ಆ ರಾಗದ ಅಥವ ಭೈರವ ಕೃತಿಯ ಮಂತ್ರಗಳಂತೆ ಯಾರಿಗೆ ಪ್ರಥಮ ದರ್ಶನವಾಗುತ್ತದೆಯೋ ಆ ಋಷಿಸದೃಶ ಸಂಗೀತಗಾರರ ತಪಶ್ಚರ್ಯದ ಬಗ್ಗೆ ಅವರ ಮನದಲ್ಲಿ ನಿತಾಂತ ಭಕ್ತಿಭಾವವಿರುತ್ತದೆ. ಅಂತೆಯೇ ಚೀಜದ ಹಾಗೂ ರಾಗದ ನಿಯಮಾನುಸಾರ ಶಿಕ್ಷಣ ಪಡೆಯದೆ ಒಂದು ಸಲ ಕೇಳಿ ಹಾಗೂ ಅಕ್ಷರಗಳನ್ನು ಕಾಗದದಲ್ಲಿ ನಮೂದಿಸಿಕೊಂಡು ಒಮ್ಮೆಲೆ ಸಭೆಯಲ್ಲಿ ಹಾಡುವ ಪ್ರಮಾದವನ್ನು ಮಾಡುವ ಗಾಯಕಗಾಯಕಿಯರನ್ನು ಕಂಡು ಅವರಿಗೆ ಸಿಟ್ಟು ಬರುತ್ತದೆ. ಆ ರಾಗದಲ್ಲಿಯ ಕೇವಲ ಆರೋಹಅವರೋಹ ಮತ್ತು ಹಿಡಿದುಬಿಡುವ ಪುಸ್ತಕ ಜ್ಞಾನವು ದೊರೆತ ತಕ್ಷಣ ರಾಗ ದೊರೆಯಿತೆಂದು ತಿಳಿಯುವುದು ಎಷ್ಟು ತಪ್ಪು ಎಂದು ಹೇಳುವಾಗ ಒಮ್ಮೆ ಮನ್ಸೂರರು ಹೇಳಿದ್ದರು. ''ರಾಗದ ಪ್ರತ್ಯೇಕ ಸ್ವರವಷ್ಟೆ ಏಕೆ? ಮೊದಲಿನ 'ಸಾ' ಕೂಡ ಆ ರಾಗದ ಉಡುಪನ್ನು ಹಾಕಿಕೊಂಡು ಬಂದು ನಿಲ್ಲಬೇಕು!''

ಹೀಗೆ ಮನ್ಸೂರರು ಸ್ವರ-ಲಯಗಳ ಉಪಾಸಕರು. ಜೀವನದಲ್ಲಿ ಸುಂದರ ವಾದುದೇನಿದೆಯೋ, ಪವಿತ್ರವಾದದ್ದೇನಿದೆಯೋ ವಿಚಾರಿಸಲು ಯೋಗ್ಯವಾದದ್ದು, ಆದರದಿಂದ ಲೀನವಾಗುವಂಥದ್ದು ಅದೆಲ್ಲ ಕೇವಲ ಸಂಗೀತದಲ್ಲಿ ಮಾತ್ರ ಇದೆಯೆಂದು ತಿಳಿದು ಆ ಜಗತ್ತಿನಲ್ಲಿ ಬದುಕುವರು. ಆ ವಿದ್ಯೆಯ ಸೇವೆಯಲ್ಲಿ ಅವರು ಸ್ವತಃ ಎಂದೂ ಕಡಿಮೆ ಮಾಡಿಲ್ಲ. ಯಾರಾದರೂ ಕಡಿಮೆ ಮಾಡುವುದು ಅವರಿಗೆ ಸಹನವಾಗುವುದಿಲ್ಲ. ಕಲೆಯಲ್ಲಿ ತಕ್ಷಣದ ಬಣ್ಣಗಾರಿಕೆಗೆ ಅವಕಾಶವೇ ಇಲ್ಲ! ಸುದೈವದಿಂದ ಅವರ ಮಗ ರಾಜಶೇಖರ ಅವರು ಚೆನ್ನಾಗಿ ತಯಾರಾಗುತ್ತಿದ್ದಾರೆ. ಆದರೆ ಅವರು ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದಾರೆ. ಇದು ಅಣ್ಣನಿಗೆ ದುಃಖದ ವಿಷಯ ಶೇಖರ. ಅವರಿಗೆ ಇಂಗ್ಲಿಷ್ ಸಾಹಿತ್ಯದಲ್ಲಿ ಉತ್ತಮ ರುಚಿ ಇದೆ. ಆ ಭಾಷೆಯ ಮೇಲೆ ಅವರಿಗೆ ಚೆನ್ನಾದ ಪ್ರಭುತ್ವವಿದೆ. ಆದ್ದರಿಂದ ಸಂಗೀತದ ಅಭ್ಯಾಸದತ್ತ ಲಕ್ಷ್ಯ ಕೊಡುವುದು ಕಠಿಣವಾಗಿದೆ- ಎಂದು ಅಣ್ಣನಿಗೆ ಅನಿಸುತ್ತದೆ. ಆದರೆ ಅವರಿಗೆ ಶೇಖರ ಕೂಡ ಈ ಜಗತ್ತಿನಲ್ಲಿಯೇ ಇರಬೇಕೆಂದು ಅನಿಸುತ್ತದೆ. ಇನ್ನೊಬ್ಬರು ಪಂಚಾಕ್ಷರಿ ಮತ್ತೀಗಟ್ಟಿ ಎಂಬವರು ಅವರ ಶಿಷ್ಯರಾಗಿದ್ದಾರೆ. ಭಿರ್ಡೀಕರರಂತೆ ಕೆಲ ಸುಖೀ-ಶ್ರೀಮಂತ ಮನೆತನದ ಚಟಗಾರ ಶಿಷ್ಯರೂ ಇದ್ದಾರೆ. ಆದರೆ ಸರ್ವಸ್ವವನ್ನೂ ಸಂಗೀತಕ್ಕೆಯೇ ಧಾರೆಯೆರೆಯುವ, ಬೆಳಕು ಹರಿಯುವಷ್ಟರಲ್ಲಿ ದೊರೆಯುವ ಪ್ರಸಿದ್ಧಿಯ ಬೆನ್ನ ಹಿಂದೆ ಹೋಗದೆ, ಈ ಕಲೆಯಲ್ಲಿಯ ಆನಂದದ ಓಘದಲ್ಲಿ ಹೋಗುವಂಥ ಶಿಷ್ಯ ದೊರೆತಿಲ್ಲ ಎಂಬ ವ್ಯಥೆಯೂ ಅವರಿಗಿದೆ.

ಅಣ್ಣನವರು ಅರವತ್ತೊಂದರಲ್ಲಿ ಕಾಲಿಟ್ಟರು ಎಂಬುದನ್ನು ಕೇಳಿ ನಾವು ಕೆಲವರು ಮಿತ್ರರು ಧಾರವಾಡಕ್ಕೆ ಹೋಗಿದ್ದೆವು. ಆದರ ಉಪಚಾರಗಳ ನಂತರ ತಂಬೂರಿಯನ್ನು ಹಿಡಿದೆವು. ಮುಲ್ತಾನಿ ಆಯಿತು. ಶ್ರೀ ಆಯಿತು. ಲಲತಗೌರಿಯೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಯಿತು. ನಾಟ ಆಯಿತು. ಮತ್ತೆ ಬೆಳಗಿನಲ್ಲಿ ಖಟ ತೋಡಿ ಆಯಿತು. ಖಟ ಆಯಿತು. ಶುದ್ಧ ಬಿಲಾವಲ, ಸಾರಂಗ- ಮೂರುದಿನ ಅವ್ಯಾಹತವಾಗಿ ಪ್ರವಾಹ ಹರಿಯುತ್ತಿತ್ತು. ಆ ವಾಸ್ತವ್ಯದಲ್ಲಿಯೇ ಒಂದು ದಿನ ಅಲ್ಲಿಯ ಆಕಾಶವಾಣಿಯವರು ಒಂದು ಸಣ್ಣ ಚಹಾ-ಪಾನದ ಸಮಾರಂಭವನ್ನು ಏರ್ಪಡಿಸಿದ್ದರು. ಮನ್ಸೂರರು ಕನ್ನಡದಲ್ಲಿ ಸುಂದರವಾಗಿ ಭಾಷಣ ಮಾಡಿದರು! ಅರ್ಥಾತ್ ಉತ್ತರರೂಪದಲ್ಲಿ ನಾನೂ ಮಾತನಾಡಬೇಕಾಯಿತು. ನಾನು ಒಂದೇ ಒಂದು ಮಾತನ್ನು ಹೇಳಿದೆ. ದೇವರ ಮೇಲೆ ಶ್ರದ್ಧೆ ಇರುವವರು ತೀರ್ಥಯಾತ್ರೆಗೆಂದು ಹೋಗುತ್ತಾರೆ. ನನ್ನಂಥ ಸ್ವರಲೋಭಿ ಜನರು ಧಾರವಾಡಕ್ಕೆ ಆ ಭಾವನೆಯಿಂದಲೇ ಬರುತ್ತೇವೆ. ಸುದೈವದಿಂದ ನಮ್ಮ ಯಾತ್ರೆ ಸಫಲವಾಗುತ್ತದೆ. ಯಾಕೆಂದರೆ ಅಣ್ಣನ ಸ್ವರಗಂಗೆಯಲ್ಲಿ ಮಿಂದ ಪುಣ್ಯ ನಮಗೆ ಲಭಿಸುತ್ತದೆ! ನನ್ನ ಪ್ರೀತಿಯ ಗಾಯಕರ ಮನೆಗೆ ಹೋಗುವಾಗ ನಾನು ಯಾವಾಗಲೂ ಇದೇ ಭಾವನೆಯನ್ನು ಇಟ್ಟುಕೊಂಡು ಹೋಗುತ್ತೇನೆ.

''ಸಂಗೀತ ಕಲಿಯಬೇಕಾದರೆ ತುಂಬ ಕಷ್ಟ ಅಲ್ಲವೇನ್ರೀ?'' ಎಂದೂ ಯಾರೋ ಒಬ್ಬರು ಅಣ್ಣನಿಗೆ ಕೇಳಿದ್ದರು. ಅದಕ್ಕೆ ಅವರು ತಟ್ಟನೆ ಉತ್ತರಿಸಿದರು. ''ಕಷ್ಟ? ಸಂಗೀತದಾಗ ಕಷ್ಟ ಇರತದೇನೋ? ನಮ್ಮ ಪುಣ್ಯಾ ಅಂತ ನಾವು ಗಾಯಕರಾಗೇವಿ. ನಮ್ಮ ಜಗತ್ತಿನ್ಯಾಗ ಕಷ್ಟ ಅನ್ನೋದು ಏನೇನೂ ಇಲ್ಲ - ಫಕ್ತ ಆನಂದ ಇರತದ ನೋಡು.''

ತಾವು ಕೇವಲ ಈ ಆನಂದದ ಜಗತ್ತಿನಲ್ಲಿ ಇದ್ದೇವೆಂದು ಸಮಾಧಾನವಿಲ್ಲ ಅವರಿಗೆ, ಆದರೆ ಅಭಿಮಾನವಿದೆ. ಇಲ್ಲವಾದಲ್ಲಿ ಸಣ್ಣ ಹುಡುಗನ ತರದ ಈ ಸಾಧಾರಣ ಮನುಷ್ಯ ಆ ವಿಷಯದಲ್ಲಿ ತುಂಬ ಕಟ್ಟುನಿಟ್ಟಿನವರಾಗಿದ್ದಾರೆ. ಆಕಾಶವಾಣಿಯಲ್ಲಿ ಮಾರ್ಗದರ್ಶಕರೆಂಬ ನೌಕರಿಗೆ ಹೆಸರಾಂತ ಸಂಗೀತಗಾರರ ಪ್ರಯತ್ನ ನಡೆದಿತ್ತು. ಆ ದಿನಗಳಲ್ಲಿ ಮನ್ಸೂರರ ಆರ್ಥಿಕ ಪರಿಸ್ಥಿತಿ ಅಷ್ಟೇನು ಚೆನ್ನಾಗಿರಲಿಲ್ಲ. ಆದರೆ ಆಕಾಶವಾಣಿಯಿಂದ ತಾನಾಗಿ ಬಂದ ಆಮಂತ್ರಣವನ್ನು ಅವರು ಒಲ್ಲೆನೆಂದರು. ಅವರನ್ನು ಒಪ್ಪಿಸಬೇಕಾದರೆ ಆಕಾಶವಾಣಿಯ ಭಾವು ಸಾಹೇಬರಿಗೆ ಸಾಕು ಬೇಕಾಯಿತು. ಒಮ್ಮೆ ಒಪ್ಪಿಕೊಂಡು ಅವರು ಅಲ್ಲಿ ಹೋದನಂತರ ಮಾತ್ರ ಎಷ್ಟೋ ಉತ್ತಮ ಚೀಜಗಳನ್ನು ಧ್ವನಿಮುದ್ರಿಸಿ ಇಟ್ಟಿದ್ದಾರೆ. ಅವರು ಸಭೆಯಲ್ಲಿ ಜೀವ ಹಿಂಡಿ ಹಾಡುತ್ತಾರೆ. ಆದರೆ ಧಾರವಾಡದಲ್ಲಿಯ ಆ ತಮ್ಮ ಪುಟ್ಟ ನಿವಾಸದಲ್ಲಿ ಶಾಂತ ರೀತಿಯಿಂದ 'ಧುನ್' ಹಚ್ಚಿ ಕುಳಿತಾಗ ಅವರಿಗೆ ಅಧಿಕ ಆನಂದವೆನಿಸುತ್ತದೆ. ಧಾರವಾಡದಲ್ಲಿ ಒಂದು ಸಂಗೀತ ಪೀಠವನ್ನು ತೆರೆದು ಒಳ್ಳೆಯ ಶಿಷ್ಯರಿಗೆ ವಿದ್ಯಾದಾನ ಮಾಡಬೇಕೆಂದು ಅವರಿಗೆ ತುಂಬ ಆಶೆ ಇದೆ. ಅದರ ಪ್ರಯತ್ನವೂ ನಡೆದಿದೆ. ಆದರೆ ಅಣ್ಣನಿಗೆ ರಾಜಕೀಯದ 'ಡಾವ ಪೇಚ್' ಗೊತ್ತಾಗುವುದಿಲ್ಲ. ವಿದ್ಯಾಪೀಠಗಳು ವಿದ್ಯೆಯಿಂದ ಸೋಡಚೀಟಿಯನ್ನು ತೆಗೆದುಕೊಂಡಿವೆ ಎಂಬುದೂ ಅವರಿಗೆ ಗೊತ್ತಿಲ್ಲ. ಅಲ್ಲಿ ಈಗ ಹೊಟ್ಟೆಗಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜ್ಞಾನವನ್ನು ಮಾರುವ ಅಬ್ದುಜ್ಞಾನಿಗಳು ಮಾತ್ರ ನೌಕರಿ ಮಾಡುತ್ತಿದ್ದಾರೆ, ಇದು ಅವರಿಗೆ ಗೊತ್ತಿಲ್ಲ. ಅಲ್ಲಿ ಜನರು ಕಲೆ, ಸೌಂದರ್ಯ, ಸಂಸ್ಕೃತಿ ಮೊದಲಾದ ವಿಷಯಗಳ ಮೇಲೆ ಪ್ರಶ್ನೆಪತ್ರಿಕೆಗಳನ್ನು ತೆಗೆಯುತ್ತಾರೆ. ಮತ್ತು ಅವುಗಳಿಗೆ ಸಿದ್ಧ ಉತ್ತರಗಳಿದ್ದ ಗೈಡ್‌ಗಳನ್ನು ತರುತ್ತಾರೆ. ಚುನಾವಣೆಯ ರಾಜಕಾರಣವನ್ನು ಆಡುತ್ತಾರೆ.! ಇಂಥದೇ ಒಬ್ಬ ಡುಡ್ಡಾಚಾರ್ಯರು ಅವರ ಈ ಸಂಗೀತ ಶಿಕ್ಷಣದ ಉತ್ತಮ ಯೋಜನೆಗೆ ಮುದ್ದು ಇಟ್ಟರು. ನಮ್ಮ ಮಾತಿನ ಮಧ್ಯ ಆ ಗೃಹಸ್ಥನ ಹೆಸರು ಬರುತ್ತಿದ್ದಂತಯೇ ಅಣ್ಣ ತಟ್ಟನೆ ಸಿಡುಕಿನಲ್ಲಿ ಹೇಳಿದರು.

'ಛೀ ಛೀ! ಅಲ್ಲರೀ, ಇಲ್ಲಿ ತಂಬೂರಿಯನ್ನು ಹೊಂದಿಸಿಯಾಗಿದೆ. ಅಂಥ ಭ್ರಷ್ಟ ಮನುಷ್ಯನ ಹೆಸರನ್ನು ತೆಗೆದುಕೊಳ್ಳಬೇಡಿರಿ. ಆತ ಎಂದಾದರೂ ಸ್ವರದ ಆನಂದವನ್ನು ಪಡೆದಿದ್ದಾನೆಯೇ? ಅಲ್ಲ, ನಾವು ಅವನ ಕುರಿತು ಮಾತನಾಡುವುದೆಂದರೆ ನಮಗೆಯೇ ನಾಚಿಕೆ ಬರುವ ವಿಷಯ! ಸಂಗೀತ ನಡೆಯಲಿ, ಆತ ಯಾವ ವಿಷಯವನ್ನು ಕಲಿಸುತ್ತಾನೆಯೋ ಅದರಲ್ಲಾದರೂ ಮನಸ್ಸು ಹಾಕಿದ್ದರೆ ಮನುಷ್ಯನಾಗಬಹುದಿತ್ತು! ನಾಯಿಗಳೂ -ಇವನಿಗೂ ಏನು ಅಂತರವಿದೆ?''

ಸಂಗೀತದ ಕುರಿತು ಹಾಗೂ ಸಂಗೀತದಲ್ಲಿಯ ಉದಾಸೀನತೆಯ ಕುರಿತು ಅಧಿಕಾರ ಮದದಿಂದ ಉದ್ಗಾರ ತೆಗೆಯುವ ಯಾವುದೇ ಅತ್ಯುಚ್ಚ ಸ್ಥಾನದ ಕಾಗೆಗಳ ಕುರಿತು ಅವರಿಗೆ ಒಮ್ಮೆಲೇ ಹೀಗೆ ಸಿಟ್ಟು ಬರುತ್ತಿತ್ತು. ಆಗ ಪೂರ್ವಕಾಲದ ಋಷಿಗಳು ಸಾತ್ವಿಕ ಸಂತಾಪದ ದರ್ಶನವಾಗುತ್ತದೆ! ನಾನು ತಂಬೂರಿಯ ಶಿಷ್ಯನಿಗೆ ಸೂಚನೆ ಕೊಟ್ಟೆ. ತಂಬೂರಿಯ ಗುಂಜನ ಪ್ರಾರಂಭವಾಯಿತು. ಯಮನ ರಾಗದ ಸ್ವರದಿಂದ ವಾತಾವರಣ ಪ್ರಸನ್ನವಾಗಹತ್ತಿತ್ತು. ಹಾಡುವ ವ್ಯಕ್ತಿ ಮತ್ತೆ ತನ್ನ ಸುಖದ ತವರಿಗೆ ಹೋದ.

ದಂಡೆಯ ಮೇಲಿನ ಡೋಣಿಯೊಂದು ಸಮುದ್ರದಲ್ಲಿ ಹೊರಟಾಗ ಹೊರಗಿನ ಜಗತ್ತು ದೂರ -ದೂರವಾಗುತ್ತ ಹೋಗುತ್ತದೆ. ಅದರಂತೆ ಆ ಕೋಣೆಯ ಹೊರಗಿನ ಜಗತ್ತು ಸಾವಕಾಶವಾಗಿ ದೂರವಾಗಹತ್ತಿತು. ಒಳಗಿನ ಜಗತ್ತಿನಲ್ಲಿ ನಾವು ಇದ್ದೆವು. ಅಲ್ಲಿ ಆ ಹಾಡುವ ಮನುಷ್ಯನಿದ್ದ. ಆತ ಯಮನ ರಾಗದ ಮಹಾಸಾಗರವಾಗಿದ್ದ!

'ಗಣಗೋತಿ' ಗ್ರಂಥದಿಂದ
-ಕೃಷ್ಣ ಕೊಲ್ಹಾರಕುಲಕರ್ಣಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಫ್ಲೊರೆನ್ಸ ಮತ್ತು ಆದ್ಯಶಂಕರಾಚಾರ್ಯ

ಫ್ಲೊರೆನ್ಸಿನ ಆರ್ನೋ ನದಿಯ ದಡದ ಮೇಲೆ ಬೆಟ್ಟದ ಜಾಳಿಗೆಗಳೇ ಹಬ್ಬಿವೆ. ಅದರ ಇಳುಕಲುಗುಂಟ ವಿಶಾಲವಾದ ಉದ್ಯಾನಗಳೂ ಸುಂದರವಾದ ಕಟ್ಟಡಗಳೂ ಕಾಣಸಿಗುತ್ತವೆ. ನಿಸರ್ಗದೊಂದಿಗೆ ತಾದಾತ್ಮ್ಯ ಸಾಧಿಸಿದ ಅಲ್ಲಿಯ ವಾಸ್ತುರಚನೆ ಮನಮೋಹಕವಾಗಿದೆ. ಪ್ರತಿಯೊಂದು ಊರಿಗೂ ತನ್ನದೇ ಆದ ವ್ಯಕ್ತಿಮತ್ವ ಇರುತ್ತದೆ. ಆ ವ್ಯಕ್ತಿಮತ್ವಕ್ಕೆ ಎಳ್ಳಷ್ಟೂ ಚ್ಯುತಿಬಾರದಂತೆ ಇಲ್ಲಿ ದಕ್ಷತೆವಹಿಸಿದ್ದು ಎದ್ದು ಕಾಣುತ್ತದೆ.

ನಾನು ಮುಂಜಾನೆ ಎದ್ದು ಹೊಟೇಲಿನ ಮೇಲ್ಮಾಳಿಗೆಗೆ ಬಂದೆ. ಕಣ್ಣುಮುಂದೆಯೇ ನಿಧಾನವಾಗಿ ಆರ್ನೋ ನದಿ ಹರಿಯುತ್ತಿತ್ತು. ಅದರ ಎಡಬಲಗಳಲ್ಲಿ ಆಕರ್ಷಕವಾದ ಸೇತುವೆಯಿತ್ತು. ನದಿಯ ಎರಡೂ ದಡಗಳಲ್ಲಿ ರಸ್ತೆಗಳು ತಪಶ್ಚರ್ಯಕ್ಕೆ ಕುಳಿತವರೋ ಎಂಬಂತೆ ನದಿಯ ದಂಡೆಯ ಹಲವೆಡೆಗಳಲ್ಲಿ ಕುಳಿತು ಜನರು ನೀರಿಗೆ ಗಾಳಹಾಕಿ ಮೀನುಗಳನ್ನು ನೀರಿಕ್ಷಿಸುತ್ತಿದ್ದರು. ಅಲ್ಲಿನ ಸುತ್ತಲಿನ ವಾತಾವರಣವೇ ನಯನಮನೋಹರವಾಗಿತ್ತು.

ನದಿಯ ನೀರಿನಲ್ಲಿ ಸೂರ್ಯನ ಕೋಮಲ ಬಾಲಕಿರಣಗಳು ಬಿಂಬಸಿದ್ದವು. ಆಲ್ಹಾದಕರವಾದ ಹವೆ. ಫಲಪುಷ್ಪಗಳಿಂದ ತುಂಬಿ ತುಳುಕುವ ಉದ್ಯಾನ. ಅದರ ಸುತ್ತಣ ವಿಪುಲವಾದ ನೀರು. ತನ್ಮಧ್ಯೆ ಚರ್ಚಿನ ಘಂಟಾನಾದ. ಆಧುನಿಕ ಔದ್ಯೋಗಿಕ ಸಂಸ್ಕೃತಿಯ ಭಯಾನಕ ಆಕ್ರಮಣದ ಪ್ರಭಾವ ಈ ನಗರದ ಮೇಲೆ ಕಿಂಚಿತ್ತೂ ಆದಂತಿರಲಿಲ್ಲ. ಇದರ ಬದಲು ಜಗತ್ತಿನ ಮೆಚ್ಚುಗೆಗೆ ಪಾತ್ರವಾದ ಕಲಾಧನ ಇಲ್ಲಿ ಸೂರೆಗೊಂಡಿತ್ತು. ಚಿಂತನಶೀಲ ಕಲೋಪಾಸಕರಿಗೆ ಅವಶ್ಯಕವಾದ ಶಾಂತಿನೀಡಬಲ್ಲ ವಗರವಿದು. ರಸಿಕರಿಗೆ ರಸದೌತಣ ಇಲ್ಲಿ ಕಾದಿರುತ್ತದೆ ಅದರಂತೆಯೇ ಇದು ಕಲಾರಾಧಕರ ಸಾಧನ ಕ್ಷೇತ್ರ. ಬಾಲ್ಯ, ಯೌವ್ವನ, ವಾರ್ಧಕ್ಯ ಮುಂತಾದ ಜೀವನದ ಎಲ್ಲ ಹಂತಗಳಲ್ಲಿ ಮನವನ್ನು ಮುದಗೊಳಿಸುವ ವಾತಾವರಣ ಇಲ್ಲಿದೆ ಇಷ್ಟೆಲ್ಲಾ ಇದ್ದೂ ಈ ವರ್ಗದಲ್ಲಿ ಇಂಗ್ಲಿಷ ಭಾಷೆಯ ಜ್ಞಾನವುಳ್ಳ ರಸಿಕನೊಬ್ಬನ ಕೊರತೆ ಅನುಭವಕ್ಕೆ ಬರುತ್ತಿತ್ತು.

ಇಂಥ ಈ ಸ್ಥಳದಲ್ಲಿ ಇಂಗ್ಲೀಷ ಜ್ಞಾನವುಳ್ಳ 'ಹುಚ್ಚಪ್ಪನೊಬ್ಬ ನನಗೆ ಭೇಟಿಯಾಗಬಾರದೇ- ಎಂದು ಯೋಚಿಸುತ್ತಿರುವಾಗ ನನ್ನ ಮಿತ್ರ ಶರ್ವರೀಬಾಬು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಿಳಿಸಿದ ಒಬ್ಬ ವ್ಯಕ್ತಿಯ ವಿಳಾಸದ ನೆನಪಾಯಿತು. ಕೂಡಲೆ ನನ್ನ ಡೈರಿಯಿಂದ ಆ ವ್ಯಕ್ತಿಯ ಹೆಸರು, ವಿಳಾಸ ಹುಡುಕಿ ತೆಗೆದೆ.

ಅವನ ಹೆಸರು ಡಾಕ್ಟರ್ ಗಾಸ್ತೋನೆ. ಉಗುಚ್ಚಿ ಓನೀ ಎಂದು ಡೈರಿಯಲ್ಲಿ ಬರೆದಿತ್ತು. ಟೆಲಿಫೋನ ಡಿರೆಕ್ಟರಿಯಿಂದ ಆತನ ನಂಬರ ಹುಡುಕಿ ತೆಗೆದೆ. ಹೊಟೇಲಿನ ಆಪರೇಟರಳಿಗೆ ಆತನ ದೂರವಾಣಿಯ ನಂಬರವನ್ನು ಜೋಡಿಸಿಕೊಡಲು ವಿನಂತಿಸಿದೆ. ನನ್ನ ಹಿಂದುಗಡೆಯಲ್ಲಿ ಇಟಾಲಿಯನ್ ತರುಣಿಯೊಬ್ಬಳು ಕಿವಿಗೆ ಹಿತವಾಗುವಂತೆ ಮಾತನಾಡುತ್ತಿದ್ದಳು. ಆದರೆ ಆ ಭಾಷೆಯ ಗಂಧ-ಗಾಳಿ ನನಗಿರಲಿಲ್ಲ. ನನಗೆ ಇಟಾಲಿಯನ್ ಭಾಷೆ ತಿಳಿಯುವದಿಲ್ಲವೆಂದು ಹೇಳಿ ಆಕೆಯ ಕ್ಷಮೆ ಯಾಚಿಸಿದೆ. ಇಂಗ್ಲೀಷನಲ್ಲಿಯೇ ಅವಳೊಂದಿಗೆ ಮಾತನಾಡತೊಡಗಿದೆ. ನಾನು ಭಾರತದಿಂದ ಬಂದಿರುವೆನೆಂದು ತಿಳಿಸಿದನಂತರ ಆ ತರುಣಿ ಗಡಿಬಿಡಿಯಲ್ಲಿ ಏನನ್ನೋ ಗುಣುಗಿದಳು.

ಇದಾದ ಕೆಲವೇ ಸೆಕೆಂಡುಗಳಲ್ಲಿ ಗಂಭೀರವಾದ ದೊಡ್ಡ ಸ್ವರದಲ್ಲಿ ಸ್ವತಃ ಡಾಕ್ಟರರೇ 'ನಾಮಾಸ್ತೆ!' ಎಂದಾಗ ಅವರ ಮೊದಲ ನಮಸ್ಕಾರವೇ ನನ್ನನ್ನು ಚಿಟ್ಟಿ ಬೀಳುವಂತೆ ಮಾಡಿತು. ''ದೇಶಪಾಂಡೆ - ದೇಶಪಾಂಡೆ'' ಎಂದು ಎರಡು ಸಲ ನನ್ನ ಹೆಸರು ಹೇಳಿ ತನ್ನ ಉಚ್ಚಾರ ಸರಿಯಾಗಿದೆಯೆಂದು ನನ್ನಿಂದ ಖಾತ್ರಿ-ಪಡಿಸಿಕೊಂಡರು. ನಾನು ಮಾತ್ರ ಅವರ ಹೆಸರು 'ಉಗುಚ್ಚಿ ಓನೀ' ಯೋ ಅಥವಾ 'ಯುಗುಚ್ಚಿಯಾನೀ' ಯೋ ಎಂದು ಕೇಳಲು ಸಂಕೋಚ ಪಟ್ಟೆ! ಅವರು ನಮಗೆಲ್ಲ ತುಂಬಾ ಆಗ್ರಹಪೂರ್ವಕ ಸಂಜೆಯ ಹೊತ್ತಿಗೆ ತಮ್ಮ ಮನೆಗೆ ಬರುವಂತೆ ಒತ್ತಾಯಿಸಿ ಆಮಂತ್ರಣ ನೀಡಿದರು.

ಕೂಡಲೆ ನಾನು ನಮ್ಮ ಹೊಟೇಲ್ ಮ್ಯಾನೇಜರ ಸಾಹೇಬನಿಂದ ಡಾಕ್ಟರರ ವಿಷಯವಾಗಿ ಮಾಹಿತಿ ದೊರಕಿಸಲು ಪ್ರಾರಂಭಿಸಿದೆ. ಆದರೆ ಅವನಿಗೆ ಆ ಹೆಸರು ಅರ್ಥವಾಗಲಿಲ್ಲ. ಆಗ ನಾನು ನನ್ನ ಹತ್ತಿರ ಇರುವ ವಿಳಾಸ ಕಾಗದವನ್ನೇ ಅವನ ಕಣ್ಣೆದುರಿಗೆ ಹಿಡಿದೆ. ಅದನ್ನು ನೋಡಿ ಒಮ್ಮೆಲೇ ಅವನು ''ಓಹೋ ! ಒಹೋ!'' ಎಂದಿಷ್ಟೇ ಹೇಳಿ ಆಶ್ಚರ್ಯ ವ್ಯಕ್ತಪಡಿಸಿದ. ಇದರಿಂದ ನನಗೆ ಮಾತ್ರ ಡಾಕ್ಟರ್ 'ಉಗುಚ್ಚಿ ಓನೀ' ಫ್ಲೊರೆನ್ಸ ನಗರದಲ್ಲಿಯ ಪ್ರಖ್ಯಾತ ವ್ಯಕ್ತಿಯಾಗಿರಲೇ ಬೇಕು ಎಂಬ ಶಂಕೆಯಾಯಿತು.

''ವಿಶೇಷ ಕೆಲಸದ ನಿಮಿತ್ತ ನಿಮಗೆ ಡಾಕ್ಟರರನ್ನು ಭೇಟಿಯಾಗಲೇ ಬೇಕಾಗಿದೆಯೇ?'' ಎಂದು ಮ್ಯಾನೇಜರ ವಿಚಾರಿಸಿದನು.

''ಛೇ! ಸಹಜ!'' ಎಂದೆ ನಾನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

''ಸಹಜ?'' - ''ನಿಮಗೆ ಅವರ ಅಪಾಯಿಂಟ್ ಮೆಂಟ್ (Appointment) ದೊರಕಿದೆಯೇ?''

''ಹೌದು'' ಎಂದೆ ನಾನು.

''ಆಶ್ಚರ್ಯ !'' ಎಂದು ಆತ ತನ್ನ ಎರಡೂ ಭುಜಗಳನ್ನು ಹಾರಿಸಿದ !

ಡಾಕ್ಟರ್ ಗಾಸ್ಪೋನೆ ಉಗುಚ್ಚಿ ಓನೀ ಫ್ಲೋರೆನ್ಸನಗರದ ಸುಪ್ರಸಿದ್ಧ ಮಾನಸಿಕ ರೋಗ ತಜ್ಞ ಎಂಬುದು ನನಗೆ ಕೊನೆಯಲ್ಲಿ ತಿಳಿದು ಬಂತು. ದೇಶೀ ಭಾಷೆಯಲ್ಲೇ ಹೇಳಬೇಕೆಂದರೆ ಅವನೊಬ್ಬ ''ಹುಚ್ಚರ ವೈದ್ಯ''! ಈಗ ಮಾತ್ರ ಮ್ಯಾನೇಜರನು ನಮ್ಮತ್ತ ತೀರಾ ಸೂಕ್ಷ್ಮ ದೃಷ್ಟಿಯಿಂದ ಅವಲೋಕಿಸುತ್ತಿದ್ದಾನೆಂಬ ಶಂಕೆ ನನಗುಂಟಾಯಿತು. ನಾನು, ನನ್ನ ಪತ್ನಿ, ಮೀನಾ ಮತ್ತು ಸುಧಾಕರ ಇವರುಗಳಲ್ಲಿ ಆ ಡಾಕ್ಟರನ ಪೇಶಂಟ್ ಯಾರಾಗಿರಬಹುದೆಂದು ಅವನು ಊಹಿಸುತ್ತಿರಬೇಕು, ಎಂದುಕೊಂಡೆ.

ಅಷ್ಟರಲ್ಲಿ ಅವನ ಮುಂದೆಯೇ ನಾನು ನನ್ನ ಕಪ್ಪು ಕನ್ನಡಕದ ಗೂಡನ್ನು ಎಂದಿನಂತೆ ಅವಳ ಟೇಬಲ್ಲಿನ ಮೇಲೆ ಮರೆತುಬಿಟ್ಟು ಬಂದಿದ್ದೇನೆಂಬುದನ್ನು ನನ್ನ ಹಲವಾರು ವರ್ಷದ ಕೆಯರ್ ಟೇಕರ್ ಗವರ್ನಮೆಂಟ್ ನನ್ನ ಲಕ್ಷಕ್ಕೆ ತಂದುಕೊಡಬೇಕೇ? - ಅಷ್ಟೇ ಅಲ್ಲ, ''ಇವರು ಯಾವಾಗಲೂ ಹೀಗೆಯೇ - '' ಎಂದು ಅಭಿನಯ ಮಾಡಿ ತೋರಿಸಿಯೂ ಆಯಿತು! ಹೊಟೇಲಿನ ರಜಿಷ್ಟರಿನಲ್ಲಿ ಮೀನಾ ಡಾಕ್ಟರ್ ಎಂದೇ ನಮೂದಿಸಲಾಗಿತ್ತು. ಇವೆಲ್ಲ ಕಾರಣಗಳಿಂದಾಗಿ ಇವರೆಲ್ಲ ಒಟ್ಟುಗೂಡಿ ಫ್ಲಾರೆನ್ಸನ್ನು ಕಾಣಲು ನನ್ನನ್ನು ಕರೆದುಕೊಂಡು ಬಂದಿರದೆ ಆ ಮಾನಸಿಕ ಡಾಕ್ಟರರಿಗೆ ತೋರಿಸಲೆಂದೇ ನನ್ನನ್ನು ಕರೆದುಕೊಂಡು ಬಂದಿದ್ದಾರೆಂಬುದು ಅವನಿಗೆ ಖಾತ್ರಿಯಾಗಿರಬೇಕು. ಅವನು ಒಂದು ರೀತಿಯ ಕಾರುಣ್ಯಪೂರ್ಣ ದೃಷ್ಟಿಯನ್ನು ನನ್ನೆಡೆಗೆ ಬೀರಿದನು. ಯಾವನೊಬ್ಬ ವ್ಯಕ್ತಿ ಹುಚ್ಚನಿದ್ದಾನೆಂಬ ಹುಚ್ಚು ಇನ್ನೊಬ್ಬನ ತಲೆಹೊಕ್ಕಲ್ಲಿ ಅದನ್ನು ಅಲ್ಲಗಳೆಯುವ ಯತ್ನವನ್ನು ಜಾಣನಾದವನು ಮಾಡಕೂಡದು. ಮ್ಯಾನೇಜರ ಸಾಹೇಬನು ಡಾಕ್ಟರರ ಮನೆಯನ್ನು ತಲುಪಲು ಅನುಕೂಲವಾಗುವಂತೆ ಒಂದು ನಕಾಶೆ ತೆಗೆದುಕೊಟ್ಟನು. ನಾವೆಲ್ಲ ಡಾಕ್ಟರರ ಮನೆಯ ವಿಳಾಸ ಹುಡುಕುತ್ತ ಹೊರಟೆವು.

ಸುಮಾರು ನೂರು - ನೂರಿಪ್ಪತ್ತೈದು ವರ್ಷಗಳ ಹಿಂದೆ ಕಟ್ಟಿದ್ದ ಪ್ರಚಂಡ ಅರಮನೆಯಂತಹ ದೊಡ್ಡ ಬಂಗಲೆಯ ಮುಂದುಗಡೆ ನಾವು ನಿಂತಿದ್ದೆವು. ಅದರ ಹೆಸರು ''ವಿಲ್ಲಾ ಕಾನ್ಸ್ಟಾಂಝಾ'' - ಅದರ ಮೇಲ್ಗಡೆ ''ಕಾಸಾ ಡಿ ಕ್ಯೂರಾ ಪರ ಮಾಲೆಟ್ಟಿ ನರ್ವಾನೆ'' ಎಂಬ ಅಕ್ಷರಗಳನ್ನು ಓದಿದೆ. ಅದನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

''ಮನೋ-ರುಗ್ಣಾಲಯ'' ಎಂದು ಭಾಷಾಂತರಿಸಿದೆ. ಸ್ವತಃ ಡಾಕ್ಟರರ ಹೆಸರನ್ನು ಚಿಕ್ಕ ಅಕ್ಷರಗಳಲ್ಲಿ ಬರೆದಿಡಲಾಗಿತ್ತು. ಹುಚ್ಚರ ಆಸ್ಪತ್ರೆಯ ಒಳನುಗ್ಗಿ ಪೇಚಿಗೆ ಸಿಕ್ಕಿಕೊಳ್ಳುವದಕ್ಕಿಂತ ಮೊದಲೇ ಎಚ್ಚರಿಕೆ ವಹಿಸುವದು ಉತ್ತಮವೆಂದು ಯೋಚಿಸಿ ನನ್ನ ಹತ್ತಿರ ಇರುವ ವಿಳಾಸದೊಂದಿಗೆ ಆ ಅಕ್ಷರಗಳನ್ನು ಸರಿಯಾಗಿ ಹೊಂದಿಸಿ ನೋಡಿದೆ. ಹೀಗೆ ಹೋಲಿಸಿ ನೋಡುತ್ತಿರುವಾಗಲೇ ಡಾಕ್ಟರ ಹೊರಗೆ ಬಂದು ನನ್ನನ್ನೇ 'ಪೇಶಂಟ್' ಎಂದು ತಿಳಿದರೆ ಏನು ಗತಿ? - ಈ ಹುಚ್ಚರ ಆಸ್ಪತ್ರೆಯ ಡಾಕ್ಟರುಗಳ ತಲೆ ಯಾವಾಗ ತಿರುಗುತ್ತದೆ ಎಂದು ಹೇಳುವದೇ ಕಷ್ಟ! ಅಂತೂ ಕೊನೆಯಲ್ಲಿ ಕೈಯಲ್ಲಿರುವ ವಿಳಾಸ ಈ ಇಮಾರತಿನ ಮೇಲಿರುವ ವಿಳಾಸಕ್ಕೆ ಸರಿಹೊಂದುವುದೆಂಬುದನ್ನು ಖಚಿತಪಡಿಸಕೊಂಡು ಬಾಗಿಲು ಗಂಟೆಯ ಗುಂಡಿ ಒತ್ತಿದೆ. ಒಂದೇ ಕ್ಷಣದಲ್ಲಿ ಬಾಗಿಲು ತನ್ನಷ್ಟಕ್ಕೇ ತೆರೆದುಕೊಂಡಿತು. ಅದೊಂದು ಪ್ರಶಸ್ತ ಕೋಣೆಯಾಗಿತ್ತು. ಮೇಲಿನ ಮಾಳಿಗೆಗೆ ಹೋಗಲು ಮುಂಬಯಿಯ ಪಾರಸೀ ಧನಿಕರ ಹಳೆಯ ಬಂಗಲೆಗಳಿಗಿರುವಂತೆ ಆಕರ್ಷಕವಾದ ಉದ್ದ ಅಗಲವಾದ ಪಾವಟಿಗೆಗಳನ್ನು ಏರಬೇಕಾಗಿತ್ತು. ನಾವು ಕೆಲಹೊತ್ತು ಕೋಣೆಯಲ್ಲಿ ಸಂಕೋಚದಿಂದ ನಿಂತುಕೊಂಡೆವು. ಅಷ್ಟರಲ್ಲಿ ಮಾಳಿಗೆಯ ಪಾವಟಿಗೆಗೆ ತಿರುಗುವಲ್ಲಿ ಹಸನ್ಮುಖಿಯಾದ ಮಧ್ಯವಯಸ್ಸಿನ ಹೆಂಗಸೊಬ್ಬಳು ನಿಂತಿರುವುದು ಕಂಡು ಬಂತು. ಅವಳು, ''ನೀವು ಸೆನ್ಯೊರ್ ದೇಶಪಾಂಡೆಯೇ? '' ಎಂದು ನನ್ನನ್ನು ವಿಚಾರಿಸಿದಳು. ಅದಕ್ಕೆ ನಾನು ''ಹೌದು'' ಎನ್ನುವದಕ್ಕಿಂತ ಮೊದಲೇ ''ವೆಲ್‌ಕೋಮ್, ವೆಲ್‌ಕೋಮ್'' ಎನ್ನುತ್ತ ಅವಳು ನಮ್ಮನ್ನೆಲ್ಲ ಹಸ್ತಲಾಘವ ಮಾಡಿ ಸ್ವಾಗತಿಸಿದಳು. ''ಇತ ಇತೋ ಭವಾನ್'' ಎನ್ನುತ್ತ ಒಂದು ಪ್ರತೀಕ್ಷಾಕಕ್ಷೆಗೆ (Waiting room) ಕರೆದುಕೊಂಡು ಹೋದಳು. ''ಸ್ವಲ್ಪ ಕುಳಿತುಕೊಳ್ಳಿ, ಡಾಕ್ಟರ್ ಈಗಾಲೇ ಬಂದು ಬಿಡುತ್ತಾರೆ,'' ಎಂದು ಹೇಳಿ ಆ ಹೆಂಗಸು ನಾವು ಬಂದ ವರದಿ ಒಪ್ಪಿಸಲು ಒಳಗೆ ಹೋದಳು. ನಮ್ಮ ಮುಂದುಗಡೆಯೇ ಮಧ್ಯವಯಸ್ಸಿನ ಇಟಾಲಿಯನ್ ದಂಪತಿಗಳು ಕುಳಿತಿದ್ದು, ಇಂಥ ಆಸ್ಪತ್ರೆಗಳಲ್ಲಿ ಸಾಮಾನ್ಯವಾಗಿ ವ್ಯಕ್ತಿಗಳು ಚಿಂತೆಯಲ್ಲಿರುವಂತೆ ಅವರೂ ಚಿಂತಿತರಾಗಿ ತೋರುತ್ತಿದ್ದರು. ಇವರಿಬ್ಬರಲ್ಲಿ ಆ ಡಾಕ್ಟರ್ ಪೇಶಂಟ್ ಯಾರಿರಬಹುದು ಎಂದು ನಾನು ನನ್ನಷ್ಟಕ್ಕೇ ತರ್ಕಿಸುತ್ತಿದ್ದೆ. ಇಷ್ಟರಲ್ಲಿ ಇನ್ನೊಮ್ಮೆ, 'ನಾಮಾಸ್ತೇ!'' ಎಂಬ ಉದ್ಗಾರ ಕಿವಿಗೆ ಬೀಳುತ್ತಲೇ ನಾವೆಲ್ಲ ಒಮ್ಮೆಲೇ ಗಾಬರಿಗೊಂಡು ಎದ್ದು ನಿಂತೆವು.

ಸುಮಾರು ಆರು ಫೂಟು ಎತ್ತರ. ಆ ಎತ್ತರಕ್ಕೆ ಶೋಭಿಸುವ ಅಗಲ ಮತ್ತು ಎದ್ದುಕಾಣುವ ಸ್ಪಷ್ಟ ಕಣ್ಣು ಮೂಗು. ಶುಭ್ರಕೇಶರಾಶಿ, ಹಸನ್ಮುಖಿಯಾದ ಅವರಿಗೆ ಅರವತ್ತರ ಆಚೆಯ ವಯಸ್ಸಾಗಿದ್ದರೂ ಅತಿ ಸುಂದರವಾದ ದಷ್ಟ ಪುಷ್ಟ ವ್ಯಕ್ತಿತ್ವವುಳ್ಳ ಶರೀರ. 'ನಮಸ್ತೆ' ಎಂದು ಉದ್ಗರಿಸುತ್ತ ಅವರು ಕೈಜೋಡಿಸಿಕೊಂಡೇ ನಮ್ಮ ಮುಂದೆ ನಿಂತಿದ್ದರು. ಶುದ್ಧ ಇಟಾಲಿಯನ್ ಉಚ್ಚಾರದಲ್ಲಿ ಅವರು ನಮಗೆ , ''ಕೇವಲ ಐದು ಮಿನಿಟು ಮಾತ್ರ ಕಾದಿರಿ'', ಎಂದು ಇಂಗ್ಲೀಷನಲ್ಲಿ ಹೇಳಿ ಒಳಗಿನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೋಣೆಗೆ ಹೋದರು. ಅಷ್ಟರಲ್ಲೇ ನಮ್ಮ ಮುಂದೆ ಕುಳಿತ ಜೋಡಿಗೆ ಒಳಗೆ ಬರುವಂತೆ ಸೂಚಿಸಿದರು. ನಾವು ನಿಶ್ಚಿತ ಸಮಯಕ್ಕಿಂತ ಹತ್ತು ಮಿನಿಟು ಮೊದಲೇ ಅಲ್ಲಿಗೆ ಬಂದು ಕಾದಿದ್ದೆವು. ಕೆಲವೇ ಕ್ಷಣಗಳಲ್ಲಿ ಆ ಜೋಡಿ ಹೊರಬಿತ್ತು. ಅವರ ಜೊತೆಗೇ ಡಾಕ್ಟರರೂ ಬಂದರು. ಆ ಜೋಡಿ ಡಾಕ್ಟರರಿಂದ ಬೀಳ್ಕೊಂಡು ಹೋದರು.

ಡಾಕ್ಟರ್ ನಮ್ಮ ಕಡೆಗೆ ಬರುತ್ತಾ, ''ಬನ್ನಿ, ಭಾರತೀಯ ಮಿತ್ರರನ್ನು ಭೇಟಿಯಾಗುವ ನನ್ನ ಕೋಣೆಗೆ ಹೋಗೋಣ,'' ಎಂದರು. ಆ ಭವ್ಯ ಬಂಗಲೆಯಲ್ಲಿ ಪ್ರತ್ಯೇಕ ದೇಶದ ಅತಿಥಿಗಳ ಭೇಟಿಗೆಂದು ಬೇರೆ ಬೇರೆ ಕೋಣೆಗಳನ್ನೇ ಕಟ್ಟಿಸಿದ ಆ ಡಾಕ್ಟರ್ ನನಗೆ ತೀರಾ ವಿಚಿತ್ರ ವ್ಯಕ್ತಿ ಎಂದೆನಿಸಿತು. ನಮ್ಮೆಲ್ಲರ ಸವಾರಿ ಡಾಕ್ಟರರ ಹಿಂದೇ ಹೊರಟಿತು. ಆ ಸ್ಥೂಲ ಶರೀರದ ವ್ಯಕ್ತಿಯ ಮುಂದೆ ನಾವೆಲ್ಲಾ (ನಾನೂ ಸಹ !) ತುಂಬಾ ಕುಳ್ಳರಂತೆ ತೋರಿತು.

ನಮ್ಮ ಆಗಮನದಿಂದ ಡಾಕ್ಟರರಿಗೆ ತುಂಬಾ ಸಂತೋಷವಾದಂತೆ ಕಂಡು ಬಂತು. ಆದರೆ ಅವರ ಮುಖಚರ್ಯೆಯಲ್ಲಿ ಮಾತ್ರ, ''ಸ್ವಲ್ಪ ತಡೆಯಿರಿ, ನಿಮಗೊಂದು ಕುತೂಹಲದ ತಮಾಷೆ ಕಾದಿದೆ,'' ಎಂಬ ಸೌಮ್ಯಭಾವ ಎದ್ದು ಕಾಣುತ್ತಿತ್ತು. ನಾವೆಲ್ಲ ಒಂದು ಕೋಣೆಯ ಎದುರು ಬಂದೆವು. ಅದರ ಬಾಗಿಲು ಮುಚ್ಚಿತ್ತು. ಆ ಬಾಗಿಲ ಉದ್ದ ಅಗಲದ ಮೇಲಿಂದಲೇ ಆ ಕೋಣೆಯ ವಿಸ್ತೀರ್ಣದ ಕಲ್ಪನೆಯಾಗುತ್ತಿತ್ತು. ಡಾಕ್ಟರ್ ಬಾಗಿಲು ತೆರೆದರು. ತಾವೇ ಒಳಗೆ ಹೋಗಿ ಸರ್ರನೆ ಹೊರಳಿ ನಿಂತು, ''ಸುಸ್ವಾಗತಮ್! ಭಾರತದ ಬಗೆಗೆ ಇರುವ ನನ್ನ ಎಲ್ಲ ನೆನಹುಗಳೂ ಇಲ್ಲಿ ರೂಪುಗೊಂಡಿವೆ,'' ಎಂದರು.

ಆ ಬಾಗಿಲ ಮುಖಾಂತರ ಆದ ಆ ಕೋಣೆಯ ಪ್ರಥಮದರ್ಶನವು ನನ್ನ ಜೀವನದಲ್ಲಿಯೇ ಅಪೂರ್ವವಾದುದು. ನಮ್ಮ ಎದುರಿನ ಗೋಡೆಯ ಮೇಲೆ ಆದ್ಯ ಶಂಕರಾಚಾರ್ಯರು ವಟವೃಕ್ಷದ ಅಡಿಗೆ ಕುಳಿತು ತಮ್ಮ ಶಿಷ್ಯರಿಗೆ ಪಾಠ ಹೇಳುತ್ತಿರುವ ಸುಂದರ ದೃಶ್ಯವಿತ್ತು. ಆ ಕೋಣೆಯ ನಾಲ್ಕೂ ಗೋಡೆಗಳಿಗೆ ಮೇಲ್ಛಾವಣಿಗೆ ತಗಲುವ ಕಪಾಟುಗಳು. ಕಪಾಟುಗಳ ತುಂಬೆಲ್ಲಾ ಗ್ರಂಥಗಳ ರಾಶಿ ರಾಶಿ.

ಮುಂಬಯಿಯ ಏಶಿಯಾಟಿಕ್ ಸೊಸೈಟಿಯಲ್ಲಿ ಇಂಥಹದೇ ಒಂದು ಹಳೆಯ ಕೋಣೆಯಿದೆ. ಅಲ್ಲಿಯೂ ಕೋಣೆಯ ಮೇಲ್ಛಾವಣಿಗೆ ತಗಲುವ ಕಪಾಟುಗಳಿವೆ. ಈ ಡಾಕ್ಟರರ ಅಭ್ಯಾಸದ ಕೋಣೆಯೂ ಹಾಗೆಯೇ ಇತ್ತು. ಅಲ್ಲಿಯಂತೆ ಇಲ್ಲಿಯೂ ಮೇಲ್ಛಾವಣಿಗೆ ತಾಗುವ ಕಪಾಟುಗಳ ತುಂಬಾ ಗ್ರಂಥರಾಶಿಗಳು.

ಒಂದು ಮೂಲೆಯಲ್ಲಿ ಒಂದು ಸುಂದರ ಕೆತ್ತನೆಯ ಕಲಾಕೃತಿಯುಳ್ಳ ಮೇಜಿನ ಮೇಲೆ ನಂದಾದೀಪಗಳು ಬೆಳಗುತ್ತಿದ್ದವು. ಅದರಲ್ಲಿ ಚಿಕ್ಕ ದೇವರ ಮಂಟಪ, ಪೂಜಾ ಸಾಮಗ್ರಿ ಮತ್ತು ಒಂದು ಅಗರ ಬತ್ತಿಯ ಕಟ್ಟುಗಳು ಇದ್ದವು. ದೇವರ ಮಂಟಪದಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶಂಖ, ಶಿವಲಿಂಗ ಅಲ್ಲದೆ ಸಾಲಿಗ್ರಾಮವೂ ಇತ್ತು. ಒಂದು ತೆರೆದ ಬುಕ್ ಶೆಲ್ಫಿನ ಅರ್ಧಭಾಗ ಟೇಪರೆಕಾರ್ಡಪ್ಲೇಯರ ಮುಂತಾದವುಗಳಿಂದ ತುಂಬಿತ್ತು. ಉಳಿದ ಭಾಗಗಳಲ್ಲಿ ಲಾಂಗ್ ಪ್ಲೇಯಿಂಗ ರೇಕಾರ್ಡುಗಳಿದ್ದವು. ಟೇಪ್‌ಗಳ ಒಂದು ಪೆಟ್ಟಿಗೆಯೇ ಇತ್ತು. ಆ ಬುಕ್ ಶೆಲ್ಫಿನ ಹತ್ತಿರ ಗೋಡೆಯ ಮೇಲೆ ಖಾಲಿ ಇರುವ ಸ್ಥಳದಲ್ಲಿ ಏಸೂ ಕ್ರಿಸ್ತನ ಸುಂದರ ಚಿತ್ರವಿತ್ತು. ನಾನು ತದೇಕ ದೃಷ್ಟಿಯಿಂದ ಆ ಚಿತ್ರವನ್ನೇ ಅವಲೋಕಿಸುತ್ತಿದ್ದೆ. ಕ್ರಿಸ್ತನ ಚಿತ್ರ ನೋಡುವದೆಂದರೆ ನನಗೆ ಯಾವಾಗಲೂ ಇಷ್ಟ. ಹಲವು ನಿಮಿತ್ತಗಳಿಂದ ಹಲವಾರು ಸಲ ನಾನು ಪಶ್ಚಿಮ ದೇಶಗಳಲ್ಲಿ ಪ್ರವಾಸ ಕೈಗೊಂಡಿದ್ದೇನೆ. ಮೇರಿ ಮಾತೆಯ ಮುದ್ದು ಮಗುವಾದ ಯೇಸು ಕ್ರಿಸ್ತನಿಂದ ಹಿಡಿದು ಶಿಲುಬೆಗೇರಿಸಿದ ಕ್ರಿಸ್ತನ ವರೆಗೆ ಕ್ರಿಸ್ತನ ಅಸಂಖ್ಯ ದರ್ಶನವಾಗಿದೆ. ನಾನು ಮೊದಲಿನಂತೆ ತದೇಕ ದೃಷ್ಟಿಯಿಂದ ಚಿತ್ರವನ್ನು ನೋಡುತ್ತಲೇ ಇದ್ದೆ. "ಈ ಗೃಹಸ್ಥನ ತಲೆಯಲ್ಲಿ ಏಸೂ ಕ್ರಿಸ್ತ ಮತ್ತು ಆದ್ಯಶಂಕರಾಚಾರ್ಯರನ್ನು ಎದುರು ಬದುರಾಗಿಟ್ಟ ಗುಟ್ಟೇನು" ಎಂಬ ಸಂಶಯದ ಹುಳು ಕೊರೆಯುತ್ತಿರಬೇಕು ಎಂಬ ಶಂಕೆ ಡಾಕ್ಟರರಿಗೆ ಬಂತೋ ಏನೋ! ನಾನು ಕೇಳುವ ಮೊದಲೇ ಅವರು ನುಡಿದರು. "ನನ್ನ ಪೂರ್ವಜನ್ಮದ ಗುರು ಈತ. ನನ್ನ ಈ ಜನ್ಮ ಗುರು ಆತ". ಹೀಗೆನ್ನುತ್ತ ಎರಡೂ ಕೈಗಳನ್ನು ಜೊಗಸೆ ಮಾಡಿ ಶಂಕರಾಚಾರ್ಯರ ಫೋಟೋದ ಕಡೆಗೆ ಎತ್ತಿದರು. ಡಾಕ್ಟರರ ಭಕ್ತಿಭಾವ ಕಂಡು ನಾನು ಚಕಿತನಾದೆ. ಕ್ರೈಸ್ತೀ ಜೀವನದ ಸುಂದರ ಕಲಾತ್ಮಕ ಸಂಸ್ಕಾರ ಅವರ ಜೀವನದ ಕಣಕಣಗಳಲ್ಲೂ ಆಗಿರುವ ಫ್ಲೊರೆನ್ಸಿನಂತಹ ಜಗತ್ಪ್ರಸಿದ್ಧ ನಗರದಲ್ಲಿ ಒಬ್ಬ ಅತ್ಯಂತ ಯಶಸ್ವೀ ಮನೋರೋಗ ತಜ್ಞ ಕ್ರಿಸ್ತನನ್ನು ತನ್ನ ಪೂರ್ವಜನ್ಮ ಗುರು ಎನ್ನುತ್ತಿರುವಾಗಲೇ ಸಾವಿರಾರು ಮೈಲುಗಳ ಆಚೆ ಇರುವ ಅತ್ಯಂತ ಭಿನ್ನ ಸಂಸ್ಕೃತಿಯುಳ್ಳ ಆದ್ಯ ಶಂಕರಾಚಾರ್ಯ ಪಟದ ಎದುರು ಮಾತ್ರ, ' ಈ ಜೊಗಸೆಯಲ್ಲಿ ನಿಮ್ಮ ಕೃಪಾ ಪ್ರಸಾದ ನೀಡಿರಿ' ಎಂದು ಬೇಡುತ್ತ ನಿಂತಿದ್ದ! ವಂಶ, ಧರ್ಮ, ದೇಶ, ಭಾಷೆ ಮುಂತಾದ ಯಾವುದೇ ಹತ್ತಿರದ ಸಂಬಂಧವಿಲ್ಲದ ಒಬ್ಬ ಸನ್ಯಾಸಿಯನ್ನು ಈತನು ಈ ಜನ್ಮದ ತನ್ನ ತಂದೆ - ತಾಯಿ , ಗುರು, ಗೆಳೆಯ - ಬಂಧು ಮುಂತಾಗಿ ಎಲ್ಲವೂ ಅವನೇ ! "ಹೀ ಈಜ್ ಮಾಯ್ ಗುರೂ ಮಾಯ್ ಎವ್ವರಿಥಿಂಗ್ !" ಎನ್ನುತ್ತಿದ್ದಾನೆ.

ಫ್ಲೊರೆನ್ಸ ನಗರದ ಸುಂದರ ಚರ್ಚುಗಳಲ್ಲಿ ಸುತ್ತಾಡುತ್ತಿರುವಾಗಲೇ ಶಿಲುಬೆಯ ಎದುರು ನತಮಸ್ತಕರಾಗಿ ಮೊಣಕಾಲ ಮುಂಡಿಯೂರಿ ಕುಳಿತ ಹಲವಾರು ಭಾವಿಕ ಕ್ರಿಶ್ಚಿಯನ್ನರನ್ನು ನಾನು ಕಂಡಿದ್ದೆ. ಮನುಷ್ಯನ ಮೆದುಳಿನ ತೊಡಕಿನ ಸಮಸ್ಯೆಗಳನ್ನು ಬಿಡಿಸಬಲ್ಲ ಇದೇ ನಗರದ ಒಬ್ಬ ವೈದ್ಯರಾಜನು ಮಾತ್ರ ಇಲ್ಲಿ ಆದ್ಯ ಶಂಕರಾಚಾರ್ಯರ ಪಟದ ಎದುರು ಕೈಜೋಡಿಸಿ ನಿಂತುಕೊಂಡಿದ್ದ!- ಆರ್ನೊ ನದಿಯ ತೀರದಲ್ಲಿ ಬೆಳೆದ ವ್ಯಕ್ತಿಯೊಬ್ಬನಿಗೆ ಪೆರಿಯಾರ್ ನದಿ ತೀರದ ಮೋಹ ಬೆಳೆದಿತ್ತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಾನು ದೂರದ ಹಿಂದುಸ್ಥಾನದಿಂದ ಫ್ಲೊರೆನ್ಸಿನ ಕಲಾವೈಭವ ನೋಡಲು ಬಂದವನು ಆ ಕಲಾವೈಭವಕ್ಕೆ ಸಂಪೂರ್ಣ ಮಾರುಹೋಗಿದ್ದೆ. ಆದರೆ ಡಾಕ್ಟರ ಉಗುಚ್ಚಿ ಓನೀ ಆದ್ಯ ಶಂಕರಾಚಾರ್ಯರ ಬುದ್ಧಿ ವೈಭವದ ತೇಜದಿಂದ ಬೆಳಗುತ್ತಿದ್ದರು. ಇಷ್ಟೆ ಅಲ್ಲ, ಆ ತೇಜಸ್ಸಿನಲ್ಲಿ ಅವರ ಅಂತರ್‌ಬಾಹ್ಯವೆಲ್ಲ ಬೆಳಗಿ ಹೋಗಿತ್ತು. ಅವರ ದೇಹ ಫ್ಲೊರೆನ್ಸಿನಲ್ಲಿದ್ದರೂ ಮನ ಭಾರತದಲ್ಲಿ ಮನೆ ಮಾಡಿತ್ತು. ದಿನನಿತ್ಯದ ವ್ಯವಹಾರ ಮುಗಿದ ಕೂಡಲೆ ಅವರು ಆದ್ಯ ಶಂಕರಾಚಾರ್ಯರ ಕೋಣೆಗೆ ಬಂಧು ಸುತ್ತುಮುತ್ತಲಿನ ಫ್ಲೊರೆನ್ಸನ್ನೇ ಮರೆತು ಬಿಡುತ್ತಿದ್ದರು.

ನಾನು ಅಲ್ಲಿರುವ ಅಪಾರ ಗ್ರಂಥರಾಶಿಗಳತ್ತ ಕಣ್ಣು ಹಾಯಿಸಿದೆ. ವೇದ, ಉಪನಿಷತ್, ಗೀತಾ ಈ ಗ್ರಂಥಗಳ ಮೇಲಿನ ಭಾಷ್ಯಗಳು, ಭಾರತೀಯ ಇತಿಹಾಸ, ಭಾರತೀಯ ಸಂತರ ಚರಿತ್ರೆಗಳ ರೂಪದಲ್ಲಿ ತತ್ವಜ್ಞಾನ ಗಂಗೆಯನ್ನೇ ಇಲ್ಲಿ ಕ್ರೋಢೀಕರಿಸಲಾಗಿತ್ತು. ನಾನು ಕೆಲವು ಗ್ರಂಥಗಳನ್ನು ತಿರುವಿ ಹಾಕಿದೆ. ಪುಟಗಳ ಮೇಲೆ ಖಾಲಿ ಇರುವ ಜಾಗದಲ್ಲಿ ಡಾಕ್ಟರ್ ಮಹತ್ವದ ಅಂಶಗಳನ್ನೆಲ್ಲ ಬರೆದಿಟ್ಟಿದ್ದರು. ಕೆಲವೆಡೆಗಳಲ್ಲಿ ಪ್ರಶ್ನಾರ್ಥಕ ಚಿನ್ಹೆಗಳಿದ್ದರೆ ಹಲವೆಡೆ ವಾಕ್ಯಗಳ ಕೆಳಗಡೆ ಗೆರೆಹೊಡೆಯಲಾಗಿತ್ತು. ಉದ್ಯೋಗದಲ್ಲಿ ಡಾಕ್ಟರ್ ಆಗಿಯೂ ಹಲವಾರು ಮಹತ್ವದ ಗ್ರಂಥಗಳಲ್ಲದೆ ಕೆಲಕೆಲವು ದುರ್ಮಿಳ ಗ್ರಂಥಗಳನ್ನು ಸಂಗ್ರಹಿಸಿದ್ದರು. ಅವುಗಳನ್ನೆಲ್ಲ ನನಗೆ ತೋರಿಸುತ್ತಿದ್ದರು. ಆ ಗ್ರಂಥಾಗಾರದಲ್ಲಿ ತತ್ವಜ್ಞಾನದ ಗ್ರಂಥಗಳಿರುವಂತೆಯೇ ಭಾರತೀಯ ಶಿಲ್ಪಕಲೆಯನ್ನಾಧರಿಸಿದ ಕುಮಾರಸ್ವಾಮಿಯಂತಹ ಮಹಾಪಂಡಿತರು ಬರೆದ ಗ್ರಂಥಗಳಿದ್ದವು. ನಾವು ಇವುಗಳನ್ನೆಲ್ಲ ನೋಡುತ್ತಲೇ ಇದ್ದೆವು. ಅವುಗಳ ಕುರಿತು ಚರ್ಚಿಸುತ್ತಿದ್ದೆವು. ಓಗೆ ಇಷ್ಟು ಹೊತ್ತು ಡಾಕ್ಟರರು ನನಗೆ ಎಲ್ಲಿಂದ ಬಂದೆ? ನೀನೇನು ಮಾಡುತ್ತೀ? ಎನ್ನುವಂತಹ ನನಗೆ ಸಂಬಂಧಪಟ್ಟ ಯಾವದೇ ವಿಚಾರವನ್ನು ಎತ್ತಲಿಲ್ಲ. 'ನಾನು ಭಾರತೀಯ' ಎಂಬ ಭಾಂಡವಲು ಒಂದೇ ಅವರಿಗೆ ಸಾಕಾಗಿತ್ತು. 'ತವರಿನ ಮನುಷ್ಯ' ಎನ್ನುತ್ತಲೇ ತಾನಾಗಿಯೇ ದೊರಕುವ ಸ್ವಾಗತದಂತ ಒಂದು ರೀತಿಯ ಆತ್ಮೀಯತೆ ನಮ್ಮನ್ನು ಬಂಧಿಸಿತ್ತು.

ಅಷ್ಟರಲ್ಲಿ ಬಾಗಿಲು ತೆರೆಯಿತು. ಈ ಹಿಂದೆ ಭೇಟಿಯಾದ ಹೆಂಗಸು ಕೈಯಲ್ಲಿ ಟ್ರೇ ಮತ್ತು ಕಪ್ಪು ಬಸಿಗಳನ್ನು ಹಿಡಿದುಕೊಂಡು ಬಂದಳು. ಯಾವುದೋ ಪೇಯ ತುಂಬಿದ ಗ್ಲಾಸುಗಳು ಇದ್ದವು. ಒಂದು ದೊಡ್ಡ ಹರವಾದ ಬಸಿಯಲ್ಲಿ ಪರಿಪಕ್ವವಾದ ರಸಭರಿತ ಮಾವಿನ ಹಣ್ಣಿನ ಹೋಳುಗಳಿದ್ದವು.

'ಇವು ಭಾರತದ ಮಾವಿನ ಹಣ್ಣುಗಳು ' ಎಂದರು ಡಾಕ್ಟರ್. ನಂತರ ಹಣ್ಣುಗಳ ಕುರಿತು ಮಾತುಕತೆಗಳಾದವು. ನಾನು ಇಟಲಿಯ ಪೀಚ್ ಹಣ್ಣುಗಳನ್ನು ಪ್ರಶಂಸಿದೆ. ನಿಜವಾಗಿ ನಾನು ಈ ಹಿಂದೆ ಇಷ್ಟು ಉತ್ತಮ ಪೀಚ್ ಹಣ್ಣುಗಳನ್ನು ತಿಂದಿರಲಿಲ್ಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆದರೆ ಡಾಕ್ಟರರಿಗೆ ಭಾರತದ ಭೂತ ಸಂಪೂರ್ಣವಾಗಿ ಬಡಿದಿತ್ತು. 'ಭಾರತದ ಮಾವಿನ ಹಣ್ಣಿನಂತಹ ಹಣ್ಣೇ ಇಲ್ಲ,' ಎಂಬುದು ಅವರ ಅಭಿಪ್ರಾಯವಾಗಿತ್ತು. ನಾವೆಲ್ಲಾ ಹಣ್ಣು ತಿಂದೆವು. ನಾನು ಖಾದ್ಯ ಪದಾರ್ಥಗಳ ಚರ್ಚೆ ನಿಲ್ಲಿಸಿದೆ. ಏಕೆಂದರೆ ಇಟಾಲಿಯನ್ ಪಿಝ್ಝಾಕ್ಕಿಂತ ಆಲೂಗಡ್ಡೆಯ ಭಾಜಿಯನ್ನು ತುಂಬಿದ ಮಸಾಲಾ ದೋಸೆಯೇ ಹೆಚ್ಚು ಶ್ರೇಷ್ಠ ಎಂಬುದನ್ನು ಕೇಳಲು ನಾನು ಸಿದ್ಧನಾಗಿರಲಿಲ್ಲ. ನನ್ನ ಲಕ್ಷವೆಲ್ಲ ಮುಂದಿನ ಪೇಯದ ಮೇಲಿತ್ತು. ಅದು ನಿಂಬೆ ಪಾನಕವೆಂದು ಗೊತ್ತಾದಾಗ ನಾನು ಆಶ್ಚರ್ಯಗೊಂಡೆ. ಆ ಪೇಯಕ್ಕಿಂತ ಇಟಾಲಿಯನ್ 'ಟೀ ಅಂಟೀ, ಬಾರ್ದೋಲಿಗೊ, ಕೊರೊನಾತಾ ಕಾಸ್ತೇಲಿ, ರೋಮಾನೀ' ಮುಂತಾದ ಹೆಸರುಗಳುಳ್ಳ ಕೆಲವು ಪೇಯಗಳು ಹೆಚ್ಚು ಉಲ್ಲಾಸಮಯವಾಗಿರುತ್ತವೆ. ಆದರೆ ನಿಂಬೆ ಪಾನಕದ ಗುಟುಕಿನೊಂದಿಗೇನೇ ಆ ಎಲ್ಲಾ ಹೆಸರುಗಳನ್ನು ನುಂಗಿ ಬಿಟ್ಟೆ!

ಡಾಕ್ಟರ್ ತಮ್ಮ ಕೋಚಿನಲ್ಲಿ (Coach) ಕುಳಿತುಕೊಳ್ಳುತ್ತಲೇ ಒಂದು ಯಂತ್ರದ ಗುಂಡಿಯನ್ನು ಒತ್ತಿದರು. ಆಗ ಮುಂದಿನ ಸ್ಟ್ಯಾಂಡಿನ ಮೇಲೆ ಒಂದು ಚಿತ್ರಪಟದ ಪಡದೆ ತನ್ನಷ್ಟಕ್ಕೇ ಮೇಲೆದ್ದಿತು. 'ನಡೆಯಿರಿ, ಸ್ವಲ್ಪ ಭಾರತ ದರ್ಶನಮಾಡಿ ಬರೋಣ,' ಎಂದರು ಡಾಕ್ಟರ್.

ಆಗ ನಾನು ಈ ಹಿಂದೆ ಹಲವಾರು ಕೇಳಿರಬಹುದಾದಂತಹ ಪ್ರಶ್ನೆಗಳನ್ನೇ ಅವರಿಗೆ ಕೇಳಿದೆ. ''ಡಾಕ್ಟರ್, ನಮ್ಮ ದೇಶದ ಬಗ್ಗೆ ನಿಮ್ಮಲ್ಲಿ ಇಂತಹ ಸೆಳೆತ ಹೇಗೆ ಹುಟ್ಟಿತು?'' ''ಈಟ್ ಈಜ್ ಎ ಮಿಸ್ಟರಿ'' - ಅದೊಂದು ಒಗಟು. ಹೀಗೆಂದು ಅವರು ಒಂದು ಕತೆಯನ್ನು ನನಗೆ ಹೇಳಿದರು. ಅದನ್ನು ಕೇಳಿ ನಾನೂ ಕೂಡ ಒಂದು ಒಗಟಿನಲ್ಲಿ ಸಿಕ್ಕಬಿದ್ದೆ. ತಮ್ಮಲ್ಲಿರುವ ಸ್ಲಾಯಿಡುಗಳನ್ನು (Slides) ಆ ಪ್ರೊಜೆಕ್ಟರುಗಳ ಮೇಲೆ ಬೀರುವ ಚಕ್ರಾಕಾರವಾದ ಟ್ರೇದಲ್ಲಿ ಕೂಡ್ರಿಸುತ್ತ ಅವರು ಹೇಳಲಾರಂಭಿಸಿದರು.

'' ಆಗ ನಾನು ಇನ್ನೂ ಚಿಕ್ಕವನಿದ್ದೆ. ಒಂಬತ್ತು -ಹತ್ತು ವರುಷದವನಿರಬಹುದು. ಆ ಕಾಲಕ್ಕೆ ಕನಸಿನಲ್ಲಿ ನನಗೆ ದೇಗುಲದಂತಹ ಒಂದು ಕಟ್ಟಡ ಕಾಣುತ್ತಿತ್ತು. ಯಾರೋ ಒಬ್ಬ ದೇಗುಲಕ್ಕೆ ಹೋಗಲು ನನ್ನನ್ನು ಒತ್ತಾಯಿಸುವರಂತೆ ನನಗನಿಸುತ್ತಿತ್ತು. ಒಂದಲ್ಲ - ಎರಡಲ್ಲ - ಹಲವಾರು ಸಲ ನಾನು ಈ ಕನಸು ಕಂಡೆ.''

ಮನೋರುಗ್ಣಾಲಯದ ಡಾಕ್ಟರರಿಗೆ ಮಾನಸಿಕ ವ್ಯಾಧಿಯಿಂದ ತೊಳಲುತ್ತಿರುವ ಹಲವರು ಅವರ ಮುಂದೆ ಕೋಚಿನ ಮೇಲೆ ಅಡ್ಡ ಬಿದ್ದು ತಮ್ಮ ಬಾಳಿನ ಕತೆಗಳನ್ನೆಲ್ಲ ಹೇಳುತ್ತಿರುತ್ತಾರೆ. ಆದರೆ ಇಲ್ಲಿ ಮಾತ್ರ, ಮಾನಸಿಕ ರೋಗ ತಜ್ಞರಾದ ಡಾಕ್ಟರ್ ಒಬ್ಬರು ಆಸನದಲ್ಲಿ ಕುಳಿತು ತಮ್ಮದೇ ಕತೆಯನ್ನು ನನಗೆ ಹೇಳುತ್ತಿದ್ದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

"…..ಆ ದೇಗುಲದ ಚಿತ್ರ ನನ್ನ ಮನಃಪಟಲದಲ್ಲಿ ಸ್ಪಷ್ಟವಾಗಿ, ಸ್ಥಿರವಾಗಿ ಅಚ್ಚೊತ್ತಿತ್ತು. ಅದರ ವಾಸ್ತುರಚನೆ ಮಾತ್ರ ಎಲ್ಲಕ್ಕಿಂತ ಬೇರೆ ರೀತಿಯೇ ಆಗಿತ್ತು. ನಮ್ಮ ಫ್ಲೋರೆನ್ಸಿನಲ್ಲಿಯ ವಾಸ್ತುವನ್ನು ನೀವು ಈಗಾಗಲೇ ನೋಡಿರಲು ಸಾಕು. ಆ ವಾಸ್ತು ರಚನೆಗೂ ನನ್ನ ಕನಸಿನಲ್ಲಿ ಕಂಡ ದೇಗುಲದ ವಾಸ್ತುರಚನೆಗೂ ಯಾವದೇ ಹೋಲಿಕೆ ಇರಲಿಲ್ಲ. ನನ್ನ ಕನಸಿನಲ್ಲಿಯ ಆ ದೇಗುಲದ ರಹಸ್ಯವೇ ಹೊಳೆಯದಾಗಿತ್ತು. - ಇಷ್ಟೇ ಅಲ್ಲ, ಅದು ದೇಗುಲವೇ ಆಗಿತ್ತೋ ಇಲ್ಲವೋ ಎನ್ನುವುದರ ಅರಿವು ಕೂಡಾ ನನಗಿರಲಿಲ್ಲ. ನಾನು ತಂದೆಯ ಎದುರಿಗೆ ಆ ವಾಸ್ತುರಚನೆಯನ್ನು ಬಣ್ಣಿಸಿ ಹೇಳಿದೆ. ಅದಕ್ಕೆ ಅವರು ಓರಿಯೆಂಟಲ್ (ಪೌರ್ವಾತ್ಯ) ಪಗೋಡಾಗಳ ಹಾಗೇ ಅದು ಇರುತ್ತದೆ ಎಂದರು.

- ಆ ನಂತರ ನಾನು ಗ್ರಂಥಾಲಯಗಳಿಗೆ ಹೋಗಿ ವಿವಿಧ ದೇಶಗಳ ವಾಸ್ತು-ಶಿಲ್ಪಗಳ ಮೇಲಿನ ಗ್ರಂಥಗಳನ್ನು ತಿರುವಿ ಹಾಕಲು ಆರಂಭಿಸಿದೆ. ಹೀಗಿರುವಾಗ ಒಂದು ಗ್ರಂಥದಲ್ಲಿ ಮಾತ್ರ ನನ್ನ ಕನಸಿನಲ್ಲಿ ಕಂಡುಬರುವ ಅದೇ ಚಿತ್ರ ನೋಡಲು ದೊರಕಿತು. ಇರಲಿ. - ಒಂದು ನಿಮಿಷ ಕಾದಿರಿ" ಎನ್ನುತ್ತ ತಮ್ಮ ಕಪಾಟಿನಿಂದ ಜೀರ್ಣವಾದ ಒಂದು ಗ್ರಂಥವನ್ನು ಹೊರತೆಗೆದರು.

" ಇದೇ ಆ ದೇಗುಲ." ದಕ್ಷಿಣ ಹಿಂದುಸ್ಥಾನದಲ್ಲಿ ಕಾಂಚಿಯಲ್ಲಿ ಆದ್ಯ ಶಂಕರಾಚಾರ್ಯರು ಸ್ಥಾಪಿಸಿದ 'ಕಾಮಾಕ್ಷಿ'ಯ ಮಂದಿರ ಅದಾಗಿತ್ತು. "ಬಹುಶಃ ಎಚ್ಚೆತ್ತಾಗ ನೀವು ನಿಮ್ಮ ಶಾಲೆಯ ಪಠ್ಯ ಪುಸ್ತಕಗಳಲ್ಲಿ ಆ ಚಿತ್ರವನ್ನು ನೋಡಿರಬಹುದು …." ಎಂದೆ ನಾನು.

ಮನೋರೋಗದ ಇಂಥ ಸುಪ್ರಸಿದ್ಧ ತಜ್ಞ ಡಾಕ್ಟರರೊಂದಿಗೆ ಸ್ವಪ್ನಶಾಸ್ತ್ರವನ್ನು ಚರ್ಚಿಸುವದು ತುಸು ಅಧಿಕಪ್ರಸಂಗವೇ ಆಗಿತ್ತು. ಆದರೆ ಡಾಕ್ಟರ್ ಮಾತ್ರ ತೀರಾ ಶಾಂತರಾಗಿ ಅಂದರು; "ನಮ್ಮ ಬಾಲ್ಯದ ಪಠ್ಯ ಪುಸ್ತಕಗಳಲ್ಲಿ ಪೂರ್ವದೇಶಗಳ ಸಂಸ್ಕೃತಿಯ ವಿಷಯವಾಗಿ ಹೆಚ್ಚಾಗಿ ಇಂಥ ಮಾಹಿತಿ ಇರುತ್ತಿರಲಿಲ್ಲ."

ಅಘಟಿತ ನೈಜ ಸಂಗತಿಗಳ ಕುರಿತು ನಾನು ಆಳವಾಗಿ ಚರ್ಚಿಸಲಾರೆ. ಚಮತ್ಕಾರ ಮತ್ತು ತಪ್ಪುತಿಳುವಳಿಕೆಗಳ ಬೆನ್ನು ಹತ್ತುವದು ಅಷ್ಟೊಂದು ಸಮಂಜಸವಲ್ಲ. ಕಾರಣ ಯಾವುದೇ ಇರಲಿ ಆ ದೇಗುಲ ಮಾತ್ರ ಡಾಕ್ಟರರ ಮನದಲ್ಲಿ ಆಳವಾಗಿ ಬೇರೂರಿತ್ತು. ಅದರಲ್ಲಿಯ ಈ ಸತ್ಯ ನನ್ನ ಮಟ್ಟಿಗೆ ಸಾಕಿತ್ತು. ಆ ದೇಗುಲವನ್ನು ಆದ್ಯ ಶಂಕರಾಚಾರ್ಯರು ಸ್ಥಾಪಿಸಿದ್ದರು. ಇದರಿಂದ ಅವರು ಶಂಕರಾಚಾರ್ಯರೆಡೆಗೆ ಆಕರ್ಷಿತರಾದರು. ಪಾಂಡುರಂಗವಿಠಲನ ಬಗೆಗೆ ಶ್ರದ್ಧೆ ಒಮ್ಮೆ ನಮ್ಮಲ್ಲಿ ಅಂಟಿಕೊಂಡರೆ ಪಂಢರಪುರ ನಮಗೆ ಪರಮ ಪವಿತ್ರ ಎನಿಸುತ್ತದೆ. ಒಮ್ಮೆ ಕಾಬಾದ ಮೇಲೆ ಶ್ರದ್ಧೆ ಉಂಟಾದಲ್ಲಿ ಮಕ್ಕಾದ ಕುರಿತು ತನ್ನಿಂದ ತಾನೇ ಶ್ರದ್ಧೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಂಟಿಕೊಳ್ಳುತ್ತದೆ. ಇದೇ ನ್ಯಾಯವೇ ಶಂಕರಾಚಾರ್ಯರಿಂದಾಗಿ ಡಾಕ್ಟರರ ಪ್ರೇಮ ಭಾರತದ ಬಗೆಗೆ ಅಂಟಿಕೊಂಡಿತು. ಅದು ಪ್ರೇಮವಷ್ಟೇ ಆಗಿರದೆ ಭಕ್ತಿಯಾಗಿ ಮಾರ್ಪಟ್ಟಿತ್ತು. ನಂತರ ಪ್ರತಿ ಎರಡು ವರ್ಷಗಳಿಗೊಮ್ಮೆ ಭಾರತ ಯಾತ್ರೆ ಪ್ರಾರಂಭವಾಯಿತು. ಗೀತೆಯ, ಉಪನಿಷತ್‌ಗಳ ಅಭ್ಯಾಸ ಶುರುವಾಯಿತು. ಸಾವಕಾಶ ಭಾರತೀಯ ತತ್ವಜ್ಞಾನ ಮತ್ತು ಸಂಸ್ಕೃತ ಭಾಷೆಯ ಅಧ್ಯಯನ ಅಧ್ಯಾಪನ ನಡೆಸುವ ಇಟಾಲಿಯನ್ ಪಂಡಿತರೊಂದಿಗೆ ಸ್ನೇಹ ಬೆಳೆಯಿತು. ಫ್ಲೊರೆನ್ಸಿನಂತಹ ಕಲಾನಗರದ ನಾಗರಿಕರಾದುದರಿಂದ ಡಾಕ್ಟರರಿಗೆ ಭಾರತೀಯ ವಾಸ್ತು ಹಾಗೂ ಪ್ರಾಚೀನ ಶಿಲ್ಪ ಇವುಗಳ ಕುರಿತು ಮಿತಿಮೀರಿದ ಆಸಕ್ತಿ ಅಂಟಿಕೊಂಡಿತು.

ಅಷ್ಟರಲ್ಲಿ ಡಾಕ್ಟರ್ ಆ ಕೋಣೆಯ ದೀಪದ ಪ್ರಕಾಶವನ್ನು ಮಂದಗೊಳಿಸಿದರು. ಮುಂದಿರುವ ಪಡದೆಯ ಮೇಲೆ ಒಂದರ ಹಿಂದೆ ಒಂದರಂತೆ ದಕ್ಷಿಣ ಹಿಂದುಸ್ಥಾನದ ಮಂದಿರಗಳ ಚಿತ್ರಗಳು ಕಾಣತೊಡಗಿದವು. ಛಾಯಾಚಿತ್ರಕಲೆಯನ್ನೂ ಡಾಕ್ಟರ್ ಉಗುರುಚ್ಚಿ ಓನಿ ಚೆನ್ನಾಗಿ ಮೈಗೂಡಿಸಿಕೊಂಡಿದ್ದರು. ನಮ್ಮ ಎದುರಿಗೇ ಬಿಸ್ಮಿಲ್ಲಾ ಖಾನರ ಸನಯಿಯ ಧ್ವನಿ ಮುದ್ರಿಕೆ ಹಚ್ಚಿದ್ದರು. ಸೌಮ್ಯ ಮತ್ತು ಪಾರ್ಶ್ವಗತಿಯಲ್ಲಿ ಆ ಚಿತ್ರಗಳಿಗೆ ಸ್ವರ ಮೇಳವಿಸಿದರು.

"ಇದೇ ಆ ದೇಗುಲ" ಪಡದೆಯ ಮೇಲೆ ಮೂಡಿ ಬಂದ ಕಾಂಚೀ ಕಾಮಾಕ್ಷಿಯ ಸುಂದರ ಚಿತ್ರವನ್ನು ತೋರಿಸಿ, "ಶಿವೋಹಮ್, ಶಿವೋಹಮ್, ಶಿವೋಹಮ್" ಎಂದು ಡಾಕ್ಟರ್ ಪುಟಪುಟನೆ ಪಠಿಸುತ್ತಿದ್ದರು. ಸುಮಾರು ಒಂದು - ಒಂದೂವರೆ ತಾಸು ನಾವು ಪಡದೆಯ ಮೇಲೆ ಮೂಡಿ ಬರುತ್ತಿರುವ ಚಿತ್ರಗಳನ್ನೆಲ್ಲ ನೋಡುತ್ತಿದ್ದೆವು. ನಡುನಡುವೆ ಡಾಕ್ಟರ್ ನಮಗೆ ಆ ಕುರಿತು ಮಾಹಿತಿ ಒದಗಿಸುತ್ತಿದ್ದರು. ಸುದೈವದಿಂದ ನಾನು ದಕ್ಷಿಣ ಹಿಂದುಸ್ಥಾನದ ಸಾಕಷ್ಟು ದೇಗುಲಗಳನ್ನು ನೋಡಿದ್ದೆ. ಹಾಗಾಗಿ ನಾನೂ ನಡುನಡುವೆ ಆ ಮಂದಿರಗಳ ಗುರುತು ಹಿಡಿದು ತೋರಿಸುತ್ತಿದ್ದೆ. ಅಷ್ಟರಲ್ಲಿ ಕನ್ಯಾಕುಮಾರಿಯ ಮಹಾಸಾಗರದ ಸಂಗಮಕ್ಷೇತ್ರದ ದೃಶ್ಯ ಕಾಣಿಸಿತು. ಸೂರ್ಯಾಸ್ತದ ದೃಶ್ಯ ಪಡದೆಯನ್ನು ಆವರಿಸಿತ್ತು. ಅದೊಂದು ಅಪ್ರತಿಮ ದೃಶ್ಯವಾಗಿತ್ತು. ಯಾವುದಾದರೊಂದು ಅಲೌಕಿಕ ಭಾಗ್ಯದ ಕ್ಷಣವನ್ನು ಹಿಡಿದಿಟ್ಟು ಅದನ್ನು ಚಿರಂಜೀವಿಯನ್ನಾಗಿಸುವ ರೀತಿಯಲ್ಲಿ ಆ ಸೂರ್ಯಾಸ್ತದ ಅಪೂರ್ವವಾದ ಕ್ಷಣವನ್ನು ಡಾಕ್ಟರರು ತಮ್ಮ ಕ್ಯಾಮರಾದಲ್ಲಿ ಹಿಡಿದಿಟ್ಟಿದ್ದರು. ಆ ದೃಶ್ಯವನ್ನು ಕಂಡು ನಾವೆಲ್ಲ ಪ್ರಭಾವಿತರಾದೆವು.

ಸುಮಾರು ಒಂದು ತಾಸಿಗಿಂತ ಹೆಚ್ಚು ಹೊತ್ತು ಅವಲೋಕಿಸಿದ ಆ ಸುಂದರ ಶಿಲ್ಪಗಳು, ಆ ಸೌಮ್ಯ ಪಾರ್ಶ್ವ ಸಂಗೀತ, ಡಾಕ್ಟರರ ಆ ಮಿದು ನುಡಿಯ ಮೋಡಿ, ಒಂದು ವಿಶಿಷ್ಟ ಸಂಸ್ಕೃತಿಯಲ್ಲಿ ಬೆಳೆದೂ ಆ ವೃದ್ಧ ವ್ಯಕ್ತಿಗೆ ನನ್ನ ದೇಶ, ಅದರ ಸಂಸ್ಕೃತಿಯ ಕುರಿತಾಗಿ ಇರುವ ಭಕ್ತಿಭಾವ- ಇವೆಲ್ಲವುಗಳ ಸಮ್ಮೇಳನವೋ ಏನೋ - ಕನ್ಯಾಕುಮಾರಿಯ ಸಾಗರ ಸಂಗಮದ ಆ ಅಲೌಕಿಕ ದೃಶ್ಯವನ್ನು ಆ ವಿರಾಟ್ ಶಾಂತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ವರೂಪವನ್ನು ಅವಲೋಕಿಸುತ್ತಿರುವಂತೆಯೇ ನನಗರಿಯದಂತೆ ನನ್ನ ಬಾಯಿಯಿಂದ "ಓಂ ಶಾಂತಿಃ, ಶಾಂತಿಃ ಶಾಂತಿಃ!" ಎಂಬ ಉದ್ಗಾರ ಹೊರಟಿತು.

ಆ ದೊಡ್ಡ ವ್ಯಕ್ತಿಯನ್ನು ಭೇಟಿಯಾಗಲು ಬರಿಗೈಯಿಂದ ಬಂದುದರಿಂದ ನನಗೆ ಒಂದು ರೀತಿಯ ಚಡಪಡಿಕೆಯಾಗುತ್ತಿತ್ತು.

"ಡಾಕ್ಟರ್ - ನೀವು ನಮಗೆ ಎಷ್ಟೆಲ್ಲಾ ಒದಗಿಸಿದಿರಿ, ಆದರೆ ನಾವು ಮಾತ್ರ ನಿಮಗಾಗಿ ಏನನ್ನೂ ತಂದಿಲ್ಲವಲ್ಲ!" ಎಂದೆ ನಾನು.

"ನೀವೇ ಸ್ವತಃ ಇಲ್ಲಿಯ ವರೆಗೆ ಬಂದಿದ್ದೀರಲ್ಲ; ಇದೇ ನನಗೆ ಹೆಚ್ಚಿನ ಆನಂದ."

"ನಾನು ನಿಮಗೆ ಏನು ಕೊಡಲಿ?"

"ನಿಮಗೆ ತೊಂದರೆ ಎನಿಸದಿದ್ದಲ್ಲಿ ನನಗೆ ಒಂದು ಸಂಗತಿ ನಿಮ್ಮಿಂದ ಅವಶ್ಯವಾಗಿ ಬೇಕು. ನಿಮಗೆ ಸಂಸ್ಕೃತ ಚೆನ್ನಾಗಿ ಬರುತ್ತಿರಬೇಕು. ಈ ಮೊದಲು ನೀವು ಈ ಪುಸ್ತಕದಲ್ಲಿಯ ಒಂದು ಸಂಸ್ಕೃತ ಶ್ಲೋಕವನ್ನು ಓದಿದಿರಿ. ಅದು ಕಿವಿಗೆ ತುಂಬಾ ಇಂಪಾಗಿತ್ತು. ಸಂಸ್ಕೃತ ಭಾಷೆ, ಎಷ್ಟು ಮಧುರ !"

ನಾನು ಮಾತ್ರ "ಇಟಾಲಿಯನ್ ಭಾಷೆ ಎಷ್ಟು ಮಧುರ!" ಎನ್ನುತ್ತಿದ್ದೆ. ಆದರೆ ಡಾಕ್ಟರ್ ಉಗುಚ್ಚಿ - ಓನಿ ಸಂಸ್ಕೃತ ಭಾಷೆಯ ಮಾಧುರ್ಯವನ್ನು ಶ್ಲಾಘಿಸುತ್ತಿದ್ದರು. ಅವರಿಂದ ನನ್ನ ಸಂಸ್ಕೃತ ಭಾಷಾ ಪಾಂಡಿತ್ಯದ ಹೊಗಳಿಕೆಯನ್ನು ಕೇಳಿ ನನಗೆ, "ನಿರಸ್ತ ಪಾದಪೇ ದೇಶೇ ಏರಂಡೋಪಿ ದ್ರುಮಾಯತೇ" ಎಂಬ ವಚನ ನೆನಪಿಗೆ ಬಂತು.

ನನಗೆ ಸಂಸ್ಕೃತ ಭಾಷೆಯ ಮೇಲೆ ಅತಿಶಯ ಪ್ರೇಮವಿದೆ. ಆದರೆ ಆ ಭಾಷಾ ಸುಂದರಿಯು ಮಾತ್ರ ನನ್ನ ಸಲುವಾಗಿ ತನ್ನ ಮನವನ್ನು ತೆರೆದಿರಲಿಲ್ಲ. ಇಷ್ಟೇ ಅಲ್ಲ, ನನ್ನ ಪ್ರಾರಬ್ಧಯೋಗದಿಂದ ಶಾಲೆ ಕಾಲೇಜುಗಳಲ್ಲಿ ನನ್ನ ಗುರು ಜನರು ಗೀರ್ವಾಣ ಸುಂದರಿಯ ಪ್ರೇಮ ಪಾಶದಲ್ಲಿ ಬೀಳಕೂಡದೆಂದು ಅತಿ ಹೆಚ್ಚಾಗಿಯೇ ಎಚ್ಚರಿಕೆ ವಹಿಸಿದ್ದರು. ನಾನು ಯಾವದಾದರೂ ರೂಪವತಿಯ ರೂಪದ ಮೋಹಪಾಶದಲ್ಲಿ ಬೀಳಬಹುದೆಂದು ಭೀತಿ- ಅವರನ್ನು ಕಾಡಿರಬೇಕು. ಹಾಗಾಗಿ ಅವಳ ಶರೀರದಲ್ಲಿ ಇರುವ ಎಲಬುಗಳ ಸಂಖ್ಯೆ ಎಷ್ಟು? - ಅವಳ ಯಕೃತ್, ಪ್ಲೀಹ ಮುಂತಾದವುಗಳು ಎಲ್ಲಿವೆ? ಅವಳ ಕೆನ್ನೆಯ ಲಜ್ಜೆಯ ಕೆಂಪು - ಅಂದರೆ ವಿಶಿಷ್ಟ ಗತಿಯಿಂದ ಆಗುವ ರುಧಿರಾಭಿಸರಣ ಹೇಗಿರುತ್ತದೆ ಮುಂತಾದ ಮಾಹಿತಿ ಒದಗಿಸಿದ ಆ ಸುಂದರಿಯ ವಿಷಯದಲ್ಲಿ ತಿರಸ್ಕಾರ ಹುಟ್ಟಿಕೊಳ್ಳುವ ರೀತಿಯಲ್ಲಿ ನಮಗೆ ಸಂಸ್ಕೃತ ಕಲಿಸಿದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗುರುಗಳು ಆ ಭಾಷೆಯ ಭಕ್ತಿಪ್ರತ್ಯಯದ ಬದಲು ವಿಭಕ್ತಿ ಪ್ರತ್ಯಯದಲ್ಲೇ ನಮ್ಮನ್ನು ತೊಡಗಿಸಿ 'ಶಕ್ಯ ಪಚ್ ಭುಜರಿಚ್ ನಂತಹ ಕೆಸರಿನಲ್ಲಿ ನಡೆಯಹಚ್ಚಿದರು!

ಶಾಲಾ ಕಾಲೇಜುಗಳಿಂದ ಕಾನೂನು ಬದ್ಧವಾಗಿ ವಿಭಕ್ತನಾದ ದಾಖಲೆ ಡಿಗ್ರಿಯ ರೂಪದಲ್ಲಿ ಸಿಕ್ಕನಂತರವೇ ನಾನು ಸಂಸ್ಕೃತ ಭಾಷೆಯ ಸ್ನೇಹ ಬೆಳಿಸಿಕೊಂಡೆ. ನಾನು ಗೊಂದಲದಲ್ಲಿ ಸಿಕ್ಕಿಬಿದ್ದು ಚಡಪಡಿಸುತ್ತಿರುವದು ಮಾನಸಶಾಸ್ತ್ರಜ್ಞರಾದ ಡಾಕ್ಟರರಿಗೆ ಕೂಡಲೆ ಹೊಳೆದಿರಬೇಕು. ಅವರು ಬಹಳ ನಮ್ರವಾಗಿ ''ನನಗೆ ಕೆಲವು ಸಂಸ್ಕೃತ ಶ್ಲೋಕಗಳನ್ನು ರೆಕಾರ್ಡಮಾಡಿ ಕೊಡಬಹುದೇ?'' ಎಂದು ವಿಚಾರಿಸಿದರು. ''ಪ್ರಯತ್ನಿಸಿ ನೋಡುತ್ತೇನೆ.'' ನಾನೆಂದೆ.

ಆ ಕೂಡಲೇ ಅವರು ಕಪಾಟಿನಿಂದ ಆದ್ಯಶಂಕರಾಚಾರ್ಯರ ಸ್ತೋತ್ರಗಳ ಹೊತ್ತಿಗೆಯನ್ನೇ ತೆಗೆದರು. ಆಚಾರ್ಯರ ಈ ಸ್ತೋತ್ರಗಳು ನನಗೆ ತುಂಬಾ ಓಡಿಸುತ್ತವೆ. ಅವು ವಿಲಕ್ಷಣ ಕಳಕಳಿಯಿಂದ ತುಂಬಿರುತ್ತವೆ. ನಾನು ಅದರಲ್ಲಿಯ ಕೆಲವು ಶ್ಲೋಕಗಳನ್ನು ಮೂರು ನಾಲ್ಕು ಸಲ ದೊಡ್ಡದಾಗಿ ಓದಿದೆ. ನಂತರ ಅವುಗಳನ್ನು ಎಲ್ಲಾ ರೆಕಾರ್ಡ ಮಾಡಿ ಕೊಟ್ಟೆ.

''ಇನ್ನು ಒಂದೇ ಒಂದು ....''

''ಏನು ?''

''ನಿಮಗೆ ಗಾಯತ್ರಿ ಮಂತ್ರ ಬರುತ್ತದೆಯೇ?''

''ಹೌದು, ಬರುತ್ತದೆ.''

ನನ್ನ ಬುದ್ಧಿಗೆ ಪ್ರಚೋದನೆ ಕೊಡು ಎಂದು ಸಾಕ್ಷಾತ್ ಸೂರ್ಯದೇವನಿಗೆ ಮೊರೆ ಹೋಗುವ ಈ ಮಂತ್ರ ನನಗೆ ತುಂಬಾ ಓಡಿಸುತ್ತದೆ. ಬುದ್ಧಿಗಾಗಿ ಯಾಚಿಸುವ ಈ ಮಂತ್ರವನ್ನು ಉಚ್ಚರಿಸಲು ಸ್ತ್ರೀಯರನ್ನು ಮತ್ತು ಶೂದ್ರರನ್ನು ಸುಮ್ಮನೆ ಪ್ರತಿಬಂಧಿಸಲಾಗಿರಲಿಲ್ಲ. ಬುದ್ಧಿಪ್ರಾಮಾಣ್ಯದ ಜೊತೆಗೆ ಕೂಲಂಕಷ ವಿಚಾರಧಾರೆ ಹರಿಯತೊಡಗುತ್ತಲೆ, ''ನಾನು ಹೇಳಿದನ್ನಷ್ಟೇ ಕೇಳು -'' ಎನ್ನುವ ಬೆದರಿಕೆ ತನ್ನಿಂದ ತಾನೆ ಮಾಯವಾಗುತ್ತದೆ. ಬುದ್ಧಿವಂತಿಕೆಯ ಗುತ್ತಿಗೆದಾರತ್ವವೂ ತನ್ನಷ್ಟಕ್ಕೇ ನಷ್ಟವಾಗುತ್ತದೆ. ಎಂಟು ವರ್ಷದವರಿದ್ದಾಗಲೆ ನಾಲ್ಕು ವೇದಗಳ ಪ್ರಭುತ್ವ ಸಾಧಿಸಿದ, ಬುದ್ಧಿ ಸಾಮರ್ಥ್ಯದಿಂದ ಕೇರಳದಿಂದ ಕಾಶ್ಮೀರದ ವರೆಗೆ ತನ್ನ ತೀಕ್ಷ್ಣವಾದ ಚಾತುರ್ಯದಿಂದ ವಿರೋಧಿಗಳ ಅಂತಃಕರಣವನ್ನೇ ಕೈವಶಪಡಿಸಿಕೊಂಡ, ಬುದ್ಧಿ ಸಮನ್ವಯಗೊಳ್ಳುವಲ್ಲಿ ಸಮನ್ವಯ ಕಲೆ ಸಾಧಿಸಿದ ಈ ಮಹಾನ್ ಆದ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶಂಕರಾಚಾರ್ಯರ ತತ್ವಜ್ಞಾನದ ಪ್ರಭಾವದಿಂದ ತನ್ನ ಅಂತರ್ ಬಾಹ್ಯಗಳೆರಡನ್ನೂ ಬೆಳಗಿಸಿಕೊಂಡ ಈ ಇಟಾಲಿಯನ್ ಗೃಹಸ್ಥ ನನ್ನೊಂದಿಗೆ ಗಾಯತ್ರಿ ಮಂತ್ರವನ್ನು ಕೇಳುತ್ತಿದ್ದ !

ನಾನು ಕೂಡ "ಮಗುವೆ, ನಿನಗೆ ಕಲ್ಯಾಣವಾಗಲಿ" ಎಂದು ಶುಭಕೋರಿ ಪ್ರಾರಂಭಿಸಿದೆ..... "ಓಂ ಭೂರ್ಭುವಸ್ವಃ......"

ಮುಂದೆ ಎಂದಾದರೊಂದು ದಿನ ಸಂಸ್ಕೃತ ಭಾಷಾಶಾಸ್ತ್ರಿಯೊಬ್ಬ ಆ ಡಾಕ್ಟರ್ ಮನೆಗೆ ಹೋಗಿ ನನ್ನ ಮಂತ್ರ ಪಠನ ಕೇಳಿದಲ್ಲಿ ಮೂಲರೋಗದಿಂದ ಎಚ್ಚರ ತಪ್ಪುತ್ತಿದ್ದ ! ಗಾಯತ್ರಿಯು ಹಾಡುವವನನ್ನು ರಕ್ಷಿಸುವ ಮಂತ್ರವೆಂದು ನಾನೆಲ್ಲೋ ಓದಿದ್ದೇನೆ. ಅಲ್ಲದೆ ನಾನು ಸ್ವಲ್ಪ ಹಾಡುಗಾರನೂ ಹೌದು. "ನಮ್ಮ ಮನೆತನದಲ್ಲಿ ನಾವು ಈ ಮಂತ್ರವನ್ನು ಇದೇ ರೀತಿ ಆಘಾತಕೊಟ್ಟು ಹಾಡುತ್ತೇವೆ." ಎಂದು ಹೇಳಿ ನಾನು ನನ್ನನ್ನು ರಕ್ಷಿಸಿಕೊಂಡೆನು. ಸ್ವಂತ ಅವಗುಣಗಳನ್ನು ಮುಚ್ಚಿಕೊಳ್ಳಲು ಮನೆತನ, ಪರಂಪರೆ ಮುಂತಾದ ಢಾಲುಗಳು ತುಂಬಾ ಭದ್ರವಾಗಿರುತ್ತವೆ !

ಡಾಕ್ಟರ್ ಉಗುಚ್ಚಿ ಓನೀ ಆದ್ಯ ಶಂಕರಾಚಾರ್ಯರ ಅಸಾಮಾನ್ಯ ಬುದ್ಧಿಮತ್ತೆಯ ಕುರಿತು ಭಾವಪರವಶರಾಗಿ ಮಾತನಾಡುತ್ತಿದ್ದರು. ನಿಜವಾಗಿಯೂ ಇಂಥ ಬ್ರಾಹ್ಮಣರಿಗಷ್ಟೇ ಮಂತ್ರ ಪಠಿಸುವ ಅಧಿಕಾರವಿದೆ.

ನನಗೆ ಕಂಡು ಬಂದ ಒಂದೇ ಒಂದು ಸಂಗತಿ ಎಂದರೆ ಡಾಕ್ಟರರಿಗೆ ಅವರ ಸುತ್ತಮುತ್ತಲಿನಲ್ಲಿಯ ಚರ್ಚುಗಳಲ್ಲಿ ಬುದ್ಧಿಯನ್ನು ಒತ್ತೆ ಇಡುವ ಅಂಧ ಶ್ರದ್ಧೆ ಕಂಡು ಬಂದಿರಬಹುದು ಆದರೆ ದೂರದ ಭಾರತದ ಅಂಧ ಶ್ರದ್ಧೆಯ ವಿಷಯ ಅವರಿಗಿನ್ನೂ ಗೊತ್ತಿರಲಿಕ್ಕಿಲ್ಲ. ಆದ್ಯ ಶಂಕರಾಚಾರ್ಯರ ಅದ್ವೈತದ ವಿಚಾರಗಳು ನಮ್ಮಲ್ಲಿ ಕೇವಲ ಗ್ರಂಥಗಳಲ್ಲಷ್ಟೇ ಉಳಿದುಕೊಂಡಿವೆ. ಅವರ ಪೀಠದ ವಾರಸುದಾರರು ಆ ಸಮತೆ ಮತ್ತು ಸಮನ್ವಯತೆಯ ಪೀಠದಲ್ಲೇ ಭದ್ರವಾಗಿ ಕುಳಿತು 'ವಿಷಮತೆ ಎಂತಹ ಸತ್ಯ' ಎಂದು ಸಾರುತ್ತ, ಪಾದಪೂಜೆಗಳನ್ನು ಪಡೆಯುತ್ತ ಅಲೆದಾಡುವದರಲ್ಲೇ ತೃಪ್ತರಾಗಿದ್ದಾರೆ. ಸಂಪೂರ್ಣ ಭರತಖಂಡದಲ್ಲೆಲ್ಲಾ ತನ್ನ ವಿರೋಧಿಗಳನ್ನು ಸ್ವತಃ ಬುದ್ಧಿನಿಷ್ಠವಾದ ವಾದದಿಂದ ಕೈವಶಪಡಿಸಿಕೊಂಡು ಅವರನ್ನು ತನ್ನಲ್ಲೇ ಸೇರ್ಪಡಿಸಿಕೊಳ್ಳುವ ಆ ಶಂಕರಾಚಾರ್ಯರ ಈ ವಾರಸುದಾರರು ವಾದಕ್ಕಾಗಿಯೇ ಶೆಡ್ಡು ಹೊಡೆಯುತ್ತ ತಮ್ಮ ವಿಚಾರಗಳನ್ನು ಮುಂಡಿಸುವ ಅವಕಾಶವನ್ನು ಕೊಡುವ ಮೊದಲೇ "ಜಿತಂ ಮಯಾ" ಎಂದು ಗೊಂದಲ ಎಬ್ಬಿಸುತ್ತಾರೆ. ದ್ವೈತದ ಇಂಥ ದೊಡ್ಡ ವಿಜಯವನ್ನು ಆದ್ಯ ಶಂಕರಾಚಾರ್ಯರ ದ್ವೈತವಾದಿಗಳಾದ ವಿರೋಧಕರಿಗೂ ಸಾಧಿಸಲಾಗಿರಲಿಕ್ಕಿಲ್ಲ.!

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇದು ಡಾಕ್ಟರ್ ಉಗುಚ್ಚಿ ಓನೀ ಮತ್ತು ನನ್ನ ಪ್ರಥಮ ಭೇಟಿಯಾದುದರಿಂದ ಈ ಕುರಿತು ನಾನು ಅವರಿಗೆ ಏನನ್ನೂ ಹೇಳಲಿಲ್ಲ. ಯಾಕಂದರೆ ಸದ್ಯಕ್ಕಂತೂ ಅವರು ಸಂಪೂರ್ಣವಾಗಿ ಅದ್ವೈತ ತತ್ವಜ್ಞಾನದ ಆನಂದಸಾಗರದಲ್ಲಿ ಮುಳುಗಿದ್ದರು. ಆ ತಲ್ಲೀನತೆಯು ಆನಂದವು ಅವರ ಸಂಪೂರ್ಣ ವ್ಯಕ್ತಿತ್ವದಲ್ಲೂ ಹೊರ ಹೊಮ್ಮುತ್ತಿತ್ತು. ಯಾವುದಾದರೊಂದು ಸಂಗತಿಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡು ಅದರಲ್ಲಿಯೇ ತಾದಾತ್ಮ್ಯರಾಗುವ ವ್ಯಕ್ತಿಯ ದರ್ಶನ ಲಭಿಸುವದೇ ಮಹದಾನಂದ!

ಜೀವನದಲ್ಲಿ ಯಾವುದಾದರೊಂದು ಸಂಗತಿಯಲ್ಲಿ ಏಕರೂಪಹೊಂದಲು ದೊರೆಯುವ ಸಂಧಿ ತೀರಾ ಮಹತ್ವದ್ದು. ಈ ತಲ್ಲೀನತೆ ಒಂದು ತರುಣಿಯಿಂದ ಒದಗುತ್ತಿರಬಹುದು; ಅಥವಾ ಮಾದಕ ಪೇಯವೂ ಆಗಿರಬಹುದು; ಇಲ್ಲವೆ ಅದು ಆದ್ಯ ಶಂಕರಾಚಾರ್ಯರ ತತ್ವಜ್ಞಾನವೂ ಆಗಿರಬಹುದು. ಯಾವೊಂದು ಸಂಗತಿಯಲ್ಲಿ ತನ್ನನ್ನೇ ತಾನು ಸಮರ್ಪಿಸಿ ಅದರಲ್ಲೇ ಕರಗಿಸಿಕೊಂಡ ಹೊರತು ಅದ್ವೈತದ ಅಮೃತ ಅನುಭವ ಒದಗಲಾರದು.

ಅಂದ ಬಳಿಕ ಆ ಫ್ಲೋರೆನ್ಸ ನಗರದಲ್ಲಿ ತನ್ನ ಸಂಪೂರ್ಣ ಆಯುಷ್ಯವನ್ನು ಚಿತ್ರ, ಶಿಲ್ಪ, ಸಂಗೀತ ಮುಂತಾದವುಗಳಿಗೆ ಸಮರ್ಪಿಸಿಕೊಂಡ ಆ ಕಲಾವಂತರಿಗೆ ಏನನ್ನಬೇಕು? - ಇದೇ ಫ್ಲಾರೆನ್ಸ ನಗರದಲ್ಲಿ ಮಾಯಕೆಲ್ ಏಂಜಲೋಗೆ ಶಿಲೆ ಶಿಲೆಗಳಲ್ಲಿ ಕ್ರಿಸ್ತನ ತ್ಯಾಗಮಯ ಜ್ಯೋತಿಯೇ ಕಂಡು ಬರುತ್ತಿತ್ತು. ಆತನು ತನ್ನ ಸುತ್ತಿಗೆ, ಉಳಿ ಚಾಣಗಳ ಕೈಚಳಕಗಳಿಂದ ಆ ಶಿಲೆಯಲ್ಲಿ ಅಡಕವಾಗಿದ್ದ ಕ್ರಿಸ್ತನ ಜೀವನ ಪ್ರವಾಹವನ್ನೇ ಕಡೆದು ಮೂರ್ತರೂಪಗೊಳಿಸಿ ಸಾವಿರಾರು ಕಲಾರಸಿಕರಿಗೆ ರಸದೌತಣ ಕೊಡುತ್ತಿದ್ದ. ಮೈಕೆಲ್ ಏಂಜಲೋ ಅದ್ವೈತಿ ಅಲ್ಲದೆ ಇನ್ನಾರು? ಆತ್ಮ ಸಮರ್ಪಣೆಯಿಲ್ಲದೆ ಅದ್ವೈತ ಸಂಭವಿಸಲಾರದು. ಮನೋರುಗ್ಣರು ಹೇಳಿದ ಕತೆಗಳಿಂದ ಅವರ ವ್ಯಥೆಗಳನ್ನು ಕಂಡುಕೊಳ್ಳುವಲ್ಲಿ ತಲ್ಲೀನರಾಗಿರುವ ಈ ಡಾಕ್ಟರರಲ್ಲೂ ಕೂಡ ಅಂತಹ ಒಬ್ಬ ಅದ್ವೈತಿಯ ದರ್ಶನವೇ ಆಗುತ್ತಿತ್ತು. ಈ ಧ್ಯಾನಧಾರಣೆಯಲ್ಲಿ ಮಗ್ನರಾದ ಡಾಕ್ಟರರಂತೆಯೇ ವ್ಯಾಧಿಸಂಶೋಧನೆಯಲ್ಲಿ ಮಗ್ನರಾಗಿರುವ ಡಾಕ್ಟರರನ್ನೂ ಭೇಟಿಯಾಗಲು ನಾನು ಉತ್ಸುಕನಾಗಿದ್ದೆ. ಆಗಲೇ ಅವರ ಚಿತ್ರ ಪರಿಪೂರ್ಣವಾಗಬಹುದಿತ್ತು. ಆದರೆ ಪಡೆದ ದರ್ಶನದಿಂದಲೂ ನಾವು ತುಂಬಾ ಪ್ರಸನ್ನರಾಗಿ ಅವರಿಂದ ಬೀಳ್ಕೊಂಡೆವು.

ಹೊಟೇಲಿಗೆ ಹಿಂದಿರುಗಿದ ನಂತರ ''ಡಾಕ್ಟರ್ ಭೇಟಿ ಆಯಿತೇ?'' ಎಂದು ಮ್ಯಾನೇಜರಸಾಹೇಬರು ವಿಚಾರಿಸಿದರು.

''ಹೌದು.''

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

"ಡಾಕ್ಟರ್ ಏನಂದರು?"

"ಭಾರತೀಯ ಮಾವಿನ ಹಣ್ಣಿನಷ್ಟು ಸ್ವಾದಿಷ್ಟವಾದ ಹಣ್ಣು ಪ್ರಪಂಚದಲಿಲ್ಲ ಎಂದರು!"

ಮ್ಯಾನೇಜರನ ಕಣ್ಣುಗಳಲ್ಲಿ ವಿಲಕ್ಷಣ ಕರುಣೆ ತುಂಬಿತ್ತು. ಹತಾಶನಾಗಿ ತನ್ನ ಎರಡೂ ಭುಜಗಳನ್ನು ಸಡಿಲುಗೊಳಿಸುತ್ತ "ಗುಡ್ ನೈಟ್!" ಎಂದನು.

'ನಮ್ಮ ಹೊಟೇಲಿನಲ್ಲಿ ತಂಗಿದ ಈ ಹುಚ್ಚ ರಾತ್ರಿಯಿಡೀ ಏನು ಮಾಡುತ್ತಾನೋ ದೇವರಿಗೆ ಗೊತ್ತು!' ಎಂದು ವಿಚಾರಮಾಡುತ್ತಿರುವ ಅವನ ಒಂದು ರಾತ್ರಿಯ ನಿದ್ದೆಯನ್ನಂತೂ ನಾನು ನಿಶ್ಚಿತವಾಗಿ ಭಂಗಗೊಳಿಸುತ್ತಿದ್ದೇನೆಂಬ ಖಾತ್ರಿ ನನಗಾಯಿತು. ಹಾಗಾಗಿ ನಾನೂ ಅಂದೆ,

"ಗುಡ್ ನೈಟ್!"

'ಜಾವೇತ್ಯಾಚ್ಯಾ ದೇಶಾ' ಗ್ರಂಥದಿಂದ
- ಕೃ. ಶಿ. ಹೆಗಡೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ಬಂದ ಬಂದ ವಿಠ್ಠಲ ಬಂದ'

ಪಾತ್ರ ಪರಿಚಯ

ಶ್ರೀ ವಿಠ್ಠಲ : (ಪಂಢರಪುರದಲ್ಲಿಯಂತೆ)
ಪೂಜಾರಿ :
ವಕೀಲ :
ಪಶು ಡಾಕ್ಟರ :
ಶಾಲಾ ಮಾಸ್ತರ :
ಸೇಡಜೀ :
ತರುಣಿ (ನಟಿ) :
ದ್ವಾರಕಾಬಾಯಿ :
ಸಖೂಬಾಯಿ :
ಅಂಧ :
ಶಿಂಪಿಗ :

ಸೋಮನಾಥ ರಾಮನಾಥ ಜಗನ್ನಾಥ (ಫಿಲ್ಮ ಪ್ರೊಡ್ಯೂಸರ)
ಸಂಗೀತ ಡಾಯರೆಕ್ಟರ : (ಫಿಲ್ಮ ಡಾಯರೆಕ್ಟರ)
ವಿಠ್ಠಲ ಮಂದಿರ, ಭಕ್ತಗಣ, ಇತ್ಯಾದಿ.

ರಂಗಸ್ಥಳದ ಮೇಲೆ :

(ಒಂದು ಶ್ರೀ ವಿಠ್ಠಲ ಮಂದಿರ. ವಿಠ್ಠಲ ಟೊಂಕದ ಮೇಲೆ ಕೈ ಇಟ್ಟು ನಿಂತಿದ್ದಾನೆ. ಭಕ್ತರು 'ಯುಗೇ ಅಠ್ಠಾವೀಸ ವಿಟೇವರಿ ಉಭಾ' ಆರತಿಯನ್ನು ಜೋರು ಜೋರಾಗಿ ಅನ್ನುತ್ತಿದ್ದಾರೆ. ಪೂಜಾರಿ ಆರತಿ ಮಾಡುತ್ತಿರುತ್ತಾನೆ. ಬೇರೆಡೆ ನಗಾರಿ 'ಸಪ್ಪಳ ಕೇಳುತ್ತದೆ.

ವಿಠ್ಠಲ ಹುಬ್ಬುಗಂಟಿಕ್ಕಿದ್ದಾನೆ. ಅವನಿಗೆ ಇದೆಲ್ಲ ಗೊಂದಲ ಬೇಕಾಗಿಲ್ಲಎಂಬಂತ ಮುಖದ ಆವಿರ್ಭಾವ ಅದೆ. ಭಕ್ತ ಗಣ ಆರತಿ ಹೇಳುತ್ತಲೇ ಇದ್ದಾರೆ.)

ವಿಠ್ಠಲ : ಸಾಕು ನಿಲ್ಲಿಸಿರಿ,

(ಭಕ್ತರು ಹಾಗೇ ಆರತಿ ಮುಂದುವರಿಸುತ್ತಾರೆ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಠ್ಠಲ : ಹೋ, ಪೂಜಾರಿಗಳೇ! ಸಭ್ಯ ಭಕ್ತರೇ !
(ಅದನ್ನು ಲಕ್ಷಿಸದೇ ಎಲ್ಲರೂ ಬೇಸರದಿಂದಾ ಯಾಂತ್ರಿಕವಾಗಿ ಆರತಿ ಹೇಳುತ್ತಾರೆ.)

ವಿಠ್ಠಲ : ಯಾರಾದರೂ ಈ ಕಡೆ ಕೇಳತೀರೇನು? ಖಾಮೋಷ.
(ಯಾರೂ ಕೇಳದಿರುವದನ್ನು ನೋಡಿ , ಕೈಯಿಂದ ಹಣೆ ಬಡಿದುಕೊಳ್ಳುತ್ತಾನೆ.)

ಭಕ್ತಗಣ : (ಸಾಷ್ಟಾಂಗ ನಮಸ್ಕಾರ ಹಾಕುತ್ತಾ) ದೇವಾಽಽ ದರ್ಶನ ಕೊಡಪ್ಪಾ ಸ್ವಾಮೀ - ಕೃಪಾ ಮಾಡು.

ವಿಠ್ಠಲ : ಎಲೋ - ನೋಡೆರೇ ನೋಡ್ರೀ - ಈ ಕಡೆ

ಭಕ್ತಗಣ : ಹರೇ ಕೃಷ್ಣ ಹರೇಕೃಷ್ಣ, ಕೃಷ್ಣ ಕೃಷ್ಣ ಹರೇ, ಹರೇ ಹರೇ ರಾಮ ಹರೇ ರಾಮ, ರಾಮ ರಾಮ, ಹರೇ ಹರೇ - (ಎಂದು ಭಜನೆ ಮಾಡಿ ಕಡೆಗೆ ಪದ್ಧತಿಯಂತೆ ಜೋರಾಗಿ) 'ಪುಂಡಲೀಕ ವರದೇ

ಹಾರಿ ವಿಠ್ಠಲ ' (ಅಂತಾ ಕೂಗುವಂತೆ)

ವಿಠ್ಠಲ : ಅವನ ಹೆಸರು ತಗೀಬ್ಯಾಡ್ರಿ. ಅವನ ಸಲುವಾಗಿಯೇ ೨೮ ಯುಗ ಎದ್ದು ನಿಲ್ಲುವ ಶಿಕ್ಷಾ ಆಗೇದ ನನಗ.
(ಇದೇ ವೇಳೆಗೆ ಮಂತ್ರ - ಪುಷ್ಪದ ಮಂತ್ರ, ಜೋರು ಜೋರಾಗಿ ಎಲ್ಲರೂ ಅನ್ನುತ್ತಾರೆ. ವಿಠ್ಠಲ ಕಿವಿಯಲ್ಲಿ ಬೊಟ್ಟು ಇಟ್ಟುಕೊಳ್ಳುತ್ತಾನೆ. ಗೊಂದಲಮಯವಾಗುತ್ತದೆ.)

ವಿಠ್ಠಲ : ಓ- ನನ್ನನ್ನು ಯಾರಾದರೂ ಕಾಪಾಡಿರಿ. (ಮಂತ್ರಪುಷ್ಪ ಹಾಕುತ್ತಾರೆ.)

ಭಕ್ತಗಣ : (ಕಡೆಯದಾಗಿ ಪುನ:) 'ಪುಂಡಲೀಕ ವರದಾ ಹಾರೇ ವಿಠ್ಠಲ ಽಽ' (ಅಂತಾ ಕೂಗುತ್ತಾರೆ.)

ವಿಠ್ಠಲ : ಎಲೇ ಪುನಃ ಅವನ ಹೆಸರು ತೆಗೆತಾರಲಾ ! ಏ, ಅವನ ಹೆಸರು ತಗೀ ಬ್ಯಾಡ್ರಿ, ಅಂತಾ ಎಷ್ಟು ಸಲಾ ಹೇಳಲೀ.?
(ಜನರಿಗೆ ಮೇಲಿನ ಶಬ್ದಗಳನ್ನು ಯಾರು ಆಡಿದರು ಎಂಬ ಸಂಭ್ರಮದಿಂದಾ ಒಬ್ಬರೊಬ್ಬರು ಸಂಶಯದಿಂದ ನೋಡುತ್ತಾರೆ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಕೀಲ : ಏನ ಡಾಕ್ಟರ ಸಾಹೇಬ, ನೀವೇನಂದ್ರಿ, ಏನು?

ಡಾಕ್ಟರ ನಾನಽಽ? ನೀವೇ ಅಂದ್ರಿ, ಅಲ್ಲರೀ ಹೆಸರ ತಗೀಬ್ಯಾಡ್ರಿ ಅಂತ?

ಪೂಜಾರಿ ಹೋ ವಕೀಲರ ಽಽ ಮಂಗಳಾರತಿ ತಗೋರಿ ಮೊದಲು, ಆ ಮ್ಯಾಲೆ ಹರಟೀ.

ವಿಠ್ಠಲ : ಈ ಕಡೆ ಸ್ವಲ್ಪರ ಽಽ ನೋಡ್ರಿ.

ಪೂಜಾರಿ : (ಆ ಕಡೆ ನಿಂತ ಶೇಡಜೀ ಕಡೆ ನೋಡಿ ಅವನೇ ಅಂದಿರಬೇಕೆಂದು ತಿಳಿದು,)
ಹೋ ಶೇಠ ಯಾಕ ಒದರತೀರಿ. ನನಗ ಎರಡೇ ಕೈ ಅವ. ಚತುರ್ಭುಜ ವಿಷ್ಣು ಅಲ್ಲ ಮತ್ತ.

ಶೇಡಜೀ : ಯಾಕರೀ ಸ್ವಾಮೀ - ನನ್ನ ಮ್ಯಾಲ್ಯಾಕ ಗುರಗುರಸ್ತೀರಿ? ನಾವಏನಂದ್ಽಽ

ಪೂಜಾರಿ : ಶೇಡಜೀಽ ನಿಧಾನ ಗುಡಿಯೊಳಗರೇ ಸುಳ್ಳು ಹೇಳಬ್ಯಾಡ್ರಿ; ಅಂಗಡ್ಯಾಗ ಅದೆಲ್ಲಾ ನಡೀತದ.

ಶೇಡಜೀ : (ಕಣ್ಣು ಕೆಂಪೇರಿಸಿ) ಏನ ಪೂಜಾರಽಽ ಭಾಳ ಬಂದ್ವಾಂಗ ಕಾಣಸ್ತದಽಽ. ನಿಮ್ಮ ಪುಣ್ಯಾ ಅಲ್ಲ ಮತ್ತ, ವಿಠ್ಠಲನ ಕೃಪಾ ಮತ್ತ.

ವಿಠ್ಠಲ : ಏನ್ರೋ ಯಾರಾದರೂ ನನ್ನ ಕಡೆ ನೋಡ್ತೀರೊ ಇಲ್ಲೋ. ನಿಮಗ ಜನ್ಮಕೊಟ್ಟಾಂವನು ನಾನೇರೋ!

ಪೂಜಾರಿ : (ಕೈಯಲ್ಲಿಯ ಆರತಿ ಗಡಿಬಿಡಿಯಿಂದಾ ಬೇರೊಬ್ಬರ ಕೈಯಲ್ಲಿ ಕೊಟ್ಟು ಆಚೆಗೆ ಸುಮ್ಮನೇ ನಿಂತಿದ್ದ ಮಾಸ್ತರರ ಕಪಾಳಿಗೆ ಬಾರಿಸುತ್ತಾನೆ.)
-ನೀ ನಮ್ಮ ಜನ್ಮದಾತಾ ಏನು?

ಭಕ್ತಗಣ : (ಎಲ್ಲರೂ ಕೂಡಿಯೇ)- ಏನು ಸ್ವಾಮೀ ಇದು?

ಪೂಜಾರಿ : ಇಂವ ನನ್ನ ಜನ್ಮದಾತಾನಽಽ? ಮಾಸ್ತರ ಆದರೇನಾಯ್ತು ಬೇಕಾಧಾಂಗ ಬಡಬಡಸಬೇಕೇ?

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾಸ್ತರ ಎಲೇ ಇವನ ! ನಾ ಏನಂದಪಾ? ಪೂಜಾಳು ರಾತ್ರಿ ಅಮಲ ಇನ್ನೂ ಇಳಿಧ್ಹಾಂಗ ಕಾಣಸೂದಿಲ್ಲಾ.

ಪೂಜಾರಿ : ಇನ್ನೊಂದು ಗಜ್ಜ ಇಳಸ್ತೀನಿ. ಮಾಸ್ತರ ಅಂತೀರಿ ಮತ್ತ ಸುಳ್ಳ ಬ್ಯಾರೆ ಆಡತೀರೇನು?
(ಆರತಿ ಎಲ್ಲ ಕಡೆ ಒಯ್ಯುತ್ತಾ,) ನಮ್ಮ ನಮ್ಮ ಹುಡುಗರನ್ನ ನಿಮ್ಮ ಕಡೆ ಕಲೀಲಿಕ್ಕೆ ಬ್ಯಾರೇ ಕಳಸ್‌ಬೇಕು?

ಮಾಸ್ತರ ನೋಡ್ರಿ, ವಿಠ್ಠಲನ ಆಣೀ ಮಾಡಿ ಹೇಳತೀನಿ. ಬೇಕಾದ್ರ ನಿಮ್ಮ ಆಣೇನೂ ಮಾಡ್‌ತ್ತೀನಿ. ನಿಮಗ ಜನ್ಮ ಕೊಟ್ಟಾಂವಾ ಅಂತ ನಾ ಅಂದೇ ಇಲ್ಲಾ. ನಿಮ್ಮ ಜನ್ಮದಾತಾ ಆಗೂದ್ರೊಳಗ ನನಗೇನು ಅಂಥಾ ದೊಡ್ಡಿಸ್ತನ ಅದ? ಸಾಲಿಯೊಳಗೆ ಹುಡುಗರಿಗೆ ಕಲಿಸೂ ಮುಂದಷ್ಟೇ - ಭ - ಭ - ಭಡಜೀ ಅಂತ ಅಂತೇನು. ಅಪ್ಪರ ಪೂರ್ತಿನೂ ನಿಮ್ಮ ಹೆಸರು.

ಪೂಜಾರಿ : ನಾ.ನಾಽ ಸ್ವತ: ನನ್ನ ಕಿವಿಯಿಂದ ಕೇಳೀನಿ. 'ನೀ ವೇ ನನಗ ಅಂದೀರಿ'

ಮಾಸ್ತರ ಹಂ! ಹಂ! ನೀವೇ ನನಗ, ಜನ್ಮದಾತಾ ಅಂದ್ರಿ.

ಪೂಜಾರಿ : ಅಲ್ಲ ಅಲ್ಲ. 'ನೀವು' ನನಗು ಅಂದದ್ದು! ನಾನೇ ನನ್ನ ಕಿವೀಲೇ ಕೇಳೀನು. ಬೇಕಾದ್ರ ಈ ಭಕ್ತರಿಗೆ ಕೇಳ್ರಿ.

ಸಖೂಬಾಯಿ : ನಾ ಸುದ್ದಾರೇ ಕೇಳೀನ್ರವಾ ಹೀಂಗಽಽ ಅಂದದ್ದು.

ವಕೀಲ : ನಾನೂ ಕೇಳಿದ್ಹಂಗ ಆಗೇದ.

ಪೂಜಾರಿ : ಕೇಳ್ರಿ, ವಕೀಲರ ಮೇಲೆ ವಿಶ್ವಾಸವಿರಲಿಕ್ಕಿಲ್ಲಾ, ಆದರೆ ಈ ಸಖೂಬಾಯಿ ಯಾಕ ಸುಳ್ಳ ಆಡ್ತಾರೀ?

ವಕೀಲ : ಗುರುಗಳು (ಜೋರಿನಿಂದ) ಸ್ವಲ್ಪ ಬಾಯಿ ಬಿಗಿ ಹಿಡಿದು ಮಾತಾಡ್ರಿ.

ವಿಠ್ಠಲ : (ನಡುವೆ ಬಾಯಿ ಹಾಕಿ) ಏಽಽ ಎಲ್ಲರ ಕಿವೀ ಏನ್ ಹರದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೋಗ್ಯಾವೇನು?
(ವಿಠ್ಠಲ ಮಾತನಾಡಿದ್ದು ಯಾರಿಗೂ ತಿಳಿಯದೇ?)

ವಕೀಲ : ಶೇಡಜೀ ನನ್ನ ಕಿಂವಿ ಯಾಕ ಹರೀತಾವ?

ಶೇಡೇಜೀ : ನಾ ನಾ ಏನಂದ್ರಪಾ? ವಕೀಲರ ನಿಮ್ಮ ಕಿಂವೀ ಯಾಕ? ನಿಮ್ಮ ತಲೀಯಾಕ ಒಡೀವಲ್ತು. ನಮಗೇನ್ರಿ ಆದರದು?

ವಿಠ್ಠಲ : ಛೇ - ಛೇ ಏನು ಮನುಷ್ಯರೋ ಪಶುಗಳೋ?

ವಕೀಲ : ಡಾಕ್ಟರ್ ನೀವು ಪುನಃ ಕೆತ್ತೆಬಜೇ ಮಾಡಿದ್ರಿ. ನಮಗ ಪಶು ಅಂತ ಅನ್ನಲಿಕ್ಕೆ ನಿಮಗೇನು ಆಧಾರ ಅದss?

ಪಶು ಡಾಕ್ಟರ : ಓಹೋ - ನನಗೇನು ದನಗಳ ಗುರ್ತು ಹಿಡಿಯಲಿಕ್ಕೆ ಬರುವದಿಲ್ಲss; ನಿಮಗ್ಯಾಕ ದನಾ ಅನ್ನಲ್ರೀ? ಪಶುಗಳು ನಿಮ್ಹಾಂಗ ಗುಡಿ ಒಳಗ ಬಂದು ಕತ್ತೀಹಾಂಗ ಮಾಡೂದಿಲ್ಲಾ ಏನರೀ!

ವಿಠ್ಠಲ : ಅಗದಿ ಬರೋಬರೀ ಮಾತಾಡಿದ್ರಿ.

ವಕೀಲ : ಏನ್ ಸ್ವಾಮಿ ಏನ್ ಬರೋ ಬರಿ ಮಾತಾಡಿದ್ರು, ಈ ಡಾಕ್ಟರ ಮಹಾಶಯರು? - ನೋಡ್ರಿ ಭಕ್ತರ ಸಮಕ್ಷ ಈ ಪಶು ಡಾಕ್ಟರ ನನಗ ಕತ್ತೀ ಅಂತಾನ. ಇವನ ಮ್ಯಾಲೆ ಮಾನಹಾನೀ ಖಟ್ಲೆ ಹಾಕ್ತೀನಿ, ಮತ್ತ ನಿಮ್ಮೆಲ್ಲರ ಸಾಕ್ಷೀ ಇಡತೇನಿ.

ಪಶು ಡಾಕ್ಟರ : ಯಾರಿಗೆ ಬೆದರಸ್ತೀರಿ ವಕೀಲ ಸಾಹೇಬ್ರss ? ನಾ ನಿಮಗ ಕತ್ತೀ ಅನ್ನೊದ್ರಿಂದ ಮಾನ ಹೋತು ಕತ್ತೀದು, ನಿಮ್ಮದೇನಲ್ಲಾ ಮತ್ತ.

ಸಖೂಬಾಯಿ : ಸ್ವಾಮಿ ಮಂಗಳಾರತೀ ತರ್ರಿ. ಪ್ರಸಾದ ಹಂಚರಿ ಬೇಗ. ಮನೀಗೆ ಹೋಗಲಿಕ್ಕೆ ಹೊತ್ತಾಗತದ.

ವಿಠ್ಠಲ : ಹೋಗಲಿ ಬಿಡ್ರಿ, ಬೇಗ, ಮನೀಗೆ ಹೋಗಿ ಗಂಡಂದ್ರಸ್ನ ಕಾಡೂದದ ಅವರಿಗೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಖೂಬಾಯಿ : ಯಾರಂದ್ರು? ದ್ವಾರಕಾಬಾಯಿ ನೀವೇ ಅಂದ್ರಿ. ಹೌದು ನಾ ಕೇಳೀನು. ನೀವೇ ವಟವಟಿಸಿದ್ರಿ, ಬಿಡ್ರಿ.

ದ್ವಾರಕಾಬಾಯಿ : ಅಲ್ಲರೇ, ಛಲೋ ಗಂಡಸರ್ದs ಧನೀ ಇತ್ತು. ನಾ ಸಹಿತ ಕೇಳೀನು. ಪಾಂಡುರಂಗನ ಆಣೀ ಮಾಡಿ ಹೇಳ್ತಿನ್ರವಾ. ನಾ ಯ್ಯಾಕ ಹಾಂಗ ಮಾತಾಡ್ಲಿ ಬಿಡ್ರಿ.

ಸಖೂಬಾಯಿ : ಅಲ್ಲರೀ ದ್ವಾರಕಾಬಾಯರs ಗುಡೀವಳಗರೇ ಸುಳ್ಳು ಆಡಬಾರ್ದು ನೋಡ್ರಿ. ದ್ವಾರಕಾಬಾಯರುss ನನ್ನೂ ಕಿಂವಿ ಅವರೀ ಮರಾ ಅಲ್ಲಾ ಮತ್ತ. ಕಾಡಿದ್ರ ನನ್ನ ಗಂಡನ್ನ ಕಾಡ್ತೇನಿ ನಿಮ್ಮನ್ನೇ ನಲ್ಲಾ ತಿಳೀತs

ಮಾಸ್ತರ : ಅಮ್ಮಾ. ತಾಯೀ ಜಗಳಾಡ ಬೇಡ್ರಿ. ಮನಸ್ಸಿಗೆ ಶಾಂತಿ ಸಿಗಲಿ ಅಂತರೇ ಇಲ್ಲಿ ಬರೋದು. ಇಲ್ಲ್ಯಾಕ ಜಗಳಾಟ? ಇಡೀ ದಿವ್ಸ ಹುಡುಗರ ಕೂಡ ತಲೀ ಒಡಕೋಬೇಕಾಗ್ತ

ಪಶು ಡಾಕ್ಟರ : ಮಾಸ್ತರ, ಹುಡುಗರನ್ನ ಹಡೆಯೋ ಮುಂದನss ವಿಚಾರ ಮಾಡಬೇಕ್ರಿ.

ಮಾಸ್ತರ ಊರಾಗಿನ ಹುಡುಗರೆಲ್ಲಾ ನನ್ನೂ ಏನ ಡಾಕ್ಟರ ss ? ಪಶು ಡಾಕ್ಟರ ಆದ್ರ ಅವುಗಳ ತಲೀಲೇ ವಿಚಾರ ಮಾಡಬೇಕೇನ್ರಿ ಡಾಕ್ಟರು ? ರಾಯರ, ಸಾಲೀವಳಗಿನ ಹುಡುಗೂರು ಅಂತೇನು. ಒಮ್ಮೊಮ್ಮೆ ಹೀಂಗ ಸಿಟ್ಟ ಬರ್ತದ ಹುಡುಗರನ್ನ ಎತ್ತಿ.... ಒಗೀ...

ಶೇಡಜೀ : ವಾಹವಾ. ವಾಹವಾ ಮಾಸ್ತರ ಎರಡನೇಯವರ ಜೀವದ ಮ್ಯಾಲೆ ಎಷ್ಟು ಉದಾರಪಾ. ಪಾಪ? ಸಣ್ಣ ಮಕ್ಕಳು ಅವರ ಮಾಲ್ಯಾಕ ಇಷ್ಟ ಸಂತಾಪ ಅಂತೇನಿ.

ವಿಠ್ಠಲ : ಅಹಾಹಾ ಸಣ್ಣ ಮಕ್ಕಳ ಹೊಟ್ಟಿಯೊಳಗ ಬಾಲ ಹುಳಾ ಆದ ರವಾದ್ದು ಉಪ್ಪಿಟ್ಟು ಹಾಕ್ರಿ ಅಷ್ಟು.
(ವಿಠ್ಠಲ ಮಾತಾಡಿದ್ದು ತಿಳಿಯದೇ)

ಶೇಡಜೀ : ವಕೀಲರss ಮೋಸ ಮಾಡು ಲೆಕ್ಕಾಚಾರ ಇದ್ರ, ಅದು ನಿಮ್ಮ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಧಂದೇದಾಗsss ಅದ.

ಮಾಸ್ತರ ಆ ಮಾತ ಇಲ್ಲ್ಯಾಕ್ರಪಾ?

ಶೇಡಜೀ : ನಾನsss ? ನಾ ಯಾಕ ತಗ್ಲೀಲ್ರೀ ಇಲ್ಲೆ ?

(ಓರ್ವ ಚೆಲುವೆ ತರುಣಿ ನಟಿ, ಸಾಂಪ್ರಾದಾಯಿಕ ಭರ್ಜರೀ ಶಾಲು ಉಟ್ಟುಕೊಂಡು ಸೆರಗು ತಲೇ ಮೇಲೆ ತಗೊಂಡು ವಿನಯದಿಂದ ಮಂದಿರ ಪ್ರವೇಶಿಸುವಳು. ಅವಳನ್ನು ನೋಡಲಿಕ್ಕೆ ಕೆಲ ಭಕ್ತರು ನಿಲ್ಲುತ್ತಾರೆ. ಪೂಜಾರಿಯ ಲಕ್ಷವೆಲ್ಲ ಅವಳ ಕಡೆಗೇ. ಕೈಯಲ್ಲಿಯ ಆರತಿ ಸಖೂಬಾಯಿಯವರ ಮುಂದೆ ಓಡಿದಿದ್ರೂ, ಲಕ್ಷವೆಲ್ಲ ಆ ತರುಣಿಯತ್ತ ಇರುವದರಿಂದ, ಹೆಂಗಸರೆಲ್ಲರೂ ಮಂಗಳಾರತಿ. ತಗೊಂಡರೂ ಕೂಡಾ ಪೂಜಾರಿ ಮುಂದೆ ಸರಿಯುವದೇ ಇಲ್ಲ. ಆ ತರುಣಿ ಅತ್ಯಂತ ಭಕ್ತಿಯಿಂದ ಆರತಿ ತಗೊಂಡು ವಿಠ್ಠಲನಿಗೆ ನಮಸ್ಕರಿಸಿ ಪೂಜಾರೀ ಕಡೆ ನೋಡುತ್ತ)

ತರುಣಿ : ಅಯ್ಯsss ಮಂಗಳಾರ್ತಿ ಆತೇನು? ನನಗsss ಬರಲಿಕ್ಕೆ ವೇಳೆ ಆಯಿತು ನೋಡ್ರಿ.

ಸಖೂಬಾಯಿ : ಹೋ ಮಹಾರಾಜ, ಸರೀರಿ ಮುಂದೆ ನಾವೆಲ್ಲ ಆರತೀ ತಗೊಂಡಾಗೇದರೀ (ಪೂಜಾರಿಯ ಲಕ್ಷವೆಲ್ಲ ಆ ನಟಿಯ ಕಡೆ ಇದ್ದದರಿಂದಾ ಮುಂದೆ ಸರಿಯುವದೇ ಇಲ್ಲಾ, ಇದನ್ನು ಲಕ್ಷಿಸಿ ಶ್ರೀ ವಿಠ್ಠಲನೇ ಕೂಗುತ್ತಾನೆ.)

ವಿಠ್ಠಲ : ಒಂದು ಕಪಾಳಿಗೆ ಕೊಡಿಸಿರಿ. ಅಂದ್ರ ತಾನೇ ಸರಿತಾನ.

ಪೂಜಾರಿ : (ಆವೇಶದಿಂದ ಮುಂದೆ ಬಂದು) ಬರ್ರಿ. ಬರ್ರಿ ನೋಡೂಣು ಯಾರು ನನ್ನ ಮೈಮೇಲೆ ಕೈಯ್ಯಿತ್ತಾರ?
(ಎಲ್ಲರೂ ಏನು ಇದು ಹುಡುಗಾಟ ಅಂತಾ ಆಶ್ಚರ್ಯದಿಂದಾ ಅಂತಾ ಆಶ್ಚರ್ಯದಿಂದಾ ನೋಡುತ್ತಾರೆ.)

ವಕೀಲ : ಏನರೀ ಗುರುಮಹಾರಾಜ? ಯ್ಯಾರ ಮೇಲೆ ಇಂಪ್ರೇಶನ್......

ಪೂಜಾರಿ : ಯಾರ ಇಲ್ಲಾ ಏನ್ ಇಲ್ಲಾ. ನನ್ನ ಕಪಾಳಿಗೆ ಬಾರಿಸುವಷ್ಟು ಯಾರ ಮೈಯ್ಯಾಗ ಖುಮ್ - ಖುಮೀ ಅದ ಅವರು ಮುಂದೆ ಬರ್ರಿ ನೋಡೋಣ. (ಹೀಗನ್ನುತ್ತಾ ಬಜರಂಗ ಬಲಭೀಮನ ಶೀವಿಯಲ್ಲಿ ಮಧ್ಯೆ ಬಂದು ನಿಲ್ಲುತ್ತಾನೆ. ಎಲ್ಲರೂ ಗಾಬರಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಿಂದಾ ಏನು ನಡೆದಿದೆ ಅಂತಾ ನೋಡುತ್ತಲೇ ಇದ್ದಾಗ .... ವಿಠ್ಠಲನೇ ಪೂಜಾರಿಯ ಬೆನ್ನ ಮೇಲೆ ಜೋರಾಗಿ ಗುದ್ದುತ್ತಾನೆ. ಮತ್ತೆ ಗುಡಿಯಲ್ಲಿ ಹೋಗಿ ನಿಲ್ಲುತ್ತಾನೆ.)

ಪೂಜಾರಿ : (ಆವೇಶದಿಂದಾ) ಹೇಡಿ ಶಿಖಂಡೀ ನಾಚಿಕೆ ಬರೋದಿಲ್ಲಽಽ.ಅಡಿಗಿ ನಿಂತು ಹಿಂದಿನಿಂದಾ ಏರಿ ಬರಿಲಿಕ್ಕೆ? ಶೇಡಜೀ, ಇದೇ ಹೇಳತೀನಿ. ನಿನ್ನ ಎತ್ತಿ ಒಯ್ದು ಕುತಿಗೀನೇ ಹಿಚಕ್ತೀನಿ ಮತ್ತ.

ಶೇಡಜೀ : ಯಾರ ಕುತಗೀ ಮಹಾರಾಜಽಽ?

ಪೂಜಾರಿ : ನಿಮ್ಮದೂ. ಮತ್ಯಾರದು?

ಶೇಡಜೀ : ನಂದಽಽ -ನಾ ಏನ್ ಚೆಕ್ಕ ಕೊಂದೀನ್ರಪಾ?

ಪೂಜಾರಿ : ಇಷ್ಟ ಜನರ ಸಮಕ್ಷ - ನನಗ ಗುದ್ದಿದಿರಿ. ನನ್ನ ಬೆನ್ ಅಂದ್ರ ರವಾದ ಚೀಲ ಅಂತ ತಿಳಿದೀದ್ರೇನು?

ತರುಣಿ : (ಅಧೀರಳಾಗಿ) ಪೂಜಾರಽಽ ಆರತೀ ತಗೊಂಡು ಬರ್ರಿ, ಬೇಗ. ನಮ್ಮ ಜನರು ಬೆಂಗಳೂರಿಂದಾ ಬರುವವರಿದ್ದಾರೆ ಈಗ.

ಶೇಡಜೀ : ಬೆಂಗಳೂರಽಽ ಯಾಕರೀ?

ನಟಿ ಶೇಡಜೀ ನಿಮಗ ಹೇಳಿಲ್ಲೇನ್ರೀ, ಸಿನೇಮಾದ್ದು ಒಂದು ಕರೀ ಬಂದದ. ಹುಂ, ಗುರುಗಳಽಽ ಬೇಗ ಆರತೀ ಪ್ರಸಾದ ತರ್ರಿ.

ಪೂಜಾರಿ : ಅಹಾಹಾ, ಒಳ್ಳೇ ದೊಡ್ಡ ಡೌಲು ನೋಡ್ರಿ. ನಟಿ ಆದ್ರ ಏನಾಯಿತು? ಏನು ಹುಕುಂ, ಏನು ಠೀವಿ!

ವಿಠ್ಠಲ : ಎಲೇ ಮೂರ್ಖಾ ದೇವರ ಮುಂದೆ ಎಲ್ಲರೂ ಒಂದೇ ಅಂತ ದಿನಾ ಪುರಾಣದಾಗ ಬಡ್-ಬಡ್ಸತಿಯಲೋ?

ವಕೀಲ : ತರ್ರಿ ಇಲ್ಲೆ ಕೈ. (ಚಪ್ಪಾಳಿಗೆ ಕೈ ಮುಂದೆ ಮಾಡುತ್ತಾನೆ.)

ಮಾಸ್ತರ ನಾಽಽ ನಾಯಾಕ್ರೆಪಾ ಚಪ್ಪಾಳೆ ಕೊಡಲಿ?

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಕೀಲ : ಮಾಸ್ತರ ನೀವೇ ಅಂದ್ರಿಲಾ

ಮಾಸ್ತರ ಲಕ್ಷ್ಯ ಆತ ಹೋಗ್ರಿ . ನನ್ನ ಬಾಯನ್ನೇ ಕರವಸ್ತ್ರದಿಂದಾ ಕಟ್ಟಿಕೋತೀನಿ ಆತಿಲ್ಲೋ? ಸುಮ್ಮ ಪ್ರಸಾದ ತಗೊಂಡು ಹೋಗಬೇಕಂತ ನಿಂತದ್ದು ತಪ್ಪೇನು?

ವಿಠ್ಠಲ : ಖರೇ ಅಂದ್ರ ಹೀಂಗss ಒಬ್ಬೊಬ್ಬರಿಗೆ ಪ್ರಸಾದ ಕೊಡಬೇಕಾಗೇದ, ಹುಂ.

ಭಕ್ತಗಣ : ಸರಿಯಾಗಿ ಅಂದ್ರಿ.

ವಕೀಲ : ಆದ್ರ ಹಿಂಗ ಯಾರಂದ್ರು?

ಪಶು ಡಾಕ್ಟರ : ಹೌದು ಯಾರಂದ್ರು?

ವಕೀಲ : ಶೇಡಜೀ. ಮತ್ಯಾರಂತಾರ?

ಶೇಡಜೀ : ನಾ ಯಾss ಕ ಅನ್ನಲರೀ, ಆದರೂ ಯಾರೇ ಅಂದ್ರೂ, ಬರೋಬರೀ ಅಂದ್ರು, ನೋಡ್ರಿ.

ವಿಠ್ಠಲ : (ಜೋರಾಗಿ) - ಏನ್ ನಾಚಿಕೆ ಇಲ್ಲದವರಿದ್ದಾರೆ ಈ ಜನಾ - (ಅಷ್ಟರಲ್ಲಿ ಒಬ್ಬ ಸಿಂಪಿಗ ಪ್ರವೇಶಿಸುತ್ತಾನೆ.)

ವಕೀಲ : ಶಿಂಪಿಗ ಶಿಂಪಿಗನೇ - ವಾಹವಾ ಏನ ಮಾಮಲೇದಾರನ ಹಾಗೆ ರಿಮಾರ್ಕ ಮಾಡತಾನ ನೋಡ್ರಿ.

ಶಿಂಪಿಗ : ನಾ ಏನ ರಿಮಾರ್ಕ ಮಾಡಿದ್ರಪಾ ವಕೀಲಸಾಹೇಬರss ?

ವಕೀಲ : ಛೇ, ಛೇ, ನಾ ೨೦ ವರ್ಷಾಯ್ತು ವಕೀಲಿ ಮಾಡ್ತೇನು ಇಲ್ಲೇ, ಝುಂಪರ ಪಂಪರ ಹೋಲೀದುಲ್ಲಾ ಹಂ.

ಶಿಂಪಿಗ : ಯಾಕ್ರೀ, ನಾವು ಝುಂಪರ ಹೊಲದದ್ದು ಅಷ್ಟೇಕಾಣಸ್ತಾವೇನು? - ಕೋಟ, ಪ್ಯಾಂಟ ಕಾಣ್ಸುದುಲ್ಲೇನು ನಿಮಗ? ಝುಂಪರ ಸರಿಯಾಗಿ ಹೊಲಿಯೂದು ಅಂದ್ರ ಖೊಟ್ಟಿ ಕಾಗದ ಮಾಡುವಷ್ಟೇನು ಸುಲಭ ಅಲ್ಲ ಸಾಹೇಬ್ರೇ! ಹೊಲದ ತೋರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸರಿ ನೋಡ್ತೋಣು?
(ಅದೇ ಸಮಯಕ್ಕೆ ಒಬ್ಬ ಅಂಧ ಭಕ್ತನು ಬರುತ್ತಿರುವಂತೆ ಶಿಂಪಿಗನಿಗೆ ಡಿಕ್ಕೀ ಹೊಡೆಯುವನು.)

ಶಿಂಪಿಗ : ಏ ಮಹಾರಾಯಾ ಕಣ್ಣೇನು ಒಡದಾವೇನು?
(ಕುರುಡ ಅವನ ಪಾದ ಮುಟ್ಟಿ ಕ್ಷಮೆ ಬೇಡುತ್ತಾನೆ.)

ವಿಠ್ಠಲ : ಏ ಮೂರ್ಖಾ - ಕಣ್ಣು ನಿನ್ನೂ ಹೋಗ್ಯಾವ. ಅವ ಕುರಡ ಇದ್ದಾನ - ನಿನಗ ಕಾಣಿಸೂದಿಲ್ಲೇನು?

ಶಿಂಪಿಗ : ಯಾರಂದ್ರು?

ಅಂಧ : ಅಣ್ಣಾನ ಅಂದಾವ್ರ ಇಟ್ಟಲನೇ.

ವಿಠ್ಠಲ : ನೋಡ್ರಿ - ಈ ಅಂಧನಿಗೆ ಕಾಣಿಸಿತೇ ಹೊರ್ತು ಈ ತಕ್ಕರಿಗೆ ಎಲ್ಲಿ ಕಾಣಸತದ?

ಶೇಡಜೀ : ಏ ಮಾಸ್ತರ ತಕ್ಕ ಅಂತ ಯಾರಿಗೆ ಅಂದ್ರಿ? (ಮಾಸ್ತರರ ಕಡೆಗೇ ಆರೋಪಿಸುವ ದೃಷ್ಟಿಯಿಂದ ನೋಡುತ್ತಾನೆ. ಮಾಸ್ತರರ ಬಾಯಿ ವಸ್ತ್ರದಿಂದ ಕಟ್ಟಿದ್ದು ನೋಡಿ)

ಹಾಂ- ಹಾಂಗಾದ್ರ ಯಾರಂದ್ರು?

ಭಕ್ತಗಣ : ಯಾರೋ ಅಂದ್ರು, ಹೌದು ಹೌದು ಯಾರೋ ಮಾತಾಡಿದ್ರು.

ಎಲೇ ಇದು ಏನ್ರಿ, ವಿಠ್ಠಲನ ಧನೀರಿ. ಅಗದೀ ಅವಂದರೀ.

ಶೇಡಜೀ : ನಿನಗೇನು ಗೊತ್ತು ಕುರುಡಾ?

ಅಂಧ : ಯಪ್ಪಾ - ರಾತ್ರಿ ತಂಪ ವ್ಯಾಳೇದಾಗ ಇದಽ ಕಟ್ಟೀವ್ಯಾಗೆ ಕೂತಽ ದಾಸರ ಪದಾ ಅನಕೋತ ಕೂತಾಗ ಪಾಂಡುರಂಗನ ಧನೀನೇ ಕೇಳಸ್ತದ. ಅವನೂ ತಾಳ ಹಾಕತಾನ ಮತ್ತ.

ವಕೀಲ : ಹೀಂಗಽ ಗುಂಡ ಉಳುಸು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಂಧ : ವಕೀಲ ಸಾಹೇಬ್ರ, ಮೂರಿಪ್ಪತ್ತು ವರಸ ಆಯಿತು ಈ ಊರಾಗ ಇದ್ದ. ಊರಾಗಿನ್ನು ಯಾವ ಕೂಸರೇ ಅತ್ತರ ಅದು ಯಾರ ಕೂಸ ಅಂತ ಹೇಳ್ತೀನಿ ನೋಡ್ರಿಯಪ್ಪಾ.

ಸಖೂಬಾಯಿ ಇದು ಅಗದೀ ಖರೇ ನೋಡ್ರಿ. ಯಾಕಂದರ ಮೊನ್ನೆ ಪುರಾಣ ಕೇಳಲಿಕ್ಕೆ ಕೂತಾಗ ನಮ್ಮ ಮೊಮ್ಮಗ ಅಳಲಿಕ್ಕೆ ಹತ್ತಿದಾ, ನಾ ಹೊರಗ ಕರಕೊಂಡು ಹೋಗುದೇ ತಡಾ ಇವ ಅಂತಾನ ''ತರ್ರಿ ಸಖೂಬಾಯಿರು ನಿಮ್ಮ ಪುಟ್ಟ ಮರಿನ್ನ''

ಡಾಕ್ಟರ ಇದು ಖರೇನು

ಅಂಧ : ಹೋಗ್ಲಿ ಬಿಡ್ರಿ ಡಾಕ್ಟರ ಸಾಬ್ರ.

ತರುಣಿ : ಅಯ್ಯ ಈ ಕುರುಡರಿಗೆ ಹ್ಯಾಂಗ ಗೊತ್ತಾಗತದರೀ?

ಅಂಧ : ವಿಠ್ಠಲ ಒಬ್ಬರಲ್ಲೀದು ಏನಾರೆ ಕಳಿತಾನ. ಏನಾರೆ ಹೆಚ್ಚಿಂದು ಕೊಡತಾನ ನೋಡ್ರಿ (ತರುಣಿಗೆ ಉದ್ದೇಶಿಸಿ) ನಿನಗ ಮಹಾನಂದಾನ ಕುಲದಾಗ ಜನಮ ಕೊಟ್ಟಾನ ಮತ್ತ ಗಂಟಲದಾಗ ಜೇನ ತುಪ್ಪ ಸುರದಾನ ನೋಡು.

ಶೇಡಜೀ : ನಿನಗೇನ ಗೊತ್ತೋ ಅವಳ ಧನಿ ಇಷ್ಟ ಸೀ ಅದ ಅಂತ? - ಊರಾಗ ಬಿಕ್ಕೆ ಬೇಡೂದು. ಹೀಂಗ ಗಾನಾ ಕೇಳಲಾಕ ದುಡ್ಡು ಹಾರಸೋದು.

ಶಿಂಪಿಗ : ನೋಡ್ರಿ ಶೇಠ, ಅದು ಅವನ ದುಡ್ಡು. ಅವ ಬೇಕಾದ್ಹಾಂಗ ಹಾರಸ್ತಾನ. ನೀವು ರೇಸ, ಸಟ್ಟಾ ಲಿಯಾ - ದಿಯಾದಾಗ ಹಾರಸ್ತೀರಿ ಹಾಂಗ. ಅವನ ಮರ್ಜೀರಿ.

ಶೇಡಜೀ : ಇಲ್ಲಿ ನೋಡ್ರಿ, ನೀವು ಆವಳ ಝುಂಪರ ಹೊಲೀತಿರಿ ಅಂತಾ ಅವಳ ವಕೀಲಿ ಪತ್ರಾನೂ ತಗೊಂಡಿರೇನು?

ಮಾಸ್ತರ ಮಹರಾಜಽಽ ಇನ್ನೇನು ಪ್ರಸಾದ ಹಂಚತೀರೋ ಇಲ್ಲಂದ್ರ ತಾಟಽಽ ವ ಎತ್ತಲೋ (ಮತ್ತೆ ಬಾಯಿ ಕಟ್ಟಿಕೊಳ್ಳುತ್ತಾನೆ.)

ಪೂಜಾರಿ : ನನ್ನ ಬೆನ್ನ ಮ್ಯಾಲೆ ಯಾರು ಗುದ್ದಿದವರು ಅದು ಗೊತ್ತಾಗದೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಾ ಪ್ರಸಾದ ಕೊಡುದಿಲ್ಲಾ. ಹೇಳ್ರಿ ಇನ್ನ, ಯಾರು?

ವಿಠ್ಠಲ : ನಾನೇ ನಾನೇ ಗುದ್ದೇನಿ.

ಪೂಜಾರಿ : ಯಾರು ಮಾತಾಡಿದ್ರು ಈಗ?

ಅಂಧ : ಇಟ್ಟಲಾ - ನೀ, ನೀನೆಪಾ ಮಾತಾಡ್ದೀ.

ಪೂಜಾರಿ : ಸುಮ್ನೋ! ಯಾರ ಮಾತಾಡಿದ್ರು? ನಾ ಗುದ್ದೇನಿ ಅಂತ.

ವಿಠ್ಠಲ : (ಜೋರಾಗಿ) ನಾ. ನಾನೇ ಅಂದೆ ಮೂರ್ಖಾ.

ಪೂಜಾರಿ ಗರ್ಭಗುಡಿಯೊಳಗಿಂದ ಬಂತು ಧನೀ, ನಿಲ್ಲರಿ, ನಾ ಒಳಗೆ ಹೋಗಿ ನೋಡೇ ಬರ್ತೇನೆ. (ಗರ್ಭಗುಡಿಯೊಳಗೆ ಹೋಗ್ತಾನೆ.)

ವಕೀಲ : ಹೌದು ನೋಡ್ರಿ, ಧನಿ ಮಾತ್ರ ಆ ಕಡೆಯಿಂದಲೇ ಬಂತು.

ಅಂಧ : ಹೌದರೀ ವಕೀಲಸಾಬರಽ ಇಟ್ಟಲನ ಧನೀನರೀ.

ಶಿಂಪಿಗ : ಹೇ ಮಹಾರಾಯಾ ಸುಮ್ಮಕೂಡ, ಪೂಜಾರಽ ಯಾರರೇ ಇದ್ದಾರೇನ್ರೀ?

ಅಂಧ : ಯಪಾ, ಅಂವಾ ನಿಮ್ಮ ಮುಂದಽ ನಿಂತಾನರೀ-ಸುಳ್ಳೆ ಯಾಕ ಕತ್ತಾಲಾಗ ಹುಡಕಾಕ ಹತ್ತೀರಿ ಅಂವನ್ನ?

ಡಾಕ್ಟರ ಏ, ಈ ಕುರುಡ ಏನರೇ ಅಂತಾನ ಕೇಳ್ರಿ ಸ್ವಲ್ಪ. ದನಗಳಿಗೆ ರಾತ್ರಿ ಕಾಣಸ್ತಾವ ಹಾಂಗ ಇಂವಗೂ ಕಾಣಸ್ತಿರಬೇಕು. ನಾಯಿಗೆ ಮಾತ್ರ ಕತ್ತಲಾಗ ಸ್ವಚ್ಛ ಕಾಣಸ್ತಾವ ಹಂ - ನನ್ನ ಸ್ವಾನುಭವ ದಿಂದ ಹೇಳ್ತೀನಿ.

ವಕೀಲ : ಡಾಕ್ಟರಽ ನಾಯಿಯ ಸ್ವಾನುಭವ ನಿಮಗ ಹ್ಯಾಂಗ್ರಿ ಬಂತು?

ಡಾಕ್ಟರ ಹೋ ಹೋ, ಎಷ್ಟೋ ನಾಯಿಗಳು ನನ್ನ ಪೇಶಂಟ ಅವರೀ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶೇಡಜೀ : ಹಾಂಗಾರ ಡಾಕ್ಟರs ನಿಮ್ಮ ಪೇಶಂಟ ನಿಮ್ಮ ಬಿಲ್ಲ ಮುಳಗಸೂದಿಲ್ಲಾ ಅಲ್ಲೇನ್ರೀ?

ಪಶು ಡಾಕ್ಟರ : ಅವುಗಳ ಕಡೆಗೆ ಹಣದ ವ್ಯವಹಾರ ಕೊಟ್ರ ಬಿಲ್ಲ ಅವು ಮುಳಗಿಸೋದಿಲ್ಲಾ. ಆದ್ರ ಅವರ ಮಾಲಕರು ಮಾತ್ರ ನಕ್ಕೀ ಮುಳಗಸ್ತಾರೆ.

ವಕೀಲ : ಪೂಜಾರು ಎಲ್ಲಿ ಗಪ್ಪಾದ್ರು, ನೋಡ್ರಿ. ಪೂಜಾರss ಪೂಜಾರ

ಪೂಜಾರಿ : ss (ಪೂಜಾರಿ ಬರ್ತಾರೆ. ಮೈ ಎಲ್ಲಾ ಹೊಲಸು ಹತ್ತಿದೆ.)

ಶಿಂಪಿಗ : ಥೂ, ಥೂ, ಅವತಾರ ನೋಡ್ರಿ (ಎರಡೂ ಕೈ ಎತ್ತಿ ಇಳಿಸಿ.)

ತರುಣಿ : ಅಯ್ಯಯ್ಯ - ಗುಡಿಯೊಳಗ ಎಂದೂ ಕಸ ಗುಡಿಸಿಲ್ಲೆನ್ರ್ಯ. (ಎಲ್ಲರೂ ಪೂಜಾರಿಯ ಮೈ ಸ್ವಚ್ಛ ಮಾಡುವವರು.)

ಶೇಡಜೀ : ನಡ್ರೀss ಈ ನಿಮಿತ್ತದಿಂದಲೇ ಗುಡಿಯೊಳಗಿನ ಕಸಾ -ಕಡ್ಡಿ, ಪೈಸಾ ಬೈಸಾ ಸ್ವಚ್ಛ ಆದೂ.

ಪಶು ಡಾಕ್ಟರ : ಯಾರರೇ ಒಳಗ ಇದ್ದಾರೇನ್ರೀ ಪೂಜಾರs ?

ಪೂಜಾರಿ : ಯಾರೂss ಇಲ್ಲಾ, ಆದರ ನಿಮ್ಮ ಒಳಗs ಯಾರೋ ಅಂದ್ರು, ನೋಡ್ರಿ 'ನಾ ಗುದ್ದೇನಿ' ಅಂತ. ಇನ್ನ ಹೇಳ್ರಿ ನಿಜ ಸಂಗತಿ. ಹೇಳ್ರಿ - ಹೇಳ್ರಿ ಬೇಗ (ಚಿಟಗಿ ಬಾರಿಸುತ್ತಾನೆ.)

ವಿಠ್ಠಲ : (ಜೋರಾಗಿ) ನಾ; ನಾ, ಅಂದೆ.

ಭಕ್ತಗಣ : ಎಲೇ.

ಪೂಜಾರಿ : ಏ ಕುರುಡಪ್ಪಾ ನೀ ಧನಿ ಮ್ಯಾಲೆ ಯಾರಂತ ಗುರ್ತ ಹಿಡೀತೀ ಅಲ್ಲss? - ಈಗ ಹೇಳು ಯಾರ ಧನಿ ಅದು?

ಮಾಸ್ತರ : ಏ ಕುಡ್ಡಪ್ಪಾ, ನನ್ನ ಬಾಯಿ ಕಟ್ಟಿದ್ದೇ ಅದ ಮತ್ತ. ಮೊದಲೇ ಹೇಳ್ತನ ನೋಡ. (ತನ್ನ ಹೆಸರು ಹೇಳ್ಯಾನು ಅಂತs ಅಂಜಿದ ಮಾಸ್ತರರ ಪೂರ್ವ ಸೂಚನೆ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪೂಜಾರಿ : ಗಪ್ಪರೀ ಮಾಸ್ತರ - ಬಾಯಿ ಕಟ್ಟಿಕೊಂಡು ಗುದ್ದಲಿಕ್ಕೇನು ಬರೂದಿಲ್ಲSS ? ಕುಡ್ಡಪ್ಪಾ, ಇನ್ನು ಹೇಳು ಯಾರ ಧ್ವನೀ ಅದು?

ಅಂಧ : ಇಟ್ಟಲನದು - ಪಾಂಡುರಂಗನದು ಎಷ್ಟು ಸಲ ಹೇಳಲಿ ನಿಜಾನೇ ಅವನದೇ.

ಪೂಜಾರಿ : ಒಂದ ಹೇಳ ವಿಠ್ಠಲನದೋ - ಪಾಂಡುರಂಗನದೋ?

ಅಂಧ : ಏನರೆ ಅನ್ನಕೊಳ್ರಿ, ವಿಠ್ಠಲಾ ಅನ್ರಿ; ಪಾಂಡುರಂಗಾ ಅನ್ರಿ. ಸತ್ಯನಾರಾಯಣಾ ಅನ್ರಿ. ಸಾವಿರ ಸಾವಿರ ಹೆಸರ ಅವರೀ ಅವಗ - ನಮ್ಮ ಇಟ್ಟಲಗ.

ಪೂಜಾರಿ : ಹುಡುಗಾಟ ಮಾಡ್ತಿಯೇನೋ ನಿನ್ನ ತಲೀನ ಒಡೀತೀನ.

ಅಂಧ : ದೇವರು ಕಂಣು ಒಡೆದಾನ, ನೀವು ತಲೀ ಒಡೀರಿ.

ತರುಣಿ (ನಟಿ) (ವ್ಯಥೆಯಿಂದ) ಏನರೀ ಪೂಜಾರ ಇದು? ಬಡವನ ಮ್ಯಾಲೆ.

ಪೂಜಾರಿ : ಯಾಕರೀ ಬಾಯಿಯವರ, ನಿಮ್ಮ ಕಂತ ಛಲೋ ಅದ ಅಂತ ಸರ್ಟಿಫಿಕೆಟ ಕೊಟ್ಟ ಅಂತ ಅವನ ವಕೀಲಿ ನೀವು....

ವಿಠ್ಠಲ : ನೀವು ಎಲ್ಲರೂ ಕುರುಡರಿದ್ದೀರಿ - ಮೂರ್ಖರು. ಅವ ಅಲ್ಲಾ.

ಪೂಜಾರಿ : ನೋಡ್ರಿ ಮತ್ತ ಯಾರಂದ್ರು ಹೇಳರಿ ಈಗ (ವಿಚಾರಿಸಿದಂತೆ) ಧನೀ ನಮ್ಮ ಊರಾಗಿನದೇ ಅದೆ! ಏನ?

ಅಂಧ : ಹೌದ ಅನ್ನರಿ. ಅಲ್ಲಾ ಅಂದ್ರ ಅಲ್ಲಾ ಅನ್ನರಿ

ಪೂಜಾರಿ : ಏನೋ ಹೌದ ಅನ್ನರಿ ಇಲ್ಲಾರೆ ಇಲ್ಲಾ ಅನ್ರಿ ಅಂದ್ರ.....

ವಕೀಲ : ಪೂಜಾರ ಈಗ ಮಾತ್ರ ಪೂರಾ ನಜರ ಇಟ್ಟದ್ದೆ. ಯಾರೂ ಪಿಟ್ ಅಂದಿಲ್ಲಾ!

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶೇಡಜೀ : ನಂದೂ ಲಕ್ಷ ಈ ಶಿಂಪಿಗನ ಮೇಲೆ ಪೂರಾ ಇತ್ತು.

ಶಿಂಪಿಗ : ಏನರೀ ಗುಡಿಗೆ ಬರೂದು ನಮ್ಮನ್ನ ನೋಡಲಿಕ್ಕೇನಽಽ

ಪೂಜಾರಿ : ಬಂದ ಮಾಡ್ರಿ ವಟವಟ, ಅಪಾ ಈಗಾರೇ ಹೇಳು ಯಾರ ಧನಿ ಅದು?

ಅಂಧ : ನಿಜಾನೇ ಇಟ್ಟಲಂದು, ಪೂಜಾರಽಽ

ಪೂಜಾರಿ : ವಿಠ್ಠಲಾ - ಯಾ ವಿಠ್ಠಲಾ ಅವರ ಅಪ್ಪನ ಹೆಸರೇನು?

ಶಿಂಪಿಗ : ವಕೀಲ ಸಾಹೇಬರ ನಿಮ್ಮ ಹೆಸರು ವಿಠ್ಠಲ ಅಲ್ಲರೀ?

ವಕೀಲ : ನನ್ನ ಹೆಸರು ಪಾಂಡುರಂಗ ಅಲ್ಲೇನೋ? ಮರತೇನು ಝುಂಪರ ವಾಲಾ?

ಶಿಂಪಿಗ : ರಾವಸಾಹೇಬ ಮ್ಯಾಲಿಂದ ಮ್ಯಾಲೆ ನನ್ನ ಝುಂಪರ ತಗೀ ಬ್ಯಾಡ್ರಿ. ಇದೇ ಹೇಳ್ತನಿ.

ಪೂಜಾರಿ : ಮಹಾರಾಯರಽಽ ಏನಿದು ಗುಡಿಯೋ ಮುನ್ಸಿಪಾಲಿಟಿನೋ?

ವಕೀಲ : ಏನರೀ ನೀವೇ ದೊಡ್ಡ PSI ನ್ಹಂಗ ಆವೇಶ ತಂದ್ರಿ

ಪೂಜಾರಿ : ನಿಮ್ಮನ್ನು ಯಾರರೇ ಗುದ್ದಿದ್ರ ತಿಳೀತಿತ್ತು. ಇನ್ನು ಬೇಗ ಇಲ್ಲಿ ವಿಠ್ಠಲ ಯಾರು ಹೇಳ್ರಿ ನೋಡೋಣು. (ಕಣ್ಣು ತಲೆ ಅಲ್ಲಾಡಿಸಿ ಸೂಚಿಸುತ್ತಾನೆ.)

ವಿಠ್ಠಲ : ಏನ ಮಾಡಾಽ ವ ಇದ್ದೀದಿ?

ಪೂಜಾರಿ : (ಅಂಜಿದಂತೆ) - ನಿನ್ನ ಬೆನ್ನಾಗ ಒಂದು ಏಟು ಹಾಕತೀನಿ.

ವಿಠ್ಠಲ : ಹಾಕು ನೋಡೋಣ.

ಪೂಜಾರಿ : ಬಾಽಽ ಅಂಜು ಬುರಕಾ - ಗುದ್ದಿ ಟೆಂಗಿನಕಾಯಿ ಒಡೇತೀನಿ. (ಗುದ್ದುವ ಹಾವ ಭಾವ ಮಾಡಿ - ಗುದ್ದುತ್ತಾನೆ. ಆದರೆ ಕೈ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾತ್ರ ಗೋಡೆಗೆ ತಾಗಿದ್ದರಿಂದಾ ಪೂಜಾರಿಯ ಕೈಗೇ ಪೆಟ್ಟು ಹತ್ತಿ ವಂಯ್- ವಂಯ್ - ಓ ಅಂತಾ ಚೀರುತ್ತಾನೆ.)

ಶೇಡಜೀ : ಏನಾತರೀ?

ಶಿಂಪಿಗ : ಕೈ ಒಳೀತೇನು?

ಪೂಜಾರಿ : ಒಳೀತದಯಾಕ, ಛಲೋ ಕಲ್ಲಿನ ಗೋಡೆಗೇ ಏಟು ಬಿತ್ತು.

ವಕೀಲ : ಅದ ಹ್ಯಾಂಗ್ರಿ, ಗೋಡಿ ಛಲೊ ೧೦ ಪೂಟ ಅಂತರದ ಮೇಲೆ ಅದ ನಿಮ್ಮಂದ.

ಅಂಧ : (ವ್ಯಾಕುಲದಿಂದ) ಇಟ್ಟಲನ ಬೆನ್ನಿಗೆ ಏಟು ಬಿತ್ತರಿSS ಪೂಜಾರs (ಪಾಂಡುರಂಗಾ - ಇಟ್ಟಲಾ - ಪಾಂಡುರಂಗಾ ಅಂತಾ ದು:ಖಿಸುತ್ತಾ ಅದೇ ನಂದಿದ ಸಮೆಯ ಬಿಸಿ ಎಣ್ಣೆಯಲ್ಲಿ ಕೈ ಅದ್ದಿ ವಿಠ್ಠಲನ ಕಡೆಗೆ ಓಡಿ ಹೋಗುವನು.)

ಪೂಜಾರಿ : ಏನಿದು ಎಲ್ಲಿ ನಡೆದಿ?

ಅಂಧ : ಇಟ್ಟಲನ ಬೆನ್ನಿಗೆ ಎಣ್ಣೆ ಹಚ್ಚಿ ತಿಕ್ಕಲಿಕ್ಕೆ ಹೋಗ್ತೇನು ಮಾರಾಯಾ.
(ಅಂಧ ಗರ್ಭಗುಡಿಯಲ್ಲಿ ಕಾಲಿಡುವಂತೆ ಎಲ್ಲರ ಲಕ್ಷವೂ ಆ ಕಡೆ. ಅಂಧನು ಮುಂದೆ ಹೆಜ್ಜೆ ಇಡುವಷ್ಟರಲ್ಲಿ ಶ್ರೀ ವಿಠ್ಠಲನೇ ಭಕ್ತನೆಡೆದಾವಿಸಿ ಅಂಧನ ಕೈಯನ್ನೇ ಹಿಡಿಯಲು ಪೀಠದಿಂದಾ ಕೆಳಗೆ ಇಳಿದು ಓಡಿ ಬರುತ್ತಾನೆ.)

ಎಲ್ಲರೂ ಆ - (ಬಾಯಿ ತೆರೆದು, ಆಶ್ಚರ್ಯ - ಭೀತಿಯಿಂದಾ ವಿಠ್ಠಲನ ಕಡೆ ಮೊದಲ ಸಲ ಲಕ್ಷ ಕೊಟ್ಟದ್ದು)

ವಿಠ್ಠಲ : ಒಮ್ಮೆ ಎಲ್ಲರೂ ನನ್ನ ಕಡೆಗೆ ನೋಡುವಂತಾಯಿತು. ಲಕ್ಷ ಸೆಳೀತು ಒಮ್ಮೆ ಹೋSS !

ಹೆಂಗಸರು : ಅಯ್ಯಯ್ಯ- ಅಯ್ಯಯ್ಯ (ಆಶ್ಚರ್ಯದಿಂದ ಅತ್ತ ಇತ್ತ ಸಂಭ್ರಮದಿಂದ ಓಡುತ್ತಾರೆ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಠ್ಠಲ : ಮಹಾರಾಜ ಗುದ್ರಿ, ನೋಡೋಣ.

ಪೂಜಾರಿ : ಯಾರು ನೀ?

ವಿಠ್ಠಲ : ನನ್ನ ಗುರ್ತು ಯಾರಿಗಾದರೂ ಅದs ಏನು?

ಶೇಡಜೀ : ಎಲ್ಲೋ ನೋಡಿದ್ಹಂಗ ಅನ್ಸತದರಿ!

ವಿಠ್ಠಲ : ಏನ್ ಶೇಡಜೀ, ನಿಮ್ಮ ಅಂಗಡಿಯೊಳಗ ಅಕ್ಕೀಚೀಲದಾಗ ಸಣ್ಣ ಉಸುಕು ಕೂಡಿಸುವಾಗ ಒಮ್ಮೆ ನಾ ಕಾಣ್ಸಿರಬೇಕು!

ಶೇಡಜೀ : ನಿಲ್ಲರಿ, ನಿಲ್ಲರಿ. ಮುಂದ ಆಡಬ್ಯಾಡ್ರಿ. ಆವಾಗ ಒಮ್ಮೆ ನಿಮ್ಹಾಂಗ ಒಬ್ಬರು ಕಾಣಿಸಿದ್ರು ಹೌದು.

ವಕೀಲ : ಸ್ವಲ್ಪ ನಿಮ್ಮ ರುಮಾಲು ತಗೀರಿ ನೋಡೋಣ

ವಿಠ್ಠಲ : ಯಾಕ?

ವಕೀಲ : ನಮ್ಮ ಒಬ್ಬ ಪಕ್ಷಗಾರ ನಿಮ್ಹಾಂಗ ಇದ್ದಾ.

ವಿಠ್ಠಲ : ಓಹೋ!

ವಕೀಲ : ಯಾಕ ನಮ್ಮ ಈ ಕಡೆ ಭಾಷಾ ನಿಮಗ ತಿಳೀದುಲ್ಲೇನು? ಒಬ್ಬ ಪಕ್ಷಗಾರ ಒಂದು ದರೋಡೆ ಕೇಸದಾಗ ಮುಖ್ಯಸ್ಥ, ಕಪ್ಪು ಬಣ್ಣ ನಿಮ್ಹಂಗss

ಅಂಧ : ವಕೀಲ ಸಾಬ್ರ, ನೆಟ್ಟಗ ನೋಡ್ರಿ, ಏನು ಸುಂದರ ಮುಖ ಸುಂದರ ರೂಪಾ. ದರೋಡೆ ಖೋರನ್ಹಾಂಗ ನಮ್ಮ ಇಟ್ಟಲ ಕಾಣಸ್ತಾನೇನ. (ಹಣೆ ಬಡೆದು ಕೊಳ್ಳುತ್ತಾನೆ.)

ಪಶು ಡಾಕ್ಟರ : ಕ್ಷಮಾ ಮಾಡ್ರಿ ಪುರಾಣಿಕರೇ, ಅವ ಕುರುಡಾ ತಪ್ಪಿ ನಿಮಗ ಚೆಲುವಾ ಅಂದಾ. ಕಣ್ಣ ಕಾಣಸೂದಿಲ್ಲಾ ಅದರ ಲಾಭ ತಗೊಂಡು ಹೀಂಗss ಎಲ್ಲರದು ಕುಚೇಷ್ಟಾ ಮಾಡತಾನೆ. ಆದರ ಪುರಾಣಿಕರss

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಠ್ಠಲ : ಏ - ನಾ ಪುರಾಣಿಕ ಅಲ್ಲಾ.

ಶಿಂಪಿಗ : ಅಂದ್ರ, ನೀವು ಯಾ ಊರಾವ್ರು? ನಮ್ಮ ಊರಾವರೇನು ಕಾಣ್ಸುದಿಲ್ಲಾ. ಯಾಕಂದ್ರ, ಈ ಬಗಲ ಬಂಡೀ ನಾ ಏನ್ ಹೊಲದಿಲ್ಲಾ. ಸ್ವಲ್ಪ ಸೈಲ ಕಾಣ್ಸತದ. ಅಗದೀ ಫಿಟ್ ಆಗೂದಿಲ್ಲಾ ನೋಡ್ರಿ.

ವಿಠ್ಠಲ : ನಿಮ್ಮ ಅಜ್ಜನ ಅಜ್ಜ ಹೊಲದಾನ. ಆ ಮ್ಯಾಲೆ ನಾ ಎಲ್ಲಿ ಹೊಸಾದು ಕಂಡೇನು?

ಶಿಂಪಿಗ : (ಆಶ್ಚರ್ಯದ ಧನಿಯಲ್ಲಿ) ಆಂ ನಮ್ಮ ಅಜ್ಜನ ಅಜ್ಜಽ ಅಂವಾ ತೀರಿ ಹೋಗಿ ೧೫೦ ವರ್ಷ ಆದೂ.

ವಿಠ್ಠಲ : ನಾನೂ ಅದೇ ಹೇಳ್ತೀನು. ನೂರಾ ಐವತ್ತು ವರ್ಷದಾಗ ಈ ಬಂಡೀ ಬದಲಿಸಿಲ್ಲಾಂತ.

ಪೂಜಾರಿ : ಇಲ್ಲೆ ನೋಡ್ರಿ, ಅಡ್ಡಾ ತಿಡ್ಡಾ ಮಾತಾಡಬ್ಯಾಡ್ರಿ. ಇಲ್ಲೆ ಗರ್ಭಗುಡಿ ಒಳಗ ಅಡಗಿಕೊಳ್ಳೂದು ಏನ ಕಾರಣ? ಗುಡೀ ಒಳಗ ಪುರಾಣ ಹೇಳೂದೇ ಇದ್ರ, ಸೀದಾ ಮುಂದಿನ ಬಾಗಲ ಎಂದ ಬರಬೇಕ್ರಪಾ ಮತ್ತು ಈಗ ಚಾತುರ್ಮಾಸನೂ ಮುಗಿಲಿಕ್ಕೆ ಬಂದದ.

ವಿಠ್ಠಲ : ಇದನ್ನ ನೀವು ನನಗೆ ಹೇಳ್ರಿ. ನೀವೇ ನನ್ನ ಹಿಡಿದು ಶೇಷನ ಮೇಲೆ ಶೇಷಶಾಯೀ ಅಂತ ನಾಲ್ಕು ತಿಂಗಳ ಕಟ್ಟಿ ಮಲಗಿಸಿದ್ರಿ. ಲಕ್ಕ ಆತ ಹೋಗ್ರಿ. ಹುಲಿ ಮುಂದ ಆಡಿನ್ನ ನಿಲ್ಲಿಸಿ - ಆಡಿಗೆ ಹುಲ್ಲು ಹಾಕಿದ್ಹಾಂಗ ನೋಡ್ರಿ.

ಪೂಜಾರಿ : ಇದ ನೋಡ್ರಿ. ನೀವು ಯಾರಂತ ಸರಳ ಹೇಳ್ರಿ. ಇಲ್ಲ ಅಂದ್ರ, ಪೋಲೀಸರನ್ನ ಕರಸಬೇಕಾಗ್ತದ.

ವಿಠ್ಠಲ : ನಾ ವಿಠ್ಠಲಾ, ಪಾಂಡುರಂಗಾ ಇದ್ದೇನಿ.

ವಕೀಲ : ಅಂದ್ರ, ವಿಠ್ಠಲಽಽಽ ಖರೇ ವಿಠ್ಠಲನೇ?

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಠ್ಠಲ : ನೂರಕ್ಕೆ ನೂರು ಪರ್ಸೆಂಟ ಖರೇ ವಿಠ್ಠಲನೇ

ವಕೀಲ : ಅಂದ್ರ, ಇಪ್ಪತ್ತೆಂಟು ಯುಗಾ....?

ವಿಠ್ಠಲ : ಹೌದು, ಹೌದು, ನನಗ ಆ ಆರತಿ ಹಾಡು ಕೇಳಿ ಕೇಳಿ ಬೇಜಾರ ಆಗೇದ, ಎಲೇ ನಿಮಗss ಆ ಬಾಯಿಯು, ದಿನಾ ಅದೇ ಅದೇ ಹಾಡು ಕೇಳಿದ್ರ, ನಿಮಗೇನು ಅನಸ್ತದ ಶೇಡಜೀ?.

ಶೇಡಜೀ : ಆ ಬಾಯಿಯು ಮೈಫಿಲಿಕ್ಕ ನಾ ಹೋಗ್ತಿನಂತ ನಿಮಗ್ಯಾರು ಹೇಳಿದ್ರು ಮತ್ತ?

ತರುಣಿ (ನಟಿ) ಅದು ಸುಳ್ಳೇನ್ರಿss ಶೇಡಜೀ?

ವಿಠ್ಠಲ : ಈಗ ಹೇಳ್ರಿ ನೋಡೋಣು. ನನಗ ಇಪ್ಪತ್ತೆಂಟು ಯುಗಾ ಅದೇ ಅದೇ ಪದಾ ಕೇಳಿ ಕೇಳಿ ಏನ ಅನಸ್ತಿರಬೇಕು? ಮನುಷ್ಯನಿಗೆ ಅದಲು ಬದಲು ಅಂಬುವದು ಬೇಕೋ ಬ್ಯಾಡೊ? ದೇವರೇನು ಪಾಪ ಮಾಡ್ಯಾನ ಹೇಳ್ರಿ?

ಶೇಡಜೀ : ಅಲ್ಲರೀ ಅಂದ್ಹಾಂಗ ನಿಮ್ಮದೂ ದೇವರದೂ ಏನು ಸಂಬಂಧ?

ವಿಠ್ಠಲ : ನಾನು ದೇವರೇ ಇದ್ದೇನಿ. ಎಷ್ಟು ಸಲ ಹೇಳಲೀ?

ದ್ವಾರಕಾ, ಸಖೂ ಅಯ್ಯಯ್ಯ. ಹುಡುಗೂರನ್ನರೇ ಕರಕೊಂಡು ಬರಬೇಕಿತ್ರೀ. ಪಾಪ, ಅವೆಂದು ಖರೇ ದೇವರನ್ನ ನೋಡಬೇಕು?

ಶೇಡಜೀ : ನೀವು ದೇವರಂತ ಯಾತರ ಮ್ಯಾಲಿಂದ? ಹೌದು ನಾಳೆ, ಸೋಮ್ಯಾ-ಗೋಮ್ಯಾ ಬಂದು ನಾ ದೇವರು ಅಂತ ಹೇಳಿದರ ಹ್ಯಾಂಗ?

ವಿಠ್ಠಲ : ಬೇಕಾದರ ನನ್ನ ಪರೀಕ್ಷಾ ತಗೊಳ್ಳರಿ.

ಶೇಡಜೀ : (ಆವೇಶದಿಂದ ಕಿಸೆಯೊಳಗಿನ ರೂಪಾಯಿ ಹೊರೆತೆಗೆದು)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಿಲ್ಲರಿ, ಹಂ, ಇದು ರೂಪಾಯಿ ಅದ ऽऽ, ಇದನ್ನ ಬಂಗಾರದ ರೂಪಾಯಿ ಮಾಡ್ರಿ, ನೋಡೋಣ.

ವಿಠ್ಠಲ : ತರ್ರಿ

ವಕೀಲ : ಶೇಡಜೀ ರೂಪಾಯಿ ಯಾಕ ಬಂಗಾರದು ಮಾಡ್ತಿರೀ, ತಗೋರಿ ನನ್ನ ಜನಿವಾರವನ್ನೇ ಬಂಗಾರ ಎಳಿ ಮಾಡ್ರಿ.

ಶಿಂಪಿಗ : ಜನಿವಾರಕ್ಕಿಂತ ನನ್ನ ಟೇಪ ಉದ್ದ ಅದ. ಅದನ್ನೇ ಮಾಡ್ರಿ.

ಶೇಡಜೀ : ಇಲ್ಲೆ ನೋಡ್ರಿ - ಮೊದಲು ಈ ವಿಚಾರ ನಂದು. ಏನ ಆಯಡಿಯಾ ಅದ!

ಸಖೂಬಾಯಿ: ಏನ್ರೀ ಈ ಗಂಡಸರು, ಮೂರ್ಖ ಹೆಂಗ್ಸರ ಹಾಂಗ ಬಂಗಾರದ ಸಲುವಾಗಿ ಕಚ್ಚಾಟತಾರಪ್ಪಾ? ಅಯ್ಯ, ದೇವರ ನನ್ನ ಈ ಕಾಜಿನ ಬಳೀ ಅಷ್ಟು ಬಂಗಾರದ್ದ ಮಾಡಿ ಕೊಡ್ರಿ ಸಾಕು.

ಪೂಜಾರಿ : ಖಾಮೋಷ, ಗುಡಿ ನಂದು, ಪರಂಪರಾಗತ ನಮ್ಮ ಮಾಲ್ಕೀದು.

ವಕೀಲ : ಯಾತರ ಮೇಲಿಂದ? ಏನು ಸಾಕ್ಷಿ ಪುರಾವೆ ಅವೆ?

ಪೂಜಾರಿ : ಇವರಿಗೆ (ವಿಠ್ಠಲನ ಕಡೆ ಕೈ ತೋರಿಸುತ್ತ) ಕೇಳ್ರಿ - ಹೌದಲ್ಲರೀ ದೇವರಽಽ?

ವಕೀಲ : ಹೌದರೀ, ಇವರು ಇನ್ನೂ ದೇವರಂತ ಎಲ್ಲಿ ಸಿದ್ಧ ಆಗೇದ?

ಪೂಜಾರಿ : ಹೌದು (ವಿಠ್ಠಲನಿಗೆ ಉದ್ದೇಶಿಸಿ) ಹೂಂ, ಬೇಗ ಸಿದ್ಧ ಆಗಲೇಬೇಕು ಹಾಂ, ಈ ಗಂಧದ ಕೊರಡಷ್ಟು ಬಂಗಾರದ್ದು ಮಾಡ್ರಿ, ನೋಡೋಣ. ಹಾಂ ಒಂದು ಮಾತ, ತೂಕ ಮಾತ್ರ ಅಷ್ಟೇ ಆಗಬೇಕ್ರೀ.

ಶೇಠಜೀ : ನಾ ಮಾಡಗೊಡುದಿಲ್ಲಾ

ಮಾಸ್ತರ ಯಾಕ ಬಡದಾಡತೀರಿ? ದೇವರ, ಈ ನನ್ನ ಸಣ್ಣ ಖಡೂ ಅಷ್ಟು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬಂಗಾರದ ಮಾಡಿ ಬಿಡ್ರಿ, ಸಾಕು. ಹೌರಗ ಅದ. (ಖಡೂ ತೆಗೆದು ತೋರಿಸುತ್ತಾನೆ.)

ಡಾಕ್ಟರ ಮಾಸ್ತರಽಽ ನಿಲ್ಲರಿ, ಸಾಲೀವಳಗಿಂದ ಈ ಖಡೂ ಎಬ್ಬಿಸಿಕೊಂಡು ತಂದಿದರಿಲೋ. ಏನ ಅನ್ನಬೇಕು. ನಮ್ಮ ಹುಡುಗರಿಗೆ ಯ್ಯಾಕ ಹೆಸರಿಡಬೇಕ್ರೀ. (ವಿಠ್ಠಲನಿಗೆ ಇಲ್ಲ ನೋಡ್ರಿ, ವಿಠ್ಠಲರಾಯರಽ ನೀವು ಇಲ್ಲೇನು ಜಾದೂ ಪ್ರಯೋಗಮಾಡುವಗೋಜಿಗೆ ಹೋಗಬೇಡ್ರಿ. ಬೇಕಾದ್ರ ಇಲ್ಲೇ ಮುರಘೇಂದ್ರ ಥಿಏಟರದಾಗ ಒಂದು Top ಪ್ರೊಗ್ರಾಮು ಇಡೂಣು. ನಾ ಧರ್ಮಾರ್ಥ ಪ್ರಯೋಗಂತ ಕಂಟ್ರಾಕ್ಟ ತಗೋತೀನಿ ಬೇಕಾದ್ರ. ಹೋದ ವರ್ಷ ಒಂದು ನಾಟಕಾ ಆಡ್ಸಿದೆ ಐದು ಸಾವಿರ ರೂಪಾಯಿ ಲಾಭ ಆಯಿತು.

ವಿಠ್ಠಲ : ಮತ್ತ ದನಗಳ ಉಚಿತ ಚಿಕಿತ್ಸಾಕ್ಕಂತ ಇಟ್ಟ ಹಣಾ ಎಲ್ಲಿ ಹೋದೂ? ಗುಳುಂ ಆದು ಹೌದಲ್ಲರೀ ಡಾಕ್ಟರ?

ಡಾಕ್ಟರ ನಿಮಗೆ ಹ್ಯಾಂಗ ಗೊತ್ತಾತು?

ವಿಠ್ಠಲ : ಎಲೇ, ನಾ ಪ್ರತ್ಯಕ್ಷ ದೇವರಂತ ಹೇಳತೀನ ಅಲ್ಲಽ?

ಡಾಕ್ಟರ ಭಂಪ ಹೊಡಿ ಬ್ಯಾಡ್ರಿ, ನಮಗೇನು ಖರೇ ದೇವರನ್ನ ಗುರ್ತು ಹಿಡೀಲಿಕ್ಕೆ ಬರೂದಿಲ್ಲಽ ? - ದೇವರೇನು ತನ್ನ ಜಾಗಾ ಬಿಟ್ಟ ಓಣಿ ಓಣೀ, ಬೀದಿ ಬೀದಿ ತಿರಗತಾನ? ನಾವೇನು ದೇವರನ್ನ ನೋಡಿಲ್ಲಾ? ರಾಮು, ಕೃಷ್ಣ, ಪಾಂಡುರಂಗಾ - ಒಬ್ರರೇ ಒಂದ ಶಬ್ದರೇ ಆಡ್ಯಾರೇನು? ಮತ್ತ ನೀವ್ಯಾಕರಪಾ ಆಸನಾ ಬಿಟ್ಟು ಪಿರೀ ಪಿರೀ ತಿರಗತೀರಿ?

ಶೇಡಜೀ ಏನರೀ ದೇವರು ಸ್ವಲ್ಪ ಅತ್ತ ಇತ್ತ ಅಡ್ಡಾಡಿದರ ತಪ್ಪೇನು? ಅದು ಅವರವರ ಇಚ್ಛಾರೀ. ಹಾಂಗ ನೋಡಿದರ ನೀವು ಪಶುಡಾಕ್ಟರು. ನಾಟಕ ಕಂಪನಿಯ ಪ್ರಯೋಗ ಕಾಂಟ್ರಾಕ್ಟ ತಗೋತೀರಿ. ವಕೀಲ ಜನರು ಗಾಯನ, ಮೈಫಲ್ ಮಾಡ್ಸ ತಾರ. ಸಿನೇಮಾ ನಟಿಯರು 'ಸಂಸಾರ ಹ್ಯಾಂಗ ಮಾಡಬೇಕು' ಅದನ್ನ ಕಲ್ಸತಾರ. ಶಾಲಾ ಮಾಸ್ತರರು ಖಾನಾವಳೀ ಇಡ್ತಾರ. ಮಂತ್ರಿಗಳು ಕೀರ್ತನ ಮಾಡ್ತಾರ ಕೀರ್ತನಕಾರ್ರು ಇಲೆಕ್ಶನ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಘಡದಾಗ ಇಳಿತಾರ. ಅಂದ ಮ್ಯಾಲೆ ದೇವರು ಸ್ವಲ್ಪ ಕೈ ಕಾಲು ಸೈಲ ಮಾಡಿಕೊಂಡ್ರ, ನಿಮ್ಮದೇನು ಗಂಟು ಹೋಗ್ತದರೀ? ನೋಡ್ರಿ ನಮಗೂ ದಿನಾ ಗಾದಿ ಮ್ಯಾಲೆ ಕೂತ ಕೂತ ದಣಿವು ಆಗ್ತದ. ದೇವರು ಯುಗಾನು ಯುಗಾ ನಿಂತು ಏನ ಗತಿ ಆಗಿರಬೇಕು? ಪೂಜಾರರು ನೀವು ಸುಮ್ಮನೆ ಐದು ನಿಮಿಷ ಒಳಗ ಓಡಾಡಿದರ ಮೈ ಎಲ್ಲಾ ಹೊಲ್ಸ ಹತ್ತಿ, ಬಾವಾನ ಹಾಂಗ ಆದ್ರಿ. ಹುಂ. ವಿಠ್ಠಲರಾಯರ ತಿರುಗಾಡಿ ಬರ್ರಿ ಅಡ್ಡೀ ಇಲ್ಲಾ ಆದರ ಮೊದಲ ಈ ರೂಪಾಯಿ.....

ಪೂಜಾರಿ : ಶೇಡಜೀ ರೂಪಾಯಿ ಕಿಸೆಯೊಳಗ ಹಾಕರಿ.

ಶೇಡಜೀ : ಹೋ ಈ ನಾಸ್ತಿಕ ಜನರ ಸಂಶಯ ಒಮ್ಮೆ ಹೋಗಲಿ.

ಅಂಧ : ಹೌದ್ರಪ್ಪಾ ಅಂವಾ ಖರೇ ಖರೇನ ನಮ್ಮ ದೇವರ್ಘುಂರರ ಇಟ್ಟಲಾ.

ಶಿಂಪಿಗ : ಹುಚ್ಚಾ. ಸುಮ್ಮ ಕೂಡೋ, ಮೊದಲೇ ಕುರುಡಾ . ಮ್ಯಾಳೆ ಕಾಣಸ್ತದಂತ?

ವಿಠ್ಠಲ : ಹೋ ನೋಡ್ರಿ, ಹಾಗಾದರೆ (ಅಂಧನ ಕಣ್ಣುಗಳ ಮೇಲೆ ಕೈ ಆಡಿಸಿದ ಕ್ಷಣ- ಅಂಧನಿಗೆ ದೃಷ್ಟಿ ಬರುತ್ತದೆ)

ಅಂಧ : (ಭಾವನಾವಶನಾಗಿ - ಭಕ್ತಿಯಿಂದಿ ಸಾಷ್ಟಾಂಗ ನಮಸ್ಕರಿಸುತ್ತ) ಇಟ್ಟಲಾ, ಇಟ್ಟಲಾ, ಪಾಂಡುರಂಗಾ. (ಅತ್ಯಂತ ನಮ್ರವಾಗಿ ಆನಂದ ಆಶ್ಚರ್ಯ ಸೂಚಿಸುತ್ತಾನೆ.)

ಪೂಜಾರಿ : ಏನೋ-ಏನ್ ಬಡಬಡ್ಸ್ತೀ?

ಅಂಧ : ಅಪ್ಪಾ ದೇವರು ನನಗ ಕಾಣ್ಸಲಾಕ ಹತ್ತೇದ್ರೀ.

ವಕೀಲ : ಏನ ಅಂತೀ?

ಶೇಡಜೀ ಹಾಗಂದ್ರ, ನನ್ನ ಕೈಯಲ್ಲಿ ಏನ ಅದ ಹೇಳು?

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಂಧ : ಶೇಡಜೀ ಒಂದೇ ರೂಪಾಯಿ, ಅದೂ ಖೊಟ್ಟಿ, ಖೊಟ್ಟಿ

ಶೇಡಜೀ : ಯ್ಯಾತರ ಮ್ಯಾಲಿಂದ ಖೊಟ್ಟಿ?

ಅಂಧ : ಅದು ಖೊಟ್ಟಿ ತವರಿನ ನಾಣೆ ಐತ್ರೀ!

ಶೇಡಜೀ : ನಿನಗ ಹ್ಯಾಂಗ ತಿಳೀತು?

ಅಂಧ : ನಾ ದೇವರಿಗೆ ಒಂದೂ ಕಣ್ಣು ಬೇಡಿದ್ದಿಲ್ಲಾ. ಆದರ ಇಟ್ಟಲಾ ಎರಡೂ ಕಣ್ಣ ಕೊಟ್ಟ. (ಅಂದರೆ ಒಳಗಿನ - ಹೊರಗಿನ ದೃಷ್ಟಿ, ಅಂತರ ಬಾಹಿರ ಎರಡೂ ದೃಷ್ಟಿ.)

ವಕೀಲ : ಶೇಡಜೀ, ಈ ತವರಿನ ರೂಪಾಯಿ ಚಿನ್ನದ ನಾಣೆ ಆಗಿ ಬೇಕಾಗಿತ್ತ ಅಲ್ಲS ವಾರೇ ವಾ! (ನಗುತ್ತ)

ಅಂಧ : (ಆನಂದದಿಂದ ನೋಡಿ) ಆ ಹಾಹಾ. ಮಾಸ್ತರS ಶಿಂಪಿ ಅಣ್ಣಾ, ದ್ವಾರಕಾಬಾಯೀ, ಸಖೂಬಾಯೀ, ಇಟ್ಟಲಾ. ಪಾಂಡುರಂಗಾSS

ವಿಠ್ಠಲ : ಈಗರೇ ಸಂಶಯ ಹೋಯಿತಿಲ್ಲೋ?

ಸಖೂಬಾಯಿ ಇದು ಏನರೇ ಕಣ್‌ಕಟ್ ಇರಬೇಕ್ರಿ!

ವಿಠ್ಠಲ : ನೆಟ್ಟಗ ನೋಡ್ರಿ. ಸಖೂಬಾಯೀ, ವಕೀಲಸಾಹೇಬ. ನೀವು ದೇವರ ಗುಡಿಗೆ ಬರಲಿಕ್ಕೆ ಹತ್ತಿ ಎಷ್ಟು ವರ್ಷ ಆದವು?

ವಕೀಲ : ಸಣ್ಣವನಿದ್ದಾಗಿನಿಂದ ಬರ್ತೇನಿ.

ವಿಠ್ಠಲ : ಆದರೂ ನನ್ನ ಗುರ್ತು ಹತ್ತಿಲ್ಲಾ. ನೀವು ನಾನಾ ಶಾಸ್ತ್ರಿ?

ಪೂಜಾರಿ : ಹೌದು ನಮ್ಮ ತಂದೀ ಗುರ್ತು ಹೇಳ್ರಿ, ನೋಡೂಣ?

ವಿಠ್ಠಲ : ಅವರ ಮೂಗಿನ ಮೂಳೆ ಮುರದಿತ್ತು. ೯ ೧ರಿಂದಾ ಅವರ ಘು ಡೊಂಕಾಗಿತ್ತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪೂಜಾರಿ : ಹೌದು ದಾರಿಯಲ್ಲಿ ಕಾಲು ಜಾರಿ ಬಿದ್ದಿದ್ದರು ಒಮ್ಮೆ.

ವಿಠ್ಠಲ : ಅಲ್ಲರೀ ಸ್ವಲ್ಪ ಗಾಂಜಾ ಜಾಸ್ತಿ ಆಗಿತ್ತು. ಕಾಲುಜಾರಿ ಪಾಪಟಿಗೆಯ ಮೇಲಿಂದಲೇ ಲಗಾಟಿ ಹೊಡೆದರು. ಇನ್ನೂ ಮುಂದಿನ ಕಥಿ ಹೇಳಲೇನು?

ಪೂಜಾರಿ : ಬರೇ ಗುರ್ತು ಹೇಳ್ರಿ. ಕಾರಣದ ಗೋಜಿಗೆ ಹೋಗಬ್ಯಾಡ್ರಿ.

ವಕೀಲ : ನಿಲ್ಲಿ ನಿಮ್ಮ ಪಾಟೀಸವಾಲು ತಗ್ಗೊಳ್ಳುದು ಅದ.

ಅಂಧ : ಏನರೀ ವಕೀಲ ಸಾಹೇಬರ, ದೇವರದೇನು ಸವಾಲು?

ವಕೀಲ : ಏ ಕುರುಡಾ, ಸುಮ್ಮನಿರೋ ನಿನಗ ಅನಾಯಾಸ ಕಣ್ಣು ಬಂದಾವ. ಏನು ಬೇಕು ನೋಡಕೋತ ಕೂಡು. (ವಿಠ್ಠಲನಿಗೆ ಉದ್ದೇಶಿಸಿ) ಹಂ. ಅನ್ರಿ. ದೇವರ ಆಣೀ ಮಾಡಿ ಖರೇ ಹೇಳ್ತನೂ ಅಂತಾ.

ಡಾಕ್ಟರ ಅವರೇ ಸ್ವತ: ದೇವರಿದ್ದಾರ, ದೇವರ ಆಣೀ ಹ್ಯಾಂಗ ಮಾಡಬೇಕು?

ವಕೀಲ : ನೋಡ್ರಿ ಡಾಕ್ಟರು ನಮ್ಮ ವ್ಯವಸಾಯುದಾಗಿಂದು ನಿಮಗ ಏನು ತಿಳಿಯಬೇಕು? - ನೀವು ಬೇಕಾದ್ರ ದನಗಳ ಉಸಾಬ್ರೀ ಮಾಡ್ರಿ.

ವಿಠ್ಠಲ : ನಮ್ಮ ಹೆಸರೂ ನಿಮ್ಮ ಹೆಸರೂ ಒಂದೇ. ನನ್ನ ಹೆಸರಿನ ಮೇಲೆ ನಿಮ್ಮ ಹೆಸರು ಬಂದದ. ನಿಮ್ಮ ಅಪ್ಪಾ ನನ್ನ ಹೆಸರು ಇಟ್ಟಾರ.

ವಕೀಲ : ನಿಮ್ಮ ಖುದ್ದ ಊರ ಯಾವುದು?

ವಿಠ್ಠಲ : ವೈಕುಂಠ

ವಕೀಲ : ಇಲ್ಲಿ ಎಂದು ಬಂದ್ರಿ?

ವಿಠ್ಠಲ : ಇಪ್ಪತ್ತೆಂಟು ಯುಗ ಆಗಿ ಹೋದವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಕೀಲ : ಹೊಟ್ಟೇ ಉದ್ಯೋಗ ಏನು?

ವಿಠ್ಠಲ : ಸದ್ಯ ನಿರುದ್ಯೋಗ!

ವಕೀಲ : ಇದು ಗುನ್ಹೇ ಆಗ್ತದ. ಗೊತ್ತ ಅದ ಏನು?

ವಿಠ್ಠಲ : ಓಹೋ ಗೊತ್ತ ಅದ.

ವಕೀಲ : ಅಂದ್ರ ಹ್ಯಾಂಗ ನಡೀತದ ? (ಹೊಟ್ಟೆಯ ಮೇಲೆ ಕೈಯಾಡಿಸಿ)

ವಿಠ್ಠಲ : ನಡಿಯುವದೇನು? ಉಪವಾಸ ಇದ್ದೀನಿ.

ಪೂಜಾರಿ : .ದೇವರೇ ಇದ್ದ ಮೇಲೆ ಉಪವಾಸ ಬೀಳುವ ಕಾರಣ? ದೇವರಿಗೆ ಭಾವ - ಭಕ್ತಿಯ ಹಸಿವು. ನಾವು ದಿನಾಲೂ ಭಕ್ತೀ ಮಾಡತೇವು. ಭಕ್ತಿಯಿಂದ ಭಜನೆ ಪ್ರಾರ್ಥನೆ ಮಾಡ್ತೇವು. ಅದರಿಂದ ನಿಮ್ಮ ಹೊಟ್ಟೆ ತುಂಬಲೇ ಬೇಕು. ಹೌದರೀ ಮತ್ತೇನು?

ವಿಠ್ಠಲ : ಹಾಂ ಆ ಭಾವ ಭಕ್ತಿ ಈಗ ಬಹಳ ಕಡಿಮೆ ಆಗೇದ. ತುಟ್ಟಿ ಆಗೇದ. ಗಡಪ್ ಆಗೇದ. ಬಾಜಾರದಾಗ ಅದರದು ಕಳ್ಳ ವ್ಯಾಪಾರ ನಡದsa ದ.

ಶೇಡಜೀ : ಹೌದರೀ, ಎಲ್ಲಾ ಮಾಲಿನ ಧಾರಣೀ ಕಡಿಮೆ ಆಗ್ಯಾದ ಎನ್ರಪಾ, ನಮ್ಮ ಅಂಗಡಿಗೆ ಬಂದು ನೋಡ್ರಿ ಬೇಕಾದ್ರ. ಎಲ್ಲಾ ಮುಂs ದ ಸುಸ್ತ ಆಗೇದ. ಅಂಗಡಿಗೆ ಬಂದು ನೋಡ್ರಿ. ಅಂಗಡೀ ಬಂದು ಮಾಡುವ ಪಾಳೀ ಬಂದದss

ವಿಠ್ಠಲ : ಹೀಂಗ ಇದ್ರ ನಿಮ್ಮ ಗಾದಿಯ ಕೆಳಗಿನ ನೆಲಮನೆಯಲ್ಲಿ ಚಿನ್ನದ ಬಿಸ್ಕೀಟ ಕದ್ದು ಇಡುತ್ತಿದ್ರೇನು, ಕದ್ದು?

ಶೇಡಜೀ : ನಿಮಗ್ಹ್ಯಾಂಗ ಇದೆಲ್ಲಾ ಗೊತ್ರೀ?

ವಿಠ್ಠಲ : ಎಷ್ಟು ಬಿಸ್ಕೀಟ ಅವ ಹೇಳಲೇನು?

ಶೇಡಜೀ : (ದೈನ್ಯದಿಂದ) ಬೇಡ್ರಿ!

ಪು.ಲ.ದೇಶಪಾಂಡೆ/೨೩೩

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಕೀಲ : ನನಗೆ ಪ್ರಶ್ನೆ ಕೇಳಲಿಕ್ಕೆ ಅವಕಾಶ ಕೊಡ್ರಿ.

ಶೇಡಜೇ : ಪ್ರಶ್ನೆ ಏನ ಕೇಳ್ತರೀ?

ವಿಠ್ಠಲ : ಈಗರೇ ಒಪ್ಪಿತೋ ಇಲ್ಲೋ?

ಅಂಧ : ಒಪ್ಪಿತು ಅನ್ರಿ, ಪಾಪಿಗಳಾ.

ವಿಠ್ಠಲ : ಇನ್ನೂ ಸಂಶಯ ಪರಿಹಾರ ಆಗಿದ್ದಿಲ್ಲ ಅಂದ್ರ, ಮಾಸ್ತರ ನೀವು ಕೇಳ್ರಿ.

ಮಾಸ್ತರ ನಾನು ಆಗಲೇ ಒಪ್ಪಿದ್ದೇನೆ.

ವಿಠ್ಠಲ : ಹೋ ಶಿಂಪಿ ಅಣ್ಣಾ ನೀವು?

ಶಿಂಪಿಗ : ಹಾಂಗೇನು ವಿಶೇಷ ಭಾನಗಡಿ ಕಾಣ್ಸೂದಿಲ್ಲ ಅನ್ರೀ.

ವಿಠ್ಠಲ : ಹಾಂ, ಅಂದ್ರ, ಅರಿವೀ ಕತ್ತರಿಸುವ ಮುಂದೆ ಅರಿವೀ ಕಳವು ಮಾಡೂದು ....

ಶಿಂಪಿಗ : ಒಪ್ಪಿದೆ, ತಿಳೀತು ಇನ್ನೊಮ್ಮೆ ನಿಮ್ಮ ಬಂಡೀ ಬೇಕಾದ್ರ ಅಗದೀ ಚಾಲೂ ಫ್ಯಾಶನ್ ಫಿಟ್ ಹೊಲದ ಕೊಡ್ತನಿ.

ದ್ವಾರಕಾಬಾಯಿ : ಅಯ್ಯ ಒಪ್ಪಿತು ಅನ್ರಿ; ನಡೀರಿ ಬೇಗ

ಸಖೂಬಾಯಿ : ಹಾಗಾದರ ನಡೀರಿ ಬೇಕಾದ್ರ.

ವಿಠ್ಠಲ : ಸಖೂ ಅತ್ಯಾ ನಿಮ್ಮ ಅತ್ತಿಗೀ ಪಾಟಲೀ ಜೋಡು?

ಸಖೂಬಾಯಿ ನಡೀರಿ ಅಂದಲ್ಲರೀ, ದ್ವಾರಕಾಬಾಯಿ ಇಲ್ಲದ ಘೋಳ

ದ್ವಾರಕಾಬಾಯಿ ನಾನೇ ಆಗಿನಿಂದ ನಡೀರಿ ನಡೀರಿ ಅಂತ ಅನ್ನತೀನರೀ (ಗಡಬಡಿಯಿಂದಾ ವಿಠ್ಠಲನಿಗೆ ನಮಸ್ಕರಿಸಿ - ಹೊರಡುತ್ತಾರೆ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಠ್ಠಲ : ಅಪ್ಮಾ, ತಾಯೀ ನಮಸ್ಕಾರಾ, ಚಮತ್ಕಾರಾ ಸಾಕು. ಎಷ್ಟೋ ವರ್ಷ ಅಲ್ಲಾ ಯುಗ ಆದವು, ನಮಸ್ಕಾರಾ, ಧೂಪಾ, ಆರತೀ, ಝೂಂಗಟೀ ತಾಳ (ಕಿವಿಗಳನ್ನು ಮುಟ್ಟಿ) ಸಾಕು, ಬಾಂಧವರೇ, ಭಕ್ತರೇ, ದೇವತ್ವದ ಬೇಜಾರ ಬಂದಿದೆ.

ಪೂಜಾರಿ : ಪೂಜಾ, ಅರ್ಚಾದಲ್ಲಿ ಏನಾದರೂ ತಪ್ಪಿ ಹೆಚ್ಚು ಕಡಿಮೆ ಆಗಿದ್ದರೆ ಹೇಳ್ರಿ. ಆದರ ದೇವರು ಆಗೂದು ಒಲ್ಲ ಅಂದ್ರ ಹ್ಯಾಂಗ ನಡದೀತು?

ವಿಠ್ಠಲ : ಯಾರದೂ, ಹ್ಯಾಂಗ ನಡೀತದು ? ನನ್ನದೋ ನಿಮ್ಮದೋ?

ಪೂಜಾರಿ : ಉಭಯತರದೂ ದೇವಾ!

ವಿಠ್ಠಲ : ನೋಡ್ರಿ, ಲೋಕದ ಚಿಂತಿ ಕಲ್ಯಾಣದ ಕೆಲಸದಾಗೇ ಹೋಯ್ತು. ಬೇಜಾರ ಆಗೇದ. ನಮ್ಮ ಸ್ವಂತದ್ದು ಏನಾರೇ ಮಾಡಬೇಕಲ್ಲ? ನನಗೂ ನನ್ನ ಬೆವರ ಸುರಿಸಿ, ಕಷ್ಟಮಾಡಿ ನನ್ನ ರೊಟ್ಟಿ ಗಳಿಸಬೇಕು ಅಂತ ವಿಚಾರ ಮಾಡೀನು. ಹೌದು ನನಗೆ ದುಡಿ ಯುವ ಮನಸ್ಸು ಅದ. ಕೆಲಸದ ಅಭಿಮಾನ ಅದ. ನಾ ಕುದರೀ ಚಾಕರೀ ಮಾಡೀನು. ಬೀಸಲಿಕ್ಕೆ ಬರ್‍ತದ. ಮೊಸರು ಕಡೀತೀನು, ಕಬೀರನ ಕೈಲೇ ನೆಯ್ದೀನಿ. ಗೋರಾ ಕುಂಬಾರನಲ್ಲಿ ಗಡಿಗೀ ಮಾಡೀನಿ. ಬಡಿಗತನ ಬರ್‍ತದ. ಎಲ್ಲಾ ಕಸಬು ಕಾಯಕ ಬರ್‍ತಾವ. ವಿಶೇಷ ಅಂದ್ರ ಈ ತಿನಸಾ ಆ ತಿನಸಾ ಬೇಕಂತ ಇಲ್ಲಾ. ದಿನಾ ಇಡ್ಲಿ ದೋಸೆ ಬೇಕಂತಿಲ್ಲಾ. Fruit salad, Ice cream ಕಡೆ ನೋಡೇ ಇಲ್ಲಾ - ಕಾರ್ಯಾಲಯ ಮಂಗಲಧಾಮ ದಾಗ ಎಂಜಲಕೂಡ ತೆಗೆಯುವ ತಯಾರೀ ಅದ. ಅದನ್ನೂ ನಾ ಹಿಂದೆ ಮಾಡೀನು - ಅದು ಇದು ತಿನ್ನುವ ಹಪಾಪೀನೂ ಅಲ್ಲಾ. ಸುದಾಮನ ಅವಲಕ್ಕಿ ಹಿಡದು ಪುರಂದರ ದಾಸರ ಹೆಂಡತಿಯ ವಿಷದ ತನಕಾ ಜೀರ್ಣ ಮಾಡುವ ಶಕ್ತಿ ನನ್ನಲ್ಲಿ ಅದ.

ಪೂಜಾರಿ : ಈಗ ಇಂಥ ಕೆಲಸಗಳಿಗೆ ಅವಕಾಶ ಎಲ್ಲಿ ಅದ? ಬಸ್ಸ ಬಂದು ಕುದುರೀಗಾಡಿ ಹೋಗ್ಯಾವ. ಬೀಸು ಗಿರಣಿ ಬಂದು ಬೀಸೂ ಕಲ್ಲು ಕತ್ತಲೀ ಕೋಣೆಯೊಳಗ ಕೂತಾವ. ಈಗ ಶೆಲ್ಲಿ, ಉಪ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಸ್ತ್ರ ಯಾರೂ ಉಪಯೋಗಿಸುವದಿಲ್ಲ.

ವಿಠ್ಠಲ : ಹಾಗಾದರ ನನಗ ಒಪ್ಪೂಹಂತ ಕೆಲಸಕೊಡಿರಿ. ಇಷ್ಟು ಯುಗ ಯುಗಾಂತರ ನೀವೆಲ್ಲಾ ನಮ್ಮ ಬಾಗಿಲದಾಗ ಧರಣೀ ಸತ್ಯಾಗ್ರಹ, ಪುಂಡಾಟಕೀ ಮಾಡೇ ಮಾಡಿದ್ರಿ. ಆದರ ಇಂದು ನಾ ದೀನ ಪತಿತ ಆಗಿ ಶರಣ ಬಂದೀನಿ (ಮಾಸ್ತರರ ಕಡೆ ಲಕ್ಷ ಹೋಗಿ) ಹೋ ಮಾಸ್ತರss ಮಾಸ್ತರ ಆಗುವಷ್ಟರೇ Marks ಬೀಳತಾವಲ್ಲರೀ?

ಮಾಸ್ತರ ಭಲೇ, ಭಲೇ, ಈಗ ಟ್ರೇನ್ಸ್ ಬೇಕಾಗತಾರ್ರೀ ದೇವಾ. ನಿಮಗ ಏನ ಕಮ್ಮೀ ಅದ. ನೋಡ್ರಿ, Exercise ತಪಾಸ ಮಾಡು ಗೋಜ ಇಲ್ಲಾ. ಇನ್ಸ್ಪೆಕ್ಟರ A.O. D.D.P. J.D.P.I. ಯು ಯಾರ ಕಾಟೂ ಇಲ್ಲಾ. ಹುಡುಗರ ಕಿಟಕಿಟಿ ಇಲ್ಲಾ. ಸ್ವಸ್ಥ ಟೊಂಕದ ಮ್ಯಾಲೆ ಕೈಯಿಟ್ಟು ಆರಾಮು ನಿಂತು ಬಿಟ್ಟು, ಆರಾಮು ಇರ್ರಿ. ಅದನ್ನು ಬಿಟ್ಟು ....

ವಿಠ್ಠಲ : ಮಾಸ್ತರ, ನನ್ನ ಜಾಗಾ ನಿಮಗ ಕೊಡತೀನಿ. ನೀವು ಇಲ್ಲಿ ನನ್ನ ಜಾಗಾದಲ್ಲಿ ನಿಲ್ಲಿರಿ, ನಾ ಸಾಲೀ ಕಬಜಾ ತಗೋತೀನಿ.

ಮಾಸ್ತರ ಒಂದು ವಾರದೊಳಗss ಬೇಸತ್ತು ಓಡಿ ಹೋಗತೀರಿ ದೇವರಾಯಾ! ರಾಯರ, ಮೊದಲಿನ ಸುಖದ ದಿವ್ಸ ಹೋದು ಹಳಗುಂಟ. ಹುಡುಗರು ಸಾಲೀ ಒಳಗ ಬೇಕಾದ್ದು ಮಾಡಲೀ ಶಂಖ ಹೊಡೆದರೂ ಛಡೀ ಎತ್ತುವ ಹಾಗಿಲ್ಲಾ. ಅಪ್ಪಿ ತಪ್ಪಿ ಶಿಕ್ಷಿಸಿದರೆ, ಒಂದು ಮೋರ್ಚಾ ಶಾಲೆಗೆ, ಇನ್ನೊಂದು ಮಾಸ್ತರರ ಮನೀಗೆ : ಮಂತ್ರಿ ಮಹಾಶಯ M.L.A. K.P.C.C. ಅಧ್ಯಕ್ಷರಿಂದಾ ಬೆದರಿಕೆ. ಶ್ರೀಮಂತರ ಹುಡುಗರ Tution ದ ಅಂಜಿಕೆಯಿಂದ ನಾಪಾಸ ಮಾಡಲಿಕ್ಕೆ ಬರೂದಿಲ್ಲಾ. ಬಡವರ ಮಕ್ಕಳಂದ್ರ, ಬಹುಜನ ಸಮಾಜದವರು. ಅದರಿಂದಾ ಅವರಿಗೆ ಏನೂ ಹಾಂಗಿಲ್ಲಾ. ಮೊದಲೇ ಚೇರಮನ್ ಸಾಹೇಬರಿಂದಾ ತಾಕೀತು. ಹುಡುಗರು ನಾಪಾಸ ಆದ್ರ, ನೋಡ್ರಿ, ಹುಷಾರ ಇರ್ರಿ. ಈಗ ಬಹುಜನ ಸಮಾಜದ ಮತಗಳ ಮೇಲೆಯೇ ಸರಕಾರ ನಡೀತದ. ಅಂದ್ರ, ಹುಡುಗ ಮೇಲಿನ ಕ್ಲಾಸಿಗೆ ಹೋಗಲಿಲ್ಲಾ ಅಂದ್ರ ಚುನಾವಣೆಯಲ್ಲಿ ಅಭ್ಯರ್ಥಿ ಲಗಾಟಿ ನಕ್ಕೀ ಹೊಡೆದ ಅಂತಾ ತಿಳೀಬೇಕು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಠ್ಠಲ : ಎಲೇಲೇ ಹಾಂಗಾದ್ರ ಮಾಸ್ತರಕೀ ಬಿಟ್ಟು ಬೇರೆ ಕೆಲ್ಸ ಯಾಕ ಮಾಡಬಾರದರೀ ಮಾಸ್ತರss?

ಮಾಸ್ತರ ಈ ವಯಸ್ಸಿನಲ್ಲಿ ಏನು ಮಾಡೋದು? ನಾ ಟ್ರೇನ್ಡ ಮಾಸ್ತರ. ನೂಲೂದು ಬೇಸಿಕ್ crafts Diploma; ಆದರೂ ನೋಕರೀ ಕಾಯಂ ಆಗಿಲ್ಲಾ. ಚೇಅರಮನ್ ಅಂತಾರ. ಹಿಂದೀ ತಜ್ಞ ಆಗ್ರಿ. ಡೆ. ಚೇರಮನ್ ಅಂತಾರ ಡ್ರಿಲ್ ಡ್ರಾಯಿಂಗ ಟ್ರೇನ್ಡ ಆಗ್ರಿ. ಇವೆಲ್ಲಾ ಬರಿ ಪೊಳ್ಳು ಆಶ್ವಾಸನಾ ದೇವರ, ನಿಮ್ಮ ತನಕ ಇವೆಲ್ಲಾ ಕಿವಿಗೆ ಬೀಳೊದಿಲ್ಲಾ.

ವಿಠ್ಠಲ : ಅಂದ್ರ ಮಾಸ್ತರ ಆಗೂದು ಬ್ಯಾಡ ಅಂತೀರಿ.

ಮಾಸ್ತರ ಅಕ್ಷರಶ: ಬ್ಯಾಡಾ. ಸಾಲೀ ಒಳಗ ವಿದ್ಯಾರ್ಥಿಗಳ ತ್ರಾಸ, ಊರ ಒಳಗ ಗುಂಡಾ ಜನರ ತ್ರಾಸ. ಮತ್ತ ಭಗವಾನ್ ಬುದ್ಧನಿಂದ ಈಗಿನ Z.P. ಅಧ್ಯಕ್ಷನ ತಂದೀ ವರೆಗೆ ಎಲ್ಲರ ಜಯಂತೀ-ಮಯಂತೀ ತಿಥಿ ನಾವೇ ಆಚರಿಸಬೇಕು. ಎಲ್ಲಿ ಮಹಾನ್ ಗೌತುಮ್ ಬುದ್ಧ ಎಲ್ಲಿ Z.P ಅಧ್ಯಕ್ಷರ ಅಪ್ಪ! ಏನರೀ ಇಂಥವರ ಪುಣ್ಯತಿಥೀ ಏನರೀ? ಪುಣ್ಯ ತಿಥಿಗೆ ಏನು ಅರ್ಥರೀ?

ಪೂಜಾರಿ ಮಾಸ್ತರss ಇವೆಲ್ಲಾ ಸುದ್ದಿ ದೇವರ ತನಕಾ ಯಾಕರೀ? ದೇವಾ, ಮಾಸ್ತರರಿಗೆ ಬುದ್ಧಿ ಇಲ್ಲ, ಕ್ಷಮಾ ಮಾಡಿ ಬಿಡಿರಿ.

ಮಾಸ್ತರ ದಯಾ ಕ್ಷಮಾ ದೇವರ ಕೈಯಲ್ಲಿ. ನಾ ಹೇಳಿದ್ದು ಸುಳ್ಳ ಅಂದ್ರ ನೀವು ಹೇಳಿದ ಶಿಕ್ಷೆಗೆ ತಯಾರೀ ಅದ. ಆದರ ನನ್ನ ಪ್ರಶ್ನೆಗೆ ಸರಿ ಉತ್ತರ ಹೇಳ್ರಿ ದೇವಾ. Z.P. ಅಧ್ಯಕ್ಷರ ಪುಣ್ಯತಿಥಿ ನಾ ಯಾಕ ಮಾಡಬೇಕು? - ದಿನಾಚರಣೆ ಆಚರಿಸಬೇಕು? - ಆ ಮ್ಯಾಲೆ ವಿದ್ಯಾರ್ಥಿಗಳ ಮೆರವಣಿಗೆ. ನಾವೇ ಸ್ವತಃ ಹುಡುಗರನ್ನ ಕರಕೊಂಡ ಊರಿನ ಎಲ್ಲಾ ಸಂದ್ರೀ ಗೊಂದ್ರೀಯಲ್ಲಿ ಹಾಯಿದು Z.P. ಅಧ್ಯಕ್ಷರಿಗೆ ಜಯವಾಗಲಿ; Z.P. ಅಧ್ಯಕ್ಷ ಝಿಂದಾಬಾದ ಅಂತಾ ಕಿರಚುತ್ತಾ ಗಂಟಲು ಹರಕೋಬೇಕು? ನಡೀರಿ ಗ್ರಾಮ ಸಫಾಯೀ ಸಪ್ತಾ. ತಗೋರಿ ಮಾಸ್ತರ ಕಸಪೊರಕೆ ಬುಟ್ಟಿ ಹುಂ. ವನಮಹೋತ್ಸವ; ಹಚ್ಚರೀ ಗಿಡ, ಹಾಕರೀ ಕಣ್ಣೀರು! ವಿಠಲಾ, ದೇವಾ! ಹೋಗಲಿ ಬಿಡ್ರಿ. ನಿಮ್ಮದೇ ಆರಾಮು. ಅಲ್ಲದ ಗೊಂದಲದಾಗ ಬೀಳಬ್ಯಾಡ್ರಿ, ದೇವಾ !

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಠ್ಠಲ : ಅಂದರ, ಮಾಸ್ತರ ಆಗೂದು ಬೇಡಾ ಅಂತರೀ?

ಮಾಸ್ತರ ಬ್ಯಾಡಾ! ಒಂದು ವೇಳೆ ಪಶು ಡಾಕ್ಟರ ಆಗಿರಿ ದೇವಾ, ಪಶುಗಳು ನಿಮ್ಮ ಮಾತ ಮೀರೂದಿಲ್ಲಾ. ಕೇಳ್ತಾವ. ಆದರ ಹುಡುಗರು?

ಊಂ ಹೂಂ.

ಡಾಕ್ಟರ : ಹಾಂ ಎಚ್ಚರಿಕೆ - ಪಶುಗಳು ಕೇಳ್ತಾವಂತ ಯಾರ ಹೇಳ್ತಾನ? ಇಲ್ಲಿ ನೋಡ್ರಿ ದೇವಾ, ಮುಖದ ಮೇಲೆ ಒಂದು ಬಟ್ಟು ಇಟ್ಟೇನು ಅಂದ್ರ ಜಾಗಾ ಇಲ್ಲಾ. ದನಾಲತ್ತೀ ಹೊಡೆಯದ ಜಾಗಾನೇ ಇಲ್ಲಾ.

ವಿಠ್ಠಲ : ಏನಂತೀರಿ ಡಾಕ್ಟರ ಸಾಹೇಬ?

ಡಾಕ್ಟರ : ನಾ ಅಂದ್ರೆ ಏನು ಕೈಗಂಟು ಹಾಕಿ ಹೇಳ್ತೇನ್ರಿ? ಈಗ ಈ ರೈತಾಪೀ ಜನ ಇಷ್ಟು ಹುಷಾರ ಆಗ್ಯಾರ, ನಮ್ಮ ಪರೀಕ್ಷಾ ಮಾಡಲಿಕ್ಕೆ ಧಷ್ಟ ಪುಷ್ಟ ದನಗಳನ್ನು Sick ಅಂತಾ ತರತಾರ. ನಾವು ತಪಾಸ ಮಾಡುವಾಗ ಸ್ವಲ್ಪ ನಜರ ತಪ್ಪಿದರ ಸಾಕು. ಮೊದಲನೇ ಲತ್ತಿ ನಮಗ ss ಎರಡನೇದು ಮೇಲಿನ ಅಧಿಕಾರಿಗ ಳದು. ಮಿಂಚಿದ್ಹಾಂಗ ಬದಲೀ. ಖರೇ ಹೇಳ್ತಿನಿ ಈ ೧೦ ವರ್ಷದೊಳಗ ಹತ್ತ ಸಲ ಬದಲೀ ಆಗ್ಯಾವ. ದೊಡ್ಡ ತಾಲೂಕ ಸ್ಥಳದಾಗ ದನಗಳ ಜಾತ್ರಿ, ಪ್ರದರ್ಶನ ಬೇರೆ! ಅದೇ ಮೊನ್ನೆ ಮೊನ್ನೆಯ ಕಥೆ. ಮೂಡಲಗಿ ಜಾತ್ರಿ-ದನಗಳ ಪ್ರದರ್ಶನ ಆಯಿತು. ಮಂತ್ರಿಗಳಿಂದ ಉದ್ಘಾಟನ. ಮೊದಲನೇ ನಂಬರದ ಎತ್ತು ತಲೀ ಹಾಕಿತು. ನಮ್ಮ ಇನ್‌ಕ್ರಿಮೆಂಟ ಬಂದ್. ಇನ್ನ ಹೇಳ್ರಿ ಎತ್ತು ತಲೀ ಹಾಕಿದರ ನಾವೇನು ತಪ್ಪು ಮಾಡಿ ದ್ಹಾಂಗss? - ಆದರ ನಿಜ ಸ್ಥಿತಿ ಹೀಗ ಅದ. ಎತ್ತು ಖರೇ ಅಂದ್ರ ಎತ್ತು ಅಲ್ಲಾ. ಹೋರಿ ಇತ್ತು. ಅದರ ಖೋಡಿ ಸ್ವಭಾವ ಅಂದ್ರ - ಎರಡನೇ ಪಷ್ಟಹೋರಿ ನೋಡಿದ ಕೂಡಲೆ ತಲೀ ಹಾಕೂದು. ಮಂತ್ರಿ ಮಹಾಶಯರು ತಮ್ಮ ನೆಹರೂ ಶರ್ಟಿಗೆ ದೊಡ್ಡ ಬಿಲ್ಲಾ ಹಚ್ಚಿಕೊಂಡು ಹೋರಿ ಸಮೀಪ ನಡೆದರು. ಹೋರಿ ಬಿಲ್ಲಾಕ್ಕೆ ಗುಲ್ಲು ಅಂತಾ ತಪ್ಪಿ ತಿಳಿದು ತಲೀ ಹಾಕಿತು. ಇದರಲ್ಲಿ ನಮ್ಮ ತಪ್ಪು ಏನು? ಆದರ ಇದರ ಲೆಕ್ಕ ಹೀಂಗ ಅದ ದೇವಾ. ಬಹಳ ಆದ್ರ ವಕೀಲಿ ಮಾಡ್ರಿ - ಬದಲೀ, ಇನ್‌ಕ್ರಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮುಂಟ stop ಏನೂ ಭಾನಗಡೀ ಇಲ್ಲಾ. ಅಧಿಕಾರಿಗಳ ಬದಲೀ ಆಗತಾವ, ವಕೀಲರು ಇದ್ದ ಜಾಗಾದಾಗೇ ಇರ್ತಾರ.

ವಕೀಲ : ಈಗ ನಿಮಗ ನೈವೇದ್ಯದ ಬಟ್ಟಲರೇ ಬಾಯಿಗೆ ಹತ್ತತದ. ಆದರ ನಮಗ ಒಮ್ಮೊಮ್ಮೆ ಉಪವಾಸ ಬೀಳಬೇಕಾಗತದ, ಪ್ರ್ಯಾಕ್ಟೀಸ ಸಾಧಸಲಿಲ್ಲಾ ಅಂದ್ರ. ಹಳ್ಳಿ ಹಳ್ಳೀಗೆ ಪಂಚಾಯತೀ ಸುರು ಆಗ್ಯಾವ. ಭೂ ನ್ಯಾಯ ಮಂಡಳಿ Z.P. ಇಂಥಲ್ಲಿ ವಕೀಲರನ್ನ ಯಾರ ಕೇಳತಾರ? ನಮ್ಮ ಕರಿಕೋಟಿನ ಕಿಮ್ಮತ್ ಹೊರಡೂದಿಲ್ಲಾ ಅನ್ರಿ.

ಶಿಂಪಿಗ : ಅಗದೀ ಸತ್ಯ ಸಂಗತಿ ದೇವಾ! ಕರೀಕೋಟಿನ ಶಿಲಾಯೀ ಬಿಲ್ ಇನ್ನೂ ಬಾಕೀನೇ ಅದ ದೇವಾ.

ವಿಠ್ಠಲ : ಕಡೆಗೆ ನಿಮ್ಮ ಅಂಗಡಿಯಲ್ಲಿಯಾದರೂ ಕೆಲ್ಸ ಕೊಡಿರಿ.

ಮಾಸ್ತರ ಇವರಿಗೆ ಝುಂಪರ, ಬ್ಲಾವುಜ ಅಗದೀ ಫಿಟ್ ಹೋಲೀಲಿಕ್ಕೆ ಬರತಾವ.

ವಿಠ್ಠಲ : ಆದರ ಈ ಅಂಧಕಾರದಲ್ಲಿ ಮಾತ್ರ ನಿಲ್ಲಲಾರೆ. ಯಾಕಂದರ ಕತ್ತಲೀ ಒಳಗ ಏನ ಬೇಕಾದ್ದ ನಡೀತದ. ಕೆನಿ ಮೊಸರಿನ ಬಟ್ಟಲ ಅಂತ ಚೊಕ್ಕ ಹುಳೀ ಜೊಟ್ಟ ಮಜ್ಜಿಗೀ ಬಾಯಿಗೆ ಬಡೀತಾರ. ನನಗ ಬಾಯಿ ಬಂದದು - ಇಲ್ಲೇ ನೋಡ್ರಿ, ಗುಡಿಯೊಳಗ ಏನು ಹೊಲಸ ತುಂಬೇದ. ಕೊಳತ ಹೂ, ತುಳಸೀ ಪತ್ರಿ, ಮಾಲಿ. ತೆಂಗಿನ ಕಾಯಿ ಜುಟ್ಟ, ಹಳಸಿದ ಪಂಚಾಮೃತ, ಜಿಗಟ ಜಿಗಟ ಕಾಲೊಳಗ ಮಹಾರಾಯಾ. ಗುಂಯ್ ಹುಳಾ ಅಂತೂ ಛಲೋ ಕಾಲನೀಸೆ ಮಾಡ್ಯಾವ.

ಶೇಡಜೀ ಏನರೀ ಪೂಜಾರಽ ಏನು ಇದು ದೇವರ ಗತೀ?

ಪೂಜಾರಿ : ವಾಹವಾ, ವಾಹವಾಽ ಏನು ಸೋಗ ಹಾಕ್ತೀರಿ. ಮೊದಲ ಆರತೀ ವಳಗ ಹಳೇ ಪೈಸಾ ಹಾಕತಿದ್ದಿರಿ. ಈಗ ಹೊಸ ಪೈಸಾ. ಈಗ ಏನ ಬರ್ತದ ಪ್ಯಾಟೀವಳಗ? ಗೊಳಗೊಳಕೇ ಧಮಾಸಾ ಕೊಳತ ಕೋತಂಬ್ರಿ ಕೂಡಾ ಬರೊದಿಲ್ಲಾ. ಕಾಂಗ್ರೆಸ್ ಹುಲ್ಲು ಕೂಡಾ ಸಿಗೊದಿಲ್ಲಾ. ಕೆನಿ ಮೊಸರಿನ ಬಟ್ಲ ನೈವೇದ್ಯಕ್ಕ ತರ್ರೀ ಅಂತ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಠ್ಠಲ : ಪೂಜಾರು ನಾ ಎಷ್ಟು ದಿವಸರೇ ಬೆಲ್ಲ, ಪುಠಾಣೀ, ಚುನಮುರಿ, ಗೊಂಜಾಳ ಅರಳು ತಿಂದು ಬದಕಲೀ? ನೀವು, ನನ್ನ ಮುಂದ ಇಟ್ಟ ದುಡ್ಡಿನಿಂದಲೇ ಮನಿವಳಗ ಇಡ್ಲಿ, ದೋಸೆ, ಬೋಂಡಾ, ಮೈಸೂರಪಾಕ ಮಾಡಿ ಹೊಡೀತೀರಿ. ಮತ್ತೇನೇನು ಕದ್ದು ಗಜ್ಜು ಹಾಕತೀರಿ ಈ ಸಭಾದೊಳಗ ಹೇಳ್‌ಲೇನು? ಏನ ಒಂದ ದಿವಸರೇ Menu ಬದಲು ಮಾಡಿದ್ರ ಏನು ಘಾತ ಆಗತದss!

ಪೂಜಾರಿ : ಹಾಲು ಸಕ್ಕರೀ ದರಾ ಸ್ವರ್ಗಕ್ಕ ಏರ್‍ಯಾವ ಅಂದಮ್ಯಾಲೆ ಪೇಢೇ, ಹಲವಾ ಹ್ಯಾಂಗ ನೈವೇದ್ಯಕ್ಕ ಪೊರೋಸಬೇಕರೀ ದೇವಾ? ಅಂದಲ್ಲೇ ಎಲ್ಲದಕ್ಕೂ ಅಕ್ಷತಾಂ ಸಮರ್ಪಯಾಮಿ. ಅಕ್ಷತಾದ ಮೇಲೆ ಸಾಗ್ಸತೇವು. ಅಕ್ಷತಾಂ ಸಮರ್ಪಯಾಮಿ.

ವಿಠ್ಠಲ : ಹೌದು; ಆದ್ರ ಚಹಾ, ಕಾಫಿ ಬೋರ್ನವ್ಹಿಟಾ ಆದರೂ ನಡೀತದ. ಚಹಾ ಕಾಫಿಯರೇ ಯಾರು ನಿರ್ಮಾಣ ಮಾಡ್ಯಾರ? ದೇವರೇ ಅಲ್ಲೇನು? (ಹರಿದ ಹೊಲಸಾದ ಹಳೆ ಪೀತಾಂಬರ ತೋರಿಸುತ್ತ) ನೋಡ್ರಿ ಈ ಪೀತಾಂಬರ ಅವಸ್ಥಿ. ಒಮ್ಮೆ ಅರೇ 'ಸನ್ - ಲಾಯಿಟ್' ಕಂಡದೇನು? ಎಷ್ಟು ಯುಗಾನು ಯುಗಾ ಉಟ್ಟುಕೊಳ್ಳಲೀ?

ಅಂಧ : ಛೇ, ಛೇ ದೇವಾ ವಿಠ್ಠಲಾ? ದೇವರು ದೇವಹ್ರಾಂಗ ಕಾಣ್ಸಬೇಕರೀ. ಉಟ್ಟ ಪೀತಾಂಬರ, ಹಣೆಯ ಮೇಲೆ ಕಸ್ತೂರಿ, ಕೊರಳಲ್ಲಿ ತುಳಸೀಮಾಲೆ ಅಂತಾ ಎಲ್ಲ ದಾಸರೂ ಸಂತರೂ ಹಾಡಿಲ್ಲೇ?

ವಿಠ್ಠಲ : ಆದಕೇ ತಲೆನೋವು, ಬೇಜಾರ ಬಂದದss ಶೇಡಜೀ, ನಿಮ್ಮ ಅಂಗಡಿಯೊಳಗರೇ ಪುಡಿಕಿ ಕಟ್ಟಲಿಕ್ಕರೇ ಇಟ್ಟಕೊಳ್ರಿ. ಆದರ ಇಲ್ಲಿಂದ ಬದಲೀ ಮಾಡ್ರಿ, ಒಮ್ಮೆರೇ?

ಶೇಡಜೀ : ದೇವಾ, ನಿಮ್ಮ ದಯದಿಂದ ನಾಲ್ಕು ಗಂಡು ಮಕ್ಕಳು ಅವ ಕಂಟ್ರೋಲ ಏನಿಲ್ಲಾ. ನಮ್ಮ ಮಕ್ಕಳು ಸ್ವತಃ ಎಲ್ಲಾ ಕೆಲ್ಸ ನೀಗಸ್ತಾರ. ಈಗ ಸರಕಾರೀ ನಿಯಂತ್ರಣ ಇಷ್ಟ ಅದ. ನಿಮ್ಮದು ಏನೂ ನಡೆಯುವದಿಲ್ಲಾ. ಸೇಲ್ಸ ಟ್ಯಾಕ್ಸ, ಇನ್‌ಕಮ್‌ಟ್ಯಾಕ್ಸ್, ಆ ಟ್ಯಾಕ್ಸ್, ಈ ಟ್ಯಾಕ್ಸ, ಯಾವಾಗ ನಿಮ್ಮ ಜಂಗಂ ಆಸ್ತಿ ಗಡಪ್ ಆದೀತು ನೇಮ ಇಲ್ಲಾ. ಇನ್ಕ ಕಮ್ ಟ್ಯಾಕ್ಸ ನಿಮ್ಮ ತಲೀ ಮ್ಯಾಲೆ ಕೂತರ ಸಾಕು. ಬ್ರಹ್ಮ ರಾಕ್ಷಸ ಬೆನ್ನು ಹತ್ತಿದ್ಹಾಂಗ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಈಗ ಹುಟ್ಟಿದರ ಟ್ಯಾಕ್ಸ - ಸತ್ತರ ಟ್ಯಾಕ್ಸ, ಅಂದರ ಜೀವಂತ ಇದ್ದರ ಟ್ಯಾಕ್ಸ ಸತ್ತರೂ ಟ್ಯಾಕ್ಸ. ಅಂದ್ರ, ನಾವು ಟ್ಯಾಕ್ಸ ತುಂಬಲಿಕ್ಕೇ ವ್ಯಾಪಾರ ಮಾಡಬೇಕು. ಇದೆಲ್ಲಾ ಬಿಟ್ಟು, ಸುಮ್ಮನೆ ಟೊಂಕದ ಮೇಲೆ ಕೈ ಇಟ್ಟುಕೊಂಡು ನಿಲ್ಲೋದು ಪರಮ ಸುಖಾ ದೇವಾ.

ವಿಠ್ಠಲ : ಹಾಗಾದರೆ ನಾ ಮಾಡ್ಲಿ ಅದೇನು?
(ಸಿನೇಮಾ ಶೂಟಿಂಗ ಗ್ರುಪ್, ಜಗನ್ನಾಥ್ ಸೋಮನಾಥ ಪ್ರವೇಶಿಸುತ್ತಾರೆ.)

ನಟಿ ಅಯ್ಯ ಜಗನ್ನಾಥ, ಸೋಮನಾಥ (ವಿಠ್ಠಲನ ಕಡೆ ನೋಡಿ ಆನಂದದಿಂದಾ) ವಿಠ್ಠಲಾ ಗಾಬರೀ ಆಗ ಬೇಡ್ರಿ ನಾ ನಿಮ್ಮ ಕೆಲ್ಸ ನಕ್ಕೀ ಮಾಡತೇನಿ.

ವಿಠ್ಠಲ : (ದೈನ್ಯದಿಂದಾ) ನಿಮ್ಮ ಉಪಕಾರ ನಾನು ಜನ್ಮಜನ್ಮಾಂತರ ಮರೆಯುವದಿಲ್ಲಾ.

ಜಗನ್ನಾಥ ಇಲ್ಲೇ ಗುಡಿಯೊಳಗ ಹರಟೀ ಕೊಚ್ಚುತ್ತ ನಿಂತೀರೇನು? (ಸೋಮನಾಥನ ಕಡೆ ನೋಡಿ) ಇವರ ಪರಿಚಯ ಅದನೋ ಇಲ್ಲೋ? ಇವರು ನಳಶ್ರೀಶಿಷ್ಯ ಡಾಯರೆಕ್ಟರ ರಾಮನಾಥ ಇವರು.. ಅಣ್ಣಾSS

ಮಾಸ್ತರ ಜಗೂ, ಜಗ್ಯಾ ಏನೋ?

ಜಗನ್ನಾಥ ಹೌದು ಗುರುಗಳೇ, ಗುರ್ತು ಹಿಡಿದರೇನು? ಹಾಂ ನಿಮ್ಮ ವಿದ್ಯಾರ್ಥಿSS

ಮಾಸ್ತರ ನಾ ಹ್ಯಾಂಗ ನಿನ್ನ ಮರತೇನು? (ವಿಠ್ಠಲನ ಕಡೆ ನೋಡಿ) ದೇವಾ, ವಿಠ್ಠಲಾ. ಒಮ್ಮೆ ಶಿಷ್ಯೋತ್ತಮರ ಫೀ ಎಲ್ಲಾ ವಸೂಲ ಮಾಡಿ ಕ್ಲಾಸದೊಳಗಿನ ಟೇಬಲ್ ಡ್ರಾದೊಳಗ ಇಟ್ಟಿದ್ದೆ. ಈ ಶಿಷ್ಯೋತ್ತಮ ಜಗೂ ಎಲ್ಲಾ ಹಣಾ ಲಪಟಾಯಿಸಿ ಅಂದು ಫರಾರೀ ಆದಾವ ಈಗ ಹನ್ನೆರಡು ವರ್ಷ ಆದ ಮೇಲೆ ಅವತಾರ ಮಾಡ್ಯಾನ ದೇವಾ! ನಾ ಆವಾಗ ದಂಡ ಅಂತ ನನ್ನ ಅರ್ಧಾ ಪಗಾರ ೭ರೂ. ೫೦ ಪೈಸೆ ದಂಡ ತುಂಬುತ್ತಲೇ ಬಂದೀನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜಗನ್ನಾಥ	(ಗಾಬರಿ ಗಡಿಬಿಡಿಯಿಂದಾ) ಗುರುಗಳೇ ತಗೋರಿ ಈ ೫೦ ರೂ.
ಮಾಸ್ತರ	(ಆ ಬಾಯಿ ತೆರೆದು ಆಶ್ಚರ್ಯ ಸೂಚಿಸುತ್ತಾರೆ.)
ಜಗನ್ನಾಥ :	ಹೋ? ಗುರುಗಳೇ ನಿಮ್ಮ ಹತ್ತಿರದಲ್ಲೇ ಇಲ್ರಿ ಉಳಿದ ಹಣಾ. (ತನ್ನ ಗೆಳೆಯರಿಗೆ ತೋರಿಸಿ) ಹೋ! ಇವರು ನನ್ನ ಗುರುಗಳು, ಬಹಳ ಸೌಮ್ಯ, ಮೆತ್ತಗೆ.
ಸೋಮನಾಥ	ಓಹೋ- ಹಾಸ್ಯ ಪಾತ್ರಕ್ಕೆ ಒಳ್ಳೆ ಫಿಗರ್ ಅದ.
ಮಾಸ್ತರ	ಎಲೇ ಜಗೂ, ನೀ ಊರ ಬಿಟ್ಟು ಓಡಿ ಹೋಗಿದ್ದೀ ಅಲ್ಲಽಽ
ಜಗನ್ನಾಥ	ಹಾಂಗ ನೋಡಿದರ ಎಲ್ಲ ಮಹಾಪುರುಷರೂ ಹೀಗೆ ಓಡಿ ಹೋಗಿದ್ರು (ನಟಿಗೆ ಉದ್ದೇಶಿಸಿ) ನಡೀಯಮ್ಮ ಬೇಗಽ ಫಿಲ್ಮ ಕಾಂಟ್ರಾಕ್ಟ ಕಾಗದದ ಮೇಲೆ ಸಹಿ ಮಾಡೂದು ಅದ ಹಾಂ! ಇದೇನು ಶೇಠ?
ಶೇಡಜೀ	ಸರೀ; ನಮ್ಮ ಐವತ್ತು ಸಾವಿರ ರೂಪಾಯಿ ವಾಪಸ ಯಾವಾಗ?
ಜಗನ್ನಾಥ	ಫಿಲ್ಮ - ಥೇಟರಿನಲ್ಲಿ ಸುರುಆರೇ ಆಗ್ಲಿ, ಚೀಲದಾಗ ಹಾಂ, ಮುಂಬೈ ಚೀಲದಾಗ ನೋಟು ತುಂಬಿಕೊಂಡು ಬರ್ರಿ - ಮತ್ತ! ಕೇಳಿಸ್ತೇನು ಶೇಠಜೀ.
ತರುಣಿ (ನಟಿ)	(ವಿಠ್ಠಲನ ಕಡೆ ನೋಡಿ) ಇವರ ಪರಿಚಯ ಮಾಡಿ ಕೊಡತೀನಿ ಜಗನ್ನಾಥ.
ಜಗನ್ನಾಥ	ಓಹೋ! ಯಾರಿವರು - ಕೀರ್ತನಕಾರ ಇದ್ದಾರಽಽ?
ತರುಣಿ (ನಟಿ)	ಅಲ್ಲಾಽಽ ಅಂದೆ - ಇವರು 'ವಿಠ್ಠಲ'
ಜಗನ್ನಾಥ	ಓಹ್ಹೋ - ವಿಠ್ಠಲ - ಮಾಸ್ತರ - ವಿಠ್ಠಲ?
ನಟಿ	ಅಲ್ಲರೀ ಇವರು ನಿಜವಾದ ವಿಠ್ಠಲ - ದೇವರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸೋಮನಾಥ : ನಿಜವಾದ ವಿಠ್ಠಲ ಅಂದ್ರ?

ನಟಿ : ಅಂದ್ರ ಪ್ರತ್ಯಕ್ಷ ಶ್ರೀ ವಿಠ್ಠಲ, ಪಾಂಡುರಂಗಾ, ಭಗವಾನ್ ದೇವರೇ.

ಸೋಮನಾಥ : ಭಗವಾನ? ಭಲೇ. ಆದರೂ ಮೂರ್ತಿ ನೆಟ್ಟಗದ. ಅಲ್ಲರೀ (ವಿಠ್ಠಲನಿಗೆ) ಈ ಮೊದಲು ಯಾವದಾದರೇ ಫಿಲ್ಮ ನಾಟಕದೊಳಗ ಪಾರ್ಟ ಮಾಡಿರೇರು?

ವಿಠ್ಠಲ : ಇಲ್ಲಾ ಮಹಾರಾಯಾ - ಇಪ್ಪತ್ತೆಂಟು ಯುಗಾ ಟೊಂಕದ ಮೇಲೆ ಕೈ ಇಟ್ಟುಕೊಂಡು ಎದ್ದೇ ನಿಂತೀನಿ.

ಸೋಮನಾಥ : ಹಾಂ! ಸ್ವಲ್ಪ ಹೀಗೆ ನಿಂತು ಪೋಜ ಕೊಡ್ರಿ, ನೋಡೋಣ ಅಮ್ಮಾ, ನೀವು ಈ ಕಡೆ ಬನ್ನಿರಿ (ನಟಿ ಬರುತ್ತಾಳೆ) ಎಲ್ಲರೂ ಹಿಂದೆ ಹಿಂದೆ ಸಾಲಾಗಿ ನಿಲ್ಲರಿ ಹಂ!

ಜಗನ್ನಾಥ : ನಮ್ಮ ಮುಂದಿನ ಚಿತ್ರಪಟದ ನಿರ್ದೇಶಕರು (ತೋರಿಸುತ್ತ)

ಶಿಂಪಿಗ : ಚಿತ್ರಪಟದ ಹೆಸರೇನ್ರಿ, ಮತ್ತ?

ಜಗನ್ನಾಥ : ಕಾನ್ಹೋ ಪಾತ್ರ

ರಾಮನಾಥ : ನಾನು 'ಸಂಗೀತ Director'

ಮಾಸ್ತರ : 'ಕಾನ್ಹೋಪಾತ್ರಾ'ನ ಪಾರ್ಟ ಯಾರ ಮಾಡ್ತಾರೀ?

ಜಗನ್ನಾಥ : ಯಾರ ಮಾಡ್ತಾರಂದ್ರ ಏನು? ಜಾತ್ರಿ ಒಳಗಿನ ಆಟ ಅಂತ ತಿಳದಿರೇನು! ಇಂಥಾ ಪಾತ್ರ ಹುಡುಕಿದರೂ ಸಿಗೂದಿಲ್ಲಾ. ನಿಜವಾದ ಕಾನ್ಹೋಪಾತ್ರಾ ಕೂಡಾ ಇಷ್ಟು ಚೆಲುವೆ ಇರಲಿಲ್ಲಾ.

ವಿಠ್ಠಲ : ಇವಳಕಿಂತಲೂ ಸಾವಿರಪಟ್ಟು ಸುಂದರ ಇದ್ದಳು ನಮ್ಮ ಕಾನ್ಹೋಪಾತ್ರಾ. ನನ್ನ ಪಾದಗಳ ಮೇಲೆ ತನ್ನ ಪಂಚ-ಪ್ರಾಣ ಬಿಟ್ಟಳು.

ಡಾಕ್ಟರ : ನಿಶ್ಚಿತ - ಹಾರ್ಟಫೇಲ್ ಕೇಸ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಕೀಲ : ನಿಜವಾದ ಕಾನ್ಹೋಪಾತ್ರಾ ಶ್ರೀ ವಿಠ್ಠಲನ ಪಾದಾರವಿಂದದಲ್ಲೇ ಪ್ರಾಣ ಬಿಟ್ಟಳು.

ಮಾಸ್ತರ : ಹೌದು, ಹೌದು - ನಮ್ಮ ೪ ನೇ ಯತ್ತೆ ಪಠ್ಯ - ಪುಸ್ತಕದಲ್ಲಿ ಹೀಗೆ ಅದ.

ಸೋಮನಾಥ : ೪ನೇ ಯತ್ತೆ ಪುಸ್ತಕದಾಗ ಇದ್ದದ್ದು ಸರಿ. ಆದರ ಥೇಟರದಾಗ ೪ನೇ ಯತ್ತೆ ಹುಡುಗರಷ್ಟೇ ಇರತಾರೇನು ಏನು ಮಾಸ್ತರ? ನಾವು ಕಥೆಯನ್ನು ಬದಲಾಯಿಸಿದ್ದೇವೆ. ಟೆಕ್ನಿಕಲರ ಚಿತ್ರ ವಿಠ್ಠಲನ ಕಪ್ಪು ವರ್ಣದ ಪಾದಗಳ ಕ್ಲೋಜಪ್ಪ್ ಕಲರ ಇಫೆಕ್ಟ ಸರಿಯಾಗಿ ಬರೋದಿಲ್ಲಾ. ಆದ್ದರಿಂದ ಕೊನೆಯ ದೃಶ್ಯದಲ್ಲಿ 'ನವರಂಗ' ಬಣ್ಣದ ನಾವ್ ಬರುತ್ತದೆ. ಅದರಲ್ಲಿ ವಿಠ್ಠಲನ ಸಮೇತ ವೈಕುಂಠಕ್ಕೆ ಪ್ರಯಾಣ.

ಮಾಸ್ತರ : ಓಹೋ! ಹಾಗಾದರೆ ವೈಕುಂಠ ಬಂದರ ಎಲ್ಲಿ ಆದರೀ? ವಿಮಾನದಾಗ ವೈಕುಂಠಕ್ಕೆ ಪ್ರಯಾಣ ಮಾಡಬೇಕಾಗ್ತದ. ಆದ್ರ ನಿಜವಾದ ಕಥೀ ಹೀಗ ಇಲ್ಲೆ ಇಲ್ಲಾ ಸೋಮನಾಥಜೀ.

ಸೋಮನಾಥ : ನಿಜವಾದ ಕಥೀ ಯಾರ ಅಪ್ಪಗ ಗೊತ್ತದ ?

ವಿಠ್ಠಲ : ನನಗೆ ಗೊತ್ತಿದೆ.

ಸೋಮನಾಥ : ಆದರೆ ನೀವು ನಮ್ಮ ಪೋಷಕರಲ್ಲಾ, ದೇವರ ಸಿನೇಮಾ ನೋಡಲಿಕ್ಕೆ ದೇವರೇನೂ ಬರೂದಿಲ್ಲಾ, ಜನರು ಬರ್‍ತಾರ.

ವಿಠ್ಠಲ : ಕಡೆಗೆ 'ವಿಠ್ಠಲ'ನ ಪಾತ್ರರೇ ಕೊಡಿರಿ, ಸದ್ಯ ನಾ ನೋಕರೀ ಶೋಧದೊಳಗೆ ಇದ್ದೀನಿ.

ಜಗನ್ನಾಥ : ಶ್ರೀ ವಿಠ್ಠಲ ಪಾರ್ಟಿಗೆ ಫಿಗರ್ ನೆಟ್ಟಗೆ ಕಾಣ್ಸತದ.

ಸೋಮನಾಥ : ಆದರ ಫೀಚರ್ಸ ಅಷ್ಟು ಸರಿ ಇಲ್ಲಾ.

ವಿಠ್ಠಲ : ನಾನು 'ನಿಜವಾದ ' ವಿಠ್ಠಲನಿದ್ದೇನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸೋಮನಾಥ ಇರಬಹುದರೀ. ಆದರೆ ನಮ್ಮ ರಾಜಕುಮಾರ ಒಂದು 'ಡಝುನ್' ಚಿತ್ರಪಟದಲ್ಲಿ 'ವಿಠ್ಠಲ' ಪಾರ್ಟ ಮಾಡಿದ್ದಾನೆ. ಹೌದು ಥೇಟರಿನಲ್ಲಿ ಜನರು ಎದ್ದು ಸಾಷ್ಟಾಂಗ ಮಾಡ್ತಾರೀ.

ವಿಠ್ಠಲ : ನನಗೂ ಸಾಷ್ಟಾಂಗ ನಮಸ್ಕಾರ ಹಾಕಿ ಕುಣೇತಾರ ಕೇಳ್ರಿ ಬೇಕಾದ್ರ ಈ ಪೂಜಾರಿಗೆ?

ಪೂಜಾರಿ : ಅಗದೀ ಸತ್ಯ ಅದ.

ಸೋಮನಾಥ : ಯಾತರ ಮೇಲಿಂದ?

ಪೂಜಾರಿ : ಏಟು ಕೊಟ್ಟು ನೋಡ್ರಿ ಅಂದ್ರ ತಿಳೀತದ. (ಇಷ್ಟರಲ್ಲಿಯೇ ಸೋಮನಾಥ ಪೂಜಾರಿ ಬೆನ್ನಿಗೆ ಗುದ್ದುತ್ತಾನೆ. ಆತ ಓಂಯೀ ಓಂಯೀ ಅಂತಾ ನರಳುತ್ತಾನೆ.) ಮೂರ್ಖ - ಕತ್ತಿಗಳು ವಿಠ್ಠಲ ಯಾರು ತಿಳಿಯುವದಿಲ್ಲೇ ನಿಮಗೆ, ನಿಮ್ಮ ಚಿತ್ರಪಟ ಎರಡು ದಿವ್ಸ ಕೂಡ ನಡೀಯುವದಿಲ್ಲಾ ಹೋಗರಿ - ಇಲ್ಲಿಂದ; 'ಕಾಸ್ಪ್ರೋಪಾತ್ರಾ' ತಗೀತಾರಂತ, ಶೂರ್ಪನಖಾ ಚಿತ್ರ ತಗೀರಿ (ದಬ್ಬಿ ಹೊರಗೆ ನೂಕುವನು.

ವಿಠ್ಠಲ : ಮಹಾರಾಜ, ಹೀಗೆ ಸಿಟ್ಟಿಗೇಳಬ್ಯಾಡ್ರಿ.

ಪೂಜಾರಿ : ಸಿಟ್ಟಿಗೇಳಬ್ಯಾಡ್ರಿऽऽ ಅಂದ್ರ, ನೀವು ಒಳ್ಳೇ ವಿಠ್ಠಲನ ಕೆಲ್ಸ ಬೇಡತ್ತಿದ್ರಿ, ಪೂಜಾರಿ ಕೆಲ್ಸ ಅಲ್ಲ - ಮೂರ್ಖರು.

ವಿಠ್ಠಲ : ನೀವು ನನಗ ಪೂಜಾರೀ ಕೆಲ್ಸ ಕೊಡ್ರಿ, ಮತ್ತ ನನ್ನ ಹಂಗ-ಟೊಂಕದ ಮೇಲೆ ಕೈ ಇಟ್ಟುಕೊಂಡು ಎದ್ದು ನಿಲ್ಲರಿ.

ಪೂಜಾರಿ ವಾಹವಾ, ಠೀಕ ಅದ.

ಅಂಧ : (ಎಲ್ಲ, ಹುಚ್ಚಾಟ ನೋಡಿ, ನೊಂದ ಮನಸ್ಸಿನಿಂದಾ ವ್ಯಾಕುಲನಾಗಿ, ವಿಠ್ಠಲನಿಗೆ...) ಇಟ್ಟಲಾ, ಪಾಂಡುರಂಗಾ ಏನು ಹುಚ್ಚ ಹಿಡಿದದ ನಿನಗ? - ನಾ ಹೇಳತೀನಿ ಕೇಳು. ಸುಮ್ಮನೆ ನಿನ್ನ ಜಾಗಾದಾಗ ನಿಂತು ಬಿಡು. ನಶೀಬದಾಗ ಇದ್ದದ್ದು ಯಾರಿಗೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬಿಟ್ಟಿದೆ. ಪರಮಾತ್ಮಾ ಇದೇ ಎರಡು ಘಳಿಗೇ ಹಿಂದ ಕೊಟ್ಟ ಕಣ್ಣಿನಿಂದಾ, ತಮಾಶಾ ನೋಡೇ ನೋಡ್ತಿನಿ. ಎರಡು ಕಣ್ಣಿನಿಂದ ನೋಡೂದು ಅಸಹ್ಯ ಇಟ್ಟದ. ಆದರ ದೇವಾ ನಿನಗ ಸಾವಿರಕಣ್ಣು. ಸಾವಿರ ಕಣ್ಣಿಂದ ಹ್ಯಾಂಗರೆ ಈ ಹುಚ್ಚಾಟ ನೋಡತೀ? ನೀ ಗರ್ಭ ಗುಡಿಯೊಳಗ ಕತ್ತಲಾಗ ಇದ್ದೀದಿ ಬಹಳ ಸಂತೋಷ, ಸುಖಾ ಅದ

ವಕೀಲ : ಅಗದೀ ಸೆಂಟಪರಸೆಂಟ ಸರಿಯಾದ ಮಾತು.

ಶೇಡಜೀ : ಹೊಸ ಅಂಗಡಿಯವರಿಗೇನರೆ ಚಾನ್ಸ ಅದ ಅಂತೀರೇನು?

ಶಿಂಪಿಗ : ನೋಡ್ರಿ, ೨-೩ ತಿಂಗಳಾಯಿತು. ನಮ್ಮ ಮಶೀನಕ್ಕ ಕಾಲ ಹಚ್ಚಿಲ್ಲಾ. ಆಣೀ ಮಾಡಿ ಹೇಳ್ತಿನಿ. ಎದ್ದಾಂವ ಬಿದ್ದಾಂವ ರೇಡಿ ಮೇಡ ಖರೀದಿ ನೋಡ್ರಿ.

ವಿಠ್ಠಲ : ಅಂದ್ರ ನನಗ ನೀಗುವ ಹಾಂಗ ಯಾವ ಕೆಲ್ಸ ಇಲ್ಲs ! ಪೂಜಾರ ನೀವೇ ಹಾಗಾದರ ನಮ್ಮ ಹಿತೈಷಿಗಳು.

ಪೂಜಾರಿ : ನಾವು ನಿಮ್ಮ ಹಿತಚಿಂತಕರು. ನೀವು ನಮ್ಮ ಪೋಷಕರು. ನೀವು ಇಲ್ಲಿಂದಾ ಹೋದರೆ ನಮ್ಮ ಗತಿ ಏನು? - ದೇವಾ ನಿಮಗೆ ಬೇಕಾದ್ರೆ ಗುಡಿಯೊಳಗೆ ಟ್ಯೂಬ ಲಾಯಿಟ ಹಚ್ಚತ್ತೇನು. ಫೀನಾಯಿಲ್ ಡಿ. ಡಿ.ಟೀ. ತುಷಾರ ಹಾರಿಸಿ ಗುಡಿ ಸ್ವಚ್ಛ ಮಾಡತೇನಿ. ಪೀತಾಂಬರ ಅಂತೀರಾ? ಅಚ್ಚ ಹೊಸದು ಉಡಸತೇನೆ. ಬೇಕಾದ್ರ ಟೇರಿಕಾಟ್, ನಾಯಿಲಾನ್ ದೋತರ ಹಾಂ. ಆರತೀ ಹಾಡು ಧಾಟೀ ಬದಲಿಸಿ ಹೊಸ ಸಿನೇಮಾ ಸಂಗೀತ ಧಾಟಿಯವು ಹಾಕತೇನಿ. ಪ್ರಸಾದ ಅಂತೀರಾ? ಗುರುವಾರ ಶುಕ್ರವಾರ ಅಪ್ಪಟ ಚೇಂಜ - ಚೋಂಡಾ, ಉಪ್ಪು ಖಾರಿನ ಶಿರಾ, ಮತ್ತೇನು ಹೇಳ್ರಿ. ರಾಮು ತಿಂದು ಉಂಡು ಸುಮ್ಮನೆ ನಿಂತು ಬಿಡ್ರಿ. ಕೆಲ್ಸ ಆಯಿತು.ಇಷ್ಟು ಮಾಡಿರಿ ದೇವಾ!

ವಿಠ್ಠಲ : (ಕೆಳಗೆ ಮುಖ ಮಾಡಿ ಹಿಂದೆ ಸರಿಯುತ್ತಾನೆ.)

ಅಂಧ : ನಿಲ್ಲರೀ, ದೇವಾ - ಇಟ್ಟಲಾ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಠ್ಠಲ : (ಬೇಜಾರದಿಂದ) - ಮತ್ತೇನು?

ಅಂಧ : ದೇವಾ, ನನ್ನ ಪುನಃ ಕುರುಡನ್ನ ಮಾಡ್ರಿ. ಕಣ್ಣು ಕಾಣ್ಸತಾವ ಅಂತ ಜನರಿಗೆ ಗೊತ್ತಾದ್ರ. ಒಬ್ಬರೂ ಈ ಬಡವಗ ಒಂದು ತುತ್ತು ಅನ್ನಾದರೂ ಹಾಕೂದಿಲ್ಲಾ. ನಿಮ್ಮ ದಯೆಯಿಂದ ಪುನಃ ಅಂಧನನ್ನೇ ಮಾಡಿರಿ. ಕುರುಡನನ್ನೇ ಮಾಡ್ರಿ ದೇವಾ! (ಬೇಡಿ ಕೊಳ್ಳುವನು).

ವಿಠ್ಠಲ : ಒಳ್ಳೇದು. ತಥಾಸ್ತು (ಕಣ್ಣುಗಳ ಮೇಲೆ ಕೈ ಎಳೆಯುವನು)

ಅಂಧ : (ಆನಂದದಿಂದ) ಆಹಾಹಾಽಽ ಏನು ತಂಪ, ದೇವಾ ಕತ್ತಲೆ! ಕತ್ತಲೆ ಅಂಧಃಕಾರ! ಬಹಳ ತಂಪು! ಸೊಗಸು ಇಟ್ಟಲಾ!

ವಿಠ್ಠಲ : ನನ್ನದೂ ಅದೇ ಗತೀ ಆಗೇದ ಭಕ್ತಾ, ಕತ್ತಲೆ ಅಂಧಃಕಾರ! ಎಷ್ಟು ಹುಮ್ಮಸ, ಆಶೆಯಿಂದಾ ಬಂದಿದ್ದೆ ಆದರೆ..... (ಗರ್ಭಗುಡಿಯಲ್ಲಿ ಪ್ರವೇಶಿಸುತ್ತಾನೆ)

ಪೂಜಾರಿ : (ವಿಠ್ಠಲನ ಕಡೆ) ದೇವಾ ದುಃಖಿಸಬೇಡಿರಿ. ಪಾಲಿಗೆ ಬಂದದ್ದು ಪಂಚಾಮೃತ - ಹಾಂ! ಹೀಗೆ ದೇವಾ ಹೀಗೆ (ತೋರಿಸುತ್ತಾನೆ.)

ವಕೀಲ : ಅಲುಗಾಡಿಸಿ ನೋಡ್ರಿ ಮತ್ತ (ಪೂಜಾರಿ ಅಲುಗಾಡಿಸಿ ನೋಡಿದಾಗ ಮೂರ್ತಿಗಟ್ಟಿ ಅದೆ.) ಭೇಶ್, ಇದೇ ವರ ಪಾಲಿಸೋ ದೇವರಾಯಾ. (ಎಲ್ಲರೂ ಕೂಡಿಯೇ ದೇವ ಬಂದಾ, ನಮ್ಮ ಸ್ವಾಮೀ ಬಂದಾ, ನಮ್ಮ ದೇವರ - ದೇವ ಶಿಖಾಮಣಿ ಬಂದಾ ಅಂತಾ ಸುಸ್ವರದಲ್ಲಿ ಮೇಳಗಿಂತ ಹೇಳುತ್ತದ್ದಂತೆ ಪರದೆ - ಬೀಳುತ್ತದೆ.) ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ ಕೇಳಬರುತ್ತದೆ.

ವಿಠ್ಠಲ ತೋ ಆಲಾ ಆಲಾ ಏಕಾಂಕ ನಾಟಕ
-ರಾಜಣ್ಣ ಅನೀಖಂಡಿ

Important : Author's written permission must be obtained prior to performing this play on the stage.

ಪು.ಲ.ದೇಶಪಾಂಡೆ/೨೪೬

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಾಹಿತ್ಯ - ಸೂಚಿ

ಶ್ರೀ ಪು.ಲ. ದೇಶಪಾಂಡೆ

ನಾಟಕ

ತುಕಾ ಮ್ಹಣೆ. ಆತಾ (೧೯೪೮)
ಅಮಲದಾರ (೧೯೫೨) ಮೂಳ ಲೇಖಕ - ನಿಕೋಲಾಯ ಗೋಗೋಲ.
ಭಾಗ್ಯವಾನ (೧೯೫೩)
ತುಝೇ ಆಹೆ ತುಜಪಾಶೀ (೧೯೫೭)
ಸುಂದರ ಮೀ ಹೋಣಾರ (೧೯೫೮)
ಪಹಿಲಾ ರಾಜಾ/ ಆಧೇ ಅಧುರೆ (೧೯೭೬)
ಮೂಳ ಲೇಖಕ :- ಜಗದೀಶಚಂದ್ರ ಮಾಥೂರ; ಈ ಪುಸ್ತಕದಲ್ಲಿ ಮೋಹನ ರಾಕೇಶ ಇವರ 'ಆಧೆ ಅಧುರೇ'ಯ ವಿಜಯ ತೇಂಡೂಲಕರರು ಮಾಡಿದ ಅನುವಾದವನ್ನು ಅಳವಡಿಸಿಕೊಳ್ಳಲಾಗಿದೆ.
ತೀನ ಪೈಶಾಂಚಾ ತಮಾಶಾ (೧೯೭೮)
ಮೂಳ ಲೇಖಕ: ಬೇಟೋಲ್ಟ ಬ್ರೆಸ್ಟ
ರಾಜಾ ಓಯದಿಪೊಸ (೧೯೭೯) ಸೋಫೊಕ್ಲಿಝುಸ ನಾಟಕದ ರಂಗಾವೃತ್ತಿ.
ತೀ ಫುಲರಾಣೀ
ಏಕ ಝುಂಜ ವಾರ್ಯಾಶೀ

ಏಕಾಂಕಿಕಾ - ಸಂಗ್ರಹ

ಮೋಠೆ ಮಾಸೆ ಆಣಿ ಛೋಟೆ ಮಾಸೆ (೧೯೫೭)
ವಿಠ್ಠಲ ತೋ ಆಲಾ ಆಲಾ (೧೯೬೧)
ಅಮ್ಹಿ ಲಟಿಕೆ ನಾ ಬೋಲೂ (೧೯೭೫)

ಲೋಕ ನಾಟ್ಯ

ಪುಢಾರಿ ಪಾಹಿಜೆ (೧೯೫೧)

ವಿನೋದ

ಬಟೋಗೀರ ಭರತೀ (೧೯೪೯)
ನಸ್ತೀ ಉಠಾಠೇವ (೧೯೫೨)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬಟಾಟ್ಯಾಚೀ ಚಾಳ (೧೯೫೮)
ಗೋಳಾ ಬೇರೀಜ (೧೯೬೦)
ಅಸಾ ಮೀ ಅಸಾ ಮೀ (೧೯೬೪)
ಹಸವಣೂಕ (೧೯೬೮)

ಕಾದಂಬರಿ

ಕಾಯ ವಾಟ್ಟೆಲ್ ತೇ ಹೋಯಿಲ (೧೯೬೨)
ಮೂಳ ಲೇಖಕ : ಜಾರ್ಜ ಮತ್ತು ಹೆಲನ್ ಪಾಪಾಶ್ವಿಲೀ
ಏಕಾ ಕೋಳಿಯಾನೆ (೧೯೬೫)
ಮೂಳ ಲೇಖಕ: ಅರ್ನೆಸ್ಟ್ ಹೆಮಿಂಗ್ವೇ
ಕಾನ್ಹೋಜಿ ಆಂಗ್ರೆ
ಮೂಳ ಲೇಖಕ : ಮನೋಹರ ಮಾಳಗಾವಕರ.

ಚರಿತ್ರ

ಗಾಂಧೀಜೀ (೨ ಅಕ್ಟೋಬರ ೧೯೭೦)

ಪ್ರವಾಸ - ವರ್ಣನೆ

ಅಪೂರ್ವಾಯೀ (೧೯೬೦)
ಪೂರ್ವರಂಗ (೧೯೬೩)
ಜಾವೇ ತ್ಯಾಂಚ್ಯಾ ದೇಶಾ (೧೯೭೪)
ವಂಗ ಚಿತ್ರೇ (೧೯೭೪)

ವ್ಯಕ್ತಿ ಚಿತ್ರಗಳು

ಗಣಗೋತ (೧೯೬೬)
ಗುಣಗಾಯೀನ ಆವಡೀ (೧೯೭೫)

ವ್ಯಕ್ತಿ ಚಿತ್ರಗಳು (ಕಾಲ್ಪನಿಕ)

ವ್ಯಕ್ತಿ ಆಣಿ ವಲ್ಲೀ (೧೯೬೬)

ಬಾಲ ನಾಟ್ಯ

ವಯಂ ಮೋಠಂ ಖೋಟಂ (೧೯೫೬)
ನವೆ ಗೋಕೊಳ (೧೯೫೮)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭಾಷಣಗಳು (ಮುದ್ರಿತ)

ಮರಾಠಿ ತಮಾಶಾ ಪರಿಷದ್ ಎರಡನೆಯ ಅಧಿವೇಶನ. ಪುಣೆ. ೭ ಜುಲೈ ೫೬
ಅಧ್ಯಕ್ಷೀಯ ಭಾಷಣ.
ಮರಾಠಿ ವಾಙ್ಮಯ ಪರಿಷದ್ ೨೧ ನೆಯ ಅಧಿವೇಶನ, ಬಡೋದೆ, ೧೯೫೮
ಅಧ್ಯಕ್ಷೀಯ ಭಾಷಣ.
ಮರಾಠಿ ನಾಟ್ಯ ಸಮ್ಮೇಲನ ೪೭ನೆಯ ಅಧಿವೇಶನ ನಾಂದೇಡ.
೩೧ ಜಾನೇವರಿ ೭೫
ಅಧ್ಯಕ್ಷೀಯ ಭಾಷಣ.
ಮಾತೃ ಧರ್ಮಿ ಸಾನೇಗುರೂಜಿ (೧೯೭೨)
ಪ್ರಕಾಶಾಚಾ ಪುತ್ರ, ಬ್ಯಾ. ನಾಥ ಪೈ (೧೯೭೩)
ಮರಾಠಿ ಸಾಹಿತ್ಯ ಸಮ್ಮೇಲನ ೫೦ನೆಯ ಅಧಿವೇಶನ, ಇಚಲಕರಂಜಿ
೨೬ ಡಿಸೆಂಬರ ೧೯೭೪
ಅಧ್ಯಕ್ಷೀಯ ಭಾಷಣ.
ಮುಂಬಯಿ ಮರಾಠಿ ಗ್ರಂಥಸಂಗ್ರಹಾಲಯ ೮೦ನೆಯ ವಾರ್ಷಿಕೋತ್ಸವ.
೧೦ ಡಿಸೆಂಬರ ೧೯೭೮
ಅಧ್ಯಕ್ಷೀಯ ಭಾಷಣ.

ಚಿತ್ರಪಟ

ಕುಬೇರ (ಭೂಮಿಕಾ) ೧೯೪೭
ಭಾಗ್ಯರೇಖಾ (ಭೂಮಿಕಾ) ೧೯೪೮
ವಂದೇ ಮಾತರಂ (ಭೂಮಿಕಾ) ೧೯೪೮
ಜಾಗಾ ಭಾಡ್ಯಾನೇ ದೇಣೆ ಆಹೆ (ಪಟ - ಕಥಾ- ಸಂವಾದ) ೧೯೪೯
ಮಾನಾಚೇ ಪಾನ (ಸಂಗೀತ ಕಥಾ - ಪಟಕಥಾ- ಸಂವಾದ ಗ.ದಿ.ಮಾಡಗೂಳಕರ್ ಸಹಕಾರ್ಯಾದಿಂದ) ೧೯೪೯
ಮೋಠೀ ಮಾಣಸು (ಸಂಗೀತ) ೧೯೪೯
ಗೋಕುಳಚಾ ರಾಜಾ (ಕಥಾ - ಪಟಕಥಾ- ಸಂವಾದ) ೧೯೫೦
ಜರಾ ಜಪೂನ (ಪಟಕಥಾ- ಸಂವಾದ) ೧೯೫೦
ಜೋಹಾರ ಮಾಯಬಾಪ (ಭೂಮಿಕಾ) ೧೯೫೦
ನವರಾ ಬಾಯಕೋ (ಕಥಾ - ಪಟಕಥಾ, ಸಂವಾದ, ಸಂಗೀತ) ೧೯೫೦
ಪುಢಚೆ ಪಾವೂಲ (ಪಟಕಥಾ -ಸಂವಾದ . ಗ.ದಿ. ಮಾಡಗೂಳಕರರ ಸಹಕಾರ್ಯದಿಂದ ಭೂಮಿಕಾ) ೧೯೫೦
ವರ ಪಾಹಿಜೆ (ಕಥಾ : ಅಚ್ಯುತ ರಾನಡೆ ಇವರ ಸಹಕಾರ್ಯ ಸಂವಾದ) ೧೯೫೦
ದೇವ ಪಾವಲಾ (ಸಂಗೀತ) ೧೯೫೦

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೂಧ ಭಾತ (ಕಥಾ - ಪಟಕಥಾ, ಸಂವಾದ, ಗೀತೆಗಳು, ಸಂಗೀತ)೧೯೫೨
ಘರಧನೀ (ಪಟಕಥಾ- ಸಂವಾದ, ಗೀತೆಗಳು, ಸಂಗೀತ) ೧೯೫೨
ಸಂದೇಶ (ಹಿಂದೀ) (ಕಥಾ- ಪಟಕಥಾ- ಸಂವಾದ ಸಂವಾದಗಳ ಹಿಂದಿ ಭಾಷಾಂತರ. ಮೀರ ಅಸಗರ ಅಲೀ) ೧೯೫೨
ದೇವಬಾಪ್ಪಾ (ಪಟಕಥಾ- ಸಂವಾದ - ಸಂಗೀತ - ಗೀತೆಗಳು ಗ.ದಿ. ಮಾಡಗೂಳಕರ ಸಹಕಾರ್ಯದಿಂದ) ೧೯೫೩
ನವೆ ಬಿರ್ಹಾಡ (ವಿನೋದಿ ಲಘುಪಟ) (ಸಂವಾದ - ಸಂಗೀತ) ೧೯೫೩.
ಗುಳಾಚಾ ಗಣಪತಿ (ಕಥಾ-ಪಟಕಥಾ- ಸಂವಾದ - ಸಂಗೀತ- ಭೂಮಿಕಾ - ದಿಗ್ದರ್ಶನ) ೧೯೫೩
ಮಹಾತ್ಮಾ (ಮರಾಠಿ - ಹಿಂದೀ .-ಇಂಗ್ರಜೀ) (ಕಥಾ) ೧೯೫೩.
ಅಮುಲದಾರ (ಪಟಕಥಾ- ಸಂವಾದ- ಸಂಗೀತ - ಭೂಮಿಕಾ) ೧೯೫೩
ಮಾಯಿಸಾಹೇಬ (ಪಟಕಥಾ-ಸಂವಾದ -ಸಂಗೀತ) ೧೯೫೩.
ಫೂಲ ಔರ ಕಲಿಯಾ (ಹಿಂದೀ) (ಕಥಾ-ಪಟಕಥಾ) ೧೯೬೦
ಆಜ ಔರ ಕಲ್ (ಹಿಂದೀ) (ಕಥಾ) ೧೯೬೩.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಪ್ರಕಟನೆಗಳು

೧.	ಭಾರತೀಯ ರಂಗಭೂಮಿ	ಆದ್ಯ ರಂಗಾಚಾರ್ಯ	೯ ರೂ.
೨.	ಮಹಾಕೃತಿ (ಕಾವ್ಯ ವಿಮರ್ಶೆ)	ರಂ. ಶ್ರೀ. ಮುಗಳಿ	೧೮ ರೂ.
೩.	ಮಹಾರಾಷ್ಟ್ರದ ಕನ್ನಡ ಶಾಸನಗಳು	ಎಂ. ಎಂ. ಕಲಬುರ್ಗಿ	೧೬ ರೂ.
೪.	ಪತ್ರಗಳು ಚಿತ್ರಿಸಿದ ಗೋವಿಂದ ಪೈ	ಶ್ರೀ ಹಾ. (ಸಂ)	೨೨ ರೂ.
೫.	ಸ್ವರೂಪ ವಿಮರ್ಶೆ	ಸಿ. ಎನ್. ರಾಮಚಂದ್ರನ್	೧೮ ರೂ.
೬.	ಕರ್ನಾಟಕದ ಶಿಕ್ಷಣ ಪರಂಪರೆ	ಜ್ಯೋತ್ಸ್ನಾ ಕಾಮತ	೬೦ ರೂ.
೭.	ಕರ್ನಾಟಕದಲ್ಲಿ ಬೌದ್ಧ ಸಂಸ್ಕೃತಿ	ತಾ. ವಸಂತ ಕುಮಾರ	
೮.	ವ್ಯಾಸ ಪರ್ವ	ದುರ್ಗಾ ಭಾಗವತ ಗೌರೀಶ ಕ್ಕಿಣಿ	
೯.	ಪು. ಲ. ದೇಶಪಾಂಡೆ	ಅನಂತ ತೋರೊ ಮತ್ತು ವಿ. ಎಲ್. ಕುಲಕರ್ಣಿ (ಸಂ.)	೪೮ ರೂ.
೧೦.	ಕಾರಂತರ ಕಾದಂಬರಿಗಳು	ಸುಧಾಕರ ದೇಶಪಾಂಡೆ ವಿರೂಪಾಕ್ಷ ಕುಲಕರ್ಣಿ	

मराठी

१.	शिवाजी मल्लम्माजी समरोत्सव	के. अेन्. ची टणी स (सं.)	३२ रु.
२.	दीप उजळे आमुच्या घरी	डा. मा. नायक अेस. पि. पाटील	३२ रू.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

"Forwarded free of cost, and with the Compliments of the department of Education, Government of India, NEW DELHI."

GURUKUL KANGRI LIBRARY
Accos on 16.2.81
Class on
Cat on
Tag etc.
Checked
Any Other

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನನ್ನ ತಾಯಿಯ ತವರೂರು ಕಾರವಾರ .... ಆದ್ದರಿಂದ ನನಗೆ ಕನ್ನಡದ ಋಣಾನುಬಂಧ ಹುಟ್ಟಿದಾಗಿನಿಂದಲೇ ಇದೆ..............

ವೈಯಕ್ತಿಕ ಮೋಕ್ಷ ಬಯಸುವವರಕಿಂತಲೂ ನನಗೆ, ಸಾಮಾಜಿಕ ಮೋಕ್ಷಕ್ಕಾಗಿ ಸವೆಯುವವರು ಹೆಚ್ಚು ಶ್ರೇಷ್ಠರೆಂದು ಕಾಣುತ್ತಾರೆ ....

(ಮಾಸ್ತಿ) ಅವರಂಥ ಸಾತ್ವಿಕ ಸಾಹಿತಿಗಳು ತುಂಬ ವಿರಳ. ಅವರ ಪ್ರತಿಯೊಂದು ಭೆಟ್ಟಿಯಲ್ಲಿ ತಮ್ಮ ಸ್ವಂತ ಸಾಹಿತ್ಯ ಬಿಟ್ಟು ಉಳಿದ ಎಲ್ಲ ಸಾಹಿತ್ಯದ ಬಗ್ಗೆ ಅತ್ಯಂತ ಉತ್ಸಾಹದಿಂದ ಗಂಟೆಗಟ್ಟಲೆ ಮಾತನಾಡುತ್ತಿದ್ದರು.

ಪ್ರಾಚೀನ ಸಾಹಿತ್ಯವನ್ನು ಕಲಾತ್ಮಕವಾಗಿ ಅರ್ಥೈಸುವ ಎಷ್ಟೋ ಪ್ರಯೋಗಗಳನ್ನು ಆಧುನಿಕ ಭಾರತದ ಸಾಹಿತ್ಯದಲ್ಲಿ ನಾವಿಂದು ಕಾಣುತ್ತೇವೆ. ಈ ಎಲ್ಲ ಪ್ರಯೋಗಗಳ ಗಂಗೋತ್ರಿ ಎಂದರೆ...............ಕನ್ನಡದ ಕೈಲಾಸಂ ಅವರ ಪ್ರಯೋಗ

ಮರಾಠಿ ಸಾಹಿತ್ಯದ ಪುರುಷೋತ್ತಮ, ಪು. ಲ. ಅವರ ಇಂಥ ಅಪರೂದದ ಅಭಿಪ್ರಾಯಗಳೊಂದಿಗೆ ಅವರ ಆಯ್ದ ಸಾಹಿತ್ಯದ ಅನುವಾದ ಮತ್ತು ಪು. ಲ. ದೇಶಪಾಂಡೆ ಅವರ ಜೀವನದ ಅಮೂಲ್ಯ ಕ್ಷಣಗಳನ್ನು ಸೆರೆ ಹಿಡಿದ ಛಾಯಾ ಚಿತ್ರಗಳು.

'ಪು. ಲ. ದೇಶಪಾಂಡೆ, ವ್ಯಕ್ತಿ ಮತ್ತು ವಾಙ್ಮಯ'

CC-0. In Public Domain. Gurukul Kangri Collection, Haridwar